UNIVERSAL
LIBRARY
OU_202138
UNIVERSAL
LIBRARY

**OSMANIA UNIVERSITY LIBRARY**

Call No. K821.4 K94P Accession No. K4813

Author M.V.

Title 1955

This book should be returned on or before the date last marked below

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ — ೩೫

ಪ್ರಧಾನ ಸಂಪಾದಕ :

ಕೆ. ವಿ. ಪುಟ್ಟಪ್ಪ, ಎಂ. ಎ.

# ಪ್ರಜಾ ಸರ್ಕಾರ

ಲೇಖಕ ::

ಡಾ॥ ಎಂ. ವಿ. ಕೃಷ್ಣರಾವ್, ಎಂ. ಎ., ಡಿ. ಲಿಟ್.

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

೧೯೫೫

ಕ್ಯಾಲಿಕೊ ಪ್ರತಿ ರೂ. ೨—೪—೦ ]    [ ಸಾದಾ ಪ್ರತಿ ರೂ. ೧—೧೨—೦

ಮೊದಲನೆಯ ಮುದ್ರಣ

೨,೦೦೦ ಪ್ರತಿಗಳು

—— o ——

ಬೆಂಗಳೂರು ಪ್ರೆಸ್, ಮೈಸೂರು ಬ್ರಾಂಚ್, ಮೈಸೂರು

# ಮುನ್ನುಡಿ

ವಿದ್ಯಾಭ್ಯಾಸದ ಸರ್ವಶ್ರೇಣಿಗಳಲ್ಲಿಯೂ ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕಾದುದು ಅತ್ಯವಶ್ಯವಾಗಿದೆ. ಇದು ಒಬ್ಬಿಬ್ಬರು ಭಾಷಾಭಿಮಾನಿಗಳು ದುರುದ್ದೇಶದಿಂದಾಗಲಿ ಪಕ್ಷಪಾತ ಮನೋಭಾವ ದಿಂದಾಗಲಿ ಹೇಳುವ ಮಾತಲ್ಲ. ರಾಷ್ಟ್ರದ ಸರ್ವತೋಮುಖವಾದ ಪ್ರಗತಿ ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣವಾದ ವಿಕಾಸ — ಇವುಗಳ ಹಿನ್ನೆಲೆ ಯಲ್ಲಿ ನಡೆಸಿದ ಕೂಲಂಕಷವಾದ ಚರ್ಚೆ ಮತ್ತು ಸರ್ವಂಕಷವಾದ ವಿಚಾರ-ಮಂಥನಗಳ ಫಲವಾಗಿ ಸಿದ್ಧಿಸಿದ ತತ್ತ್ವವಿದು. ಡಾ॥ ಅಮರನಾಥ ಝಾ ರಂಥ ಶ್ರೇಷ್ಠ ಶಿಕ್ಷಣತಜ್ಞರಿಂದ ಹಿಡಿದು ಮಹಾತ್ಮಗಾಂಧಿಜಿಯಂಥ ರಾಷ್ಟ್ರನಾಯಕರೆಲ್ಲರೂ ದೇಶಭಾಷಾ ಮಾಧ್ಯಮದ ಸಾರ್ಥಕತೆಯನ್ನು ಒತ್ತಿ ಹೇಳಿದ್ದಾರೆ. ಹಿಂದಿನ ಆಂಗ್ಲಸರ್ಕಾರ ನೇಮಿಸಿದ್ದ ಸ್ಯಾಡ್ಲರ್ ವಿಚಾರಣಾಸಮಿತಿ ಮತ್ತು ಹಾರ್ಟೋಗ್ ಸಮಿತಿಗಳೂ ಸರ್ ಚಾರ್ಲ್ಸ್‌ವುಡ್, ಸರ್ ಸಾರ್ಜಂಟ್ ಮೊದಲಾದ ವಿದೇಶೀಯ ಶಿಕ್ಷಣತಜ್ಞರೂ ದೇಶ ಭಾಷಾಮಾಧ್ಯಮದಿಂದಲ್ಲದೆ ಭಾರತೀಯರ ಶಿಕ್ಷಣ ಸಫಲವಾಗದೆಂದೂ ಸಮರ್ಪಕವಾಗದೆಂದೂ ಏಕಕಂಠದಿಂದ ಸಾರಿದ್ದಾರೆ.

ಈ ಶಿಕ್ಷಣ ಸೂತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಭರತಖಂಡದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ದೇಶಭಾಷಾಮಾಧ್ಯಮ ಯಶಸ್ವಿಯಾಗಿ ಕಾರ್ಯಗತವಾಗುತ್ತಿದೆ. ನಾಗಪುರ, ಅಲಹಾಬಾದ್, ಕಾಶಿ ಮೊದಲಾದ ವಿಶ್ವವಿದ್ಯಾನಿಲಯಗಳಿಂದ ಅಧಿಕೃತವಾಗಿ ದೊರೆತ ವರದಿಗಳಿಂದ ವಿದ್ಯಾರ್ಥಿಗಳು ಆದರಪೂರ್ವಕವಾಗಿ ಅನಿರ್ಬಂಧವಾಗಿ ದೇಶಭಾಷಾ ಮಾಧ್ಯಮವನ್ನು ಆರಿಸಿಕೊಳ್ಳುತ್ತಿರುವುದೂ, ಅದರಿಂದ ಪರೀಕ್ಷೆಗಳಲ್ಲಿ ಫಲಿತಾಂಶ ತುಂಬ ಆಶಾದಾಯಕವಾಗಿ ಗೋಚರಿಸುತ್ತಿರುವುದೂ ಸುಸ್ಪಷ್ಟ ವಾಗುತ್ತದೆ.

ದೇಶ ಭಾಷಾ ಮಾಧ್ಯಮ ಬೇಡವೆನ್ನುವ ಸಂಪ್ರದಾಯಶರಣರ ಸಂಖ್ಯೆ ಬಹುಮಟ್ಟಿಗೆ ಇಳಿಮುಖವಾಗುತ್ತಿದ್ದರೂ ಅಲ್ಲೊಬ್ಬರು ಇಲ್ಲೊಬ್ಬರು ಇನ್ನೂ ಇದ್ದಾರೆ. ಅವರು ತಮ್ಮ ನಿಲವನ್ನು ಸಾಧಿಸಲು ಕೊಡುವ ಮುಖ್ಯ ಕಾರಣಗಳಿವು:

(1) ದೇಶಭಾಷೆಗಳಲ್ಲಿ ಪಾರಿಭಾಷಿಕ ಅಥವಾ ವೈಜ್ಞಾನಿಕ ಪದಗಳ ದಾರಿದ್ರ್ಯ

(2) ಗ್ರಂಥಗಳ ಅಭಾವ

(3) ವಿವಿಧ ಪ್ರಾಂತಗಳ ವಿದ್ವಾಂಸರ ಸಂಪರ್ಕಕ್ಕೆ ಮತ್ತು ಸರ್ಕಾರಿ ನೌಕರರ ಪರಸ್ಪರ ವಿನಿಮಯಕ್ಕೆ ಅಡಚಣೆ

ಈ ಕಾರಣಗಳು ಸಂಪೂರ್ಣ ನಿರಾಧಾರವಾದುವೆಂಬುದು ಕೆಳಗಣ ವಿವರಣೆಯಿಂದ ವ್ಯಕ್ತವಾಗುತ್ತದೆ.

(1) ವೈಜ್ಞಾನಿಕ ಅಥವಾ ಪಾರಿಭಾಷಿಕ ವಿಷಯಗಳಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸುವ ಸಂಕಟಕ್ಕೆ ಗುರಿಯಾಗಬೇಕಾಗಿಲ್ಲ. ಅಂತರ ರಾಷ್ಟ್ರೀಯ ಶಬ್ದಗಳನ್ನೇ ಇದ್ದಕ್ಕಿದ್ದ ಹಾಗೆಯೆ ಬಳಸಿಕೊಳ್ಳಬಹುದು. ಆವಶ್ಯಕತೆ ಕಂಡುಬಂದರೆ ಮಾತ್ರ ವಿವರಣಾತ್ಮಕವಾಗಿ ದೇಶಭಾಷೆಯ ಶಬ್ದಗಳನ್ನು ಉಪಯೋಗಿಸಬಹುದು. ಪಾರಿಭಾಷಿಕ ಶಬ್ದಗಳು ವಾಸ್ತವವಾಗಿ ಅಂಕಿತನಾಮಗಳು ತಾನೆ! ಕೇಂದ್ರ ಸರ್ಕಾರದ ವಿದ್ಯಾಶಾಖೆ ತಯಾರಿಸಿರುವ ಪಾರಿಭಾಷಿಕ ಪದಗಳ ಕೋಶ ಈ ತತ್ವವನ್ನೆ ಅವಲಂಬಿಸಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಈ ಮಾರ್ಗವನ್ನೆ ಸಂಪೂರ್ಣವಾಗಿ ಅಂಗೀಕರಿಸಿದೆ.

(2) ಈಗಾಗಲೆ ಎಲ್ಲ ಭಾಷೆಗಳಲ್ಲಿಯೂ ವೈಜ್ಞಾನಿಕ ಗ್ರಂಥಗಳು ಹೊರಬೀಳುತ್ತಿವೆ ಆವಶ್ಯಕತೆ ಹೆಚ್ಚಿದಂತೆಲ್ಲ ಅವುಗಳ ಸಂಖ್ಯೆಯೂ ಬೆಳೆಯುತ್ತದೆ. ಪೇಟೆಯಲ್ಲಿ ಗಿರಾಕಿ ಇದೆಯೆಂದು ತಿಳಿದರೆ ಸಾಕು ಗ್ರಂಥಗಳು ಲೆಕ್ಕವಿಲ್ಲದೆ ಹೊರಬರುತ್ತವೆ.

(3) ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನು ಬಿಡುವುದಿಲ್ಲ ವಾದುದರಿಂದಲೂ ಹಿಂದಿ ಅಥವಾ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಎಲ್ಲ ವಿದ್ಯಾರ್ಥಿಗಳೂ ಒಂದಲ್ಲ ಒಂದು ರೀತಿಯಲ್ಲಿ ಕಲಿಯಬೇಕಾಗಿರುವುದ ರಿಂದಲೂ ವಿದ್ವಾಂಸರ ಸಂಪರ್ಕಕ್ಕಾಗಲಿ ಸರ್ಕಾರಿ ನೌಕರರ ವಿನಿಮ ಯಕ್ಕಾಗಲಿ ಅಡಚಣೆ ಆಗುವುದಿಲ್ಲ. ಈ ದೊಡ್ಡರಾಷ್ಟ್ರದಲ್ಲಿ ಸರ್ಕಾರಿ ನೌಕರರ ಸಂಖ್ಯೆ ಅತ್ಯಲ್ಪಭಾಗವೆನ್ನುವುದನ್ನೂ ಈ ಅತ್ಯಲ್ಪ ಸಂಖ್ಯೆಯ ಸರ್ಕಾರಿ ನೌಕರಿ ಜನರ ಹಿತಕ್ಕಾಗಿ ಇಡೀ ರಾಷ್ಟ್ರದ ಕಲ್ಯಾಣವನ್ನು ಬಲಿ ಗೊಡುವುದು ಸರಿಯಲ್ಲನೆಂಬುದನ್ನೂ ಮರೆಯಬಾರದು.

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಮಾಧ್ಯಮವನ್ನು ಕಾರ್ಯ ರೂಪಕ್ಕೆ ತರಲು ಒಪ್ಪಿಕೊಂಡು ಸರ್ವಸನ್ನಾಹವನ್ನೂ ಕೈಗೊಂಡಿದೆ. ಈಗಾಗಲೆ ವಿಜ್ಞಾನ ಸಂಬಂಧವಾದ ನಾಲ್ಕಾರು ಗ್ರಂಥಗಳನ್ನು ಪ್ರಕಟಿಸಿ ರುವುದಲ್ಲದೆ ಎಲ್ಲ ವಿಷಯಗಳ ಮೇಲೂ ಗ್ರಂಥಗಳನ್ನು ಬರೆಸಲು ಯೋಜನೆ ಯನ್ನು ಸಿದ್ಧಪಡಿಸಿದೆ. ಡಾ॥ ಎಂ. ವಿ. ಕೃಷ್ಣರಾಯರ 'ಪ್ರಜಾ ಸರ್ಕಾರ' ಈ ಯೋಜನೆಯ ಅಂಗವಾಗಿ ಹೊರಬರುತ್ತಿದೆ. ನಾಲ್ಕಾರು ಹೆಬ್ಬೊತ್ತಿಗೆ ಗಳು ಪ್ರಕಟಣೆಗೆ ಸಿದ್ಧವಾಗಿವೆಯೆಂದು ಹೇಳಲೂ ಸಂತೋಷವಾಗುತ್ತದೆ.

ಡಾ॥ ಕೃಷ್ಣರಾಯರು ಪ್ರಸಿದ್ಧರಾದ ಇತಿಹಾಸ ಸಂಶೋಧಕರು ಮಾತ್ರವಲ್ಲದೆ ಹಲವಾರು ವರ್ಷಗಳಕಾಲ ಮೈಸೂರು ವಿಶ್ವವಿದ್ಯಾನಿಲಯದ ರಾಜಕೀಯಶಾಸ್ತ್ರ ಶಾಖೆಯ ಮುಖ್ಯಸ್ಥರಾಗಿದ್ದು ಅನೇಕ ವಿದ್ಯಾರ್ಥಿಗಳಿಗೆ ಆ ಶಾಸ್ತ್ರವನ್ನು ಬೋಧಿಸಿ ಗಾಢವೂ ಅಗಾಧವೂ ಆದ ಅನುಭವವನ್ನು ಪಡೆದಿದ್ದಾರೆ. ಹೀಗೆ ಎರಡು ವಿಷಯಗಳಲ್ಲಿಯೂ ಅಪಾರವಾದ ಪಾಂಡಿತ್ಯ ವನ್ನೂ ನಿಷ್ಕೃಷ್ಟವಾದ ಜ್ಞಾನವನ್ನೂ ಗಳಿಸಿ ಖ್ಯಾತರಾಗಿರುವ ಕೃಷ್ಣರಾಯರ ಈ ಗ್ರಂಥ ಸರ್ವಮಾನ್ಯವಾಗುವುದರಲ್ಲಿ ಸಂದೇಹವಿಲ್ಲ. ಇಂಗ್ಲಿಷಿನಲ್ಲಿ ಮಾತ್ರವಲ್ಲ ಕನ್ನಡದಲ್ಲಿಯೂ ಈಗಾಗಲೇ ಅನೇಕ ಗ್ರಂಥಗಳನ್ನು ಬರೆದು ಅವರು ಕನ್ನಡಿಗರಿಗೆ ಪರಿಚಿತರಾಗಿದ್ದಾರೆ.

ಮೇಲೆ ತಿಳಿಸಿದಂತೆ ಶ್ರೀ ಕೃಷ್ಣರಾಯರು ಈ ಗ್ರಂಥದಲ್ಲಿ ಕೆಲವು ಅಂತರರಾಷ್ಟ್ರೀಯ ಪಾರಿಭಾಷಿಕಪದಗಳನ್ನು ಬಳಸಿಕೊಂಡಿರುವುದು ತುಂಬ ಉಚಿತವಾಗಿ ಕಾಣುತ್ತದೆ. 'ಮ್ಯಾಂಡೇಟೆಡ್,' ಟ್ರಿಬ್ಯೂನಲ್ ಆಫ್ ಎನ್‌ಕ್ವೈರಿ ಆಕ್ಟ್' 'ರಿಟ್ ಆಫ್ ಇನ್‌ಜೆಕ್ಷನ್,' 'ರಿಟ್ ಆಫ್ ಸರ್ಟಿಯೋರಾರಿ' ಇವು ಹೀಗೆಯೇ ಇರಬೇಕು; ಇದೇ ಸರಿಯಾದ ಮಾರ್ಗ. ಇನ್ನೂ ಕೆಲವು ಕಡೆ ಇಂಗ್ಲಿಷ್ ಲಿಪಿಯಲ್ಲಿಯೆ ಕೆಲವು ಪದಗಳು ಉಳಿದಿವೆ. ಅವುಗಳನ್ನು ಕನ್ನಡ ಅಕ್ಷರದಲ್ಲಿ ಬರೆದಿದ್ದರೆ ಚೆನ್ನಾಗಿರುತ್ತಿತ್ತು

ಮೊನ್ನೆತಾನೆ ಬೆಂಗಳೂರಿಗೆ ದಯಮಾಡಿಸಿದ್ದ ವಿದೇಶೀಯ ಇಂಗ್ಲಿಷ್ ಭಾಷಾವರ್ಗಕ್ಕೆ ಸೇರಿದ ವಿಜ್ಞಾನಿವರೇಣ್ಯರೊಬ್ಬರು ನಮ್ಮ ಮಿತ್ರರೊಬ್ಬರೊಡನೆ ಮಾತನಾಡುತ್ತ ಹೇಳಿದರಂತೆ: 'ಎಲ್ಲಿಯವರೆಗೆ ನಿಮ್ಮ ಭಾಷೆಯಲ್ಲಿಯೆ ಶಿಕ್ಷಣ ನಡೆಯುವುದಿಲ್ಲವೊ ಅಲ್ಲಿಯವರೆಗೆ ನಿಮ್ಮಿಂದ ಕಲಾ ವಿಷಯದಲ್ಲಾಗಲಿ ವೈಜ್ಞಾನಿಕ ವಿಷಯದಲ್ಲಾಗಲಿ ನವಸೃಷ್ಟಿಕಾರ್ಯ (real creative contribution) ನಡೆಯುವುದು ಅಸಂಭವ ಎಂದು ತಿಳಿಯಿರಿ ನಾವು ಹೇಳಿದ್ದನ್ನೆ ಹೇಳುವುದು, ನಾವು ಮಾಡಿದ್ದನ್ನೆ ಮಾಡುವುದು, ನಮ್ಮನ್ನು ನಕಲೆತ್ತುವ ನಿಷ್ಣಾತರಾಗಿ ಮಾತ್ರವೆ ನಿಲ್ಲುತ್ತೀರಿ!'

ಇಂದಿನ ಈ ದುಃಸ್ಥಿತಿಯಿಂದ ನಾವು ಪಾರಾಗಬೇಕಾದರೆ ಕನ್ನಡ ಮಾಧ್ಯಮ ಸರ್ವತ್ರವಾಗುವುದೊಂದೇ ಪರಮೋಪಾಯ.

ಮೈಸೂರು
೧೭-೧೨-೧೯೫೫

**ಕೆ. ವಿ. ಪುಟ್ಟಪ್ಪ**
ಪ್ರಧಾನ ಸಂಪಾದಕ
ಮತ್ತು
ಪ್ರಕಟನ ಸಮಿತಿಯ ಅಧ್ಯಕ್ಷ.

# ಪೀಠಿಕೆ

ಕನ್ನಡದಲ್ಲಿ ಶಾಸ್ತ್ರಗ್ರಂಥಗಳು ವಿರಳ. ಅದನ್ನೋದುವವರೂ ವಿರಳ. ಇಂಗ್ಲೀಷ್ ಬಲ್ಲವರಿಗೆ ಇದು ಅನಗತ್ಯವಾಗಬಹುದು. ಆದರೆ ಕನ್ನಡ ಭಾಷೆಯ ಪರಿಚಯ ಮಾತ್ರ ಇರುವವರಿಗೆ ಇದು ಅಗತ್ಯ. ಜನಸಾಮಾನ್ಯರಿಗೆ ಪ್ರಜಾ ಸರ್ಕಾರದ ವಿಷಯದ ಪ್ರಥಮ ಪರಿಚಯವನ್ನು ಮಾಡಿ ಕೊಡುವುದು, ಸರಿಯಾದ ತಿಳಿವಳಿಕೆ ಮತ್ತು ಆಸಕ್ತಿಯನ್ನುಂಟುಮಾಡುವುದು, ಈ ಗ್ರಂಥದ ಉದ್ದೇಶ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಾಜನೀತಿಗೆ ಸಂಬಂಧಪಟ್ಟು, ಸಾಂಪ್ರದಾಯಕವಾಗಿ ಮತ್ತು ಅವಿರತವಾಗಿ ಬೆಳೆದುಬಂದ ತತ್ತ್ವ ಅಭಿಪ್ರಾಯ ಮತ್ತು ಭಾವನೆಗಳನ್ನು ಮಾತ್ರ, ಈ ಗ್ರಂಥದಲ್ಲಿ ಪ್ರತಿಪಾದಿಸಲಾಗಿದೆ. ವಿಷಯ, ಯೋಜನೆ ಮತ್ತು ನಿರೂಪಣೆಯ ವಿಧಾನವೂ ಅದೇ ರೀತಿ. ಭಾರತದ ರಾಜನೀತಿಯ ವೈಶಿಷ್ಟ್ಯವೇನು, ಧರ್ಮಶಾಸ್ತ್ರ, ಮತ್ತು ಅರ್ಥಶಾಸ್ತ್ರಗಳ ತತ್ತ್ವಗಳ ಸಾರಾಂಶವೇನು—ಎಂಬ ವಿಷಯಗಳನ್ನು ಸಮಾಲೋಚನೆಗೆ ಇಲ್ಲಿ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ಇಷ್ಟೇ. ಪ್ರಜಾಸತ್ತಾತ್ಮಕವಾದ, ಸರ್ಕಾರದ ರಚನೆಯಲ್ಲಿ ಪ್ರಜಾಭಿಮತದ ಪಾತ್ರ ಮತ್ತು ಗಣರಾಷ್ಟ್ರಗಳ ವೈವಿಧ್ಯತೆ—ಇವೆಲ್ಲಾ ಭಾರತೀಯರ ರಾಜಕೀಯ ಅನುಭವದಲ್ಲಿ ಕಂಡುಬಂದರೂ, ಇಲ್ಲಿ ನಿರೂಪಿಸಿರುವ ವಿಷಯ:–ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃಭಾವನೆಗಳ ಆಧಾರದ ಮೇಲೆ ಆಗಿರುವ ಪ್ರಜಾ ಸರ್ಕಾರದ ಸೃಷ್ಟಿ, ನಮ್ಮ ಜನಕ್ಕೆ ಹೊಸದು.

ಈ ಗ್ರಂಥಕ್ಕೆ ವಿಚಾರಪೂರ್ಣವಾದ ಮುನ್ನುಡಿಯೊಂದನ್ನು ಬರೆದು ಕೊಟ್ಟು ಉಪಕಾರಮಾಡಿರುವ ಕವಿಶ್ರೇಷ್ಠರಾದ ಪೂಜ್ಯ ಕುವೆಂಪು ಅವರಿಗೆ ನಾನು ಚಿರಋಣಿ. ನನ್ನಲ್ಲಿ ಅವರಿಗಿರುವ ವಿಶ್ವಾಸಕ್ಕೂ ನಿರ್ವ್ಯಾಜ ಕರುಣೆಗೂ ಅನಂತಾನಂತ ವಂದನೆಗಳು.

ರಾಜನೀತಿ ಶಾಸ್ತ್ರದ ಬಗ್ಗೆ ಅಭಿರುಚಿಯನ್ನು ಹುಟ್ಟಿಸಿ, ಈ ಪುಸ್ತಕದ ಹಸ್ತಪ್ರತಿಯನ್ನು ಸಿದ್ಧಪಡಿಸುವಾಗಲೂ ಮತ್ತು ಪಾಶ್ಚಾತ್ಯ ಲೇಖಕರ ಉದ್ಗ್ರಂಥಗಳ ವ್ಯಾಸಂಗಮಾಡುವಾಗಲೂ ನನಗೆ ನೆರವಾದ ನನ್ನ ಪೂಜ್ಯ ಮಾವಂದಿರಾದ, ವಿಶ್ವವಿದ್ಯಾನಿಲಯದ ಸರಸ್ವತಿ ಭಂಡಾರದ ನಿವೃತ್ತ ಮುಖ್ಯಾಧಿಕಾರಿಗಳಾದ ಶ್ರೀಮಾನ್ ಎನ್. ನರಸಿಂಹಮೂರ್ತಿ, ಎಂ.ಎ., ಬಿ.ಎಲ್. ಅವರಿಗೂ, ಪ್ರಕಾಶನಕಾರ್ಯದಲ್ಲಿ ನೆರವಾಗಿ ಪ್ರೋತ್ಸಾಹಿಸಿದ ಮಿತ್ರರಿಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ಪ್ರಚಾರೋಪನ್ಯಾಸ ಮಾಲೆಯ ಮತ್ತು ಪ್ರಕಟನಶಾಖೆಯ ಕಾರ್ಯದರ್ಶಿಗಳಾದ ಶ್ರೀಮಾನ್ ಡಿ. ಜವರೇಗೌಡರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಈ ಪುಸ್ತಕವನ್ನು ಸ್ವಲ್ಪ ಕಾಲದಲ್ಲಿಯೇ ಇಷ್ಟು ಅಂದವಾಗಿ ಅಚ್ಚುಮಾಡಿಕೊಟ್ಟಿರುವ ಬೆಂಗಳೂರು ಪ್ರೆಸ್ಸಿನವರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಗ್ರಂಥದ ಹಸ್ತಪ್ರತಿ ೧೯೪೪ರಲ್ಲಿ ಸಿದ್ಧವಾಯಿತು; ಅದರ ಪ್ರಕಟನೆ ಈಗ; ಅಂದ ಮೇಲೆ, ವಿಷಯ ಪ್ರತಿಪಾದನೆಯಲ್ಲಿಯೂ ನಿರೂಪಣೆಯಲ್ಲಿಯೂ ಗ್ರಂಥಗಳ ಸೂಚನೆಯಲ್ಲಿಯೂ ನ್ಯೂನಾತಿರೇಕಗಳಿರಬಹುದು. ತಿದ್ದುಪಡಿಯ ಅಗತ್ಯವಿದ್ದರೂ, ಕೊಟ್ಟಿಲ್ಲ. ಕೆಲವನ್ನು ಇಲ್ಲಿ ಸೂಚಿಸಲಾಗಿದೆ. ಅವುಗಳನ್ನು ಸರಿಪಡಿಸಿಕೊಂಡು ಗ್ರಂಥಕರ್ತನ ಲೋಪದೋಷಗಳನ್ನು ಮನ್ನಿಸಬೇಕಾಗಿ ಕೋರಿಕೆ. ೫೨ ನೇ ಪುಟದಲ್ಲಿ— Hereditary. 77 ನೇ ಪುಟದಲ್ಲಿ — Bureaucratic. 314 ನೇ ಪುಟದಲ್ಲಿ — Limitations ಇತ್ಯಾದಿ. ೩೨೭ ನೇ ಪುಟದಲ್ಲಿ 'ಗುಣಕ್ಕೆ ಸಂಖ್ಯೆಗಿಂತ ಹೆಚ್ಚು ಪ್ರಾಧಾನ್ಯವಿಲ್ಲ' ವೆಂದು ತಿದ್ದುಪಡಿ. ಪುಟಗಳ ಕೆಳಗೆ ಕೊಟ್ಟಿರುವ ಟಿಪ್ಪಣಿಯಲ್ಲಿ ಅನೇಕ ಲೋಪಗಳಿವೆ. ಜಗದ್ವಿಖ್ಯಾತರಾದ ಗ್ರಂಥಕರ್ತರ ಗ್ರಂಥಗಳ ಸೂಚನೆಯಲ್ಲಿ ವಿಕಾರ ಪ್ರಯೋಗಗಳಿರಬಹುದು. ಓದುಗರು ವಿಶಾಲ ಮನಸ್ಸಿನಿಂದ ಮನ್ನಿಸುವರೆಂದು ಬಯಸುತ್ತೇನೆ.

ಮೈಸೂರು
೧೫-೧೨-೧೯೫೫

**ಎಂ. ವಿ. ಕೃಷ್ಣರಾವ್.**

# ವಿಷಯಸೂಚಿಕೆ


| ಪ್ರಕರಣ. | | ಪುಟ. |
|---|---|---|
| ೧ | ಪ್ರಜಾಪ್ರಭುತ್ವ ಸ್ವರೂಪ: ಸ್ವಾತಂತ್ರ್ಯ; ಸಮತೆ; ಭ್ರಾತೃತ್ವ . . . . | ೧ |
| ೨ | ಪ್ರಜಾಪ್ರಭುತ್ವ ಸರ್ಕಾರದ ಸ್ವರೂಪ: ರಾಷ್ಟ್ರೀಯ ಭಾವನೆ ಮತ್ತು ರಾಷ್ಟ್ರದ ಪರಮಾಧಿಕಾರ, ಆಧುನಿಕ ಸಮಾಜದಲ್ಲಿ ಆಚರಣೆಯಲ್ಲಿರುವ ಪ್ರಜಾಪ್ರಭುತ್ವ ಸರ್ಕಾರದ ಧ್ಯೇಯಗಳು: ವ್ಯಕ್ತಿವಾದ; ಸಮಾಜವಾದ; ಫ್ಯಾಸಿಸ್ಟ್ ಸಿದ್ಧಾಂತ; ಕೆಲವು ಸರ್ಕಾರ ತತ್ವಗಳು . . | ೧೨ |
| ೩ | ರಾಷ್ಟ್ರ ರೂಪಗಳು: ಕುಲೀನ ಪ್ರಭುತ್ವ; ಪ್ರಜಾಪ್ರತಿನಿಧಿ ಪ್ರಭುತ್ವ . . . . | ೪೯ |
| ೪ | ರಾಜ್ಯಾಂಗ ಪದ್ಧತಿಗಳು. . . . . | ೬೧ |
| ೫ | ಏಕಮುಖ ಸರ್ಕಾರ: ಸಂಯುಕ್ತ ಸರ್ಕಾರ, ಮಂತ್ರಿ ಮಂಡಲ ಸರ್ಕಾರ: ಕಿರೀಟಧರ; ಕಾಬಿನೆಟ್ ಮತ್ತು ಶಾಸನ ಸಭೆಯ ನಿಕಟಸಂಬಂಧ: ಕಾಬಿನೆಟ್‌ಪಕ್ಷ ಸರ್ಕಾರ; . . . . | ೭೧ |
| ೬ | ಪ್ರಧಾನಮಂತ್ರಿ; ಫ್ರಾನ್ಸ್ ರಾಷ್ಟ್ರದ ಕಾಬಿನೆಟ್ ಸರ್ಕಾರ, ಕೆನಡಾ ಡೊಮಿನಿಯನ್ ಸರ್ಕಾರ, ಸೌತ್ ಆಫ್ರಿಕಾ ಕಾರ್ಯಾಂಗ ಸಮಿತಿ; ಆಸ್ಟ್ರೇಲಿಯಾ ಕಾಮನ್ವೆಲ್ತ್ ಕಾರ್ಯಾಂಗ ಸಮಿತಿ; ಭಾರತ ರಾಷ್ಟ್ರದಲ್ಲಿ ಕಾಬಿನೆಟ್ ಸರ್ಕಾರ; ಪ್ರೆಸಿಡೆನ್ಷಿಯಲ್ ಸರ್ಕಾರ, ರಾಷ್ಟ್ರ ನಾಯಕನ ಮುಂದಾಳ್ತನದ ಕುರುಹು . . | ೮೬ |

ಪ್ರಕರಣ. ಪುಟ.

೭ ಸ್ವಿಸ್ ರಾಷ್ಟ್ರ ವಿಧಾನ: ಸೋವಿಯಟ್ ಸರ್ಕಾರ; ಕೇಂದ್ರ ಸರ್ಕಾರ; ಕಮ್ಯುನಿಷ್ಟ್ ಪಾರ್ಟಿ; ರಷ್ಯದಲ್ಲಿ ಅಧಿಕಾರಿಗಳ ಪ್ರಭುತ್ವ; .. .. ೧೦೮

೮ ಪ್ರಜಾ ಚೈನದ ಪ್ರಜಾ ಸರ್ಕಾರ: ಚೀನಾ ಸರ್ಕಾರ; ಪೀಪಲ್ಸ್ ಕಾಂಗ್ರೆಸ್; ಚೀನಾ ದೇಶದ ರಾಜ್ಯಾಂಗ ಸಂವಿಧಾನ; ಆಡಳಿತ ಕ್ರಮ—ಕಾಂಗ್ರೆಸ್; ಪ್ರೆಸಿಡೆಂಟ್; ಮಂತ್ರಿಮಂಡಲ; ಸ್ಥಳೀಯ ಸಂಸ್ಥೆಗಳು; ಅಲ್ಪಸಂಖ್ಯಾತರ ಸಂಸ್ಥೆಗಳು; ನ್ಯಾಯಾಸ್ಥಾನಗಳು; ಪಕ್ಷಗಳು; ಪಕ್ಷರಚನಾಕ್ರಮ; ಆಧುನಿಕ ರಾಷ್ಟ್ರಪಕ್ಷಗಳು; ಇಂಗ್ಲೆಂಡ್; ಅಮೆರಿಕಾ ಮತ್ತು ಇಂಗ್ಲೆಂಡ್; ಫ್ರಾನ್ಸ್; ಡೊಮಿನಿಯನ್ ರಾಷ್ಟ್ರಗಳಲ್ಲಿ; ದಕ್ಷಿಣ ಆಫ್ರಿಕ; ಆಸ್ಟ್ರೇಲಿಯಾ; .. ೧೪೧

೯ ವರಣದಾತರ ಅಭಿಮತದ ಸ್ವರೂಪ: (ಅಭಿಮತದ ಸ್ವರೂಪ) ಸಾರ್ವತ್ರಿಕ ಮತಾಧಿಕಾರ; ಸ್ತ್ರೀಯರ ಮತಾಧಿಕಾರ; ಮತಾಧಿಕಾರದ ಕೆಲವು ನಿಯಮಗಳು .. .. ೧೮೦

೧೦ ಸರ್ಕಾರ ಅಧಿಕಾರಗಳ ವಿಭಜನೆ: ರಾಷ್ಟ್ರದ ತ್ರಿವಿಧಾಂಗಗಳು; ಮಾಂಟೆಸ್ಕ್ಯೊ ಮತ್ತು ತ್ರಿವಿಧಾಂಗ ತತ್ತ್ವ; ತ್ರಿವಿಧಾಂಗ ತತ್ತ್ವ ಮತ್ತು ಆಧುನಿಕ ರಾಷ್ಟ್ರಗಳು. ತ್ರಿವಿಧಾಂಗ ತತ್ವ ವಿಮರ್ಶೆ; ರಾಷ್ಟ್ರದಲ್ಲಿ ಶಾಸಕಾಂಗದ ಪ್ರಾಧಾನ್ಯತೆ; .. .. ೧೯೧

೧೧ ಪ್ರಾಚೀನ ಶಾಸಕ ಸಭೆಗಳು: ಏಕ ಮತ್ತು ದ್ವಯಾತ್ಮಕ ಸಭೆಯ ತತ್ತ್ವ: ಮೇಲಿನ ಸಭೆಗಳು; ರಚನೆ; ಮೇಲಿನ

ಪ್ರಕರಣ. ಪುಟ.


ಸಭೆಯ ಕಾರ್ಯಗಳು; ಡೊಮಿನಿಯನ್ನಿನ ಮೇಲಿನ ಸಭೆಗಳು; ರಾಜ್ಯ ಸಭೆ; ಆಧುನಿಕ ರಾಷ್ಟ್ರದಲ್ಲಿ ಮೇಲಿನ ಸಭೆಗಳ ಪಾತ್ರ: . . . . ೨೦೪

೧೨ ಕೆಳಗಿನ ಸಭೆಗಳು -- ಮೂಲಭೂತ ತತ್ವಗಳು–ವರಣ ಕ್ಷೇತ್ರಗಳ ವಿಭಜನೆ ಮತ್ತು ಅನುಪಾತಿಕ ಪ್ರತಿನಿಧಿತ್ವ —ಪ್ರತಿನಿಧಿಯ ಪಾತ್ರವೇನು? ಕೆಳಗಿನ ಸಭೆಯ ಕರ್ತವ್ಯ ಕಲಾಪಗಳು — ಶಾಸಕಾಂಗದ ಅಧಿಕಾರ ಗಳು—ಭಾರತದ ಲೋಕಸಭೆ . . ೨೨೫

೧೩ ಕಾರ್ಯಾಂಗದ ಮೇಲೆ ಶಾಸಕ ಸಭೆಯ ಹತೋಟಿ ೨೫೫

೧೪ ಕಾರ್ಯಾಂಗ ರಚನೆಯಕ್ರಮ — ರಾಷ್ಟ್ರ ನಾಯಕನ ಚುನಾವಣೆ — ಅವಧಿ ಎಷ್ಟು — ಕಾರ್ಯಾಂಗದ ಅಧಿಕಾರಗಳು—ಕಾರ್ಯಾಂಗ ಮತ್ತು ಶಾಸಕಾಂಗ ಗಳ ಸಂಬಂಧಗಳು . . . . ೨೬೬

೧೫ ನ್ಯಾಯಾಂಗ . . . . ೨೮೩

೧೬ ಪ್ರಜಾಪ್ರಭುತ್ವಕ್ಕೆ ಇರುವ ಪ್ರತಿಬಂಧಕಗಳು— ಶಾಸನ ಸಭೆಯ ರೋಗ ರುಜನಗಳು–ಏಕನಾಯಕ ಪ್ರಭುತ್ವ ಸ್ಥಾಪನೆ; ರಷ್ಯ, ಇಟಲಿ, ಜರ್ಮನಿ – ಏಕಪಕ್ಷ ಪ್ರಭುತ್ವ ವಿಮರ್ಶೆ — ಪ್ರಜಾಪ್ರಭುತ್ವದ ಕುಂದು ಕೊರತೆಗಳ ನಿವಾರಣಾರೀತಿ . . ೩೧೫

೧೭ ಪ್ರಜಾಪ್ರಭುತ್ವ ಮತ್ತು ಅಂತರ ರಾಷ್ಟ್ರೀಯ ಭಾವನೆಗಳು ೩೫೭

| ಪ್ರಕರಣ. | | ಪುಟ. |
| --- | --- | --- |
| ೧೮ | ವಿಶ್ವಶಾಂತಿ ಸಂಸ್ಥೆ .. .. | ೩೭೮ |
| ೧೯ | ಭಾರತ ಸಂವಿಧಾನ ಪಾರಿಭಾಷಿಕ ಗ್ರಂಥಗಳು .. | ೩೮೪ |
| 20 | Bibliography .. .. | 369 |

# ಪ್ರಜಾ ಸರ್ಕಾರ

## ಪ್ರಕರಣ ೧

### ಪ್ರಜಾಪ್ರಭುತ್ವ ಸ್ವರೂಪ

ಪ್ರಜಾಪ್ರಭುತ್ವವೆಂಬ ಪದಕ್ಕೆ ಸಂಗ್ರಹವಾಗಿ ಒಂದು ನಿರ್ದಿಷ್ಟವಾದ ಅರ್ಥವನ್ನು ಕೊಡಲು ಸಾಧ್ಯವಿಲ್ಲ. ಸರ್ಕಾರದ ಸ್ವರೂಪವನ್ನೂ ಸಾಮಾಜಿಕ ಜೀವನವನ್ನೂ ರೂಪಗೊಳಿಸುವ ಸಿದ್ಧಾಂತ ಎಂದು ತಿಳಿಯಬಹುದು. ಚುನಾವಣೆಯುಳ್ಳ ಸಮಾಜದಲ್ಲಿಯೂ, ಸರ್ಕಾರ ಮತ್ತು ಪ್ರಜೆಗಳಿಗಿರುವ ನಿಕಟ ಸಂಬಂಧ ಮತ್ತು ಬಾಂಧವ್ಯದಲ್ಲಿಯೂ, ಪ್ರಜೆಗಳ ಸಮಾನತೆಯಲ್ಲಿಯೂ, ಸಂಪತ್ತು, ಮತ, ಹುಟ್ಟು, ಬಾಳುವಿಕೆಗಳ ಆಧಾರದ ಮೇಲೆ ನಿಶ್ಚಯಿಸಲ್ಪಟ್ಟ ವ್ಯಕ್ತಿ ಮತ್ತು ಪ್ರಜಾವರ್ಗಗಳ ಹಕ್ಕುಗಳ ನಿರೂಪಣೆ ಮತ್ತು ವಿಮರ್ಶೆಯಲ್ಲಿಯೂ, ಪ್ರಜಾಪ್ರಭುತ್ವದ ಕುರುಹುಗಳು ಕಂಡುಬರುವುವು. ಕಾಲಾನುಗುಣವಾಗಿ ಪ್ರಜಾಪ್ರಭುತ್ವದ ತತ್ವ ಮತ್ತು ಸಿದ್ಧಾಂತಗಳು ಮಾರ್ಪಾಡಾಗಿವೆ. ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಒಂದು ವರ್ಗಕ್ಕೆ ಪ್ರಜಾಪ್ರಭುತ್ವವೆಂದು ತೋರಿದ್ದು ಮತ್ತೊಂದು ವರ್ಗಕ್ಕೆ ಸ್ವಚ್ಛಂದ ಪ್ರಭುತ್ವವಾಗಿ ಗೋಚರವಾಗಿದೆ. ಇದು ವ್ಯಕ್ತಿಯ ಜೀವನದಲ್ಲಿಯೂ ಸಮಾಜದ ಜೀವನದಲ್ಲಿಯೂ ಅವನವನ ಮತ್ತು ಆಯಾ ವರ್ಗದ ಅಂತಸ್ತಿಗೆ ಅನುರೂಪವಾಗಿ ಅರ್ಥವನ್ನು ತಾಳಿದೆ. ಪ್ರಜಾಪ್ರಭುತ್ವದ ಸ್ವರೂಪದ ವಿಚಾರದಲ್ಲಿ ಆಗಿಂದಾಗ್ಗೆ ಜಟಿಲವಾದ ಸಮಸ್ಯೆಗಳು ಹುಟ್ಟಿವೆ; ಅಲ್ಲದೆ ಯಾವ ಯುಗದಲ್ಲಿಯೂ ಅವುಗಳಿಗೆ ಸಮರ್ಪಕವಾದ ಪರಿಹಾರವನ್ನು ಕೊಟ್ಟಿಲ್ಲ.

ಪ್ರಜಾಪ್ರಭುತ್ವವೆಂದರೆ ರಾಷ್ಟ್ರದ ಬಹುಭಾಗದ ಪ್ರಜೆಗಳು ಸರ್ಕಾರದ ಕೆಲಸಗಳಲ್ಲಿ ಸಹಕರಿಸುವುದೆಂಬ ತಿಳಿವಳಿಕೆ. ಪ್ರಜಾಪ್ರಭುತ್ವವು ವ್ಯಕ್ತಿಗೆ ಮೋಕ್ಷದಾಯಕವೆಂದೂ ಸರ್ಕಾರವು ಅದರಲ್ಲಿ

ಮುಖ್ಯವಾದ ಸಾಧನವೆಂದೂ ಕಲ್ಪನೆಯುಂಟು. ವಿದ್ಯಾರ್ಜನೆ ಮತ್ತು ಆರ್ಥಿಕ ಜೀವನದಲ್ಲಿ ಸಾಮ್ಯತೆ ಬೇಕು ಎಂದು ವ್ಯಕ್ತಿವಾದಿಗಳು; ಸರ್ಕಾರದ ಬಲಪ್ರಯೋಗವು ಸಂಪತ್ತಿನ ಸಂಗ್ರಹದಿಂದ ಒದಗುವ ಅಸಾಮ್ಯತೆಯನ್ನು ಹೋಗಲಾಡಿಸುವುದೆಂದು ಸಮಾಜವಾದಿಗಳು; ಉದ್ಯೋಗ, ಕಾರ್ಖಾನೆಗಳ ಆಡಳಿತದಲ್ಲಿ ಮಾಲೀಕರ ಮತ್ತು ಕಾರ್ಮಿಕರ ಸಹಕಾರವೆಂದು ಔದ್ಯೋಗಿಕ ಪ್ರಜಾಪ್ರಭುತ್ವವಾದಿಗಳು — ಇವೇ ಮೊದಲಾದ ವಾದಗಳು ಪ್ರಜಾಪ್ರಭುತ್ವತತ್ವದ ಅನುಸರಣೆಯ ಪರಿಣಾಮವಾಗಿ ಹುಟ್ಟಿವೆ.

ಪ್ರಜಾಪ್ರಭುತ್ವವು, ಸರ್ಕಾರದ ಸ್ವರೂಪ ಮತ್ತು ಸಾಮಾಜಿಕ ಸಿದ್ಧಾಂತ — ಎಂದು ಮನವರಿಕೆಯಾಗಿದ್ದರೂ ಈ ತತ್ವವು ಆಚರಣೆಯಲ್ಲಿ ಒಂದು ಯುಗದಲ್ಲಿದ್ದಂತೆ ಮತ್ತೊಂದರಲ್ಲಿಲ್ಲ. ಪ್ರಜಾಪ್ರಭುತ್ವ ಸರ್ಕಾರದ ರಚನೆಯ ಪ್ರಶ್ನೆ ಮೊಟ್ಟಮೊದಲು ಎದ್ದುದು ಹತ್ತೊಂಬತ್ತನೆಯ ಶತಮಾನದಲ್ಲಿ. ಹದಿನೆಂಟನೆಯ ಶತಮಾನದವರೆಗೆ ಪ್ರಜಾಪ್ರಭುತ್ವದ ಪೂರ್ಣ ಕಲ್ಪನೆಯಾಗಿರಲಿಲ್ಲ. ಸಾಮಾಜಿಕ ಜೀವನದಲ್ಲಿಯೂ ರಾಜಕೀಯದಲ್ಲಿಯೂ ಸಾಮ್ಯತೆಗಾಗಿ ಕಾರ್ಖಾನೆಗಳ ಮಾಲೀಕರಿಗೂ ಕಾರ್ಮಿಕರಿಗೂ ಕಾದಾಟ ಮೊದಲಾಗಿ ಸಾಮ್ಯತೆಯ ಸಿದ್ಧಾಂತ ಪ್ರಜಾಪ್ರಭುತ್ವತತ್ವವಾದುದು ಹದಿನೆಂಟನೆಯ ಶತಮಾನದಿಂದ ಈಚೆಗೆ. ವ್ಯಕ್ತಿತ್ವವನ್ನು ನಿರ್ಧರಿಸುವುದು, ಅದಕ್ಕೆ ಬರುವ ಅಡ್ಡಿಗಳನ್ನು ನಿವಾರಿಸುವುದು; ಸಮಾಜದಲ್ಲಿ ಯಾವ ಅಂತರಗಳಿಂದ ಕಾರ್ಖಾನೆಯ ಮಾಲೀಕರು ಸರ್ಕಾರವನ್ನು ನಡೆಸುವರೋ ಹಕ್ಕುಗಳನ್ನು ಗಳಿಸುವರೋ, ಬಹು ಸಂಖ್ಯಾತವರ್ಗವು ಶಕ್ತಿಹೀನವಾಗುವುದೋ, ಆ ಅಂತರಗಳೇ ವ್ಯಕ್ತಿಯ ಆತ್ಮೀಯತೆಗೆ ಪ್ರತಿಬಂಧಕಗಳು. ಈ ಅಂತರ ಮತ್ತು ಭೇದಗಳನ್ನು ರಾಷ್ಟ್ರಧರ್ಮವು ಪೋಷಿಸಿದರೆ ಬಹು ಸಂಖ್ಯಾತರು ಪ್ರಭುತ್ವವನ್ನು ಅನುಭವಿಸುವುದಕ್ಕೆ ಅವಕಾಶವಿರುವುದಿಲ್ಲ.

## ಸ್ವಾತಂತ್ರ್ಯ

ಪ್ರಜಾಪ್ರಭುತ್ವ ತತ್ವದ ಬೆಳೆವಣಿಗೆಯಲ್ಲಿ ವ್ಯಕ್ತಿ ಮತ್ತು ಸಾಮಾಜಿಕ

ಸ್ವಾತಂತ್ರ್ಯ, ಸಾಮ್ಯತೆ ಮತ್ತು ಭ್ರಾತೃತ್ವ ಸಿದ್ಧಾಂತಗಳ ಪ್ರತಿಪಾದನೆ ಮತ್ತು ಸಾಧನೆಗಳೇ ಮುಖ್ಯಾಂಶಗಳು. ಸ್ವಾತಂತ್ರ್ಯವೆನ್ನುವುದು ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳ ಪರಮಾಧಿಕಾರದಲ್ಲಿ, ಪ್ರಜಾ ಸರ್ಕಾರದ ಅಂಗೀ ಕಾರದಲ್ಲಿ ಗೋಚರವಾಗುವುದು. ಆಸ್ತಿರಕ್ಷಣೆ, ವಾಕ್, ಮತ್ತು ಮುದ್ರಣ ಸ್ವಾತಂತ್ರ್ಯವೂ ಪೌರಸ್ವಾತಂತ್ರ್ಯವಾಗುವುವು. ಮತ ಕೊಡುವ ಅಧಿ ಕಾರ, ಅಧಿಕಾರಸ್ವೀಕಾರ ಮತ್ತು ಪಂಚಾಯಿತ ಸಭಾಸದತ್ವದ ಮೂಲಕ ವ್ಯಕ್ತಿಯು ಸರ್ಕಾರದೊಡನೆ ಸಹಕರಿಸಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವನು. ಸರ್ಕಾರದ ಮತ್ತು ಅನ್ಯದೇಶೀಯರ ಆಕ್ರಮಣವನ್ನು ನಿರೋಧಿಸುವ ಸನ್ನಿವೇಶ ಒದಗಿದರೆ ವೈಯಕ್ತಿಕ ಸ್ವಾತಂತ್ರ್ಯವು ಸಾಧ್ಯ ವಾಗುವುದು. ಪೌರಸ್ವಾತಂತ್ರ್ಯದ ಮತ್ತು ಸರ್ಕಾರದ ದೃಷ್ಟಿಯಲ್ಲಿ ಸರ್ವರೂ ಸಮಾನರು ಎಂಬ ಭಾವನೆಯ ಪೋಷಣೆಗಾಗಿ ಪ್ರಜಾಪ್ರಭುತ್ವ ಬೇಕಾಗಿಲ್ಲ. ನಿರಂಕುಶ ಪ್ರಭುತ್ವದಲ್ಲಿಯೂ ಇವು ಸಾಧ್ಯ. ರಾಜಕೀಯ ಸ್ವಾತಂತ್ರ್ಯವು ಕೈಗೂಡಬೇಕಾದರೆ ಪ್ರಜಾಪರಮಾಧಿಕಾರ ಮತ್ತು ಪ್ರಜಾ ಪ್ರತಿನಿಧಿ ಸರ್ಕಾರವು ಅಗತ್ಯ. ಹದಿನೆಂಟನೆಯ ಶತಮಾನದವರೆಗೆ ಆಸ್ತಿ ಯಿಲ್ಲದ ಪ್ರಜೆಗಳಿಗೆ ಸರ್ಕಾರ ಮತ್ತು ಆಡಳಿತದಲ್ಲಿ ಅನಾದರಣೆ ಎಂಬ ಭಾವನೆ ಇತ್ತು. ಈಚೆಗೆ ನೈಸರ್ಗಿಕ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕ್ರಾಂತಿಯಿಂದಲಾದರೂ ಗಳಿಸಬಹುದೆಂಬ ನಂಬಿಕೆ ಬಲವಾಯಿತು. ವ್ಯಕ್ತಿಯ ವಿಕಾಸಕ್ಕೆ ಪ್ರತಿಬಂಧಕಗಳಾದ ಪ್ರಾಚೀನ ಪದ್ಧತಿ, ಭಾವನೆ ಮತ್ತು ಸಂಸ್ಥೆಗಳನ್ನು ಕ್ರಾಂತಿಯಿಂದಾದರೂ ನಾಶಮಾಡಿ ಪ್ರಜೆಗಳ ಪರ ಮಾಧಿಕಾರವನ್ನು ಪಡೆಯಬೇಕೆಂಬ ಚಳುವಳಿ ಉಗ್ರರೂಪವನ್ನು ತಾಳಿತು. ಎಂದರೆ ನೈಸರ್ಗಿಕ ಸ್ವಾತಂತ್ರ್ಯ ಮತ್ತು ಹಕ್ಕುಗಳ ಸಾಧನೆಯಿಂದ ಪ್ರಜಾ ಪ್ರಭುತ್ವವನ್ನು ಸಾಧಿಸಬೇಕಾಗಿತ್ತು. ಆಧುನಿಕ ಪ್ರಪಂಚದಲ್ಲಿ ಮತ ಕೊಡುವ ಅಧಿಕಾರ ಮತ್ತು ಸರ್ಕಾರವನ್ನು ಮಾರ್ಪಡಿಸುವ ಪರಮಾಧಿ ಕಾರ — ಇವೆರಡು ವಿಶೇಷ ಹಕ್ಕುಗಳೂ ಪ್ರಜೆಗಳಿಗೆ ಲಭಿಸಿದಂದಿನಿಂದ, ಕ್ರಾಂತಿಯಮೂಲಕ ಇಷ್ಟಾರ್ಥಗಳನ್ನು ಸಾಧಿಸಬೇಕಾದ ಆವಶ್ಯಕತೆಯಿಲ್ಲ.

ಹದಿನೆಂಟನೆಯ ಶತಮಾನದಲ್ಲಿ ಸರ್ಕಾರದ ಕಾರ್ಯಕಲಾಪಗಳಲ್ಲಿ ಸಾಮಾನ್ಯಪ್ರಜೆಗಳು ಭಾಗವಹಿಸಬೇಕಾದರೆ ಕ್ರಾಂತಿಯಿಂದಲೇ ಸಾಧಿಸಬೇಕೆಂಬ ಭಾವನೆ ಅಂಕುರಿಸಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಜಾವರ್ಗವು ಮತಕೊಡುವ ಅಧಿಕಾರವನ್ನು ಪಡೆದು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಮೊದಲುಮಾಡಿದಮೇಲೆ ಜನ್ಮಸಿದ್ಧವಾದ ಹಕ್ಕುಗಳ ರಕ್ಷಣೆಗಾಗಿ ಕ್ರಾಂತಿಯು ಅತ್ಯಾವಶ್ಯಕ ಎಂಬ ಭಾವನೆಯು ಅಳಿದುಹೋಯಿತು.

ಹದಿನೆಂಟನೆಯ ಶತಮಾನದಲ್ಲಿ ವ್ಯಕ್ತಿಯ ಹಕ್ಕುಗಳನ್ನು ಮನ್ನಿಸುವ ಸರ್ಕಾರವನ್ನು ಏರ್ಪಡಿಸುವ ಆಕಾಂಕ್ಷೆ ಜನರಲ್ಲಿತ್ತು. ರಾಜಕೀಯ ಸ್ವಾತಂತ್ರ್ಯವೇ ಪ್ರಜಾಸರ್ಕಾರ. ಮತಕೊಡುವ ಅಧಿಕಾರದಿಂದ ವ್ಯಕ್ತಿಯು ತನ್ನ ಪೌರ, ಸಾಮಾಜಿಕ ಮುಂತಾದ ಹಕ್ಕುಗಳನ್ನು ಗಳಿಸಬೇಕಾಗಿತ್ತು. ಸಾಮ್ಯತೆ ಮತ್ತು ಭ್ರಾತೃಭಾವನೆಗಿಂತಲೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಪುರಸ್ಕಾರವಿತ್ತು. ಸರ್ಕಾರದ ಕಾರ್ಯಕಲಾಪಗಳನ್ನು ವಿಮರ್ಶಿಸಿ ಮತವನ್ನು ಸೂಚಿಸುವುದು ವ್ಯಕ್ತಿಯ ಮುಖ್ಯಕಾರ್ಯ. ಸರ್ಕಾರಕ್ಕೆ ಮಾತ್ರ ವ್ಯಕ್ತಿ ಜೀವನದ ವಿಕಾಸದಲ್ಲಿ ಪ್ರವೇಶಿಸುವ ಅಧಿಕಾರವಿರಲಿಲ್ಲ. ವ್ಯಕ್ತಿಯು ತನ್ನ ಪ್ರಗತಿಗಾಗಿ ತಾನೇ ಜೀವನವನ್ನು ಕ್ರಮಪಡಿಸಿಕೊಳ್ಳಬೇಕಾಗಿತ್ತು. ಆದರೆ ವ್ಯಕ್ತಿಯು ತನ್ನ ಪ್ರಗತಿಪರ ಕಾರ್ಯಗಳನ್ನು ತಾನೇ ನಿರ್ಧರಿಸುವುದೂ ಅಥವಾ ರಾಷ್ಟ್ರ ಸರ್ಕಾರವು ವ್ಯಕ್ತಿವಿಕಾಸಕ್ಕೆ ಅನುಗುಣವಾದ ಕಾರ್ಯಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದೂ ರಾಷ್ಟ್ರಕ್ಕೆ ಹಾನಿ ಎಂಬ ಭಾವನೆ ಮೂಡಿತ್ತು. ನೀತಿಯುತವಾದ ರಾಷ್ಟ್ರ ಸರ್ಕಾರದ ನಿಯಮಗಳು, ವ್ಯಕ್ತಿಯ ಸ್ವಾತಂತ್ರ್ಯವನ್ನು ನಿಯಂತ್ರಿಸುವುದು, ವ್ಯಕ್ತಿಯ ವಿಕಾಸಕ್ಕೂ ರಾಷ್ಟ್ರಪ್ರಗತಿಗೂ ಕ್ಷೇಮ. ಮನುಷ್ಯನು ಸ್ವಾತಂತ್ರ್ಯವನ್ನು ಬಯಸುವುದು, ಸರ್ಕಾರವು ಸಮಾಜವನ್ನು ಕ್ರಮಪಡಿಸಲೆತ್ನಿಸುವುದು — ಇವೆರಡರ ನಿರಂತರ ಹೋರಾಟವೇ ಸ್ವಾತಂತ್ರ್ಯ ವಿಕಾಸದ ಮೂಲಾಧಾರ ರಹಸ್ಯ. ಪ್ರಜಾಪ್ರಭುತ್ವ ತತ್ವವು ರಾಷ್ಟ್ರಕಿಂತಲೂ

ವ್ಯಕ್ತಿಗೇ ಪ್ರಾಧಾನ್ಯತೆಕೊಟ್ಟಿದೆ. ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಬರುವ ಪ್ರತಿಬಂಧಕಗಳನ್ನು ಸರ್ಕಾರವು ನಿರೋಧಿಸುವ ಜವಾಬ್ದಾರಿಯನ್ನು ಕೊಟ್ಟಿದೆಯೇ ಹೊರತು ವ್ಯಕ್ತಿಯು ಅನಿವಾರ್ಯವಾಗಿ ಮಾಡಬೇಕಾದ ಕಾರ್ಯಗಳನ್ನು ನಿರ್ದೇಶಿಸಿಲ್ಲ. ಪ್ರಜಾಸಮ್ಮತದಿಂದ ನಿರ್ಧರಿಸಲ್ಪಟ್ಟ ಸರ್ಕಾರದ ನಿಯಂತ್ರಣದಲ್ಲಿಯೇ ವ್ಯಕ್ತಿಯ ಸ್ವಾತಂತ್ರ್ಯದ ಬೆಳವಣಿಗೆ ಸಾಧ್ಯವೆಂಬುದು ಪ್ರಜಾಪ್ರಭುತ್ವದ ವಾದ. ರಾಷ್ಟ್ರ ಶಾಸನಗಳು ಮತ್ತು ನಿಯಮಗಳು ವಿಧಿಸುವ ನಿರೋಧಗಳನ್ನು ವ್ಯಕ್ತಿಯು ಒಪ್ಪಬೇಕು. ರಾಷ್ಟ್ರ ಶಾಸನಗಳಿಗೆ ಅಧೀನತೆಯಿಂದಲೇ ವ್ಯಕ್ತಿಯ ಏಳಿಗೆಯು ಸಾಧ್ಯವಾಗುವುದು. ನೀತಿ ಸಮ್ಮತವಲ್ಲದ ಸರ್ಕಾರದ ನಿರೋಧಗಳನ್ನು ವ್ಯಕ್ತಿಯು ನಿರ್ಭಯವಾಗಿ ವಿರೋಧಿಸಬಹುದು.

## ಸಮತೆ

ಪ್ರಜಾಪ್ರಭುತ್ವದಲ್ಲಿ ಸಮತೆಯು ಸ್ವಾತಂತ್ರ್ಯದಂತೆ ಪ್ರಧಾನಗುಣ. ಪ್ರಜಾಪ್ರಭುತ್ವ ತತ್ವದ ಬೆಳೆವಣಿಗೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಸಮತೆಯನ್ನು ಸ್ಥಾಪಿಸುವುದು ಒಂದು ಪ್ರಧಾನಾಂಶವಾಗಿ ಕಂಡು ಬಂದಿದೆ. ರಾಷ್ಟ್ರಶಕ್ತಿ ಮತ್ತು ಪರಮಾಧಿಕಾರದ ರಚನೆಯು ಸಮತೆಯ ಆಧಾರದ ಮೇಲೆ ಸಾಧ್ಯವೇ ಹೊರತು ಅಸಮತೆಯ ಮೇಲಲ್ಲ. ಸಮತೆಯ ತತ್ವವನ್ನು ದೂಡಿದರೆ ಕ್ರಾಂತಿಯು ಅನಿವಾರ್ಯವೆಂಬುದು ಅರಿಸ್ಟಾಟಲಿನ ಮತ. ಸಮತೆಗಾಗಿ ನಡೆದ ಸಂಗ್ರಾಮಗಳೇ ಪ್ರಜಾಪ್ರಭುತ್ವದ ಚರಿತ್ರೆಯ ಮುಖ್ಯಾಂಶಗಳು. ಮತಾಧಿಕಾರವನ್ನು ಹೆಚ್ಚಿಸುವುದರಲ್ಲಿ, ಸರ್ಕಾರದ ರಚನೆ ಶಿಸ್ತುಗಳಲ್ಲಿ ವ್ಯಕ್ತಿಯು ಭಾಗವಹಿಸುವುದರಲ್ಲಿ, ಬಹುಸಂಖ್ಯಾತ ವರ್ಗದ ಅಭಿಮತ ಸ್ಥಾಪನೆಯಲ್ಲಿ, ಹೆಂಗಸರ, ಕಾರ್ಮಿಕರ ಹಕ್ಕು ಬಾಧ್ಯತೆಗಳ ಆವಿಷ್ಕರಣದಲ್ಲಿ — ಇವೇ ಮುಂತಾದುವುಗಳಲ್ಲಿ ಸಮತೆಯನ್ನು ಸಾಧಿಸುವುದರಲ್ಲಿಯೇ ಪ್ರಜಾಪ್ರಭುತ್ವದ ತತ್ವವು ಅಡಗಿರುವುದು.

ವ್ಯಕ್ತಿಯ ವಿಕಾಸದಲ್ಲಿ ಸಮತೆಯು ಬಹಳ ಮುಖ್ಯವಾದ ಸಿದ್ಧಾಂತವೆಂದು ಬೋಧಿಸಿದವರು ಹುಕರ್ (Hooker) ಮತ್ತು ಗ್ರೋಷಿಯಸ್

(Grotius). ಹದಿನೇಳನೆಯ ಶತಮಾನದಲ್ಲಿ ಸ್ವಚ್ಛಂದ ಪ್ರಭುತ್ವವನ್ನು ತಡೆದು ವಿಧಿಬದ್ಧ ಸರ್ಕಾರವನ್ನು ಏರ್ಪಡಿಸುವುದಕ್ಕಾಗಿ ಆಂಗ್ಲೇಯ ನೀತಿಜ್ಞರು ವಾದಿಸಿದರು. ಅದರಿಂದ ವ್ಯಕ್ತಿಯ ಸಾಮಾಜಿಕ ಸ್ವಾತಂತ್ರ್ಯದ ತಳಹದಿಯ ಮೇಲೆ ವಿಧಿಸಮ್ಮತ ಸರ್ಕಾರವನ್ನು ರಚಿಸಲು ಅವಕಾಶವಾಯಿತು. ವಿಧಿಬದ್ಧ ಸರ್ಕಾರದ ದೃಷ್ಟಿಯಲ್ಲಿ, ವಿಧಿ ಪ್ರಯೋಗದಲ್ಲಿ, ಜಾತಿ ಅಂತಸ್ತುಗಳ ಭೇದವಿಲ್ಲದೆ ಎಲ್ಲ ಪ್ರಜೆಗಳನ್ನೂ ಸಮನಾಗಿ ಕಾಣುವ ಭಾವನೆ ಪ್ರಜಾಪ್ರಭುತ್ವದ ಪ್ರಗತಿಗೆ ಮೂಲಾಧಾರವಾದುದು. ಫ್ರಾನ್ಸಿನ ಮಹಾಕ್ರಾಂತಿಯಲ್ಲಿಯೂ, ಅಮೆರಿಕದ ರಾಷ್ಟ್ರಗಳ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಪ್ರಜಾವರ್ಗಗಳಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ಅಂತರಗಳನ್ನೂ ಮತ್ತು ಅಸಮತೆಗಳನ್ನೂ ನಿರ್ಮೂಲಮಾಡಲು ಚಳುವಳಿಗಳು ನಡೆದುವು. ವಿಧಿಬದ್ಧ ಸರ್ಕಾರವು ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ, ಅವನು ಶ್ರೀಮಂತನಾಗಲಿ ಬಡವನಾಗಲಿ, ನ್ಯಾಯಸ್ಥಾನಗಳಲ್ಲಿ ಏಕರೀತಿಯಾದ ನ್ಯಾಯವನ್ನು ಪಡೆಯುವ ಹಕ್ಕನ್ನು ದೊರಕಿಸಿತು. ಅಮೆರಿಕ ಮತ್ತು ಫ್ರಾನ್ಸ್ ರಾಷ್ಟ್ರಗಳಲ್ಲಿ ಸಾಮಾಜಿಕ ಜೀವನದಲ್ಲಿದ್ದ ಕೃತಕ ಭೇದಗಳು ಅಳಿದು ಹೋದುವು. ರಾಷ್ಟ್ರಸರ್ಕಾರದ ಪದವಿಗಳ ಹಂಚಿಕೆಯಲ್ಲಿ, ಶಾಸನಸಭೆಗಳಲ್ಲಿ, ನ್ಯಾಯಸ್ಥಾನಗಳಲ್ಲಿ, ಸಹಕರಿಸಲು ಪ್ರತಿಯೊಬ್ಬ ವ್ಯಕ್ತಿಗೂ ಏಕರೀತಿಯಾದ ಅವಕಾಶವನ್ನು ಕಲ್ಪಿಸಿಕೊಡುವುದೇ ಸಮತಾ ಸಿದ್ಧಾಂತದ ಘನ ಉದ್ದೇಶವಾಯಿತು. ಪ್ರತಿಯೊಬ್ಬ ವ್ಯಕ್ತಿಯೂ ಆತ್ಮ ವಿಕಾಸಕ್ಕಾಗಿ ತನ್ನ ಸಹಜಗುಣಗಳನ್ನು ವೃದ್ಧಿಪಡಿಸಿಕೊಂಡು ಸಮಾಜದ ಉತ್ತಮಜೀವನಕ್ಕಾಗಿ ಅದನ್ನು ಧಾರೆಯೆರೆಯುವುದು ಸಮತಾಸಿದ್ಧಾಂತದ ಗೂಢಾರ್ಥವೆಂದು ಅಬ್ರಹಾಂಲಿಂಕನ್ನನು ಹೇಳಿದ್ದಾನೆ. ದಡ್ಡನೂ ವಿದ್ಯಾವಂತನೂ, ಶಿಲ್ಪಿಯೂ, ಕೂಲಿಕಾರನೂ ಏಕರೀತಿಯಾದ ಮನ್ನಣೆಯನ್ನು ಪಡೆಯಬೇಕೆಂದಲ್ಲ. ಪ್ರಭುತ್ವದ ದೃಷ್ಟಿಯಲ್ಲಿ ಯಾವ ವರ್ಗಕ್ಕೂ ಅಸಾಧಾರಣ ಹಕ್ಕುಗಳನ್ನೂ ಅನುಕೂಲಗಳನ್ನೂ ಪಡೆಯುವ ಅವಕಾಶವಿಲ್ಲ. ರಾಜಕೀಯ, ಸಾಮಾಜಿಕ ಮತ್ತು ಪೌರ ಜೀವನದಲ್ಲಿ ತರತಮಭಾವವಿಲ್ಲ.

ಸಮಸ್ತ ಪ್ರಜಾವರ್ಗವೂ ಸಮಾನರೆಂದು ಸರ್ಕಾರವು ಎಲ್ಲಿ ಭಾವಿಸಿ ಆಯಾ ಪ್ರಜೆಗಳ ಸಹಜಗುಣಗಳ ಬೆಳವಣಿಗೆಗೆ ಅನುಕೂಲವಾದ ಸನ್ನಿವೇಶವನ್ನು ಕಲ್ಪಿಸಿಕೊಡುವುದೋ ಅಲ್ಲಿ ಪ್ರಜಾಪ್ರಭುತ್ವವು ಆಚರಣೆಯಲ್ಲಿದೆ ಎಂದು ರಾಜನೀತಿಜ್ಞರು ಹೇಳಿದ್ದಾರೆ.

ಜೀವನ ಪವಿತ್ರವಾದುದು; ದೈಹಿಕ ಮತ್ತು ಆತ್ಮ ಸುಖಕ್ಕಾಗಿ ದುಡಿಯುವ ಸ್ವಾತಂತ್ರ್ಯವು ವ್ಯಕ್ತಿಗೆ ಸೇರಿದೆ. ವ್ಯಕ್ತಿಯ ಪ್ರಗತಿ ಸಾಧನೆಗಾಗಿ ರಾಷ್ಟ್ರ ಮತ್ತು ಸರ್ಕಾರಗಳು ಸೃಷ್ಟಿಯಾಗಿವೆ. ಆದುದರಿಂದ ವ್ಯಕ್ತಿಯು ತನ್ನ ಜೀವನವನ್ನು ಸಜ್ಜೀವನವನ್ನಾಗಿ ಮಾಡಿಕೊಳ್ಳಲು ಬೇಕಾಗುವ ಸನ್ನಿವೇಶ, ನ್ಯಾಯ, ಶಿಸ್ತು, ರಕ್ಷಣೆ ಮುಂತಾದ ಸಾಧನೆಗಳನ್ನು ಸರ್ಕಾರವು ಸಿದ್ಧಪಡಿಸಬೇಕೆಂದು ಕೋರುವನು. ಪ್ರತಿಯೊಬ್ಬ ವ್ಯಕ್ತಿಯೂ ಮಾತನಾಡುವ, ಸಂಚರಿಸುವ, ಚರ್ಚೆನಡೆಸುವ ವೈಯುಕ್ತಿಕ ಸ್ವಾತಂತ್ರ್ಯವನ್ನೂ, ಆರೋಗ್ಯ, ವಿದ್ಯಾಭ್ಯಾಸ, ಸ್ವಯಾರ್ಜನೆಯ ಸಂಪತ್ತಿನ ಅನುಭವ, ದುರ್ಜನರ ಮತ್ತು ಸ್ವೇಚ್ಛಾಪ್ರವರ್ತಿಗಳ ಆಕ್ರಮಣವನ್ನು ತಡೆಯಲು ಬೇಕಾಗುವ ರಕ್ಷಣೆ — ಇವೇ ಮುಂತಾದುವುಗಳನ್ನು ಬಯಸುವನು. ವ್ಯಕ್ತಿಯು ಇತರರೊಡನೆ ಸಹಕರಿಸಿ ಸ್ವಯಂ ಪ್ರೇರಣೆಯಿಂದ ಸಮಾಜದ ಶಿಸ್ತುಕ್ರಮಗಳನ್ನು ನಿರ್ಧರಿಸಬಹುದು. ಸಮಾಜ ಜೀವನಕ್ಕೆ ಅನುಗುಣವಾದ ಸರ್ಕಾರವನ್ನು ನಿರ್ಮಿಸಿ, ರಾಜ್ಯಾಂಗಗಳನ್ನು ರಚಿಸಿ, ತನ್ನ ಪ್ರತಿನಿಧಿಗಳ ಮೂಲಕ ಶಾಸನ ಮತ್ತು ರಾಷ್ಟ್ರವಿಧಿಗಳನ್ನು ಏರ್ಪಡಿಸಿಕೊಳ್ಳಬಹುದು. ಪ್ರಜಾಸಮತೆಯು ರಾಷ್ಟ್ರರಚನೆಯ ಮೂಲತತ್ವ; ಆದುದರಿಂದ ಸರ್ಕಾರದ ನೌಕರಿ ಪದವಿಗಳನ್ನು ಪಡೆಯುವುದರಲ್ಲಿ, ಪ್ರಾತಿನಿಧ್ಯದಲ್ಲಿ, ಶಾಸನರಚನೆಯಲ್ಲಿ, ಸೌಕರ್ಯಗಳ ಅನುಭವದಲ್ಲಿ, ಯಾವ ಭೇದಭಾವನೆಯೂ ಇಲ್ಲದೆ ಹೊಂದುವ ಹಕ್ಕನ್ನು ವ್ಯಕ್ತಿಯು ಪಡೆಯಬಹುದು. ಈ ಬಗೆಯ ಮಾರ್ಗಗಳಲ್ಲಿ ವ್ಯಕ್ತಿಯು ತನ್ನ ಮಾನಸಿಕ, ಧಾರ್ಮಿಕ ಮತ್ತು ಇತರ ಹುಟ್ಟುಗುಣಗಳನ್ನು ವೃದ್ಧಿಪಡಿಸಿಕೊಳ್ಳಲು ಸರ್ಕಾರವು ಸಲಕರಣೆಗಳನ್ನು ಸಿದ್ಧಪಡಿಸಿಕೊಡಬೇಕು. ಆದರೆ ವ್ಯಕ್ತಿಯ ವಿಕಾಸಕ್ಕಾಗಿ

ಅಳವಡಿಸುವ ಕ್ರಮವು ರಾಷ್ಟ್ರ ಸರ್ಕಾರದ ಸಮತಾಭಾವನೆಯ ತತ್ವಕ್ಕೆ ಪ್ರತಿಬಂಧಕವಾಗಕೂಡದು. ವ್ಯಕ್ತಿ ಪಡೆಯುವ ಸ್ವಾತಂತ್ರ್ಯವು ಸಮಾಜದ ಮತ್ತು ಪ್ರಜಾವರ್ಗದ ಸಜ್ಜೀವನಕ್ಕಾಗಿ ನೆರವಾದರೆ ಆಗ ಸ್ವಾತಂತ್ರ್ಯದ ಮಿತಿಯನ್ನು ನಿರ್ಧರಿಸಿ ಬಂಧಿಸಬೇಕಾಗುವುದಿಲ್ಲ. ಸಮತೆ ಮತ್ತು ಸ್ವಾತಂತ್ರ್ಯದ ಭಾವನೆಗಳು ವ್ಯಕ್ತಿಯ ಮತ್ತು ಸಮಾಜದ ಪ್ರಗತಿ ಸಾಧಕವಾಗುವುದು.

ಸಮಾಜದಲ್ಲಿ ಸಮತೆಯೊಂದರಿಂದಲೇ ವ್ಯಕ್ತಿಯ ಸಹಜಗುಣಗಳು ಪೂರ್ಣಗೊಳ್ಳಲು ಸಾಧ್ಯವಿಲ್ಲ. ಆದುದರಿಂದ ಪ್ರಭುತ್ವದ ಭಾವನೆಗಳು ಜೀವನದ ಇತರ ಅಂಗಗಳಲ್ಲಿಯೂ ಪ್ರವೇಶಿಸಬೇಕು. ರಾಜಕೀಯ ಮತ್ತು ಆರ್ಥಿಕ ಜೀವನದಲ್ಲಿ ಸಮತೆಯು ವ್ಯಕ್ತಿಯ ಪೂರ್ಣವಿಕಾಸಕ್ಕೆ ಅತ್ಯಾವಶ್ಯಕವೆಂದು ರಾಜನೀತಿಜ್ಞರು ಘೋಷಿಸಿದ್ದಾರೆ. ಅಂಥ ಸಮತೆಗಾಗಿ ಕ್ರಾಂತಿಯುತ ಚಳುವಳಿಗಳು ನಡೆದಿವೆ. ಚರಿತ್ರೆಯ ಹಿನ್ನೆಲೆಯನ್ನು ನೋಡಿದರೆ ಸಮಾಜದಲ್ಲಿ ಸಮತೆಯನ್ನು ಸ್ಥಾಪಿಸುವ ಉದ್ಯಮ ಮೊದಲು ನಡೆಯಿತು. ತರುವಾಯ ವರ್ಣಗಳ ಹಕ್ಕುಗಳ ದೂಷಣೆ, ಧಾರ್ಮಿಕ ಸ್ವಾತಂತ್ರ್ಯ, ವಿದ್ಯಾಭ್ಯಾಸ, ರಾಜ್ಯಾಂಗಗಳಲ್ಲಿ ಸಹಕಾರ, ಆರೋಗ್ಯ, ವಸತಿ, ಆಟಪಾಟಗಳು — ಇವುಗಳ ಸೌಕರ್ಯಗಳಲ್ಲಿ ಸಹಯೋಗಗಳಿಗಾಗಿ ಉದ್ಯಮಗಳು ಜರುಗಿದುವು. ರಾಜಕೀಯರಂಗದಲ್ಲಿ ಸಮತೆಯಿದ್ದರೆ ಆರ್ಥಿಕ ಮತ್ತು ಸಾಮಾಜಿಕ ಸಮತೆಯು ಸಾಧ್ಯವಾಗುವುದು. ಧರ್ಮದಲ್ಲಿ ಸಮತಾಭಾವನೆಯಿದ್ದಲ್ಲಿ, ನ್ಯಾಯವಿಧಿಗಳಲ್ಲಿ ಸಮತೆಯು ಸುಲಭವಾಗಿ ಏರ್ಪಡುವುದು, ಆರ್ಥಿಕ ಸಮಸ್ಯೆ ಮತ್ತು ರಚನೆಗಳನ್ನು ನ್ಯಾಯನೀತಿಗಳು ಪ್ರತಿಬಿಂಬಿಸುವುದರಿಂದ ಆರ್ಥಿಕ ಜೀವನದಲ್ಲಿ ಸಮತೆಯು ಸಿದ್ಧಿಯಾದರೆ ರಾಷ್ಟ್ರಧರ್ಮದಲ್ಲಿ ಸಮತೆಯು ತಾನಾಗಿಯೇ ಹುಟ್ಟುವುದು.

ಪ್ರಜಾಪ್ರಭುತ್ವವಿಲ್ಲದಿದ್ದರೆ ಬಹುಸಂಖ್ಯಾತರು ಅಲ್ಪಸಂಖ್ಯಾತರ ಕೈಗೊಂಬೆಗಳಾಗುವರೆಂಬ ಭಾವನೆಯ ಆಧಾರದಮೇಲೆ ಪ್ರಜಾಪ್ರಭುತ್ವ

ತತ್ವವು ನಿಲ್ಲುವುದು. ಪ್ರಜಾಪ್ರಭುತ್ವವು ನೀತಿ ಸಮ್ಮತವಾದುದು. ಪ್ರತಿಯೊಬ್ಬ ವ್ಯಕ್ತಿಗೂ ಸಮಾಜದಲ್ಲಿ ಸುಖಾನುಭವಕ್ಕೆ ಹಕ್ಕಿದೆ; ಅದನ್ನು ತಿರಸ್ಕರಿಸುವ ಸರ್ಕಾರಕ್ಕೆ ಮನ್ನಣೆಯಿಲ್ಲ. ಸಾಮೂಹಿಕ ಸಂಪತ್ತನ್ನು ಸಮವಾಗಿ ಭಾಗಿಸುವ ಭಾವನೆಯುಳ್ಳ ಸಮಾಜರಚನೆಯಲ್ಲಿ ವ್ಯಕ್ತಿ ವಿಕಾಸಕ್ಕೂ ಮತ್ತು ಸುಖಾನುಭವಕ್ಕೂ ಬೇಕಾಗುವ ಸಾಧನಗಳು ಅಂತರ್ಗತವಾಗಿವೆ. ಪ್ರಕೃತಿಯು ಒದಗಿಸಿಕೊಡುವ ಸಂಪತ್ತು ವ್ಯಕ್ತಿಯ ಬುದ್ಧಿಶಕ್ತಿ ಸಹಜ ಗುಣಗಳಿಗೆ ಅನುಗುಣವಾಗಿ ಸಮವಾಗಿ ಎಲ್ಲಿ ವಿನಿಯೋಗವಾಗುವುದಿಲ್ಲವೋ ಅಲ್ಲಿ ರಾಷ್ಟ್ರ ಕ್ಷೀಣವಾಗುವುದು; ಅಥವಾ ತಾತ್ಕಾಲಿಕವಾಗಿ ಸ್ವಚ್ಛಂದ ಪ್ರಭುತ್ವಗಳು ಹುಟ್ಟಿಕೊಳ್ಳುವುವು; ಕೊನೆಯಲ್ಲಿ ಸರ್ಕಾರವು ಸಾಮೂಹಿಕ ಜೀವನದ ಏಳಿಗೆಗಾಗಿ ಪ್ರಗತಿಪರವಾಗುವುದು.

## ಭ್ರಾತೃತ್ವ

ಸಹೋದರ ಭಾವನೆಯನ್ನು ಪೋಷಿಸುವುದು ಪ್ರಜಾಪ್ರಭುತ್ವದ ಉದಾತ್ತ ಧ್ಯೇಯ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ವ್ಯಕ್ತಿಸ್ವಾತಂತ್ರ್ಯ ಸಮತೆಗಳನ್ನು ಪಡೆಯುವ ಆಕಾಂಕ್ಷೆ ಸಮಾಜದಲ್ಲಿ ಪ್ರಬಲವಾಗಿತ್ತು. ಪ್ರಜಾಪ್ರತಿನಿಧಿಪ್ರಭುತ್ವ, ವಿಧಿಬದ್ಧ ಸರ್ಕಾರ, ಪ್ರಜಾವರ್ಗಗಳಲ್ಲಿನ ತಾರತಮ್ಯ ಮತ್ತು ವಿಶೇಷಹಕ್ಕುಗಳ ರದ್ದು—ಇವುಗಳಿಂದ ಸ್ವಾತಂತ್ರ್ಯ ಮತ್ತು ಸಮತೆಗಳನ್ನು ಸಾಧಿಸಲಾಯಿತು. ವ್ಯಕ್ತಿಯು ಇತರರೊಡನೆ ಸಹಕರಿಸಿ ವಿಕಾಸಹೊಂದುವುದು ಸ್ವಾತಂತ್ರ್ಯ; ಸಹಕಾರ ಸಹಯೋಗಗಳಿಂದ ಸಮ್ಮಿಳಿತ ರೂಪದಲ್ಲಿ ಸಮಾಜದ ಜೀವನವನ್ನು ಪವಿತ್ರಗೊಳಿಸುವುದು ಸಮತಾ ಭಾವನೆ. ವ್ಯವಹಾರದಲ್ಲಿ ಪ್ರಜಾವರ್ಗಗಳ ಮತ್ತು ವ್ಯಕ್ತಿಗಳ ಸಮತೆಯು ಇಲ್ಲದಿದ್ದರೂ ಪ್ರಜಾವರ್ಗಗಳು ಮತ್ತು ವ್ಯಕ್ತಿಗಳು ಪರಸ್ಪರ ಸೌಹಾರ್ದದಿಂದ ಕಾಣಬೇಕೆಂಬ ಭಾವನೆಯು ಮೂಡಿದ್ದರೆ ಸಮಾಜದಲ್ಲಿ ಸಹಕಾರ ಜೀವನವು ಸಾಧ್ಯವಾಗುವುದು ಮತ್ತು ನೀತಿ ಸಮ್ಮತವಾಗುವುದು ಎಂದು ಸ್ಮಿತ್ ರಾಜ್ಯಶಾಸ್ತ್ರಜ್ಞನು ಹೇಳಿದ್ದಾನೆ.

ವ್ಯಕ್ತಿಗಳು ತಮ್ಮಲ್ಲಿನ ಭೇದ ಪ್ರಭೇದಗಳನ್ನು ದೂಡಿ ಸಮಾಜದ

ಸಾಮೂಹಿಕ ಜೀವನವನ್ನು ವೃದ್ಧಿಗೊಳಿಸಲು ಮಾಡುವ ಉದ್ಯಮವೇ ಪ್ರಜಾಪ್ರಭುತ್ವ. ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಕಾರ್ಯಕಲಾಪಗಳಲ್ಲಿ ಇತರರೊಡನೆ ಸ್ವಯಂಪ್ರೇರಣೆಯಿಂದ ಸಹಕರಿಸುವ ಭಾವನೆಯು ಪ್ರಜಾಪ್ರಭುತ್ವತತ್ವದಲ್ಲಿ ಅಂತರ್ಗತವಾಗಿದೆ. ಪ್ರಜಾಪ್ರಭುತ್ವವು ಒಂದು ಸಹಕಾರಸಂಘ; ಸಾಮೂಹಿಕ ಜೀವನ ಧ್ಯೇಯವೇ ಸಮತೆ ಮತ್ತು ಸ್ವಾತಂತ್ರ್ಯಗಳಿಗಿಂತ ಹಿರಿದಾದುದು. ರಾಷ್ಟ್ರದ ಹಿತಚಿಂತಕರಾದ ವ್ಯಕ್ತಿಗಳು ಸಮಷ್ಟಿರೂಪದಲ್ಲಿ ರಾಷ್ಟ್ರೋದ್ಯಮಗಳನ್ನು ಕೈಕೊಂಡು, ಸಮಷ್ಟಿರೂಪದಲ್ಲಿ ತಕ್ಕ ಪ್ರತಿಫಲವನ್ನು ಅನುಭವಿಸುವುದು ಸಾಮೂಹಿಕ ಜೀವನದ ರಹಸ್ಯ. ಸಹೋದರ ಭಾವನೆಯೆಂದರೆ ಪರಾರ್ಥ ಜೀವನದಲ್ಲಿ ಸ್ವಾರ್ಥವನ್ನು ಮರೆಯುವುದು; ಪರರ ಅಭ್ಯುದಯದಲ್ಲಿ ತನ್ನ ಅಭ್ಯುದಯವನ್ನು ಕಾಣುವುದು. ಆತ್ಮಾರ್ಪಣೆಯಿಂದ ಸಾಮೂಹಿಕ ಜೀವನದ ಮಟ್ಟವನ್ನು ಎತ್ತುವುದು; ಆತ್ಮಾವಲಂಬನೆಯಿಲ್ಲದೆ ಸಂಘ ಜೀವನ ನಡೆಸುವುದು. ಸಾರ್ವಜನಿಕ ಹಿತಚಿಂತನೆಯೇ ವ್ಯಕ್ತಿಯ ಸಹಜ ಗುಣಗಳನ್ನು ನೀತಿಯುತವನ್ನಾಗಿ ಮಾಡಿ ಸಮಾಜದಲ್ಲಿ ಹಕ್ಕುಗಳನ್ನಾಗಿ ರೂಪಾಂತರಿಸುವುದು ಎಂದು ರೂಸೋ ಮತ್ತು ಟಿ. ಎಚ್. ಗ್ರೀನ್ ಎಂಬ ಧ್ಯೇಯವಾದಿಗಳು ಹೇಳಿದ್ದಾರೆ. ಸಮಾಜ ಹಿತಚಿಂತನೆಯು ವ್ಯಕ್ತಿಯಲ್ಲಿ ಐಕ್ಯವಾಗಿರುವುದರಿಂದ ಸಮಾಜಕ್ಕೂ ವ್ಯಕ್ತಿಗೂ ಹೋರಾಟವಿಲ್ಲ. ಸಮಾಜ ಜೀವನದಲ್ಲಿ ಸಹಕರಿಸದ ವ್ಯಕ್ತಿಯ ಜೀವನವು ನೀತಿಯುತವಾದುದಲ್ಲ. ಪ್ರಜಾಪ್ರಭುತ್ವವು ಸಾರ್ವಜನಿಕ ಸೇವೆಗಾಗಿ ನಿರ್ಮಾಣವಾದ ಪ್ರಭುತ್ವ. ಸಮಾಜದ ಕಾರ್ಯಗಳೂ ಜೀವನದ ಸಂಘಟನೆಗಳೂ ಅದರ ಪರಮ ಧ್ಯೇಯ. ಸಮಾಜ ಸಂಘಟನವು ಪ್ರಜಾಪ್ರಭುತ್ವದ ಪ್ರಧಾನ ತತ್ವ ಎಂದು ಡಿಗ್ಬಿ ಮತ್ತು ಕ್ರಾಬೆ ರಾಜ್ಯಶಾಸ್ತ್ರಜ್ಞರು ಪ್ರತಿಪಾದಿಸಿದ್ದಾರೆ. ಪ್ರಾಚೀನವಾದ ಸಿದ್ಧಾಂತಗಳಿಗೆ ಹೊಸ ರೂಪವನ್ನು ಕೊಟ್ಟು ಪ್ರತಿಪಾದಿಸುವ, ಕಾರ್ಯಕಾರಿಯನ್ನಾಗಿ ಮಾಡುವ ಉದ್ದೇಶವು ಪ್ರಜಾಪ್ರಭುತ್ವ ತತ್ವದಲ್ಲಿ ಗೋಚರವಾಗಿಲ್ಲ. ಆಯಾ ಯುಗದಲ್ಲಿ ಸನ್ನಿಹಿತವಾಗುವ ಜಟಿಲ ಪ್ರಶ್ನೆ

ಗಳನ್ನು ವಿಮರ್ಶಿಸುವುದು, ನವೀನ ಕಲ್ಪನೆಗಳನ್ನು ಪೋಷಿಸುವುದು, ಪ್ರಚಲಿತ ಸ್ಥಿತಿಗತಿಗಳಿಗೂ ನವೀನ ಕಲ್ಪನೆಗಳಿಗೂ ಉಂಟಾಗುವ ತಿಕ್ಕಾಟ ದಿಂದ ಉತ್ಪನ್ನವಾಗುವ ನೂತನ ದೃಷ್ಟಿ ಮತ್ತು ಕಲ್ಪನೆಗಳನ್ನು ಅಂಗೀಕರಿಸಿ ಸಮಾಜವನ್ನು ಪ್ರಗತಿಪರವಾಗುವಂತೆ ಹುರಿದುಂಬಿಸುವುದು ಪ್ರಜಾ ಪ್ರಭುತ್ವದ ಪವಿತ್ರ ಸಂಕಲ್ಪ ಎಂಬುದು ಅನೇಕ ರಾಜ್ಯಶಾಸ್ತ್ರಜ್ಞರ ಅಭಿ ಪ್ರಾಯ. ಒಂದು ಯುಗದಲ್ಲಿದ್ದ ಭಾವನೆಗಳು ಮತ್ತೊಂದು ಯುಗದಲ್ಲಿ ಪರಿವರ್ತನೆ ಹೊಂದುವುದರಿಂದಲೇ ಪ್ರಜಾಪ್ರಭುತ್ವದ ಲಕ್ಷಣಗಳು ಇಂತಹುದು ಎಂದೇ ಗೊತ್ತಾಗಿ ನಿರ್ಧರಿಸಲು ಸಾಧ್ಯವಿಲ್ಲ.

# ಪ್ರಕರಣ ೨

## ಪ್ರಜಾಪ್ರಭುತ್ವ ಸರ್ಕಾರದ ಸ್ವರೂಪ

ವ್ಯಕ್ತಿಯು ಸರ್ಕಾರದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಅಧಿಕಾರವನ್ನು ಪಡೆದ ಹೊರತು ಸ್ವಾತಂತ್ರ್ಯ ಸಮತೆ, ಮತ್ತು ಸಹೋದರ ಭಾವನೆಗಳು ಸಿದ್ಧಿಯಾಗಲಾರವು. ಹೆರೋಡೋಟಸ್ (Herodotus) ಕಾಲದಿಂದಲೂ ಬಹುಸಂಖ್ಯಾತ ಪ್ರಜೆಗಳು ಸಹಕರಿಸಿ ರಚಿಸುವ ಸರ್ಕಾರವು ಪ್ರಜಾಪ್ರಭುತ್ವವೆಂದು ಪ್ರಸಿದ್ಧಿಯಾಗಿದೆ. ಬಹುಸಂಖ್ಯಾತರು ಬಡವರಾದುದರಿಂದ ಪ್ರಜಾಪ್ರಭುತ್ವವು ಬಡವರ ಸರ್ಕಾರ ಎಂದು ಗ್ರೀಕ್ ಜನರು ತಿಳಿದಿದ್ದರು. ಪದವೀಧರರನ್ನು ಚುನಾಯಿಸುವುದು, ರಾಷ್ಟ್ರವಿಧಿಯನ್ನು ಅತಿಕ್ರಮಿಸಿದವರನ್ನು ಶಿಕ್ಷಿಸಿ ವಿಧಿಯನ್ನು ನಿರ್ಧರಿಸುವುದು ಪೌರನ ಮುಖ್ಯಕೆಲಸವೆಂದೂ, ಆ ಕಾರ್ಯವನ್ನು ಸುಗಮವಾಗಿ ನಡೆಸಬೇಕಾದರೆ ವ್ಯವಸಾಯ ಮತ್ತು ವ್ಯಾಪಾರ ವೃತ್ತಿಗಳನ್ನು ದಾಸ್ಯದಲ್ಲಿರುವ ಗುಲಾಮರಿಗೆ ಒಪ್ಪಿಸಿ ಸದಾ ಕಾಲವೂ ರಾಷ್ಟ್ರಹಿತಸಾಧನ ಧ್ಯಾನದಲ್ಲಿ ಪೌರನು ಇರಬೇಕೆಂದೂ, ಪ್ಲೇಟೋ ಮತ್ತು ಅರಿಸ್ಟಾಟಲ್ ಎಂಬ ಗ್ರೀಕ್ ತತ್ವಜ್ಞರು ಬೋಧಿಸಿದ್ದಾರೆ. ಗ್ರೀಕ್ ಜನರಿಗೆ ಪ್ರಜಾಪ್ರಭುತ್ವ ಎಂದರೆ ರಾಷ್ಟ್ರಧರ್ಮ ಎಂದೂ, ವಿಧಿಯು ಶಾಶ್ವತವಾದುದೆಂದೂ, ಪ್ರಜಾವರ್ಗವು ಆಡಳಿತ ಮತ್ತು ಅಧಿಕಾರಿಗಳನ್ನು ನಿಯಮಿಸಬೇಕು ಎಂದೂ ಅಭಿಪ್ರಾಯ. ಶಾಸನರಚನೆಯ ಅಧಿಕಾರವು ಶಾಸನಸಭೆಗಾಗಲಿ, ಪ್ರಜೆಗಳಿಗಾಗಲಿ, ಅಧಿಕಾರಿಗಳಿಗಾಗಲಿ ಇರಲಿಲ್ಲ. ಸರ್ಕಾರದ ಕಾರ್ಯಗಳಲ್ಲಿ ಭಾಗವಹಿಸುವುದು ವ್ಯಕ್ತಿಯ ಆಜನ್ಮ ಹಕ್ಕೆಂದು ತಿಳಿದಿದ್ದರು. ಆ ಹಕ್ಕನ್ನು ಪಡೆಯುವುದಕ್ಕಾಗಿಯೇ ಪೆಟ್ರೀಷಿಯನ್ (ಶ್ರೀಮಂತವರ್ಗ) ಮತ್ತು ಪ್ಲೆಬಿಯನ್ (ಸಾಮಾನ್ಯವರ್ಗ) ಜನವರ್ಗಗಳು ರೋಮ್ ನಗರದಲ್ಲಿ ಹೋರಾಡಿದರು. ಪ್ರಜಾಪ್ರಭುತ್ವಭಾವನೆಗಳ ವಿಕಾಸಕ್ಕೆ ಯೋಗ್ಯವಾದ ಸಿದ್ಧತೆಗಳು ನಿರ್ಮಾಣವಾಗದೆ ಇದ್ದುದರಿಂದ ಆಲ್ಪಿಯನ್(Alpian)

ಮತ್ತು ಜಸ್ಟಿನಿಯನ್ ಇನ್ಸ್ಟಿಟ್ಯೂಟ್ (Institute) ಪ್ರತಿಪಾದಿಸುವಂತೆ ಪ್ರಜೆಗಳು ತಮ್ಮ ಪರಮಾಧಿಕಾರವನ್ನು ಸಮ್ರಾಟನಿಗೆ ಒಪ್ಪಿಸಿದರು. ರಾಜತ್ವ, ಕುಲೀನ ಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳ ಅಂಶಗಳನ್ನೊಳಗೊಂಡ ನವೀನ ಸರ್ಕಾರವು ಏರ್ಪಟ್ಟು ಪ್ರಜೆಗಳಿಗಿದ್ದ ಪೌರಾಧಿಕಾರವು ಕ್ಷೀಣವಾಯಿತು. ಸಿಸಿರೋ, ಸಿನೆಕಾ, ಗೈಮನ್, ಅಲ್ಪಿಯನ್ ಮುಂತಾದ ತತ್ವಜ್ಞಾನಿಗಳು ಸಮತೆಯು ಮಾನವನ ಸಹಜ ಗುಣವೆಂದೂ, ಪ್ರಜಾಸಮತೆಯನ್ನು ರಾಷ್ಟ್ರವು ಸಾಧಿಸಬೇಕೆಂದೂ ಪ್ರಚಾರ ಮಾಡಿದ್ದರು. ಆದರೂ ಸಮತೆಯ ಸಿದ್ಧಾಂತವು ದಾಸ್ಯವರ್ಗದವರಲ್ಲಿ ಅನುಕಂಪದ ರೂಪದಲ್ಲಿ ಪರಿಣಮಿಸಿತೇ ಹೊರತು ರಾಜಕೀಯದಲ್ಲಿ ಪ್ರವೇಶಿಸಲಿಲ್ಲ. ಕ್ರೈಸ್ತ ಮತಾವಲಂಬಿಗಳು ವ್ಯಕ್ತಿಯ ಆತ್ಮೀಯತೆ ಮತ್ತು ಘನತೆಗಳು ಎಲ್ಲ ಹಕ್ಕುಗಳಿಗಿಂತ ಶ್ರೇಷ್ಠವೆಂದೂ, ಆಧ್ಯಾತ್ಮಿಕ ವಿಚಾರಗಳಲ್ಲಿ ವ್ಯಕ್ತಿಯು ದೇವರಿಗೆ ಮಾತ್ರ ವಿಧೇಯನೆಂದೂ, ಅಂತರಂಗಕ್ಕೆ ಸೇರಿದ ಪರಮಾತ್ಮನ ಧ್ಯಾನದ ವಿಚಾರಗಳಲ್ಲಿ ನಿರ್ಬಂಧಗಳು ಅನೀತಿಯುತವೆಂದೂ ವಾದಿಸಿದರು. ವ್ಯಕ್ತಿಯು ಆಸ್ತಿಯನ್ನು ಗಳಿಸುವ ಹಾಗಿಲ್ಲ, ಆಸ್ತಿಯು ಸಮಾಜಕ್ಕೆ ಸೇರಿದ್ದು, ಸಾಮೂಹಿಕವಾಗಿ ಅನುಭವಿಸತಕ್ಕದ್ದು — ಎಂದು ಸೈಂಟ್ ಪಾಲ್ ಮತ್ತು ಅವನ ಅನುಯಾಯಿಗಳು ಬೋಧಿಸಿದರು. ಪ್ರಕೃತಿಯು ಕಲ್ಪಿಸುವ ನಿಯಮಗಳಲ್ಲಿ (Laws of Nature) ಸರ್ವರೂ ಸಮಾನರೆಂದೂ, ಆದರೆ ಅಂತರರಾಷ್ಟ್ರೀಯ ನಿಯಮಗಳಲ್ಲಿ ಅಸಮತೆಯು ಅನಿವಾರ್ಯವೆಂದೂ ಸ್ಟೋಯಿಕ್ (Stoic) ತತ್ವಜ್ಞಾನಿಗಳು ಪ್ರಚಾರ ಮಾಡಿದರು.

ನಗರ ರಾಜ್ಯಗಳೂ ಧಾರ್ಮಿಕ ಸಂಘಗಳೂ ಮಧ್ಯಮ ಯುಗದಲ್ಲಿ ಒಂದು ವಿಧವಾದ ಸರ್ವಾನುಮತದಿಂದ ಕೂಡಿದ ಮತ್ತು ಸರ್ವರೂ ಭಾಗವಹಿಸುವ ಪ್ರಜಾಪ್ರಭುತ್ವವನ್ನು ರಚಿಸಿದುವು. ಸರ್ಕಾರವು ಅನುಭವಿಸುವ ಅಧಿಕಾರವು ಪ್ರಜೆಗಳಿಂದ ಬಂದುದೆಂದೂ, ಅಧಿಕಾರ ಪ್ರಯೋಗದಲ್ಲಿ ರಾಷ್ಟ್ರವಿಧಿಗಳನ್ನು ಉಲ್ಲಂಘಿಸಿದರೆ ಪ್ರಜೆಗಳ ಆಗ್ರಹಕ್ಕೆ ಪಾತ್ರವಾಗು

## ಪ್ರಕರಣ ೨

### ಪ್ರಜಾಪ್ರಭುತ್ವ ಸರ್ಕಾರದ ಸ್ವರೂಪ

ವ್ಯಕ್ತಿಯು ಸರ್ಕಾರದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಅಧಿಕಾರವನ್ನು ಪಡೆದ ಹೊರತು ಸ್ವಾತಂತ್ರ್ಯ ಸಮತೆ, ಮತ್ತು ಸಹೋದರ ಭಾವನೆಗಳು ಸಿದ್ಧಿಯಾಗಲಾರವು. ಹೆರೋಡೋಟಸ್ (Herodotus) ಕಾಲದಿಂದಲೂ ಬಹುಸಂಖ್ಯಾತ ಪ್ರಜೆಗಳು ಸಹಕರಿಸಿ ರಚಿಸುವ ಸರ್ಕಾರವು ಪ್ರಜಾಪ್ರಭುತ್ವವೆಂದು ಪ್ರಸಿದ್ಧಿಯಾಗಿದೆ. ಬಹುಸಂಖ್ಯಾತರು ಬಡವರಾದುದರಿಂದ ಪ್ರಜಾಪ್ರಭುತ್ವವು ಬಡವರ ಸರ್ಕಾರ ಎಂದು ಗ್ರೀಕ್ ಜನರು ತಿಳಿದಿದ್ದರು. ಪದವೀಧರರನ್ನು ಚುನಾಯಿಸುವುದು, ರಾಷ್ಟ್ರವಿಧಿಯನ್ನು ಅತಿಕ್ರಮಿಸಿದವರನ್ನು ಶಿಕ್ಷಿಸಿ ವಿಧಿಯನ್ನು ನಿರ್ಧರಿಸುವುದು ಪೌರನ ಮುಖ್ಯಕೆಲಸವೆಂದೂ, ಆ ಕಾರ್ಯವನ್ನು ಸುಗಮವಾಗಿ ನಡೆಸಬೇಕಾದರೆ ವ್ಯವಸಾಯ ಮತ್ತು ವ್ಯಾಪಾರ ವೃತ್ತಿಗಳನ್ನು ದಾಸ್ಯದಲ್ಲಿರುವ ಗುಲಾಮರಿಗೆ ಒಪ್ಪಿಸಿ ಸದಾ ಕಾಲವೂ ರಾಷ್ಟ್ರಹಿತಸಾಧನ ಧ್ಯಾನದಲ್ಲಿ ಪೌರನು ಇರಬೇಕೆಂದೂ, ಪ್ಲೇಟೋ ಮತ್ತು ಅರಿಸ್ಟಾಟಲ್ ಎಂಬ ಗ್ರೀಕ್ ತತ್ವಜ್ಞರು ಬೋಧಿಸಿದ್ದಾರೆ. ಗ್ರೀಕ್ ಜನರಿಗೆ ಪ್ರಜಾಪ್ರಭುತ್ವ ಎಂದರೆ ರಾಷ್ಟ್ರಧರ್ಮ ಎಂದೂ, ವಿಧಿಯು ಶಾಶ್ವತವಾದುದೆಂದೂ, ಪ್ರಜಾವರ್ಗವು ಆಡಳಿತ ಮತ್ತು ಅಧಿಕಾರಿಗಳನ್ನು ನಿಯಮಿಸಬೇಕು ಎಂದೂ ಅಭಿಪ್ರಾಯ. ಶಾಸನರಚನೆಯ ಅಧಿಕಾರವು ಶಾಸನ ಸಭೆಗಾಗಲಿ, ಪ್ರಜೆಗಳಿಗಾಗಲಿ, ಅಧಿಕಾರಿಗಳಿಗಾಗಲಿ ಇರಲಿಲ್ಲ. ಸರ್ಕಾರದ ಕಾರ್ಯಗಳಲ್ಲಿ ಭಾಗವಹಿಸುವುದು ವ್ಯಕ್ತಿಯ ಆಜನ್ಮ ಹಕ್ಕೆಂದು ತಿಳಿದಿದ್ದರು. ಆ ಹಕ್ಕನ್ನು ಪಡೆಯುವುದಕ್ಕಾಗಿಯೇ ಪೆಟ್ರೀಷಿಯನ್ (ಶ್ರೀಮಂತವರ್ಗ) ಮತ್ತು ಪ್ಲೆಬಿಯನ್ (ಸಾಮಾನ್ಯವರ್ಗ) ಜನವರ್ಗಗಳು ರೋಮ್ ನಗರದಲ್ಲಿ ಹೋರಾಡಿದರು. ಪ್ರಜಾಪ್ರಭುತ್ವಭಾವನೆಗಳ ವಿಕಾಸಕ್ಕೆ ಯೋಗ್ಯವಾದ ಸಿದ್ಧತೆಗಳು ನಿರ್ಮಾಣವಾಗದೆ ಇದ್ದುದರಿಂದ ಆಲ್ಪಿಯನ್(Alpian)

ಮತ್ತು ಜಸ್ಟಿನಿಯನ್ ಇನ್ಸ್ಟಿಟ್ಯೂಟ್ (Institute) ಪ್ರತಿಪಾದಿಸುವಂತೆ ಪ್ರಜೆಗಳು ತಮ್ಮ ಪರಮಾಧಿಕಾರವನ್ನು ಸಮ್ರಾಟನಿಗೆ ಒಪ್ಪಿಸಿದರು. ರಾಜತ್ವ, ಕುಲೀನ ಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳ ಅಂಶಗಳನ್ನೊಳಗೊಂಡ ನವೀನ ಸರ್ಕಾರವು ಏರ್ಪಟ್ಟು ಪ್ರಜೆಗಳಿಗಿದ್ದ ಪೌರಾಧಿಕಾರವು ಕ್ಷೀಣವಾಯಿತು. ಸಿಸಿರೋ, ಸಿನೆಕಾ, ಗೈಮನ್, ಅಲ್ಪಿಯನ್ ಮುಂತಾದ ತತ್ವಜ್ಞಾನಿಗಳು ಸಮತೆಯು ಮಾನವನ ಸಹಜ ಗುಣವೆಂದೂ, ಪ್ರಜಾ ಸಮತೆಯನ್ನು ರಾಷ್ಟ್ರವು ಸಾಧಿಸಬೇಕೆಂದೂ ಪ್ರಚಾರ ಮಾಡಿದ್ದರು. ಆದರೂ ಸಮತೆಯ ಸಿದ್ಧಾಂತವು ದಾಸ್ಯವರ್ಗದವರಲ್ಲಿ ಅನುಕಂಪದ ರೂಪದಲ್ಲಿ ಪರಿಣಮಿಸಿತೇ ಹೊರತು ರಾಜಕೀಯದಲ್ಲಿ ಪ್ರವೇಶಿಸಲಿಲ್ಲ. ಕ್ರೈಸ್ತ ಮತಾವಲಂಬಿಗಳು ವ್ಯಕ್ತಿಯ ಆತ್ಮೀಯತೆ ಮತ್ತು ಘನತೆಗಳು ಎಲ್ಲ ಹಕ್ಕುಗಳಿಗಿಂತ ಶ್ರೇಷ್ಠವೆಂದೂ, ಆಧ್ಯಾತ್ಮಿಕ ವಿಚಾರಗಳಲ್ಲಿ ವ್ಯಕ್ತಿಯು ದೇವರಿಗೆ ಮಾತ್ರ ವಿಧೇಯನೆಂದೂ, ಅಂತರಂಗಕ್ಕೆ ಸೇರಿದ ಪರಮಾತ್ಮನ ಧ್ಯಾನದ ವಿಚಾರಗಳಲ್ಲಿ ನಿರ್ಬಂಧಗಳು ಅನೀತಿಯುತವೆಂದೂ ವಾದಿಸಿದರು. ವ್ಯಕ್ತಿಯು ಆಸ್ತಿಯನ್ನು ಗಳಿಸುವ ಹಾಗಿಲ್ಲ, ಆಸ್ತಿಯು ಸಮಾಜಕ್ಕೆ ಸೇರಿದ್ದು, ಸಾಮೂಹಿಕವಾಗಿ ಅನುಭವಿಸತಕ್ಕದ್ದು — ಎಂದು ಸೈಂಟ್ ಪಾಲ್ ಮತ್ತು ಅವನ ಅನುಯಾಯಿಗಳು ಬೋಧಿಸಿದರು. ಪ್ರಕೃತಿಯು ಕಲ್ಪಿಸುವ ನಿಯಮಗಳಲ್ಲಿ (Laws of Nature) ಸರ್ವರೂ ಸಮಾನರೆಂದೂ, ಆದರೆ ಅಂತರರಾಷ್ಟ್ರೀಯ ನಿಯಮಗಳಲ್ಲಿ ಅಸಮತೆಯು ಅನಿವಾರ್ಯವೆಂದೂ ಸ್ಟೋಯಿಕ್ (Stoic) ತತ್ವಜ್ಞಾನಿಗಳು ಪ್ರಚಾರ ಮಾಡಿದರು.

ನಗರ ರಾಜ್ಯಗಳೂ ಧಾರ್ಮಿಕ ಸಂಘಗಳೂ ಮಧ್ಯಮ ಯುಗದಲ್ಲಿ ಒಂದು ವಿಧವಾದ ಸರ್ವಾನುಮತದಿಂದ ಕೂಡಿದ ಮತ್ತು ಸರ್ವರೂ ಭಾಗವಹಿಸುವ ಪ್ರಜಾಪ್ರಭುತ್ವವನ್ನು ರಚಿಸಿದುವು. ಸರ್ಕಾರವು ಅನುಭವಿಸುವ ಅಧಿಕಾರವು ಪ್ರಜೆಗಳಿಂದ ಬಂದುದೆಂದೂ, ಅಧಿಕಾರ ಪ್ರಯೋಗದಲ್ಲಿ ರಾಷ್ಟ್ರವಿಧಿಗಳನ್ನು ಉಲ್ಲಂಘಿಸಿದರೆ ಪ್ರಜೆಗಳ ಆಗ್ರಹಕ್ಕೆ ಪಾತ್ರವಾಗು

ವುದೆಂದೂ, ನಿರಂಕುಶ ಪ್ರಭುತ್ವದ ದಬ್ಬಾಳಿಕೆಯನ್ನು ಪ್ರತಿಭಟಿಸುವ ಹಕ್ಕು ವ್ಯಕ್ತಿಗೆ ಸೇರಿದ್ದೆಂದೂ, ರಾಜ್ಯಾಂಗಗಳ ವರ್ತನೆಯಿಂದ ಉಂಟಾಗುವ ಕುಂದುಕೊರತೆಗಳಿಗೆ ತಕ್ಕ ಪರಿಹಾರವನ್ನು ಪಡೆಯಬಹುದೆಂದೂ, ಮಾರ್ಸಾಗ್ಲಿಯೊ, ವಿಲಿಯಂ ಮತ್ತು ಮೇರಿಗೋಲ್ಡ್ ಮುಂತಾದ ರಾಜನೀತಿಜ್ಞರು ಪ್ರಚಾರ ಮಾಡಿದರು. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಸ್ವಾತಂತ್ರ್ಯ, ಸರ್ಕಾರದ ಆಡಳಿತದಲ್ಲಿ ಅಧಿಕಾರ ಸ್ಥಾಪನೆ, ಆರ್ಥಿಕ, ಸಾಮಾಜಿಕ ಮತ್ತು ವ್ಯವಹಾರ ಸಂಸ್ಥೆಗಳಿಗೆ ರಾಷ್ಟ್ರ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ— ಇವೇ ಮಧ್ಯಮ ಯುಗದಲ್ಲಿ ಪ್ರಜೆಗಳು ಗಳಿಸಿದ ಮುಖ್ಯ ಹಕ್ಕುಗಳು. ಸರ್ಕಾರವು ತನ್ನ ಕಾರ್ಯಕಲಾಪಗಳಲ್ಲಿ ಪ್ರಜೆಗಳು ಭಾಗವಹಿಸುವ ಅಧಿಕಾರವನ್ನು ಪ್ರಜೆಗಳು ಬಯಸದೆ ಮತ್ತು ನಿರ್ಬಂಧಿಸದೆ ಸ್ವಯಂ ಪ್ರೇರಣೆಯಿಂದ ದಯಪಾಲಿಸುತ್ತಿರಲಿಲ್ಲ. ಸರ್ಕಾರದಲ್ಲಿ ಪ್ರಜೆಗಳು ಭಾಗವಹಿಸುವ ಜವಾಬ್ದಾರಿಯನ್ನು ಒತ್ತಿ ಒತ್ತಿ ಕೇಳಲಾರಂಭಿಸಿದುದು ಪಾಶ್ಚಾತ್ಯ ಸಂಸ್ಕೃತಿಯ ಪ್ರಗತಿ ಪ್ರಣಾಲಿಯಲ್ಲಿ ಒಂದು ವಿಶೇಷ ಸಂಗತಿ. ಮುದ್ರಣಾಲಯಗಳು ಮಾಡಿದ ವಿದ್ಯಾಪ್ರಚಾರ, ವ್ಯವಹಾರ ಪ್ರಪಂಚದಲ್ಲಿ ಚಳುವಳಿಗಳು, ವ್ಯಕ್ತಿಗೆ ಆತ್ಮಜ್ಞಾನವನ್ನು ಕೊಟ್ಟು ಅನಿಯಾಮಕ ಪ್ರಭುತ್ವವನ್ನು ಪ್ರತಿಭಟಿಸಲು ಅವಕಾಶವನ್ನು ಕಲ್ಪಿಸಿಕೊಟ್ಟುವು. ಧಾರ್ಮಿಕ ಕ್ರಾಂತಿಯ ಪರಿಣಾಮವಾಗಿ ರಾಷ್ಟ್ರದಲ್ಲಿ ಧರ್ಮಸಂಸ್ಥೆಗಳಾಗಲಿ ರಾಜನಾಗಲಿ ಪರಮಾಧಿಕಾರವನ್ನು ಪಡೆದಿಲ್ಲವೆಂದೂ, ಸರ್ಕಾರವು ಅಧಿಕಾರ ಸ್ವಾಮ್ಯವನ್ನು ಮಾತ್ರ ಪಡೆದಿದೆಯೆಂದೂ, ತನ್ನ ಕರ್ತವ್ಯವನ್ನು ಅತಿಕ್ರಮಿಸಿದರೆ ಪ್ರಜೆಗಳ ಆಗ್ರಹಕ್ಕೆ ಪಾತ್ರವಾಗಿ ರದ್ದಾಗಬಹುದೆಂದೂ ಪ್ರಜೆಗಳಿಗೆ ಮನದಟ್ಟಾಯಿತು.

ಹದಿನೇಳನೆಯ ಶತಮಾನದಲ್ಲಿ ಆತ್ಮವಿಚಾರಗಳಲ್ಲಿ ಪೂರ್ಣ ಸ್ವಾತಂತ್ರ್ಯಕ್ಕಾಗಿ ಪ್ಯೂರಿಟನ್ ಚಳುವಳಿ ನಡೆಯಿತು. ಪ್ರಜೆಗಳನ್ನು ಮತ್ತು ಪ್ರಜಾವರ್ಗಗಳನ್ನು ನಿಯಮಕ್ಕೆ ಒಳಪಡಿಸಲು ಪರಮಾಧಿಕಾರವನ್ನು ಪಡೆದ ಪ್ರಭುತ್ವವು ಅತ್ಯಾವಶ್ಯಕವೆಂದು ಪ್ರಚಾರವಾಯಿತು.

ಹತ್ತಾರು ಸಂಸ್ಥೆಗಳು ಪ್ರಜಾಭಿಮತಕ್ಕಾಗಿ ಸ್ಪರ್ಧಿಸುವುದು ಅರಾಜಕವೆಂದೂ ಸಮಸ್ತ ಪ್ರಜೆಗಳ, ಸಂಸ್ಥೆಗಳ ಅಧಿಕಾರ ಮತ್ತು ಹಕ್ಕುಗಳಿಗೆ ಮೂಲಭೂತವಾದ ಪರಮಾಧಿಕಾರವನ್ನು ಪಡೆದ ಮತ್ತು ಯಾವ ಅನೀತಿಯುತ ನಿಯಮಕ್ಕೂ ಒಳಪಡದ ಒಂದು ನಿರ್ದಿಷ್ಟವಾದ ರಾಜ್ಯಾಂಗದ ಸ್ಥಾಪನೆ ಅತ್ಯಗತ್ಯವೆಂದು ಪ್ರಜೆಗಳು ತಿಳಿದರು. ಅನಾದಿಯಿಂದ ಬಂದ ಮತ್ತು ನಿರಂತರವೂ ಪಾರತಂತ್ರ್ಯವಿಲ್ಲದ ವಿಧಿಗಳನ್ನು ಆಚರಣೆಗೆ ತರುವ ಅಧಿಕಾರಮಾತ್ರ ಸರ್ಕಾರಕ್ಕೆ ಸೇರಿದೆ ಎಂಬ ಮಧ್ಯಮಯುಗದ ಕಲ್ಪನೆಗಳನ್ನು ಓರೆಗಿಟ್ಟು ಪರಮಾಧಿಕಾರವನ್ನು ಪಡೆದ ರಾಜ್ಯಾಂಗವೇ ರಾಷ್ಟ್ರದ ಶಾಸನ ಮತ್ತು ನಿಯಮಗಳನ್ನು ರಚಿಸುವುದು, ಸಮಸ್ತಪ್ರಜೆಗಳೂ ನಿಯಮಗಳನ್ನು ಅನುಸರಿಸುವಂತೆ ನಿರ್ಬಂಧಿಸುವುದು—ಎಂಬ ಗಹನ ತತ್ವವನ್ನು ಅವಲಂಬಿಸಿದರು.

ಈ ವಿಧವಾದ ಪರಮಾಧಿಕಾರವುಳ್ಳ ರಾಷ್ಟ್ರವು ಧಾರ್ಮಿಕಸಂಸ್ಥೆಗಳಿಂದ ಪ್ರತ್ಯೇಕವಾದುವು. ಧರ್ಮಸಂಸ್ಥೆಗಳು ಪರಮಾಧಿಕಾರವುಳ್ಳ ಸರ್ಕಾರದ ಒಂದು ಸಾಧನ. ಸರ್ಕಾರವು ಮತ ಮತ್ತು ಧರ್ಮಬದ್ಧವಾಗಿರಬೇಕಿಲ್ಲ ಎಂದು ಹಾಬ್ಸ್ ರಾಜನೀತಿಜ್ಞನು ಹೇಳಿದ್ದಾನೆ. ಪರಮಾಧಿಕಾರವುಳ್ಳ ರಾಜ್ಯಾಂಗಕ್ಕೆ ಕಟ್ಟು ಎಲ್ಲೆಗಳಿಲ್ಲ. ನೀತಿ ಅನೀತಿಯುತವಾದರೂ ಹಿತಾಹಿತದಿಂದ ಕೂಡಿದ್ದರೂ ಪರಮಾಧಿಕಾರವುಳ್ಳ ರಾಜ್ಯಾಂಗಕ್ಕೆ (Sovereign) ವ್ಯಕ್ತಿಯು ಪೂರ್ಣ ವಿಧೇಯನಾಗಿರಬೇಕು—ಎಂಬುದು ಹಾಬ್ಸಿನ ಸಿದ್ಧಾಂತ. ಪ್ರಕೃತಿನಿಯಮದಲ್ಲಿ ಮನುಷ್ಯರು ಸಮಾನಭಾವನೆಯುಳ್ಳವರು ಮತ್ತು ಸ್ವಾತಂತ್ರ್ಯವುಳ್ಳವರು; ಮತ ಮತ್ತು ಧಾರ್ಮಿಕ ವಿಚಾರಗಳಲ್ಲಿ ಸಮಾಜದಲ್ಲಿ ಪರಮಾಧಿಕಾರವನ್ನು ಪಡೆದಿರತಕ್ಕವರು; ತಮ್ಮ ಅಭಿಮತಕ್ಕೆ ಅನುಗುಣವಾದ ಸರ್ಕಾರವನ್ನು ರಚಿಸತಕ್ಕವರು—ಎಂದು ಇಂಗ್ಲೆಂಡಿನ ರಾಜನೀತಿಜ್ಞನಾದ ಲಾಕ್ ಹೇಳಿದ್ದಾನೆ. ಹಾಬ್ಸ್ ತಿಳಿಸಿದಂತೆ ರಾಷ್ಟ್ರದಲ್ಲಿ ಪರಮಾಧಿಕಾರವುಳ್ಳ ಸಂಸ್ಥೆಯು ಅತ್ಯಾವಶ್ಯಕವೆಂಬುದು ಫ್ರಾನ್ಸ್‌ದೇಶದ ರಾಜನೀತಿಜ್ಞನಾದ ರೂಸೋವಿನ

ಸಿದ್ಧಾಂತ. ಪ್ರತಿಯೊಬ್ಬ ವ್ಯಕ್ತಿಯೂ ಇತರರೊಡನೆ ಸಹಕರಿಸಿ ಸಾರ್ವಜನಿಕ ಹಿತವನ್ನು ಮುಂದುವರಿಸಿ, ಆ ರಾಷ್ಟ್ರಹಿತದಲ್ಲಿ ತನ್ನ ದೈಹಿಕ ಮತ್ತು ಮಾನಸಿಕ ಹಿತವನ್ನು ಕಂಡುಕೊಂಡರೆ ಸ್ವಾತಂತ್ರ್ಯ ಜೀವನವಲ್ಲದೆ ನೀತಿಯುತ ಜೀವನವೂ ಆಗುವುದೆಂಬುದು ರೂಸೋವಿನ ಅಭಿಮತ. ವ್ಯಕ್ತಿಯ ಜೀವನದಲ್ಲಿಯೂ ಸಾಮೂಹಿಕ ಜೀವನದಲ್ಲಿಯೂ ಅಂತರ್ಗತವಾಗಿ, ಸಾಮೂಹಿಕ ಪ್ರಶ್ನೆಗಳೆದ್ದಾಗ ಹುಟ್ಟುವ ಸರ್ವಜನ ಹಿತಸಾಧಕವಾದ ಆಕಾಂಕ್ಷೆಯನ್ನು **ಸಾರ್ವತ್ರಿಕ ಮನೋಗತ** ( General will ) ಎಂದು ರೂಸೋ ಕರೆದಿದ್ದಾನೆ. ವ್ಯಕ್ತಿಯು ಸ್ವಾತಂತ್ರ್ಯವನ್ನು ಬಯಸುವುದೆಂದರೆ ಸಮಾಜನಿಯಮಗಳ ವಿಧಿಸುವಿಕೆಯನ್ನೂ ಇತರರ ಸ್ವಾತಂತ್ರ್ಯ ಮತ್ತು ಹಿತವನ್ನೂ ಬಯಸುವನೆಂದು ಅರ್ಥವಾಗುವುದು. ರಾಷ್ಟ್ರಹಿತ ಸಾಧಕವಾದ ಮತ್ತು ಪವಿತ್ರವಾದ ಆಕಾಂಕ್ಷೆ ಮತ್ತು ಉದ್ಯಮವು ಪರಮಾಧಿಕಾರದ ಸ್ವರೂಪವನ್ನು ತಾಳುವುದು. ರಾಜಕೀಯದಲ್ಲಿ ಬಹುಸಂಖ್ಯಾತರ ಅಭಿಮತವೇ ಈ ವಿಧವಾದ ಪರಮಾಧಿಕಾರವನ್ನು ಪಡೆದ ಸಾರ್ವತ್ರಿಕಮನೋಗತ ಆಗಬಹುದೆಂದು ರೂಸೋ ಅಭಿಪ್ರಾಯಪಟ್ಟಿದ್ದಾನೆ.

ಪ್ರಜಾಪ್ರಭುತ್ವಚರಿತ್ರೆಯ ಹಿನ್ನೆಲೆಯನ್ನು ನೋಡಿದರೆ ಎರಡು ವಿಷಯಗಳು ಎದ್ದು ನಿಲ್ಲುವುವು: ಮೊದಲನೆಯದಾಗಿ, ರಾಷ್ಟ್ರದಲ್ಲಿ ಪರಮಾಧಿಕಾರವನ್ನು ಪಡೆದು, ರಾಷ್ಟ್ರದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಪ್ರಜೆಗಳ ಉದ್ಯಮ; ರಾಷ್ಟ್ರಶಕ್ತಿಯನ್ನು ಯಾವುದೊಂದು ನಿರ್ದಿಷ್ಟವಾದ ಅಂಗದಲ್ಲಿ ಶೇಖರಿಸದೆ ಪರಮಾಧಿಕಾರವನ್ನು ವಿನಿಯೋಗಮಾಡಲು ಯೋಗ್ಯವಾದ ಸಾಧನವನ್ನು ಸಮಸ್ತ ಪ್ರಜಾವರ್ಗದಲ್ಲಿ ನೆಲೆಗೊಳಿಸುವುದು. ಪ್ರಜೆಗಳು ಸರ್ಕಾರದಲ್ಲಿ ಭಾಗವಹಿಸಲು ಸಾಧ್ಯವಾಗಲು ಮೊದಲನೆಯದಾಗಿ ಮತ ಮತ್ತು ಧಾರ್ಮಿಕ ಸಂಸ್ಥೆಗಳ ಆಕ್ರಮಣವು ರಾಷ್ಟ್ರಕ್ಕೆ ತಪ್ಪಬೇಕು. —ಎರಡನೆಯದಾಗಿ, ವಿಜ್ಞಾನ ಪ್ರಪಂಚದಲ್ಲಿ ಬೆಳಕಿಗೆ ಬಂದ ನೂತನ ಪರಿಶೋಧನೆಗಳೂ ಕಲ್ಪನೆಗಳೂ ಜನರ ಮೂಢನಂಬಿಕೆಗಳನ್ನು ನಾಶಮಾಡಿ

ಧಾರ್ಮಿಕಕ್ರಾಂತಿಗೆ ಎಡೆಮಾಡಿದುವು; ಮತಗಳು ರಾಷ್ಟ್ರಕಲ್ಪನೆಯಿಂದ ಬೇರೆ ಎಂಬ ಭಾವನೆ ಆಯಿತು. ಜಮೀನುದಾರಿ ಪದ್ಧತಿಯ ಆಧಾರದ ಮೇಲೆ ನಿರ್ಧರಿಸಲಾಗಿದ್ದ ಸಮಾಜನಿಯಮಗಳು ಅಳಿದು ಹೋಗಿ ವ್ಯಕ್ತಿಗೂ ಸರಕಾರಕ್ಕೂ ಪರಸ್ಪರ ಸೌಹಾರ್ದದಿಂದ ಕೂಡಿದ ನೂತನ ವಾದ ನಿಕಟಸಂಬಂಧವನ್ನು ಏರ್ಪಡಿಸುವ ಚಳುವಳಿಗಳು ನಡೆದುವು. ಪ್ರಜೆಗಳನ್ನು ರಕ್ಷಿಸುವಭಾರ ಸರ್ಕಾರದ್ದು; ಪ್ರಜಾರಕ್ಷಣೆಯ ಜವಾಬ್ದಾರಿ ಯಲ್ಲಿ ಅನಾದರಣೆಯಾದರೆ ವ್ಯಕ್ತಿಯು ಸರ್ಕಾರವನ್ನು ಪ್ರತಿಭಟಿಸ ಬಹುದು; ವ್ಯಕ್ತಿಯು ಸ್ವೇಚ್ಛೆಯಾಗಿ ವರ್ತಿಸಿದರೆ ನೀತಿಯುತ ಸರ್ಕಾರವು ವ್ಯಕ್ತಿಯನ್ನು ನಿರ್ಬಂಧಿಸಬಹುದು — ಈ ಗಹನವಾದ ತತ್ತ್ವವು ಹಾಬ್ಸ್, ಲಾಕ್, ರೂಸೋ ಅವರು ಪ್ರತಿಪಾದಿಸಿರುವ ಸಮಾಜನಿಯಮ ಸಿದ್ಧಾಂತದಲ್ಲಿ ಅಡಗಿದೆ. —ಮೂರನೆಯದಾಗಿ ವಿದ್ಯಾಪ್ರಚಾರದಿಂದ ಪ್ರಜೆಗಳ ಅಜ್ಞಾನ, ಸಂಕುಚಿತ ಭಾವಗಳು ಹೋಗಿ ತಮ್ಮ ವೈಯಕ್ತಿಕ ವಿಕಾಸಕ್ಕೆ ಆವಶ್ಯಕವಾದ ಸಾಧನೆಗಳಾವುವೆಂದು ತಿಳಿದು ಬರುವುದು; ಆ ಸಾಧನೆ ಗಳನ್ನು ಪಡೆಯುವರೀತಿ, ಅವುಗಳಿಂದ ನವಚೇತನವುಂಟಾದಾಗ ಸರ್ಕಾರದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಆಕಾಂಕ್ಷೆ, ಮುನವರಿಕೆ ಯಾಗುವುವು.

ಪ್ರಜಾಪ್ರಭುತ್ವ ತತ್ತ್ವವನ್ನು ಕಾರ್ಯಕಾರಿಯಾಗಿ ಮಾಡಲು ಅತ್ಯಗತ್ಯವಾದ ಸಾಧನೆ ಮತ್ತು ರಾಜಕೀಯ ಸಂಸ್ಥೆಗಳನ್ನು ಏರ್ಪಡಿಸುವ ಚಳುವಳಿಯು ಹತ್ತೊಂಬತ್ತನೆಯ ಶತಮಾನದಲ್ಲಿ ಜರುಗಿತು. ಲೆವಲರ್ಸ್ (Levelers) ಪಂಗಡದವರು ಸಮಾಜ ನಿಯಮಗಳು, ಅವುಗಳ ರೀತಿ, ಪುರುಷರಿಗೆ ಅಭಿಮತ ಸೂಚಿಸುವ ಅಧಿಕಾರ, ಪ್ರತಿನಿಧಿ ಪ್ರಭುತ್ವ— ಇವು ರಾಷ್ಟ್ರದ ವಿಧಿ ಮತ್ತು ವ್ಯಕ್ತಿತ್ವವನ್ನು ಗೌರವಿಸುವ ಸಲುವಾಗಿ ರಾಷ್ಟ್ರದಲ್ಲಿ ರಚನೆಯಾಗಬೇಕೆಂದು ಹಿಂದೆಯೇ ಬೋಧಿಸಿದ್ದರು. ಪ್ರಜಾಪ್ರತಿನಿಧಿ ಸರ್ಕಾರದ ಸ್ಥಾಪನೆ, ಪಂಗಡಗಳ ಅಧಿಕಾರದ ವ್ಯಾಪನೆ, ಪ್ರತ್ಯಕ್ಷ ಚುನಾ ವಣೆ, ಗೋಪ್ಯವಾಗಿ ಅಭಿಮತವನ್ನು ಸೂಚಿಸುವುದು, ಅನುಪಾತಿಕ

ಪ್ರಾತಿನಿಧ್ಯ ಪದ್ಧತಿ (Proportional Representation), ಸ್ತ್ರೀಯರ ಅಭಿಮತಾಧಿಕಾರ— ಇವುಗಳ ಪರವಾಗಿ ರಾಷ್ಟ್ರದಲ್ಲಿ ಉದ್ಯಮಗಳು ನಡೆದುವು. ಪ್ರಜಾಪಕ್ಷಗಳ ರಚನೆ ಪ್ರಜಾಪ್ರಭುತ್ವ ಸರ್ಕಾರಕ್ಕೆ ಮೂಲಾಧಾರವಾದುದರಿಂದ ಪ್ರಜೆಗಳನ್ನು ಪಕ್ಷಗಳಾಗಿ ವಿಂಗಡಿಸುವ ಪ್ರಯತ್ನ ಒಂದು ಕಡೆ; ರಾಷ್ಟ್ರವನ್ನು ಪಂಗಡಗಳಿಗೆ ಅನುಸಾರವಾಗಿ ಕ್ಷೇತ್ರಗಳಾಗಿ ಸರಿಯಾಗಿ ವಿಂಗಡಿಸುವುದು, ಉಮೇದುವಾರರನ್ನು ಚುನಾಯಿಸುವ ಕ್ರಮ, ಉಮೇದುವಾರರ ಕರ್ತವ್ಯಗಳು— ಈ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನಗಳು ಮತ್ತೊಂದು ಕಡೆ. ಶಾಸನವನ್ನು ಉಪಕ್ರಮಿಸುವ ಅಧಿಕಾರ, ವಿಮರ್ಶಿಸುವ ಅಧಿಕಾರ, ಅಧಿಕಾರಿಗಳನ್ನು ಮತ್ತು ನ್ಯಾಯಾಧೀಶರನ್ನು ನಿಯಮಿಸುವ ಅಧಿಕಾರ— ಇವುಗಳ ಮೂಲಕ ಅನೇಕ ರಾಷ್ಟ್ರಗಳಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವವನ್ನು ರಚಿಸುವ ಚಳುವಳಿಗಳು ಇತ್ತೀಚೆಗೆ ನಡೆದಿವೆ. ಧಾರ್ಮಿಕ ಮತ್ತು ಪೌರ ಸ್ವಾತಂತ್ರ್ಯ, ಸಮತಾಭಾವನೆ, ಪಂಗಡಗಳಲ್ಲಿರುವ ತಾರತಮ್ಯನಾಶ,— ಇವು ಪ್ರಜಾ ಪ್ರಭುತ್ವದ ಮೂಲಾಧಾರ ತತ್ವಗಳು; ಆದರೂ ಆರ್ಥಿಕ ಸ್ವಾತಂತ್ರ್ಯ, ಬಹು ಸಂಖ್ಯಾತ ಮತ್ತು ಕಾರ್ಮಿಕ ವರ್ಗದವರ ಆರ್ಥಿಕ ಸ್ಥಿತಿಗಳನ್ನು ರೂಪುಗೊಳಿಸಿದ ಹೊರತು ಪ್ರಜಾ ಪ್ರಭುತ್ವವು ಪೂರ್ಣ ವಿಕಾಸ ಹೊಂದಲಾರದು ಮತ್ತು ಸಿದ್ಧಿಯಾಗಲಾರದೆಂಬ ತಿಳಿವಳಿಕೆಯುಂಟಾಗಿದೆ. ಸಮತಾವಾದವನ್ನು ಒಪ್ಪಿರುವ ರಷ್ಯಾ ಮತ್ತು ಇತರ ರಾಷ್ಟ್ರಗಳಲ್ಲಿ ಪೌರನಿಗೆ ರಾಜಕೀಯದಲ್ಲಿ ಏರ್ಪಟ್ಟಿರುವ ಸಮತೆಯಂತೆ ಆರ್ಥಿಕ ಜೀವನದಲ್ಲಿಯೂ ಸಮತೆಯನ್ನು ಏರ್ಪಡಿಸುವ ಮಹೋದ್ಯಮ ನಡೆದಿದೆ. ಈ ಉದ್ಯಮದಿಂದ ಪ್ರಜಾ ಪ್ರಭುತ್ವ ತತ್ವಕ್ಕೆ ಸ್ಫೂರ್ತಿ ಬಂದಿದೆ. ಪ್ರಜಾ ಪ್ರಭುತ್ವದ ಈ ನೂತನ ತತ್ವಗಳು ಸಮಾಜದಲ್ಲಿನ ಪಂಗಡ, ಸಂಘ, ಸಂಸ್ಥೆಗಳಿಗೆ ಪ್ರಾತಿನಿಧ್ಯವನ್ನು, ಆನುಪಾತಿಕ ಪ್ರಾತಿನಿಧ್ಯ ರೀತಿಯಲ್ಲಿ ನಿರೀಕ್ಷಿಸುತ್ತದೆ. ವ್ಯಕ್ತಿಗಿಂತ ಸಂಘವಿಕಾಸವೇ ಪ್ರಜಾಪ್ರಭುತ್ವದ ಉದಾತ್ತ ಧ್ಯೇಯ; ಸಂಘದ ಪ್ರಗತಿಯಿಂದ ವ್ಯಕ್ತಿಯ ವಿಕಾಸವು ತಾನಾಗಿ ಆಗುವುದು. ನೂತನ ಪ್ರಜಾಪ್ರಭುತ್ವವನ್ನು

ರಚಿಸಲು ರಾಷ್ಟ್ರಭಾವನೆ ಅಳಿದು, ರಾಷ್ಟ್ರವು ಅಂತರ ರಾಷ್ಟ್ರೀಯ ನಿಯಮಕ್ಕೆ ಒಳಗಾದ ಒಂದು ಅಂಗವೆಂಬ ತಿಳಿವಳಿಕೆಯುಂಟಾಗಬೇಕು; ಮತ್ತು ಪ್ರಾಂತೀಯ ಪ್ರಭುತ್ವ, ಪ್ರಜಾಪ್ರಭುತ್ವ ಮುಂತಾದುವು ಅಸಮರ್ಪಕ ವೆಂದು ಮನದಟ್ಟಾಗಬೇಕು. ಕೇವಲ ರಾಜಕೀಯ ಪಂಗಡಗಳ ಆಧಾರದ ಮೇಲೆ ಹುಟ್ಟಿದ ಚುನಾವಣಾಕ್ಷೇತ್ರಗಳಲ್ಲದೆ ವ್ಯಾವಹಾರಿಕ ಕ್ಷೇತ್ರಗಳೂ ಹೆಚ್ಚು ಹೆಚ್ಚಾಗಿ ಏರ್ಪಡಬೇಕು. ವ್ಯವಹಾರ ಮೂಲವಾದ ಸಂಘ ಅಥವಾ ಸಂಸ್ಥೆಗಳಲ್ಲಿ ಸಂಯುಕ್ತ ರಾಷ್ಟ್ರಭಾವನೆಯುಂಟಾಗಿ, ಅವು ಒಂದೊಂದೂ ಧನ, ಉದ್ಯೋಗ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಕೇಂದ್ರ ವಾಗಿ, ಸ್ವಾವಲಂಬನೆಯನ್ನು ಹೊಂದಿ, ಸಂಯುಕ್ತ ರಾಷ್ಟ್ರ ಪ್ರಗತಿಯಲ್ಲಿ ನಿರ್ದಿಷ್ಟವಾದ ತಮ್ಮ ಪ್ರಗತಿಯನ್ನು ಸಾಧಿಸಬೇಕು. ಕೇಂದ್ರ ಸರ್ಕಾರವು ಸಂಸ್ಥೆಗಳ ಸಹಕಾರ ಸಹಯೋಗದಿಂದ ವರ್ತಿಸಬೇಕೇ ಹೊರತು ರಾಜ್ಯಾಂಗ ಗಳನ್ನು ನಿಯಮಿಸುವ ಪೂರ್ಣ ಅಧಿಕಾರವನ್ನು ಪಡೆಯಬಾರದು. ಈ ಬಗೆಯ ಸಾಂಘಿಕ ಪ್ರಭುತ್ವವು ರಚನೆಯಾದರೆ ಪ್ರಜಾಪ್ರಭುತ್ವವು ಸಹಕಾರ ಸಂಘವಾಗಿ ವಿಕಾಸಗೊಳ್ಳುವುದು.

## ರಾಷ್ಟ್ರೀಯ ಭಾವನೆ ಮತ್ತು ರಾಷ್ಟ್ರದ ಪರಮಾಧಿಕಾರ

ಪ್ರಜಾಪ್ರಭುತ್ವಕ್ಕೆ ರಾಷ್ಟ್ರೀಯ ಭಾವನೆ ಮತ್ತು ಪರಮಾಧಿಕಾರ ಇವೆರಡೂ ಉಪಾಧಿಗಳು. ಹತ್ತೊಂಬತ್ತನೆಯ ಶತಮಾನದಲ್ಲಿ ಎರಡು ಪ್ರಭಾವಯುತವಾದ ತತ್ವಗಳ ಬೆಳವಣಿಗೆಯನ್ನು ಕಾಣಬಹುದು. ಪ್ರಗತಿ ಪರ ಭಾವನೆಗಳ ಮತ್ತು ಸರ್ಕಾರವನ್ನು ನಿಯಮಿಸುವ, ಸಾಧನೆ ಮತ್ತು ರಚನೆ— ಇವುಗಳನ್ನು ಒಳಗೊಂಡ ಸಿದ್ಧಾಂತ ಮತ್ತು ರಾಷ್ಟ್ರೀಯ ಭಾವನೆ ಗಳೂ, ಅವುಗಳ ಪ್ರಯೋಗಮಾರ್ಗಗಳೂ, (Liberalism and Nationalism.) ವ್ಯಕ್ತಿವಾದ ಬೆಳೆದು ವ್ಯಕ್ತಿಯ ವಿಕಾಸಕ್ಕೆ ಅಗತ್ಯ ವಾದ ಉಪಕರಣಗಳನ್ನುರಚಿಸಲು ಚಳುವಳಿಗಳಾದುವು. ಪರಮಾಧಿಕಾರ ಪಡೆದಿರುವ ರಾಷ್ಟ್ರವು ಸರ್ವತಂತ್ರಸ್ವತಂತ್ರವೆಂದೂ, ಅಂತರರಾಷ್ಟ್ರೀಯ ಸಮಾಜಗಳ ನಿರ್ಧಾರದಲ್ಲಿ ಪೂರ್ಣಾಧಿಕಾರ ಪಡೆದಿರುವುದೆಂದೂ ಸಿದ್ಧಾಂತ

ವಾಯಿತು. ವಾಣಿಜ್ಯದ ಬೆಳೆವಣಿಗೆಯಿಂದಲೂ, ವಸಾಹತಿಗಳ ರಚನೆಯಿಂದಲೂ, ಸಾಮ್ರಾಜ್ಯಭಾವನೆಗಳು ಮೂಡಿದುವು. ವ್ಯಕ್ತಿಯು ನೈಸರ್ಗಿಕ ಹಕ್ಕುಗಳನ್ನು ಪಡೆದಿರುವನೆಂಬ ತತ್ವವೂ, ರಾಷ್ಟ್ರವು ಒಳ ಆಡಳಿತ ಮತ್ತು ವಿದೇಶಾಂಗ ನೀತಿಯಲ್ಲಿ ಪರಮಾಧಿಕಾರ ಪಡೆದಿದೆಯೆಂಬ ತತ್ವವೂ, ರಾಷ್ಟ್ರೀಯಭಾವನೆಯು ಹುಟ್ಟುವುದಕ್ಕೆ ಮೂಲಭೂತವಾದುವು. ರಾಷ್ಟ್ರವು ಇತರ ರಾಷ್ಟ್ರಗಳಿಂದ ಪ್ರತ್ಯೇಕವಾದುದು. ಭಾಷೆ, ಮತ, ಜಾತಿಯಲ್ಲಿ ಒಂದಾಗಿರುವ ಸಮಾಜ ಮತ್ತು ರಾಜಕೀಯ ಘಟನೆಗಳಿಗೆ ಸಿಕ್ಕಿ ಅನುಭವಿಸುವ ಪ್ರಜೆಗಳ ಸಂಘಟನೆ ಅತ್ಯಾವಶ್ಯಕವೆಂಬ ಭಾವನೆಯ ಘೋಷಣೆಯನ್ನು ಹದಿನಾರನೆಯ ಶತಮಾನದಿಂದಲೇ ಕಾಣಬಹುದು: ೧೭೭೨ರಲ್ಲಿ ಪೋಲೆಂಡನ್ನು ವಿಭಜಿಸುವ ಪ್ರಶ್ನೆಯಲ್ಲಿ ಈ ಭಾವನೆ ರಾಜಕೀಯ ಸಿದ್ಧಾಂತವಾಯಿತು. ಅಮೆರಿಕದ ಸಂಯುಕ್ತ ರಾಷ್ಟ್ರಗಳ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಪೆಟ್ರಿಕ್ ಹೆನ್ರಿ ಮತ್ತು ಥಾಮಸ್ ಪೇನ್ ಮುಂತಾದ ರಾಜ ನೀತಿಜ್ಞರು ಈ ಭಾವನೆಯಲ್ಲಿ ಅಡಗಿರುವ ರಾಜಕೀಯಾಂಶಗಳನ್ನು ಪ್ರತಿಪಾದಿಸಿದರು. ಪರಮಾಧಿಕಾರಸರ್ಕಾರ ರಹಿತವಾದ ಜನಾಂಗದ ಜೀವನ ಶೋಚನೀಯವಾದುದೆಂದು ಜಫರ್ಸನ್ ಸಂಯುಕ್ತರಾಷ್ಟ್ರಗಳ ಘೋಷಣೆಯಲ್ಲಿಯೂ, ಹ್ಯಾಮಿಲ್ಟನ್ ಫೆಡರಲಿಸ್ಟನ ಉದ್ಗ್ರಂಥದಲ್ಲಿಯೂ ಪ್ರಚಾರಮಾಡಿದರು. ನೆಪೋಲಿಯನ್ನನ ಐರೋಪ್ಯ ರಾಷ್ಟ್ರಗಳ ದುರಾಕ್ರಮಣದಿಂದಲೂ, ವಿಯನ್ನ ಕಾಂಗ್ರೆಸ್ಸಿನ ವಿದೇಶಾಂಗ ನೀತಿಯಿಂದಲೂ ರಾಷ್ಟ್ರಭಾವನೆಗಳು ತೀವ್ರಗೊಂಡುವು. ಇದು ಕ್ರಾಂತಿಕಾರಿ ತತ್ವವಾಗಿ ಪರಿಣಮಿಸಿ ಪ್ರತಿಯೊಂದು ರಾಷ್ಟ್ರದಲ್ಲಿಯೂ ಪ್ರಜೆಗಳು ರಾಷ್ಟ್ರಸ್ವಾತಂತ್ರ್ಯವನ್ನೂ ಪರಮಾಧಿಕಾರವನ್ನೂ ಗಳಿಸಲು ಸರ್ವಸ್ವವನ್ನೂ ತ್ಯಾಗಮಾಡುವಂತೆ ಹುರಿದುಂಬಿಸಿದುವು. ೧೮೩೧ರಲ್ಲಿ ಡಚ್‌ಸರ್ಕಾರದಿಂದ ನೆದರಲೆಂಡ್ಸ್ ರಾಷ್ಟ್ರವೂ, ರಷ್ಯಾದಿಂದ ಪೋಲೆಂಡೂ, ೧೮೨೧ ರಲ್ಲಿ ತುರ್ಕಿಯಿಂದ ಗ್ರೀಸ್ ರಾಷ್ಟ್ರವೂ ಪ್ರತ್ಯೇಕವಾದುವು. ಬಿಸ್ಮಾರ್ಕನ ನಾಯಕತ್ವದಲ್ಲಿ ೧೮೭೦ ರಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾ ರಾಷ್ಟ್ರಗಳೂ,

ಕವುರ್‌ನ ನಾಯಕತ್ವದಲ್ಲಿ ಇಟಲಿಯ ರಾಷ್ಟ್ರವೂ ಒಂದಾದುವು. ೧೯೧೪ರ ಘೋರಯುದ್ಧಕ್ಕೆ ರಾಷ್ಟ್ರೀಯ ಭಾವನೆಯೇ ಪ್ರಧಾನ ಕಾರಣವಾಯಿತು. ವರ್ಸೆಯಿಲ್ಸ್ ಒಪ್ಪಂದಕ್ಕೆ ಅನುಗುಣವಾಗಿ ಜೆಕ್ಸ್, ಯುಗೋಸ್ಲಾವ್, ಐರಿಷ್ ರಾಷ್ಟ್ರಗಳು ಹುಟ್ಟಿದುವು. ರಾಷ್ಟ್ರಭಾವನೆಯು ಉಜ್ವಲವಾಗಿ ಕ್ರಾಂತಿ ಮತ್ತು ಭಯಂಕರವಾದ ಸ್ಪರ್ಧೆಗಳಿಗೆ ಹೆದ್ದಾರಿಯಾಗಿದೆ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ರಾಷ್ಟ್ರಭಾವನೆ ಪ್ರಜಾಭಿಮತಕ್ಕೆ ಅನುಗುಣವಾಗಿ ಬೆಳೆಯಿತು. ಇಡೀ ಪ್ರಜಾ ವರ್ಗದ ಸಮಗ್ರ ಅಭ್ಯುದಯಕ್ಕೂ ವ್ಯಕ್ತಿಯ ವಿಕಾಸಕ್ಕೂ ಆವಶ್ಯಕವಾದ ಭಾವನೆಯಾಯಿತು. ರಾಷ್ಟ್ರಭಾವನೆಯ ಪರಿಣತಿಯಿಲ್ಲದ ಸರ್ಕಾರ ಸ್ವಚ್ಛಂದ ಪ್ರಭುತ್ವವೆಂದು ಮನವರಿಕೆಯಾಯಿತು. ಇತ್ತೀಚೆಗೆ ರಾಷ್ಟ್ರದ ವಿಸ್ತೀರ್ಣದಲ್ಲಿ ಭಾವನೆಗಳು ಅಡಗಿ ಸ್ವಚ್ಛಂದಾಧಿಕಾರದ ಸಮಾಪ್ತಿಗೂ ಸಾಮ್ರಾಜ್ಯತ್ವ ಮತ್ತು ಅಂತರರಾಷ್ಟ್ರೀಯತ್ವಗಳ ಸ್ಫೂರ್ತಿಗೂ ಮೂಲಭೂತವಾಗಿವೆ.

ರಾಷ್ಟ್ರವು ಪರಮಾಧಿಕಾರವನ್ನು ಗಳಿಸಬೇಕೆಂಬ ಸಿದ್ಧಾಂತವು ಪ್ರಜಾಪ್ರಭುತ್ವದ ತಳಹದಿ. ಆರೋಗ್ಯವೂ ಪಟುತ್ವವೂ ಉಳ್ಳ ಶರೀರದಲ್ಲಿ ಇಂದ್ರಿಯಗಳೂ ಅಂಗಾಂಗಳೂ ಮೆದುಳಿಗೆ ಅಧೀನವಾಗಿರುವಂತೆ ವ್ಯಕ್ತಿಯೂ ಸಂಸ್ಥೆಗಳೂ ರಾಷ್ಟ್ರ ಸರ್ಕಾರಕ್ಕೆ ಅಧೀನವಾಗಬೇಕು ಎಂಬಿವೇ ಮೊದಲಾದ ಭಾವನೆಗಳು ಹತ್ತೊಂಬತ್ತನೆಯ ಶತಮಾನದಲ್ಲಿ ತಲೆದೋರಿದುವು. ರಾಷ್ಟ್ರದ ಪರಮಾಧಿಕಾರವು ಒಳ ಆಡಳಿತದಲ್ಲಿಯೂ, ವಿದೇಶಾಂಗ ನೀತಿಯಲ್ಲಿಯೂ, ಪ್ರಕೃತಿನಿಯಮಗಳು ವಿನಾ ಯಾವ ನಿಯಮಕ್ಕೂ ಅಧೀನವಲ್ಲ. ರಾಷ್ಟ್ರಹಿತಸಾಧಕವಾದ ಮನೋಭಾವನೆಯಲ್ಲಿ, ಆ ಭಾವನೆಯಿಂದ ಸ್ಫೂರ್ತಿಗೊಂಡ ಸಮಾಜದಲ್ಲಿ ಪರಮಾಧಿಕಾರವು ಅಡಗಿದೆಯೆಂದು ರೂಸೋವೂ ನಿಯಮಬದ್ಧವಾದ ಶಾಸನಾಂಗದಲ್ಲಿ ಪರಮಾಧಿಕಾರವಿದೆಯೆಂದು ಆಸ್ಟಿನ್ನನೂ, ಸಮತಾಭಾವನೆಗಳಿಂದ ಉದ್ವೇಗಗೊಂಡ ಪ್ರಜಾವರ್ಗದಲ್ಲಿ ಪರಮಾಧಿಕಾರವಿದೆಯೆಂದು ಸಮಾಜವಾದಿಗಳೂ ನೂತನ ತತ್ವವನ್ನು ಸಾರಿದರು. ಪರಮಾಧಿಕಾರವು ನಿರ್ದಿಷ್ಟರಾಷ್ಟ್ರದಲ್ಲಿ ಪೂರ್ಣ

ವಾಗಿ ವ್ಯಾಪಿಸಿಕೊಂಡಿರುವುದು. ಪರಮಾಧಿಕಾರವು ರಾಷ್ಟ್ರಾವಲಂಬನೆ; ರಾಷ್ಟ್ರವೆಂದರೆ ಪರಮಾಧಿಕಾರ; ಪರಮಾಧಿಕಾರವೆಂದರೆ ರಾಷ್ಟ್ರ — ಇದು ಸ್ವತಃಸಿದ್ಧವಾದ ತತ್ವ. ಪ್ರಕೃತಿಸಿದ್ಧವಾದ ಗೊತ್ತಾದ ಪರಿಮಿತಿಯುಳ್ಳ ಪ್ರದೇಶ; ಅಲ್ಲಿ ಪರಸ್ಪರ ಸೌಹಾರ್ದ ಮತ್ತು ಸಹಕಾರದಿಂದ ತಮ್ಮ ಪ್ರತ್ಯೇಕ ಜೀವನವಿಕಾಸವನ್ನೂ ಸಾರ್ವಜನಿಕ ಪ್ರಗತಿಯನ್ನೂ ಮುಂದು ವರಿಸುವ ಪ್ರಜೆ; ಈ ವಿಧವಾದ ಜೀವನವನ್ನು ಸುವ್ಯವಸ್ಥಿತವಾಗಿ ಕ್ರಮ ಪಡಿಸಲು ಸರ್ಕಾರ; ಸುವ್ಯವಸ್ಥಿತ ಮತ್ತು ವಿಕಸಿತ ಜೀವನವೇನೆಂಬು ದನ್ನೂ, ಅದರ ವ್ಯಾಪ್ತಿ ತತ್ವಗಳೇನೆಂಬುದನ್ನೂ ತಿಳಿದು ಶಾಸನಮಾಡುವ ಪರಮಾಧಿಕಾರವನ್ನು ಪಡೆದಿರುವ ಒಂದು ನಿರ್ದಿಷ್ಟ ಸಂಸ್ಥೆ — ಇವು ರಾಷ್ಟ್ರೋತ್ಪತ್ತಿಗೆ ಅತ್ಯಾವಶ್ಯಕ. ಸಂಘ ಮತ್ತು ಮಠಗಳಂತೆ ರಾಷ್ಟ್ರವೂ ಒಂದು ಸಂಸ್ಥೆಯೇ. ಆದರೆ ಉಳಿದ ಸಂಸ್ಥೆಗಳಂತೆ, ಅದರ ಸದಸ್ಯತ್ವವು ಐಚ್ಛಿಕವಲ್ಲ; ಸ್ವಯಂ ಪ್ರೇರಣೆಯಿಂದ ರಾಷ್ಟ್ರದ ಸದಸ್ಯತ್ವವನ್ನು ತ್ಯಜಿ ಸುವಹಾಗಿಲ್ಲ. ಪರಮಾಧಿಕಾರವನ್ನು ಅನುಭವಿಸುವ ಸಂಸ್ಥೆಯ ಅಧೀನ ವಾಗಿ ವ್ಯಕ್ತಿಯು ಬಾಳಬೇಕು. ಶಾಸನಗಳನ್ನು ಮಾಡಿ ಅವುಗಳನ್ನು ಅನುಸರಿಸಿ ಬಾಳುವಂತೆ ವ್ಯಕ್ತಿಗಳನ್ನು ನಿರ್ಬಂಧಿಸುವ ಸರ್ಕಾರವೇ ರಾಷ್ಟ್ರ ದಲ್ಲಿ ಪರಮಾಧಿಕಾರವನ್ನು ಪ್ರಯೋಗಿಸುವುದು. ಎರಡನೆಯದಾಗಿ ಪರಮಾಧಿಕಾರ ಪಡೆದಿರುವ ರಾಷ್ಟ್ರವೆಂದರೆ ಒಂದು ನಿರ್ದಿಷ್ಟ ಪ್ರದೇಶ. ಸಂಸ್ಥೆಗಳಿಗಾದರೋ ಪ್ರದೇಶದ ಮಿತಿ ಇಷ್ಟೇ ಇರಬೇಕೆಂಬ ನಿರ್ಬಂಧವಿಲ್ಲ. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಸಂಸ್ಥೆಗಳಾಗಬಹುದು. ಅಲ್ಲದೆ ಸಂಸ್ಥೆಗಳ ಕಾರ್ಯಕಲಾಪಗಳು ಸಂಕುಚಿತವಾದುವು; ಅನಿರ್ದಿಷ್ಟ ಕೆಲಸ ಗಳ ಗೋಜಿಗೆ ಹೋಗಲಾಗದು. ರಾಷ್ಟ್ರದ ಕಾರ್ಯಗಳು ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯಾದಂತೆಲ್ಲ, ನಿರಂತ ರವೂ ವೃದ್ಧಿಯಾಗುವುವು. ಸಂಸ್ಥೆಗಳು ಅಸ್ಥಿರ, ನಾಯಿಕೊಡೆಗಳಂತೆ ಹುಟ್ಟಿ ಸಾಯುವುವು. ರಾಷ್ಟ್ರವು ಅನಾದಿ ಮತ್ತು ಶಾಶ್ವತವಾದ ತತ್ವ ಸಂಸ್ಕಾರಗಳಿಂದ ಪೂರಿತವಾದುದು. ಸಂಸ್ಥೆಗಳ ಹುಟ್ಟು, ಬೆಳವಣಿಗೆ

ಮತ್ತು ನಾಶವು ಕಾರಣಬದ್ಧವಾದುದು. ಸಂಸ್ಥೆಗಳ ನಿಯಮ ನೀತಿಗಳನ್ನು ಸದಸ್ಯರು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗಬೇಕಾದ ನಿರ್ಬಂಧವಿಲ್ಲ. ರಾಷ್ಟ್ರನಿಯಮಗಳನ್ನು ಅತಿಕ್ರಮಿಸಿದರೆ ಬಲಪ್ರಯೋಗದಿಂದ ರಾಷ್ಟ್ರ ಸರ್ಕಾರವು ತಪ್ಪಿತಸ್ಥರನ್ನು ಶಿಕ್ಷಿಸುವುದಲ್ಲದೆ ನಿಯಮಕ್ಕೆ ಅನುಸಾರವಾಗಿ ವರ್ತಿಸುವಂತೆ ನಿರ್ಬಂಧಪಡಿಸಬಹುದು. ಸಂಸ್ಥೆಗಳ ಸಂಕಲ್ಪವು ಅಲ್ಪಸಂಖ್ಯಾತ ಪ್ರಜೆಗಳನ್ನು ಮಾತ್ರ ಅವಲಂಬಿಸುವುದು. ರಾಷ್ಟ್ರದ ಉದಾತ್ತ ಸಂಕಲ್ಪ ಮತ್ತು ಧ್ಯೇಯಗಳು ಇಡೀ ರಾಷ್ಟ್ರದ ಪ್ರಜೆಗಳ ಅಭ್ಯುದಯ ಮತ್ತು ಪಾರಮಾರ್ಥಿಕ ಭಾವನೆಗಳಿಂದ ಕೂಡಿರುವುವು.

ಪರಮಾಧಿಕಾರವು (Sovereignty) ರಾಜನಲ್ಲಿಯೋ ಅಥವಾ ಶಾಸನ ಸಭೆಯಲ್ಲಿಯೋ ಅಥವಾ ಪಂಗಡಗಳನ್ನು ಏರ್ಪಡಿಸುವ ಸಮಾಜದಲ್ಲಿಯೋ ಐಕ್ಯವಾಗಿರುವುದು. ಶಾಸನರಚಿಸುವ ಪರಮಾಧಿಕಾರವನ್ನು 'ಲೀಗಲ್ ಸಾವೆರ್‌ಟಿ' ಎಂದೂ ಪಂಗಡಗಳನ್ನು ಏರ್ಪಡಿಸುವ ಪರಮಾಧಿಕಾರವನ್ನು ಅಥವಾ ಜನಾಂಗ ಪರಮಾಧಿಕಾರವನ್ನು 'ಪೊಲಿಟಿಕಲ್ ಸಾವೆರ್‌ಟಿ' ಎಂದೂ ರಾಜ್ಯಶಾಸ್ತ್ರಜ್ಞರು ಕರೆಯುವರು. ಪರಮಾಧಿಕಾರವು ಶಾಶ್ವತವಾದುದು; ಇತರ ಎಲ್ಲ ಅಧಿಕಾರಗಳಿಂದ ಪ್ರತ್ಯೇಕವಾದುದು; ರಾಷ್ಟ್ರವು ಸಮಸ್ತ ಪ್ರಜೆ ಮತ್ತು ಚರಾಚರವಸ್ತುಗಳನ್ನು ಒಳಗೊಂಡಿರುವುದು. ಶರೀರದಲ್ಲಿ ಆತ್ಮವು ಅಡಗಿದ್ದು ಅದನ್ನು ಬೇರ್ಪಡಿಸಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ರಾಷ್ಟ್ರದಲ್ಲಿ ಪರಮಾಧಿಕಾರವು ಅಡಗಿದ್ದು ಅದನ್ನು ಹೊರತೆಗೆಯಲು ಸಾಧ್ಯವಿಲ್ಲ. ಪರಮಾಧಿಕಾರವು ರಾಷ್ಟ್ರದ ಐಕ್ಯಭಾವ; ಅದನ್ನು ನಿರ್ದಿಷ್ಟವಾಗಿ ನಿರ್ಧರಿಸಲು ಸಾಧ್ಯವಿಲ್ಲ; ಛಿದ್ರ ಛಿದ್ರವಾಗಿ ವಿಭಜಿಸಲಾಗದು. ಪರವಸ್ತುವಿನಂತೆ ಪರಮಾಧಿಕಾರಕ್ಕೆ ಆದ್ಯಂತಗಳಿಲ್ಲ. ಅದು ರಾಷ್ಟ್ರದ ಸಮಸ್ತ ಜೀವರಾಶಿಗಳ ಚಲನವಲನಗಳನ್ನು ನಿರ್ಧರಿಸುವಂತಹ ಒಂದು ಚೇತನ. ಪರಮಾಧಿಕಾರದ ಅವಲಂಬನೆ ಇಲ್ಲದ ಪ್ರದೇಶ ರಾಷ್ಟ್ರವಲ್ಲ.

ಪರಮಾಧಿಕಾರವು ಸಮಗ್ರಭಾವನೆಯನ್ನು ಸೂಚಿಸುವ ಮತ್ತು ಗುಣಾತ್ಮಕವಾದ ಒಂದು ತತ್ವ ಅಥವಾ ರಾಷ್ಟ್ರದ ಆತ್ಮ ಎಂಬುದು ಕೆಲವರ

ಅಭಿಪ್ರಾಯ. ರಾಷ್ಟ್ರದ ಸಮಗ್ರಶಕ್ತಿಯೇ ಪರಮಾಧಿಕಾರವೆಂದು ಜಲಿಂಕ್, ಲಿಬಾಂಡ್, ಷೆರಿಂಗ್ ಮುಂತಾದವರೂ, ಪರಮಾಧಿಕಾರವು ಗುಣಾತ್ಮಕವಾದುದು ಮತ್ತು ರಚನಾತ್ಮಕವಾದುದು ಎಂದು ಮತ್ತೆ ಕೆಲವರೂ, ಸ್ವಯಂಪ್ರೇರಣೆಯಿಂದಲೇ ಸಂಕೃಷ್ಟ ವಿಕೃಷ್ಟವಾಗುವುದೇ ಹೊರತು ಬಾಹ್ಯ ಸಾಧನೆಗಳಿಂದಲ್ಲವೆಂದು ಬೆಂಕಿಂಗ್ ಮತ್ತೆ ಕೆಲವರೂ, ಪರಮಾಧಿಕಾರವು ಧರ್ಮಸ್ವರೂಪವೆಂದು ಕೆಲವರೂ ತಿಳಿದಿರುವರು. ರಾಷ್ಟ್ರ ಶಾಸನಗಳನ್ನು ಯಾವುದು ನಿರ್ಧರಿಸಿರುವುದೋ ಅದೇ ಪರಮಾಧಿ ಕಾರವನ್ನು ಗಳಿಸಿದೆಯೆಂದು ಆಸ್ಟಿನ್ ಮುಂತಾದ ರಾಜನೀತಿಜ್ಞರು ಪ್ರತಿ ಪಾದಿಸಿರುವ ಸಿದ್ಧಾಂತವು ಪ್ರಭಾವಯುತವಾಗಿದೆ. ಈ ಸಿದ್ಧಾಂತಕಾರರ ಪ್ರಕಾರ ಧರ್ಮರಚನೆಗೇ ಹೆಚ್ಚು ಪ್ರಾಶಸ್ತ್ಯ. ಯಾವುದು ಶಾಸನವನ್ನು ರಚಿಸಿ ಶಾಸನಕ್ಕೆ ಅನುಗುಣವಾಗಿ ವ್ಯಕ್ತಿಯು ವರ್ತಿಸುವಂತೆ ನಿರ್ಬಂಧಿಸು ವುದೋ ಅದೇ ರಾಷ್ಟ್ರದಲ್ಲಿ ಪರಮಾಧಿಕಾರವನ್ನು ಪಡೆದಿರುವ ಸಂಸ್ಥೆ ಎಂದರೆ ರಾಷ್ಟ್ರದ ಶಾಸನಾಂಗ ರಚಿಸಿದ ನಿಯಮ ಕಾನೂನುಗಳೇ ಧರ್ಮ. ಅವುಗಳನ್ನು ಅತಿಕ್ರಮಿಸಿದರೆ ವ್ಯಕ್ತಿ, ಶಿಕ್ಷೆಗೆ ಅರ್ಹನಾಗುವನು. ಆದು ದರಿಂದ ನಿರ್ದಿಷ್ಟವಾದ ಶಾಸನಾಂಗ ರಹಿತವಾದ ರಾಷ್ಟ್ರದಲ್ಲಿ ನಿರ್ದಿಷ್ಟ ನಿಯಮಗಳಾಗಲಿ ಕಾನೂನುಗಳಾಗಲಿ ಇಲ್ಲ. ಹೀಗೆ ಶಾಸನವನ್ನು ರಚಿಸುವ ಪರಮಾಧಿಕಾರವನ್ನು ಗಳಿಸಿರುವ ನಿರ್ದಿಷ್ಟ ಸಂಸ್ಥೆಯನ್ನು 'ಲೀಗಲ್ ಸಾವೆರಿನ್' ಎಂದು ಆಸ್ಟಿನ್ ಕರೆದಿರುವನು. ಆದರೆ ಆಸ್ಟಿನಿನ ಲೀಗಲ್ ಸಾವೆರಿನ್ ತತ್ವದ ಪ್ರಕಾರ ಪ್ರಜಾಭಿಮತಕ್ಕೆ ಮನ್ನಣೆಯಿಲ್ಲ. ಅಲ್ಲದೆ ಒಂದು ನಿರ್ದಿಷ್ಟವಾದ ಅಧಿಕಾರ ವರ್ಗವು ನಿರೂಪಿಸಿರುವ ಆಜ್ಞೆಗಳು ಇತರರನ್ನೂ ನಿರ್ಬಂಧಿಸುವುದು ಎಂದು ಪ್ರತಿಪಾದಿಸುವುದು ಸಮರ್ಪಕ ವಾದುದಲ್ಲ. ರಾಷ್ಟ್ರ ಮತ್ತು ಸರ್ಕಾರಗಳು ಪ್ರತ್ಯೇಕವಾದುವುಗಳೆಂಬ ಭಾವನೆ ಆಸ್ಟಿನಿನ ತತ್ವದ ಅಡಿಗಲ್ಲು. ಪರಮಾಧಿಕಾರ ಮತ್ತು ಶಾಸನ ನಿರ್ಧಾರ ಇವೆರಡೂ ರಾಷ್ಟ್ರದಲ್ಲಿ ಐಕ್ಯವಾಗಿರುವುದೇ ಹೊರತು ಯಾವು ದೊಂದು ನಿರ್ದಿಷ್ಟ ಸಂಸ್ಥೆ ಅಥವಾ ಸರ್ಕಾರದಲ್ಲಿ ಅಲ್ಲ. ಸರ್ಕಾರ

ವೆನ್ನುವುದು ರಾಷ್ಟ್ರದ ಪರಮಾಧಿಕಾರವನ್ನು ಕಾರ್ಯಕಾರಿಯಾಗಿ ಮಾಡುವ ಒಂದು ಸಾಧನೆ.

ಆಸ್ಟಿನ್ ಪ್ರತಿಪಾದಿಸಿರುವ ಪರಮಾಧಿಕಾರತತ್ವವು ಬಹಳ ವಿವಾದಾಸ್ಪದವಾಗಿರುವುದರಿಂದ ಆ ವಿಷಯುಕವಾದ ಬೇರೆ ಬೇರೆ ಸಿದ್ಧಾಂತಗಳ ಉತ್ಪತ್ತಿಗೆ ಕಾರಣವಾಗಿದೆ. ಆಸ್ಟಿನ್ನಿನ ತತ್ವವನ್ನು ಕಾರ್ಯಕಾರಿಯಾಗಿ ಪ್ರಯೋಗಿಸಿದ್ದಲ್ಲಿ ನಿರಂಕುಶಪ್ರಭುತ್ವ ಅಥವಾ ಪ್ರಜಾಪ್ರಭುತ್ವಕ್ಕೆ ಪ್ರತಿಬಂಧಕವಾದ ಸ್ವಚ್ಛಂದ ಪ್ರಭುತ್ವಕ್ಕೆ ಮಾರ್ಗವಾಗುತ್ತದೆ ಎಂಬ ಭೀತಿ, ಭಿನ್ನಸಿದ್ಧಾಂತಗಳಿಗೆ ಅವಕಾಶವಾಗಿದೆ. ಶಾಶ್ವತವೂ, ಪ್ರತ್ಯೇಕವೂ, ನಿರಂತರವೂ, ಅನಿರ್ದಿಷ್ಟವೂ ಮೂಲಭೂತವೂ ಆದ ಪರಮಾಧಿಕಾರವು ಒಂದು ನಿರ್ದಿಷ್ಟ ಸಂಸ್ಥೆಯಲ್ಲಿ ಅಡಗಿದ್ದರೆ ಅದು ತನ್ನ ಪ್ರಭಾವ ಮತ್ತು ಶಕ್ತಿಯನ್ನು ಹೆಚ್ಚಿಸಿಕೊಂಡು ವ್ಯಕ್ತಿ ಮತ್ತು ಸಮಾಜದ ಆಕ್ರಮಣವನ್ನು ಮಾಡಬಹುದು. ಆದುದರಿಂದಲೇ ಪರಮಾಧಿಕಾರವು ರಾಷ್ಟ್ರ ಮತ್ತು ಸಮಾಜದಲ್ಲಿ ಐಕ್ಯವಾಗಿರುವುದೇ ಹೊರತು ಕೇವಲ ಒಂದು ನಿರ್ದಿಷ್ಟ ಸಂಸ್ಥೆಯಲ್ಲಿ ಅಲ್ಲ. ಪರಮಾಧಿಕಾರಕ್ಕೆ ಎಲ್ಲೆಗಳುಂಟು. ವಿದೇಶಾಂಗ ನೀತಿಯಲ್ಲಿ ಇತರರಾಷ್ಟ್ರಗಳ ಹಕ್ಕು ಬಾಧ್ಯತೆಗಳ ನಿರ್ಬಂಧಕ್ಕೆ ಅಧೀನವಾಗಬೇಕಾಗುವುದು. ಹಾಗೆಯೇ ವ್ಯಕ್ತಿಗಳ ಹಕ್ಕು ಬಾಧ್ಯತೆ ಮತ್ತು ತನ್ನ ಸಹಜ ಗುಣಗಳಿಗನುಣವಾಗಿ ತಾನಾಗಿಯೇ ಏರ್ಪಡಿಸಿಕೊಂಡ ನಿಯಮಗಳಿಗೂ ಅಧೀನವಾಗಬೇಕಾಗುವುದು. ಪ್ರಕೃತಿನಿಯಮಗಳಿಗೂ ಅಧೀನ. ನೀತಿಯುತ ಮತ್ತು ಧಾರ್ಮಿಕ ಸಿದ್ಧಾಂತಗಳಿಗೂ, ಅನಾದಿಯಿಂದ ಬಂದ ಆಚರಣೆಗಳಿಗೂ ಅದು ಅಧೀನವಾದುದು. ಮುಖ್ಯವಾಗಿ, ಪಂಗಡ ಕಲ್ಪನೆಯ ಸಮಾಜದ ಅಭಿಮತವೇ ಪರಮಾಧಿಕಾರವನ್ನು ನಿರ್ಧರಿಸುವುದು. ರಾಷ್ಟ್ರದ ಸಮಸ್ತ ವ್ಯವಹಾರಗಳ ಕೇಂದ್ರವನ್ನೂ ಪ್ರಜಾಕಾರ್ಯಕಲಾಪಗಳನ್ನು ನಿಯಮಿಸುವ ಅಧಿಕಾರವನ್ನೂ ಸರ್ಕಾರವು ಪಡೆದಿಲ್ಲ. ಅನೇಕ ಭಾಗಗಳಲ್ಲಿ ಪಡೆದಿದ್ದರೂ ಅಧಿಕಾರವನ್ನೂ ಪ್ರಯೋಗಿಸುವುದು ಕಷ್ಟಸಾಧ್ಯ. ನಿರ್ಬಂಧವಾಗಿ ಅಧಿಕಾರವನ್ನು ಪ್ರಯೋಗಿಸಲು

ಯತ್ನಿಸಿದರೆ ವ್ಯಕ್ತಿಗಳು ಉದ್ವೇಗಗೊಂಡು ಕ್ರಾಂತಿಭಾವನೆಗಳನ್ನು ಪೋಷಿಸಿ ಸರ್ಕಾರವನ್ನು ಕಿತ್ತುಹಾಕುವರು.

ರಾಷ್ಟ್ರವು ಬದುಕಿಬಾಳುವುದಕ್ಕೆ ಪರಮಾಧಿಕಾರ ಅನಾವಶ್ಯಕ ನೆಂದೂ, ರಾಷ್ಟ್ರವೆಂದರೆ ಪರಮಾಧಿಕಾರ, ಪರಮಾಧಿಕಾರವೆಂದರೆ ರಾಷ್ಟ್ರ ಎಂಬುದು ತಪ್ಪುತಿಳಿವಳಿಕೆ ಎಂದೂ ಜಲಿಂಕ್, ಲಿಬಾಂಡ್ ಮುಂತಾದ ಜರ್ಮನ್ ತತ್ವಜ್ಞರು ಪ್ರತಿಪಾದಿಸಿದ್ದಾರೆ. ಒಳ ಆಡಳಿತ ಮತ್ತು ಅಂತರ ರಾಷ್ಟ್ರೀಯ ವಿಚಾರಗಳ ಪರಿಶೀಲನೆಯಲ್ಲಿ ರಾಷ್ಟ್ರವು ಪರಮಾಧಿಕಾರವನ್ನು ಪಡೆದಿದೆಯೆಂಬ ಭಾವನೆ ಆಧುನಿಕಪರಿಸ್ಥಿತಿಯಲ್ಲಿ ಅಳಿದುಹೋಗಿದೆ. ಮತ್ತು ಆ ಭಾವನೆಯೂ ಅಶಾಂತಿಜನಕವಾದುದೆಂದು ಲಿಂಡ್ಸೆ, ಲಾಸ್ಕಿ, ಬಾರ್ಕರ್, ಕ್ರಾಬೆ, ಡಿಗ್ಬಿ, ಮುಂತಾದ ರಾಜನೀತಿಜ್ಞರು ಸಿದ್ಧಾಂತ ಮಾಡಿದ್ದಾರೆ. ಪರಮಾಧಿಕಾರವಿರುವರಾಷ್ಟ್ರದ ಅಂತ್ಯಕಾಲ ಸಮೀಪಿಸಿದೆ. ಪರಮಾಧಿಕಾರವೆಂಬುದು ರಾಷ್ಟ್ರಕ್ಕೆ ಅನ್ವಯಿಸುವುದೂ ಇಲ್ಲ. ಆಡಳಿತ ವನ್ನು ನಡೆಸುವವರು ಆಜ್ಞೆಮಾಡುವ ಹಕ್ಕನ್ನು ಪಡೆದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜ ಜೀವನದಲ್ಲಿ ಸಮಾನ ಹಕ್ಕನ್ನು ಗಳಿಸಿರುವುದರಿಂದ ಒಬ್ಬನು ಮತ್ತೊಬ್ಬನನ್ನು ಆಳಲು ಅಧಿಕಾರವಿಲ್ಲ. ಇದು ಪ್ಲುರಲಿಸ್ಟ್ ಸಂಘ ಸ್ವಾಮ್ಯ ಮತದ ಸಿದ್ಧಾಂತ. ಮನಶ್ಶಾಸ್ತ್ರದ ಸಂಶೋಧನೆಗಳ ಪರಿಣಾಮ ವಾಗಿ ರಾಷ್ಟ್ರಾಧಿಕಾರದ ಆಧ್ಯಾತ್ಮಿಕ ಭಾವನೆಗಳು ಅಳಿದುಹೋಗಿವೆ. ರಾಷ್ಟ್ರ ನಿಯಮಗಳು ಸಮಾಜದ ಪ್ರಜಾವರ್ಗದ ಆಚಾರ ಮತ್ತು ಸಂಪ್ರ ದಾಯಗಳನ್ನು ಅನುಸರಿಸುತ್ತವೆಯೇ ಹೊರತು ಅಧಿಕಾರವರ್ಗದ ಸ್ವಯಂ ಪ್ರೇರಣೆಯಿಂದ ಉತ್ಪನ್ನವಾದುದಲ್ಲ ಎಂಬುದು ಸಮಾಜಶಾಸ್ತ್ರದ ಬೆಳವಣಿಗೆಯಿಂದ ವ್ಯಕ್ತವಾಗಿದೆ. ಸಮಾಜದ ಆರ್ಥಿಕ ಜೀವನದ ಪರಿ ವರ್ತನೆ ಮತ್ತು ವಿಕಾಸವು ಸಮತಾಭಾವನೆಗಳನ್ನು ಬೆಳೆಸಿ ಪರಮಾಧಿಕಾರ ತತ್ವಕ್ಕೆ ಚ್ಯುತಿ ತಂದಿದೆ.

ರಾಷ್ಟ್ರ ಶಾಸನದ ವಿಧಿಯ ವಿಚಾರವಾಗಿ ಗಾಢ ಆಲೋಚನೆಗಳು ತಲೆದೋರಿವೆ. ಶಾಸನಾಂಗ ಸಭೆ ಮತ್ತು ನ್ಯಾಯಾಂಗವು ರಚಿಸುವ

ಶಾಸನಗಳು ರಾಷ್ಟ್ರ ಜೀವನವನ್ನು ತಿದ್ದಿ ವಿಕಾಸಗೊಳಿಸುವ ಶಾಸನಗಳಲ್ಲ. ಅಲ್ಪಭಾಗಮಾತ್ರ ಶಾಸನಾಂಗ ಸಭೆಯಿಂದ ರಚಿತವಾದ ಶಾಸನಗಳೇ ಪರಮಾಧಿಕಾರ ಸೂಚಕವಾದ ಮತ್ತು ವ್ಯಕ್ತಿಯನ್ನು ಪೂರ್ಣವಾಗಿ ನಿರ್ಬಂಧಿಸುವ ಶಾಸನಗಳಾಗುವುದಿಲ್ಲ. ಸಮಾಜದ ಬಹುಮುಖದಿಂದ ಶಾಸನಗಳು ಹೊರಬೀಳುವುವು. ನಿರ್ದಿಷ್ಟ ಶಾಸನಾಂಗದಿಂದ ರಚಿಸಲ್ಪಟ್ಟ ಶಾಸನಗಳಂತೆ ಇತರ ಸಂಸ್ಥೆಗಳ ಶಾಸನಗಳೂ ಸಮಾನಾಧಿಕಾರವನ್ನು ಪಡೆದಿವೆಯೆಂಬುದು ಸಂಘಸ್ವಾಮ್ಯ ವಾದಿಗಳ (Pluralists) ಮತ. ವ್ಯಕ್ತಿ ಮತ್ತು ಸಂಸ್ಥೆಗಳ ಪರಸ್ಪರ ಸಂಬಂಧಗಳನ್ನು ನಿರ್ಮಿಸುವ, ಏರ್ಪಡಿಸುವ ವಿಧಿಗಳು ಬಹುಮುಖವಾಗಿರುವುವು. ಆ ವಿಧಿಗಳೇ ರಾಷ್ಟ್ರದ ಶಾಸನಗಳು. ಇವು ಒಂದು ನಿರ್ದಿಷ್ಟ ಸಂಸ್ಥೆಯಿಂದ ಹೊರಬೀಳಬೇಕಾದ ನಿರ್ಬಂಧವಿಲ್ಲ. ಸಮಾಜವು ನೀತಿ ಮತ್ತು ಧರ್ಮಯುತವಾದುದೆಂದು ತಿಳಿಯುವುದೇ ಶಾಸನದ ಲಕ್ಷಣ. ನೀತಿಯುತವಾದುದನ್ನು ಅನೀತಿಯುತವಾದದ್ದರಿಂದ ಪ್ರತ್ಯೇಕಿಸಿ ಶಾಸನ ಮಾಡಬೇಕಾದುದು ರಾಷ್ಟ್ರದ ಕರ್ತವ್ಯ ಎಂದು ಕ್ರಾಬೆ ಹೇಳಿದ್ದಾನೆ. ರಾಷ್ಟ್ರವು ವಿಧಿಗೆ ಅಧೀನ. ರಾಷ್ಟ್ರಜೀವನವು ವಿಧಿಗೆ ಅನುಸಾರವಾಗಿ ಪರಿವರ್ತನೆಯಾಗುತ್ತಿರುತ್ತದೆ. ವ್ಯಕ್ತಿ ಮತ್ತು ಸಮಾಜದ ಮಾನಸಿಕ, ಆಧ್ಯಾತ್ಮಿಕ, ರಾಜಕೀಯ ಬೆಳವಣಿಗೆಗೆ ಅನುಗುಣವಾಗಿ ನಿಯಮಗಳು ಹುಟ್ಟಿ, ಜನಜೀವನದಲ್ಲಿ ಮಾರ್ಪಾಡುಗಳನ್ನು ಮಾಡಿ ವ್ಯಕ್ತಿ ಮತ್ತು ಸಮಾಜವನ್ನು ಪ್ರಗತಿಪರವನ್ನಾಗಿ ಮಾಡುವುದು. ಅಂತರರಾಷ್ಟ್ರೀಯ ವಿಧಿಗೆ ರಾಷ್ಟ್ರವು ಅಧೀನ. ಇತರ ರಾಷ್ಟ್ರಗಳೊಡನೆ ಸಂಬಂಧ ಬೆಳಸಿ ಒಪ್ಪಂದಮಾಡಿಕೊಂಡು ಆ ಒಪ್ಪಂದದ ನಿಯಮಗಳನ್ನು ಮನ್ನಿಸಬೇಕು. ಒಳಆಡಳಿತದಲ್ಲಿ, ಮತ, ಕಾರ್ಮಿಕ ವರ್ಗಸಂಸ್ಥೆಗಳು, ವರ್ತಕ ಮಂಡಳಿ ಮುಂತಾದ ವಿವಿಧ ಸಂಗಡಗಳ ನಿಯಮಗಳಿಗೆ ಅನುಗುಣವಾಗಿ ರಾಷ್ಟ್ರಸರ್ಕಾರವು ವರ್ತಿಸಬೇಕು. ವ್ಯಕ್ತಿಯ ನಿಸರ್ಗವಾದ ಮತ್ತು ವಾಕ್ ಮತ್ತು ಮುದ್ರಣಸ್ವಾತಂತ್ರ್ಯಗಳ ಮತ್ತು ನೀತಿಯುತ ವರ್ತನೆಯ ಆಕ್ರಮಣ ಮಾಡಲಾಗದು. ರಾಷ್ಟ್ರಸರ್ಕಾರದಂತೆ ಸ್ವಕಾರ್ಯ

ನಿರ್ವಾಹಕ ಸಂಘಗಳೂ ಪ್ರತ್ಯೇಕ ಜೀವನವನ್ನು ರಾಷ್ಟ್ರಹಿತಸಾಧನೆಗಾಗಿ ನಡೆಸುವಂತೆ ಅವಕಾಶದೊರಕಬೇಕು. ಸಂಘಗಳಿಗೂ ಸಂಸ್ಥೆ ಮತ್ತು ಪಂಗಡಗಳಿಗೂ ತಮ್ಮ ಸದಸ್ಯತ್ವಜೀವನವನ್ನು ಪರಿವರ್ತಿಸಿ ವಿಕಾಸ ಗೊಳಿಸುವ ಅಧಿಕಾರವುಂಟು. ವೈಯುಕ್ತಿಕ ಮತ್ತು ಸಾಂಘಿಕ ಹಕ್ಕು ಬಾಧ್ಯತೆಗಳಿಗೆ ಅನುಗುಣವಾಗಿ ರಾಷ್ಟ್ರಸರ್ಕಾರವು ವರ್ತಿಸಬೇಕು. ಆಧುನಿಕ ರಾಜಕೀಯದಲ್ಲಿ ಶಾಸನಗಳನ್ನು ಯಾರು ವಿಧಿಸುವರು ಎಂಬುದು ಪ್ರಧಾನಪ್ರಶ್ನೆಯಲ್ಲ; ಶಾಸನದ ತಿರುಳೇನು ಎಂಬುದು. ಶಾಸನದಲ್ಲಿ ಅಡಗಿರುವ ಉದ್ದೇಶವು ಕ್ರಮವಾಗಿ ವಿಕಾಸವಾದಲ್ಲಿ ವ್ಯಕ್ತಿ ಮತ್ತು ಸಾಂಘಿಕಜೀವನದ ಪ್ರಗತಿಗೆ ಯೋಗ್ಯವಾದ ಪರಿವರ್ತನೆಯಾಗ ಬೇಕು. ನೂತನ ಧ್ಯೇಯ, ಸಂಕಲ್ಪಗಳನ್ನು ಒಳಗೊಂಡು ವ್ಯಕ್ತಿ ಮತ್ತು ಸಂಘಗಳ ವಿಕಾಸಕ್ಕೆ ಎಡೆಯಾಗಬೇಕು. ರಾಷ್ಟ್ರವೆನ್ನು ವುದು "ಸಮಾಜದೊಳಗಿನ ಸಮಾಜ" (a Society of Societies) ವಾಗಿ ಪರಿಣಮಿಸಿ, ಕ್ರಮವಾದ ವಿಕಾಸದಲ್ಲಿ ಧರ್ಮವೆಂದು ಮನವರಿಕೆ ಯಾದುದನ್ನು ಶಾಸನವನ್ನಾಗಿ ರಚಿಸಿ, ವ್ಯಕ್ತಿಯ ಮತ್ತು ಸಮಾಜದ ಪ್ರಗತಿಗೆ ಪ್ರಧಾನಸಾಧನವಾಗಬೇಕೆಂದು ಹ್ಯೂಗೋ, ಕ್ರಾಬೆ, ಲಿಯೋಂ, ಡಿಗ್ವಿ, ಸ್ಟ್ಯಾಂಲರ್, ರೇಮಿರೋ ದುಮೆಜಿಸ್ಟೊ, ಹೆರಾಲ್ಡ್ ಲಾಸ್ಕಿ, ರಾಸ್ಕೊ ಪೌಂಡ್, ಕಾಡೋರ್ಜೋ, ಜಿರೋ ಫ್ರಾಂಕ್ ಮುಂತಾದ ಪ್ರಸಿದ್ಧ ಆಧುನಿಕ ಶಾಸ್ತ್ರನಿಪುಣರು ಪ್ರತಿವಾದಿಸಿದ್ದಾರೆ. ಈ ತತ್ವದಪ್ರಕಾರ ಪರಮಾಧಿಕಾರವು ಶಾಸನಾಂಗ. ಅನೇಕ ಸಂಸ್ಥೆಗಳು ಇದರಿಂದ ವಿಭಾಗಹೊಂದುವುದು ವ್ಯಕ್ತಿ ವಿಕಾಸಕ್ಕೆ ಅನುಕೂಲವಾದರೂ ರಾಷ್ಟ್ರಶಕ್ತಿಯೆಲ್ಲ ಒಂದು ಕ್ರೋಡೀಕೃತ ಸಂಸ್ಥೆಯಲ್ಲಿ ಅಡಗದಿದ್ದರೆ ಈ ಸಂಘಗಳಿಗೂ ಸಂಸ್ಥೆಗಳಿಗೂ ಪರಸ್ಪರ ವಿವಾದಗಳುಂಟಾಗಿ ನಿಷ್ಪಕ್ಷಪಾತ ವಾಗಿ ನ್ಯಾಯತೀರ್ಪನ್ನು ಕೊಡುವ ಒಂದು ಸಂಸ್ಥೆಯಿಲ್ಲದೆ ಅರಾಜಕತ್ವಕ್ಕೆ ಎಡೆಯಾಗುವುದು. ವಿಶೇಷ ಪರಿಸ್ಥಿತಿಯೊದಗಿದಾಗಲೂ, ವಿವಾದ ಗಳುಂಟಾದಾಗಲೂ ಮತ್ತು ಸಂಸ್ಥೆ ಮತ್ತು ವ್ಯಕ್ತಿಗಳು ಸ್ವಧರ್ಮ

ವನ್ನು ಮರೆತಾಗಲೂ, ರಾಷ್ಟ್ರದಿಂದ ಉಂಟಾದ ಈ ಅರಾಜಕತ್ವವನ್ನು ಪರಿಹರಿಸುವುದಕ್ಕೂ, ವ್ಯಕ್ತಿಯ ಆತ್ಮಗೌರವವನ್ನು ಉಳಿಸುವುದಕ್ಕೂ, ತಪ್ಪಿತಸ್ಥರಿಗೆ ಬಲಪ್ರಯೋಗದಿಂದಲಾದರೂ ತಕ್ಕ ವಿವೇಚನಾ ಜ್ಞಾನವನ್ನು ಕೊಡುವುದಕ್ಕೂ, ಒಂದು ನಿರ್ದಿಷ್ಟವಾದ ಮತ್ತು ಪರಮಾಧಿಕಾರವನ್ನು ಗಳಿಸಿರುವ ಒಂದು ಸಂಸ್ಥೆಯು ಅತ್ಯಾವಶ್ಯಕ. ಶಕ್ತಿಸಾಧನೆಯಿಂದ ಧರ್ಮ ವನ್ನು ಪರಿಪಾಲಿಸುವ ಸರ್ಕಾರಕ್ಕೂ ಪ್ರಜಾಪ್ರಭುತ್ವ ತತ್ವಕ್ಕೂ ಯಾವ ಅಂತರ ಅಥವಾ ವಿರೋಧವಿಲ್ಲ.

ಜನರ ಅಭಿಮತದ ಆಧಾರದಮೇಲೆಯೇ ರಾಜತ್ವ ಅಥವಾ ಕುಲೀನರ ಪ್ರಭುತ್ವ ಅಥವಾ ಪ್ರಜಾಪ್ರಭುತ್ವವು ರಚನೆಯಾಗಬೇಕು. ಪ್ರಜಾಪ್ರಭುತ್ವದ ಸರ್ಕಾರವಾಗಲಿ ಆಡಳಿತವಾಗಲಿ ರಚನಾತ್ಮಕವಾಗಿ ದಕ್ಷತೆಯಿಂದ ನಡೆಯಬೇಕಾದರೆ ಜನರ ಅಭಿಮತವೇನೆಂಬುದನ್ನು ಸುಲಭ ವಾಗಿ ತಿಳಿಯುವುದೂ ಮತ್ತು ಅವರ ಅಭಿಮತಗಳಿಗೆ ಅನುಗುಣವಾಗಿ ವರ್ತಿಸುವುದೂ ಅಗತ್ಯ. ಸಾರ್ವತ್ರಿಕ ಅಭಿಪ್ರಾಯವೇನೆಂದು ವಿವರಿಸು ವುದು ಕಷ್ಟಸಾಧ್ಯ. ಸರ್ಕಾರ ಮತ್ತು ರಾಷ್ಟ್ರಗಳಿಗೆ ಅನ್ವಯಿಸುವ ಮಾತು ಗಳೆಲ್ಲ ಪ್ರಜಾಭಿಮತವೆಂಬುದು ಒಂದು ವಾದ. ಪ್ರಜಾಭಿಮತದ ಒಂದು ಭಾಗ ಮಾತ್ರ ರಾಷ್ಟ್ರಗಳ ಕಾರ್ಯಕ್ಕೆ ಅನ್ವಯಿಸುವುದೆಂಬುದು ಮತ್ತೊಂದು ವಾದ. ರಾಷ್ಟ್ರದ ಜನರೆಲ್ಲ (People) ರಾಷ್ಟ್ರದ ಪ್ರಜೆಗಳು (Public) ಎಂದು ಹೇಳಲಾಗುವುದಿಲ್ಲ. ರಾಷ್ಟ್ರದಲ್ಲಿ ಏಳುವ ಸಮಸ್ಯೆಗಳನ್ನು ಪರಿಹರಿ ಸುವುದರಲ್ಲಿ ಏಕಭಾವನೆಯಿಂದ ಕೂಡಿ, ರಾಜಕೀಯದಲ್ಲಿ ಅವುಗಳನ್ನು ನಿಷ್ಪಕ್ಷಪಾತವಾಗಿ ಪ್ರಯೋಗಿಸಿ, ರಾಷ್ಟ್ರದ ಅಭ್ಯುದಯಕ್ಕೆ ಕಾರಣರಾಗು ವವರೇ ಪ್ರಜೆ; ಬಹು ಸಂಖ್ಯಾತರ ಅಭಿಮತವನ್ನು ಅಂಗೀಕರಿಸುವವರು ಪ್ರಜೆಯೆಂದು ಒಂದು ವಾದ; ಸರ್ಕಾರದ ರೀತಿನೀತಿಗಳ ನಿರ್ಧಾರದಲ್ಲಿ ಹೆಚ್ಚು ಪ್ರಭಾವ ಹೊಂದಿರುವವರೂ ಪ್ರಜೆ. ಪ್ಲೂರಲಿಸ್ಟು ಸಿದ್ಧಾಂತಗಳ ಪ್ರಕಾರ ಸಾಂಖಿಕ ಅಭಿಮತವೇ ಸಾರ್ವತ್ರಿಕ ಅಭಿಮತವಾಗುವುದು. ಸಾಮಾಜಿಕ ಅಭಿಮತದ ಒಂದು ಭಾಗ ಮಾತ್ರ ರಾಷ್ಟ್ರಕಾರ್ಯಕಲಾಪ

ಸರ್ಕಾರದ ಅಭಿಮತವನ್ನು ರೂಪಗೊಳಿಸುವುದರಿಂದ ಪ್ರಜಾಭಿಮತವು ಸುಶಿಕ್ಷಿತವಾಗಿ ಮುಂದುವರಿದರೆ ಸ್ವಚ್ಛಂದ ಮತ್ತು ಸರ್ವಸತ್ತಾತ್ಮಕ ಪ್ರಭುತ್ವಗಳ ರಚನೆಗೆ ಅವಕಾಶವಿರುವುದಿಲ್ಲ.

ಸಮಾಜ ಜೀವನದಲ್ಲಿ ಮತ್ತು ಸರ್ಕಾರದ ಆಡಳಿತದಲ್ಲಿ ಪ್ರಜಾಭಿಮತವು ಪ್ರಭಾವಯುತವಾದುದು. ಈಚಿನವರೆಗೂ ಸಮಾಜ ಮತ್ತು ವೈಯಕ್ತಿಕ ಜೀವನದಲ್ಲಿ ಮತದ ನಿರ್ದಿಷ್ಟ ಅಧಿಕಾರಕ್ಕೆ ಮನ್ನಣೆಯಿತ್ತೆಂಬುದು ಚರಿತ್ರೆಯಿಂದ ತಿಳಿಯುತ್ತದೆ. ಆ ಅಧಿಕಾರದಂತೆ, ಅದರ ವಿಧಿಯಂತೆ ಸರ್ಕಾರ ವರ್ತಿಸಬೇಕಾಗಿತ್ತು. ಮತದ ಅಧಿಕಾರದಲ್ಲಿ ವಿರಕ್ತ ಭಾವನೆಗಳು ಪ್ರಧಾನವಾದುದರಿಂದ ರಾಜಕೀಯದಲ್ಲಿ ಪ್ರಜಾಕಾಂಕ್ಷೆ ಉತ್ಸಾಹಗಳು ತಲೆದೋರಲಿಲ್ಲ. ಹದಿನೆಂಟನೆಯ ಶತಮಾನದಿಂದ ಈಚೆಗೆ ರಾಜಕೀಯದಲ್ಲಿ ಆಸಕ್ತಿಯುಂಟಾಗಿ ಪ್ರಜಾಪ್ರಭುತ್ವತತ್ತ್ವ ಪ್ರತಿಪಾದನೆಗಾಗಿ ಅನೇಕರು ಬದ್ಧಕಂಕಣರಾದರು. ವ್ಯಕ್ತಿಯು ತನ್ನ ಬುದ್ಧಿಶಕ್ತಿ ಮತ್ತು ವಿದ್ಯೆಯಿಂದ ಪಡೆದ ಜ್ಞಾನದಿಂದ ಅಭಿಮತವನ್ನು ರಚಿಸಲು ಸ್ವಾತಂತ್ರ್ಯವುಳ್ಳವನಾಗಿರಬೇಕು. ವ್ಯಕ್ತಿಯ ಸಹಜಗುಣ, ಸತ್ಯವನ್ನು ತಿಳಿಯುವುದು ಮತ್ತು ಪಾಲಿಸುವುದು. ಅಭಿಮತವು ಸಮಂಜಸವಾಗಿರಲಿ ಅಸಮಂಜಸವಾಗಿರಲಿ, ಸಮರ್ಪಕವಾಗಿರಲಿ ಇಲ್ಲದಿರಲಿ, ಅದರ ಬೆಳವಣಿಗೆಗೆ ಸುವ್ಯವಸ್ಥಿತವಾದ ಸನ್ನಿವೇಶವು ಏರ್ಪಡಬೇಕು. ಹಾಗಾದರೆ ಅಂತ್ಯದಲ್ಲಿ ವ್ಯಕ್ತಿಯು ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಸತ್ಯಾಂಶಗಳನ್ನು ಪ್ರತ್ಯೇಕಿಸಿ ತನ್ನ ವಿವೇಚನಾಪೂರ್ವಕವಾದ ಬುದ್ಧಿಕುಶಲತೆಗಳಿಂದ ಸತ್ಯವನ್ನೇ ಮುಂದುವರಿಸುವನೆಂದು ಮಿಲ್ಟನ್, ಜಫರ್ಸನ್, ಲಿಂಕನ್ ಮುಂತಾದ ಮೇಧಾವಿಗಳು ಸಾರಿದರು. ಪ್ರಜಾಭಿಮತವು ರಾಗದ್ವೇಷಗಳಿಂದ ಕೂಡಿರುವ ಸಂಭವವಿರುವುದರಿಂದ ವಿವೇಚನೆಯಿಂದ ರಾಜಕೀಯ ಸಮಸ್ಯೆಗಳನ್ನು ಪರಿಹರಿಸಲು ಮುಖ್ಯಸಾಧನವಲ್ಲವೆಂದು ಹತ್ತೊಂಬತ್ತನೆಯ ಶತಮಾನದಲ್ಲಿ ಮನವರಿಕೆಯಾಯಿತು. ಆದರೂ ರಾಜಕೀಯ ರಂಗದಲ್ಲಿ ಕಾರ್ಯಸಾಧನೆ ಪ್ರಧಾನವಾದುದೇ ಹೊರತು ಸಾಧನೆಯು

ರೀತಿಯು ವಿವೇಕಯುತವೂ ವೈಜ್ಞಾನಿಕವೂ ಆಗಿವೆಯೋ ಎಂಬ ಪ್ರಶ್ನೆಗಳು ಏಳುವುದಿಲ್ಲ. ಈ ಚಳುವಳಿಯನ್ನು ಎಲಿಯಟ್ಟನು "ಪ್ರಾಗ್ಮಾಟಿಕ್ ರಿವೋಲ್ಟ್ ಇನ್ ಪಾಲಿಟಿಕ್ಸ್ (Pragmatic Revolt in Politics) ಎಂದು ಕರೆದಿದ್ದಾನೆ. ಪಕ್ಷಗಳೂ, ರಾಷ್ಟ್ರದ ವ್ಯಾಪಾರ ವಾಣಿಜ್ಯ ಸಂಘಗಳೂ ವ್ಯಕ್ತಿಯ ಮನೋವಿಕಾರ, ದುರಭಿಮಾನ, ದ್ವೇಷಾಸೂಯೆಗಳಿಂದ ಕೂಡಿ ಚಿತ್ತವೃತ್ತಿಗೆ ಅನುಸಾರವಾಗಿ ಅವನ ಅಭಿಮತವನ್ನು ನಿರ್ಣಯಿಸುವುದೆಂದು ಗ್ರಾಹಮ್‌ವಾಲೇಸ್ ಮತ್ತು ಕಾರ್ವಿನ್ ರಾಜ್ಯಶಾಸ್ತ್ರಜ್ಞರು ವಾದಿಸಿದ್ದಾರೆ. ವ್ಯಕ್ತಿಯ ಮನೋವಿಕಾರ ಮತ್ತು ಭಾವನೆಗಳು ಅವನನ್ನು ದುರ್ಬಲಗೊಳಿಸುವುವು; ಆದರಿಂದ ಅವನು ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳು, ಅವುಗಳ ವ್ಯಾಪ್ತಿ ಮತ್ತು ಗೂಢಾರ್ಥಗಳನ್ನು ಅರಿಯದಂತಾಗುವನು. ಸಂಘ ಮತ್ತು ಕುಲ ಜೀವನಕ್ಕೆ ಪ್ರಾಶಸ್ತ್ಯ ಹೆಚ್ಚಿರುವುದರಿಂದ ವ್ಯಕ್ತಿಯ ಪ್ರಭಾವ, ಸಂಘ ಜೀವನದಲ್ಲಿ ಮುಚ್ಚಿಹೋಗಿದೆ; ಸಂಘದ ಧ್ಯೇಯ ಅಭಿಮತಗಳನ್ನು ವ್ಯಕ್ತಿಯು ಅಂಗೀಕರಿಸಬೇಕಾದ ಸನ್ನಿವೇಶ ಒದಗಿದೆ: ಅಲ್ಲದೆ ಆಧುನಿಕ ರಾಷ್ಟ್ರಗಳಲ್ಲಿ ರಚನಾತ್ಮಕ ಕಾರ್ಯಗಳು ಆರ್ಥಿಕಪ್ರಶ್ನೆಗಳನ್ನೊಳಗೊಂಡು ಸಂಕೀರ್ಣವಾಗಿವೆ. ವ್ಯಕ್ತಿಯ ಮತ್ತು ಸಮಾಜದ ಅಭಿಮತಕ್ಕೂ ಆರ್ಥಿಕರೀತಿನೀತಿಗಳೇ ತಳಹದಿ. ಅಭಿಮತವು ಕುಂಠಿತವಾಗುವುದಕ್ಕೂ ಪ್ರಭಾವಯುತವಾಗುವುದಕ್ಕೂ ಆರ್ಥಿಕಜೀವನವೇ ಮೂಲಭೂತವಾದುದು. ಈ ಕಾರಣದಿಂದಲೇ ಸಮಾಜದಲ್ಲಿ ಕುಲೀನ ಪ್ರಭುತ್ವವು ಏರ್ಪಟ್ಟರೆ ಸಮಾಜವು ಪ್ರಗತಿಪರವಾಗುವುದೆಂಬ ನಂಬಿಕೆಯು ಪ್ರಬಲವಾಗುತ್ತಿದೆ. ಪ್ರಜಾಭಿಮತದ ಆಧಾರದಮೇಲೆ ರಚಿತವಾದ ಪ್ರಜಾಪ್ರಭುತ್ವವು ನೀರಸವಾದುದೆಂದೂ ಅದು ಅಜ್ಞಾನಿಗಳ ಮತ್ತು ಸ್ವಚ್ಛಂದ ಪ್ರಭುತ್ವವಾಗುವುದೆಂದೂ ಸರ್‌ಹೆನ್ರಿಮೈನ್, ಮೆಂಕನ್, ಲಿಪ್‌ಮನ್, ಫ್ಯಾಗೆ ಮುಂತಾದ ರಾಜನೀತಿಜ್ಞರು ವಾದಿಸಿದ್ದಾರೆ. ಪ್ರಜಾಭಿಮತದಿಂದ ಪ್ರಗತಿಪರ ಭಾವನೆಗಳು ಉತ್ಪನ್ನವಾಗುವುದಿಲ್ಲ. ಅಭಿಮತವು ರಾಜಕೀಯದಲ್ಲಿ ರಾಗ

ದ್ವೇಷಾದಿಗಳಿಗೆ ಎಡೆಯಾಗಿ ಪ್ರಗತಿಪರ ಭಾವನೆ ಮತ್ತು ಸಾಧನೆಗಳಿಗೆ ಚ್ಯುತಿಬರಬಹುದು. ಆಧುನಿಕ ವೈಜ್ಞಾನಿಕಪ್ರಪಂಚದಲ್ಲಿ ಸದಾ ಹುಟ್ಟು ತ್ತಿರುವ ಹೊಸ ಹೊಸ ಕಲ್ಪನೆ ಮತ್ತು ಭಾವನೆಗಳಿಗೂ ಪೂರ್ವದಿಂದ ಬಂದ ಕಟ್ಟಳೆ ಸಂಪ್ರದಾಯಗಳಿಗೂ ತಿಕ್ಕಾಟವಿರುವಲ್ಲಿ ಪ್ರಜಾಭಿಮತವು ಸಂಪ್ರದಾಯಪರವಾಗಿಯೂ ಸ್ಥಿತಿಪಾಲಕವಾಗಿಯೂ ಇರುವುದರಿಂದಲೂ ನವೀನ ಕಲ್ಪನೆಗಳನ್ನು ತಿರಸ್ಕರಿಸುತ್ತಿರುವುದೇ ಇದಕ್ಕೆ ನಿದರ್ಶನವಾಗಿದೆ. ಅಲ್ಲದೆ ಪ್ರಜೆಗಳು ಪಕ್ಷಗಳ, ವೃತ್ತ ಪತ್ರಿಕೆಗಳ ಸಂಪಾದಕರ, ಅಥವಾ ಅವುಗಳ ಮಾಲೀಕರ ಮತ್ತು ಆಗರ್ಭಶ್ರೀಮಂತರ ಅಭಿಪ್ರಾಯಗಳಿಗೆ ಒಳ ಗಾಗಿ ಅವರ ಅಭಿಮತವನ್ನು ಸಮಗ್ರ ರಾಷ್ಟ್ರದ ಅಭಿಮತವೆಂದು ನಂಬಿ, ರಾಷ್ಟ್ರದ ಸಮಸ್ಯೆಗಳ ಪರಿಹಾರದಲ್ಲಿ ಅವರ ಅಭಿಮತವನ್ನು ಎತ್ತಿಹಿಡಿದು, ಸಾರ್ವಜನಿಕಹಿತಕ್ಕೆ ಧಕ್ಕೆತಂದು ಪ್ರಜಾಪ್ರಭುತ್ವವನ್ನು ನಿಸ್ಸಾರವಾದುದ ನ್ನಾಗಿಯೂ ದುರ್ಬಲವಾದುದನ್ನಾಗಿಯೂ ಮಾಡುವರು. ಸರ್ವಸತ್ತಾ ತ್ಮಕ ಪ್ರಭುತ್ವವು ಜರ್ಮನಿ, ಇಟಲಿ ರಾಷ್ಟ್ರಗಳಲ್ಲಿ ಏರ್ಪಡುವುದಕ್ಕೆ ಪ್ರಜಾಭಿಮತವು ಅಪಪ್ರಚಾರಕ್ಕೂ, ವೃತ್ತ ಪತ್ರಿಕೆ ಮತ್ತು ಪಕ್ಷಗಳ ನಾಯಕರ ನಿಯಂತ್ರಣಕ್ಕೂ ಸಿಕ್ಕಿರುವುದೇ ಪ್ರಧಾನ ಕಾರಣವಾಗಿದೆ. ನೀತಿಯುತವಾದ ವಿದ್ಯಾಭ್ಯಾಸದಿಂದ ವ್ಯಕ್ತಿಗೆ ಆತ್ಮವು ವಿಕಾಸವಾಗಿ, ಸ್ವಾರ್ಥರಹಿತವಾದ ಪಾರಮಾರ್ಥಿಕಭಾವನೆಯಿಂದಲೂ ಸಮಾಜ ಹಿತಭಾವನೆಯಿಂದಲೂ ಕೂಡಿದ ಅವನ ಅಭಿಮತವು ರಾಷ್ಟ್ರರಚನಾತ್ಮಕ ಕಾರ್ಯಗಳ ಆಧಾರವಾದರೆ ಪ್ರಜಾಪ್ರಭುತ್ವವು ಯಶಸ್ವಿಯಾಗುವುದು. ಸುಶಿಕ್ಷಿತವಾದ ಪ್ರಜಾಭಿಮತದ ಸಾಧನೆಯಿಂದ ಪ್ರಜಾಪ್ರಭುತ್ವವನ್ನು ಆದರ್ಶಪ್ರಭುತ್ವವನ್ನಾಗಿ ಪರಿವರ್ತಿಸಬಹುದೆಂದು ಪೆರಿಕ್ಲಿಸ್, ಪ್ಲೇಟೋ, ಅರಿಸ್ಟಾಟಲ್ ಮುಂತಾದ ಗ್ರೀಕ್ ತತ್ತ್ವಜ್ಞರು ಹೇಳಿದ್ದಾರೆ. ಆಧುನಿಕ ರಾಜಕೀಯ ಪ್ರಪಂಚದಲ್ಲಿ ಮಹಾತ್ಮ ಗಾಂಧಿಯವರು ವಿದ್ಯಾಭ್ಯಾಸದಿಂದ ಅಹಿಂಸಾತ್ಮಕ ಸತ್ಯಪರಿಪಾಲನೆಗಾಗಿ ಆಗ್ರಹಗೊಳ್ಳುವ ಮತ್ತು ಸತತವೂ

ದುಡಿಯುವ ವ್ಯಕ್ತಿಗಳ ಸಂಖ್ಯೆಯು ಹೆಚ್ಚಿದಷ್ಟೂ ಪ್ರಜಾಪ್ರಭುತ್ವವು ಪ್ರಗತಿಪರವಾಗಿ ಚಿರಕಾಲ ಬಾಳುವುದೆಂದು ಬೋಧಿಸಿದ್ದಾರೆ.

## ಆಧುನಿಕ ಸಮಾಜದಲ್ಲಿ ಆಚರಣೆಯಲ್ಲಿರುವ ಪ್ರಜಾಪ್ರಭುತ್ವ ಸರ್ಕಾರದ ಧ್ಯೇಯಗಳು

**ವ್ಯಕ್ತಿವಾದ:—** ಸಮಾಜದ ಕಟ್ಟುಕಾಯಿದೆಗಳನ್ನು ಕಾಪಾಡಲು ಸರ್ಕಾರವು ಅತ್ಯಾವಶ್ಯಕ. ತಿಕ್ಕಾಟಗಳಿಲ್ಲದೆ ಸ್ವಯಂಪ್ರೇರಣೆಯಿಂದಲೂ ಸಹಕಾರ ಸೌಹಾರ್ದಗಳಿಂದಲೂ ವರ್ತಿಸಲು ಪ್ರಜಾವರ್ಗದವರಿಗೆ ಸಾಧ್ಯವಲ್ಲದಿರುವುದರಿಂದ ಯಾವುದಾದರೊಂದು ರಾಜಕೀಯ ಸಂಸ್ಥೆಯು ಅಗತ್ಯವಾಗಿ ಬೇಕಾಗುವುದು. ಅರಾಜಕತತ್ವ ಪೋಷಕರೂ, ವ್ಯಕ್ತಿವಾದಿಗಳೂ, ಸಮಾಜವಾದಿಗಳೂ ಮತ್ತು ಇತರ ಸಿದ್ಧಾಂತಿಗಳೂ ತಮ್ಮ ಸಿದ್ಧಾಂತಗಳಿಗನುಗುಣವಾಗಿ ಸರ್ಕಾರದ ಸ್ವರೂಪ ಮತ್ತು ಜವಾಬ್ದಾರಿಯನ್ನು ವಿವರಿಸಿದ್ದಾರೆ. ವ್ಯಕ್ತಿವಾದವು ಪುರಾತನವಾದುದು. ಅರಿಸ್ಟಾಟಲ್ ಮೊದಲುಗೊಂಡು ಬೆಂತಮ್, ರಿಕಾರ್ಡೊ, ಮಿಲ್ ಮತ್ತು ಮ್ಯಾಲ್ತುಸ ಮುಂತಾದ ಪ್ರಸಿದ್ಧ ಸಿದ್ಧಾಂತಿಗಳು ವ್ಯಕ್ತಿವಾದವನ್ನು ಒಪ್ಪಿದ್ದಾರೆ. ವ್ಯಕ್ತಿಯ ಸ್ವತಂತ್ರ ವರ್ತನೆಯಲ್ಲಿ, ವ್ಯಕ್ತಿಗೆ ಸೇರಿದ ಕೆಲಸಗಳಲ್ಲಿ, ವ್ಯಕ್ತಿಯ ಶಾರೀರಕ, ಮಾನಸಿಕ, ಆರ್ಥಿಕ ಮತ್ತು ಸಜ್ಜೀವನ ಏಳಿಗೆಯಲ್ಲಿ ಸರ್ಕಾರದ ಆಕ್ರಮಣ ವಿರಕೂಡದೆಂಬುದು ವ್ಯಕ್ತಿವಾದ. ವ್ಯಕ್ತಿಯು ಸಮಾಜದ ಪ್ರಗತಿಗೆ ಮುಖ್ಯಸಾಧನ. ವ್ಯಕ್ತಿಯ ಅಭಿವೃದ್ಧಿ, ಗೌರವ ಮತ್ತು ನೈಸರ್ಗಿಕಗುಣಗಳ ಬೆಳವಣಿಗೆ ಮತ್ತು ಅವನ ಸ್ವಾತಂತ್ರ್ಯಸಂರಕ್ಷಣೆ, ರಾಷ್ಟ್ರಕ್ಕೆ ಹಿತಸಾಧಕ. ವ್ಯಕ್ತಿಗಳಿಗೆ ಇರುವ ಮತ್ತು ಸಂಸ್ಥೆಗಳಿಗೆ ಇರುವ ಪರಸ್ಪರ ಸ್ಪರ್ಧೆಗಳಿಂದ ರಾಷ್ಟ್ರದ ಜೀವನದ ಮಟ್ಟ ಏರುವುದು; ಆರ್ಥಿಕಸ್ಥಿತಿಯು ಉತ್ತಮವಾಗುವುದು. ಸಾಂಸ್ಕೃತಿಕ ಮತ್ತು ರಾಜಕೀಯಭಾವನೆಗಳ ತಿಕ್ಕಾಟದಿಂದ ಸರ್ಕಾರದ ಕೆಲಸಗಳಲ್ಲಿ ಜನರಿಗೆ ಉತ್ಸಾಹ ಹೆಚ್ಚುವುದು. ನಿರ್ಬಂಧ

ಆಡಳಿತವು ಬಹಳ ಕಡಮೆಯಾಗಿರುವ ರಾಷ್ಟ್ರಗಳು ಉತ್ತಮಸರ್ಕಾರಗಳೆಂದು ಜಫರ್ಸನ್‌ರಾಜನೀತಿಜ್ಞನು ಹೇಳಿದ್ದಾನೆ.

ಸಮಾಜವೆನ್ನುವುದು ವ್ಯಕ್ತಿಗಳ ಸಮುದಾಯ. ಜೀವನದ ನೋವನ್ನು ಕಡಮೆಮಾಡಿ ಸುಖವನ್ನು ಹೆಚ್ಚಿಸುವುದಕ್ಕಾಗಿ ವ್ಯಕ್ತಿಗಳು ಸಹಕರಿಸುವರು. ಸ್ಪರ್ಧೆಗಳಿಂದ ವ್ಯಕ್ತಿಯ ಪ್ರಭಾವವು ಹೆಚ್ಚುವುದು. ಆರ್ಥಿಕಪ್ರಪಂಚದಲ್ಲಿ ಸ್ಪರ್ಧೆಯಿಂದ ಪ್ರತಿಯೊಬ್ಬವ್ಯಕ್ತಿಯೂ ಅವನ ಪ್ರಯತ್ನಕ್ಕೆ ಅನುಗುಣವಾಗಿ ಪ್ರತಿಫಲವನ್ನು ಪಡೆಯುತ್ತಾನೆ. ಇದರಿಂದ ಕೂಲಿ, ಲಾಭ ಮತ್ತು ವಸ್ತುಗಳ ಬೆಲೆ ಮುಂತಾದುವುಗಳೆಲ್ಲ ಕ್ರಮಬದ್ಧವಾಗುವುವು. ಪ್ರಜಾಭಿವೃದ್ಧಿಯಿಂದ ಜೀವನಮಾತ್ರ ನಡಸಲು ಬೇಕಾಗುವಷ್ಟು ಕೂಲಿಮಾತ್ರ ದೊರೆಯುವುದು; ಸಂಸಾರದಲ್ಲಿ ಅನಾದರಣೆಯಿಂದ ಕಾರ್ಖಾನೆಗಳಲ್ಲಿ ದುಡಿಯಲು ಅವಶ್ಯವಾದ ಶ್ರಮಜೀವಿಗಳ ಸಂಖ್ಯೆ ಹೆಚ್ಚುವುದು. ತನಗೆ ಅತ್ಯಗತ್ಯವಾದ ವೃತ್ತಿಯನ್ನು ಆರಿಸಿ ತನ್ನ ಬುದ್ಧಿ ಕುಶಲತೆಗಳಿಂದ ತನ್ನ ಜೀವನದ ನಿರ್ವಾಹಕ್ಕೆ ಬೇಕಾದವಸ್ತುಗಳನ್ನು ಪಡೆಯುವ ಸ್ವಾತಂತ್ರ್ಯವನ್ನು ವ್ಯಕ್ತಿಯು ಪಡೆಯುವನು. ಉತ್ಪಾದನ ಶಕ್ತಿಯಿಂದ ವಸ್ತುನಿರ್ಮಾಣವಾಗಿ ವ್ಯಾಪಾರವು ವಿಶೇಷವಾಗಿ ಹೆಚ್ಚುವುದು; ಇದರಿಂದ ಸಾರ್ವಜನಿಕಹಿತವಾಗುವುದು. ವ್ಯಕ್ತಿಯ ಆಸ್ತಿಪಾಸ್ತಿಗಳನ್ನು ರಕ್ಷಿಸಿ ಕಠಿನವಾದ ಶಿಸ್ತಿನಿಂದ ರಾಷ್ಟ್ರಶಾಂತಿಯನ್ನು ಪಾಲಿಸುವುದು, ಲಾಭವನ್ನು ಹೆಚ್ಚಿಸಿಕೊಳ್ಳುವಂತೆ ವ್ಯಕ್ತಿಗಳನ್ನು ಪ್ರೇರಿಸಿ ಅವರಲ್ಲಿ ಸ್ಪರ್ಧೆಗೆ ಅವಕಾಶಕಲ್ಪಿಸಿ ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದು — ಇವು ರಾಷ್ಟ್ರಸರ್ಕಾರದ ಉದಾತ್ತ ಧ್ಯೇಯ ಮತ್ತು ಕಾರ್ಯ. ಸರ್ಕಾರವು ವ್ಯಕ್ತಿಗಳ ಪರಸ್ಪರ ಆಕ್ರಮಣದಿಂದಲೇ ಹುಟ್ಟಿ ಆಕ್ರಮಣದಿಂದಲೇ ಪ್ರಗತಿಪರವಾಗುವುದು. ಆದುದರಿಂದ ಸಾರ್ವಜನಿಕ ದೃಷ್ಟಿಯಿಂದ ವಿದ್ಯಾಭ್ಯಾಸ, ಆರೋಗ್ಯ ಮತ್ತು ಹೆಂಗಸರ ಮಕ್ಕಳ ಯೋಗಕ್ಷೇಮವನ್ನು ಶಾಸನರೂಪದಲ್ಲಿ ಕ್ರಮಪಡಿಸುವುದು ಅಸಮಂಜಸವೆಂದು ಹರ್ಬರ್ಟ್ ಸ್ಪೆನ್ಸರ್ ರಾಜನೀತಿಜ್ಞನು ಹೇಳಿದ್ದಾನೆ. ಇವನು

ಪ್ರತಿಪಾದಿಸಿದ ತತ್ವವು ಸಂಯುಕ್ತರಾಷ್ಟ್ರದಲ್ಲಿ (U.S.A.) ವಿಶೇಷ ವೃದ್ಧಿ ಹೊಂದಿ ವ್ಯಕ್ತಿಯ ಆಸ್ತಿಪಾಸ್ತಿಯ ಹಕ್ಕುಗಳು ಅತ್ಯಂತ ಪವಿತ್ರವಾದ ಮತ್ತು ಸ್ವಾತಂತ್ರ್ಯ ಸಾಧಕವಾದ ಹಕ್ಕೆಂದು ಮನವರಿಕೆಯಾಗಿ ರಾಷ್ಟ್ರ ವಿಧಾನದ ಮೂಲಾಧಾರ ತತ್ತ್ವದಲ್ಲಿ ಸೇರಿಸಲ್ಪಟ್ಟಿತು. ಕ್ರಮಕ್ರಮವಾಗಿ ವೃದ್ಧಿಹೊಂದುತ್ತಿರುವ ನ್ಯಾಯಾಂಗದ ಪರಮಾಧಿಕಾರ ತತ್ತ್ವಕ್ಕೂ ವ್ಯಕ್ತಿವಾದವು ಆಧಾರ ಭೂತವಾಗಿದೆ.

ಆರ್ಥಿಕ ಪ್ರಪಂಚದಲ್ಲಿ ವ್ಯಕ್ತಿವಾದದ ಅನುವಾದದಿಂದ ಔದ್ಯೋಗಿಕ ಆಂದೋಲನವಾಗಿ ಬಂಡವಾಳತನಕ್ಕೆ ಮಾರ್ಗವಾಯಿತು. ಲಾಭಕ್ಕಾಗಿ ಉತ್ಪಾದನೆ ಮತ್ತು ವಿನಿಮಯ ಮತ್ತು ವಿಶೇಷವಾಗಿ ಲಾಭಸಂಪಾದಿಸುವುದು, ಸಂಪತ್ತನ್ನು ಶೇಖರಿಸುವುದು— ಇವು ಬಂಡವಾಳತನದ ಹುಟ್ಟು ಗುಣ. ಮಾನಸಿಕ, ವೈಜ್ಞಾನಿಕ, ಸರ್ಕಾರ, ವ್ಯಾಪಾರ, ವ್ಯವಹಾರ— ಈ ಪ್ರಪಂಚಗಳಲ್ಲಿ ಧರ್ಮಶ್ರದ್ಧೆಗೆ ಹೆಚ್ಚು ಮನ್ನಣೆಯಿಲ್ಲ. ಲೌಕಿಕ ದೃಷ್ಟಿಯೇ ಪ್ರಾಧಾನ್ಯ. ಸ್ಪರ್ಧೆಯಿಂದಲೇ ಪ್ರಗತಿ. ಸಂಪತ್ತಿನ ಶೇಖರಣೆಯಲ್ಲಿ ಸರ್ಕಾರದ ನಿಯಂತ್ರಣ ಸಂಕುಚಿತವಾಗಿರುವುದು. ಸಂಪತ್ತಿನ ಶೇಖರಣೆಗಾಗಿ ಬ್ಯಾಂಕುಗಳು, ಸ್ಟಾಕ್‌ಬ್ರೋಕರುಗಳು, ಕಂಪೆನಿಗಳು, ಟ್ರಸ್ಟುಗಳು, ಏರ್ಪಟ್ಟಿವೆ; ಬಂಡವಾಳವನ್ನು ಸೃಷ್ಟಿಸಿ ವಿವಿಧ ಸಾಧನೆಗಳಿಂದ ತಮ್ಮ ಅರ್ಥಿಕ ಶಕ್ತಿಯನ್ನು ಹೆಚ್ಚಿಸಿಕೊಂಡು ಸಮಾಜದ ಜೀವನವನ್ನು ನಿಯಂತ್ರಿಸುವುದು ಈ ವಿವಿಧ ಸಂಸ್ಥೆಗಳ ಪ್ರಧಾನಕಾರ್ಯಗಳಾಗಿವೆ.

**ಸಮಾಜವಾದ:—** ವ್ಯಕ್ತಿವಾದವು ಮತ್ತು ಬಂಡವಾಳತನವಾದವು ಸಮಾಜದ ಆರ್ಥಿಕಜೀವನವನ್ನು ನಿರ್ಧರಿಸಿ ಸರ್ಕಾರವನ್ನು ನಿಯಂತ್ರಿಸುವುದು. ಹೀಗೆ ಉತ್ಪನ್ನವಾದ ಸಮಾಜದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಮಾಜವಾದವು ಹುಟ್ಟಿತು. ಔದ್ಯೋಗಿಕ ಕ್ರಾಂತಿಯ ಫಲವಾಗಿ ಕಾರ್ಖಾನೆಗಳ ಸೃಷ್ಟಿ, ಯಂತ್ರಗಳ ಆವಿಷ್ಕರಣ, ಸಮಾಜ ಉತ್ಪಾದನೆಗಳ ಹತೋಟಿ, ಬಂಡವಾಳಗಾರರ ಪ್ರಾಧಾನ್ಯ; ಬಂಡವಾಳಗಾರರ ಅಧೀನತೆಗೆ

ಸಿಕ್ಕಿದ ಕಾರ್ಮಿಕವರ್ಗ; ಅವರ ಅಲ್ಪ ಕೂಲಿ, ಭಯಂಕರ ಸ್ಪರ್ಧೆಯಿಂದ ಸ್ಥಾನಪಲ್ಲಟ, ಬಡತನ ಮತ್ತು ಕಷ್ಟಜೀವನ; ಸಂಪತ್ತಿನ ಶೇಖರಣೆಯಿಂದ ಸಮಾಜ ಉತ್ಪಾದನಗಳನ್ನು ಹತೋಟಿಯಲ್ಲಿಟ್ಟುಕೊಂಡು ಶ್ರಮಪಡದೆ ನಿರಂತರವೂ ಲಾಭವನ್ನು ಹೆಚ್ಚಿಸಿಕೊಂಡು ಸುಖ ಜೀವನವನ್ನು ನಡೆಸುವ ಶ್ರೀಮಂತರು; — ಈ ನೂತನ ಪರಿಸ್ಥಿತಿಯಿಂದ ಒಂದು ಕಡೆ ಯೋಗ್ಯತೆಗೆ ಅನುಗುಣವಾದ ಪ್ರತಿಫಲವಿಲ್ಲ. ಸಂಪತ್ತನ್ನು ಶೇಖರಿಸುವ, ಶೇಖರಿಸುತ್ತಿರುವ ಬಂಡವಾಳಗಾರರಿಗೆ ಶ್ರಮರಹಿತವಾದ ವಿಶೇಷ ಪ್ರತಿಫಲ; ಇನ್ನೊಂದು ಕಡೆ ಯಂತ್ರಗಳ ಆವಿಷ್ಕರಣದಿಂದ ಸಮಾಜದ ಸಂಪತ್ತು ವೃದ್ಧಿಯಾಗಿ ದವಸಧಾನ್ಯಗಳು ವಿಶೇಷವಾಗಿ ಶೇಖರಿಸಲ್ಪಟ್ಟರೂ ಕಡುತರವಾದ ದಾರಿದ್ರ್ಯ ಮತ್ತು ಶ್ರಮಜೀವಿಗಳ ಶೋಚನೀಯವಾದ ಪರಿಸ್ಥಿತಿ. ಎಲ್ಲಿ ಸಮಾಜದ ಬಹುಭಾಗಕ್ಕೆ ಉತ್ಪತ್ತಿಯಾದ ಪದಾರ್ಥಗಳ ಮೇಲೆ ಹತೋಟಿಯಿಲ್ಲವೋ ಅಲ್ಲಿ ಹಸಿವು ಬಾಯಾರಿಕೆಗಳಿಂದ ಕೂಡಿದ ಒಂದು ದರಿದ್ರ ಪರಿಸ್ಥಿತಿ ಬಹುಸಂಖ್ಯಾತವರ್ಗಕ್ಕೆ ಸಹಜ. ಈ ದಾರಿದ್ರ್ಯ ಜೀವನದ ಪರಿಹಾರಕ್ಕಾಗಿ ಪರ್ಯಟನೆ ಮತ್ತು ಚಲನೆ. ಈ ಸ್ಥಿತಿಯು ಶ್ರಮರಹಿತ ಸುಖಜೀವನ ಮತ್ತು ಭೋಗದಿಂದ ಕೂಡಿದ ಆಗರ್ಭ ಶ್ರೀಮಂತ ಸೋಮಾರಿ ವರ್ಗದ ವರ್ತನೆಯಿಂದ ತೀಕ್ಷ್ಣರೂಪವನ್ನು ತಾಳುವುದು. ಬಂಡವಾಳಗಾರರಿಗೆ ಪೌರ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳನ್ನು ಗಳಿಸುವುದರಲ್ಲಿ ವಿಶೇಷಗೌರವ; ನಿರಾಶ್ರಿತರಾದವರಿಗೆ ವ್ಯಕ್ತಿ ಮತ್ತು ಪೌರ ಸ್ವಾತಂತ್ರ್ಯ ರಹಿತವಾದ ಕುಂಠಿತಜೀವನ. ಸಮಗ್ರವಾಗಿ ನೋಡಿದಲ್ಲಿ ಸಮಾಜದ ಮೂಲಾಧಾರವಾದ ತತ್ವಗಳು, ಸಮಾಜ ರಚನೆ, ಸರ್ಕಾರದ ಕಾರ್ಯಕಲಾಪಗಳೆಲ್ಲವೂ ಅಸಮಂಜಸವಾಗಿ ಕಾಣುವುವು.

ಹತ್ತೊಂಬತ್ತನೆಯ ಶತಮಾನದಿಂದ ಈಚೆಗೆ ಸಮಾಜದ ಸಾಮೂಹಿಕ ಉಪಯೋಗಕ್ಕಾಗಿ ಸಮಸ್ತ ಸಲಕರಣೆಗಳೂ ಸಾರ್ವ ಜನಿಕರ ಸ್ವತ್ತಾಗಬೇಕೆಂದೂ, ಸರ್ಕಾರವೇ ಅಥವಾ ಸಮಾಜಹಿತ ಸಾಧಕವಾದ ಸರ್ಕಾರವೇ ಸ್ವತ್ತಿನ ಮಾಲೀಕತ್ವವನ್ನು ಹೊಂದಿರಬೇಕು ಎಂಬ ಭಾವನೆ ಬಂಡವಾಳತನ

ವಾದಕ್ಕೆ ವಿರುದ್ಧವಾಗಿ ಕ್ರಮಕ್ರಮವಾಗಿ ಬೆಳೆಯುತ್ತಬಂದಿದೆ. ಸಮಾಜದಲ್ಲಿ ಸಮತೆ ಅಥವಾ ಸಮತಾ ಧರ್ಮಪರಿಪಾಲನೆ, ವ್ಯಕ್ತಿಗಿಂತ ಸಮಾಜವೇ ದೊಡ್ಡದು ಎಂಬ ಭಾವನೆ, ಸಮಾಜ ಕ್ಷೇಮಕ್ಕಾಗಿ ವ್ಯಕ್ತಿಯ ನಿಯಂತ್ರಣ, ಆರ್ಥಿಕ ವಿಚಾರದಲ್ಲಿ ಪಾರಮಾರ್ಥಿಕ ಭಾವನೆ- ಇವುಗಳಿಂದ ಸಮಾಜ ಜೀವನದ ಮಟ್ಟವನ್ನು ಏರಿಸಬೇಕೆಂಬ ಪವಿತ್ರವಾದ ಆಕಾಂಕ್ಷೆ ಸಮಷ್ಟಿ ಸಿದ್ಧಾಂತದಲ್ಲಿ ಅಡಗಿದೆ. ನೂತನ ಆರ್ಥಿಕ ರಚನೆಯನ್ನು ನಿರ್ಮಿಸುವ ಸಲುವಾಗಿ ಯುಕ್ತವಾದ ಅಧಿಕಾರವನ್ನು ಸಂಪಾದಿಸಲು ರಾಜಕೀಯ ಆಂದೋಳನಗಳನ್ನು ಸೌಮ್ಯರೀತಿಯಿಂದ ನಡಸಬೇಕೆಂಬುದೇ ಸಮಾಜವಾದದ ಮೂಲತತ್ತ್ವ. ಎಂದರೆ ಆರ್ಥಿಕ ಸಿದ್ಧಾಂತ ಇದರ ಆಧಾರದ ಮೇಲೆ, ಸಮಾಜರಚನೆ ಆರ್ಥಿಕ ರಚನೆಯನ್ನು ಸ್ಥಾಪಿಸಲು ಅಧಿಕಾರ ಹೊಂದುವುದು. ಇವು ಸಮಾಜವಾದದ ಮೂಲತತ್ತ್ವಗಳು. ಈ ತತ್ತ್ವಗಳನ್ನು ಕ್ರಾಂತಿಯ ಮೂಲಕ ಸಾಧಿಸುವುದಕ್ಕೆ ಸಾಮ್ಯವಾದ (Communism) ಎಂದು ಕರೆಯುವರು. ಆರ್ಥಿಕ ತಳಪಾಯವನ್ನು ನೂತನವಾಗಿ ನಿರ್ಮಿಸಲು ರಾಜಕೀಯ ಉದ್ಯಮಗಳು ಉಗ್ರರೀತಿಯಲ್ಲಿ ನಡದು ಅನೇಕ ರಾಷ್ಟ್ರಗಳಲ್ಲಿ ಸಮಾಜವಾದ ಸಿದ್ಧಾಂತಕ್ಕೆ ಹೆಚ್ಚು ಪ್ರಾಬಲ್ಯವನ್ನುಂಟುಮಾಡಿವೆ. ಸಾರ್ವಜನಿಕಮತಾಧಿಕಾರ, ಪ್ರತ್ಯಕ್ಷ ಚುನಾವಣೆ ಮತ್ತು ಶಾಸನ ಸಭೆಯ ರಚನೆ, ಅನುಪಾತಿಕ ಪ್ರಾತಿನಿಧ್ಯ, ಇನಿಷಿಯೇಟಿವ್, (Initiative) ರೆಫೆರೆಂಡಮ್ (Referendum) ಮತ್ತು ರಿಕಾಲ್ (Recall) ಮುಂತಾದ ರಾಷ್ಟ್ರ ಸರ್ಕಾರ ನಿಯಂತ್ರಣದ ಅಭಿಮತಾಧಾರಕ ಸಾಧನೆಗಳು, ಶಾಸನರಚನೆಯಲ್ಲಿ ನ್ಯಾಯಾಂಗದ ಅಧಿಕಾರವನ್ನು ನಿಯಂತ್ರಿಸುವುದು; ಅಲ್ಲದೆ ಶ್ರಮಜೀವಿಗಳಿಗೆ ತಕ್ಕ ಕೂಲಿ, ವಿಶ್ರಾಂತಿ, ಯೋಗ್ಯತೆಗೆ ತಕ್ಕ ಕೆಲಸ, ವಸತಿ, ನಿರ್ಮಲ ಜೀವನಕ್ಕೆ ಅನುಗುಣವಾದ ಸೌಕರ್ಯ ಕಲ್ಪನೆ, ಜೀವವಿಮೆ, ಆಕಸ್ಮಿಕವಾಗಿ ಒದಗುವ ದುರ್ಘಟನೆಗಳಲ್ಲಿ ಶ್ರಮಜೀವಿಗಳಿಗೆ ಕನಿಕರ ಮತ್ತು ಪರಿಹಾರದ್ರವ್ಯ— ಇವೇ ಮುಂತಾದುವುಗಳನ್ನು ಸಮಾಜವಾದಿಗಳು ಬಯಸುತ್ತಾರೆ.

ರಾಷ್ಟ್ರದಲ್ಲಿ ಉತ್ಪಾದನೆ ಮತ್ತು ವಿನಿಮಯಗಳನ್ನು ನಿಯಂತ್ರಿಸಿ ನೂತನ ವರ್ಗರಹಿತ ಸಮಾಜವನ್ನು ಸೃಷ್ಟಿಸುವುದು ಸಾಮ್ಯವಾದದ ತತ್ತ್ವವಾದುದರಿಂದ ಅದು ಧ್ಯೇಯಾತ್ಮಕವಾದುದು; ಈ ವಾದವು ಕಾರ್ಮಿಕ ವರ್ಗದ ಅಧಿಕಾರವನ್ನು ಸಾಮಾಜಿಕವಿಪ್ಲವ ಮತ್ತು ಕ್ರಾಂತಿಸಾಧನೆಯನ್ನಾಗಿ ಉಪಯೋಗಿಸಿ ನೂತನ ಆರ್ಥಿಕ ಸಿದ್ಧಾಂತದ ಮೇಲೆ ಸಮಾಜವನ್ನು ರಚಿಸಲು ತೊಡಗಿದೆ. ಈ ಕ್ರಾಂತಿಕಾರಕ ಭಾವನೆಗಳನೂ ಪ್ರಪಂಚದ ಕಾರ್ಮಿಕವರ್ಗಕ್ಕೆಲ್ಲ ಶಾಸ್ತ್ರೀಯ ರೀತಿಯಲ್ಲಿ ಕ್ರಾಂತಿ ಮಾರ್ಗವನ್ನು ತೋರಿಸಿ, ಕ್ರಾಂತಿಸಾಧನೆಯಿಂದ ಕಾರ್ಮಿಕ ಪ್ರಭುತ್ವವನ್ನು ಸ್ಥಾಪಿಸುವ ಆಲೋಚನೆಯನ್ನೂ ಪ್ರಪಂಚದ ಮುಂದಿಟ್ಟ ಮಹಾಪುರುಷ ಕಾರಲ್ ಮಾರ್ಕ್ಸ್. ಕಾರ್ಮಿಕರ ಎಲ್ಲ ಬೆಲೆಗೂ ಶ್ರಮವೇ ಮೂಲ (Labour Theory of Value) ಎಂಬುದು ಮಾರ್ಕ್ಸ್‌ನವಾದ. ಇದು ಆಧುನಿಕ ಸಮಾಜವಾದದ ಅಥವಾ ಸಾಮ್ಯವಾದದ ತಳಹದಿ. ಭೂಮಿಯ ಸ್ವತ್ತು ಸಂಪತ್ತು ವ್ಯಕ್ತಿಗಾಗಲಿ ವ್ಯಕ್ತಿಯ ಸಂತತಿಗಾಗಲಿ ಸೇರಕೂಡದು; ವಾಹನಗಳು, ಕಾರ್ಖಾನೆಗಳು, ಉತ್ಪತ್ತಿಯ ಸಾಧನಗಳು, ವ್ಯವಸಾಯದ ಭೂಮಿಯ ಪುನರ್ವಿಭಜನೆ ಮತ್ತು ಉತ್ತಮಗೊಳಿಸುವಿಕೆ, ಬ್ಯಾಂಕುಗಳು — ಇವುಗಳ ಕೇಂದ್ರ ಅಧಿಕಾರವು ಪ್ರಜಾ ಸರ್ಕಾರದ ಕೈಯಲ್ಲಿರತಕ್ಕದ್ದು ; ವ್ಯಕ್ತಿಯು ಶ್ರಮಪಡುವ ನಿರ್ಬಂಧ, ಸಾರ್ವಜನಿಕ ವಿದ್ಯಾಭ್ಯಾಸ, ಆರ್ಥಿಕ ಉತ್ಪತ್ತಿಯಲ್ಲಿ ವ್ಯಕ್ತಿಗೆ ತನ್ನ ಯೋಗ್ಯತೆಗೆ ತಕ್ಕಂತೆ ಸಲಹೆ — ಇವೇ ಮುಂತಾದ ಸುಧಾರಣೆಗಳು ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಅಡಗಿವೆ.

ಆರ್ಥಿಕ ಮತ್ತು ಸಮಾಜ ಸಿದ್ಧಾಂತದ ಆಧಾರದ ಮೇಲೆ ರಚಿತವಾದ ಸೋವಿಯಟ್ ಸಮಾಜವು ಮಾರ್ಕ್ಸ್‌ನ ಮುಖ್ಯತತ್ತ್ವವನ್ನು ರಷ್ಯದಲ್ಲಿ ಕಾರ್ಯಕಾರಿಯಾಗುವಂತೆ ರಚಿಸಿದೆ. ಬಡಜನರ ಉದ್ಧಾರಕ್ಕಾಗಿ ಮತ್ತು ಶ್ರಮಜೀವಿಗಳ ಪರಿಹಾರಕ್ಕಾಗಿ ಸೋವಿಯಟ್ ಸರ್ಕಾರವು ತನ್ನ ಅಧಿಕಾರವನ್ನು ದೃಢ ಪಡಿಸಿಕೊಂಡು ಮಕ್ಕಳ ಪುಷ್ಟಿ, ಆರೋಗ್ಯ, ವಿದ್ಯಾಭ್ಯಾಸ,

ವ್ಯಕ್ತಿ ಮತ್ತು ಪೌರ ಸ್ವಾತಂತ್ರ್ಯ ಮುಂತಾದ ಪ್ರೋತ್ಸಾಹಕರವಾದ ಅಭಿಪ್ರಾಯಗಳಿಗೆ ಮನ್ನಣೆಕೊಟ್ಟು, ಅನೇಕ ರೀತಿಯಲ್ಲಿ ಹೊಸ ಆರ್ಥಿಕ ನೀತಿಯನ್ನು ರೂಢಿಗೆ ತಂದಿದೆ. ಶ್ರಮವಿಲ್ಲದೆ ಆಹಾರವಿಲ್ಲ; ಜೀವನಕ್ಕಾಗಿ ಶ್ರಮಪಡುವ ನಿರ್ಬಂಧ—ಇವೆರಡೂ ಸೋವಿಯಟ್ ಸಾಮ್ಯವಾದದ ಗಹನವಾದ ತತ್ತ್ವಗಳು. ಈ ಬಗೆಯ ರಾಷ್ಟ್ರರಚನೆಗೆ ಕ್ರಾಂತಿಚಳುವಳಿ, ಹಿಂಸಾತ್ಮಕವೃತ್ತಿಗಳು ಅತ್ಯಾವಶ್ಯಕವಾದಸಾಧನಗಳೆಂಬ ಮಾರ್ಕ್ಸ್‌ನ ಪ್ರತಿವಾದನೆ ನಿಂದಾರ್ಹವಾದರೂ ಸೋವಿಯಟ್ ಸರ್ಕಾರವು ಇದನ್ನು ತಾತ್ಕಾಲಿಕವಾಗಿ ಮನ್ನಿಸಿ ತನ್ನ ಉದಾತ್ತಧ್ಯೇಯಗಳನ್ನು ಕ್ರಾಂತಿ ಮತ್ತು ಕಾರ್ಮಿಕವರ್ಗ ಪ್ರಭುತ್ವದ ಮೂಲಕವೇ ಸಾಧಿಸಿಕೊಂಡಿದೆ.

**ಫಾಸಿಸ್ಟ್ ಸಿದ್ಧಾಂತ:**– ಬಂಡವಾಳತನವಾದಕ್ಕೂ ಸಮಾಜವಾದಕ್ಕೂ ಪರ್ಯಾಯವಾಗಿ ಉದ್ಭವಿಸಿದುದು ಫ್ಯಾಸಿಸ್ಟ್ ಸಿದ್ಧಾಂತ. ಈ ಸಿದ್ಧಾಂತವು ಲಿಬರಲ್ ರಾಜಕೀಯ ವಾದಗಳ ಸುಧಾರಣೆಗಳನ್ನೂ, ಪಾರ್ಲಿಮೆಂಟು ಪ್ರಭುತ್ವಾಧಿಕಾರವನ್ನೂ ಪ್ರಜಾಪ್ರಭುತ್ವದ ತತ್ತ್ವಗಳನ್ನೂ ಮತ್ತು ಅವುಗಳ ಅನುಕರಣವನ್ನೂ ವಿರೋಧಿಸುತ್ತದೆ. ಬಹು ಸಂಖ್ಯಾತರಿಗೆ ರಾಜನೀತಿ ನಿರ್ಧಾರ, ಶಾಸನಾಧಿಕಾರ, ವಿದೇಶಾಂಗನೀತಿ, ಸರ್ಕಾರದಲ್ಲಿ ಸಹಕರಿಸುವಿಕೆ ಮುಂತಾದ ಕಾರ್ಯಗಳಲ್ಲಿ ಮನ್ನಣೆಯಿಲ್ಲ, ಅಭಿಮತದಾತರ ಹಕ್ಕುಗಳು, ಸಾರ್ವತ್ರಿಕ ಚುನಾವಣೆ ಅಭಿಮತದಾರರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು, ಅಭಿಮತದಾತರಿಗೆ ರಾಷ್ಟ್ರದ ಪರಮಾಧಿಕಾರವು ಸೇರಿದೆಯೆಂಬ ಪ್ರಜಾಪ್ರಭುತ್ವ ತತ್ತ್ವಗಳು—ಇವು ಪ್ರಕೃತಿಯ ಧರ್ಮಕ್ಕೆ ವಿರುದ್ಧವಾಗಿ ಕಾಣುವುವು. ಮನುಷ್ಯನ ದೇಹಧರ್ಮದಲ್ಲಿ ಸಮಸ್ತಾಂಗಗಳು ಹೇಗೆ ಮೆದುಳಿಗೆ ಅಧೀನವಾಗಿವೆಯೋ ಹಾಗೆಯೇ ರಾಷ್ಟ್ರನಿರ್ಮಾಣದಲ್ಲಿ ದಕ್ಷತೆ ಮೇಧಾಶಕ್ತಿ ಮುಂತಾದ ಗುಣಗಳಿಂದ ಪರಿಪೂರ್ಣವಾದ ಉತ್ತಮ ವರ್ಗದ ಅಧಿಕಾರಕ್ಕೆ ಸಾರ್ವಜನಿಕ ಅಧೀನತೆ ಇರಬೇಕು. ರಾಷ್ಟ್ರವು ವ್ಯಕ್ತಿಗಳನ್ನು ಒಟ್ಟುಗೂಡಿಸುವ ಒಂದು ಸಂಸ್ಥೆಯಲ್ಲ. ಅಲ್ಲಿ ವ್ಯಕ್ತಿಗೆ ಪ್ರಾಧಾನ್ಯವಿದೆ. ಅಂತರಾತ್ಮದಿಂದ ಕೂಡಿದ ದೇಹದಂತೆ ರಾಷ್ಟ್ರವೂ

ಕೂಡ. ಅಂತರಾತ್ಮ ಒಂದು ವಿಧವಾದ ಧರ್ಮದಿಂದ ಪೂರ್ಣತೆಯನ್ನು ಪಡೆದಿದೆ. ಅಂತರಾತ್ಮವು ಹೇಗೆ ದೇಹದ ಅಂಗಗಳಿಂದ ಪ್ರತ್ಯೇಕವಾಗಿ ಅಂಗಚಲನೆಗಳಲ್ಲಿ ಅಂತರ್ಗತವಾಗಿ ಶಕ್ತಿದಾಯಕವಾಗಿದೆಯೋ ಹಾಗೆಯೇ ರಾಷ್ಟ್ರವು ವ್ಯಕ್ತಿಗಳಿಂದ ಪ್ರತ್ಯೇಕವಾಗಿ ತನ್ನ ಚೇತನದಿಂದ ರಾಜ್ಯಾಂಗ ಮತ್ತು ಉಪಾಂಗಗಳನ್ನೂ ಮತ್ತು ವ್ಯಾವಹಾರಿಕ ಜೀವನದಲ್ಲಿ ಕಂಡುಬರುವ ಸಮಸ್ತ ಸಾಧನೆಗಳನ್ನೂ ರಾಷ್ಟ್ರಕಾರ್ಯಸಾಧನೆಗಾಗಿ ಹುರಿದುಂಬಿಸುತ್ತದೆ.

ಫ್ಯಾಸಿಸ್ಟ್ ವಾದದ ಪ್ರಕಾರ ಸಮಾಜದಲ್ಲಿ ಒಂದು ಗೋಪುರದಂತೆ ಅನೇಕ ವರ್ಗ ಮತ್ತು ತರಗತಿಗಳ ರಚನೆಯಾಗಬೇಕು. ರಾಷ್ಟ್ರನಾಯಕನು ಈ ಸಮಾಜಗೋಪುರಕ್ಕೆ ಕಲಶದಂತಿದ್ದಾನೆ. ಇವನು ಸ್ವಯಂ ಪ್ರೇರಣೆಯಿಂದಲೇ ಸೃಷ್ಟಿಯಾದವನು; ಪ್ರಜಾಸಮುದಾಯದಿಂದ ಚುನಾಯಿತನಾದವನಲ್ಲ. ರಾಷ್ಟ್ರದಲ್ಲಿ ಉತ್ಪಾತಕರವಾದ ಘಟನೆಗಳು ನಡದು ರಾಷ್ಟ್ರಧರ್ಮಕ್ಕೆ ಗ್ಲಾನಿ ಒದಗಿದಾಗ ಸಾರ್ವಜನಿಕರ ಉದ್ಧಾರಕ್ಕಾಗಿ ಸಮಸ್ತ ಪ್ರಜಾವರ್ಗದಲ್ಲಿ ಅಂತರಾತ್ಮನಾಗಿ ದೈವನಿಯಾಮಕನಂತೆ ನಾಯಕನು ಅವತರಿಸುವನು. ಸೋಪಾನಗಳೋಪಾದಿಯಲ್ಲಿ ಸಮಾಜ ರಚನೆಯಾಗಿ ಅವುಗಳಂತೆ ಅನುಕ್ರಮವಾಗಿ ಜನರು ಅಧಿಕಾರಗಳನ್ನು ಸರ್ಕಾರದಲ್ಲಿ ಗಳಿಸುತ್ತಾರೆ. ಸಮಾಜದಲ್ಲಿ ಕೆಳಗಿನ ಅಂತಸ್ತಿನವರು ಮೇಲಿನ ಅಂತಸ್ತಿನವರನ್ನು ನೇಮಿಸುವುದು ಸಮಾಜಧರ್ಮ. ಅತ್ಯಂತ ಕೆಳಗಿನ ಅಂತಸ್ತಿನಲ್ಲಿರುವವರು ಇತರ ವರ್ಗಗಳ ಕ್ಷೇಮಕ್ಕಾಗಿ ದುಡಿಯಬೇಕಾಗಿರುವುದರಿಂದ ಅವರಿಗೆ ಯಾವ ವಿಧವಾದ ಸ್ವಾತಂತ್ರ್ಯವೂ ಇಲ್ಲ. ಸಮಾಜದಲ್ಲಿ ಮಾನ್ಯಸ್ಥಾನ ಪಡೆದಿರುವವರು ಒಟ್ಟು ಸಮಾಜದ ಹಿತಕ್ಕಾಗಿ ಅಧಿಕಾರವನ್ನುಗಳಿಸಿ ಪ್ರಜಾನುಮತಿಯಿಂದ ಫಿಲಾಸಫರ್ ಗಾರ್ಡಿಯನ್ಸ್ ಅಥವಾ ಧರ್ಮ ಪ್ರವರ್ತಕರಾದ ರಾಷ್ಟ್ರಪ್ರಭುಗಳಂತೆ ವರ್ತಿಸುವರು.

ಫ್ಯಾಸಿಸ್ಟ್ ತತ್ತ್ವದಲ್ಲಿ ವ್ಯಕ್ತಿಗೆ ಸ್ವಾತಂತ್ರ್ಯವಿಲ್ಲ. ರಾಷ್ಟ್ರವು ತನ್ನ ಹಿತಸಾಧನೆಗಾಗಿ ಎಷ್ಟು ಸ್ವಾತಂತ್ರ್ಯವನ್ನು ವ್ಯಕ್ತಿಗೆ ಒದಗಿಸಬಹುದೋ ಅಷ್ಟೇ ಸ್ವಾತಂತ್ರ್ಯವನ್ನು ವ್ಯಕ್ತಿಗಾಗಿ ರಚಿಸುವುದು. ವ್ಯಕ್ತಿಯು ತನ್ನ

ವಿಕಾಸಕ್ಕಾಗಿ ಸ್ವಾತಂತ್ರ್ಯವು ನೈಸರ್ಗಿಕವಾದುದೆಂದು ಪ್ರತಿಪಾದಿಸುವುದು ರಾಷ್ಟ್ರಕ್ಕೆ ಹಾನಿ. ರಾಷ್ಟ್ರ ಅಥವಾ ಸಮಾಜದ ಅನುಮತಿಯಿದ್ದರೇನೇ ಸ್ವಾತಂತ್ರ್ಯ. ರಾಷ್ಟ್ರದ ಅಧಿಕಾರ ಮತ್ತು ವರ್ತನೆ ಚರ್ಚಾಸ್ಪದವಾದುದೂ ಅಲ್ಲ; ಯಾವ ನಿಯಂತ್ರಣಕ್ಕೂ ಸಿಕ್ಕುವುದಿಲ್ಲ. ಫಿಸ್ಟೆ, ಹೇಗೆಲ್, ಬರ್ನ್ಹಾರ್ಡಿ ಮತ್ತು ಹಿಟ್ಲರ್ ಹೇಳುವಂತೆ ಸಚೇತನವಾದ ಸಮಾಜವು ವ್ಯಕ್ತಿಯ ಸ್ವಂತ ಅನುಭವಕ್ಕೆ ಬಿಡುವ ಅವಕಾಶವೇ ಸ್ವಾತಂತ್ರ್ಯ. ಸ್ವಯಂ ಪ್ರೇರಣೆಯಿಂದ ರಾಷ್ಟ್ರದಿಂದ ಪ್ರತ್ಯೇಕವೆಂದು ಮನವರಿಕೆಯಾಗಿ ನೈಸರ್ಗಿಕ ಹಕ್ಕುಗಳುಂಟು ಎಂಬ ಭಾವನೆಯಿಂದ ಸ್ವೇಚ್ಛೆಯಾಗಿ ಪ್ರವರ್ತಿಸುವುದು ಸ್ವಾತಂತ್ರ್ಯವಲ್ಲ. ವ್ಯಕ್ತಿಯು ಸಮಾಜಕ್ಕೆ ಎಷ್ಟು ಅಧೀನನಾಗುವನೋ ಮತ್ತು ಅದರ ಉದಾತ್ತಧ್ಯೇಯ ಮತ್ತು ಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಸಾಧಕನಾಗುವನೋ ಅಷ್ಟಷ್ಟು ತನ್ನ ಸ್ವಾತಂತ್ರ್ಯದಲ್ಲಿ ಪರಿಪೂರ್ಣತೆ ಹೊಂದುವನು; ಅದರಿಂದ ತೇಜಸ್ವಿಯಾಗುವನು.

ಸಮತೆ, ಜಾತಿಭೇದಗಳು ನಿಸರ್ಗವಾದುದೆಂದೂ ಮಾನವ ಸೃಷ್ಟಿಯಲ್ಲಿ ಜಾತಿ ಜಾತಿಗೂ ವಿಶೇಷ ಅಂತರವಿರುವುದೆಂಬುದು ಫ್ಯಾಸಿಸ್ಟ್ ತತ್ತ್ವದ ನಂಬಿಕೆ. ಉತ್ತಮ ವರ್ಗದವರು ನಿರಂತರವೂ ರಾಷ್ಟ್ರದ ಹಿತ ಸಾಧನೆಯಲ್ಲಿ ನಿರತರಾಗಿರಬೇಕೆಂಬುದೂ ರಾಷ್ಟ್ರಸೇವೆಗೆ ಅನುಗುಣವಾದ ವಾತ್ಸಲ್ಯ ಮತ್ತು ಶ್ರದ್ಧೆಯಿಂದ ಕೂಡಿದ ನಿರಂತರ ಚಿಂತೆಯನ್ನು ಹೊಂದಿರಬೇಕೆಂಬುದೂ ಇಂತಹ ಮಹಾಪುರುಷರನ್ನು ಅಧಮ ವರ್ಗಗಳು ಸದಾ ಕಾಲವೂ ಸೇವಿಸಬೇಕೆಂಬುದೂ ಫ್ಯಾಸಿಸ್ಟ್ ಸಿದ್ಧಾಂತದ ಒಂದು ಮೂಲ ತತ್ತ್ವ. ರಾಷ್ಟ್ರದ ಪುರೋಭಿವೃದ್ಧಿಯನ್ನು ಉತ್ತಮ ವರ್ಗವು ತಮ್ಮ ಶಕ್ತಿ ಸಾಹಸಗಳಿಂದ ಸಾಧಿಸಬೇಕು. ನೀಚ್ಛೆ ಎಂಬವನು ರಾಷ್ಟ್ರದಲ್ಲಿ ಉತ್ತಮ ವರ್ಗಕ್ಕೂ ದಾಸ್ಯವರ್ಗಕ್ಕೂ ಪ್ರತ್ಯೇಕ ಧರ್ಮಗಳುಂಟೆಂದೂ ಉತ್ತಮ ವರ್ಗದ ಅನುಕರಣೆ ನ್ಯಾಯ ಮತ್ತು ಧರ್ಮಬದ್ಧವಾದುದೆಂದೂ, ಬೇರೆ ನಿಷ್ಪಕ್ಷಪಾತ ನ್ಯಾಯವಿಲ್ಲವೆಂದೂ ಹೇಳಿದ್ದಾನೆ.

ಫ್ಯಾಸಿಸ್ಟ್ ಸಿದ್ಧಾಂತವು ಆರ್ಥಿಕ ಮತ್ತು ರಾಜಕೀಯ ತತ್ತ್ವಗಳನ್ನು ಬಲಪ್ರಯೋಗದಿಂದಲೇ ಸಾಧಿಸಬೇಕು. ಬಹುಸಂಖ್ಯಾತ ವರ್ಗದ ಅನುಮತಿಯನ್ನು ನಿರ್ಬಂಧದಿಂದಲೇ ಪಡೆಯಬೇಕು. ಪ್ರಜಾಪ್ರಭುತ್ವಗಳ ಸರ್ಕಾರದ ನೀತಿಯು ಲಾಯಿಡ್ ಜಾರ್ಜ್ ಹೇಳಿರುವಂತೆ ಚರ್ಚೆಯಿಂದಲೇ ನಿರ್ಧರವಾಗುವುದಾದರೆ ಫ್ಯಾಸಿಸ್ಟ್ ಸರ್ಕಾರದ ನೀತಿಯು ಬಲಪ್ರಯೋಗ ಮತ್ತು ಆಕ್ರಮಣದಿಂದ ನಿರ್ಧರವಾಗುತ್ತದೆ.

ಫ್ಯಾಸಿಸ್ಟ್ ಸಿದ್ಧಾಂತದಲ್ಲಿ ಆರ್ಥಿಕತತ್ತ್ವಕ್ಕೆ ಹೆಚ್ಚುಮನ್ನಣೆ. ರಾಜಕೀಯ ಪ್ರಭಾವ ಹೆಚ್ಚಿದುದರಿಂದ ಫ್ಯಾಸಿಸ್ಟ್ ಸರ್ಕಾರದ ಆರ್ಥಿಕ ಸ್ಥಿತಿಯು ಪುನರ್ರಚನೆಗೆ ಅವಕಾಶವಾಗಿ ಕಾರ್ಪೋರೇಟ್ ಸ್ಟೇಟ್ ಏರ್ಪಡುವುದು. ಮಾಲೀಕರೂ ಕಾರ್ಮಿಕರೂ ರಾಷ್ಟ್ರೀಯ ಸಂಸ್ಥೆಗಳಲ್ಲಿ ಮಿಳಿತವಾಗಿ ಸರ್ಕಾರದ ಅನೇಕ ಕಾರ್ಯಗಳಲ್ಲಿ ಭಾಗವಹಿಸುವರು. ಮಾಲೀಕರಿಗೂ ಧನಾಢ್ಯರಿಗೂ ಮತ್ತು ಕೂಲಿಕಾರರಿಗೂ ಪರಸ್ಪರ ಸೌಹಾರ್ದವನ್ನು ಹೆಚ್ಚಿಸಲು ಸರ್ಕಾರವು ಅವಕಾಶವನ್ನು ಕಲ್ಪಿಸುವುದರಿಂದ ಸ್ಪರ್ಧೆಗಳು ಭಯಂಕರ ರೂಪವನ್ನು ತಾಳಿ ಕ್ರಾಂತಿ ಉದ್ವೇಗಗಳುಂಟಾಗುವ ಸನ್ನಿವೇಶವಿಲ್ಲ. ಹರತಾಳ, ಅಸಹಕಾರ ಮುಂತಾದಕಾರ್ಮಿಕ ವರ್ಗದ ಆತ್ಮರಕ್ಷಣೆಯ ಸಾಧನೆಗಳನ್ನು ಸರ್ಕಾರವು ರದ್ದುಮಾಡುವುವು. ಪಂಚಾಯಿತ ಸಮಿತಿಗಳು, ಲೇಬರ್ ಕೋರ್ಟ್ಸ್ ಮುಂತಾದುವುಗಳನ್ನು ಸರ್ಕಾರ ಏರ್ಪಡಿಸಿ ಎಲ್ಲ ವಿಧವಾದ ಔದ್ಯೋಗಿಕ ಮತ್ತು ವ್ಯಾವಹಾರಿಕ ವಿವಾದಗಳನ್ನೂ ತೀರ್ಮಾನಗೊಳಿಸುತ್ತದೆ. ಉದ್ಯೋಗ ಪ್ರಪಂಚದಲ್ಲಿ ಶಾಂತಿಯನ್ನು ಏರ್ಪಡಿಸುವುದೇ ವ್ಯವಹಾರ ಧರ್ಮಪರಾಯಣವಾದ ರಾಷ್ಟ್ರದ ಮಹತ್ವಕಾಂಕ್ಷೆ. ಮಾಲೀಕರೂ ಕೂಲಿಕಾರರೂ ರಾಷ್ಟ್ರಸರ್ಕಾರದ ಸೇವಕರಂತೆ ನಿಯಮಬದ್ಧರಾಗಿ ಸರ್ಕಾರದ ಉದ್ಯೋಗಧ್ಯೇಯಗಳನ್ನು ಪಾಲಿಸಬೇಕು. ಫ್ಯಾಸಿಸ್ಟು ಸರ್ಕಾರಗಳಲ್ಲಿ ಏರ್ಪಟ್ಟ ಏಕಪಕ್ಷ ಪ್ರಭುತ್ವವು ಭಿನ್ನಾಭಿಪ್ರಾಯಗಳನ್ನು ನಿರ್ಮೂಲಮಾಡಿ ರಾಷ್ಟ್ರದ ಸಂಪತ್ತು ಮತ್ತು ಪ್ರಜಾಭ್ಯುದಯವನ್ನು ಸಾಧಿಸಲು ಮುಖ್ಯ ಸಾಧನವಾಗುವುದು. ಈ ವಿಧವಾದ ಪ್ರಭುತ್ವದಲ್ಲಿ

ಔದ್ಯೋಗಿಕ, ವ್ಯಾವಹಾರಿಕ, ಧಾರ್ಮಿಕ ಮುಂತಾದ ಸಂಸ್ಥೆಗಳೂ ಸಹಕರಿಸಲು ಪ್ರಾತಿನಿಧ್ಯ ಹೊಂದಿವೆ. ಸೋವಿಯೆಟ್‌ಗಳೋವಾದಿಯಲ್ಲಿ ಆರ್ಥಿಕ ಔದ್ಯೋಗಿಕ ಸಂಸ್ಥೆಗಳು ಏರ್ಪಟ್ಟು ಒಂದಕ್ಕೊಂದು ಅಧೀನವಾಗಿ ಅಪ್ರತ್ಯಕ್ಷ ಚುನಾವಣೆಯ ಮೂಲಕ ರಾಷ್ಟ್ರೀಯ ಆರ್ಥಿಕ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತವೆ. ಪರಸ್ಪರಸಹಾಯ ಸರಕಾರದ ಸ್ಥಾಪನೆಯಿಂದ ಪ್ರಜಾಪ್ರಭುತ್ವದ ಅನೇಕ ನ್ಯೂನತೆಗಳಿಗೆ ಪರಿಹಾರವುಂಟಾಗುವುದೆಂದು ನಂಬಿಕೆ.

**ಕೆಲವು ಸರ್ಕಾರ ತತ್ವಗಳು :**- ಸ್ವಾರ್ಥ ಮತ್ತು ಪರಮಾರ್ಥ ಸಾಧನೆಗಾಗಿ ಸರ್ಕಾರವು ಏರ್ಪಡುವುದು. ಧ್ಯೇಯಾತ್ಮಕವಾಗಿ ಹೇಳುವುದಾದರೆ ವ್ಯಕ್ತಿಯ ಜೀವನವನ್ನು ವಿಕಾಸಗೊಳಿಸಿ ಪರಸ್ಪರ ಸೌಹಾರ್ದದಿಂದ ಮಾನವ ಧರ್ಮವನ್ನು ಕಾಪಾಡುವುದು ರಾಷ್ಟ್ರದ ಗುರಿ. ವ್ಯಕ್ತಿಯು ತನ್ನ ಜೀವನವನ್ನು ಉತ್ತಮಗೊಳಿಸಿಕೊಂಡು ಆತ್ಮ ವಿಕಾಸದಲ್ಲಿ ನಿರತನಾಗುವುದಕ್ಕೆ ಅಗತ್ಯವಾದ ಸನ್ನಿವೇಶವನ್ನು ಏರ್ಪಡಿಸುವುದು ರಾಷ್ಟ್ರದ ಪರಮಧ್ಯೇಯವೆಂದು ಅರಿಸ್ಟಾಟಲ್ ಹೇಳಿದ್ದಾನೆ. ಮುಖ್ಯವಾಗಿ ರಾಷ್ಟ್ರತೇಜಸ್ಸು ಮತ್ತು ಮಾನವ ಬಲವನ್ನು ವಿಕಾಸಗೊಳಿಸುವುದು, ನ್ಯಾಯವನ್ನೂ ಮಾನವನ ಸಹಜ ಗುಣಕ್ಕೆ ಅನುಗುಣವಾದ ಶಾಸನವನ್ನೂ ಏರ್ಪಡಿಸುವುದು, ಸಾಮಾಜಿಕ ಪುರೋಭಿವೃದ್ಧಿ ಮತ್ತು ಅಖಿಲಮಾನವವರ್ಗದ ಪುರೋಭಿವೃದ್ಧಿ–ಈ ಧ್ಯೇಯಗಳನ್ನು ಕಾರ್ಯಕಾರಿಯಾಗಿಮಾಡುವುದರಲ್ಲಿಪರಸ್ಪರ ಘರ್ಷಣೆಗಳಾಗದಂತೆ ವರ್ತಿಸುವುದು—ಇವು ಆಧುನಿಕ ರಾಷ್ಟ್ರಗಳ ಮುಖ್ಯ ತತ್ತ್ವಗಳು.

ಸರ್ಕಾರವು ಮೊಟ್ಟಮೊದಲು ವ್ಯಕ್ತಿಗೂ ಸಂಸಾರಕ್ಕೂ ತಮ್ಮ ನಿಸರ್ಗವಾದ ಹಕ್ಕುಗಳನ್ನು ಕಾಪಾಡಿಕೊಳ್ಳಲು ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ವ್ಯತಿರಿಕ್ತವಾದುದರಲ್ಲಿ ಪೋಲೀಸಿನವನಂತೆ ಶಿಸ್ತನ್ನು ಏರ್ಪಡಿಸುವುದರಲ್ಲಿ ನಿರತವಾಗಿತ್ತು. ಔದ್ಯೋಗಿಕ ಕ್ರಾಂತಿಯಿಂದ ಕಾರ್ಖಾನೆಗಳ ಸರಹದ್ದುಗಳಲ್ಲಿರುವ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಜನಸಮೂಹ ಕಿಕ್ಕಿರಿದಿತ್ತು; ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು

ವಿಕಾಸಗೊಳಿಸಲು ಅನೇಕ ವಿಧಗಳಲ್ಲಿ ಕೆಲಸಕಾರ್ಯಗಳ ಜವಾಬ್ದಾರಿಯನ್ನು ರಾಷ್ಟ್ರಸರ್ಕಾರವು ಹೊರಬೇಕಾಯಿತು. ದುಷ್ಟಶಿಕ್ಷೆ, ಶಿಷ್ಟಪರಿಪಾಲನೆ ಪ್ರಜಾ ಆರೋಗ್ಯ, ಮಕ್ಕಳು ಹೆಂಗಸರ ಯೋಗಕ್ಷೇಮ ಸಾಧನೆ, ವ್ಯಕ್ತಿಯ ವಯಸ್ಸು ಮತ್ತು ಜೀವನದ ಮೆಟ್ಟಿಲುಗಳಿಗೆ ಅನುಗುಣವಾದ ಸೌಕರ್ಯ ಕಲ್ಪನೆ, ರಸ್ತೆ ಮತ್ತು ಶುಚಿಯಾದ ವಸತಿಗಳ ನಿರ್ಮಾಣ, ಶಿಶುವಿಹಾರ ಗಳಿಂದ ಹಿಡಿದು ಪ್ರೌಢ ವಿದ್ಯಾಶಾಲೆಗಳವರೆಗೆ ವಿದ್ಯಾಭ್ಯಾಸ, ನಗರನಿರ್ಮಲೀ ಕರಣ, ಪ್ರಜಾಹಿತಸಾಧಕವಾದ ವ್ಯವಹಾರಗಳ ನಿಯಂತ್ರಣ — ಮುಂತಾ ದುವು ಆಧುನಿಕ ಸರ್ಕಾರದ ಪವಿತ್ರ ಕರ್ತವ್ಯಗಳು. ರಾಷ್ಟ್ರಸರ್ಕಾರವು ವ್ಯಕ್ತಿ ಜೀವನದ ಮಟ್ಟವನ್ನು ಎತ್ತುವುದು ಎಲ್ಲ ವಿಧವಾದ ಸಾಧನೆಗಳನ್ನೂ ಕೈಗೊಳ್ಳಬೇಕೆಂಬುದು ಒಂದು ವಾದ. ಆದರೆ ಯಾವ ಕೆಲಸಕಾರ್ಯ ಗಳನ್ನು ವ್ಯಕ್ತಿಯ ಆತ್ಮವಿಕಾಸಕ್ಕಾಗಿ ಅವಲಂಬಿಸಬೇಕು ಮತ್ತು ಎಷ್ಟರ ಮಟ್ಟಿಗೆ ಸರ್ಕಾರವು ಸಹಕರಿಸಬೇಕು ಎಂಬುದು ವಿವಾದಾಸ್ಪದವಾಗಿದೆ. ರಾಷ್ಟ್ರಹಿತ ಸಾಧನೆಗೂ ಮತ್ತು ವ್ಯಕ್ತಿಯ ವಿಕಾಸಕ್ಕೂ ಅನುಗುಣವಾದ ಸಕಲ ಕಾರ್ಯಗಳನ್ನೂ ಸರ್ಕಾರವೇ ವಹಿಸಬೇಕೆಂಬುದು ಸ್ವಚ್ಛಂದಾಧಿ ಕಾರಿಗಳ ಮತ. ದುರ್ಜನರನ್ನು ನಿಯಂತ್ರಿಸುವುದಲ್ಲದೆ ವ್ಯಕ್ತಿಯ ಮಾನಸಿಕ ಮತ್ತು ನೈತಿಕ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ಅಗತ್ಯವಾದ ಅವಕಾಶ ಮತ್ತು ಸನ್ನಿವೇಶವನ್ನು ಸರ್ಕಾರವು ಕಲ್ಪಿಸಬೇಕೆನ್ನುವುದು ಧ್ಯೇಯವಾದಿಯಾದ ಟಿ. ಎಚ್. ಗ್ರೀನಿನ ಮತ. ಸಮಾಜದಲ್ಲಿ ಅಸಮತೆ ಯನ್ನು ಹೋಗಲಾಡಿಸುವ ಹೆದ್ದಾರಿಯಲ್ಲಿರುವ ತೊಡಕುಗಳನ್ನು ತೆಗೆದುಹಾಕಿ ಶಿಸ್ತುಗಳನ್ನು ಏಪರ್ಡಿಸಿ ವ್ಯಕ್ತಿಯ ಬೆಳವಣಿಗೆಗೆ ಸೌಕರ್ಯವನ್ನು ಏರ್ಪಡಿ ಸುವುದು ಸಮಾಜವಾದಿಗಳ ಮತ.

ಈ ಸಿದ್ಧಾಂತಗಳನ್ನು ಕಾರ್ಯಕಾರಿಯಾಗಿ ಮಾಡುವುದು ಕಷ್ಟ ಸಾಧ್ಯ. ವ್ಯಕ್ತಿಯ ಸ್ವಾತಂತ್ರ್ಯಭಾವನೆಗೂ ಸರ್ಕಾರದ ಅಧಿಕಾರ ಭಾವನೆಗೂ ತಿಕ್ಕಾಟ ನಿರಂತರವಾಗಿ, ಸ್ವಾತಂತ್ರ್ಯ ಮತ್ತು ಅಧಿಕಾರಗಳ ಎಲ್ಲೆಗಳನ್ನು ನಿರ್ದಿಷ್ಟವಾಗಿ ತಿಳಿಯುವುದು ಸುಲಭವಲ್ಲ. ಇವೆರಡನ್ನೂ

ಹೇಗೆ ಸಮನ್ವಯಮಾಡುವುದೆನ್ನುವುದು ರಾಜಕೀಯದಲ್ಲಿ ಒಂದು ಜಟಿಲವಾದ ಪ್ರಶ್ನೆ. ರಾಷ್ಟ್ರಸರ್ಕಾರವು ವ್ಯಕ್ತಿಯ ವಿಕಾಸಕ್ಕೆ ವಿರೋಧಿ. ಆದುದರಿಂದ ಸರ್ಕಾರ ಮತ್ತು ಸ್ವಾತಂತ್ರ್ಯ ಇವುಗಳ ಸ್ಪರ್ಧೆ ಭಯಂಕರವಾಗಿರುವುದು. ಸರ್ಕಾರದ ಅಧಿಕಾರ ಬೆಳೆದಷ್ಟೂ ವ್ಯಕ್ತಿಯ ಸ್ವಾತಂತ್ರ್ಯ ಕುಂಠಿತವಾಗುತ್ತದೆಯೆಂದು ವ್ಯಕ್ತಿವಾದಿಗಳ ಅಭಿಮತ. ವ್ಯಕ್ತಿಜೀವನದ ವಿಕಾಸಕ್ಕೂ ಮತ್ತು ದೈಹಿಕ, ಮಾನಸಿಕ ಮತ್ತು ನೈತಿಕ ಬೆಳೆವಣಿಗೆಗೂ ವ್ಯಕ್ತಿಯ ಸ್ವಾವಲಂಬನೆಯ ನಿಯಂತ್ರಣವನ್ನು ಸಮಾಜ ಕೈಕೊಂಡರೆ ಪ್ರಜಾಹಿತ ಮತ್ತು ವ್ಯಕ್ತಿಯ ಹಿತಸಾಧನವಾಗುವುದೆಂದು ಸಮಾಜವಾದಿಗಳ ಅಭಿಮತ. ವ್ಯಕ್ತಿಗೆ ಮುಖ್ಯವಾಗಿ ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಸ್ವಾತಂತ್ರ್ಯ, ರಾಜಕೀಯ, ಸಾಮೂಹಿಕ ವ್ಯವಹಾರಗಳಲ್ಲಿ ವರ್ತಿಸಲು ಅಗತ್ಯವಾದ ರಾಜಕೀಯ ಸ್ವಾತಂತ್ರ್ಯ, ಜೀವನದ ಹೊರೆಯನ್ನು ಯಾವ ವಿಧವಾದ ತೊಡಕು ಪ್ರತಿಬಂಧಕಗಳಿಲ್ಲದೆ ಸಾಧಿಸಲು ಆರ್ಥಿಕ ಸ್ವಾತಂತ್ರ್ಯ, ವ್ಯಕ್ತಿಜೀವನಕ್ಕೆ ಅನಿವಾರ್ಯ. ಸಂಪತ್ತು ಮತ್ತು ಅಧಿಕಾರಗಳಲ್ಲಿ ಅಂತರವೂ ಅಸಾಮ್ಯತೆಯೂ ಇದ್ದಲ್ಲಿ ಸಾಮ್ಯತೆ, ಸೌಹಾರ್ದಭಾವನೆ, ವ್ಯಕ್ತಿಯ ಸಹಜಗುಣಗಳ ಮನ್ನಣೆ, ಅಸಾಧ್ಯ. ಅಸಾಮ್ಯತೆಗಳನ್ನು ಹೋಗಲಾಡಿಸಿ ವ್ಯಕ್ತಿಯ ಜೀವನದ ಮಟ್ಟವನ್ನು ಎತ್ತಲೂ, ಧನಾಢ್ಯರಿಗೂ ಬಡವರಿಗೂ ಇರುವ ಅಂತರವನ್ನು ಕಡಮೆಮಾಡಲೂ, ಸದವಕಾಶವನ್ನು ಮತ್ತು ಸಾಮ್ಯತೆಯನ್ನು ಕಲ್ಪಿಸಿ ಸಮಾಜದ ಸ್ಥಿತಿಗಳನ್ನು ಕಾನೂನು ನಿಯಮಗಳಿಂದ ರಾಷ್ಟ್ರದ ಶಾಸನ ಸಭೆಯೂ ಕ್ರಮಪಡಿಸಬೇಕು. ಅಂದರೆ ವ್ಯಕ್ತಿಯ ಸ್ವಾತಂತ್ರ್ಯ ಬೆಳೆವಣಿಗೆಗೂ ಪ್ರಜಾಪ್ರಭುತ್ವ ಸರ್ಕಾರದ ಅಧಾರದ ಮೇಲೆ ನಿರ್ಮಿಸಲ್ಪಟ್ಟ ಸರ್ಕಾರಕ್ಕೂ ನಿಕಟಸಂಬಂಧವಿದೆ. ಆದರೆ ರಾಷ್ಟ್ರಸರ್ಕಾರವು ವಿಶೇಷ ಅಧಿಕಾರವನ್ನು ಗಳಿಸುವುದರಿಂದ ಸ್ವೇಚ್ಛಾವರ್ತನೆಗೆ ಹೆದ್ದಾರಿಯಾಗುವುದರಿಂದ ಸರ್ಕಾರದ ಅಧಿಕಾರ ನಿಯಂತ್ರಣದಿಂದಲೇ ವ್ಯಕ್ತಿಯ ಸ್ವಾತಂತ್ರ್ಯಸಾಧನೆಯಾಗುವುದು. ಮತಕರ್ತನ (Voter) ಸಮಾಜದ ಪರಮಾಧಿಕಾರಕ್ಕೆ ಸರ್ಕಾರ

ವನ್ನು ಅಧೀನಮಾಡುವುದರಿಂದಲೂ ಮತ್ತು ಸರ್ಕಾರವು ತನ್ನ ಕಾರ್ಯಕ್ರಮವನ್ನು ವಿಶದಪಡಿಸಿ ಮತದಾರರ ಒಡಂಬಡಿಕೆಯನ್ನು ಪಡೆದು ತನ್ನ ವರ್ತನೆಗೆ ತಕ್ಕ ಪ್ರತಿಫಲವನ್ನು ಅನುಭವಿಸುವಂತೆ ಕಠಿನಶಿಸ್ತುಗಳನ್ನು ಏರ್ಪಡಿಸಿಕೊಳ್ಳುವುದರಿಂದಲೂ ಅಧಿಕಾರ ನಿಯಂತ್ರಣವು ಸಾಧ್ಯ.

# ಪ್ರಕರಣ ೩

## ರಾಷ್ಟ್ರರೂಪಗಳು

ರಾಜತ್ವ: ಆಂತರ್ಯ ಮತ್ತು ಬಾಹ್ಯಸಂಬಂಧಗಳಲ್ಲಿ ಪೂರ್ಣ ಸ್ವಾತಂತ್ರ್ಯದಿಂದ ವರ್ತಿಸುವ ಮತ್ತು ಸಕಲ ವಿಚಾರಗಳಲ್ಲಿಯೂ ಪರಮಾಧಿಕಾರವನ್ನು ಪಡೆದಿರುವ, ಒಂದು ನಿರ್ದಿಷ್ಟವಾದ ಮತ್ತು ಸುವ್ಯವಸ್ಥಿತವಾದ ರಾಜಕೀಯ ಸಮುದಾಯ ಸಮಾಜಕ್ಕೆ ರಾಷ್ಟ್ರವೆನ್ನಬಹುದು. ರಾಷ್ಟ್ರ ಪ್ರಜೆಗಳ ಪರಮಾಧಿಕಾರವನ್ನು ಸುವ್ಯವಸ್ಥಿತರೀತಿ ಮತ್ತು ಕ್ರಮದಲ್ಲಿ ಪ್ರಯೋಗಿಸಲು ಸರ್ಕಾರ ರಚನೆ ಆವಶ್ಯಕವಾಗಿದೆ. ರಾಷ್ಟ್ರ ರಚನೆ ಮತ್ತು ಧ್ಯೇಯಗಳಲ್ಲಿ ರಾಷ್ಟ್ರ ರಾಷ್ಟ್ರಕ್ಕೆ ಹೆಚ್ಚು ಅಂತರವಿಲ್ಲ. ಆದರೆ ಈ ಧ್ಯೇಯಗಳನ್ನು ಸೂಚಿಸಿ ಕಾರ್ಯಕಾರಿಯಾಗಿ ಮಾಡುವ ಮುಖ್ಯ ಸಾಧನವಾದ ಸರ್ಕಾರ,—ಇದರ ರಚನೆ, ವಿಧಾನ, ಕ್ರಮ, ಅಂಗರಚನೆ, ಅಂಗಗಳ ಪರಸ್ಪರ ಸಂಬಂಧ ಮತ್ತು ವ್ಯತ್ಯಾಸ, ಮತ್ತು ಅವುಗಳ ಕಾರ್ಯಗಳು ಮುಂತಾದುವುಗಳಲ್ಲಿ ರಾಷ್ಟ್ರ ರಾಷ್ಟ್ರಕ್ಕೂ ವ್ಯತ್ಯಾಸವಿದೆ. ಪರಮಾಧಿಕಾರವನ್ನು, ಒಬ್ಬ ಪ್ರಭುವೇ ಪ್ರಯೋಗಿಸಿದರೆ, ರಾಜಪ್ರಭುತ್ವವೆಂದೂ, ಅಲ್ಪಸಂಖ್ಯಾತರು ಪ್ರಯೋಗಿಸಿದರೆ, ಕುಲೀನ ಪ್ರಭುತ್ವ (Aristocratic) ವೆಂದೂ, ಬಹುಸಂಖ್ಯಾತರು ಪ್ರಯೋಗಿಸಿದರೆ, ಪ್ರಜಾಪ್ರಭುತ್ವವೆಂದೂ, ಸ್ಥೂಲವಾಗಿ ಹೇಳಬಹುದು. ರಾಜಪ್ರಭುತ್ವದಲ್ಲಿ ವಂಶಪಾರಂಪರ್ಯವಾಗಿ ಅಧಿಕಾರವನ್ನು ಹಿರಿಯ ಮಗನೇ ಪಡೆಯುವನು; ವಂಶಾನುಗತವಾಗಿ ಬರುವ ಪದವಿಯಲ್ಲಿ ರಾಷ್ಟ್ರದ ಪೂರ್ಣಾಧಿಕಾರವು ಅಡಗಿದೆ. ರಾಷ್ಟ್ರನಾಯಕನು ಪ್ರಜಾವರ್ಗದಿಂದ ಚುನಾಯಿಸಲ್ಪಟ್ಟ ಆ ನಿರ್ವಾಚನಪದ್ಧತಿಯೇ ಜಾರಿಯಲ್ಲಿದ್ದರೆ ಆಗ ಆ ರಾಷ್ಟ್ರವನ್ನೆ ಗಣತಂತ್ರರಾಜ್ಯ ಅಥವಾ ಗಣರಾಷ್ಟ್ರವೆಂದು ಕರೆಯಬಹುದು. ಸಾಮಾನ್ಯವಾಗಿ ರಾಜಪ್ರಭುತ್ವಗಳಲ್ಲಿ ಪರಮಾಧಿಕಾರವು ವಂಶಪಾರಂಪರ್ಯೆಯಾಗಿ

ಬಂದ ಮತ್ತು ನಾಮಧಾರಿಯಾದ ಪ್ರಭುವಿನಲ್ಲಿ ಕಂಡುಬಂದರೂ ಅಲ್ಲಿ ರಚಿತವಾಗುವ ಸರ್ಕಾರದ ಕೆಲಸಗಳನ್ನು ನಿರ್ವಹಿಸುವವರು ಚುನಾಯಿತ ನಾದ ನಾಯಕನೇ ಅಥವಾ ಅವನ ಅನುಯಾಯಿಗಳೇ. ಇದರಿಂದ ವಂಶ ಪಾರಂಪರ್ಯರಾಜತ್ವ ಮತ್ತು ವಾಚನ ಅಥವಾ ಚುನಾಯಿತ ಪ್ರಭುತ್ವ ವೆಂದು ವಿಂಗಡಿಸಬಹುದು. ಅನೇಕ ಪ್ರಾಚೀನರಾಷ್ಟ್ರಗಳಲ್ಲಿ ಒಂದು ನಿರ್ದಿಷ್ಟ ರಾಜವಂಶದಲ್ಲಿ ಅತ್ಯಂತ ಪ್ರಭಾವಶಾಲಿ ಮತ್ತು ದಕ್ಷನಾದವ ನಿಗೆ ಪ್ರಜೆಗಳು ರಾಷ್ಟ್ರದ ಜವಾಬ್ದಾರಿಯನ್ನು ವಹಿಸಿಕೊಡುವುದಕ್ಕಾಗಿ ಚುನಾಯಿಸುವ ಪದ್ಧತಿ ಜಾರಿಯಲ್ಲಿತ್ತು. ಪ್ರಭುತ್ವಗಳಲ್ಲಿ ಅನಿಯಮಿತ ರಾಜತಂತ್ರ (Absolute monarchy) ಅಥವಾ ಸ್ವಚ್ಛಂದ ಪ್ರಭುತ್ವವೆಂದೂ, ನಿಯಮಿತ ರಾಜತಂತ್ರ (Limited monarchy) ಎಂದೂ, ಎರಡು ವಿಧಗಳು ಕಂಡು ಬರುವುವು. ಸ್ವಚ್ಛಂದ ಪ್ರಭುತ್ವವು ನಿಯಮಬದ್ಧವಾದುದಲ್ಲ, ಮತ್ತು ಪ್ರಭುವಿನ ಪರಮಾಧಿಕಾರಕ್ಕೆ ಯಾವ ವಿಧವಾದ ನಿಯಂತ್ರಣವಾಗಲಿ, ಪ್ರತಿಬಂಧಕವಾಗಲಿ ಇಲ್ಲ; ಮತ್ತು ಫ್ರೆಂಚ್ ರಾಷ್ಟ್ರಪ್ರಭುವಾದ ಲೂಯಿ XIV ಹೇಳಿದಂತೆ, ಪ್ರಭುವೇ ರಾಷ್ಟ್ರ, ರಾಷ್ಟ್ರವೇ ಪ್ರಭು, ಎಂಬ ಭಾವನೆ ಆಚರಣೆಯಲ್ಲಿರುವುದು. ನಿಯಮಿತಪ್ರಭುತ್ವದಲ್ಲಿ, ಪ್ರಭುವಿನ ಪರಮಾಧಿಕಾರಕ್ಕೆ ನಾನಾ ರೀತಿ ಯಾದ ತಡೆಗಳುಂಟು. ರಾಷ್ಟ್ರವಿಧಾನ ನಿಯಮಗಳು, ಸಂಪ್ರದಾಯ ಗಳು ಮತ್ತು ಗಣ, ಶ್ರೇಣಿಗಳ ಧರ್ಮ, ಮತ್ತು ಪ್ರಜಾಭಿಮತ, ಇವುಗಳು ನಾನಾವಿಧವಾದ ರೀತಿಯಲ್ಲಿ ಅಧಿಕಾರವು ಸ್ವೇಚ್ಛೆಯಾಗಿ ಪ್ರವರ್ತಿಸದಂತೆ ನಿಯಂತ್ರಿಸುವುವು.

## ಕುಲೀನ ಪ್ರಭುತ್ವ

ಕುಲೀನರ ಪ್ರಭುತ್ವವೆಂದರೆ ಪರಮಾಧಿಕಾರವು ಪ್ರಜಾವರ್ಗದ ಒಂದು ನಿರ್ದಿಷ್ಟವಾದ ವರ್ಗದಲ್ಲಿ ಅಡಗಿದೆಯೆಂದು ಭಾವನೆ. ಪೌರೇಯ ರಲ್ಲಿ ಒಂದು ಪಕ್ಷ ಅಧಿಕಾರವನ್ನು ಪ್ರಯೋಗಿಸಿದರೆ, ಅದು ಅರಿಸ್ಟಾಕ್ರೆಸಿ

ಪ್ರಭುತ್ವ ( Aristocracy ) ವಾಗುವುದೆಂದು ಕೆಲವು ರಾಜನೀತಿಜ್ಞರ ಅಭಿಪ್ರಾಯ. ಅಲ್ಪ ಪೌರೇಯರ ಅಧಿಕಾರವೆನ್ನುವುದು ಬಹುಪ್ರಜೆಗಳ ರಾಷ್ಟ್ರದಲ್ಲಿ, ನೂರಾರು ಜನರ ಪ್ರಭುತ್ವವಾಗುವುದು ಮತ್ತು ಬಹು ಸಂಖ್ಯಾತರ ಪ್ರಜಾಪ್ರಭುತ್ವಕ್ಕೂ ಈ ಕುಲೀನ ಪ್ರಭುತ್ವಕ್ಕೂ ಯಾವ ವಿಧ ವಾದ ಭೇದವೂ ತೋರುವುದಿಲ್ಲ. ಏಕೆಂದರೆ ಪ್ರಜಾಪ್ರಭುತ್ವಗಳಲ್ಲಿ ಸಾಮಾನ್ಯವಾಗಿ ರಾಜಕೀಯಾಧಿಕಾರವನ್ನು ಪೌರೆಯರಲ್ಲಿ ಅಲ್ಪಸಂಖ್ಯಾ ತರು ನಿರ್ವಹಿಸುವರು. ಮಕ್ಕಳು, ಹೆಂಗಸರು, ಅನಕ್ಷರಸ್ಥರು, ಚಮೂ ಶಿಕ್ಷಣ ಪಡೆದ ಯೋಧರು, ಅಪರಾಧಿಗಳು ( ಕ್ರಿಮಿನಲ್ಸ್ ), ನಿರ್ಗತಿಕರು– ಇವರಿಗೆ ಪ್ರಜಾಪ್ರಭುತ್ವದಲ್ಲಿ ಮತಕೊಡುವ ಅಧಿಕಾರವಿರುವುದಿಲ್ಲವಾದ್ದ ರಿಂದ, ಪ್ರಜಾಪ್ರಭುತ್ವವೆನ್ನುವುದು ಒಂದು ದೃಷ್ಟಿಯಲ್ಲಿ ಉತ್ತಮಕುಲ ದವರ ಅಥವಾ ರಾಷ್ಟ್ರದಲ್ಲಿ ಪ್ರಸಿದ್ಧರಾದವರ ಸರ್ಕಾರವಾಗಿ ಪರಿಣಮಿ ಸುವುದು. ಗ್ರೀಕ್ ಪ್ರಾಚೀನರಾಷ್ಟ್ರದಲ್ಲಿ ಅರಿಸ್ಟಾಕ್ರಸಿ ಎಂದರೆ ಶ್ರೇಷ್ಠ ವರ್ಗದವರ ಪ್ರಭುತ್ವವೆಂದು ತಿಳಿದಿದ್ದರು. ಶ್ರೇಷ್ಠತೆಯು ವರ್ಗಗಳಲ್ಲಿ ಹೇಗೆ ನಿರ್ಣೀತವಾಗಬಹುದು, ಅಂದರೆ ವಿದ್ಯಾಪ್ರೌಢಿಮೆ, ರಾಜಕೀಯಾನುಭವ, ಮತ್ತು ಸದ್ವೃತ್ತಿ ಅಥವಾ ಧನ, ಇವುಗಳ ಮೂಲಕ ವರ್ಗಶ್ರೇಷ್ಠತ್ವವೋ ಅಥವ ಜಾತಿ ಶ್ರೇಷ್ಠತ್ವವೋ, ಅದರಂತೆ ಶ್ರೇಷ್ಠವೆನಿಸಿರುವ ವರ್ಗದವರು ಅಲ್ಲಿ ಮಾತ್ರ ಅಧಿಕಾರ ಗಳಿಸುವರು. ವರ್ಗಪ್ರಾಧಾನ್ಯವಾಗಿ ಅದರ ಪ್ರಭುತ್ವವೇ ಕಂಡುಬಂದಲ್ಲಿ ಆ ಪ್ರಭುತ್ವವನ್ನು ಅರಿಸ್ಟಾಕ್ರಸಿ ಎಂದು ಪಾಶ್ಚಾ ತ್ಯರು ಕರೆದಿದ್ದಾರೆ. ಪ್ರಾಚೀನ, ಮಧ್ಯಮ ಯುಗಗಳಲ್ಲಿ ಯಾವುದಾದರು ಒಂದು ವಿಧವಾದ ಸಮಾಜದಲ್ಲಿ ಧನ ಅಥವಾ ನೈತಿಕ ಬಲದಿಂದಲೇ ಉತ್ತಮವೆನಿಸಿಕೊಂಡ ಅಧಿಕಾರವೇ ಕಂಡುಬಂದಿದೆ. ಪುರೋಹಿತವರ್ಗ, ಯೋಧರವರ್ಗ, ಸಾಮಂತಷಾಹಿಗಳವರ್ಗ, ಇಲ್ಲವೇ ಗಿರಿಣಿ-ಮಾಲಿಕರ ವರ್ಗ, ಇವುಗಳು ಒಂದಲ್ಲ ಒಂದು ಕಾಲದಲ್ಲಿ ಪ್ರಭಾವಯುತವಾಗಿ ಅಧಿಕಾರ ವನ್ನು ಜರುಗಿಸಿವೆ; ರಾಷ್ಟ್ರದಲ್ಲಿ ಮಿಕ್ಕ ಪ್ರಜೆಗಳಿಂದ ಪ್ರತ್ಯೇಕವಾಗಿ ರಾಜ ಕೀಯ ಸಾಮಾಜಿಕ ಅಧಿಕಾರಗಳನ್ನು ಗಳಿಸಿಕೊಂಡು, ಕೆಲವು ವೇಳೆ ವಂಶ

ಪಾರಂಪರ್ಯೆಯಾಗಿ ಇಲ್ಲವೇ ತಾತ್ಕಾಲಿಕವಾಗಿಯೋ, ಪ್ರಭುತ್ವವನ್ನು ಅನುಭವಿಸಿವೆ. **ನ್ಯಾಚುರಲ್** (ಶ್ರೇಷ್ಠಮಾನವರ ಪ್ರಭುತ್ವ), ಚುನಾಯಿತ ಅಲ್ಪಸಂಖ್ಯಾತರ ಪ್ರಭುತ್ವ (Elective Aristocracy), ವಂಶಪಾರಂಪರ್ಯ ಶ್ರೇಷ್ಠಜಾತರ ಪ್ರಭುತ್ವ (Heriditory Aristacracy) ಇವು ಮೂರು ವಿಧವಾಗಿದೆಯೆಂದು, ಫ್ರೆಂಚ್ ರಾಜನೀತಿಜ್ಞನಾದ ರೊಸೋ (Rousseau) ವಿನ ಅಭಿಪ್ರಾಯ. ಕುಲೀನ ಪ್ರಭುತ್ವವು ಧನಾಢ್ಯರ ಪ್ರಭುತ್ವವಾಗಿ, ಸ್ವಾರ್ಥಸಾಧನೆಗಾಗಿ, ಸ್ವೇಚ್ಛೆಯಾಗಿ ಪ್ರವರ್ತಿಸಿದರೆ ಆಗ (Oligarchy) ಅಪಜನ ಸ್ವಚ್ಛಂದ ಪ್ರಭುತ್ವವಾಗುವುದು.

ಪ್ರಜಾಪ್ರಭುತ್ವವೆನ್ನುವುದು ರಾಜಕೀಯದಲ್ಲಿ ಒಂದು ಪದವಿಯೆಂದೂ ಅಥವಾ ನೈತಿಕ ವಿಚಾರಗಳಿಗೆ ಸಂಬಂಧಿಸಿದ ಭಾವನೆ ಅಥವಾ ಕಲ್ಪನೆ ಎಂದೂ ಮತ್ತು ಒಂದು ಸಾಮಾಜಿಕ ಸ್ಥಿತಿ, ಎಂದೂ ತ್ರಿವಿಧ ರೀತಿಯಲ್ಲಿ ವಿವರಿಸುವುದುಂಟು. ಸರ್ಕಾರದ ರಾಷ್ಟ್ರ ಮತ್ತು ಸಾಮಾಜಿಕ ಸ್ವರೂಪ ಅಥವಾ ಈ ಮೂರರ ಸಮನ್ವಯ, ಪ್ರಜಾಪ್ರಭುತ್ವದ ಕುರುಹು ಎಂದು ಕೆಲವರ ಅಭಿಪ್ರಾಯ. ಪ್ರಜೆಗಳು ಸಾಮೂಹಿಕವಾಗಿ ಜೀವನವನ್ನು ಪ್ರಜಾಪ್ರಭುತ್ವರೀತಿಯಲ್ಲಿ ನಿರ್ವಹಿಸಬಹುದು, ಆದರೆ ಅವರ ರಾಷ್ಟ್ರ ಸರ್ಕಾರ ಪ್ರಜಾಪ್ರಭುತ್ವ ಸರ್ಕಾರವಾಗದಿರಬಹುದು; ಸರ್ಕಾರವು ಪ್ರಜಾಭಿಮತವನ್ನು ಪಡೆದು ಪ್ರಜಾಪ್ರಭುತ್ವವೆನ್ನಿಸಿಕೊಂಡರೂ ಸಮಾಜ ಜೀವನ ಪ್ರಜಾಪ್ರಭುತ್ವಕ್ಕನುಗುಣವಾಗದಿರಬಹುದು. ಆದರೆ ಸಾಮಾನ್ಯವಾಗಿ ಸಾಮಾಜಿಕ, ಆರ್ಥಿಕಜೀವನವು ಪ್ರಜಾಸತ್ತಾತ್ಮಕವಾದರೆ, ರಾಜಕೀಯದಲ್ಲಿಯೂ ಅದೇ ರೀತಿಯಾಗಿರುವುದು. ಸಮಾಜವು ವರ್ಗಗಳಾಗಿ ಛಿದ್ರಿಸಲ್ಪಟ್ಟಿದ್ದರೆ, ಸರ್ಕಾರವು ಅಲ್ಪಸಂಖ್ಯಾತರ ಶ್ರೇಷ್ಠಜಾತಪ್ರಭುತ್ವವಾಗಿ ಪರಿಣಮಿಸುವುದು.

ಪ್ರಜಾಪ್ರಭುತ್ವದ ಲಕ್ಷಣಗಳ ನಿರೂಪಣೆ (ವಿವರಣೆ) ನಾನಾ ಬಗೆಯಾಗಿರುವುದು. ಬಹುಸಂಖ್ಯಾತ ಪ್ರಜಾಧಿಕಾರವೇ ಪ್ರಜಾಪ್ರಭುತ್ವವೆಂದೂ, ಗ್ರೀಕರು ವಿವರಿಸಿದ್ದಾರೆ. ಶ್ರೇಷ್ಠ, ಅಧಮ, ಶ್ರೀಮಂತ,

ಬಡವ, ಮಾಲಿಕ, ಸೇವಕ, ವರ್ಗ ಮುಂತಾದ ಕೃತಕಭೇದಗಳಿಲ್ಲದೆ ಇಡೀ ಪ್ರಜಾ ವರ್ಗದ ಅನೇಕ ಗಣ್ಯ ವ್ಯಕ್ತಿಗಳು ಸರ್ಕಾರ ಸೂತ್ರವನ್ನು ವಹಿಸಿದರೆ, ಅದು ಪ್ರಜಾಪ್ರಭುತ್ವವಾಗುವುದೆಂದು ಆಧುನಿಕ ರಾಜನೀತಿಜ್ಞರ ಅಭಿಮತ. ಪ್ರಜಾಪ್ರಭುತ್ವಗಳು ಎರಡುವಿಧ. ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರತಿನಿಧಿಪ್ರಭುತ್ವ. ರಾಷ್ಟ್ರದಪೌರರು ಸಭೆಗೂಡಿ ಶಾಸನಗಳನ್ನು ರಚಿಸುವುದು, ಅಥವಾ ಅಂಗೀಕರಿಸುವುದು, ವಿದೇಶಾಂಗನೀತಿಯನ್ನೂ ಅಂತರರಾಷ್ಟ್ರೀಯ ಒಪ್ಪಂದಗಳನ್ನೂ ನಿರ್ಧರಿಸುವುದು—ಮುಂತಾದ ಕರ್ತವ್ಯಗಳನ್ನು ನಿರ್ಣಯಿಸಿದಲ್ಲಿ ಪ್ರತ್ಯಕ್ಷಪ್ರಭುತ್ವವಾಗುವುದು. ಕೋಟ್ಯಾಂತರ ಪ್ರಜೆಗಳಿರುವ ಆಧುನಿಕರಾಷ್ಟ್ರಗಳಲ್ಲಿ ಪ್ರಜೆಗಳೆಲ್ಲರೂ ಒಂದು ನಿರ್ದಿಷ್ಟಪ್ರದೇಶದಲ್ಲಿ ಸಭೆಸೇರಿ ರಾಷ್ಟ್ರ ಕಾರ್ಯಗಳನ್ನು ವಿಮರ್ಶಿಸಿ ನಿರ್ಧಾರಕ್ಕೆ ಬಂದು ಆಡಳಿತಾಂಗಗಳನ್ನ ಕಾರ್ಯಕಾರಿಯಾಗುವಂತೆ ನಿರ್ಬಂಧಿಸಲು ಸಾಧ್ಯವಿಲ್ಲ. ನಗರರಾಷ್ಟ್ರಗಳಲ್ಲಿ ಇಡಿ ಪ್ರಜಾವರ್ಗ ಸರ್ಕಾರ ನೀತಿಯನ್ನು ನಿರ್ಣಯಿಸಲು ಸಭೆ ಸೇರುವುದು ಸಾಧ್ಯ. ಗ್ರೀಕ್ ಮತ್ತು ರೋಮನ್ ನಗರರಾಷ್ಟ್ರಗಳಲ್ಲಿ ಪ್ರಜಾವರ್ಗಸಭೆಗಳು ಪರಮಾಧಿಕಾರವನ್ನು ಪಡೆದು ರಾಷ್ಟ್ರ ಒಳಾಂಗ ಮತ್ತು ವಿದೇಶಾಂಗ ನೀತಿಗಳನ್ನು ನಿರ್ಧರಿಸಿ ಅವುಗಳನ್ನು ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ಪ್ರಯೋಗಿಸುತ್ತಿದ್ದವು. ಆಥೆನ್ಸ್‌ನಗರದಲ್ಲಿ ಎಕ್ಲೀಸಿಯಾ (Eclesia) ಪ್ರಜಾಸಭೆಯು ರೋಮನ್ ನಗರದಲ್ಲಿ ಕೊಮಿಟಿಯಾ ಸೆಂಚೂರಿಯಟ್, (Comitia Centuriata) ಕಂಸಿಲಿಯಂ ಪ್ಲೆಬಿಸ್ (Concilium Plebis) ಸಭೆಗಳು ರಾಷ್ಟ್ರಕಾರ್ಯಗಳನ್ನು ಜರುಗಿಸುತ್ತಿದ್ದವು. ಪ್ರತಿನಿಧಿಗಳನ್ನು ಚುನಾಯಿಸುವುದು, ಆಡಳಿತಾಧಿಕಾರಿಗಳನ್ನೂ ನ್ಯಾಯಾಧೀಶರನ್ನೂ ನೇಮಿಸುವುದು, ಕಂದಾಯಗಳನ್ನು ನಿರ್ಣಯಿಸುವುದು ಮತ್ತು ನಗರಾಧ್ಯಕ್ಷರು ಮತ್ತು ಆರ್ಕಾನ್ ಮುಂತಾದ ಅಧಿಕಾರಿಗಳು ನಿರೂಪಿಸಿದ ನಿರ್ಣಯಗಳನ್ನು ಅಂಗೀಕರಿಸುವುದು, ಅಧಿಕಾರಿಗಳ ಅವಧಿ ಮುಗಿದನಂತರ ಅವರ ಕಾರ್ಯಕಲಾಪ

ಗಳನ್ನು ಪರಿಶೀಲಿಸುವುದು, ತಪ್ಪಿತಸ್ಥರಾದಲ್ಲಿ ಗ್ರಾಫೆ ಪರನೋಮೋ (Graphe Parenomon) ಮುಂತಾದ ಪೌರೇಯ ಸ್ವಾತಂತ್ರ್ಯ ಸಾಧನೆಗಳನ್ನು ಪೌರೇಯನು ಸಭೆಯಲ್ಲಿ ಪ್ರಯೋಗಿಸಿ ಉನ್ನತಾಧಿಕಾರಗಳನ್ನು ಅವಹೇಳನಮಾಡಿ ದೇಶಭ್ರಷ್ಟರನ್ನಾಗಿ ಶಿಕ್ಷಿಸಿ ಕಳುಹಿಸುವುದು.—ಇವು ಪ್ರಜಾಸಭೆಯ ಮುಖ್ಯ ಕೆಲಸವಾಗಿದ್ದುವು.

ಆಧುನಿಕ ಪ್ರಜಾಪ್ರಭುತ್ವಗಳಲ್ಲಿ ಈ ವಿಧವಾದ ಅಧಿಕಾರವನ್ನು ಪಡೆದಿರುವ ಪ್ರಜಾಸಭೆಗಳಿಲ್ಲ. ಸ್ವಿಸ್‌ರಾಷ್ಟ್ರ ಅಪೆಂಜಲ್, ಉರಿ, ಉಂಟರ್‌ವಾಲ್ಡೆನ್, ಮತ್ತು ಗ್ಲಾರಸ್ (Appenzell, Uri, Wnterwalden, and Glarus) ಕಾಂಟೆನ್‌ಗಳಲ್ಲಿ ಇಡೀ ಪ್ರಜಾವರ್ಗವು ಕಂದಾಯವನ್ನು ನಿರ್ಧರಿಸುವುದಕ್ಕೂ, ಆಡಳಿತಾಧಿಕಾರಿಗಳನ್ನು ಚುನಾಯಿಸುವುದಕ್ಕೂ ಸಭೆ (Landes Gemeinde) ಸೇರುತ್ತಾರೆ. ಅಮೆರಿಕಾ ಸಂಯುಕ್ತ ರಾಷ್ಟ್ರದಲ್ಲಿ ಕೆಲವು ಸ್ಥಳೀಯಸರ್ಕಾರಗಳು ಪ್ರತ್ಯಕ್ಷ ಪ್ರಜಾಪ್ರಭುತ್ವ ತತ್ವವನ್ನು ಅನುಮೋದಿಸಿವೆ. ಎಲ್ಲೆಲ್ಲಿ ಶಾಸನ ನಿರೂಪಣೆ, ಶಾಸನ ವಿಮರ್ಶೆ ಮತ್ತು ಅಂಗೀಕಾರ ಮತ್ತು ರಿಕಾಲ್ ಪುನರಾವರ್ತನೆಯ ಸಾಧನೆಯಿಂದ ಅಧಿಕಾರಿಗಳ ನಿಯಂತ್ರಣವು (Initiative, Referendum and Recall) ಆಚರಣೆಯಲ್ಲಿದೆಯೋ ಅಲ್ಲಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ತತ್ವವು ಅನುಷ್ಠಾನವಲ್ಲಿದೆಯೆಂದು ನಿರ್ದಿಷ್ಟವಾಗಿ ಹೇಳಬಹುದು.

## ಪ್ರಜಾಪ್ರತಿನಿಧಿ ಪ್ರಭುತ್ವ

ಪ್ರಜಾಪ್ರತಿನಿಧಿ ಪ್ರಭುತ್ವಗಳಲ್ಲಿ ಪರಮಾಧಿಕಾರವನ್ನು ಪಡೆದಿರುವ ವರ್ಗ ಮತ್ತು ಅದನ್ನು ಪ್ರಯೋಗಿಸುವ ವರ್ಗ, ಎರಡು ಪ್ರತ್ಯೇಕವಾದವು. ಪ್ರಜಾವರ್ಗಕ್ಕೆ ಪರಮಾಧಿಕಾರವು ಸೇರಿರುವುದರಿಂದ ಪ್ರತ್ಯಕ್ಷ ಪ್ರಜಾಪ್ರಭುತ್ವದಂತೆ ಕಾಣಿಸಿಕೊಳ್ಳುತ್ತದೆ. ಆದರೆ ಪ್ರಜಾವರ್ಗವು ತಮಗೆ ಸಹಜವಾದ ಪರಮಾಧಿಕಾರವನ್ನು ದಕ್ಷತೆಯಿಂದ ತಮ್ಮ ಕಲ್ಯಾಣ

ಕ್ಕಾಗಿಯೇ ಉಪಯೋಗಿಸಿಕೊಳ್ಳಲು ಅಶಕ್ತರಾದುದರಿಂದ ಪ್ರತಿನಿಧಿಗಳನ್ನು ಚುನಾಯಿಸಿ ಅವರಿಗೆ ಅಧಿಕಾರವನ್ನು ಒಪ್ಪಿಸುವರು. ಸಾಮಾನ್ಯವಾಗಿ ಪ್ರತಿನಿಧಿಸರ್ಕಾರಗಳು ಒಂದು ವಿಧವಾದ ಪ್ರಜಾಪ್ರಭುತ್ವ ಸರ್ಕಾರವೇ ಆದರೂ, ವರಣಕರ್ತ ಸಮಾಜವು ಅತಿಸಂಕುಚಿತವಾದುದಲ್ಲಿ, ಮತವನ್ನು ಕೊಡುವ ಅಧಿಕಾರವು ಅಲ್ಪಸಂಖ್ಯಾತ ಪ್ರಜೆಗಳಿಗೆ ಮಾತ್ರ ದೊರಕಿದ್ದಲ್ಲಿ, ಪ್ರತಿನಿಧಿಸರ್ಕಾರವನ್ನು ಪ್ರಜಾಪ್ರಭುತ್ವವೆಂದು ಹೇಳಲು ಸಾಧ್ಯವಲ್ಲ. ವೈಯಕ್ತಿಕ ಮುದ್ರಣ, ಭಾಷಣ, ವಿಚಾರ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ಮತದಾರರ ಸಮಾಜವು ರಾಷ್ಟ್ರದ ಶಾಸನಸಭೆಗೂ ಮತ್ತು ಅಧಿಕಾರವರ್ಗಕ್ಕೂ ಪ್ರತಿನಿಧಿಗಳನ್ನು ಚುನಾಯಿಸುವುದು; ಪ್ರತಿನಿಧಿಗಳು, ಅಧಿಕಾರದಲ್ಲಿರುವವರಿಗೂ, ವರಣಕರ್ತಸಮಾಜದ ಮತ್ತು ತಮ್ಮ ಪ್ರತ್ಯೇಕ ವರಣ ಕ್ಷೇತ್ರದ ಅಭಿಮತವನ್ನು ಪ್ರತಿಬಿಂಬಿಸಿ ಪಾಲಿಸುವುದು, ಮತ್ತು ವರಣದಾರರ ಸಮಾಜದ ನಿಯಂತ್ರಣಕ್ಕೆ ಅಧೀನವಾಗಿರುವುದು— ಇವು ಪ್ರಜಾಪ್ರತಿನಿಧಿಪ್ರಭುತ್ವದ ಹೆಗ್ಗುರುತು. ಇವುಗಳಲ್ಲಿ ಯಾವುದೊಂದು ಲೋಪವಾದರೂ ಪ್ರತಿನಿಧಿಪ್ರಭುತ್ವವಾಗುವುದಿಲ್ಲ. ಅನೇಕ ರಾಷ್ಟ್ರಗಳಲ್ಲಿ ವರಣಕರ್ತಸಮಾಜವು ರಾಷ್ಟ್ರನಾಯಕನನ್ನು ಮತ್ತು ಕಾರ್ಯಾಂಗ ಮತ್ತು ಆಡಳಿತಾಂಗಗಳ ಅಧಿಕಾರಿಗಳನ್ನು ಚುನಾಯಿಸುವುದಿಲ್ಲ; ಸಚಿವರನ್ನು ಮತ್ತು ನ್ಯಾಯಾಧೀಶರನ್ನು ಕಾರ್ಯಾಂಗಸಮಿತಿ ಅಥವ ಶಾಸನಾಂಗಸಭೆಯು ನೇಮಿಸುತ್ತವೆ. ಆದುದರಿಂದ ರಾಜ್ಯಾಂಗಗಳಲ್ಲಿ ಪ್ರಧಾನಪಾತ್ರವಹಿಸುವ ಶಾಸನಸಭೆಯ ಸದಸ್ಯರನ್ನು ಮತದಾರರು ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿಸಿದ ಪಕ್ಷದಲ್ಲಿ ಅಂತಹ ಕ್ರಮವನ್ನು ಆಚರಿಸತಕ್ಕ ರಾಷ್ಟ್ರಗಳನ್ನು ಪ್ರಜಾಪ್ರತಿನಿಧಿ ರಾಷ್ಟ್ರಗಳೆಂದು ಕರೆಯಬಹುದು; ವಾಸ್ತವವಾಗಿ ಈ ತೆರನಾದ ರಾಷ್ಟ್ರಗಳು ಕುಲೀನಪ್ರಭುತ್ವವಿರುವ ರಾಷ್ಟ್ರವೆಂದು ಬ್ರೈಸ್ ರಾಜನೀತಿಜ್ಞನು ಹೇಳಿದ್ದಾನೆ. ಪ್ರತಿನಿಧಿಪ್ರಭುತ್ವ ಸರ್ಕಾರವನ್ನು ಪ್ರಜಾತಂತ್ರ ಪ್ರಭುತ್ವ ( Republican Government ) ವೆಂದೂ ಹೇಳ

ಬಹುದು. ಎಲ್ಲಿ ರಾಷ್ಟ್ರವು ವಿಸ್ತಾರವಾಗಿದ್ದು, ಕೋಟ್ಯಾಂತರಪ್ರಜೆಗಳಿಂದ ಕೂಡಿ, ಸುವ್ಯವಸ್ಥಿತವಾದ ವರಣಕರ್ತ ಸಮಾಜದಿಂದ ರಾಷ್ಟ್ರಾಡಳಿತ ವನ್ನು ನಿರ್ವಹಿಸಲು ಅಲ್ಪಸಂಖ್ಯೆಯಲ್ಲಿ ಮಾತ್ರ ಪ್ರತಿನಿಧಿಗಳನ್ನು ಚುನಾಯಿಸಲು ಅವಕಾಶವನ್ನು ಕಲ್ಪಿಸುವುದೋ ಅಂತಹ ರಾಷ್ಟ್ರವು ಪ್ರಜಾತಂತ್ರರಾಷ್ಟ್ರ, ಮತ್ತು ಪ್ರಜಾಪ್ರತಿನಿಧಿಪ್ರಭುತ್ವವು ಕ್ರಮವಿಕಾಸ ದಲ್ಲಿ ಪ್ರಜಾತಂತ್ರ ರಾಷ್ಟ್ರವಾಗುವುದು.

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗೂ ಮತ್ತು ರಾಜಕೀಯ ಸಂಸ್ಥೆಗಳಿಗೂ ನಿಕಟಸಂಬಂಧವಿದೆ. ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ವ್ಯಕ್ತಿಯು ಸ್ವಯಂಪ್ರೇರಣೆಯಿಂದಲೂ ಪೂರ್ಣಸ್ವಾತಂತ್ರ್ಯದಿಂದಲೂ ತನ್ನ ಪ್ರತ್ಯೇಕ ಜೀವನದ ಗುರಿಯನ್ನು ಸಾಧಿಸಬಹುದು ; ಆದರೆ ವ್ಯಕ್ತಿಯ ಹಿತ ಸಾಧನೆಗಾಗಿ ಸಂಸ್ಥೆಗಳ ಸಹಕರಣೆ ಅತ್ಯಾವಶ್ಯಕ. ವ್ಯಕ್ತಿಯ ಸ್ವಾತಂತ್ರ್ಯ ಸಾಧನವೇ ರಾಷ್ಟ್ರಕಾರ್ಯದ ಪ್ರಧಾನಗುರಿಯಾದರೆ ಪ್ರಗತಿಪರ ವ್ಯಕ್ತಿ ವಾದ (Liberalism) ವಾಗುವುದು; ಸಾಮಾಜಿಕ ಮತ್ತು ರಾಜ ಕೀಯ ಹಕ್ಕುಬಾಧ್ಯತೆಗಳ ಮೂಲಕ ಪ್ರಜಾವರ್ಗವು ವ್ಯಕ್ತಿಯ ಮತ್ತು ಸಮಾಜ ನಿಯಂತ್ರಣವನ್ನು ರಾಷ್ಟ್ರಕಲ್ಯಾಣಕ್ಕಾಗಿ ಬಯಸಿದರೆ ಪ್ರಜಾ ಪ್ರಭುತ್ವವಾಗುವುದು (Democracy). ಆರ್ಥಿಕಸ್ವಾತಂತ್ರ್ಯವಿರ ಬೇಕು ಮತ್ತು ರಾಜಕೀಯಾಧಿಕಾರವಿರಬೇಕೆಂದು ಬಯಸುವುದು ಮಾನವ ಕುಲಕ್ಕೆ ಸಹಜವಾದಗುಣ. ಪ್ರತಿಯೊಬ್ಬ ಪ್ರಜೆಯು ಅವನೊಳಗೆ ಅಡಗಿರುವ ಅತ್ಯುತ್ತಮವಾದ ಗುಣ ಮತ್ತು ಶಕ್ತಿಗಳನ್ನು ಹೊರಕ್ಕೆಳೆದು, ಅವುಗಳನ್ನು ವಿಕಾಸಗೊಳಿಸಿ, ಪುರುಷಾರ್ಥವನ್ನು ಗಳಿಸಲು ಅವನಿಗೆ ಪೂರ್ಣವಕಾಶವೊದಗಬೇಕು. ವ್ಯಕ್ತಿಯ ಪುರುಷಾರ್ಥಸಾಧನೆಗೆ ರಾಷ್ಟ್ರ ಸರ್ಕಾರ ಮತ್ತು ಇತರ ಸಂಸ್ಥೆಗಳು ಸಾಧನಗಳಾದರೂ, ಮಾನವನ ಪರ ಮಾರ್ಥಸಾಧನವು ಮಾನವನೇ ಹೊರತು ಮತ್ತು ಬೇರೆ ಅಲ್ಲ. ಆದಕಾರಣ ಪ್ರಭುಶಕ್ತಿಯು ವ್ಯಕ್ತಿ ಸ್ವಾತಂತ್ರ್ಯದೊಂದಿಗೆ ಸಮರಸವಾಗಬೇಕು. ಪ್ರಭುತ್ವವು ವ್ಯಕ್ತಿಯ ಮತ್ತು ಮಾನವಕುಲದ ಮಾನಸಿಕ, ದೈಹಿಕ ಮತ್ತು

ಸಮಾಜವಿಕಾಸಕ್ಕೆ ಸಾಧನವಾಗಬೇಕಾದರೆ ಪ್ರಜಾಬಲದ ಆಧಾರದಮೇಲೆ ರಚಿಸಲ್ಪಡಬೇಕಾದುದು ಅತ್ಯಾವಶ್ಯಕ. ಆಗ ವ್ಯಕ್ತಿಯ ಶಕ್ತಿಯು ಸದ್ವಿನಿಯೋಗವಾದಂತಾಗಿ ನೀತಿಸಮ್ಮತವಾಗುವುದು. ವ್ಯಕ್ತಿಯು ಸಮಾಜ ಜೀವನದ ಪ್ರಭಾವಕ್ಕೊಳಗಾಗಿ ಸಮಾಜ ಜೀವನದ ವಿಕಾಸಕ್ಕಾಗಿ ತನ್ನ ಪ್ರಭಾವವನ್ನು ಬೀರಿ, ತನ್ನ ಮತ್ತು ಸಮಾಜ ಹಿತಕ್ಕಾಗಿ ದುಡಿಯುವುದು ಪ್ರಜಾಪ್ರಭುತ್ವದ ವಿಧಾನ. ವ್ಯಕ್ತಿಯು ಇತರ ವ್ಯಕ್ತಿಗಳೊಡನೆ ಸ್ವತಂತ್ರವಾಗಿ, ಕೂಲಂಕಶವಾಗಿ ವಾದಿಸಿ ಮತ್ತು ಚರ್ಚಿಸಿ, ತನ್ನ ಆತ್ಮವಿಕಾಸಕ್ಕೆ ಬೇಕಾದ ಸಾಧನೆಗಳನ್ನು ಪಡೆಯುತ್ತಾನೆ. ಪ್ರಜಾಪ್ರಭುತ್ವವೆಂದರೆ ಮತದಾರರು ಕೊಡುವ ವೋಟಲ್ಲ; ಮತದಾರರ ತಲೆಗಳನ್ನು ಎಣಿಸಿ ನಿರ್ಮಾಣವಾದುದಲ್ಲ. ಜಟಿಲ ಪ್ರಶ್ನೆಗಳನ್ನು ಪರಿಹರಿಸಲು ಸರ್ವರೂ ಸಭೆ ಸೇರಿ, ಬಹುಮತ ಅನುಮತಿಯನ್ನು ಸಮ್ಮಿಳಿತರೂಪದಲ್ಲಿ ಪಡೆಯುವ ಕ್ರಮ. ಪ್ರಜಾವರ್ಗದ ಮನೋಧರ್ಮ ಮತ್ತು ಇಂಗಿತವನ್ನು ತಿಳಿದು ರಾಷ್ಟ್ರಹಿತಸಾಧನೆಗಾಗಿ ಪರಿವರ್ತಿಸುವ ವಿಧಾನ; ಚರ್ಚೆಗಳಾಧಾರದಮೇಲೆ ರಚಿಸಲ್ಪಡುವ ಸರ್ಕಾರ.

ಸ್ವಾರ್ಥವನ್ನು ದೂಡಿ ಇತರರ ಅಭ್ಯುದಯವನ್ನು ಕೋರಿ ಪ್ರತಿಯೊಬ್ಬರ ಮತ್ತು ಇಡೀ ಪ್ರಜಾವರ್ಗದ ಹಿತವನ್ನು ಬಯಸುವ ಮನೋವರ್ತಿಯನ್ನು ಪಾಲಿಸುವುದು ಸುಲಭಸಾಧ್ಯವಲ್ಲ. ಆತ್ಮಸಮ್ಯಮ ಜ್ಞಾನ, ಮತ್ತು ಸಾರ್ವಜನಿಕ ಚಿಂತೆಯಿಂದ ಕೂಡಿ ವಿವಾದಾಸ್ಪದವಾದ ಪ್ರಶ್ನೆಗಳನ್ನು ದ್ವೇಷ, ಅಸೂಯೆ, ಮತ್ಸರ, ಮದ ರಹಿತವಾದ ದೃಷ್ಟಿಯಿಂದ ಪರ್ಯಾಲೋಚಿಸುವುದು ಪ್ರಜಾಪ್ರಭುತ್ವದ ಧರ್ಮ; ಸಹಕಾರ ಸಹಯೋಗಗಳ ಮೂಲಕ ಸಮಸ್ತ ಪ್ರಜಾಸಮ್ಮತಿಯನ್ನು ರಾಷ್ಟ್ರಹಿತಕ್ಕಾಗಿ ಸಾಧಿಸುವ ಪವಿತ್ರವಾದ ಮಹೋದ್ಯಮ. ಸ್ಪರ್ಧೆ ಮತ್ತು ಮನೋವಿಕಾರಗಳಿಲ್ಲದೆ ಅನ್ಯರ ಮನೋಧರ್ಮ ಪ್ರವೃತ್ತಿಗಳನ್ನು ತಿಳಿಯುವುದು ಮತ್ತು ನಿರಂತರವೂ ಅರಿಷಡ್ವರ್ಗಗಳ ಗೊಂದಲಕ್ಕೆ ಸಿಕ್ಕದೆ ಪ್ರಜಾಹಿತವನ್ನು ಚಿಂತಿಸುವುದು, ಕಷ್ಟತರವಾದುದು. ಸಂಸ್ಥೆಗಳು ಮತ್ತು ಪಕ್ಷ

ಗಳು ಸ್ವಪ್ರಯೋಜನಕ್ಕಾಗಿ ಪ್ರವರ್ತಿಸಿ, ಸಂಪತ್ತು ಮತ್ತು ಅಧಿಕಾರಗಳ ಆಕಾಂಕ್ಷೆ ಹುಟ್ಟಿಸಿ ವ್ಯಕ್ತಿಯ ಪಾರಮಾರ್ಥಿಕ ಚಿಂತನೆಯನ್ನು ಜರ್ಮನಿ ಮತ್ತು ಇಟಲಿ ರಾಷ್ಟ್ರಗಳಲ್ಲಿದ್ದಂತೆ ಕೆಡಸಿದರೆ ಪಕ್ಷದಲ್ಲಿಯೇ ಪ್ರಜಾ ಪ್ರಭುತ್ವವು ಸ್ವಚ್ಛಂದ ಅಥವ ನಿರಂಕುಶ ಪ್ರಭುತ್ವವಾಗುವುದು. ಚರ್ಚಾ ಮೂಲಕವೇ ಪ್ರಜಾಪ್ರಭುತ್ವವನ್ನು ಸಾಧಿಸಬೇಕು; ಸಹಕಾರಕ್ಕೆ ಒಳ ಪಡುವ ವ್ಯಕ್ತಿ ಮತ್ತು ಅವನ ಮನೋಧರ್ಮಕ್ಕನುಗುಣವಾದ ಮತ್ತು ಚರ್ಚೆಯನ್ನು ಮುಂದುವರಿಸುವ ನಿರ್ಧಾರಕ್ಕೆ ತರುವ ಪಕ್ಷ, ವರಣಕರ್ತ ಸಮಾಜ, ಶಾಸಕಾಂಗ ಸಭೆ, ಮತ್ತು ಸಚಿವಮಂಡಲ - ಇವುಗಳು ಪ್ರಜಾ ಪ್ರತಿನಿಧಿ ಪ್ರಭುತ್ವದ ಮುಖ್ಯಸಾಧನಗಳು. ವಿಷಯವಿಮರ್ಶೆ ಪಕ್ಷದ ಮೆಟ್ಟಲಿನಲ್ಲಿ ಮೊದಲಾಗಿ, ವರಣಕರ್ತ ಸಮಾಜ, ಮತ್ತು ಶಾಸನಸಭೆ ಗಳ ಅಂತಸ್ತಿನಲ್ಲಿ ವಿಶೇಷವಾಗಿ ವಾದಿಸಲ್ಪಟ್ಟು ಸಚಿವ ಮಂಡಲದ ಮೆಟ್ಟಲಿ ನಲ್ಲಿ ಒಂದು ನಿರ್ದಿಷ್ಟವಾದ ನಿರ್ಧಾರದಲ್ಲಿ ನಿಲ್ಲುವುದು. ಇದರಿಂದ ಪಕ್ಷವಾಗಲೀ ಮತ್ತು ಮಂತ್ರಿಮಂಡಲವಾಗಲೀ ಪ್ರಾಧಾನಸಾಧನ ಗಳೆಂದಲ್ಲ. ಪ್ರಜಾಪ್ರಭುತ್ವವು ಸುಗಮವಾಗಿ ಜರಗಬೇಕಾದರೆ ಗೋಪರ ದೋವಾದಿಯಲ್ಲಿ ರಚಿತವಾಗಿರುವ ಈ ಸಾಧನೆಗಳು ನ್ಯೂನಾತಿರಿಕ್ತವಿಲ್ಲದೆ ತಮ್ಮ ತಮ್ಮ ಪ್ರತ್ಯೇಕ ಜವಾಬ್ದಾರಿಯನ್ನು ನಿರ್ವಹಿಸಬೇಕು. ಪಕ್ಷಗಳು ತಮ್ಮ ಉಮೇದುವಾರರನ್ನು ಮತ್ತು ಸಿದ್ಧಾಂತಗಳನ್ನು ವರಣಕರ್ತ ಸಮಾಜದ ಅವಗಾಹನೆಗೆ ತರುವುವು; ಪಕ್ಷ ಸಿದ್ಧಾಂತಗಳನ್ನು ಮತ ದಾರರು ವಿಮರ್ಶಿಸಿ ಶಾಸಕಾಂಗದ ಸದಸ್ಯರನ್ನು ಚುನಾಯಿಸುವರು. ಶಾಸನಸಭೆಯು ವರಣಕ್ಷೇತ್ರದಲ್ಲಿ ಪರಿಶೀಲಿಸಲ್ಪಟ್ಟ ಸಿದ್ಧಾಂತಗಳನ್ನು ಕೂಲಂಕಶವಾಗಿ ಚರ್ಚಿಸಿ ತಾನು ನಿರ್ಮಿಸಿದ ಸಚಿವಮಂಡಲಕ್ಕೆ ನಿಶ್ಚ ಯಕ್ಕೆ ಬರುವ ಜವಾಬ್ದಾರಿಯನ್ನು ಹೊರಸುವುದು. ಒಂದು ಕಡೆ ಮತ ದಾರರ ಅಭಿಮತವನ್ನು ತಿಳಿದು ನಿರ್ದಿಷ್ಟ ಮತ್ತು ಜವಾಬ್ದಾರಿಯುತವಾದ ತನ್ನ ಅಭಿಮತವನ್ನು ರಚಿಸುವುದು: ಮತ್ತೊಂದು ಕಡೆ ತನ್ನ ಅಭಿಮತದ ಪ್ರಭಾವವನ್ನು ಸಚಿವಮಂಡಲದ ಸಮೀಕ್ಷಣಕ್ಕೆ ತಂದು, ಸಮಯೋಚಿತ

ವಾದ ನಿರ್ಧಾರಕ್ಕೆ ಬರಲು ಸಚಿವಮಂಡಲಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವುದು - ಇವು ಶಾಸನಸಭೆಯ ವಿಶೇಷ ಜವಾಬ್ದಾರಿ.

ಪ್ರಜಾಪ್ರತಿನಿಧಿ ಪ್ರಭುತ್ವವು ಸೂಕ್ಷ್ಮವಾದ ತಕ್ಕಡಿಯಂತೆ, ಸಾಧನೆಗಳ ಸಾಮರಸವಿಲ್ಲದಿದ್ದರೆ ಅವಿವೇಕವಾಗುವುದು. ವರಣಕರ್ತ ಸಮಾಜವು ಶಾಸಕಾಂಗದ ಸದಸ್ಯರನ್ನು ಚುನಾಯಿಸುವುದರ ಜೊತೆಗೆ ಶಾಸನಗಳ ನಿರ್ಧಾರ ಮತ್ತು ವಿಮರ್ಶೆಗಳ ಜವಾಬ್ದಾರಿಯನ್ನು ಪಡೆಯುವುದು; ಶಾಸನಸಭೆಯು ಸಮಿತಿಗಳ ಮೂಲಕ ಸಚಿವಮಂಡಲಿಯನ್ನು ನಿಯಂತ್ರಿಸಿ ನಿಶ್ಚಿತಗಳನ್ನು ಒಪ್ಪುವಂತೆ ನಿರ್ಬಂಧಿಸುವುದು; ಸಚಿವಮಂಡಲವು ಶಾಸನಸಭೆ ಮತ್ತು ಮತದಾರರಿಗೂ ಇರುವ ತನ್ನ ಜವಾಬ್ದಾರಿಯನ್ನು ಉಲ್ಲಂಘಿಸಿ ಪ್ರಧಾನ ಪಕ್ಷಗಳ ಅಧೀನವಾಗುವುದು; ಪಕ್ಷನಾಯಕರು ಶಾಸನಸಭೆ ಮತ್ತು ಮಂತ್ರಿಮಂಡಲಗಳನ್ನು ನ್ಯಾಯಮಾರ್ಗದಿಂದ ತಿರಿಗಿಸಿ ಪಕ್ಷಸಿದ್ಧಾಂತ ಸಾಧನಗಳಾಗಿ ಪರಿವರ್ತಿಸುವುದು — ಈ ಪರಿಸ್ಥಿತಿಯು ಪ್ರಜಾಪ್ರಭುತ್ವವನ್ನು ಬಲಹೀನವನ್ನಾಗಿ ಮಾಡಿ ಅಂತ್ಯದಲ್ಲಿ ನಾಶಮಾಡುವುದು.

ರಾಷ್ಟ್ರದಲ್ಲಿ ರಾಜಕೀಯ ಪ್ರಶ್ನೆಗಳನ್ನು ವಿಮರ್ಶಿಸುವ ಸಾಧನಗಳಲ್ಲಿ ಪಕ್ಷವು ಅತಿಮುಖ್ಯವಾದುದು. ಪ್ರಶ್ನೆಗಳ ವಾದವನ್ನು ಪಕ್ಷವೇ ಮೊದಲು ಮಾಡುವುದರಿಂದ, ಎರಡು ಪಕ್ಷಗಳಿಗಿಂತ ಹೆಚ್ಚಾಗಿ ಪಕ್ಷಗಳು ಮತದಾರರ ಅಭಿಮತಗಳನ್ನು ನಿರ್ಮಿಸಲು ಅಥವ ಪ್ರತಿಬಿಂಬಿಸಲು ಆವಿರ್ಭವಿಸಿದರೆ ಉಪಪ್ರಭುತ್ವಕ್ಕೆ ದಾರಿಯಾಗುವುದು. ಏಕಪಕ್ಷನಾಯಕತ್ವಕ್ಕೆ ರಾಷ್ಟ್ರವು ಒಳಗಾದರೆ ಜರ್ಮನಿ ಮತ್ತು ಇಟಲಿ ರಾಷ್ಟ್ರಗಳಲ್ಲಿದ್ದಂತೆ ಸರ್ಕಾರವೇರ್ಪಟ್ಟು, ಪ್ರಜಾಪ್ರಭುತ್ವವು ನಿರ್ಮೂಲವಾಗುವುದು. ಸ್ವಚ್ಛಂದ ಪ್ರಭುತ್ವವಾಗದಂತೆ ತಡೆಗಳನ್ನು ರಚಿಸಿ, ಪ್ರಜಾಪ್ರಭುತ್ವವನ್ನು ಪಾಲಿಸಬೇಕೆಂದರೆ, ವ್ಯಕ್ತಿ ಮತ್ತು ಜನಾಂಗವು ಪ್ರಭುತ್ವಕ್ಕನುಗುಣವಾದ ಮನೋಭಾವನೆಯನ್ನು ಬೆಳಸುವುದು; ಮತದಾರರ ವಿಶ್ವಾಸವನ್ನು ರಾಜಕೀಯದಲ್ಲಿ ಕಳೆದುಕೊಂಡರೆ ಸೋಲನ್ನು ಶಾಂತಚಿತ್ತದಿಂದ ಅಂಗೀಕರಿಸುವುದು;

ಉದಾತ್ತ ವಿಚಾರಗಳಲ್ಲಿ ಸಾರ್ವಜನಿಕ ಅಂಗೀಕಾರ, ತಾತ್ಕಾಲಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಮನ್ನಿಸುವುದು-ಇವು ಮುಖ್ಯವಾದುವು; ಪ್ರಜಾಪ್ರಭುತ್ವದ ಪ್ರಗತಿಯಲ್ಲಿ ನವೀನಕಲ್ಪನೆಗಳೂ ಮತ್ತು ಕ್ರಮಗಳೂ, ಆಚರಣೆಗೆ ಬಂದಿವೆ. ಆರ್ಥಿಕ ಸ್ಥಿತಿಗತಿಗಳ ಆಧಾರದಮೇಲೆ ನೂತನ ಸಂಸ್ಥೆಗಳು ಏರ್ಪಟ್ಟಿವೆ. ರಾಷ್ಟ್ರದ ಆರ್ಥಿಕಸ್ಥಿತಿಯನ್ನು ಪರಿಶೀಲಿಸುವ ಆರ್ಥಿಕ ಸಮಿತಿಗಳು ಶಾಸನಸಭೆಗಳೊಡನೆ ಸಹಕರಿಸುತ್ತಿವೆ. ಸಚಿವ ಮಂಡಲವು ಪ್ರಾಜ್ಞಿಗಳೂ, ರಾಜಕಾರಣಪಟುಗಳೂ ಮತ್ತು ಅನುಭವಶಾಲಿಗಳೂ ಪ್ರವೀಣರ ಸಮಿತಿಗಳನ್ನು ರಚಿಸಿ ಅವರ ಸಲಹೆಗಳನ್ನು ರಾಜನೀತಿ ನಿಶ್ಚಯಗಳನ್ನು ಮಾಡುವಾಗ ಉಪಯೋಗಿಸಿಕೊಳ್ಳುತ್ತಿವೆ. ವಿಧಾಯಕವಾದ ಕ್ರಮದಲ್ಲಿ ರಾಜ್ಯಾಂಗಗಳು ನಡೆದಲ್ಲಿ ಮತ್ತು ಅಂಗಗಳ ಪರಸ್ಪರ ಸೌಹಾರ್ದವು ಏರ್ಪಟ್ಟಲ್ಲಿ, ಪ್ರಜಾಪ್ರತಿನಿಧಿ ಪ್ರಭುತ್ವವು ಯಶಸ್ವಿಯಾಗುವುದು.

# ಪ್ರಕರಣ ೪

## ರಾಜ್ಯಾಂಗ ಪದ್ಧತಿಗಳು

ಪ್ರತಿಯೊಂದು ರಾಷ್ಟ್ರದಲ್ಲಿಯೂ, ಪ್ರಜೆ, ಸಂಸ್ಥೆಗಳೂ ಸರ್ಕಾರದ ಅಂಗಗಳೂ ಇವೆ; ಇವುಗಳಿಗೆ ಪರಸ್ಪರ ಸಂಬಂಧವಿದೆ. ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಸೌಹಾರ್ದಸಂಬಂಧಗಳು ಏರ್ಪಟ್ಟು ಆಡಳಿತಾಂಗದ ಸ್ವಚ್ಛಂದ ವರ್ತನೆಗೆ ಪ್ರತಿಬಂಧಕಗಳೂ, ಪ್ರಜಾಹಕ್ಕು ಸ್ವಾತಂತ್ರ್ಯಗಳ ಆಚರಣೆಗೆ ಅನುಕೂಲತೆಗಳೂ ವ್ಯವಸ್ಥಿತವಾದಲ್ಲಿ ಅಂಥ ವ್ಯವಸ್ಥೆಯನ್ನು ರಾಷ್ಟ್ರವಿಧಾನವೆಂದು ಹೇಳಬಹುದು. ವಿಧಾನ (Constitution) ವೆಂಬ ಪದವನ್ನು ರಾಜನೀತಿಜ್ಞರು ಬೇರೆಬೇರೆಯಾಗಿ ವಿವರಿಸಿದ್ದಾರೆ. ರಾಷ್ಟ್ರವನ್ನು ಮನುಷ್ಯನ ದೇಹಕ್ಕೆ ಹೋಲಿಸಿ ದೇಹದ ಸಮಸ್ತ ಅಂಗಗಳ ರಚನೆ, ನಿಕಟ ಸಂಬಂಧಗಳನ್ನು ವಿವರಿಸಬಹುದು. ಲಿಖಿತ ಮತ್ತು ಅಲಿಖಿತ ಶಾಸನಗಳಿಂದಲೂ, ಪ್ರಜಾಭಿಪ್ರಾಯಗಳೂ ಮತ್ತು ಪ್ರಜಾಹಕ್ಕುಗಳಿಂದಲೂ ಕೂಡಿರುವ ರಾಷ್ಟ್ರವನ್ನು ವಿಧಾನವೆನ್ನಬಹುದು; ಪರಮಾಧಿಕಾರದ ರಚನೆ ಮತ್ತು ರಾಷ್ಟ್ರದ ಪರಮಾಧಿಕಾರದ ವಿಭಜನೆಯನ್ನು ಸೂಚಿಸುವ ರೀತಿಗೂ ವಿಧಾನವೆಂದು ಹೆಸರು. ವಿಧಾನವೆಂಬುದು ರಾಷ್ಟ್ರಾಂಗದ ತಿದ್ದುಪಡಿಗೆ ಪವಿತ್ರವಾದ ಒಂದು ಸಾಧನವೆಂದು ಟಾಕ್‌ವೆಲ್ (Tocquelle) ಹೇಳಿದ್ದಾನೆ. ಏಕಮುಖರಾಷ್ಟ್ರಗಳಲ್ಲಿ (Unitary) ಸಾಮಾನ್ಯ ಮತ್ತು ವಿಶೇಷ ಕಾನೂನುಗಳಿಗೆ ಅಂತರವಿಲ್ಲ; ಆದರೆ ಸಂಯುಕ್ತ ರಾಷ್ಟ್ರಗಳಲ್ಲಿ ನಿತ್ಯ ಜೀವನಕ್ಕೆ ಸಂಬಂಧಪಟ್ಟ ಸಾಮಾನ್ಯ ಕಾನೂನುಗಳನ್ನು ರಚಿಸುವ ಅಂಗಗಳು, ವಿಶೇಷ ಕಾನೂನುಗಳನ್ನು ರಚಿಸುವ ಅಂಗಗಳು ಬೇರೆಬೇರೆಯಾಗಿವೆ. ರಾಷ್ಟ್ರಾಂಗಗಳ ಮೂಲಧಾರ ಪರಿವರ್ತನೆಗಳನ್ನು ಮಾಡುವ ಕ್ರಮವೂ, ಸಾಮಾನ್ಯಶಾಸನಗಳನ್ನು ಮಾಡುವ ಕ್ರಮವೂ ಏಕಮುಖ ರಾಷ್ಟ್ರಗಳಲ್ಲಿ ಒಂದೆ; ಆದರೆ ಸಂಯುಕ್ತ ರಾಷ್ಟ್ರಗಳಲ್ಲಿ ಇವು ಪ್ರತ್ಯೇಕವಾಗಿರುವುದರಿಂದ

ಸಂಯುಕ್ತರಾಷ್ಟ್ರಗಳನ್ನು ವಿಧಾನ ರಾಷ್ಟ್ರಗಳು ಎಂದು ಕರೆಯುಬಹುದು. ಅಲ್ಲದೆ ಯಾವ ದೇಶದಲ್ಲಿ ಶ್ರೇಷ್ಠ ನ್ಯಾಯಾಸ್ಥಾನಕ್ಕೆ (Supreme Court) ಶಾಸನ ಸಭೆಗಳು ರಚಿಸಿದ ಕಾನೂನುಗಳನ್ನು ಪರಿಶೀಲಿಸಿ ಅವು ಪ್ರಜಾಭ್ಯುದಯಕ್ಕೆ ಪ್ರತಿಬಂಧಕವಾದುದಲ್ಲಿ ರದ್ದುಗೊಳಿಸುವ ಪರಮಾಧಿಕಾರವು ಸೇರಿದೆಯೋ ಅಂತಹ ದೇಶವನ್ನು ವಿಧಾನ ರಾಷ್ಟ್ರವೆನ್ನಬಹುದು.

ಪ್ರತಿಯೊಂದು ರಾಷ್ಟ್ರವೂ ಶಾಂತಿ ಶಿಸ್ತನ್ನು ಪರಿಪಾಲಿಸುವುದಕ್ಕಾಗಿಯೂ ಪ್ರಜಾಹಕ್ಕು ಬಾಧ್ಯತೆಗಳನ್ನು ಕಾಪಾಡುವುದಕ್ಕಾಯೂ ಸುವ್ಯವಸ್ಥಿತ ಸಂಸ್ಥೆಗಳಿಂದ ಕೂಡಿರುತ್ತದೆ. ಇಂಗ್ಲೆಂಡ್ ಮತ್ತು ಫ್ರೆಂಚ್ ರಾಷ್ಟ್ರಗಳು ಕ್ರಮಬದ್ಧವಾದ ಆಡಳಿತಾಂಗಗಳನ್ನು ಹೊಂದಿವೆ; ಮತ್ತು ಪೌರೇಯ, ವೈಯಕ್ತಿಕ ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಪ್ರಜೆಗಳಿಗೆ ಗಳಿಸಿಕೊಟ್ಟವೆ; ಆದರೂ ಆಧುನಿಕ ರೀತಿಯಲ್ಲಿ ಇವು ರಚನಾತ್ಮಕರಹಿತ ವಿಧಾನ (Unformed Constitution) ವೆಂದು ಪರಿಗಣಿಸಲ್ಪಟ್ಟವೆ. ರಾಷ್ಟ್ರ ವಿಧಾನವೆನ್ನುವುದು ಲಿಖಿತವಾದುದು; ಇದು ನಿರ್ಧಿಷ್ಟವಾದ ಅಭಿಪ್ರಾಯ. ಲಿಖಿತ ವಿಧಾನವು ರಾಷ್ಟ್ರಸರ್ಕಾರ ರಚನೆಯಲ್ಲಿ ಒಂದು ನೂತನ ಕಲ್ಪನೆ. ಸಂಪೂರ್ಣತೆ ಪಡೆದ ವಿಧಾನದಲ್ಲಿ ಮೂರು ತತ್ವಗಳು ಅಡಗಿವೆಯೆಂದು ಬರ್ಗೆಸ್ (Burgess) ನ ಅಭಿಪ್ರಾಯ. ರಾಷ್ಟ್ರ ಸ್ಥಿತಿಗತಿಗಳನ್ನೂ ಧರ್ಮವ್ಯವಸ್ಥೆಗಳನ್ನೂ ಪ್ರಜಾಭ್ಯುದಯಕ್ಕನುಗುಣವಾಗಿ ಅತ್ಯಗತ್ಯವಾದ ತಿದ್ದುಪಡಿ ಮಾಡುವ ಅಂಗರಚನೆಯೇ ಮೊದಲನೆಯ ತತ್ವ; ರಾಷ್ಟ್ರ ಜೀವನದಲ್ಲಿ ಕಂಡುಬರುವ ನ್ಯೂನತೆಗಳನ್ನು ಹೋಗಲಾಡಿಸಿ ಪ್ರಗತಿಪರ ಭಾವನೆಗಳನ್ನು ಅಂಗೀಕರಿಸಿ ರಾಷ್ಟ್ರಾಂಗಗಳ ಮತ್ತು ಅವುಗಳ ಅಧಿಕಾರ ಮತ್ತು ಸಂಬಂಧಗಳ ಮಾರ್ಪಾಟಾದಲ್ಲಿ ವ್ಯಕ್ತಿ ಮತ್ತು ಪ್ರಜಾಸ್ವಾತಂತ್ರ್ಯವಿಧಾನ ಸಾಧ್ಯ; ಇದು ಎರಡನೆಯ ತತ್ವ. ಪ್ರಜಾ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕಾದರೆ ಕ್ರಮಬದ್ಧವಾದ ಸರ್ಕಾರ ರಚನೆಯಾಗಬೇಕು; ಇದು ವಿಧಾನ ಸರ್ಕಾರ; ರಾಷ್ಟ್ರ ವಿಧಾನದಲ್ಲಿ ಪರಮಾಧಿಕಾರವು ಐಕ್ಯವಾಗಿದೆ; ಪರಮಾಧಿಕಾರವು ಅವಿಚ್ಛಿನ್ನವಾದುದು. ವಿಧಾನವೇ

ಪೌರೇಯ ಸ್ವಾತಂತ್ರ್ಯದ ತಳಹದಿ; ರಾಜ್ಯಾಂಗಗಳ ಮತ್ತು ಸ್ವಚ್ಛಂದಿಕಾರಿಗಳ ದುರ್ವರ್ತನೆಗೆ ವಿಧಾನವು ಪ್ರತಿಬಂಧಕ; ಹಾಗೆಯೇ ಯುದ್ಧಮುಂತಾದ ವಿಶೇಷ ಪರಿಸ್ಥಿತಿಗಳಲ್ಲಿ ಪೌರೇಯ ಸ್ವಾತಂತ್ರ್ಯವನ್ನು ತಾತ್ಕಾಲಿಕವಾಗಿ ವಿಧಾನವು ನಿಯಂತ್ರಿಸುತ್ತದೆ; ಕೊನೆಯದಾಗಿ ರಾಷ್ಟ್ರ ಸರ್ಕಾರ ಮತ್ತು ಸರ್ಕಾರಾಂಗಗಳನ್ನು ರಚಿಸಿ ಅವುಗಳ ಅಧಿಕಾರದಾಚರಣೆಯಲ್ಲಿ ಮಾರ್ಗದರ್ಶಿಕವಾಗಿದೆ. ಇದು ಮೂರನೆಯ ತತ್ವ.

ರಾಷ್ಟ್ರಗಳನ್ನು ಲೋಹ ಮತ್ತು ಸಲಿಲ ವಿಧಾನಗಳೆಂದು ಬ್ರೈಸ್ ರಾಜನೀತಿಜ್ಞನು ವಿಭಾಗಿಸಿದ್ದಾನೆ. ಅನೇಕ ರಾಷ್ಟ್ರಗಳಲ್ಲಿ ಸಂಪ್ರದಾಯ, ಪ್ರಾಚೀನ ನಡೆವಳಿಕೆಗಳು ಶಾಂತಿ ಮತ್ತು ಶಿಸ್ತುಗಳಿಗೆ ಮೂಲಾಧಾರವಾದವು. ಯಾವ ದೇಶಗಳಲ್ಲಿ ವೈಯಕ್ತಿಕ ಮತ್ತು ಪೌರೇಯ ಸ್ವಾತಂತ್ರ್ಯಗಳು ಸಾಂಪ್ರದಾಯಕವಾಗಿ ವಿವರಣೆ ಹೊಂದಿವೆಯೋ ಅಂತಹ ರಾಷ್ಟ್ರಗಳು ಸಲಿಲ (Flexible) ರಾಷ್ಟ್ರಗಳು; ಯಾವದೇಶಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಪೌರೇಯ ಭಾವನೆಗಳನ್ನು ಪರಮಾಧಿಕಾರವನ್ನು ಹೊಂದಿದ ಶಾಸನಸಭೆಗಳಾಗಲಿ ಅಥವ ರಾಷ್ಟ್ರವಿಧಾನವಾಗಲಿ ಕ್ರೋಢೀಕರಿಸಿ, ರಾಷ್ಟ್ರಶಾಸನಗಳ ರೂಪವಾಗಿ ನಿರ್ಧರಿಸಿ, ಪ್ರಜಾವರ್ಗವನ್ನೂ ನಿಯಂತ್ರಿಸಲ್ಪಟ್ಟಿವೆಯೋ ಅಂತಹ ರಾಷ್ಟ್ರಗಳು ಲೋಹ (Rigid) ರಾಷ್ಟ್ರಗಳು; ಸಲಿಲ ರಾಷ್ಟ್ರಗಳು ಅಲಿಖಿತ ವಿಧಾನ ರಾಷ್ಟ್ರವಾಗುವುದು. ಇಲ್ಲಿ ನಿಯಮಗಳನ್ನೂ, ಮೂಲತತ್ವಗಳನ್ನೂ ಸ್ವಾತಂತ್ರ್ಯಭಾವನೆಗಳನ್ನೂ ಅಧಿಕಾರಯುತವಾಗಿಯೂ ಮತ್ತು ನಿರ್ದಿಷ್ಟವಾಗಿಯೂ ಶಾಸನರೂಪದಲ್ಲಿ ರಚಿಸಲ್ಪಟ್ಟಿಲ್ಲ. ಸ್ವಾತಂತ್ರ್ಯವನ್ನು ವಿವರಿಸುವ ಶಾಸನಗಳು ನಿರ್ದಿಷ್ಟವಾಗಿಲ್ಲವೆಂದರೆ, ಆ ರಾಷ್ಟ್ರಗಳಲ್ಲಿ ವ್ಯಕ್ತಿ ಮತ್ತು ಪ್ರಜಾಸ್ವಾತಂತ್ರ್ಯವಿಲ್ಲವೆಂದರ್ಥವಲ್ಲ. ನಿದರ್ಶನವಾಗಿ ಇಂಗ್ಲೆಂಡಿನಲ್ಲಿ ಪ್ರಜಾಸ್ವಾತಂತ್ರ್ಯವು ಪ್ರಾಚೀನಕಾಲದಿಂದಲೂ ಸಾಂಪ್ರದಾಯಕವಾಗಿ ಬೆಳೆದು ಬಂದಿದೆ. ಇತ್ತೀಚೆಗೆ ರಾಷ್ಟ್ರ ಸರ್ಕಾರದ ಜವಾಬ್ದಾರಿಯು ಸಂಕೀರ್ಣವಾಗಿ ಸ್ವಾತಂತ್ರ್ಯದಾಹವು ಹೆಚ್ಚಿ, ಕ್ರಮಬದ್ಧಶಾಸನರೂಪದಲ್ಲಿ ಪ್ರಗತಿಪರ

ಸಮಾಜದ ಕೇಳಿಕೆಗಳನ್ನು ವಿವರಿಸುವ ನಿರ್ಬಂಧವು ತಲೆದೋರಿದೆ. ಸುಮಾರು 75 ವರ್ಷಗಳಿಂದೀಚೆಗೆ ಇಂಗ್ಲೆಂಡಿನಲ್ಲಿ ಅಲಿಖಿತರೂಪದಲ್ಲಿರುವ ತಿಳುವಳಿಕೆ, ನಡೆವಳಿಕೆ ಮತ್ತು ಸಂಪ್ರದಾಯಗಳನ್ನು ಕ್ರಮಬದ್ಧವಾದ ಕಾನೂನುಗಳನ್ನಾಗಿ ಪರಿವರ್ತಿಸಲ್ಪಟ್ಟಿವೆ.

ಸಂಯುಕ್ತರಾಷ್ಟ್ರದಲ್ಲಿ ರಾಷ್ಟ್ರವಿಧಾನ, ಸಂಯುಕ್ತ ಸರ್ಕಾರ ವಿಧಾನಗಳು ಲಿಖಿತರೂಪವನ್ನು ತಾಳಿ ಪ್ರಜಾಪ್ರತಿನಿಧಿಗಳ ಮೂಲಕ ಪ್ರಜಾಭಿಮತದ ಪ್ರತಿಬಿಂಬವಾಗಿದೆ. ರಾಷ್ಟ್ರದ ವಿಧಾನಗಳು ಲಿಖಿತ ರೂಪದಲ್ಲಿ ನಿರ್ದೇಶಿಸಿರುವುದರಿಂದ ಇವು ಲೋಹ ರಾಷ್ಟ್ರಗಳು. ಲಿಖಿತಾಲಿಖಿತ, ಲೋಹ ಸಲಿಲ ಎಂಬ ರಾಷ್ಟ್ರ ವಿಭಜನೆ ಕೇವಲ ವೈಜ್ಞಾನಿಕವಾದದ್ದೇ ಹೊರತು ಕಾರ್ಯಕಾರಿಯಾದದ್ದಲ್ಲ. ಏಕೆಂದರೆ ಲಿಖಿತ, ಅಲಿಖಿತ ವಿಧಾನಗಳೆರಡರಲ್ಲಿಯೂ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳಿಗನುಗುಣವಾಗಿ ಬದಲಾವಣೆಗಳು ಆಗುವುದಕ್ಕೆ ಅವಕಾಶವಿರಬೇಕು. ಪ್ರಜಾಸ್ವಾತಂತ್ರ್ಯವನ್ನು ಶಾಸನರೂಪದಲ್ಲಿ ವಿವರಿಸಿದಮಾತ್ರಕ್ಕೆ, ಸ್ವಾತಂತ್ರ್ಯಗಳಿಸದಂತೆ ಊಹಿಸಲಾಗದು. ಪ್ರಾಚೀನ ರೋಂ ಸರ್ಕಾರ, ಮತ್ತು ಆಧುನಿಕ ಇಂಗ್ಲೀಷ್ ಸರ್ಕಾರದಲ್ಲಿ ವಿವರಿಸುವ ವಿಧಾನದ ಅಲ್ಪಭಾಗ ಮಾತ್ರ ಲಿಖಿತರೂಪದಲ್ಲಿದೆ. ಸಂಪ್ರದಾಯ, ಮಾಮೂಲು, ನಡೆವಳಿಕೆ, ಕೋರ್ಟುಗಳ ನಿರ್ಧಾರಗಳೇ ವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ದಿಷ್ಟವಾಗಿ ವಿವರಿಸುವುದರಿಂದಲೂ, ಮತ್ತು ಸ್ವಾತಂತ್ರ್ಯವಾದದ ಆವಿಷ್ಕರಣ ಕ್ರಮವಾಗಿ ಬೆಳೆದು ಬಂದಿರುವುದರಿಂದಲೂ ಯಾವ ಒಂದು ವಿಶಿಷ್ಟ ಸಮಿತಿ, ಅಥವಾ ಶಾಸನ ಸಭೆಯಾಗಲಿ, ಪ್ರಜಾಸ್ವಾತಂತ್ರ್ಯ ಹಕ್ಕುಬಾಧ್ಯತೆಗಳನ್ನು ಏಕಕಾಲದಲ್ಲಿ ನಾಶಮಾಡಲಾಗದು. ಅದರಿಂದಲೇ ಅಲಿಖಿತ ವಿಧಾನಗಳನ್ನು ಅಸ್ಥಿಮಿತ (Flexible), ಅಥವಾ Real, ಅಥವಾ (Common Law) ಕಾಮನ್ ಲಾ ಕಾನ್ಸ್ಟಿಟ್ಯೂಷನ್: ಎಂದು ಕರೆಯುವರು.

ಲಿಖಿತ ರಾಷ್ಟ್ರಗಳಲ್ಲಿ ಒಂದು ವಿಶಿಷ್ಟ ಸನ್ನಿವೇಶದಲ್ಲಿ ಇಡೀ ರಾಷ್ಟ್ರದ

ವಿಧಾನ ನಿರ್ಧರಿಸಲ್ಪಡುವುದರಿಂದ, ಕಾಲಕ್ರಮದಲ್ಲಿ ಆವಿರ್ಭವಿಸುವ ಯಾವುದೊಂದು ಕಾನ್ಸ್ಟಿಟ್ಯುಯೆಂಟ್ ಸಭೆಯು ಇಡೀ ಸಮಾಜದ ಮೂಲಾಧಾರವಾದ ವಿಧಾನವನ್ನು ಸಂಪೂರ್ಣವಾಗಿ ಏಕಕಾಲದಲ್ಲಿ ಮಾರ್ಪಾಟು ಮಾಡಬಹುದು. ಇಂತಹ ರಾಷ್ಟ್ರಗಳನ್ನು, Lawyers' Constitutions, literary Constitutions or Statutory Constitutions ಎಂಬುದಾಗಿ ಕರೆಯುತ್ತಾರೆ.

ಕೆಲವು ಲಿಖಿತ ವಿಧಾನಗಳಲ್ಲಿ, ಕ್ರಾಂತಿಭಯದಿಂದ ರಾಷ್ಟ್ರಪ್ರಭುಗಳು, ಪ್ರಜೆಗಳ ಭರವಸೆಯಿಂದ ವಿಧಾನಸೃಷ್ಟಿ ಮಾಡಿ, ಅದರನುಗುಣವಾಗಿ ವರ್ತಿಸುವ ನಿರ್ಬಂಧಕ್ಕೆ ಒಳಗಾಗಿ, ಅದಕ್ಕೆ ವ್ಯತಿರಿಕ್ತವಾಗಿ ನಡೆದರೆ, ಪದಚ್ಯುತರಾಗುವ ಸನ್ನಿವೇಶವಿದ್ದಲ್ಲಿ ಅಂತಹ ವಿಧಾನಗಳಿಗೆ ಆಕ್ಟ್ರಾಯ್ ವಿಧಾನ (Octroyed constitutions) ಎಂದು ಕರೆಯುವರು. ಲಿಖಿತ ವಿಧಾನವಿರುವ ರಾಷ್ಟ್ರಗಳಲ್ಲಿಯೂ, ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವ, ರೀತಿ ಅಥವಾ ಕ್ರಮಗಳನ್ನು ರಚಿಸಿ, ನಿರ್ದಿಷ್ಟವಾದ ವಿಧಾನವನ್ನೆ ಆಗಿಂದಾಗ್ಗೆ ಪರಿವರ್ತಿಸಿಕೊಳ್ಳಬೇಕಾದ ಸನ್ನಿವೇಶ ಒದಗುವುದು. ರಾಷ್ಟ್ರವಿಧಾನದ ಸೃಷ್ಟಿಯ ಕಾಲದಲ್ಲಿ ಎದ್ದುಬಂದ ಸಮಸ್ಯೆಗಳೇ ಒಂದು ವಿಧ; ಕಾಲಕ್ರಮೇಣ ಉತ್ಪನ್ನವಾದ ಸಮಸ್ಯೆಗಳ ಸ್ವರೂಪ ಮತ್ತು ವ್ಯಾಪ್ತಿಯ ಪರಿಜ್ಞಾನವನ್ನು, ವಿಧಾನದ ಸೃಷ್ಟಿಕಾರರು, ಹೊಂದಿರಲು ಅಸಾಧ್ಯ: ಆದುದರಿಂದಲೇ ವಿಧಾನದ ಸಮಸ್ಯೆಗಳ ತಿದ್ದುಪಡಿ ಸಮಯೋಚಿತವಾಗಿ ಆಗಬೇಕಾದ್ದು ಅತ್ಯಗತ್ಯ. ಯಾವದೊಂದು ನಿರ್ದಿಷ್ಟಕಾಲದಲ್ಲಿ ಉತ್ಪನ್ನವಾದ ವಿಧಾನವು ಸರ್ವದಾ ಮಾರ್ಗದರ್ಶಿಕವಾಗಿರಬೇಕೆಂದು ನಿರ್ಬಂಧಿಸಿದರೆ ರಾಷ್ಟ್ರವು ಪ್ರಗತಿಪರವಾಗಲಾರದು. President Taft ಹೇಳುವಂತೆ ಸ್ಥೂಲಕಾಯನು ಸಂಕುಚಿತ ಕವಚವನ್ನು ಧರಿಸಲು ಪ್ರಯತ್ನಿಸಿದ ಹಾಗೆ, ಪ್ರಗತಿಪರ ಪ್ರಜಾವರ್ಗವು ಬಹಳ ಸಂಕುಚಿತವಾದ ವಿಧಾನಕ್ಕೆ ಒಳಪಡುವುದು. ಲಿಖಿತವಿಧಾನವಿರುವ ರಾಷ್ಟ್ರಗಳು, ಕ್ರಾಂತಿ ಮತ್ತು ಆಂದೋಲನಕಾಲದಲ್ಲಿ, ಉದ್ರೇಕ

ಗೊಂಡ ಪ್ರಜೆಗಳಿಂದ, ನಾಶವಾಗುವ ಪರಿಸ್ಥಿತಿಯುಂಟಾಗಬಹುದು. ತಿದ್ದುಪಡಿ ಸುಲಭ ಸಾಧ್ಯವಲ್ಲ. ತಿದ್ದುಪಡಿಗಳು ಲೋಹ ರಾಷ್ಟ್ರಗಳಲ್ಲಿ ಅಸ್ಥಿಮಿತ ಎಂಬುದು ಕೆಲವರ ಅಭಿಪ್ರಾಯ. ಈ ವಿಧವಾದ ವಿಧಾನವಿಭಜನೆ ವೈಜ್ಞಾನಿಕ ದೃಷ್ಟಿಯಲ್ಲಿ ಉತ್ತಮವಾಗಿ ಕಂಡುಬರುವುದಿಲ್ಲ. ಒಟ್ಟಿನಲ್ಲಿ, ರಾಷ್ಟ್ರದಲ್ಲಿ, ಮೂಲಾಧಾರ ತತ್ವಗಳನ್ನು ತಿದ್ದುಪಡಿಮಾಡುವ ಪರಮಾಧಿಕಾರ ನ್ಯಾಯಾಂಗದಲ್ಲಿ ಅಡಗಿದೆ; ಮತ್ತೆ ಕೆಲವು ಮೂಲಾಧಾರ ತತ್ವಗಳನ್ನು ವಿಮರ್ಶಿಸುವ ಮತ್ತು ನಿರ್ಧರಿಸುವ ಪರಮಾಧಿಕಾರ ರಾಷ್ಟ್ರಗಳಲ್ಲಿ ಶಾಸನಸಭೆಯಲ್ಲಡಗಿದೆ.

ವಿಧಾನಗಳು ಸೃಷ್ಟಿಯಾದುವಲ್ಲ; ಕಾಲಕ್ರಮದಲ್ಲಿ ವಿಕಾಸ ಹೊಂದಿದುವು ಎಂಬುದು ಸಾರ್ವಜನಿಕರ ಅಭಿಪ್ರಾಯ. ನಿರ್ದಿಷ್ಟ ಕಾಲದಲ್ಲಿ ನಿರ್ಮಿಸಲ್ಪಟ್ಟ ವಿಧಾನಗಳು ಭೂಮಿಯಲ್ಲಿ ನೆಟ್ಟ ಬಣ್ಣದ ಕಡ್ಡಿಗಳಂತೆ ಬೇರು, ಫಲ ರಹಿತವಾಗಿ ಬಹುಬೇಗನೆ ನಾಶಹೊಂದಬಹುದು. ವಿಧಾನವು ಸರ್ವಜನಪ್ರಿಯವಾಗಬೇಕಾದರೆ ಪ್ರಾಣಿಗಳ ಬೆಳವಣಿಗೆಯಂತೆ ಬೆಳೆದು ಪುಷ್ಟಿಹೊಂದಬೇಕು. ಲಿಖಿತ ವಿಧಾನಗಳ ಬೆಳವಣಿಗೆ ಮೂರು ವಿಧ:— ಸಂಪ್ರದಾಯ, ನ್ಯಾಯಾಂಗ ನಿರ್ಧಾರ ಮತ್ತು ರಾಜ್ಯಾಂಗಗಳ ತಿದ್ದುಪಡಿ. ಸಂಯುಕ್ತರಾಷ್ಟ್ರದ ವಿಧಾನವು (U. S. A.) ಶಾಸನ ಸಭೆಗಳು ನಿರ್ಮಿಸಿರುವ ಸಂಪ್ರದಾಯದ ಮನ್ನಣೆಯಿಂದ ಆವಿಷ್ಕರಣ ಹೊಂದಿದೆ. ನ್ಯಾಯಾಂಗವೇ ಪರಮಾಧಿಕಾರ ಹೊಂದಿರುವುದರಿಂದಲೂ, ಶಾಸನ ಸಭೆಗಳ ಕಾನೂನುಗಳು ಕ್ಲಿಷ್ಟ ಭಾಷೆ ಮುಂತಾದ ನ್ಯೂನಾತಿರಿಕ್ತಗಳಿಂದ ಕೂಡಿರುವುದರಿಂದಲೂ, ನಿರ್ದಿಷ್ಟವಾಗಿಯೂ, ಶಾಸ್ತ್ರೀಯವಾಗಿಯೂ, ಸರ್ವಜನಾದರಣೀಯವಾಗಿಯೂ ನಿರ್ಧರಿಸಬೇಕಾದ ಸನ್ನಿವೇಶ ನ್ಯಾಯಾಂಗಕ್ಕೆ ಪದೇಪದೇ ಒದಗುತ್ತದೆ. ಶಾಸನ ಸಭಾಸದಸ್ಯರಿಗೆ, ಪ್ರಚಲಿತವಾದ ವಿದೇಶಾಂಗ ನೀತಿ, ಕಾರ್ಮಿಕ ವರ್ಗದವರ ಸಮಸ್ಯೆ, ಆರ್ಥಿಕ ಸ್ಥಿತಿಗತಿಗಳು– ಇವೇ ಮುಂತಾದ ರಾಷ್ಟ್ರದ ಜಟಿಲ ಪ್ರಶ್ನೆಗಳಿಗೆ ಸಮಂಜಸವಾದ ಪರಿಹಾರವನ್ನು ಶಾಸನ ರೂಪದಲ್ಲಿ

ಸೂಚಿಸುವ ಅರ್ಹತೆ ಇಲ್ಲದಿರುವುದರಿಂದ, ಅವರು ರಚಿಸಿದ ಅಸಮರ್ಪಕವಾದ ಶಾಸನಗಳನ್ನು ಶ್ರೇಷ್ಠ ನ್ಯಾಯಾಧೀಶರು ವಿಮರ್ಶಿಸಿ, ಕಾಲ, ಸನ್ನಿವೇಶಗಳಿಗನುಗುಣವಾಗಿ ಮಾರ್ಪಾಡುಮಾಡಬೇಕಾಗುತ್ತದೆ. ಹಾಗೆಯೇ ಶಾಸನಗಳನ್ನು ನ್ಯಾಯಾಧೀಶರು ವಿಮರ್ಶೆಯ ನೆವದಲ್ಲಿ ನೂತನವಾಗಿ ರಚಿಸುವುದೂ ಉಂಟು. ಈ ವಿಧವಾದ ವಿಮರ್ಶೆ ಮತ್ತು ರಚನೆಯಿಂದ, ರಾಷ್ಟ್ರವಿಧಾನದ ಆವಿಷ್ಕರಣಕ್ಕೆ ಸಂಬಂಧಿಸಿದ ಕಾನೂನುಗಳು ವಿಶೇಷವಾಗಿ ಬೆಳೆದುಬಂದಿವೆ. ರಾಷ್ಟ್ರ ವಿಧಾನಕ್ಕೆ ಶಾಸನ ಸಭೆಯ ಶಾಸನಗಳು ವ್ಯತಿರಿಕ್ತವಾದುವೆಂದು ನಿರ್ಧರಿಸಿ, ವಿಮರ್ಶಿಸಿ ನ್ಯಾಯಾಧೀಶರು ಹೊಸದಾಗಿ ರಚಿಸಿದ ಶಾಸನಗಳು, ರಾಷ್ಟ್ರವಿಧಾನಕ್ಕೆ ಒಂದು ನೂತನ ಪ್ರತಿಭೆಯನ್ನು ಕೊಟ್ಟಿವೆ. ಸ್ಥಿಮಿತ ಲಿಖಿತ ಸರ್ಕಾರವಿಧಾನಗಳ ಬೆಳೆವಣಿಗೆಯು, ಶ್ರೇಷ್ಠ ನ್ಯಾಯ ಸ್ಥಾನವು ಆಗಿಂದಾಗ್ಗೆ ರಚಿಸಿದ ವಿಮರ್ಶೆಗಳಿಂದಲೇ ಸಾಧ್ಯವಾಗಿದೆ.

ರಾಷ್ಟ್ರ ವಿಧಾನದ ಬೆಳವಣಿಗೆಗೆ, ತಿದ್ದುಪಡಿ, ಬಹಳ ಮುಖ್ಯವಾದ ಸಾಧನ. ಇದರಿಂದ ಪ್ರತಿಯೊಂದು ಲಿಖಿತವಿಧಾನ ರಾಷ್ಟ್ರಗಳಲ್ಲಿ ತಿದ್ದುಪಡಿಯ ಕ್ರಮ ಒಂದು ಅಧಿಕೃತವಾದ ಅಂಗ. ಆಧುನಿಕ ರಾಷ್ಟ್ರ ವಿಧಾನ ರಾಷ್ಟ್ರಗಳಲ್ಲೆಲ್ಲ ತಿದ್ದುಪಡಿಯ ಕ್ರಮವು ಒಂದು ಮುಖ್ಯವಿಧಾನದ ಅಂಶ. ಈ ಅಂಶರಹಿತವಾದ ರಾಷ್ಟ್ರಗಳು ಅಸಮರ್ಪಕ. ತಿದ್ದುಪಡಿ ಕ್ರಮ ಸಮರ್ಪಕವಾಗಿಯೂ, ರಾಷ್ಟ್ರದ ನಿಯಮದ, ಸಮಾಜದ ಉಗಮದ ಉತ್ಕರ್ಷಗಳಿಗನುಗುಣವಾಗಿಯೂ ಇದ್ದಲ್ಲಿ ಅಂತಹ ರಾಷ್ಟ್ರಗಳು ಪ್ರಗತಿಪರವೆಂದು ಭಾವನೆ. ಜನಾಂಗದ ಜೀವನ ಮತ್ತು ಮನೋಧರ್ಮ ಪರಿವರ್ತನೆಯಾದ ಹಾಗೆಲ್ಲ ಸಮಾಜದ ಯೋಜನೆ ಮತ್ತು ಸಂಸ್ಕೃತಿ ಬದಲಾವಣೆ ಹೊಂದುತ್ತದೆ. ಈ ಬದಲಾವಣೆಗಳನ್ನು ರಾಷ್ಟ್ರದ ವಿಧಾನವು ಪ್ರತಿಬಿಂಬಿಸಬೇಕು. ಅಂತಯೇ ರಾಜಕೀಯ ವಿಧಾನಗಳು ಇವುಗಳಿಗೆ ಸಾಧನಗಳಾಬೇಕು.

ತಿದ್ದುಪಡಿಗೆ ಅವಕಾಶವಿಲ್ಲದ ರಾಷ್ಟ್ರಗಳಲ್ಲಿ ದೌರ್ಜನ್ಯ, ಅರಾಜಕತ್ವ, ಮತ್ತು ಸಮಾಜದಲ್ಲಿ ಗೊಂದಲಗಳು ಉಂಟಾಗುವ ಸಂಭವವಿದೆ. ತಿದ್ದುಪಡಿ

ಎಲ್ಲಿ ಸುಲಭಸಾಧ್ಯವೋ ಅಲ್ಲಿ ಜನಜೀವನ ಮನರಂಜಕ ವಾಗಿರುತ್ತದೆ. ತಿದ್ದುಪಡಿಯ ಕ್ರಮುವನ್ನು ಕಾರ್ಯಕಾರಿಯಾಗಿ ಮಾಡುವಾಗ, ನ್ಯಾಯಾಧೀಶರು, ಅತ್ಯಂತ ಸುಲಲಿತವಾಗಿ ಆಗಲಿ ಅಥವಾ ಅತಿ ಕಷ್ಟಸಾಧ್ಯವಾಗಿ ಆಗಲಿ ರಚಿಸದೆ, ಪರಿಣಾಮಕಾರಿಯ ಮಾರ್ಗಸಾಧನಗಳನ್ನು ಯೋಚಿಸಬೇಕೆಂದು ಜಡ್ಜ್ ಜೈನ್‌ಸನ್ ಹೇಳಿದ್ದಾನೆ. ತಿದ್ದುಪಡಿಗಳ ಕ್ರಮ ಅತ್ಯಂತ ಪವಿತ್ರವಾದುದೆಂದು ತಿಳಿದು, ಪರಿವರ್ತನೆಯಾಗಬೇಕಾದ ಅಂಶಗಳ ವಿಚಾರದಲ್ಲಿ ಅನಾದರಣೆಯನ್ನು ತೋರಿಸಕೂಡದು. ಹಾಗೆಯೇ ರಾಜನೀತಿಜ್ಞರು, ರಾಜಕಾರಣಪಟುಗಳ ಕೈಗೊಂಬೆಯಂತೆಯೂ ಆಗಬಾರದು.

ತಿದ್ದುಪಡಿಯ ಕ್ರಮ ರಾಷ್ಟ್ರಗಳಲ್ಲಿ ವಿವಿಧರೀತಿಯಾಗಿದೆ. ಇಂಗ್ಲೆಂಡಿನಲ್ಲಿ ತಿದ್ದುಪಡಿ ಅತಿಸುಲಭವಾದುದು. ಪರಮಾಧಿಕಾರವನ್ನು ಪಡೆದಿರುವ ಶಾಸನ ಸಭೆಯೇ ಸಾಧಾರಣ ಮತ್ತು ರಚನಾತ್ಮಕ ಕಾನೂನುಗಳನ್ನು ಸಿದ್ಧಪಡಿಸುತ್ತದೆ. ಇಟಲಿ ಮತ್ತು ಫ್ರಾನ್ಸ್‌ಗಳಲ್ಲಿಯೂ ಪಾರ್ಲಿಮೆಂಟು ಸಭೆಯೇ ಈ ಪವಿತ್ರವಾದ ಕಾರ್ಯಗಳನ್ನು ಕೈಗೊಂಡಿದೆ. ಫ್ರಾನ್ಸ್‌ನಲ್ಲಿ ಕೆಳಗಿನ ಮತ್ತು ಮೇಲಿನ ಸಭೆಗಳ ಸಮ್ಮೇಳನದಿಂದಲೇ ತಿದ್ದುಪಡಿಯುಂಟಾಗುತ್ತದೆ. ಆದರೆ ಸ್ಥಿಮಿತ ಮತ್ತು ಲಿಖಿತವಿಧಾನ ರಾಷ್ಟ್ರಗಳಲ್ಲಿ ಶಾಸನರಚನೆಯ ಅಧಿಕಾರ ಮತ್ತು ವಿಧಾನರಚನಾತ್ಮಕ ಅಧಿಕಾರ ಪ್ರತ್ಯೇಕವಾದುದರಿಂದ ಬೇರೆಬೇರೆ ವಿಧಾನಗಳು ಅಥವಾ ಅಂಗಗಳು ಕಾರ್ಯ ನಡಸುತ್ತವೆ. ಸಾಮಾನ್ಯವಾಗಿ ತಿದ್ದುಪಡಿಕ್ರಮ ಕಷ್ಟಸಾಧ್ಯವಾದುದು.

ಸ್ವಿಟ್ಸರ್‌ಲೆಂಡಿನಲ್ಲಿ ಸಂಯುಕ್ತವಿಧಾನದ ತಿದ್ದುಪಡಿಯನ್ನು ಯಾವಾಗಬೇಕಾದರೂ ಮಾಡಬಹುದು. ಸಂಯುಕ್ತ ಕಾನೂನಿನಂತೆ ತಿದ್ದುಪಡಿಯು ರಚಿತವಾಗಿದೆ. ಸಂಯುಕ್ತಸಮಿತಿಯ ಒಂದು ಸಭೆಯು ತಿದ್ದುಪಡಿಯನ್ನು ಅಂಗೀಕರಿಸಿದರೆ ಅಥವಾ ನಿರಾಕರಿಸಿದರೆ ಅಥವಾ 50,000 ಸ್ವಿಟ್ಜ್ ಮತದಾರರು ತಿದ್ದುಪಡಿಯನ್ನು ಸಂಪೂರ್ಣವಾಗಿ ಅನುಮೋದಿಸಿದರೆ, ಆಗ ಅದರ ಇತ್ಯರ್ಥವನ್ನು ಮಾಡವುದು ಸ್ವಿಸ್ ಅಖಿಲ

ಜನಾಂಗದ ಅಭಿಮತಕ್ಕೆ ಸೇರಿದೆ. ಬಹು ಸಂಖ್ಯಾತರು ತಿದ್ದುಪಡಿ ಇಚ್ಛೈಸಿದರೆ ಆಗ ಎರಡು ಕೌನ್ಸಿಲ್ ಸಭೆಗಳು ಆ ತಿದ್ದುಪಡಿಯ ವಿಮರ್ಶೆ ಗೋಸ್ಕರ ಪುನಃ ಚುನಾವಣೆಗೆ ಅಧೀನವಾಗುತ್ತವೆ. ಕ್ಯಾನ್‌ಟನ್ನಿನ ಪ್ರಜೆ ಗಳು ಬಯಸಿದರೆ, ವಿಧಾನದ ಕೆಲವು ಭಾಗವು ತಿದ್ದುಪಡಿಗೆ ಒಳ ಪಡುತ್ತದೆ. ಕ್ಯಾನ್‌ಟನ್ನಿನ ಬಹು ಸಂಖ್ಯಾತ ಅಭಿಮತವೆಂದರೆ ಶೇಕಡ ಅರ್ಧಭಾಗವೆಂದು ಭಾವನೆ. ಸಂಯುಕ್ತ ವಿಧಾನದ ತಿದ್ದುಪಡಿ ಬಹು ಸಂಖ್ಯಾತ ಕ್ಯಾಂಟನ್ನುಗಳಿಂದ ಅಂಗೀಕೃತವಾದರೆ ಆಗ ಅದು ಚಲಾವಣೆ ಯಲ್ಲಿರುತ್ತದೆ.

ಸಂಯುಕ್ತ ರಾಷ್ಟ್ರದಲ್ಲಿ (U.S.A.) ಕಾಂಗ್ರೆಸ್ಸಿನ ಎರಡು ಸಭೆಗಳಲ್ಲಿ ಮೂರರಲ್ಲಿ ಎರಡರಷ್ಟು ಸದಸ್ಯರು ಒಪ್ಪಿದರೆ ರಾಷ್ಟ್ರವಿಧಾನದ ಮಾರ್ಪಾ ಟಿನ ಮಸೂದೆ ಸೂಚಿಸಲಾಗುತ್ತದೆ; ಅಥವಾ ಸಂಸ್ಥಾನಗಳ ಮೂರನೆ ಎರಡ ರಷ್ಟು ಶಾಸನ ಸಭೆಗಳು ವಿಧಾನ ಶೋಧನೆಗೆ ಅರ್ಜಿಹಾಕಿದರೆ ಅಥವಾ ಎಲ್ಲ ಸಂಸ್ಥಾನಗಳ ನಾಲ್ಕನೆ ಮೂರು ಭಾಗ ಶಾಸನ ಸಭೆಗಳು ತಿದ್ದುಪಡಿಗೆ ಸಮ್ಮತಿಸಿದರೆ ಆಗ ಕಾಂಗ್ರೆಸ್ ಸಭೆ ತಿದ್ದುಪಡಿ ಮಾಡಲು ಒಪ್ಪಬೇಕಾ ಗುತ್ತದೆ. ಯಾವ ರಾಷ್ಟ್ರವೂ ಸೆನೆಟ್ ಸಭೆಯಲ್ಲಿ ತಾನು ಹೊಂದಿರುವ ಸಮಾನತೆಯ ಹಕ್ಕನ್ನು ಕಳೆದುಕೊಳ್ಳಲಾರದು. ಸಂಯುಕ್ತ ಸಂಸ್ಥಾನಗಳ ತಿದ್ದುಪಡಿ ಮಾರ್ಪಾಟುಗಳು ಕಷ್ಟತರವಾದುವು. ಮೂಲಾಧಾರ ತತ್ತ್ವ ಗಳಿಂದ ಅನೇಕ ಸಮಸ್ಯೆಗಳುದ್ಭವಿಸಿ, ಯಾವುವು ರಾಷ್ಟ್ರದ ಹಿತಾಹಿತ ವಾದವುಗಳೆಂಬ ಸಂದಿಗ್ಧ ಪರಿಸ್ಥಿತಿಯುಂಟಾಗಿದೆ. ಲಿಖಿತರೂಪದಲ್ಲಿರುವ ರಾಜಕೀಯ ಪರಿಹಾರಗಳನ್ನು ಶಾಸನ ಸಭೆಗಳು ಮತ್ತು ನ್ಯಾಯಾಂಗವು ಲಿಖಿತರೂಪದಲ್ಲಿ ರಚಿಸುವುದರಿಂದ ಜನಾಂಗವು ತಿದ್ದುಪಡಿಗೆ ಹೆಚ್ಚು ಗಮನ ಕೊಡಬೇಕಾದ್ದಿಲ್ಲ. ಆತ್ಮ ರಕ್ಷಣೆ, ಕ್ರಾಂತಿಯ ಒತ್ತಡ, ವ್ಯಕ್ತಿಯ ಆಧಾರಭೂತವಾದ ಹಕ್ಕುಗಳು—ಇವುಗಳ ವಿಚಾರದಲ್ಲಿ ಉತ್ಪನ್ನವಾಗುವ ಪ್ರಶ್ನೆಗಳನ್ನು ಪರಿಹರಿಸಲು ಸಾರ್ವಜನಿಕರ ಅಭಿಮತದಿಂದ ತಿದ್ದುಪಡಿ ಆವಶ್ಯವಾಗುತ್ತದೆ. ಸಂಯುಕ್ತವಿಧಾನ, ಎಲ್ಲ ವಿಷಯಗಳನ್ನೂ ಒಳ

ಗೊಂಡಿರುವುದರಿಂದಲೂ, ಆಯಾ ಕಾಲಕ್ಕೆ ಅನುಗುಣವಾಗಿ ಸರಿಪಡಿಸಿಕೊಳ್ಳ ಬಹುದಾದುದರಿಂದಲೂ ತಿದ್ದುಪಡಿಗಳು ಆದಷ್ಟು ಕಮ್ಮಿಯಾಗಿವೆ. ಅನೇಕ ಶತಮಾನಗಳ ಅನುಭವದಿಂದ ಪ್ರಜೆಗಳಿಗೆ ಅತ್ಯಾವಶ್ಯಕವಾದುವುಗಳನ್ನು ನೀಡಲು ಕೆಲವು ಸುಧಾರಣೆಗಳು ತಿದ್ದುಪಡಿಯ ಮೂಲಕ ಅಗತ್ಯವಾಗಿವೆ. ವಿಶೇಷ ಪರಿಸ್ಥಿತಿಗಳಲ್ಲಿ ಅಗತ್ಯವಾಗಿ ಆಗಬೇಕಾದ ತಿದ್ದುಪಡಿಗಳು ಆಗ ದಂತೆ ಪ್ರತಿಬಂಧಕಗಳು, ಸಂಯುಕ್ತ ರಾಷ್ಟ್ರವಿಧಾನದಲ್ಲಿ ಅಡಗಿವೆಯೆಂದು ಭಾವಿಸಬಹುದು. ಸೆನೆಟ್ ಅಥವಾ ಪ್ರಜಾಪ್ರತಿನಿಧಿ ಸಭೆಗಳ ಮೂರನೆಯ ಒಂದು ಭಾಗದ ಸದಸ್ಯರ ಅಭಿಮತಕ್ಕಿಂತ ಒಂದು ಓಟು ಹೆಚ್ಚಿದರೆ, ಅಥವಾ ನಾಲ್ಕನೆಯ ಒಂದು ಭಾಗದ ಸಂಸ್ಥಾನಗಳ ಶಾಸನ ಸಭೆಗಳಿಗಿಂತ ಒಂದು ಶಾಸನಸಭೆಯ ಓಟು ಹೆಚ್ಚಿದರೆ ಆ ತಿದ್ದುಪಡಿಯ ಸೂಚನೆಯು ರದ್ದಾಗುವುದು. ನಲವತ್ತರಲ್ಲಿ ಮೂವತ್ತೊಂಬತ್ತು ಸಂಸ್ಥಾನಗಳ ಪ್ರಜೆ ಗಳು ತಿದ್ದುಪಡಿಯನ್ನು ಬಯಸಿದರೂ, ಸಂಸ್ಥಾನಗಳಿಗೆ ಸಮಾನ ಅಧಿಕಾರ ವಿರುವುದರಿಂದಲೂ, ಸಂಸ್ಥಾನಗಳ ಪ್ರಜಾಸಂಖ್ಯೆಯಲ್ಲಿ ವಿಶೇಷ ಅಸಮಾ ನತೆಯಿರುವುದರಿಂಲೂ, ನಲವತ್ತನೆಯ ಒಂದು ಭಾಗದ ಪ್ರಜಾಸಂಖ್ಯೆಯ ಅಭಿಮತದಿಂದ ತಿದ್ದುಪಡಿಯನ್ನು ನಿರಾಕರಿಸಬಹುದು. ಈ ಪದ್ಧತಿ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವೂ ಹಾನಿಕರವೂ ಆದುದರಿಂದ ನೂತನ ತಿದ್ದು ಪಡಿಯ ಕ್ರಮಗಳನ್ನು ಈಗ ಸೂಚಿಸಲಾಗಿವೆ. ಅದರಲ್ಲಿ ಮುಖ್ಯವಾದುದು ಕಾಂಗ್ರೆಸ್ ಸಭೆಗಳ ಬಹುಸಂಖ್ಯಾತರ ತಿದ್ದುಪಡಿಯ ಸೂಚನೆ ಮತ್ತು ಸಂಸ್ಥಾನಗಳಲ್ಲಿಯ ವರ್ಣಕರ್ತ ಸಮಾಜದ ಬಹುಸಂಖ್ಯಾತ ಅಭಿಮತದ ಅನುಮೋದನೆ. ಈ ವಿಧವಾದ ತಿದ್ದುಪಡಿ ಕ್ರಮ, ಸಂಯುಕ್ತರಾಷ್ಟ್ರದಲ್ಲಿ ಜಾರಿಗೆ ಬರಲಿದೆ.

## ಪ್ರಕರಣ ೫

## ಏಕಮುಖ ಸರ್ಕಾರ—Unitary Government

ರಾಷ್ಟ್ರ ತೇಜಸ್ಸು ಅಥವಾ ಶಕ್ತಿಯನ್ನು ಕೇಂದ್ರೀಕರಿಸುವುದರಿಂದಲೂ ಅಥವಾ ವಿಸ್ತೃತವನ್ನಾಗಿ ಮಾಡಿ ವಿವಿಧ ಸಂಸ್ಥೆಗಳಾಗಿ ವಿಭಜಿಸುವುದರಿಂದಲೂ, ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳಿಗೆ ಇರುವ ಸಂಬಂಧರೀತಿಯ ದೃಷ್ಟಿಯಿಂದ ರಾಷ್ಟ್ರಗಳನ್ನು ಯೂನಿಟರಿ ಮತ್ತು ಫೆಡರಲ್ ಸರ್ಕಾರಗಳೆಂದು ಕರೆಯಬಹುದು. ರಾಷ್ಟ್ರದ ಪರಮಾಧಿಕಾರವು ನಿರ್ದಿಷ್ಟ ಸಂಸ್ಥೆಗಳಲ್ಲಿ ಐಕ್ಯವಾಗಿ ಸ್ಥಳೀಯ ಸರ್ಕಾರಗಳನ್ನು ರಚಿಸಿ, ಅಥವಾ ಅವುಗಳನ್ನು ತೇಜೋವಂತವನ್ನಾಗಿ ಅಥವಾ ಶಕ್ತಿಯುತವನ್ನಾಗಿ ಮಾಡುವುದೇ ಏಕೀಮುಖೀ ಸರ್ಕಾರದ ಲಕ್ಷಣ. ರಾಷ್ಟ್ರ ಸರ್ಕಾರಕ್ಕೂ ಮತ್ತು ದಳಿತ ಸ್ಥಳೀಯ ಸರ್ಕಾರಕ್ಕೂ ವೈಧರೀತಿಯಲ್ಲಿ ಭಿನ್ನತೆಯಿಲ್ಲ. ರಾಷ್ಟ್ರದಲ್ಲಿ ಒಂದೇ ತೇಜಸ್ಸು, ಅದರಿಂದಲೇ ಸಂಸ್ಥೆಗಳು, ಸ್ಥಳೀಯ ಸರ್ಕಾರಗಳು, ರಾಜಕೀಯ ವ್ಯವಹಾರಗಳು ಸ್ಫೂರ್ತಿಹೊಂದುವುವು. ರಾಷ್ಟ್ರದಲ್ಲಿ ಪ್ರಾಂತಗಳು, ಜಿಲ್ಲೆಗಳು, ಗ್ರಾಮಗಳು — ಇವುಗಳ ವ್ಯತ್ಯಾಸ ಅಥವಾ ಅವರ ಸ್ವಯಂಶಾಸನಾಧಿಕಾರ ( Autonomy ) ಇವುಗಳ ಎಲ್ಲೆ, ಅಧಿಕಾರಗಳ ಮಾರ್ಪಾಡು—ಇವುಗಳನ್ನು ನಿರ್ಧರಿಸುವ ಪರಮಾಧಿಕಾರ ರಾಷ್ಟ್ರ ಸರ್ಕಾರಕ್ಕೆ ಸೇರಿದುದು. ಇಂಗ್ಲೆಂಡಿನ ಏಕಮುಖೀ ಸರ್ಕಾರವು, ಕೌಂಟಿ ಮತ್ತು ಬರೋ ಸ್ಥಳೀಯ ಅಧಿಕಾರಿಗಳಿಗೆ ವಿಶೇಷ ಅಧಿಕಾರವನ್ನು ಗಳಿಸಿಕೊಟ್ಟಿದೆ. ಫ್ರಾನ್ಸ್‌ನಲ್ಲಿ ಕ್ಯಾಂಟನ್, ಅರುಂಡಿಸ್‌ಮೆಂಟ್ ( Arrondissement ) ಮತ್ತು ಕಮ್ಯೂನ್ ( Commune ) ಮುಂತಾದ ಸ್ಥಳೀಯ, ಮತ್ತು ಡಿಪಾರ್ಟ್‌ಮೆಂಟ್ ಸರ್ಕಾರಗಳ ಸ್ವಯಂಶಾಸನಾಧಿಕಾರ, ಬಹಳಮಟ್ಟಿಗೆ ನಿಯಂತ್ರಿತವಾಗಿದೆ.

ಇಟಲಿ, ನಾರ್ವೆ, ಮತ್ತು ಐರೋಪ್ಯದ ಕೆಲವು ಏಕಮುಖಿರಾಷ್ಟ್ರಗಳಲ್ಲಿ, ಫ್ರಾನ್ಸ್‌ನಲ್ಲಿರುವ ಪದ್ಧತಿಯೇ ಆಚರಣೆಯಲ್ಲಿದೆ.

ಏಕಮುಖೀ ರಾಷ್ಟ್ರಗಳು ಕಾಲಕ್ರಮದಲ್ಲಿ ಅಧಿಕಾರ ಸಂವಿಭಾಗ ಮಾಡಿ, ಸ್ಥಳೀಯ ಸರ್ಕಾರಗಳಿಗೆ ಹೆಚ್ಚಾಗಿ ಆತ್ಮಶಾಸನಾಧಿಕಾರವನ್ನು ಗಳಿಸಿಕೊಟ್ಟಿವೆ. ಈ ಅಧಿಕಾರ ವಿಕೇಂದ್ರೀಕರಣದಿಂದ ರಾಷ್ಟ್ರದ ಮುಖ್ಯ ಕಾರ್ಯಗಳನ್ನೆಲ್ಲಾ ಸ್ಥಳೀಯ ಸರ್ಕಾರಗಳೇ ನಿರ್ವಹಿಸಲು ಅವಕಾಶ ವುಂಟಾಗಿದೆ. ಸ್ಥಳೀಯ ಸರ್ಕಾರದ ಅಧಿಕಾರಿಗಳನ್ನು ಕೇಂದ್ರ ಸರ್ಕಾರವು ನೇಮಿಸುವುದೂ, ಸ್ಥಳೀಯ ಸರ್ಕಾರಗಳು ಆ ಅಧಿಕಾರಿ ಗಳ ಕಾರ್ಯಕ್ರಮವನ್ನು ನಿರ್ಧರಿಸುವುದೂ, ಫ್ರಾನ್ಸ್ ಮತ್ತು ಕೆಲವು ಏಕಮುಖ ರಾಷ್ಟ್ರಗಳಲ್ಲಿ ಆಚರಣೆಯಲ್ಲಿದೆ. ಶಾಸನ ನಿರ್ಧರಿ ಸುವ ಮತ್ತು ಕಾರ್ಯಕಾರಿಯನ್ನಾಗಿಮಾಡುವ ಅಧಿಕಾರಗಳು ಕೇಂದ್ರ ಸರ್ಕಾರದಲ್ಲಿ ಐಕ್ಯವಾಗಿರುವುದು ಹುಟ್ಟು ಗುಣವಾದರೂ, ಸ್ಥಳೀಯ ಸರ್ಕಾರಗಳ ಅಧಿಕಾರವನ್ನು ದೂಷ್ಯವಾದ ರೀತಿಯಲ್ಲಿ ನಿಯಂತ್ರಿಸಿ, ಆತ್ಮ ಶಾಸನಾಧಿಕಾರಕ್ಕೆ ಕುಂದನ್ನುಂಟುಮಾಡುವುದೂ, ಸಾಮಾಜಿಕ ಸಮಸ್ಯೆಗಳ ಪರಿಹಾರದಲ್ಲಿ ಪ್ರಜೆಗಳಿಗೆ ಅವಕಾಶವನ್ನು ಕೊಡದೆ ಇದ್ದಲ್ಲಿ ಕೇಂದ್ರೀಕೃತವಾದ ಸ್ವಚ್ಛಂದಾಧಿಕಾರವರ್ಗವು ಬಲಯುತವಾಗುವದಕ್ಕೆ ಹೆದ್ದಾರಿಯಾಗುತ್ತದೆ.

## ಸಂಯುಕ್ತ ಸರ್ಕಾರ — Federal Government.

ಸಂಯುಕ್ತರಾಷ್ಟ್ರಗಳಲ್ಲಿ ಸ್ಥಳೀಯಸರ್ಕಾರಗಳು ಸ್ವಯಂಪ್ರೇರಣೆ ಯಿಂದ ರಚಿತವಾದುವೇ ಹೊರತು ರಾಷ್ಟ್ರಸರ್ಕಾರದಿಂದ ನಿರ್ಮಿತವಾದು ವಲ್ಲ. ಅನೇಕಸಂಯುಕ್ತರಾಷ್ಟ್ರಗಳಲ್ಲಿ ಆತ್ಮ ಶಾಸನಾಧಿಕಾರವುಳ್ಳ ಸಂಸ್ಥಾನಗಳು ರಾಷ್ಟ್ರಸರ್ಕಾರವನ್ನು ನಿರ್ಮಿಸಿ ಅದರ ನಿಯಂತ್ರಿತವಾದ ಅಧಿಕಾರವನ್ನು ನಿರ್ಧರಿಸುತ್ತವೆ. ಕೇಂದ್ರಸರ್ಕಾರ, ಮತ್ತು ಸಂಸ್ಥಾನ ಸರ್ಕಾರಗಳ ಅಧಿಕಾರ ಕ್ಷೇತ್ರಗಳು ಬೇರೆ ಬೇರೆ. ಪರಮಾಧಿಕಾರವುಳ್ಳ

ರಾಷ್ಟ್ರವಿಧಾನವು (Constitution) ರಾಷ್ಟ್ರಸರ್ಕಾರವನ್ನೂ, ಸಂಸ್ಥಾನ ಸರ್ಕಾರಗಳನ್ನೂ ರಚಿಸಿ, ಅವುಗಳ ಅಧಿಕಾರ, ಕಾರ್ಯಕ್ರಮಗಳನ್ನು ಶಾಸನ ರೂಪದಲ್ಲಿ ನಿರೂಪಿಸುತ್ತದೆ. ಸಂಯುಕ್ತ ಸರ್ಕಾರವು ದ್ವಿವಿಧಸರ್ಕಾರ (Dual Government.) ಆತ್ಮ ಶಾಸನಾಧಿಕಾರವುಳ್ಳ ಸಂಸ್ಥಾನ ಸರ್ಕಾರಕ್ಕೂ ಕೇಂದ್ರಸರ್ಕಾರಕ್ಕೂ ಸ್ಪರ್ಧೆ ಪ್ರತಿಸ್ಪರ್ಧೆಗಳ ಆಧಾರದ ಮೇಲೆ ರಚಿತವಾದ ನಿಕಟಸಂಬಂಧ- ಸಂಯುಕ್ತರಾಷ್ಟ್ರ ಸರ್ಕಾರದ ವಿಶೇಷ ಗುಣ. ಈವಿಧ ಸರ್ಕಾರದಲ್ಲಿ ಯಾವುದೊಂದು ಸರ್ಕಾರದ ಅಧಿಕಾರಕ್ಕೆ ಲೋಪ ಬಂದರೂ, ಸಂಘೀಯವಿಧಾನ ಸರ್ಕಾರವೆಂದು ಗಣಿಸಲಾಗುವುದಿಲ್ಲ

ಸಾಮಾನ್ಯವಾಗಿ ರಾಷ್ಟ್ರಹಿತಸಾಧಕವಾದ ಕಾರ್ಯಕ್ರಮಗಳನ್ನೂ, ಇಡೀ ರಾಷ್ಟ್ರಕ್ಕೆ ಏಕರೀತಿಯಲ್ಲಿ ಆಚರಿಸಬೇಕಾದ ಸಾಧನೆಗಳನ್ನೂ ಕೇಂದ್ರ ಸರ್ಕಾರಕ್ಕೆ ಒಪ್ಪಿಸುವುದೂ, ಸ್ಥಳೀಯವ್ಯವಹಾರಗಳನ್ನು, ಸ್ಥಳೀಯ ಸರ್ಕಾರಗಳಿಗೆ ಒಪ್ಪಿಸುವುದೂ, ವಾಡಿಕೆ. ಇಡೀ ರಾಷ್ಟ್ರಾಧಿಕಾರವನ್ನೆ ಕೇಂದ್ರಸರ್ಕಾರದಲ್ಲಿ ಏಕೀಭೂತವನ್ನಾಗಿ ಅಥವ ಸಂಕೃಷ್ಟವನ್ನಾಗಿ ಮಾಡುವ ಪದ್ಧತಿ, ಏಕಮುಖರಾಷ್ಟ್ರ ಪದ್ಧತಿಯುನ್ನು ಹೋಲುತ್ತದೆ. ಸಂಸ್ಥಾನ, ಸಂಸ್ಥಾನಕ್ಕೂ ಪ್ರತ್ಯೇಕವಾಗಿರುವ ಸಮಸ್ಯೆಗಳು, ಅವುಗಳಿಗನು ಗುಣವಾದ ಸಾಧನೆಗಳು, ಭಿನ್ನವೆಂದು ಪರಿಗಣಿಸುವ (ವಿಕೃಷ್ಟ) **ವಿಕರ್ಣಪದ್ಧತಿ,** (Confederate) ಕಾನ್‌ಫೀಡರೇಟ್ ಸರ್ಕಾರಅಥವ ರಾಜ್ಯಮಂಡಲ ಸರ್ಕಾರದ ಪದ್ಧತಿ. ಯಾವ ಸಮಸ್ಯೆಗಳು ಏಕರೂಪ ಕಾರ್ಯಗಳಿಗೆ ಒಳಗಾಗಬೇಕು, ಯಾವುವು ಸ್ಥಳೀಯಸರ್ಕಾರಗಳ ಶಿಸ್ತಿಗೊಳಗಾಗಬೇಕು, ಎಂಬ ವಿಚಾರಗಳಲ್ಲಿ, ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯವಿದೆ. ವಿದೇಶಾಂಗನೀತಿ, ಅಂತರರಾಷ್ಟ್ರೀಯ ವ್ಯಾಪಾರ, ನಾಣ್ಯ, (Patents) ಪೇಟೆಂಟ್ಸ್ ಮತ್ತು ಕಾಪಿರೈಟ್ಸ್— ಇವು ಕೇಂದ್ರಸರ್ಕಾರಕ್ಕೆ ಮೀಸಲಾಗಿಟ್ಟ ಪ್ರಶ್ನೆಗಳು. ಕೆಲವು ರಾಷ್ಟ್ರಗಳಲ್ಲಿ ಸಂಸ್ಥಾನಗಳು, ಅಂತರರಾಷ್ಟ್ರೀಯ ಪರಿಶೀಲನೆಯಲ್ಲಿ ಒಂದು ನಿರ್ದಿಷ್ಟವಾದ ಸ್ಥಾನವನ್ನೇ ಪಡೆದಿವೆ.

ಇಡೀ ಜನಾಂಗಕ್ಕೆ ತಟ್ಟುವ ಪ್ರಶ್ನೆಗಳ ಪರಿಹಾರದಲ್ಲಿ ಸ್ಥಳೀಯ ಸರ್ಕಾರಗಳು ಮಾನ್ಯಸ್ಥಾನವನು ಪಡೆದಿವೆ. ಸಿವಿಲ್, ಕ್ರಿಮಿನಲ್ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ; ಧರ್ಮ, ವಿವಾಹ ಮತ್ತು ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ನಿಯಮಗಳು, ಏಕರೀತಿಯಾಗಿ ಇಡೀ ಜನಾಂಗ ದಲ್ಲಿ ಇರಬೇಕಾದುದರಿಂದ, ಇವುಗಳನ್ನು ರಾಷ್ಟ್ರಸರ್ಕಾರಕ್ಕೆ ಒಪ್ಪಿಸುವುದು ಸಂಪ್ರದಾಯ. ಕೆಲವು ಪ್ರಶ್ನೆಗಳು ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಸ್ಥಳೀಯ ಪ್ರಶ್ನೆಗಳಾಗಿ ಕಂಡು ಬಂದು, ಕಾಲಕ್ರಮದಲ್ಲಿ ಜನಾಂಗಕ್ಕೆ ತಟ್ಟುವಂತಹ ಪ್ರಾಮುಖ್ಯತೆಯನ್ನು ಪಡೆದು, ಎಲ್ಲಾ ಸಂಸ್ಥಾನಗಳಲ್ಲಿಯೂ ಏಕರೂಪ ವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದ ಪರಿಸ್ಥಿತಿಯನ್ನು ಉಂಟು ಮಾಡುವುವು. ವಿವಾಹ, ವಿವಾಹವಿಚ್ಛೇದನಕ್ರಮ, ನ್ಯಾಯಾಂಗಗಳ ರಚನೆ ಮತ್ತು ಕ್ರಮ - ಇವುಗಳಲ್ಲಿ ಎಲ್ಲಾ ಸಂಸ್ಥಾನಗಳಲ್ಲಿಯೂ ಏಕರೀತಿ ಯಾದ ನಿರ್ಧಾರವಿಲ್ಲದಿದ್ದ ಪಕ್ಷದಲ್ಲಿ ರಾಷ್ಟ್ರಕ್ಕೆ ಹಾನಿ; ಆದುದರಿಂದ ರಾಷ್ಟ್ರ ಸರ್ಕಾರವು ಸಂಸ್ಥಾನಸರ್ಕಾರಗಳಿಗೆಂದು ಮೀಸಲಾಗಿರುವ ಈ ವಿವಿಧ ಪ್ರಶ್ನೆಗಳನ್ನು ಸಂಸ್ಥಾನದ ಆತ್ಮಶಾಸನಾಧಿಕಾರಕ್ಕೆ ಅನೇಕಾವೃತ್ತಿ ಧಕ್ಕೆ ಬರುವರೀತಿಯಲ್ಲಿ ವರ್ತಿಸಿ ಪ್ರಶ್ನೆಗಳನ್ನು ಪರಿಹರಿಸಬೇಕಾಗುವುದು.

ಕೇಂದ್ರ ಮತ್ತು ಸ್ಥಳೀಯಸರ್ಕಾರಗಳ ಅಧಿಕಾರ ವಿಭಜನೆ, ಸಂಯುಕ್ತಸರ್ಕಾರಗಳಲ್ಲಿ ಏಕರೀತಿಯಾಗಿಲ್ಲ. ಕೆಲವು ರಾಷ್ಟ್ರಗಳಲ್ಲಿ, ಸೃಷ್ಟಿಯಾಗುವ ಕೇಂದ್ರಸರ್ಕಾರಕ್ಕೆ, ನಿರ್ದಿಷ್ಟವಾದ ಅಧಿಕಾರವನ್ನು ರಾಜ್ಯಾಂಗಪದ್ಧತಿಯು (Constitution) ನಿರೂಪಿಸುತ್ತದೆ. ಕೇಂದ್ರ ಸರ್ಕಾರಕ್ಕೆ ನಿರೂಪಿಸದೇ ಇರುವ ಸಮಸ್ತರಾಷ್ಟ್ರಾಧಿಕಾರ್ಯಗಳನ್ನು ನಿರ್ಧರಿ ಸುವ ಪರಮಾಧಿಕಾರವು ಸಂಸ್ಥಾನಸರ್ಕಾರಗಳಿಗೆ ಸೇರುವುದು. ಅಂದರೆ ಸಂಸ್ಥಾನಸರ್ಕಾರಗಳ ಸ್ವಯಂಪ್ರೇರಣೆಯಿಂದ, ದಾನವಾಗಿಕೊಟ್ಟ ಅಧಿ ಕಾರಪ್ರಯೋಗ ಕೇಂದ್ರಸರ್ಕಾರದ್ದು (Delegated Powers); ಸಂಸ್ಥಾನ ಸರ್ಕಾರಗಳ ಅಧಿಕಾರ, ಉಳಿದ ಎಲ್ಲಾ ರಾಷ್ಟ್ರ ಪ್ರಶ್ನೆಗಳಿಗೂ

ಅನ್ವಯಿಸುತ್ತದೆ (Residuary Powers). ಕೇಂದ್ರ ಸರ್ಕಾರದ ಅಧಿಕಾರ ನಿರ್ಧಾರ, ಸಂಸ್ಥಾನ ಮತ್ತು ಸ್ಥಳೀಯ ಸರ್ಕಾರಗಳ ನಿಷೇದಾಧಿಕಾರ ಒಂದು ವಿಧ.*

ಕೆನಡಾ ಮುಂತಾದ ರಾಷ್ಟ್ರಗಳಲ್ಲಿ ಸಂಸ್ಥಾನಸರ್ಕಾರಗಳ ಅಧಿಕಾರವನ್ನು ಕೇಂದ್ರಸರ್ಕಾರವು ನಿರ್ಧರಿಸುತ್ತದೆ. Delegated ಮತ್ತು ರಿಸರ್ವ್ (Reserve) ಅಧಿಕಾರಗಳೆರಡು ಕೇಂದ್ರಸರ್ಕಾರಕ್ಕೆ ಸೇರಿವೆ. ಇವುಗಳ ಅಧಿಕಾರಗಳ ಪುನರ್ವಿಭಜನೆ ಅಥವಾ ಮಾರ್ಪಾಟು ಮಾಡುವ ಪರಮಾಧಿಕಾರವೆಲ್ಲಾ ಬ್ರಿಟಿಷ್ ಪಾರ್ಲಿಮೆಂಟಿಗೆ ಸೇರಿದೆ. ಡೊಮಿನಿಯನ್ ಸರ್ಕಾರವು ಸಂಸ್ಥಾನ ಶಾಸನ ಸಭೆಗಳ ನಿರ್ಧಾರಗಳನ್ನು ರದ್ದು ಮಾಡಬಹುದು.

ರಾಷ್ಟ್ರಸರ್ಕಾರವು ಸಂಸ್ಥಾನದ ಪ್ರತಿಯೊಂದರಲ್ಲಿಯೂ, ಪ್ರಜಾಪ್ರಭುತ್ವ ಸರ್ಕಾರವಿರಬೇಕೆಂದು ನಿರ್ಧರಿಸಬಹುದು. ಈ ನಿಯಮಕ್ಕೆ ವ್ಯತಿರಿಕ್ತವಾಗಿ ನಡೆಯುತಕ್ಕ ಸ್ಥಳೀಯ ಸಂಸ್ಥೆಗಳನ್ನು ನಿಷೇಧಿಸಬಹುದು. ವರ್ಣಕರ್ತಸಮಾಜಸ್ವರೂಪ, ಮತದಾರರ ಹಕ್ಕುಗಳು, ಚುನಾವಣೆಯ ಕ್ರಮ, ಅನುಪಾತಿಕ ಪ್ರಾತಿನಿಧ್ಯಪದ್ಧತಿ ಮುಂತಾದುವುಗಳ ಪ್ರಶ್ನೆಗಳಲ್ಲಿ ಪ್ರತಿ ಸಂಸ್ಥಾನವೂ ಏಕರೀತಿಯಾಗಿ ವರ್ತಿಸುವಂತೆ ನಿರ್ಬಂಧಿಸಬಹುದು. ರಾಷ್ಟ್ರಸರ್ಕಾರವು ಸಂಸ್ಥಾನಗಳಲ್ಲಿ ತನ್ನ ಅಧಿಕಾರ ಪ್ರಯೋಗಕ್ಕೆ ಅಡ್ಡಿಯಾಗಿಬರುವ ಪ್ರತಿಬಂಧಕಗಳನ್ನು ಸಂಸ್ಥಾನ ಸರ್ಕಾರಗಳ ಒಡಂಬಡಿಕೆಯಿಲ್ಲದೆ ದೂಡಬಹುದು. ಅಧಿಕಾರಿಗಳ ನೇಮಕ, ಕಂದಾಯ ವಸೂಲಿ ಮತ್ತು ಇತರ ಸಂಯುಕ್ತರಾಷ್ಟ್ರ ಕೆಲಸಗಳನ್ನು ನೆರವೇರಿಸಲು ಅಗತ್ಯವಾದ ಸಾಧನಗಳ ನಿರೂಪಣೆ, ಕೇಂದ್ರ ಸರ್ಕಾರಕ್ಕೆ ಸೇರಿದೆ; ಅಂದರೆ ಸಂಸ್ಥಾನಗಳಲ್ಲಿ, ಸ್ಥಳೀಯ ಸರ್ಕಾರ ಸಾಧನೆಗಳು ಒಂದು ಕಡೆ; ಪ್ರತ್ಯೇಕವಾಗಿ

* The Competence of the Central Government is *Positively* determined by the Constitution, while that of the Local Government is ***negatively*** determined.

ಸಂಯುಕ್ತ ಸರ್ಕಾರದ ಸಾಧನೆಗಳು ಮತ್ತೊಂದು ಕಡೆ; ಅಮೆರಿಕಾ ಸಂಯುಕ್ತರಾಷ್ಟ್ರದಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಸಾಧನೆಗಳೇ ನೆರವೇರಿಸುತ್ತವೆ. ಜರ್ಮನಿ, ಆಸ್ಟ್ರಿಯ, ಸ್ವಿಟ್ಸರ್‌ಲೆಂಡ್ ಮುಂತಾದ ಸಂಯುಕ್ತರಾಷ್ಟ್ರಗಳಲ್ಲಿ ರಾಷ್ಟ್ರ ಸರ್ಕಾರದ ಕಾರ್ಯನಿರ್ವಹಣೆಯನ್ನು ಸಂಸ್ಥಾನ ಸರ್ಕಾರಸಾಧನೆಗಳಿಗೆ ವಹಿಸುವ ಪದ್ಧತಿ ಇದೆ. ಈ ವಿಧವಾದ ಪದ್ಧತಿಯ ಆಚರಣೆಯಿಂದ, ಅನುಕೂಲ, ಪ್ರತಿಕೂಲಗಳುಂಟು; ಅಲ್ಲಿ ರಾಷ್ಟ್ರಸಾಧನೆಗಳು, ಸ್ಥಳೀಯ ಸಾಧನೆಗಳು ಎಂಬ ಗೊಂದಲವಿಲ್ಲ. ಆದರೆ ರಾಷ್ಟ್ರಸರ್ಕಾರದ ಉದಾತ್ತ ಧ್ಯೇಯಗಳನ್ನು ಸಂಸ್ಥಾನ ಸರ್ಕಾರಸಾಧನೆಗಳು ದಕ್ಷತೆಯಿಂದ ನಿರ್ವಹಿಸಲು ಶಕ್ತಿರಹಿತವಾದುವು.

ಎಲ್ಲಾ ಸಂಯುಕ್ತರಾಷ್ಟ್ರಗಳಲ್ಲಿ ಸುವ್ಯವಸ್ಥಿತವಾದ ರೀತಿಯಿಂದಲೂ, ಮತ್ತು ಶಿಸ್ತಿನಿಂದಲೂ ರಾಜ್ಯಭಾರಕ್ರಮವನ್ನು ನಡೆಸಲು, ಸ್ವಲ್ಪ ಮಟ್ಟಿಗೆ ಸಂಸ್ಥಾನ ಸರ್ಕಾರಗಳನ್ನು ರಾಷ್ಟ್ರಸರ್ಕಾರವು ನಿರ್ಬಂಧಿಸಬೇಕಾದ ಆವಶ್ಯಕತೆ ಇದೆ. ಸಂಸ್ಥಾನಗಳಲ್ಲಿ ಕ್ರಾಂತಿಯುತ ಚಳುವಳಿಗಳು, ಅನೀತಿ ಯುತ ಪ್ರವರ್ತನೆ, ರಾಷ್ಟ್ರಹಿತಸಾಧಕಕ್ಕೆ ಪ್ರತಿಬಂಧಕಗಳು—ಕಂಡು ಬಂದಲ್ಲಿ ಸಂಸ್ಥಾನ ಸರ್ಕಾರಗಳ ಅನುಮತಿಯೂ ಕೂಡ ಇಲ್ಲದೆ ರಾಷ್ಟ್ರ ಸರ್ಕಾರನಾಯಕನು ಸೈನ್ಯಸಮೇತನಾಗಿ ಪ್ರವೇಶಿಸಿ ಅವುಗಳನ್ನು ನಿರ್ಮೂಲವಮಾಡಬಹುದು. ಸಂಸ್ಥಾನಗಳ ಆತ್ಮರಕ್ಷಣೆಗೆ ಮತ್ತು ಪ್ರಜಾಪ್ರಭುತ್ವನೀತಿಗೆ ಕುಂದು ಬರುವಂತಹ ವಿಶೇಷ ಪರಿಸ್ಥಿತಿಯಲ್ಲಿ ಅವುಗಳನ್ನು ರಕ್ಷಿಸುವ ಭಾರ ರಾಷ್ಟ್ರಸರ್ಕಾರಕ್ಕೆ ಸೇರಿದುದು. ಸ್ವಿಟ್ಸ್ ರಾಷ್ಟ್ರದಲ್ಲಿ ಕ್ಯಾಂಟನ್‌ಗಳ ಪರಮಾಧಿಕಾರಕ್ಕೆ ಅಡ್ಡಿಯಾಗಿ ಬರುವ ತೊಂದರೆಗಳನ್ನು ಪರಿಹರಿಸಿ ಅವುಗಳಿಗೆ ಪರಮಾಧಿಕಾರ ವನ್ನೂ ಮತ್ತು ಸ್ವಾತಂತ್ರ್ಯವನ್ನೂ ಗಳಿಸಿಕೊಡುವ ಭಾರ ಸ್ವಿಸ್ ರಾಷ್ಟ್ರಸರ್ಕಾರಕ್ಕೆ ಸೇರಿದೆ.

ಆಧುನಿಕ ರಾಷ್ಟ್ರಗಳಲ್ಲಿ ಸಂಸ್ಥಾನ ಸರ್ಕಾರ, ಕಾನ್ಫಿಡರೇಟ್ (Confederate) ಸರ್ಕಾರ ಮತ್ತು ಬ್ಯೂರೋಕ್ರಾಟಿಕ್ ಸರ್ಕಾರ (Baurocratic Government) ಗಳ ರಚನೆಯನ್ನು ಕಾಣಬಹುದು. ಈ confederate ಸರ್ಕಾರದಲ್ಲಿ, ಸಂಸ್ಥಾನ ಸಂಖ್ಯೆಗನುಗುಣವಾದ ಪರಮಾಧಿಕಾರಗಳು ಕಾಣುಬರುವುವು. ಅಧಿಕಾರವು ಕೇಂದ್ರೀಕೃತವಾಗಿಲ್ಲ. ರಾಷ್ಟ್ರಸರ್ಕಾರಕ್ಕೂ, ಮತ್ತು ಸಂಸ್ಥಾನ ಸರ್ಕಾರಕ್ಕೂ ಅಧಿಕಾರವಿಭಜನೆಯಿಲ್ಲ. ವಿಧಾನರಹಿತವಾದುದರಿಂದ, ವೈಧಪೂರ್ವಕವಾಗಿ ನಿರ್ಮಿಸಲ್ಪಟ್ಟ ರಾಷ್ಟ್ರ ಸರ್ಕಾರವಿಲ್ಲ. ಸಂಸ್ಥಾನಗಳ ಒಪ್ಪಂದಗಳಮೂಲಕ ನಿರ್ಮಿತವಾದ ಸರ್ಕಾರವು ಕೆಲವು ನಿರ್ದಿಷ್ಟ ಕೆಲಸಗಳನ್ನು ನಿರ್ವಹಿಸುವ ಸಾಧನೆಯಾಗಿದೆ. ರಾಷ್ಟ್ರಸರ್ಕಾರದಲ್ಲಿ ಸಂಸ್ಥಾನಾಪ್ರತಿನಿಧಿಗಳಿಂದ ಕೂಡಿರುವ ಒಂದು ಶಾಸನ ಸಭೆ ಇದೆ. ನಿರ್ಣಯಗಳನ್ನು ಮಾಡುವ ಅಧಿಕಾರವಿದ್ದರೂ ಆ ನಿರ್ಣಯಗಳು ಸಂಸ್ಥಾನ ಸರ್ಕಾರಗಳಿಗೆ ಅನ್ವಯಿಸುವುದೇ ಹೊರತು ಸಂಸ್ಥಾನ ಪ್ರಜಾವರ್ಗಕ್ಕೆ ಅನ್ವಯಿಸುವುದಿಲ್ಲ. ರಾಷ್ಟ್ರಸರ್ಕಾರದಲ್ಲಿ ಕಾರ್ಯಾಂಗ ಸಮಿತಿಯಾಗಲಿ, ನ್ಯಾಯಾಂಗ ರಚನೆ ಮತ್ತು ಸಾಧನೆಗಳು, ಇಲ್ಲ. ಪೌರೇಯ ಹಕ್ಕುಗಳನ್ನು ಪಡೆದಿರತಕ್ಕ ಪ್ರಜಾವರ್ಗಕ್ಕೂ ರಾಷ್ಟ್ರ ಸರ್ಕಾರಕ್ಕೂ ನಿಕಟಸಂಬಂಧವಿಲ್ಲ. ವಿದೇಶಾಂಗ ನೀತಿ, ಆತ್ಮರಕ್ಷಣೆ, ಅಂತರ ಸಂಸ್ಥಾನಗಳ ವ್ಯವಹಾರನಿರ್ಧಾರ ಮಾತ್ರ ರಾಷ್ಟ್ರಸರ್ಕಾರದ ಕೆಲಸ. ವಿಶೇಷ ಪರಿಸ್ಥಿತಿಗಳಲ್ಲಿ ಬಲಯುತವಾದ ಸಂಸ್ಥಾನಗಳು Confederate ಸರ್ಕಾರದಿಂದ ಪ್ರತ್ಯೇಕವಾಗಿ ರಾಷ್ಟ್ರಸರ್ಕಾರವನ್ನು ರದ್ದುಮಾಡಬಹುದು. ಆದುದರಿಂದ ಈ Confederate ಸರ್ಕಾರವೆನ್ನುವುದು ಸ್ಥಿತ್ಯಂತರವಾಗಿ ಅಥವಾ ರಾಜಕೀಯ ಪರಿಸ್ಥಿತಿಗಳು ಬದಲಾವಣೆಯಾಗುವಕಾಲದಲ್ಲಿ ಉದ್ಭವಿಸಿ ಅಲ್ಪಕಾಲವಿರುವ ಸರ್ಕಾರ. ಸಂಯುಕ್ತ ರಾಷ್ಟ್ರಸರ್ಕಾರ ರಚನೆಯಲ್ಲಿ ಸಂಸ್ಥಾನಗಳ ಒಪ್ಪಂದದಿಂದುಂಟಾದ ಸರ್ಕಾರವು, ಅಥವಾ Confederate ಸರ್ಕಾರವು ಪ್ರಥಮಸೋಪಾನವೆಂದು ಹೇಳಬಹುದು.

## ಮಂತ್ರಿಮಂಡಲ ಸರ್ಕಾರ—Cabinet Government.

ಪಾರ್ಲಿಮೆಂಟ್ ಪರಮಾಧಿಕಾರವಿರುವ ರಾಜ್ಯಗಳಲ್ಲಿ ಮಂತ್ರಿಮಂಡಲವು ಶಾಸನಸಭೆಗೆ ಅಧೀನವಾಗಿರುವುದು. ಮಂತ್ರಿಮಂಡಲವು ಶಾಸನ ಸಭೆಯಲ್ಲಿ ಎಲ್ಲಿಯವರೆಗೆ ತನ್ನ ಆತ್ಮಗೌರವವನ್ನು ಕಾಪಾಡಿಕೊಂಡು ಸದಸ್ಯರ ನಂಬಿಕೆಗೆ ಅರ್ಹತೆಯನ್ನು ಪಡೆದಿರುತ್ತದೆಯೋ ಅಲ್ಲಿಯವರೆಗೆ ಅಧಿಕಾರ ದಲ್ಲಿರುತ್ತದೆ. ಮಂತ್ರಿ ಮಂಡಲಕ್ಕೂ ಅದನ್ನು ರಚಿಸುವ ಶಾಸನಸಭೆಗೂ ಅಂತರವಿದ್ದಲ್ಲಿ ಮಂತ್ರಿಮಂಡಲವು ರದ್ದಾಗಿ ಶಾಸನಸಭೆಯ ವಿಶ್ವಾಸಕ್ಕೆ ಪಾತ್ರವಾದ ಮಂತ್ರಿಮಂಡಲವು ರಚಿತವಾಗುವುದು. ಸ್ವಂತ ಜವಾಬ್ದಾರಿಯ ಮೇಲೆ, ಆಡಳಿತಾಂಗಗಳ ಮುಖ್ಯಾಧಿಕಾರಿಗಳ ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ಚುನಾಯಿಸುವುದೇ ಶಾಸನಸಭೆಯ ಮುಖ್ಯಾಧಿಕಾರ. ಈ ಸಮಿತಿಯನ್ನು 'ಕಾಬಿನೆಟ್' ಎಂದು ಕರೆಯುವರು. ಬೆಜಾಹ್ಟ (Bagehot) ಹೇಳುವಂತೆ 'ಕಾಬಿನೆಟ್; ಪಾರ್ಲಿಮೆಂಟಿನ ಒಂದು ಸಮಿತಿ.' ಆದರೆ ಕಾಬಿನೆಟ್ ಪದ್ಧತಿ ಆಚರಣೆಯಿದ್ದಲ್ಲಿ ಶಾಸನ ಸಭೆಯುಸದಸ್ಯರು ಸ್ವಚ್ಛಂದದಿಂದ ಸಚಿವರನ್ನು ಚುನಾಯಿಸಲಾರರು. ಸಚಿವರುಗಳನ್ನು ರಾಷ್ಟ್ರನಾಯಕನು ಅಥವ ರಾಜನು ಚುನಾಯಿಸುವನು. ಸಚಿವರ ತೀರ್ಮಾನಗಳಿಗೆ ಸಾಧಾರಣವಾಗಿ ಶಾಸನಸಭೆಯ ಒಪ್ಪಿಗೆಯುಂಟು. ಆಧುನಿಕ ಆಚಾರದ ರೀತಿಯಲ್ಲಿ ಕಾಬಿನೆಟ್ ಸಮಿತಿಯು ತನ್ನ ನೀತಿಗಳನ್ನು ಪಾರ್ಲಿಮೆಂಟ್ ಸಭೆಯು ಒಪ್ಪದಿದ್ದಲ್ಲಿ ಪಾರ್ಲಿಮೆಂಟ್ ಸಭೆಯನ್ನು ರದ್ದುಗೊಳಿಸಿ ವರಣದಾತರಿಗೆ ಅಪೀಲು ಮಾಡಬಹುದು. ಸಚಿವರ ತೀರ್ಮಾನಗಳು ವರಣದಾತರ ಬಹುಮತ ಬೆಂಬಲವನ್ನು ಪಡೆದರೆ ಅಧಿಕಾರದಲ್ಲಿ ನೆಲೆ ನಿಲ್ಲಬಹುದು, ನೀತಿಯನ್ನೂ ಮುಂದುವರಿಸ ಬಹುದು; ಆಗ ವರಣದಾತರೇ ಕಾಬಿನೆಟ್‌ನ್ನು ಚುನಾಯಿಸುವರು ಎನ್ನ ಬಹುದು.

ಎರಡು ಪಕ್ಷಗಳು ತಮ್ಮ ಪಕ್ಷ ನಾಯಕನನ್ನು ಆರಿಸುವುವು;

ಯಾವ ಪಕ್ಷವು ಬಹುಮತ ಬೆಂಬಲಪಡೆಯುವುದೋ ಆ ಪಕ್ಷದ ನಾಯಕನೇ ಮುಖ್ಯ ಮಂತ್ರಿಯಾಗುತ್ತಾನೆ. ಪಕ್ಷದಲ್ಲಿ ಮಾನ್ಯರಾದವರನ್ನು ತನ್ನ ಸಹೋದ್ಯೋಗಿಗಳಂತೆ ಆದರಿಸಿ ಅವರೊಡನೆ ಸಹಕರಿಸಬೇಕು; ಈ ರೀತಿಯಲ್ಲಿ ರಾಜಕೀಯ ಪಕ್ಷಗಳೇ ಕಾಬಿನೆಟ್ ಸಭೆಯನ್ನೂ ಚುನಾಯಿಸುತ್ತವೆಯನ್ನಬಹುದು. ಕೆಲವು ಅಂಶಗಳಲ್ಲಿ ಕಾಬಿನೆಟ್ ಸಮಿತಿಯ ಸಚಿವರು ತಾವೇ ಚುನಾಯಿಸಿಕೊಳ್ಳುವರು; ಪಕ್ಷದನಾಯಕರಾಗುವ ಪೂರ್ವಭಾವಿಯಾಗಿ ತಮ್ಮ ಉಚಿತಜ್ಞತೆ, ಬುದ್ಧಿಶಕ್ತಿಕೌಶ್ಯಲಾದಿಗುಣಗಳಿಂದ ವರಣದಾತರನ್ನು ಮುಗ್ಧಗೊಳಿಸಿ ನಾಯಕಸ್ಥಾನಕ್ಕೆ ಅರ್ಹರೆಂಬ ಕೀರ್ತಿಯನ್ನೂ ಗಳಿಸುತ್ತಾರೆ.

ಸಾರ್ವಜನಿಕ ಸಭೆಗಳಿಂದ ಚುನಾಯಿತರಾದ ಸಚಿವತಂತ್ರ ಮತ್ತು ಮಂಡಲದ ಜವಾಬ್ದಾರಿಯ ರಚನೆಯೇ ಒಂದು ವಿಧ. ಇತರ ಸರ್ಕಾರಗಳ ರಚನೆಯೇ ಒಂದು ವಿಧ. ಸಚಿವತಂತ್ರವು ಅಪರಿಹಾರ್ಯನಾಗಿ ಪಕ್ಷ ಸರ್ಕಾರವನ್ನೇ ತರುತ್ತದೆ, ಮತ್ತು ಶಾಸನ ಸಭೆಯನ್ನು ಆ ಪಕ್ಷ ಸರ್ಕಾರಕ್ಕೆ ಅಧೀನವನ್ನಾಗಿ ಮಾಡುವುದು. ನಾಯಕರನ್ನು ಚುನಾಯಿಸಿ ಅವರ ಮುಂದಾಳ್ತನವನ್ನು ಅನುಸರಿಸುವುದು ಶಾಸನಸಭೆಯ ಕರ್ತವ್ಯ. ರಾಜ್ಯ ನೀತಿ ಮತ್ತು ತತ್ವಗಳಲ್ಲಿಯೂ, ರಾಜಕೀಯವಿಷಯಗಳಲ್ಲಿಯೂ ಕಾಬಿನೆಟ್‌ಗೂ ಮತ್ತು ಶಾಸನಸಭೆಗೂ ಹೊಂದಾಣಿಕೆ ಸಂಪೂರ್ಣವಾಗಿದೆ. ಶಾಸನ ಸಭೆಯು ತನ್ನ ವಿಶ್ವಾಸವನ್ನು ಸಂಪೂರ್ಣವಾಗಿ ಗಳಿಸಿರುವ ಸಚಿವ ಮಂಡಲಕ್ಕೆ ಅಧಿಕಾರವನ್ನು ಒಪ್ಪಿಸುವುದನ್ನು ಜವಾಬ್ದಾರಿಸರ್ಕಾರವೆಂದು ಹೇಳಬಹುದು. ಶಾಸನ ಸಭೆಗೂ ಮತ್ತು ವರಣದಾತರಿಗೂ ಅದು ಜವಾಬ್ದಾರಿ; ಆಡಳಿತಾಧಿಕಾರದಲ್ಲಿ ಸೈನಿಕ ಮತ್ತು ನೌಕಬಲಗಳ ವಿಷಯದಲ್ಲಿ ಜನಾಂಗದ ಗೌರವವನ್ನು ಸಪ್ಟಪಡಿಸುವುದರಲ್ಲಿಯೂ ಆದರ ಜವಾಬ್ದಾರಿ ಇದೆ.

ಕ್ಯಾಬಿನೆಟ್ ಸಮಿತಿಯು ಇಂಗ್ಲೆಂಡಿನ ರಾಷ್ಟ್ರದಲ್ಲಿ ಒಂದು ವಿಚಿತ್ರ ರೀತಿಯಲ್ಲಿ ಉದ್ಭವಿಸಿದೆ; ಚಾರಿತ್ರಕವಾಗಿ ಕಾನೂನು ಬದ್ಧವಾಗಿಯಾಗಲೀ, ಪಾರ್ಲಿಮೆಂಟಿನ ತೀರ್ಮಾನದಂತಾಗಲಿ ಸೃಷ್ಟಿಯಾಗಿಲ್ಲ. ಪ್ರೀವಿಕೌನ್ಸಿಲ್‌ನ

ಅಕ್ರಮರೀತಿಯಾದ ಒಂದು ಸಮಿತಿ, ಪ್ರಿವಿಕೌನ್ಸಿಲ್‌ನ ತೀರ್ಮಾನಗಳಂತೆ (Order in Council) ತನ್ನ ತೀರ್ಮಾನಗಳನ್ನು ಹೊರಗೆಡಹುತ್ತದೆ.

## ಕಿರೀಟಧರ — The Crown.

ಕಾಬಿನೆಟ್ ಸರ್ಕಾರದಲ್ಲಿ ರಾಷ್ಟ್ರನಾಯಕನು, ರಾಜವಂಶ ಪಾರಂಪರಾಗತ ರಾಜನಾಗಬಹುದು, ಅಥವ ಚುನಾಯಿತನಾಗಬಹುದು. ಫ್ರೆಂಚ್ ರಾಷ್ಟ್ರದ ಪ್ರೆಸಿಡೆಂಟ್, ರಾಷ್ಟ್ರವಿಧಾನದ ಪ್ರಕಾರ ವಿಶೇಷಾಧಿಕಾರವನ್ನು ಹೊಂದಿದ್ದಾನೆ. ಶಾಸನ ಸಭೆಯನ್ನು ಸೇರಿಸುವುದು, ರದ್ದುಮಾಡುವುದು, ಮಸೂದೆಗಳನ್ನು ಸಭೆಯ ಅವಗಾಹನೆಗೆ ತರುವುದು, ಕಮಿಸೇರ್ಸ್‌ಗಳನ್ನು ನೇಮಕಮಾಡುವುದು, ಹೊಸ ಹೊಸ ಹುದ್ದೆಗಳನ್ನು ರಚಿಸುವುದು— ಇವೇ ಮುಂತಾದವು ಆತನ ಕಾರ್ಯಗಳು. ಆದರೆ ಪ್ರತಿಯೊಂದು ಕಾರ್ಯಕ್ಕೂ ಒಬ್ಬ ಸಚಿವನ ರುಜುವಾತು ಆಗಬೇಕು. ನೇಮಕ, ನಿವೃತ್ತಿ ಮತ್ತು ಮಸೂದೆಗಳಲ್ಲಿ ಪ್ರವೇಶ ಮುಂತಾದ ಪ್ರತಿಯೊಂದು ಕೆಲಸಕ್ಕೂ ಸಚಿವನೇ ಶಾಸನಸಭೆಗೆ ಜವಾಬ್ದಾರಿ. ಶಾಸನಸಭೆಗೆ ಜವಾಬ್ದಾರಿ ಹೊತ್ತ ಸಚಿವಮಂಡಲದ ಅಂಕೆಯಲ್ಲಿ ಪ್ರೆಸಿಡೆಂಟ್ ತನ್ನ ರಾಷ್ಟ್ರಕೆಲಸಗಳನ್ನು ನಿರ್ವಹಿಸಬೇಕು. ನಾಡುಹಬ್ಬಗಳಲ್ಲಿ ಅಗ್ರಾಸನವನ್ನು ವಹಿಸಬಹುದು, ಜನಾಂಗಕ್ಕೆ ಗೌರವತರುವ ರೀತಿಯಲ್ಲಿ ವರ್ತಿಸಬಹುದು, ಮತ್ತು ಅಂತರರಾಷ್ಟ್ರೀಯ ಪ್ರಶ್ನೆಗಳಿದ್ದಲ್ಲಿ ಸಲಹೆಗಳನ್ನು ಕೊಡಬಹುದು. ಸಚಿವತಂತ್ರದ ರಾಜನೀತಿಯನ್ನು ವಿಮರ್ಶಿಸಬಹುದು. ಆದರೆ ಇವನ ಸಲಹೆಗಳು ಯಾರನ್ನೂ ನಿರ್ಬಂಧಿಸುವುದಿಲ್ಲ. ೧೯೨೦ರಿಂದ ಈಚೆಗೆ ಮಿಲ್ಲೆರಾಂಡ್, ಡೂಮೆರ್ಗ್ಯೂ (Millerand Doumergue) ಮುಂತಾದ ರಾಷ್ಟ್ರಾಧ್ಯಕ್ಷರು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಮಂತ್ರಿಮಂಡಲದ ರಾಜನೀತಿಯನ್ನು ಖಂಡಿಸಿ, ತಮ್ಮ ಸಲಹೆಗಳನ್ನು ಸ್ವೀಕರಿಸಬೇಕೆಂದು ನಿರ್ಬಂಧಿಸಿದ್ದಾರೆ. ಆದರೆ ಶಾಸನಸಭೆಗಳು ಪ್ರೆಸಿಡೆಂಟನೊಡನೆ ಸಹಕರಿಸಲು ಒಡಂಬಡುವುದಿಲ್ಲ.

ಬೊಂಬೆಯಂತೆಯೂ, ಶಕ್ತಿ ಅಳಿದುಹೋದ ನೆರಳಿನಂತೆಯೂ ಇರಬೇಕೆಂದು ಅವರ ಭಾವನೆ.

ಬ್ರಿಟಿಷ್ ರಾಷ್ಟ್ರದಲ್ಲಿ ರಾಜನು ಸಲಹೆ ಕೊಡುವ, ಉತ್ತೇಜನ ಕೊಡುವ, ಮತ್ತು ಎಚ್ಚರಿಕೆ ಕೊಡುವ ಹಕ್ಕುಗಳನ್ನು ಪಡೆದಿದ್ದಾನೆ. ನ್ಯಾಯ ತೀರ್ಮಾನಗಳನ್ನೂ ರಾಷ್ಟ್ರನೀತಿಯನ್ನೂ ಕೂಲಂಕಷವಾಗಿ ಪರೀಕ್ಷಿಸ ಬಹುದು. ಪಕ್ಷ ಜವಾಬ್ದಾರಿ ರಹಿತನಾದುದರಿಂದ ಇವನ ವಿಮರ್ಶೆಗೆ ವಿಶೇಷ ಪ್ರತಿಭೆಯಿದೆ. ಚಿತ್ರದಂತೆ ಸಾರ್ವಜನಿಕರ ಮನಸ್ಸಿನಲ್ಲಿ ರಂಜಿಸ ಬಲ್ಲನು. ಇವನ ಮನೋಗತವನ್ನು ಸಾಮಾನ್ಯ ಜನರೂ ತಿಳಿಯಬಲ್ಲರು. ಪರಸ್ಪರ ಸಂಬಂಧದಿಂದ ಇಡೀ ಜನಾಂಗದ ಅಭಿಮತವನ್ನು ಪಕ್ಷಗಳಿಗಿಂತ ಸುಲಭವಾಗಿ ಗ್ರಹಿಸಬಲ್ಲನು; ನೀತಿಯುತ ಸರ್ಕಾರವನ್ನೂ ಪ್ರೇರೇಪಿಸ ಬಹುದು, ತನ್ನ ರಾಷ್ಟ್ರಕ್ಕೂ ಸಾಮ್ರಾಜ್ಯಕ್ಕೂ ನಿಕಟಸಂಬಂಧವನ್ನು ಬೆಳೆಸ ಬಹುದು. ಸರ್ಕಾರದಲ್ಲಿ ಮತ್ತು ಪ್ರಜಾಸೇವೆಯಲ್ಲಿ ರಾಜನು ಉನ್ನತಾಧಿ ಕಾರಿ. ಮತ ವಿಚಾರಗಳಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಅವನಿಗೆ ಪ್ರಭಾವ ಮತ್ತು ಗೌರವ ಹೆಚ್ಚು, ಯುದ್ಧಕಾಲದಲ್ಲಿಯೂ, ವಿಶೇಷಪರಿಸ್ಥಿತಿ ಗಳಲ್ಲಿಯೂ ಚಾತುರ್ಯದಿಂದಲೂ, ಕಾರ್ಯದಕ್ಷತೆಯಿಂದಲೂ ಪ್ರಜೆಗಳನ್ನು ಹುರಿದುಂಬಿಸಬಹುದು, ಸಮಾಧಾನಗೊಳಿಸಬಹುದು.

ರಾಜನು ಪ್ರಜಾಭಿಮತಕ್ಕೆ ಅಧೀನನು; ದುರಂತ ಸನ್ನಿವೇಶಗಳಲ್ಲಿ, ಕಾರ್ಯಾಂಗ ಮತ್ತು ಶಾಸನಸಭೆಗಳಿಗೆ ಘರ್ಷಣೆಯ ಪ್ರಮೇಯವಿದ್ದಾಗ ಸ್ವಯಂಪ್ರೇರಣೆಯಿಂದ ಪರಣದಾತರಿಗೆ ಕಡೆಯ ತೀರ್ಮಾನ ಬೇಡುವ ಹಕ್ಕನ್ನು ಪಡೆದಿದ್ದಾನೆ. ಸಚಿವರುಗಳನ್ನು ನಿರ್ಬಂಧಿಸಲು ಶಾಸನಸಭೆಗೆ ಅಪೀಲುಮಾಡಬಹುದು. ಅಥವ ಸಚಿವಮಂಡಲವನ್ನು ರದ್ದುಗೊಳಿಸ ಬೇಕೆಂದು ಶಾಸನಸಭೆಯು ಬೇಡಿದಾಗ ಅಂಗೀಕಾರ ಕೊಡದೇಇರಬಹುದು. ಸಚಿವರುಗಳಿಗೆ ವಿರುದ್ಧವಾಗಿ ಅವರ ಅಭಿಪ್ರಾಯವನ್ನು, ಕೋರ್ಟ್ ಆಫ್ ಅಪೀಲಿನಂತೆ ಪರಿಶೀಲಿಸಬಹುದು. ಮುಖ್ಯ ಮಂತ್ರಿಯನ್ನು ನೇಮಿಸುವ ಹಕ್ಕನ್ನು ಪಡೆದಿದ್ದಾನೆ. ಶಾಸನಸಭೆಯು ಕಾನೂನುಗಳನ್ನು ಕಾರ್ಯಕಾರಿಯಾಗಿ

ಮಾಡುವ ಮುನ್ನ ಈ ಕಾನೂನುಗಳನ್ನು ಪರಮಾಧಿಕಾರವನ್ನು ಪಡೆದಿರುವ ವರಣದಾತರ ಅವಗಾಹನೆಗೆ ತಂದು ಅವರ ಅಭಿಮತವನ್ನು ತಿಳಿಯುವ ರೆಫೆರೆಂಡಂ ಅಧಿಕಾರ ರಾಜನದಾಗಿದೆ. ರಾಷ್ಟ್ರವಿಧಾನದಲ್ಲಿ ಕಿರೀಟ ಪ್ರಾಯನು, ಮುಖ್ಯಮಂತ್ರಿಯು ಸೂತ್ರದಾರನು.

## ಕಾಬಿನೆಟ್ ಮತ್ತು ಶಾಸನಸಭೆಯ ನಿಕಟಸಂಬಂಧ
## Cabinet and House of Commons

ಕಾಬಿನೆಟ್ ಸಮಿತಿಗೂ ಮತ್ತು ಶಾಸನಸಭೆಗೂ ನಿಕಟ ಸಂಬಂಧವಿರಬೇಕು. ಕಾಬಿನೆಟ್ಟಿನ ನೀತಿಯು ಪಾರ್ಲಿಮೆಂಟಿನ ಬಹುಸಂಖ್ಯಾತರ ರಾಜನೀತಿಯ ಪ್ರತಿಬಿಂಬ. ಸಮಿತಿಯ ಸದಸ್ಯರು ಶಾಸನ ಸಭೆಯ ಸದಸ್ಯರಾಗಿರಬೇಕೆಂಬುದು ತತ್ವ. ಗ್ಲಾಡಸ್ಟನ್ ಮತ್ತು ಚರ್ಚಿಲ್‌ರವರ ನಿದರ್ಶನಗಳು ಇದಕ್ಕೆ ಅಪವಾದ. ಸಮಿತಿಯ ಸದಸ್ಯರು ರಾಜಕೀಯ ಪಕ್ಷಗಳಿಂದ ಆರಿಸಲ್ಪಡಬೇಕು, ಸಾಧಾರಣವಾಗಿ ಏಕರೀತಿಯಾದ ಅಭಿಪ್ರಾಯ ವಿರಬೇಕಾದುದರಿಂದ; ಆಧುನಿಕ ಪರಿಸ್ಥಿತಿಯಲ್ಲಿ ಎಲ್ಲಾ ರಾಜಕೀಯಕ್ಷೇತ್ರಗಳಲ್ಲಿ ಪ್ರಜೆಗಳಿಗೆ ಏಕರೀತಿಯಾದ ಅನುಮತಿಯು ಸಾಧ್ಯವಿಲ್ಲವಾದುದರಿಂದ ವಿರುದ್ಧ ಪಕ್ಷಗಳ ತಾತ್ಕಾಲಿಕ ಒಡಂಬಡಿಕೆಗಳು, ಕೆಲವು ರಾಷ್ಟ್ರೀಯ ಪ್ರಶ್ನೆಗಳ ಪರಿಶೀಲನೆಗಾಗಿ, ಆಗಿಂದಾಗ್ಗೆ ಆಗಬೇಕು. ಈ ವಿಧವಾದ ಕೂಡುವಿಕೆ, ಕೊಯಲಿಷನ್ (Coalition Cabinet) ಕಾಬಿನೆಟ್‌ಗಳಲ್ಲಿ ಸಾಧ್ಯ. ಮೂಲಾಧಾರವಾದ ನೀತಿ ತತ್ವಗಳ ಪ್ರತಿಪಾದನೆಯಲ್ಲಿ ಏಕ ವಾಕ್ಯತೆ, ಪ್ರಾಸಂಗಿಕ ಮತ್ತು ಆಕಸ್ಮಿಕ ವ್ಯವಹಾರಗಳಲ್ಲಿ ರಾಜಿಯು ಕೊಯಲಿಷನ್ ಸಮಿತಿಗಳ ಮುಖ್ಯಗುರಿ. ಈ ವಿಧವಾಗಿ ರಚಿತವಾಗುವ ಸಮಿತಿಗಳಲ್ಲಿ ಸಚಿವರು ಸಭೆಯ ಜವಾಬ್ದಾರಿಗೆ ಕುಂದುಬರದಂತೆ ವೈಯಕ್ತಿಕವಾದ ಜವಾಬ್ದಾರಿಯನ್ನು ಪಾಲಿಸಬಹುದು. ಸಾಮಾನ್ಯವಾಗಿ ಸರ್ಕಾರದ ಆಡಳಿತದ ಮುಖ್ಯ ತತ್ವ ಮತ್ತು ನೀತಿಗಳಿಗೆಲ್ಲಾ ಕಾಬಿನೆಟ್ ಸಭೆಯು ವಚನಬದ್ಧವಾದುದು; ಗಹನವಾದ ವಿಚಾರಗಳಲ್ಲಿ ಕಾಬಿನೆಟ್ ಸದಸ್ಯರುಗಳೆಲ್ಲಾ

ಏಕಮುಖ ಅಭಿಮತವನ್ನು ಅಥವಾ ವಿರೋಧವನ್ನು ಬಿನ್ನವಿಸಬೇಕು. ವರಣ ದಾತನ ದೃಷ್ಟಿಯಲ್ಲಿಯೂ, ಶಾಸನಸಭೆಯ ದೃಷ್ಟಿಯಲ್ಲಿಯೂ, ಪ್ರಾಧಾನ ಮಂತ್ರಿಯನ್ನು ಅನುಸರಿಸುವುದರಲ್ಲಿಯೂ ಸಂಪೂರ್ಣ ಐಕ್ಯತೆಯನ್ನು ಹೊಂದಿದೆ. ಏತಕೆಂದರೆ ಸಚಿವರ ಆನಾಧಿಯ ಈ ಐಕ್ಯತೆಯು ಶಾಸನ ಸಭೆಯ ಪ್ರಧಾನ ಪಕ್ಷದ ವಿಶ್ವಾಸದ ಆಧಾರದ ಮೇಲೆ ನಿಂತಿದೆ. ಪಕ್ಷದ ಸದಸ್ಯರಲ್ಲಿ ಒಂದು ಭಾಗ ಸ್ವತಂತ್ರ ಮತದಾತರು; ಅವರ ಸಚಿವ ನಿಷ್ಠೆಯು ಸಂಶಯಾಸ್ಪದವಾದುದ್ದು. ಕೆಲವು ನಿರ್ದಿಷ್ಟವಾದ ಮಸೂದೆ ಗಳಲ್ಲಿ ತಮ್ಮ ಅಭಿಮತದ ಬಲದಿಂದ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತ ರನ್ನಾಗಿ ಮಾಡಿ, ಸಚಿವ ಪಕ್ಷಕ್ಕೆ ತೇಜೋವಧೆಯನ್ನು ಮಾಡಬಹುದು. ಅಲ್ಪ ಪ್ರಶ್ನೆಗಳಲ್ಲಿ ಸೋಲನ್ನು ಅನುಭವಿಸಬಹುದು; ಆದರೆ ಸಾಮೂಹಿಕವಾಗಿ ಈ ಸೋಲುಗಳಿಂದ ಸಚಿವಮಂಡಲದ ಐಕಮತ್ಯಕ್ಕೆ ಧಕ್ಕೆ ಬರಬಹುದು. ಶಾಸನಸಭೆಯಲ್ಲಿ ಸಚಿವರಿಗೆ ಅಗ್ರಪೂಜೆ; ಆದರೆ ಅವರ ನೀತಿಯನ್ನು ಶಾಸನಸಭೆಯು ಒಪ್ಪದಿದ್ದರೆ ವರಣ ಕರ್ತ ಸಮಾಜಕ್ಕೆ ಅರಿಕೆಮಾಡಿಕೊಳ್ಳ ಬಹುದು. ಶಾಸನಸಭೆಯನ್ನು ಕೊನೆಗಾಣಿಸುವ ಬೆದರಿಕೆಯಿಂದ ಕಾಬಿನೆಟ್ ತನ್ನ ಐಕ್ಯತೆಯನ್ನು ಕಾಪಾಡಿಕೊಳ್ಳಬಹುದು; ಸಭೆಯು ರದ್ದಾದರೆ ಸದಸ್ಯರು ಪುನರ್ಚುನಾವಣೆಗೆ ನಿಲ್ಲಬೇಕಾದುದರಿಂದಲೂ, ಖರ್ಚು ವಿಶೇಷವಾಗುವುದ ರಿಂದಲೂ, ಕಾಬಿನೆಟ್‌ನ ಬೆದರಿಕೆಯು ಪಕ್ಷದ ಸದಸ್ಯರನ್ನು ಅವಿಭಕ್ತ ರನ್ನಾಗಿಯೂ ಸಚಿವನಿಷ್ಠರನ್ನಾಗಿಯೂ ಇಡುವುದು.

ಔದ್ಯೋಗಿಕ ಮತ್ತು ಆರ್ಥಿಕ ಜೀವನದ ಸಂಕೀರ್ಣತೆ, ಸಮಾಜ ವಾದ ಪ್ರಚಾರ, ಕಾರ್ಮಿಕ ವರ್ಗಗಳ ಚೇತನ, ಮತ್ತು ಹೆಚ್ಚು ಹಕ್ಕುಗಳಿ ಗಾಗಿ ಚಳುವಳಿ, ದಾರಿದ್ರ್ಯ, ನಿರುದ್ಯೋಗಗಳ ಸಮಸ್ಯೆ, ಅಂತರರಾಷ್ಟ್ರೀಯ ಪರಿಸ್ಥಿತಿಗಳು — ಇವುಗಳಲ್ಲೆವೂ ಹೆಚ್ಚು ಸಾಮಾಜಿಕ ಸುಧಾರಣೆಗಳನ್ನೂ ಸರ್ಕಾರದ ಮುಂದಾಳ್ತನವನ್ನೂ ಜಯಿಸುವವು. ಈ ವಿಧವಾಗಿ ಹೆಚ್ಚಿದ ಜವಾಬ್ದಾರಿಯನ್ನು ಶಾಸನಸಭೆಯು ನಿರ್ವಹಿಸಲು ಕಷ್ಟಸಾಧ್ಯವಾದುದ ರಿಂದ ಕಾರ್ಯಾಂಗ ಸಮಿತಿಗಳಿಗೂ, ಆಡಳಿತಾಂಗಕ್ಕೂ ಒಪ್ಪಿಸಿಕೊಡುತ್ತದೆ.

ಇದರ ಫಲವಾಗಿ ಕಾಬಿನೆಟ್ ಸಭೆಯ ಜವಾಬ್ದಾರಿ ಹೆಚ್ಚಿದೆ; ಪ್ರಜಾನುರಾಗವನ್ನು ಗಳಿಸಲು ಪ್ರಗತಿಪರ ರಾಜನೀತಿಯನ್ನು ಅವಲಂಬಿಸಿ ಶಾಸನ, ಮತ್ತು ಸಂಧಾನಗಳನ್ನು ಆಚರಿಸಬೇಕು. ಸಚಿವರು ಸಾಮೂಹಿಕವಾಗಿಯೂ ಪ್ರತ್ಯೇಕವಾಗಿಯೂ ಒಬ್ಬರು ಇನ್ನೊಬ್ಬನ ಕಾರ್ಯಗಳಿಗೂ ಜವಾಬ್ದಾರರು. ಆದರೆ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳ ನಿವಾರಣೆಗಾಗಿ ಸದಸ್ಯರ ಸಂಖ್ಯೆ ವೃದ್ಧಿಯಾಗುತ್ತಿರುವುದರಿಂದ, ಸಾಮೂಹಿಕ ಜವಾಬ್ದಾರಿ ತತ್ವವು ವಿಶೇಷ ಪ್ರಗತಿಯನ್ನು ಹೊಂದಿದೆ. ಕಾರ್ಯಕಲಾಪಗಳಲ್ಲಿ ರಹಸ್ಯವನ್ನು ಕಾಪಾಡುವುದೇ ಒಂದು ದೊಡ್ಡ ಜವಾಬ್ದಾರಿ. ಸಚಿವರು ರಾಷ್ಟ್ರದ ಸರಂದ್ರ ಗೋಪ್ತರಾಗಿರಬೇಕು.

### ಕಾಬಿನೆಟ್ ಪಕ್ಷ ಸರ್ಕಾರ–Cabinet is party Government

ಕಾಬಿನೆಟ್ ಒಂದು ಪಕ್ಷದ ಸರ್ಕಾರ ಮತ್ತು ಅದರ ಕಾರ್ಯನಿರ್ವಹಣೆ ಸುಲಲಿತವಾಗಿ ನಡೆಯಬೇಕಾದರೆ ಅದಕ್ಕೆ ಬಹುಸಂಖ್ಯಾಭಿಮತದ ಬೆಂಬಲಬೇಕು. ಕಾಬಿನೆಟ್ ಪದ್ಧತಿಯಲ್ಲಿ ಒಂದು ಪಕ್ಷವು ಜವಾಬ್ದಾರಿಯನ್ನು ವಹಿಸಿದರೆ, ಇನ್ನೊಂದು ಪಕ್ಷವು ಅವಿಚ್ಛಿನ್ನವಾಗಿ ಜವಾಬ್ದಾರಿಗಾಗಿ ಸ್ಪರ್ಧಿಸುತ್ತದೆ. ಸಮರ್ಥ ಸರ್ಕಾರವಾಗಬೇಕಾದರೆ ಎರಡು ಪಕ್ಷಗಳೂ ಸಹಕರಿಸಬೇಕು; ವರಣದಾತರ ತಿಳಿವಳಿಕೆಯೂ ರಾಜಕೀಯದಲ್ಲಿ ಅನುಭವವೂ ಹೆಚ್ಚಿದಷ್ಟು ಈ ವಿಧವಾದ ಸಹಕಾರ ಕಷ್ಟಸಾಧ್ಯ; ಪ್ರಜಾವರ್ಗಕ್ಕೆ ಏಕನಾಯಕ ಪ್ರಭುತ್ವ ಮತ್ತು ಮುಂದಾಳ್ತನವು ಬಹಳ ಆಕರ್ಷಣೀಯವಾಗಿ ಕಾಣುತ್ತದೆ. ಪಕ್ಷಗಳು ತಮ್ಮ ಅಭಿಮತವನ್ನೇ ಪ್ರಜಾವರ್ಗದ ಅಭಿಮತವನ್ನಾಗಿ ಮಾಡಿ, ಮುದ್ರಣ, ಭಾಷಣ, ವಿಚಾರ ಮತ್ತು ವಾಕ್ ಸ್ವಾತಂತ್ರ್ಯಗಳನ್ನು ಹತೋಟಿಯಲ್ಲಿಟ್ಟು, ತಮ್ಮ ನಾಯಕರನ್ನು ರಾಷ್ಟ್ರನಾಯಕರನ್ನಾಗಿ ಒಪ್ಪುವಂತೆ ಹುರಿದುಂಬಿಸುವುವು.

ಪಕ್ಷದನಾಯಕನೇ ಪ್ರಧಾನಮಂತ್ರಿ. ಸಚಿವಮಂಡಲದ ಐಕ್ಯತೆಗೆ ಪ್ರಧಾನಮಂತ್ರಿಯ ಏಳಿಗೆ ಮತ್ತು ಪ್ರಾಬಲ್ಯ ಮುಖ್ಯಕಾರಣ. ರಾಜ

ಕೀಯ ಮತ್ತು ಸಾಮಾಜಿಕ ಘಟನೆಗಳೂ ಅವನ ಪ್ರಭಾವಕ್ಕೆ ಕಾರಣವೇ. ಪ್ರಧಾನಮಂತ್ರಿಯು ಸಚಿವಮಂಡಲದ ಕಮಾನಿನ ನಡುವಿನ ಕಲ್ಲು (Keystone of the Cabinet Arch). ಪಕ್ಷದ ಬೆಂಬಲ ಹೆಚ್ಚಿದಷ್ಟು ಇವನ ಪ್ರಾಬಲ್ಯ ವೃದ್ಧಿಯಾಗುವುದು. ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಆಪ್ತರಾದ ಕೆಲವರನ್ನು ಸಚಿವರನ್ನಾಗಿ ನೇಮಿಸಿಕೊಳ್ಳುವನು. ಪಕ್ಷದನೀತಿಯನ್ನು ಮುಂದುವರಿಸುವುದು ಇವನ ಜವಾಬ್ದಾರಿ; ಪಕ್ಷವನ್ನು ನಡೆಸುವುದರಲ್ಲಿ ಮಂತ್ರಿಯು ಅನೇಕಾವರ್ತಿ ತನ್ನ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡು ಪಕ್ಷದ ಮೂಲವಾದ ತತ್ವಗಳನ್ನು ಮುಂದುವರಿಸಬೇಕು; ನಾಯಕತ್ವಕ್ಕೆ ಸಹಜವಾದ ಮತ್ತು ಅಗತ್ಯವಾದ ಯುಕ್ತಾಯುಕ್ತ ನೀತಿಗಳನ್ನು ಅನುಸರಿಸಬೇಕು. ಪಕ್ಷ ನಿಯಮಗಳ ಅಧೀನತೆಯಿಂದ ರಾಷ್ಟ್ರದಲ್ಲಿ ಯೋಗ್ಯಪುರುಷರನ್ನು ಸಚಿವರನ್ನಾಗಿ ಆರಿಸಲು ಪ್ರಧಾನಮಂತ್ರಿಯ ಜವಾಬ್ದಾರಿ ಕಷ್ಟಸಾಧ್ಯ; ಪಕ್ಷ ಬೆಂಬಲವಿರುವರನ್ನೇ ಸಚಿವಮಂಡಲದಲ್ಲಿ ಪಕ್ಷನೀತಿ ಸಾಧನೆಗಾಗಿ ಸೇರಿಸಿಕೊಳ್ಳಬೇಕಾಗುವುದು; ಆರ್ಥಿಕ ಮತ್ತು ವಿದೇಶಾಂಗನೀತಿಯಲ್ಲಿ ವಿಫಲರಾದರೂ ಕಿಂಗ್ಸ್‌ವುಡ್ ಮತ್ತು ಲಾರ್ಡ್ ಹಾಲಿಫಾಕ್ಸರನ್ನೂ ಚರ್ಚಿಲ್ ಮುಖ್ಯ ಮಂತ್ರಿಯು ಯುದ್ಧಕಾರ್ಯ ಸಮಿತಿಯಲ್ಲಿ ನಿಲ್ಲಿಸಿದ್ದು ಪಕ್ಷ ಸರ್ಕಾರದ ನ್ಯೂನತೆಯ ಒಂದು ನಿದರ್ಶನ. ವಿಶೇಷ ಪರಿಸ್ಥಿತಿಗಳಲ್ಲಿ, ದುರಂತ ಮತ್ತು ಉತ್ತಾಪಕರ ರಚನೆಗಳನ್ನೂ ಪರಿಹರಿಸಲು ಯೋಗ್ಯರಾದವರನ್ನು ಚುನಾಯಿಸುವ ವಿಧಾನಗಳು ಸಮರ್ಪಕವಾಗಿಲ್ಲ; ಅಲ್ಲದೆ, ರಾಜಕೀಯದಲ್ಲಿ ಯುಕ್ತಾಯುಕ್ತ ಪರಿಜ್ಞಾನ, ಆತ್ಮಗೌರವ, ಸರ್ಕಾರದಲ್ಲಿ ಪಾತ್ರವಹಿಸುವ ಉತ್ಸಾಹವು ಪ್ರಜೆಗಳಲ್ಲಿ ಹೆಚ್ಚುತ್ತಾ ಬಂದಾಗ ಈ ವಿಧವಾದ ಪಕ್ಷ ಸರ್ಕಾರವು ನಿತ್ರಾಣವಾಗುವುದು.

## ಪ್ರಧಾನಮಂತ್ರಿ—Ascendency of The Prime Minister.

ಕಾಬಿನೆಟ್ ಸರ್ಕಾರದ ಮೇಲ್ಮೆಗೆ ಪ್ರಧಾನಮಂತ್ರಿಯೇ ಮುಖ್ಯ ಕಾರಣ. ಇಂಗ್ಲೆಂಡಿನಲ್ಲಿ ಪ್ರೈಂ ಮಿನಿಸ್ಟರು (Prime Minister) ಶಾಸನಸಭೆಯ ಬಹು ಸಂಖ್ಯಾತ ಅಭಿಮತವನ್ನು ಪಡೆದಿರುವವರೆಗೂ, ವಿಶೇಷ ಅಧಿಕಾರಯುತನಾದವನು, ರಾಷ್ಟ್ರಕರ್ತವ್ಯಗಳನ್ನು ನಿರ್ಭಯವಾಗಿ ನಿರ್ವಹಿಸಬಹುದು. ಜ್ಞಾನಸಂಪನ್ನರೂ ಧರ್ಮಜ್ಞರೂ ಪ್ರತಿಭಾವಂತರೂ ಆದ ಸಚಿವರನ್ನು ಆರಿಸಿಕೊಂಡು, ಸೈನಿಕವಿಭಾಗ, ವಿಮಾನ ಮತ್ತು ನೌಕವ್ಯೂಹರಚನೆ, ಶಿಷ್ಟ ಪೋಷಣೆ, ದುಷ್ಟಶಿಕ್ಷಣ, ಅನ್ಯರಾಷ್ಟ್ರಗಳೊಡನೆ ಸಂಧಿ ವಿಗ್ರಹ-ಮುಂತಾದುವುಗಳನ್ನು ದಕ್ಷತೆಯಿಂದ ನಿರ್ವಹಿಸಬಹುದು. ಕಾಬಿನೆಟ್‌ನ ಸಚಿವಸಂಖ್ಯೆಯನ್ನು ಇವನು ಹೆಚ್ಚಿಸಬಹುದು, ಕಡಮೆ ಮಾಡಬಹುದು; ಪಾರ್ಲಿಮೆಂಟ್ ಸಭೆಯ ರಚನೆಯ ವಿಧಾನಕ್ಕೆ ವಿರುದ್ಧವಾದರೂ ಖಾತೆಗಳಿಲ್ಲದ ಸಚಿವರನ್ನು ನೇಮಿಸಬಹುದು; ಇಲಾಖೆಗಳಿಗೆ ಮುಖ್ಯಾಧಿಕಾರಿಗಳು ಸಚಿವರೇ ಆಗಿರಬೇಕೆಂಬ ಸಂಪ್ರದಾಯವು ಆಚರಣೆಯಲ್ಲಿದ್ದರೂ, ಅಂತಹ ಸಂಪ್ರದಾಯಗಳನ್ನು ಪ್ರಜಾಭಿಮತ ಮತ್ತು ತನ್ನ ವಿಶೇಷ ಜವಾಬ್ದಾರಿಗನುಗುಣವಾಗಿ ಮಾರ್ಪಾಡು ಮಾಡಬಹುದು

ಕಾಬಿನೆಟ್‌ಸಭೆಗೆ ಅಧ್ಯಕ್ಷನಾಗಿ ಹೊಸಸಂಪ್ರದಾಯಗಳನ್ನೂ ನಿಯಮಗಳನ್ನೂ ರಾಷ್ಟ್ರಸ್ಥಿತಿಗೆ ಅನುಕೂಲಿಸುವಂತೆ ರಚಿಸಬಹುದು. ಪ್ರಧಾನ ಮಂತ್ರಿಯು ಪ್ರೈಮಸ್ ಇಂಟರ್ ಪಾರೆಸ್ (Primus inter Pares). ಪ್ರತ್ಯೇಕವಾದ, ಅತಿಶಯವಾದ ಮತ್ತು ಪ್ರಭಾವದಿಂದ ಕೂಡಿರುವ

---

ಜಾನಪದೋಽಭಿಜಾತಃ ಸ್ವವಗ್ರಹಃ ಕೃತಶಿಲ್ಪಶ್ಚಕ್ಷುಷ್ಮಾನ್ ಪ್ರಾಜ್ಞೋಽಧಾರಯಿಷ್ಣುಃ
ದಕ್ಷೋವಾಗ್ಮೀ ಪ್ರಗಲ್ಭಃ ಪ್ರತಿಪತ್ತಿಮಾನುತ್ಸಾಹಪ್ರಭಾವಯುಕ್ತಃ ಕ್ಲೇಶ
ಸಹಃರುಚಮೈತ್ರೋ ದೃಢಭಕ್ತಿಃ ಶೀಲಬಲಾರೋಗ್ಯ ಸತ್ವಸಂಯುಕ್ತಃ ಸ್ತಂಭ
ಚಾಪಲ್ಯವರ್ಜಿತಃ ಸಂಪ್ರಿಯ, ಕೌಟಲ್ಯಮಾತ್ಯಸಂಪತ್ !

ನ್ಯಾಯಸ್ಥಾನವು ಪ್ರಧಾನಮಂತ್ರಿಯದು. ಪ್ರಧಾನಮಂತ್ರಿತ್ವಸ್ಥಾನ ರಾಷ್ಟ್ರ ವಿಧಾನದಲ್ಲಿ ಏರ್ಪಟ್ಟಿಲ್ಲ. ಆರ್ಥಿಕಸಚಿವನಾಗಿ ( Lord Chancellor of the Treasury ) ಯೇ ಪ್ರಧಾನಮಂತ್ರಿಯಾಗುವನು; ವೇತನವು ಇವನ ಜವಾಬ್ದಾರಿಗೆ ಅನುಗುಣವಾಗಿಲ್ಲ. ಇಷ್ಟು ದೊಡ್ಡ ವಸ್ತುವು ಇಷ್ಟು ಅಲ್ಪ ನೆರಳನ್ನು ತೋರುವ ವಿಚಿತ್ರವು ಪ್ರಪಂಚದಲ್ಲಿ ಎಲ್ಲಿಯೂ ಕಾಣುವುದಿಲ್ಲವೆಂದು ಗ್ಲಾಡ್‌ಸ್ಟನ್ ಹೇಳಿದ್ದಾನೆ. ಪ್ರಧಾನಮಂತ್ರಿಯು ಕಾಬಿನೆಟ್ಟಿನ ಅಧ್ಯಕ್ಷ, ಹೌಸ್ ಆಫ್ ಕಾಮನ್ಸ್‌ಸಭೆಯನಾಯಕ, ಕಿರೀಟ ಧರನಿಗೂ ಶಾಸನಸಭೆಗೂ, ಪ್ರಜಾವರ್ಗಕ್ಕೂ ಮತ್ತು ಶಾಸನಸಭೆಗೂ ಮುಖ್ಯನಾದ ಪ್ರಣಾಲಿಕೆ ( Channel of Comunication ). ಶ್ರೇಷ್ಠ ರಾಜಾಧಿಕಾರದ, ರಾಷ್ಟ್ರದ ಐಕಮತ್ಯದ, ಪರಮಾಧಿಕಾರದ ಕುರುಹು; ರಾಷ್ಟ್ರಾಧಿಕಾರವೆಲ್ಲವೂ ಇವನಲ್ಲಿ ಅಡಗಿರುವುದರಿಂದ ಜವಾಬ್ದಾರಿಯು ಇವನಲ್ಲಿ ಕೇಂದ್ರೀಕೃತ. ಅವನ ಅಧಿಕಾರಕ್ಕೆ ಒಳಪಟ್ಟ ಚರಾಚರ ವಸ್ತುಗಳು, ಮತ್ತು ಪ್ರಕೃತಿಗಳಿಗೆಲ್ಲಾ ಅವನೇ ಜವಾಬಾರನೆಂದು ಡಾಸನ್ ರಾಜನೀತಿಜ್ಞನು ಹೇಳಿದ್ದಾನೆ.

ಕಾಬಿನೆಟ್ ಸಭೆಯು ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಸರ್ವಾಧಿಕಾರವನ್ನು ಗಳಿಸಿದೆ. ಸಚಿವರೇ ಶಾಸನ ಕಾರ್ಯಕ್ರಮಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸುವುದರಿಂದ ಸಚಿವ ಮಂಡಲವು ಮಸೂದೆಗಳನ್ನು ರಚಿಸಿ ಶಾಸನಸಭೆಯ ಅಭಿಮತವನ್ನು ಕೋರುತ್ತದೆ. ಹೌಸ್ ಆಫ್ ಕಾಮನ್ಸ್ ಸಭೆಯು ಶಾಸನಗಳನ್ನು ಸೂಚಿಸುವ ಮತ್ತು ಮಸೂದೆಗಳನ್ನು ವಿಮರ್ಶಿಸುವ ಅಧಿಕಾರವನ್ನು ಪ್ರಚಲಿತ ರಾಜಕೀಯ ಸ್ಥಿತಿಯಲ್ಲಿ ಕಳೆದು ಕೊಳ್ಳುವುದರಲ್ಲಿದೆ. ಪಾರ್ಲಿಮೆಂಟನ್ನು ರದ್ದುಮಾಡುವ ಅಧಿಕಾರದಿಂದ ವಿರುದ್ಧಪಕ್ಷಗಳನ್ನು ಬಲಹೀನವನ್ನಾಗಿ ಮಾಡಿದೆ. ಕಾಬಿನೆಟ್ಟಿನ ವಿಶೇಷಾಧಿಕಾರವು, ರಾಜಕಾರಣಪಟುಗಳೂ ಉಚಿತಜ್ಞರೂ ಕ್ರಿಯಾಶಕ್ತರೂ ಆದ ಸಚಿವರಿಂದ ಕೂಡಿದ ಆಡಳಿತಾಂಗದ ಬಲದಾಧಾರದ ಮೇಲೆ ನಿಂತಿದೆ.

ಪಾರ್ಲಿಮೆಂಟ್ ಸಭೆಯು ವಿಶೇಷವಾಗಿ ಅಧಿಕಾರವನ್ನು ಕಾಬಿನೆಟ್

ಸಭೆಗೆ ಒಪ್ಪಿಸುವ ಪ್ರವೃತ್ತಿಯು ಆಧುನಿಕ ರಾಜಕೀಯದಲ್ಲಿ ತಲೆದೋರುತ್ತಿದೆ. ಪಾರ್ಲಿಮೆಂಟ್ ಸಭೆಯು ಅಧಿಕಾರಕ್ಕಲ್ಲ, ಸಲಹೆ ಕೊಡುವುದಕ್ಕೆ ಮಾತ್ರ ರಚಿತವಾಗಿದೆ. ಶಾಸನಸಭೆಯು ರಾಷ್ಟ್ರದ ಆರ್ಥಿಕ ಸ್ಥಿತಿಗತಿಗಳನ್ನು ಈಗ ವಿಮರ್ಶೆಮಾಡುವುದಿಲ್ಲ. ಆಯವ್ಯಯಗಳ ಪರಿಶೀಲನೆಯಿಲ್ಲ. ಕಾರ್ಯಾಂಗ ಮತ್ತು ಆಡಳಿತಾಂಗದ ಕಾರ್ಯಕಲಾಪಗಳ ವಿಮರ್ಶೆ ಮತ್ತು ಅಧಿಕಾರಗಳ ತಪ್ಪುಗಳಿಗಾಗಿ ಆಕ್ಷೇಪಣೆಯಿಲ್ಲ. ಪರಿಸ್ಥಿತಿಯು ವಿಷಮಿಸಿರುವುದರಿಂದ ಕ್ರಮಕ್ರಮವಾಗಿ ಪಾರ್ಲಿಮೆಂಟ್ ಸಭೆಯು ಕಾಬಿನೆಟ್ ಸಮಿತಿಯ ಅಡಿಯಾಳಾಗುವ ಸಂಭವವಿದೆ. ಪಾರ್ಲಿಮೆಂಟಿನ ಪರಮಾಧಿಕಾರವೆನ್ನುವುದು ಬಾಯಿಮಾತಾಗಿದೆ. ಸಚಿವರು, ಶಾಸನಸಭೆಯ ಪ್ರತಿನಿಧಿಗಳೆಂದೆನ್ನುವುದರ ಬದಲಾಗಿ ಪ್ರಜಾವರ್ಗಕ್ಕೆ, ಪರಣಕರ್ತ ಸಮಾಜದ ಪ್ರತಿನಿಧಿಗಳು ಅಥವಾ ನಿಯೋಗಿಗಳು ಎಂದು ಮನವರಿಕೆಯಾಗಿದೆ. ಪಾರ್ಲಿಮೆಂಟ್ ಸಭೆಯು ಅಧಿಕಾರವನ್ನು ಕಳೆದುಕೊಂಡಿದೆ; ಕಾಬಿನೆಟ್ ಸಮಿತಿಯು ಪಾರ್ಲಿಮೆಂಟನ್ನು ನಿಯಂತ್ರಣದಲ್ಲಿಟ್ಟಿದೆ; ಪ್ರಧಾನ ಮಂತ್ರಿಯು ಕಾಬಿನೆಟ್ಟನ್ನೂ ಸಮಿತಿಯನ್ನೂ ಉದ್ದಂಡವಾಗಿ ಆಳುತ್ತಾನೆ.[1]

ಕಾಬಿನೆಟ್ ಸಮಿತಿಯು ನ್ಯಾಯಾಂಗದ ಜನ್ಮಸಿದ್ಧ ಅಧಿಕಾರಗಳನ್ನು ಆಕ್ರಮಿಸುತ್ತಿದೆ.[2] ಅಧಿಕಾರಿಗಳ ಸ್ವಚ್ಛಂದಾಧಿಕಾರಕ್ಕೆ ಯಾವ ಅಂಕೆಯೂ ಇಲ್ಲ. ಯುದ್ಧದ ವಿಶೇಷ ಪರಿಸ್ಥಿತಿಯಲ್ಲಿ ಶಾಸನ ಮತ್ತು ನ್ಯಾಯಾಂಗಗಳು ತಮ್ಮ ಪ್ರತ್ಯೇಕ ಅಧಿಕಾರ ಮತ್ತು ಹಕ್ಕುಗಳನ್ನು ಮರೆತು ಕಾರ್ಯಾಂಗ ಸಮಿತಿಯ ಮುಂದಾಳ್ತನಕ್ಕೆ ಅಧೀನವಾಗುವ ಸಂಭವಗಳು ಹೆಚ್ಚಿ ಇತ್ತೀಚೆಗೆ ಈ ಅಂಗಗಳ ಸಾಕ್ಷೀಕ್ಷಕ ಸ್ಥಿತಿಗಳು ಉತ್ಕಟವಾಗಿವೆ. ಎಮರ್ಜೆನ್ಸಿ ಮತ್ತು ಡಿಫೆನ್ಸ್ ಆಕ್ಟುಗಳು ವ್ಯಕ್ತಿ ಮತ್ತು ಸಾರ್ವಜನಿಕ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಅಧಿಕಾರವನ್ನು ಕಾಬಿನೆಟ್ಟಿಗೆ ಕೊಟ್ಟಿವೆ. ಪ್ರಜಾಪ್ರಭುತ್ವವೆಂದರೆ ಮಹಾಪುರಷರ ಮತ್ತು ಶ್ರೇಷ್ಠಜಾತರ ನಿರಂಕುಶದ

---

1. Brogan. Fortnightly, April 1939. 2 Hewait. The New Despotism P. 63.

ಆಳ್ವಿಕೆಯೆಂಬ ನಂಬಿಕೆ ಬಲವಾಗುತ್ತಿದೆ. ಪ್ರಧಾನ ಮಂತ್ರಿಯು ಇಂತಹ ಸನ್ನಿವೇಶಗಳಲ್ಲಿ ಶಾಸನಸಭೆಗಳ ಸಮವಾದ ಅಂತಸ್ತುಗಳಿಸಿ ಶಾಸನ ಸಭೆಯ ಪ್ರಭಾವದಿಂದ ಪ್ರತ್ಯೇಕನಾಗಬಹುದು; ಮತ್ತು ಐದು ವರ್ಷಗಳ ವಿಧಿಯುತವಾದ ಆಳ್ವಿಕೆಯನ್ನು ವರಣದಾತರಿಂದ ಚುನಾಯಿತನಾದ ಕಿರೀಟಧರನಂತೆ ನಿರ್ವಹಿಸಬಹುದು. "ಕ್ರಾಂತಿ ಮತ್ತು ಇತರ ಉಬ್ಬರ ಇಳಿತಗಳಿಲ್ಲದೆ, ಇಂಗ್ಲೆಂಡಿನಲ್ಲಿ ಜರ್ಮನಿಯಲ್ಲಿದ್ದಂತೆ ಫ್ಯೂರರ್ ನೀತಿಯನ್ನು ಸಾಧುಮಾಡಿ ಭೂಗುಣಕ್ಕೆ ಬಗ್ಗಿಸಬಹುದು" ಎಂದು ಬ್ರೋಗಾನ್ ಹೇಳಿದ್ದಾನೆ.

## ಫ್ರಾನ್ಸ್ ರಾಷ್ಟ್ರದ ಕಾಬಿನೆಟ್ ಸರ್ಕಾರ

## The Cabinet Government in France

ಬೆಲ್ಜಿಯಂ, ಇಟಲಿ, ಮತ್ತು ಫ್ರಾನ್ಸ್ ರಾಷ್ಟ್ರಗಳಲ್ಲಿಯೂ ಕಾಬಿನೆಟ್ ಸರ್ಕಾರವು ಸ್ಥಾಪಿತವಾಗಿದೆ. ಬೆಲ್ಜಿಯಂನಲ್ಲಿ, ಕಿರೀಟ ಧರನಿಗೆ ವಿಶೇಷ ಅಧಿಕಾರವಿತ್ತು. ತಾತ್ಕಾಲಿಕವಾಗಿ ಹಿಟ್ಲರ್‌ನ ಆಕ್ರಮಣದಿಂದ ಅಲ್ಲಿಯ ಸರ್ಕಾರವೂ ರದ್ದಾಗಿದ್ದು, ಪುನಃ ಸ್ವಾತಂತ್ರ್ಯವನ್ನುಗಳಿಸಿದಮೇಲೆ, ಕಾಬಿನೆಟ್ ಪದ್ಧತಿಯನ್ನೇ ಆಚರಣೆಗೆ ತಂದಿದೆ. ಬೆಲ್ಜಿಯಂನಲ್ಲಿ ಚೇಂಬರ್ ಆಫ್ ಡಿಪ್ಯುಟೀಸ್ ಸಭೆಯೇ ಸಚಿವರನ್ನು ಚುನಾಯಿಸುತ್ತದೆ. ಖಾತೆಯಿಲ್ಲದ ಸಚಿವರೂ ಮಂತ್ರಿಮಂಡಲದಲ್ಲಿ ಸದಸ್ಯರಾಗಿರಬಹುದು ಮತ್ತು ಎರಡು ಸಭೆಗಳನ್ನೂ ಸದಸ್ಯರಾಗಿಯೂ ಅಥವ ಇಲ್ಲದೆಯೂ ಉದ್ದೇಶಿಸಿ ಮಾತನಾಡಬಹುದು.

ಫ್ರಾನ್ಸ್ ರಾಷ್ಟ್ರದಲ್ಲಿ 1814ರಲ್ಲಿ ಕಾಬಿನೆಟ್ ಪದ್ಧತಿಯು ಆಚರಣೆಗೆ ಬಂತು. ಫ್ರೆಂಚ್ ಪದ್ಧತಿಗೂ ಮತ್ತು ಬ್ರಿಟಿಷ್ ಪದ್ಧತಿಗೂ ಬಹಳ ವ್ಯತ್ಯಾಸಗಳಿವೆ. ದ್ವಿಪಕ್ಷ ಸರ್ಕಾರ ಇಂಗ್ಲೆಂಡಿನಲ್ಲಿ ಏರ್ಪಟ್ಟಿದೆ. ಫ್ರಾನ್ಸಿನಲ್ಲಿರುವುದು ಬಹುಸಂಖ್ಯಾತ ಪಕ್ಷ ಸರ್ಕಾರ; ಯಾವುದೊಂದು ಪಕ್ಷವೂ ನ್ಯಾಷನಲ್ ಅಸೆಂಬ್ಲಿ (National Assembly) ಸಭೆಯ ಬಹುಮತವನ್ನು ಪಡೆಯಲಾರದು. ಆದುದರಿಂದ ಅನೇಕ ಪಕ್ಷಗಳ ಸಂಯೋಜನೆಯಾಗಿ ಸರ್ಕಾರವು ರಚಿತವಾಗಬೇಕು. ಅಂತಹ

ಸರ್ಕಾರಗಳ ಅವಧಿ ಕಮ್ಮಿ; ಅಸ್ಥಿಮಿತವಾದುದು. ಪಕ್ಷಗಳನ್ನು ಸಮಾಧಾನಮಾಡಿ ಪ್ರಧಾನ ಮಂತ್ರಿಯನ್ನು ನೇಮಿಸುವ ಕಡುತರವಾದ ಜವಾಬ್ದಾರಿ ಅಧ್ಯಕ್ಷನಿಗೆ ಸೇರಿದ್ದು. ನಿರ್ವಂಚನೆಯಿಂದ ಸಹಕರಿಸುವ ಸಹೋದ್ಯೋಗಿಗಳು ದೊರುಕವುದು ಸುಲಭಸಾಧ್ಯವಲ್ಲ. ಇಂಗ್ಲೆಂಡಿನಲ್ಲಿ ಹೌಸ್ ಆಫ್ ಕಾಮನ್ಸ್ ಸಭೆಯು ಸಚಿವರನ್ನು ನೇಮಿಸಿ ಅವರ ಮುಂದಾಳ್ತನವನ್ನು ದೃಢಭಕ್ತಿಯಿಂದ ಅನುಸರಿಸುವ ಮನೋಗತವನ್ನು ಹೊಂದಿದೆ. ಫ್ರಾನ್ಸ್‌ನಲ್ಲಿ ಶಾಸನರಚನೆ, ಆಡಳಿತ ವಿಚಾರ ಮತ್ತು ವಿದೇಶಾಂಗ ನೀತಿ ಮುಂತಾದವುಗಳಲ್ಲಿಯೂ ಶಾಸನಸಭೆಗಳಿಗೆ ಸಚಿವ ಮಂಡಲವು ಸಂಪೂರ್ಣವಾಗಿ ಅಧೀನವಾಗಿದೆ; ಅಲ್ಲದೇ ಪ್ರಶ್ನೋತ್ತರಗಳ (Interpellation) ಪದ್ಧತಿಯ ಆಚರಣೆಯಿಂದ ಸಚಿವರ ಅಧಿಕಾರ ಸ್ವಾತಂತ್ರ್ಯವು ಬಹಳ ಸಂಕುಚಿತವಾಗಿದೆ.

ಫ್ರೆಂಚ್ ಶಾಸನ ಸಭೆಗಳು ನಿರ್ದಿಷ್ಟವಾದ ರಾಜನೀತಿಯ ನಿರ್ಧಾರದಲ್ಲಿಯೂ ಕೂಡ ಸಚಿವ ಮಂಡಲದೊಡನೆ ಸಹಕರಿಸಲು ಬಯಸುವುದಿಲ್ಲ; ಸ್ವಚ್ಛಂದಾಧಿಕಾರವನ್ನು ಆಚರಣೆಗೆ ತರಲು ಪ್ರಯತ್ನಿಸುತ್ತವೆ. ಆಡಳಿತಾಂಗಗಳನ್ನು ಮತ್ತು ಅವು ಅನುಸರಿಸುವ ನಿಯಮ, ರೀತಿಗಳನ್ನು ನಿಯಂತ್ರಣದಲ್ಲಿಡಲು ಹಾತೊರಿಯುತ್ತವೆ. ಸರ್ವಶಕ್ತತ್ವವನ್ನು ಗಳಿಸಲು ಶಾಸನಸಭೆಗಳು ಯತ್ನಿಸಿವೆ. ಶಾಸನ, ಕಾರ್ಯಾಂಗಗಳ ಸಮುಚಿತ್ತತ್ವದ ಆಧಾರದ ಮೇಲೆ ರಚಿಸಲ್ಪಟ್ಟ ಸರ್ಕಾರವು ಯಶಸ್ವಿಯಾಗುವುದು. ಆದರೆ ಫ್ರೆಂಚ್ ಸರ್ಕಾರದ ಬಂಡಿಯ ಒಂದು ಚಕ್ರ ತಿರುಗುತ್ತಿದೆ, ಇನ್ನೊಂದು ಗತಿರಹಿತವಾಗಿದೆ.

ಸಚಿವರು ರಾಜ್ಯಸಭೆ (Council of the Republic) ಮತ್ತು ಲೋಕಸಭೆ (National Assembly) ಗಳಿಗೆರಡಕ್ಕೂ ಅಧೀನರು; ರಾಜ್ಯ ಸಭೆಯು ಮತ್ತು ಕೆಳಗಿನ ಸಭೆಯು ಸಮತೂಕ ಅಧಿಕಾರವನ್ನು ಹೊಂದಿವೆ. ರಾಜ್ಯ ಸಭೆಯು ಕೆಳಗಿನ ಸಭೆಗಿಂತ ಪ್ರಭಾವವನ್ನು ಹೆಚ್ಚಾಗಿ ಗಳಿಸಿರುವುದರಿಂದ ಸಚಿವ ಮಂಡಲವನ್ನು ಐಚ್ಛಿಕವಾಗಿ ರದ್ದುಮಾಡಬಹುದಾದ

ಹಕ್ಕನ್ನು ಈಗ ಹೊಂದಿಲ್ಲ. ಯಶಸ್ವಿಯಾದ ಕಾಬಿನೆಟ್ ಸರ್ಕಾರ ಪದ್ಧತಿಯಲ್ಲಿ ಮಂತ್ರಿಮಂಡಲ ವಿಶೇಷ ಪರಿಸ್ಥಿತಿಗಳಲ್ಲಿ ಪ್ರಜಾಪ್ರತಿನಿಧಿ ಸಭೆಗಳನ್ನು ರದ್ದುಮಾಡಿ ವರಣಕರ್ತಸಮಾಜಕ್ಕೆ ಅರಿಕೆ ಮಾಡಿಕೊಳ್ಳುವ ವಿಧಾನ ಆಚರಣೆಯಲ್ಲಿ ಇತ್ತೀಚೆಗೆ ಕಂಡುಬರುತ್ತಿದೆ.

ಆಸ್ಟ್ರಿಯ, ಪೋಲೆಂಡ್ ಮತ್ತು ಫಿನ್‌ಲೆಂಡ್ ರಾಷ್ಟ್ರಗಳು ಕಾಬಿನೆಟ್ ಸರ್ಕಾರ ಪದ್ಧತಿಯನ್ನು ಲಿಟರ್ಲಿನ ಆಕ್ರಮಣವಾಗುವ ಪೂರ್ವಭಾವಿಯಾಗಿ ಅನುಸರಿಸಿದ್ದುವು. ಆಸ್ಟ್ರಿಯಾದಲ್ಲಿ ಎರಡು ಸಭೆಗಳು ಸೇರಿ ನಾಲ್ಕು ವರ್ಷ ಅವಧಿಯುಳ್ಳ ಪ್ರಧಾನ ಮಂತ್ರಿಯನ್ನು ಚುನಾಯಿಸುವರು. ಇವನು ಕಾರ್ಯಾಂಗ ಸಮಿತಿಯ ಎಲ್ಲಾ ಕಾರ್ಯಾಂಗಗಳನ್ನು ನೆರವೇರಿಸುತ್ತಾನೆ. ಜೆಕೋಸ್ಲೋವಾಕಿಯ ಮುಖ್ಯಪ್ರಧಾನನ ಅವಧಿ ಏಳು ವರ್ಷವಾಗಿತ್ತು. ಫಿನ್‌ಲೆಂಡ್‌ನಲ್ಲಿ ಸಂಯುಕ್ತ ಪದ್ಧತಿಯನ್ನು ಅನುಸರಿಸಿದೆ; ಅಪ್ರತ್ಯಕ್ಷ ಚುನಾವಣೆಯಿಂದ ಅಧ್ಯಕ್ಷನು ಚುನಾಯಿತನಾಗುವನು. ಅಭಿಮತವನ್ನು ½ ಕ್ಕಿಂತ ಹೆಚ್ಚು ಪಡೆಯದಿದ್ದರೆ ದ್ವಿತೀಯ ಬೇಲೆಟ್ ಆವಶ್ಯಕ. ಯಾರೂ ಬಹುಸಂಖ್ಯಾಕ ಅಭಿಮತವನ್ನು ಪಡೆಯದಿದ್ದರೆ ಹೆಚ್ಚು ಅಭಿಮತವನ್ನು ಪಡೆದಿರುವವನನ್ನು ಮಾತ್ರ ಚುನಾಯಿಸುವರು. ಫ್ರೆಂಚ್ ರಾಷ್ಟ್ರಾಧ್ಯಕ್ಷನ ಅಧಿಕಾರದಂತೆ, ಫಿನ್‌ಲೆಂಡ್ ರಾಷ್ಟ್ರಾಧ್ಯಕ್ಷನು ಪ್ರತಿಯೊಂದು ಕಾರ್ಯ ನಿರ್ವಹಣೆಗೂ ಒಬ್ಬ ಸಚಿವನ ಅನುಮತಿಯನ್ನು ಪಡೆಯಬೇಕು.

ಔಪನಿವೇಶ ಸ್ವರಾಜ್ಯಗಳಲ್ಲಿ ( Dominions ) ಜವಾಬ್ದಾರಿ ಸರ್ಕಾರವಿದೆ ಇಂಗ್ಲೆಂಡಿನಲ್ಲಿರುವಂತೆ. ಕಾಬಿನೆಟ್ ಪದ್ಧತಿಯನ್ನು ಅನುಸರಿಸಿವೆ. ಗೌವರ್ನರ್ ಜನರಲ್ ಚಕ್ರವರ್ತಿಯ ಪ್ರತಿನಿಧಿ. ಪ್ರಾರಂಭದಲ್ಲಿ, ಚಕ್ರವರ್ತಿಗೆ ಕಾಲೊನಿಯ ಕಾರ್ಯಕಲಾಪಗಳಲ್ಲಿದ್ದ ಪರಮಾಧಿಕಾರವು ಸ್ವಲ್ಪಸ್ವಲ್ಪವಾಗಿ ಡೊಮಿನಿಯನ್ ಪಾರ್ಲಿಮೆಂಟ್ ಸಭೆಗೆ, ಜವಾಬ್ದಾರಿಯುತವಾದ ಕಾಬಿನೆಟ್ ಮಂಡಲಕ್ಕೆ ಒಪ್ಪಿಸಲಾಗಿದೆ. ಉಪನಿವೇಶಗಳಲ್ಲಿರುವ ಗೌವರ್ನರ್ ಜನರಲ್‌ನ ಅಧಿಕಾರವು ಕ್ರಮೇಣ ಅಸೆಂಬ್ಲಿಯ ಬಹುಪಕ್ಷದವರಿಂದ ಆರಿಸಲ್ಪಟ್ಟ ಸಚಿವರುಗಳಿಗೆ ವರ್ಗಾಯಿಸಲ್ಪಟ್ಟಿದೆ.

## ಕೆನಡಾ ಡೊಮಿನಿಯನ್ ಸರ್ಕಾರ

ಬ್ರಿಟಿಷ್ ಸರ್ಕಾರವು 1840 ರಲ್ಲಿ ಕೆನೆಡಾ ರಾಷ್ಟ್ರಕ್ಕೆ ಸ್ವಯಂ ಶಾಸನಾಧಿಕಾರವನ್ನು ಕೊಟ್ಟಿತು. 1867 ರಲ್ಲಿ ಸ್ವರಾಜ್ಯವಾಯಿತು. ಕೆನಡಾ ಸಂಯುಕ್ತ ರಾಷ್ಟ್ರವಾಯಿತು. ಕಾಬಿನೆಟ್ ಪದ್ಧತಿಯನ್ನು ಒಪ್ಪಿತು. ಈ ಪದ್ಧತಿಯು ಪ್ರಕಾರ ಗೌವರ್ನರ್ ಜನರಲ್ ರಾಷ್ಟ್ರಾಧ್ಯಕ್ಷ, ಕಾರ್ಯಾಂಗ ಮತ್ತು ಆಡಳಿತಾಂಗಗಳ ಅಧಿಪತಿ. ಡೊಮಿನಿಯನ್ ಕಾಬಿನೆಟ್‌ನಲ್ಲಿ ಹೌಸ್ ಆಫ್ ಕಾಮನ್ಸ್‌ನ ಪ್ರಧಾನಪಕ್ಷನಾಯಕನನ್ನು ಸದಸ್ಯರು ಪ್ರಧಾನ ಮಂತ್ರಿಯನ್ನಾಗಿ ನೇಮಿಸುವಂತೆ, ಗೌವರ್ನರ್ ಜನರಲ್ ನೇಮಿಸುತ್ತಾನೆ. ಮುಖ್ಯಮಂತ್ರಿಯು ತನ್ನ ಸಹೋದ್ಯೋಗಿಗಳನ್ನು ಹೆಚ್ಚುಕಡಿಮೆ ಪ್ರಾಂತಗಳ ಬಲದಂತೆ ನೇಮಿಸಿಕೊಳ್ಳುತ್ತಾನೆ. ಈ ವಿಧವಾದ ಸಂಯುಕ್ತರಾಷ್ಟ್ರಲಕ್ಷಣವನ್ನು ವಾಡಿಕೆಯಾಗಿ ಮಾಡಿಕೊಂಡಿರುವುದರಿಂದ ಕಾಬಿನೆಟ್ ಯಾವಾಗಲೂ ಬಹುಪಕ್ಷ ಬೆಂಬಲವನ್ನು ಪಡೆಯುತ್ತದೆ. ಇದರಿಂದ ಕಾಬಿನೆಟ್ ಬಹು ಕಾಲ ಅಧಿಕಾರದಲ್ಲಿರುವುದು, ಮತ್ತು ಅದರ ರಾಜಕೀಯ ನೀತಿಗಳ ಪ್ರಭಾವ ಅವಧಿಯು ಹೆಚ್ಚಾಗಿರುವುದು. ಶಾಸನಸಭೆಯ ವಿಶ್ವಾಸವನ್ನು ಕಳೆದುಕೊಂಡರೆ ಕಾಬಿನೆಟ್ ರಾಜಿನಾಮೆ ಕೊಡಬೇಕು. ಪ್ರಧಾನ ಮಂತ್ರಿಯು ತನ್ನ ಸಮಿತಿಗೂ ಮತ್ತು ಸಭೆಗೂ ಭಿನ್ನಾಭಿಪ್ರಾಯವಾದರೆ ಸಭೆಯನ್ನು ರದ್ದುಗೊಳಿಸುವಂತೆ ಗೌವರ್ನರನ್ನು ಬಿನ್ನವಿಸಬಹುದು ಮತ್ತು ವರಣದಾತರನ್ನು ಪುನರ್ಚುನಾವಣೆಗಾಗಿ ಅರಿಕೆ ಮಾಡಿಕೊಳ್ಳಬಹುದು. ಪ್ರಜಾಭಿಮತವನ್ನು ಕೋರುವ ಸಂಪ್ರದಾಯ ಜಾರಿಗೆ ಬಂದಾಗಲಿಂದ ಗೌವರ್ನರ್ ಜನರಲ್‌ನ ಅಧಿಕಾರವು ಸಂಕುಚಿತವಾಗಿ ಸಾಮ್ರಾಜ್ಯದ ಅಧಿಕಾರಿಯೋಪಾದಿಯಲ್ಲಿ ಎಣಿಸಲ್ಪಟ್ಟಿದ್ದಾನೆ. ರಾಷ್ಟ್ರಾಧಿಕಾರವೆಲ್ಲವೂ ಕಾಬಿನೆಟ್ ಸಚಿವರ ಕೈಯಲ್ಲಿದೆ; ರಾಷ್ಟ್ರಾಧ್ಯಕ್ಷನ ನೇಮಕಕ್ಕೂ ಕೂಡ ಕೆನಡ ಕಾಬಿನೆಟ್‌ನ ಅನುಮತಿಯು ಅತ್ಯಾವಶ್ಯಕ.

---

Dawson Constitutional Issues in Canada P. 65.

ಕಾಬಿನೆಟ್ ಮಂಡಲಿಯಲ್ಲಿ ಹತ್ತು ಸಚಿವರಿರುವರು. ಖಾತೆಗಳಿಲ್ಲದ ಸಚಿವರೂ ಇರುವರು. ಬ್ರಿಟಿಷ್ ಕಾಬಿನೆಟ್ಟನಂತೆ ಸಚಿವರ ಸಂಖ್ಯೆ ರಾಷ್ಟ್ರ ಕಾರ್ಯಗಳಿಗನುಗುಣವಾಗಿ ಹೆಚ್ಚಿಸಬಹುದು; ಮತ್ತು ಕಾಬಿನೆಟ್ ಏಕ ಮುಖವಾಗಿ, ಏಕಚಿತ್ತದಿಂದ ವರ್ತಿಸಬೇಕು. ಸಚಿವರು ಆಡಳಿತಾಂಗಗಳ ಮುಖ್ಯಾಧ್ಯಕ್ಷರು. ಆದರೆ ಆಡಳಿತಕಾರ್ಯಗಳೆಲ್ಲವನ್ನು ಸಿವಿಲ್ ಸರ್ವಿಸ್ ಕಮಿಷನರ್ಸ್‌ಗಳು ( Civil Service Commissioners ) ನಿರ್ವಹಿಸು ವರು; ಕಮಿಷನರ್ಸ್ ಅಧಿಕಾರಿಗಳು ಸ್ವತಂತ್ರರು. ಸಚಿವರಿಗೆ ಸಂಪೂರ್ಣ ಅಧೀನತೆಯಿಲ್ಲ. ಅವರನ್ನು ಕೆಲಸದಿಂದ ನಿವೃತ್ತಿಮಾಡಬೇಕಾದರೆ ಶಾಸನ ಸಭೆಗಳೆರಡು ಸಮ್ಮೇಳನದಲ್ಲಿ ನಿರ್ಧರಿಸಬೇಕು.

## ಸೌತ್ ಆಫ್ರಿಕಾ ಕಾರ್ಯಾಂಗ ಸಮಿತಿ

ಸೌತ್ ಆಫ್ರಿಕಾ ಸಂಯುಕ್ತ ರಾಷ್ಟ್ರದ ಕಾರ್ಯಾಂಗವು ಬ್ರಿಟಿಷ್ ಕಾಬಿನೆಟ್ ಮಾದರಿಯಲ್ಲಿದೆ. ಗೌವರ್ನರ್ ಜನರಲ್ ಆದವನು, ಸೈನ್ಯ ನೌಕ, ವಿಮಾನ, ಪೋಲಿಸ್ ಮುಂತಾದುವುಗಳಲ್ಲಿ ವಿಶೇಷಾಧಿಕಾರವನ್ನು ಪಡೆದಿದ್ದಾನೆ. ಇವನಿಗೆ ಸಲಹೆ ಕೊಡುವುದಕ್ಕಾಗಿ ಸೆಕ್ಷನ್ 12–1910ರ ಪ್ರಕಾರ ಒಂದು ಕಾರ್ಯಾಂಗ ಸಮಿತಿಯು ರಚಿತವಾಗಿದೆ. ಸೌದ್ಧಾಂತಿಕ ವಾಗಿ ಕಾರ್ಯಾಂಗದ ಸಚಿವರು ಸಂಪೂರ್ಣವಾಗಿ, ರಾಷ್ಟ್ರಾಧ್ಯಕ್ಷನಿಗೆ ಅಧೀನರು. ಸಚಿವರನ್ನು ನೇಮಿಸುವಾಗ ಅಧಿಪತಿಯು ಶಾಸನಸಭೆಯ ಪ್ರಧಾನ ಪಕ್ಷನಾಯಕರನ್ನು ಕರೆಯಿಸಿ ಮುಖ್ಯ ಮಂತ್ರಿಯನ್ನಾಗಿ ನೇಮಿಸಿ, ತನ್ನೊಡನೆ ಸಹಕರಿಸಬಹುದಾದ ಪಕ್ಷ ಸದಸ್ಯರನ್ನು ನೇಮಿಸಿಕೊಳ್ಳುವಂತೆ ಆಜ್ಞಾಪಿಸುವನು. ಈ ವಿಧವಾಗಿ ರಚಿತವಾದ ಕಾಬಿನೆಟ್ ಕೆಳಗಿನ ಸಭೆಯ ವಿಶ್ವಾಸವನ್ನು ಕಳೆದುಕೊಂಡರೆ ರಾಜಿನಾಮೆ ಕೊಡಬೇಕು.

## ಆಸ್ಟ್ರೇಲಿಯಾ ಕಾಮನ್ವೆಲ್ತ್ ಕಾರ್ಯಾಂಗ ಸಮಿತಿ

ಆಸ್ಟ್ರೇಲಿಯಾ ಗೌವರ್ನರ್ ಜನರಲ್ ಕಾರ್ಯಾಂಗ ಮತ್ತು ಆಡಳಿ

---

Keith: The Constitutional law of the British Dominion. P. 185

ತಾಂಗಗಳಿಗೆಲ್ಲಾ ಅಧ್ಯಕ್ಷ; ಸಂಯುಕ್ತ ಕಾರ್ಯಾಂಗ ಸಮಿತಿಯು, ಸೌತ್ ಆಫ್ರಿಕಾ ಕಾರ್ಯಾಂಗ ಸಮಿತಿಯಂತೆ 'ಎಕ್ಸಿಕ್ಯೂಟಿವ್ ಕೌನ್ಸಿಲರ್ಸ್' ಸಚಿವರಿಂದ ಕೂಡಿ, ರಾಷ್ಟ್ರಾಧ್ಯಕ್ಷನಿಗೆ ಅಧೀನವಾಗಿದೆ. ಗೌವರ್ನರ್ ಜನರಲ್ ಪ್ರಧಾನ ಮಂತ್ರಿಯನ್ನು ನೇಮಿಸಿ ತನ್ನ ಸಚಿವರನ್ನು ನೇಮಿಸಿಕೊಳ್ಳುವಂತೆ ಅನುಮತಿಕೊಡುವನು. ಕಾಬಿನೆಟ್ಟಿನ ಸದಸ್ಯರು ಒಟ್ಟು ಒಂಬತ್ತು; ಜೊತೆಯಲ್ಲಿ ಸಚಿವರಿರಬಹುದು. ಹೌಸ್ ಆಫ್ ಕಾಮನ್ಸ್‌ನ ವಿಶ್ವಾಸರಹಿತರಾದರೆ ಕಾಬಿನೆಟ್ ಸಮಿತಿಯು ರಾಜೀನಾಮೆ ಕೊಡಬೇಕಾಗುವುದು. ಕೆನಡ ವಿಧಾನದಂತೆ ಪ್ರಧಾನ ಮಂತ್ರಿಯು ಸಂಸ್ಥಾನಗಳಿಗೊಬ್ಬರಂತೆ ತನ್ನ ಸಚಿವರನ್ನು ನೇಮಿಸಿಕೊಳ್ಳುವನು; ಇಂಗ್ಲೆಂಡಿನಲ್ಲಿರುವ ಕಾಬಿನೆಟ್ ಆಚರಣೆಗಳಂತೆ, ಸಾಮೂಹಿಕ ಜವಾಬ್ದಾರಿ ಸಿದ್ಧಾಂತ ಮತ್ತು ಸದಸ್ಯರೆಲ್ಲರ ಏಕರೀತಿಯಾದ ಪ್ರವೃತ್ತಿ ಮತ್ತು ಶಾಸನ ಸಭೆಗೆ ಅಧೀನತೆ ಆಸ್ಟ್ರೇಲಿಯಾದಲ್ಲಿಯೂ ಆಚರಣೆಯಲ್ಲಿದೆ. ಕಾಬಿನೆಟ್ಟಿಗೆ ಸರ್ಕಾರವು ಪ್ರಗತಿಪರವಾಗಿ ವಿಶೇಷ ಅಧಿಕಾರವನ್ನು ಹೊಸಹೊಸ ನಿಯಮಗಳ ಸ್ಥಾಪನೆಯ ಮೂಲಕ ಗಳಿಸುತ್ತದೆ. ರಾಷ್ಟ್ರಾಧ್ಯಕ್ಷನನ್ನು ನೇಮಿಸಬೇಕಾದರೆ ಬ್ರಿಟಿಷ್ ಸರ್ಕಾರವು ಆಸ್ಟ್ರೇಲಿಯಾ ಕಾಬಿನೆಟ್ಟಿನ ಅನುಮತಿಯನ್ನು ಪಡೆಯಬೇಕು.

ಔಪನವೇಶಿಕ ಸ್ವರಾಜ್ಯಗಳಲ್ಲಿ ಬ್ರಿಟಿಷ್ ಕಾಬಿನೆಟ್ ಸರ್ಕಾರ ಪದ್ಧತಿಯೇ ಆಚರಣೆಯಲ್ಲಿದೆಯೆಂದು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಮಾತೃಭೂಮಿಯಂತೆ ಮಧುರವಾಗಿಯೂ ಸುಸೂತ್ರವಾಗಿಯೂ ಕೌಶಲ್ಯದಿಂದಲೂ ನಡೆಯಲು ಸಾಧ್ಯವಾಗಿಲ್ಲ. ಆಸ್ಟ್ರೇಲಿಯಾ ಕಾಬಿನೆಟ್‌ಗಳು ಅಸ್ಥಿಮಿತವಾದುವು; ಮೂರು ರಾಷ್ಟ್ರಗಳಲ್ಲಿಯೂ ಸಚಿವರಾಗಿ ನೇಮಿಸಿದ ಕ್ಷಣವೇ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು; ಎರಡು ಶಾಸನ ಸಭೆಗಳು ವರಣದಾತರಿಂದ ಚುನಾಯಿಸಲ್ಪಟ್ಟರೂ, ಕೆಳಗಿನ ಸಭೆಯೇ ಸಚಿವರನ್ನು ನಿವೃತ್ತಿಮಾಡುವ ಅಧಿಕಾರವನ್ನು ಪಡೆದಿದೆ.

---

Bryce: Modern Democracies Vol II Keieth, Responsible Government in the Dominions Vol I P 301

## ಭಾರತ ರಾಷ್ಟ್ರದಲ್ಲಿ ಕಾಬಿನೆಟ್ ಸರ್ಕಾರ

1947 ರಲ್ಲಿ ಭಾರತ ರಾಷ್ಟ್ರದಲ್ಲಿ ರಚಿಸಿದ ಪದ್ಧತಿಯು ಬ್ರಿಟಿಷ್ ಕಾಬಿನೆಟ್ ಪದ್ಧತಿಯನ್ನೂ ಸ್ವಿಸ್ ರಾಷ್ಟ್ರದ ಪದ್ಧತಿಯನ್ನೂ ಹೋಲುತ್ತದೆ. ಭಾರತದ ರಾಷ್ಟ್ರವಿಧಾನಕ್ಕನುಸಾರವಾಗಿ ಬ್ರಿಟಿಷ್ ಕಾಬಿನೆಟ್‌ನಂತೆ ಒಬ್ಬ ಸಚಿವನಿಗೆ ಭಾರತದ ಸಮಸ್ತ ಕಾರ್ಯಭಾಗವನ್ನು ವಹಿಸಿದೆ. ಇವನು ಭಾರತದ ರಾಷ್ಟ್ರಕಾರ್ಯದರ್ಶಿ ( Prime Minister ) ಯಾಗಿ ವಿಶೇಷ ಅಧಿಕಾರವನ್ನು ಪಡೆದಿದ್ದಾನೆ. ಭಾರತಕ್ಕೆ ಬೇಕಾಗುವ ನಾಮಾನುಗಳು ಆಡಿಟರ್ ಜನರಲ್, ಭಾರತದ ಹುದ್ದೇದಾರರು, ವ್ಯಾಪಾರ, ಅಧಿಕಾರಗಳ ನೇಮಕ ಮತ್ತು ನಿವೃತ್ತಿ, ಅವರುಗಳ ವಿಶ್ರಾಂತಿವೇತನ, ಪ್ರಾಂತೀಯ ವಿಚಾರ, ಅಂತರ್ರಾಷ್ಟ್ರೀಯ ಮತ್ತು ವಿದೇಶಾಂಗ ನೀತಿ, ಭಾರತ ರಾಷ್ಟ್ರದ ಸಚಿವರು, ನ್ಯಾಯಾಧಿಪತಿಗಳು, ಇವರುಗಳ ಸಂಬಂಧವಾದ ಸರ್ವ ವಿಷಯ ಗಳು ಮುಖ್ಯ ಮಂತ್ರಿಯ ಅಧೀನ. ಆಯುವ್ಯಯ, ಶಾಸನ ನಿರ್ವಾಹಣದ ವಿಷಯ ಮುಂತಾದುವುಗಳು ಅವನ ಅನುಮತಿಯಿಲ್ಲದೆ ನಡೆಯಲಾಗದು. ಸರ್ವಾಧಿಕಾರವನ್ನು ಪಡೆದ ಮುಖ್ಯಮಂತ್ರಿಯು ಸಮಗ್ರ ಭಾರತದ ಆಡಳಿತ ಜವಾಬ್ದಾರಿ ಹೊಂದಿರುವುದರಿಂದ ಪರಮಾಧಿಕಾರವನ್ನು ಪಡೆದಿರುವ ಪಾರ್ಲಿಮೆಂಟಿಗೆ ತನ್ನ ಕರ್ತವ್ಯಪಾಲನೆಗಾಗಿ ಅರಿಕೆಮಾಡಿಕೊಳ್ಳಬೇಕು. ಇವನ ಸಹಾಯಾರ್ಥವಾಗಿ ಹದಿನೈದು ಅಥವ ಹದಿನೆಂಟು ಸಚಿವರಿಂದ ಕೂಡಿದ ಸಚಿವಮಂಡಲ ಏರ್ಪಟ್ಟಿದೆ. ಆದರೆ ಇದರ ಸಲಹೆಗಳು ಪ್ರಧಾನ ಮಂತ್ರಿಯನ್ನು ವಿಶೇಷವಾಗಿ ಬಂಧಿಸುವುದಿಲ್ಲ. ಭಾರತದ ಸಮಸ್ಯೆಗಳು, ಅನ್ಯರಾಷ್ಟ್ರಗಳೊಡನೆ ಭಾರತದ ಸಂಬಂಧ, ಸಂಧಿವಿಗ್ರಹ ಮುಂತಾದುವುಗಳನ್ನು ಪ್ರಧಾನ ಮಂತ್ರಿಯೇ ನಡೆಸಬೇಕು.

ಸಮಗ್ರಭಾರತದ ಪ್ರತಿನಿಧಿಯಾಗಿ ರಾಷ್ಟ್ರಾಧ್ಯಕ್ಷರು ಭಾರತ ಪ್ರಾಂತ್ಯಗಳಿಗೂ, ಸಂಸ್ಥಾನಗಳಿಗೂ, ಮತ್ತು ಅವುಗಳ ಪರಸ್ಪರ ಸಂಬಂಧಕ್ಕೂ, ನಿಕಟ ಸಂಬಂಧವನ್ನು ಬೆಳಸುತ್ತಾರೆ. ಶಾಸನಾಂಗ ಸಭೆಗಳ ಅಧ್ಯಕ್ಷರಾಗಿ ಶಾಸನರಚನೆಯನ್ನೂ, ಆಡಳಿತಾಂಗದ ಮುಖ್ಯಾಧಿಕಾರಿಯಾಗಿ

ಎಲ್ಲಾ ಕಾರ್ಯಗಳನ್ನೂ ನಿರ್ವಹಿಸುತ್ತಾರೆ. ಅಮೆರಿಕಾ ಸಂಯುಕ್ತ ರಾಷ್ಟ್ರದಲ್ಲಿರುವಂತೆ ಇಡೀ ಭಾರತಕ್ಕೆ ಸಂಬಂಧಪಟ್ಟ ರಾಷ್ಟ್ರಕರ್ತವ್ಯಗಳನ್ನು, ರಕ್ಷಣೆ, ಸಂಚಾರಸೌಕರ್ಯ, ಸುಂಕದ ಮತ್ತು ನಾಣ್ಯದ ಶಿಸ್ತು, ದೇಶೀಯ ಸಂಸ್ಥಾನಗಳ ಮೇಲ್ವಿಚಾರಣೆ, ರಾಷ್ಟ್ರೀಯ ವ್ಯವಹಾರ, ಲೇವಾದೇವಿ, ನ್ಯಾಯ ವಿಧಿ, ಮುಂತಾದ ಸಮಸ್ತ ಕಾರ್ಯಗಳನ್ನು ಅವರು ನೆರವೇರಿಸಬೇಕು. ಅಧ್ಯಕ್ಷರಸಹಾಯಾರ್ಥವಾಗಿ ಸಚಿವ ಸಮಿತಿಯು ರಚಿತವಾಗಿದೆ; ಈ ಸಚಿವ ಮಂಡಲ ಸಮಿತಿಯು, ಅನೇಕ ಶಾಖೆಗಳ ಮೇಲ್ವಿಚಾರಣೆಯ ಭಾರವನ್ನು ವಹಿಸುತ್ತದೆ. ಈ ಮಂತ್ರಿಮಂಡಲದ ಸಲಹೆಗಳನ್ನು ಅಧ್ಯಕ್ಷರು ಅನುಮೋದಿಸಬೇಕಾದ ಪ್ರಮೇಯಗಳಿರುವುದಿಲ್ಲ. ತಾನೆ ಭಾರತ ಸಮಾಜದ ನಿಯೋಗಿಯಂತೆ ಸಮಸ್ತ ಅಧಿಕಾರವನ್ನು ನಿರ್ವಹಿಸಿ, ವಿಶೇಷಪರಿಸ್ಥಿತಿಗಳಲ್ಲಿ ಕಠಿಣತರವಾದ ನಿಬಂಧನೆಗಳನ್ನು ರಚಿಸಿ ಪ್ರಜಾವರ್ಗವನ್ನು ಮತ್ತು ಅಧಿಕಾರ ವರ್ಗಗಳನ್ನು ನಿರ್ಬಂಧಪಡಿಸುವ ಅಧಿಕಾರವನ್ನು ಪಡೆದಿದ್ದಾರೆ. ಅಧ್ಯಕ್ಷರಿಗೆ ಪ್ರತ್ಯೇಕ ಸ್ಥಾನವಿಲ್ಲ. ಅವರ ಅಂತಸ್ತು, ಕಾರ್ಯಾಂಗ ನ್ಯಾಯಾಂಗ ಮತ್ತು ಶಾಸನಾಂಗಗಳಿಗೂ ದೊಡ್ಡದು, ಬ್ರಿಟನ್ನಿನ ಕಿರೀಟಧರನ ಹಾಗೂ ಅಲ್ಲ; ಸಂಯುಕ್ತ ರಾಷ್ಟ್ರಾಧ್ಯಕ್ಷರ ಹಾಗೂ ಅಲ್ಲ. ಇವರ ಅವಧಿ ಐದು ವರ್ಷ; ಎರಡನೆಯ ಬಾರಿ ಚುನಾಯಿತರಾಗಬಹುದು, ಇವನಾಗಲಿ ಕಾರ್ಯಾಂಗವಾಗಲಿ ಭಾರತಶಾಸನಾಂಗಕ್ಕೆ ಜವಾಬ್ದಾರಿಯಾಗಬೇಕಾದುದಿಲ್ಲ. ಆದರೆ ಕಾರ್ಯಾಂಗ ಸಮಿತಿಯ ಸದಸ್ಯರು ಶಾಸನಾಂಗದ ಪ್ರಧಾನ ಮಂತ್ರಿ, ಸಚಿವರ ಮತ್ತು ಅಧ್ಯಕ್ಷರ ಪ್ರಭಾವಯುತವಾದ ಜೀವನದಿಂದಲೂ, ಮತ್ತು ಕಾಂಗ್ರೆಸ್ ಪಕ್ಷದ ಬೆಂಬಲದಿಂದಲೂ ಸಂಯುಕ್ತ ರಾಷ್ಟ್ರಭಾವನೆಯ ಪ್ರಗತಿ ಮತ್ತು ಪೋಷಣೆ ಈಗ ಸಾಧ್ಯವಾಗಿದೆ. ಭಾರತದ ಕಾಬಿನೆಟ್ ಜವಾಬ್ದಾರಿ ಪಡೆದಿದೆ. ಅಧಿಕಾರವಿದೆ ಮತ್ತು ಪ್ರಜಾಬೆಂಬಲವಿದೆ.

ಕಾಬಿನೆಟ್ ಪದ್ಧತಿಯು ಶಾಸನಾಂಗಕ್ಕೂ ಮತ್ತು ಕಾರ್ಯಾಂಗಕ್ಕೂ ನಿಕಟಸಂಬಂಧವನ್ನು ಏರ್ಪಡಿಸಿ, ಶಾಸನಗಳು ಸಿದ್ಧವಾದಾಗ ಪ್ರಕಾರದಲ್ಲಿ ಕಾರ್ಯಕಾರಿಯಾಗಲು ಸೌಕರ್ಯವನ್ನುಂಟು ಮಾಡುತ್ತದೆ. ಕಾಬಿನೆಟ್

ಶಾಸಕಾಂಗದ ಸಮಿತಿ ; ಅವರು ಅದರ ಸಭಿಕರು, ಶಾಸನಸಭೆಯ ಸದಸ್ಯರು; ಸಾರ್ವಜನಿಕ ಮತ್ತು ಆರ್ಥಿಕ ಮಸೂದೆಗಳನ್ನು ಸೂಚಿಸಬಹುದು, ಮತ್ತು ಆಡಳಿತಾಂಗಗಳ ವ್ಯಯಕ್ಕಾಗಿ ಆಗಿಂದಾಗ್ಗೆ ಹಣವನ್ನು ವಿನಿಯೋಗಿಸಿ ಕೊಳ್ಳಬಹುದು. ಶಾಸನ ಮಾಡುವ ಮತ್ತು ಹಣದಾನ ಮಾಡುವ, ಶಾಸ ನಾಂಗ, ಶಾಸನವನ್ನು ಕಡ್ಡಾಯ ಮಾಡುವ, ಹಣವನ್ನು ಸದ್ವಿನಿಯೋಗಿಸುವ ಕಾರ್ಯಾಂಗದ ಸಪ್ರವರ್ತನೆ ಕಾಬಿನೆಟ್ ಪದ್ಧತಿಯ ವೈಶಿಷ್ಟ್ಯ. ಈ ಸರ್ಕಾರ ದಲ್ಲಿ ಶಾಸನಗಳನ್ನು ಪ್ರಯೋಗಿಸುವ, ಆಡಳಿತ ನಡೆಸುವ ಮತ್ತು ಸಾರ್ವ ಜನಿಕ ಹಣವನ್ನು ವ್ಯಯಮಾಡುವ ಅಂಗಗಳು ಶಾಸನಾಂಗಕ್ಕೆ ಜವಾಬ್ದಾರಿ ಮತ್ತು ಶಾಸನಾಂಗದ ಮೂಲಕ ವರಣದಾತರಿಗೆ ಜವಾಬ್ದಾರಿಯಾಗಿರ ಬೇಕು. ಈ ವಿಚಾರಗಳಲ್ಲಿ ಕಾಬಿನೆಟ್ ಶಾಸನಸಭೆಯ ನಂಬಿಕೆಯನ್ನು ಕಳೆದುಕೊಂಡರೆ ಅದು ನಾಯವಾಗಿ, ಪೂರ್ಣ ವಿಶ್ವಾಸಹೊಂದಿದ ಮತ್ತೊಂದು ಕಾಬಿನೆಟ್ ಸಮಿತಿಯು ರಚಿತವಾಗುವುದು. ತನ್ನ ನೀತಿಯ ಪ್ರತಿಪಾದನೆಯು ಪ್ರಭಾವಯುತವಾದುದೆಂದು ಮನವರಿಕೆಯಾದರೆ ಶಾಸನ ಸಭೆಯನ್ನು ತನ್ನನ್ನು ವಿರೋಧಿಸಿದ್ದಕ್ಕಾಗಿ ರದ್ದುಮಾಡಿ, ವರಣದಾತ ಸಮಾಜಕ್ಕೆ ಅರಿಕೆಮಾಡಿಕೊಳ್ಳುವ ಅಧಿಕಾರ ಕಾಬಿನೆಟ್ ಸಮಿತಿಗಳಿಗಿರುವು ದರಿಂದ, ವರಣಕರ್ತ ಸಮಾಜದ ಪರಮಾಧಿಕಾರವನ್ನು ಇದರಿಂದ ಕಂಠೋಕ್ತ ವಾಗಿ ಅನುಮೊದಿಸದಂತಾಗುವುದು. ರಾಷ್ಟ್ರಕರ್ತವ್ಯ ಭಾರವನ್ನು ವಹಿ ಸಿದ ಆಡಳಿತಾಂಗಗಳು ಮೊದಲನೆಯ ಹಂತದಲ್ಲಿ ವರ್ಣದಾತರ ಪ್ರತಿನಿಧಿ ಗಳು ; ಅವರಲ್ಲಿ ಭಿನ್ನಾಭಿಪ್ರಾಯವುಂಟಾದರೆ ಪರಮಾಧಿಕಾರವನ್ನು ಪಡೆ ದಿರುವ ವರಣಕರ್ತ ಸಮಾಜದ ಅಭಿಮತವನ್ನು ಸಾರ್ವಜನಿಕ ಚುನಾವಣೆ ಯಲ್ಲಿ ಅರಿಯಬಹುದು. ಕಾಬಿನೆಟ್ ಪದ್ಧತಿಯ ಪ್ರಕಾರ ವರಣದಾತರ ಅಥವ ಅವರ ಪ್ರತಿನಿಧಿಗಳ ಅಭಿಮತಕ್ಕೆ ವಿರುದ್ಧವಾಗಿ ಯಾವ ಸರ್ಕಾರವೂ ದೀರ್ಘ ಕಾಲ ನಿಲ್ಲಲಾರದು ; ಅದರಿಂದಲೇ ಕಾಬಿನೆಟ್ ಸರ್ಕಾರವನ್ನು ಜವಾಬ್ದಾರಿ ಸರ್ಕಾರವೆಂದು ಕರೆಯುವರು. ವಿಶೇಷ ಪರಿಸ್ಥಿತಿಗಳಲ್ಲಿ ಅಂತರ ರಾಷ್ಟ್ರೀಯ ಸಂಬಂಧಗಳು ಕಡಿದುಹೋಗಿ ಯುದ್ಧವು ಆಸನ್ನವಾದಾಗ

ಅಂತಹ ಸ್ಥಿತಿಯನ್ನು ಪರಿಹರಿಸಬಲ್ಲ ಪುರುಷೋತ್ತಮನನ್ನು ಪ್ರಜಾವರ್ಗ ಚುನಾಯಿಸಬಹುದು. ನೆಮ್ಮದಿಯ ಕಾಲದಲ್ಲಿ ಧಾರ್ಮಿಕ ನಾಯಕನನ್ನು, ಯುದ್ಧಕಾಲದಲ್ಲಿ ಮಹಾ ವೀರನನ್ನು ಧೃತಿವಂತ ನಾಯಕರನ್ನು ನೇಮಿಸುವ ಸೌಕರ್ಯ ಕಾಬಿನೆಟ್ ಪದ್ಧತಿಯು ಕಲ್ಪಿಸಿಕೊಡುವುದೆಂದು 'ಬೆಜಾಹಟ್' ಹೇಳಿದ್ದಾನೆ.

ಕಾಬಿನೆಟ್ ಸರ್ಕಾರದಲ್ಲಿರುವ ನ್ಯೂನತೆಗಳನ್ನು ಗಮನದಲ್ಲಿಡಬೇಕು. ವೈಯಕ್ತಿಕ ಸ್ವಾತಂತ್ರ್ಯಪರಿಪಾಲನೆಗೆ ಶಾಸಕಾಂಗವೂ ಮತ್ತು ಕಾರ್ಯಾಂಗವೂ ಪ್ರತ್ಯೇಕವಾಗಿರಬೇಕು. ಕಾಬಿನೆಟ್ ಸರ್ಕಾರವು ಪಕ್ಷ ಸರ್ಕಾರವಾದುದರಿಂದ ಸಾರ್ವಜನಿಕ ವ್ಯವಹಾರಗಳೆಲ್ಲ ರಾಷ್ಟ್ರದ ಒಂದೆರಡು ಪಕ್ಷಗಳ ಅಧಿಕಾರಕ್ಕೆ ಸಂಪೂರ್ಣವಾಗಿ ಅಧೀನವಾಗುವುವು. ಪ್ರಧಾನ ಮಂತ್ರಿಯ ಮತ್ತು ಅಧಿಕಾರಿಗಳ ಸ್ವಚ್ಛಂದ ಪ್ರಭುತ್ವಕ್ಕೆ ಮಾರ್ಗಾನುಕೂಲವಾಗಬಹುದು; ಶಾಸನ ಸಭೆಯು, ಅಗಾಧವಾಗಿ ಬೆಳೆಯುತ್ತಿರುವ ಜವಾಬ್ದಾರಿಯನ್ನು ನಿರ್ವಹಿಸಲು ಅಶಕ್ತವಾಗಿ ತನ್ನ ಜನ ಸಿದ್ಧ ಹಕ್ಕುಗಳನ್ನು ಪ್ರಭಾವಯುತ ಮಂತ್ರಿಮಂಡಲಕ್ಕೆ ಒಪ್ಪಿಸಬೇಕಾಗುವುದು. ರಾಷ್ಟ್ರನಾಯಕತ್ವವನ್ನು ಶಾಸನ ಸಭೆಯು, ನಿತ್ರಾಣದಿಂದ ಕಳೆದುಕೊಂಡು, ಸಚಿವಮಂಡಲದ ಅಧಿಕಾರದ ಆಕ್ರಮಣಕ್ಕೆ ಆಸ್ಪದವನ್ನು ಕಲ್ಪಿಸಿಕೊಡುವುದು. ಯಾವುದಾದರೂ ಒಂದು ನಿರ್ದಿಷ್ಟ ಸರ್ಕಾರಕ್ಕೆ ಉಂಟಾಗುವ ಯಶಸ್ಸು ಅಥವ ಅಪಜಯವು ಬಹುಮಟ್ಟಿಗೆ ಪ್ರಜಾವರ್ಗದ ಮನೋಗತ. ಚಿತ್ತಸ್ಥೈರ್ಯ, ಸಂಪ್ರದಾಯ, ಬಹುಸಂಖ್ಯಾತ ಪಕ್ಷಗಳ ಮತ್ತು ಅವುಗಳ ಧ್ಯೇಯಗಳು, ರಾಷ್ಟ್ರವಿಧಾನ ಮತ್ತು ಶಾಸನ ರಚನಾಕ್ರಮಗಳ ಆಧಾರದ ಮೇಲೆ ನಿಂತಿವೆ.

## ಪ್ರೆಸಿಡೆನ್ಷಿಯಲ್ ಸರ್ಕಾರ — Presidential Government

ಯಾವ ರಾಷ್ಟ್ರವಿಧಾನಗಳಲ್ಲಿ ಕಾರ್ಯಾಂಗವು ಶಾಸನಾಂಗದಿಂದ ಪ್ರತ್ಯೇಕಿಸಲ್ಪಟ್ಟು, ಸಮಧಿಕಾರವನ್ನು ಪಡೆದಿದೆಯೋ, ಅಂತಹ ರಾಷ್ಟ್ರದಲ್ಲಿ ಪ್ರೆಸಿಡೆನ್ಷಿಯಲ್ ಸರ್ಕಾರವಿದೆಯೆಂದು ಹೇಳಬಹುದು. ನೀತಿ, ಅಧಿಕಾರ

ಮತ್ತು ಅವಧಿಗಳಲ್ಲಿಯೂ ಕಾರ್ಯಾಂಗವು ಸ್ವತಂತ್ರವಾದುದು. ರಾಷ್ಟ್ರಾಧ್ಯಕ್ಷನು ಒಂದು ನಿರ್ದಿಷ್ಟ ಅವಧಿಯವರೆಗೆ ವರಣಕರ್ತ ಸಮಾಜದಿಂದ ಚುನಾಯಿತನಾಗುವನು; ಆ ಅವಧಿ ಮುಗಿಯುವರೆಗೂ ಅವನು ಸ್ಥಾನಚ್ಯುತನಾಗಲಾರನು. ಅಧ್ಯಕ್ಷನ ಅಧಿಕಾರದ ಅವಧಿಯು ಅನಿರ್ದಿಷ್ಟಕಾಲವಾದರೆ ಶಾಸನಸಭೆ ಮತ್ತು ವರಣದಾತರ ಅಭಿಮತವನ್ನು ಉಲ್ಲಂಘಿಸಿ ನಿರಂಕುಶತ್ವ ಪ್ರಭುತ್ವವನ್ನು ಸ್ಥಾಪಿಸಬಹುದು. ಅಧ್ಯಕ್ಷನ ಅಧಿಕಾರಗಳನ್ನು ರಾಷ್ಟ್ರವಿಧಾನವು (Constitution) ನಿರ್ಧರಿಸಿದೆ. ತನ್ನೊಡನೆ ಸಹಕರಿಸುವ ಸಚಿವರನ್ನು ತಾನೇ ನೇಮಕಮಾಡಿಕೊಳ್ಳಬಹುದು. ಸಚಿವರ ನೇಮಕ ಮತ್ತು ಅವರ ನಿವೃತ್ತಿ ಅವನ ಐಚ್ಛಿಕ ಅಧಿಕಾರ. ಸಚಿವರು ಶಾಸನ ಸಭೆಗಳ ಸದಸ್ಯರಲ್ಲ. ಪ್ರಶ್ನೋತ್ತರಕಾಲದಲ್ಲಿಯೂ ತಮ್ಮ ಜವಾಬ್ದಾರಿಯನ್ನು ವಿವರಿಸಲು ಸಹ ಶಾಸನ ಸಭೆಗೆ ಪ್ರವೇಶಿಸಲಾರರು; ಅವರ ನೀತಿ, ಅಧಿಕಾರ ವರ್ತನೆಗಾಗಿ ಶಾಸನ ಸಭೆಗೆ ಅಧೀನರಲ್ಲ. ಅವರ ನೀತಿ ವರ್ತನೆಗಳು ಶಾಸನ ಸಭೆಯ ಮತ್ತು ವರಣದಾತರ ಧ್ಯೇಯಗಳಿಗೆ ವಿರುದ್ಧವಾದರೂ, ಅವರನ್ನು ದೂಷಿಸಿ ಸ್ಥಾನಪಲ್ಲಟರನ್ನಾಗಿ ಮಾಡುವ ಅಧಿಕಾರ ಅಧ್ಯಕ್ಷನಿಗೆ ಮಾತ್ರ ಸೇರಿದೆ. ಅಧ್ಯಕ್ಷನು ಅಧಿಕಾರದಲ್ಲಿರುವವರೆಗೂ ಅವನ ವಿಶ್ವಾಸಕ್ಕೆ ಪಾತ್ರರಾಗಿದ್ದರೆ ತನ್ನ ಅವಧಿ ಮುಗಿಯುವರೆಗೂ ಅಧಿಕಾರದಲ್ಲಿರಬಹುದು.

ಶಾಸಕಾಂಗಕ್ಕೂ ಅಧ್ಯಕ್ಷನಿಗೂ ನೀತಿಪ್ರತಿಪಾದನೆ, ಮತ್ತು ಪ್ರಯೋಗಗಳಲ್ಲಿ ಅಂತರವು ಬಂದರೆ, ಅಧ್ಯಕ್ಷನು ಶಾಸನ ಸಭೆಯನ್ನು ರದ್ದುಮಾಡಿ ವಿವಾದಾಸ್ಪದವಾದ ಪ್ರಶ್ನೆಯನ್ನು ನಿರ್ಧರಿಸುವ ಮತದಾತರಿಗೆ ಅರಿಕೆಮಾಡಿಕೊಳ್ಳುವ ಅಧಿಕಾರವನ್ನು ಪಡೆದಿಲ್ಲ. ಅವರವರ ನಿರ್ದಿಷ್ಟವಾದ ಅವಧಿಯು ಕಳೆಯುವತನಕ ಪರಸ್ಪರ ಸೌಹಾರ್ದವಿಲ್ಲದೆ, ವೈಷಮ್ಯದಿಂದಲೂ ವಾದ ಘರ್ಷಣೆಗಳನ್ನು ನಡೆಸುತ್ತಲೇ ಇರಬಹುದು.

---

Bryce. Modern Democracy Vol. II p 464.

Marriot: Mechanism of the Modern State Vol. II. p 64.

Bagehot: The English Constitution Ch. 3–649.

ಅಧ್ಯಕ್ಷನು ವರಣದಾತರಿಂದ ಚುನಾಯಿತನಾಗಿ ನಾಲ್ಕು ವರ್ಷ ಅಧಿಕಾರ ಅವಧಿಯನ್ನು ಪಡೆದಿರುವನು; ಇವನು ಒಂದು ವಿಧವಾದ 'ಪ್ಲೆಭಿಸೈಟರಿ ಎಕ್ಸ್‌ಕೇಟಿವ್' ಅಥವ ಲಾಸ್ಕಿ ಹೇಳುವಂತೆ ಫಿಟಿಸ್ ಆಪ್ ಮನಾರ್ಕಿ. 'ಇವನ ಸಮಿತಿಯ ಸದಸ್ಯರು ಅವನಿಂದ ಪ್ರತ್ಯೇಕ ರಾಜಕೀಯ ಜವಾಬ್ದಾರಿಯನ್ನು ಹೊಂದಿಲ್ಲ. ಪ್ರತ್ಯೇಕವಾಗಿಯೂ, ಸಾಮೂಹಿಕ ಸದಸ್ಯರು ಅಧ್ಯಕ್ಷನಿಗೇ ಜವಾಬ್ದಾರರು. ಸೆನೆಟ್ ಅನುಮತಿಯನ್ನು ಪಡೆದು ತನ್ನ ಸಹೋದ್ಯೋಗಿಗಳೆಲ್ಲರನ್ನು ಬದಲಾಯಿಸಬಹುದು. ಸದಸ್ಯರಿಂದ ಕೂಡಿದ ಸಮಿತಿಯನ್ನು ಕಾಬಿನೆಟ್ ಅಥವ ಸೆಕ್ರೆಟರಿಗಳ ಸಮಿತಿ ಎಂದು ಹೇಳುವರು. ಸಮಿತಿಯ ಸದಸ್ಯರು ಸಲಹೆಗಳನ್ನು ರಾಜಕೀಯ ವಿಚಾರಗಳಲ್ಲಿ ಕೊಡಬಹುದು. ಅಧ್ಯಕ್ಷನೊಬ್ಬನೇ ರಾಷ್ಟ್ರಪ್ರಗತಿಗೆಲ್ಲಾ ಜವಾಬ್ದಾರನು. ಸಾಮಾನ್ಯವಾಗಿ, ಅಧ್ಯಕ್ಷನು ತನ್ನ ಸಚಿವರನ್ನು ಆರಿಸುವಾಗ ಪ್ರತ್ಯೇಕ ಸಂಸ್ಥಾನಗಳಿಗೆ ಪ್ರಾತಿನಿಧ್ಯವನ್ನು ಕೊಡುವನು. ಸದಸ್ಯರ ಅಭಿಮತವು ಅಧ್ಯಕ್ಷನನ್ನು ನಿರ್ಬಂಧಿಸುವುದಾದರೂ ಅದರಿಂದ ಕಾಬಿನೆಟ್ ಸಮ್ಮಿಳಿತವಾಗಿ ವರ್ತಿಸುವುದಿಲ್ಲ. ಅಧ್ಯಕ್ಷನು ತನ್ನ ಸಚಿವರ ಪ್ರಚಲಿತ ಸಮಸ್ಯೆಗಳ ಪರಿಹಾರಕ್ಕಾಗಿ ಕೊಡುವ ಅಭಿಪ್ರಾಯಗಳನ್ನು ಸಂಗ್ರಹಿಸಿ ಸ್ವಂತ ನಿರ್ಧಾರಕ್ಕಾಗಿ ಅವುಗಳನ್ನು ಉಪಯೋಗಿಸಿಕೊಳ್ಳುವನು. ಅಧಿಕಾರದರ್ಪದ ಆಸೆಯಿಂದ ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಪುರುಷರು ಕಾಬಿನೆಟ್ ಸಮಿತಿಯ ಸದಸ್ಯರಾಗಲು ಬಯಸುವರು ; ಅಧ್ಯಕ್ಷಸ್ಥಾನದ ಆಕಾಂಕ್ಷಿಯಿರುವವರು ಅಲ್ಪಕಾಲ ಸದಸ್ಯರಾಗಿದ್ದು ಸಾರ್ವತ್ರಿಕ ಚುನಾವಣೆಗಳಲ್ಲಿ ರಾಷ್ಟ್ರನಾಯಕತ್ವಕ್ಕಾಗಿ ಸ್ಪರ್ಧಿಸುವರು.

ಪ್ರೆಸಿಡೆನ್ಷಿಯಲ್ ರಾಷ್ಟ್ರ ವಿಧಾನಗಳಲ್ಲಿ ಮೇಲಿನ ಸಭೆಗಳೂ ಕೆಳಗಿನ ಸಭೆಗಳೂ ಸಮಾನ ಅಧಿಕಾರವನ್ನು ಪಡೆದಿರುತ್ತವೆ. ಪಾರ್ಲಿಮೆಂಟರಿ

---

A. V. Dicey· Nineteenth Century 1919 p. 25–42 Cabinet Government and Presidential Government.

Laski: American Presidency

ಸರ್ಕಾರಗಳಲ್ಲಿ ಪ್ರಜಾಪ್ರತಿನಿಧಿಸಭೆಯು ಶ್ರೀಮಂತ ಅಥವ ಮೇಲಿನ ಸಭೆಗಿಂತ ವಿಶೇಷವಾಗಿ ಅಧಿಕಾರವನ್ನು ಪಡೆದಿರುತ್ತದೆ. ಆದರೆ ಪ್ರೆಸಿಡೆನ್ಸಿಯಲ್ ಸರ್ಕಾರಗಳಲ್ಲಿ ಮೇಲಿನ ಸಭೆಗಳು ಪ್ರತ್ಯಕ್ಷ ಚುನಾವಣೆಯಿಂದ ರಚಿಸಲ್ಪಟ್ಟವು; ಶಾಸನ ರಚನೆಯಲ್ಲಿಯೂ, ಕಾರ್ಯಾಂಗದ ಆಡಳಿತದಲ್ಲಿಯೂ, ವಿದೇಶಾಂಗ ನೀತಿ, ಸೈನಿಕ ರಚನೆ ಮತ್ತು ವ್ಯೂಹಗಳಲ್ಲಿಯೂ ಭಾಗವಹಿಸುತ್ತವೆ. ಪ್ರಭಾವವಂತನಾದ, ಮತ್ತು ಅಂಗಗಳ ನಿಯಂತ್ರಣದಿಂದಲೂ ಪ್ರತ್ಯೇಕಿಸಲ್ಪಟ್ಟ ಅಧ್ಯಕ್ಷನ ಐಚ್ಛಿಕ ಮತ್ತು ಸ್ವಚ್ಛಂದ ವರ್ತನೆಯ ಪ್ರತಿಬಂಧಕವಾಗಿಯೇ ಸಂಸ್ಥಾನಗಳ ಪ್ರಾತಿನಿಧ್ಯ ಸ್ವರೂಪವಾದ ಮೇಲಿನ ಸಭೆಯು ರಚಿತವಾಗಿರುವುದು. ಪ್ರೆಸಿಡೆನ್ಸಿಯಲ್ ರಾಷ್ಟ್ರ ವಿಧಾನವು, ಯಾವ ಅಂಗವೂ ಪ್ರಬಲವಾಗಿ ದುರ್ಮಾರ್ಗದಲ್ಲಿ ಪ್ರವರ್ತಿಸದಂತೆ ಅನೇಕ ನಿರೋಧ್ಯ ನಿರೋಧಕ ನಿಯಮಗಳನ್ನು ರಚಿಸಿದೆ. ಶಾಸನಗಳ ಪ್ರಯೋಗವು ಅಧ್ಯಕ್ಷನ ಜವಾಬ್ದಾರಿ; ಶಾಸನ ರಚನೆ ಕೆಲಸ ಕಾಂಗ್ರೆಸ್ಸಿನದು; ಶಾಸನಗಳ ಯುಕ್ತಾಯುಕ್ತ ಪರಿಪಾಲನೆ ನ್ಯಾಯಾಂಗಕ್ಕೆ ಸೇರಿದೆ. ರಾಷ್ಟ್ರಪ್ರಗತಿಗೆ ಅಡ್ಡಿಯಾಗುವ ಮಸೂದೆಗಳನ್ನು ಸಭಾಧ್ಯಕ್ಷನು ಮತ್ತು ಸಮಿತಿಗಳು ತಡೆಗಟ್ಟುವುವು; ಅವುಗಳ ಪರಿಶೀಲನೆಯನ್ನು ಮೀರಿ ಮುಂದುವರಿದರೆ ರಾಷ್ಟ್ರಾಧ್ಯಕ್ಷನು ತನ್ನ ನಿಷೇಧಾಧಿಕಾರ ಆಯುಧವನ್ನು ಉಪಯೋಗಿಸುವನು. ಯಾವಪಕ್ಷವೂ ಬುದ್ಧಿಶಕ್ತಿ, ಯುಕ್ತಿಗಳಿಂದ ಸ್ವಾರ್ಥವನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲ; ಸ್ವಾರ್ಥನಿಷ್ಠ ಪಕ್ಷಗಳು ಸಮ್ಮಿಳಿತವಾಗಿ ಬಹುಸಂಖ್ಯಾತ ಅಭಿಮತವನ್ನು ಪಡೆದು ರಾಷ್ಟ್ರಕಾರ್ಯ ಭಾರವನ್ನು ವಹಿಸುವ ಯುಕ್ತಿಯುತ ಪ್ರಯತ್ನಗಳು ಸಫಲವಾಗುವುವು.

ಎಲ್ಲಾ ಆಡಳಿತಾಂಗಗಳು ಮತ್ತು ಅಧಿಕಾರಿಗಳು, ಬಹುಸಂಖ್ಯಾಕ ಪಕ್ಷಗಳಿಂದಲೂ ಅವರ ಪ್ರತಿನಿಧಿಗಳಿಂದಲೂ ಅವಸರವಾಗಿ ನಿಭಾಯಿಸುವ ಠರಾವುಗಳ ನಿರ್ಬಂಧದಿಂದ ಪ್ರಜೆಗಳನ್ನು ಕಾಪಾಡಲು ಎಷ್ಟು ಸಾಧ್ಯವೋ ಅಷ್ಟು ಸಾಧನಗಳನ್ನು ಉಪಯೋಗಿಸಿ ತಡೆಯಬಹುದು. ಆತ್ಮ ರಕ್ಷಣೆಗಾಗಿ ಪೌರೇಯರು, ಸ್ವಾರ್ಥಪರಾಯಣ ಶಾಸನ ಸಭೆಯನ್ನು ಅಧಿಕಾರಿಗಳು ಪ್ರತಿ

ಬಂಧಿಸುವಂತೆ, ಅಧಿಕಾರಿಗಳ ಸ್ವೇಚ್ಛಾಚಾರವನ್ನು ವಿರೋಧಿಸಬಹುದು. ಪ್ರೆಸಿಡೆನ್ಷಿಯಲ್ ಸರ್ಕಾರವು ಪಕ್ಷ ಸರ್ಕಾರವಾಗಿಲ್ಲ; ಅದರ ಅಧಿಕಾರ ಮತ್ತು ಅವಧಿಯು ಶಾಸನ ಸಭೆಯ ಪ್ರಧಾನ ಪಕ್ಷದ ಅಭಿಮತದ ಮೇಲೆ ನಿಂತಿಲ್ಲ. ಪಕ್ಷಗಳ ವಿರೋಧದಲ್ಲಿಯೇ ಪ್ರಗತಿಶೀಲವಾಗಬಹುದು. ಪಕ್ಷಗಳ ಪ್ರಭಾವವು ರಾಜಕೀಯ ಕ್ಷೇತ್ರಗಳಲ್ಲಿ ವಿಶೇಷವಾಗಿದ್ದರೂ, ಸರ್ಕಾರ ರಚನೆ, ಮತ್ತು ಶಾಸನರಚನಾಕ್ರಮ—ಈ ಕೆಲಸಗಳು ಅಧ್ಯಕ್ಷನ ಅಧಿಕಾರ ಆಡಳಿತಾಂಗ ಸ್ವತಂತ್ರ ಕಾರ್ಯನಿರ್ವಹಣಗಳಿಗೆ ಅನ್ವಯಿಸವುದಿಲ್ಲ. ಪ್ರೆಸಿಡೆನ್ಷಿಯಲ್ ಸರ್ಕಾರದ ಶಾಸನಸಭೆಗಳು ವರ್ಗವರ್ಣರಹಿತವಾದುವು. ಅವು ಮತದಾತರ ಮನೋಗತವನ್ನು ಸತತವಾಗಿ ಅನುಸರಿಸಬೇಕೆಂಬ ಭಾವನೆ ಬೇರೂರಿದೆ.

ಪ್ರೆಸಿಡೆನ್ಷಿಯಲ್ ಸರ್ಕಾರನನ್ನು ವಿಲ್ಸನ್ ಪ್ರಸಿದ್ಧ ರಾಜ ನೀತಿಜ್ಞನು ಕಾಂಗ್ರೆಸಿನಲ್ ಸರ್ಕಾರ ( Congressional Government ) ಎಂದು ಕರೆದಿದ್ದಾನೆ. ಈ ವಿಧ ಸರ್ಕಾರದಲ್ಲಿ, ಅನೇಕ ಪ್ರಭಾವಯುತ ಎಲ್ಲಾ ವರ್ಗಗಳ, ಉದ್ಯೋಗಗಳ, ವ್ಯಾಪಾರವಾಣಿಜ್ಯಗಳ ಪ್ರತಿನಿಧಿಗಳಿಂದ ಕೂಡಿರುವ ಸಮಿತಿಗಳು ಸಮಸ್ತ ರಾಷ್ಟ್ರಕಾರ್ಯ ಭಾರವನ್ನು ವಿಮರ್ಶಿಸಿ ತ್ರಿವಿಧಾಂಗ ತತ್ವಗಳಾಧಾರದ ಮೇಲೆ ಪ್ರತ್ಯೇಕಿಸಲ್ಪಟ್ಟ ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗಗಳು ಅಧಿಕ ಅತಿಕ್ರಮಿಸದಂತೆ ತಮ್ಮ ಕಾರ್ಯವನ್ನು ನಿರ್ವಹಿಸುತ್ತವೆ.

ಅರ್ಜಂಟೈನ ಬ್ರೆಜಿಲ್ ಮತ್ತು ಅಮೆರಿಕಾ ಸಂಯುಕ್ತ ರಾಷ್ಟ್ರಗಳಲ್ಲಿಯೂ ಪ್ರೆಸಿಡೆನ್ಷಿಯಲ್ ಸರ್ಕಾರವಿದೆ.

ಈ ವಿಧ ಸರ್ಕಾರದಲ್ಲಿಯೂ ಅನೇಕ ನ್ಯೂನತೆಗಳಿವೆ. ಅಧ್ಯಕ್ಷನಿಗೆ ವಿಶೇಷ ಅಧಿಕಾರವನ್ನು ಒಪ್ಪಿಸುವುದರಿಂದ ಅವನ ನಿರ್ದಿಷ್ಟ ಅವಧಿ ಮುಗಿಯುವುದರೊಳಗಾಗಿ ಪ್ರಜೆಗಳೇ ವಿರೋಧವಾದರೂ ಹಿಂದಕ್ಕೆ ಕರೆಯಿಸಲು ಸಾಧನಗಳಿಲ್ಲದಿರುವುದರಿಂದ ಅಧ್ಯಕ್ಷನ ನಿರಂಕುಶಾಧಿಕಾರಕ್ಕೆ ಮಾರ್ಗವಾಗುವುದು. ಶಾಸನಸಭೆಗಳ ಅಂಕೆ ಇಲ್ಲದಿರುವುದರಿಂದ ಅಧ್ಯಕ್ಷನು

ಯಾರಿಗೂ ಜವಾಬ್ದಾರನಾಗುವುದಿಲ್ಲ. ಶಾಸನಸಭೆಗಳು ದೂಷಿಸಬಹುದು, ಇವನ ಸಂದೇಶಗಳನ್ನು ಉಲ್ಲಂಘಿಸಬಹುದು, ಬೇಡಿದ ಅಧಿಕಾರವನ್ನು ದಾನ ಮಾಡದೆ ಇರಬಹುದು, ಆದರೆ ಅವನ ಚುನಾವಣೆಯ ಕಾಲದಲ್ಲಿ ರಾಷ್ಟ್ರದ ಮತದಾತರು ಕೊಟ್ಟ ನಿಯೋಗಾಧಿಕಾರವನ್ನು ನಷ್ಟಮಾಡಿ ಪದಚ್ಯುತನನ್ನಾಗಿ ಮಾಡಲಾರರು. ಸಾರ್ವತ್ರಿಕ ಚುನಾವಣೆಗಳ ಕಾಲದಲ್ಲಿ ನೇಮಿಸಿದ ಅಧ್ಯಕ್ಷನನ್ನು ಹಿಂತಿರಿಗಿ ಕರೆಸುವ ವಿಧಾನವನ್ನು ಮತದಾತರು ಆಚರಣೆ ತಂದಾಗ, ಅಧ್ಯಕ್ಷನನ್ನು ಜವಾಬ್ದಾರಿಯುತನನ್ನಾಗಿ ಮಾಡಬಹುದು. ಆದರೆ ಪಾಪುಲರ್ ರಿಕಾಲ್ ( Populaı Recall ) ಸಂಯುಕ್ತರಾಷ್ಟ್ರದಲ್ಲಿ ಸಂಪ್ರದಾಯವಾಗಿಲ್ಲ.

ತ್ರಿವಿಧಾಂಗಗಳ ತತ್ವಗಳ ಅನುಸಾರವಾಗಿ ರಾಜ್ಯಾಂಗಗಳನ್ನು ಪ್ರತ್ಯೇಕಿಸಿರುವುದರಿಂದ, ಯಾವದರ ಜವಾಬ್ದಾರಿ ಎಷ್ಟು ಎಂದು ನಿರ್ದಿಷ್ಟವಾಗಿ ತಿಳಿಯುವುದು ಕಷ್ಟಸಾಧ್ಯವಾದುದರಿಂದ ಅಂದೋಲನಗಳು ಆಗಿಂದಾಗ್ಗೆ ನಡೆಯುತ್ತಿರುತ್ತವೆ; ಶಾಸನಸಭೆಯ ಸಮಿತಿಗಳು ಕಾನೂನುಗಳನ್ನು ರಹಸ್ಯವಾಗಿ ರಚಿಸುತ್ತವೆ. ಗುಪ್ತರೀತಿಯಲ್ಲಿ ಸ್ಥಳೀಯ ಮತ್ತು ಪಕ್ಷಗಳಭಿಮತಗಳನ್ನು ಸಂಗ್ರಹಿಸಿ ಅವುಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಕೊಡಲು ಅವಕಾಶವಿದೆ. ಸೆನೆಟ್ ಮತ್ತು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ತಮ್ಮ ತಮ್ಮ ವರಣ ಕ್ಷೇತ್ರಗಳಭಿಮತಕ್ಕೆ ಬೆಂಬಲಕೊಡಲು ಕಾತುರರಾಗಿರುವುದರಿಂದ ರಾಷ್ಟ್ರಾಧ್ಯಕ್ಷನ ಸಂದೇಶಗಳಿಗೂ ಮನ್ನಣೆಯಿಲ್ಲ. ಸಮಿತಿಗಳಲ್ಲಿ ರಾಜ್ಯಶಾಸ್ತ್ರ ತತ್ವಜ್ಞರಾಗಲಿ, ಆಡಳಿತದ ಅನುಭವವಿರುವವರಾಗಲಿ ಇಲ್ಲ; ಸ್ವಕೀಯ ಮಸೂದೆಗಳು ಸಮಿತಿಗಳ ಸಭೆಗಳಲ್ಲಿ ಚರ್ಚೆಯಾಗುವಾಗ ಅನೇಕ ಸದಸ್ಯರು ಕೆಲಸವಿಲ್ಲದೆ ನಿಕೃಷ್ಟ ವಿಚಾರಗಳಿಗಾಗಿ ಜಗಳವಾಡುವರು. ಅಮೆರಿಕಾ ಸಂಯುಕ್ತರಾಷ್ಟ್ರದಲ್ಲಿ ಪ್ರಜಾವರ್ಗಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳೂ ಸಮಿತಿಗಳ ಪರಿಶೀಲನೆಗೆ ಅಧೀನ; ರಕ್ಷಣೆ, ಆಡಳಿತ, ನಾಣ್ಯ, ಸುಂಕಗಳು ಶಿಸ್ತು, ಅನ್ಯದೇಶಸಂಬಂಧ ವ್ಯವಹಾರಗಳು, ರಾಷ್ಟ್ರೀಯ ವ್ಯಾಪಾರ, ಬ್ಯಾಂಕುಗಳ ವ್ಯವಹಾರ ಮತ್ತು ಕ್ಷೇತ್ರವಿಭಾಗ, ರಾಷ್ಟ್ರೀಯ ಆಯವ್ಯಯಗಳು—

ಮುಂತಾದ ಸಂಯುಕ್ತ ಕಾರ್ಯಗಳನ್ನು ಪರಿಶೀಲಿಸುತ್ತವೆ. ಇದರ ಪರಿಣಾಮವಾಗಿ ವಿಚಕ್ಷಣೆ ಇಲ್ಲದ ಅಧಿಕಾರವಾಗಿರುವುದನ್ನು ವೈಕೌಂಟ್ ಬ್ರೈಸ್ ರಾಜನೀತಿಜ್ಞನು ನೋಡಿ ಶಿಷ್ಟಿಕರ್ತನಿಗೆ ಮಕ್ಕಳನ್ನೂ ಹುಚ್ಚರನ್ನೂ ಮತ್ತು ಅಮೆರಿಕಾ ಸಂಯುಕ್ತ ರಾಷ್ಟ್ರಜನರನ್ನೂ ಕಂಡರೆ ಬಹಳ ಪ್ರೀತಿಯೆಂದು ಹೇಳಿದ್ದಾನೆ. ಕಾಬಿನೆಟ್ ಸರ್ಕಾರದ ಪದ್ಧತಿಯನ್ನು ರಚಿಸಿ ಕಾಬಿನೆಟ್‌ನ್ನೂ ಪ್ರಜಾಪ್ರತಿನಿಧಿ ಸಭೆಗೆ ಅಧೀನವನ್ನಾಗಿ ಮಾಡಿದರೆ ಸಂಯುಕ್ತ ರಾಷ್ಟ್ರ ಸರ್ಕಾರದ ನ್ಯೂನತೆಗಳು ನಿವಾರಣೆಯಾಗಬಹುದೆಂದು ಸಲಹೆಗಳು ಬಂದಿವೆ. ಸಂಯುಕ್ತ ರಾಷ್ಟ್ರರಚನೆಗೂ ತ್ರಿವಿಧಾಂಗ ತತ್ವಕ್ಕೂ ಕಾಬಿನೆಟ್ ಪದ್ಧತಿಯು ವಿರುದ್ಧ; ಮೇಲಿನ ಸಭೆಯ ಪ್ರಾಶಸ್ತ್ಯ ಕಮ್ಮಿಯಾಗುವುದು, ಮತ್ತು ನ್ಯಾಯಾಂಗದ ಶಾಸನ ವಿಮರ್ಶಾಧಿಕಾರಕ್ಕೆ ಕುಂದುಬರುವುದು, ಕಾರ್ಯಾಂಗವು ಶಾಸನ ಸಭೆಯ ಅಧಿಕಾರವನ್ನು ಕಮ್ಮಿಮಾಡಿ ನಿರಂಕುಶಾಧಿಕಾರವನ್ನು ಏರ್ಪಡಿಸುವುದು—ಈ ಕಾರಣಗಳಿಂದ ಕಾಬಿನೆಟ್ ಪದ್ಧತಿಯನ್ನು ಅಮೆರಿಕಾ ಸಂಯುಕ್ತ ರಾಷ್ಟ್ರವು ಆಚರಣೆಗೆ ತರಲು ಅನುಮತಿಕೊಟ್ಟಿಲ್ಲ. ಆದರೆ ಶಾಸನ ಸಭೆಗಳ ಸಮಿತಿಗಳು ವಿಶೇಷವಾಗಿ ಅಧಿಕಾರವನ್ನು ಗಳಿಸಿರುವುದರಿಂದ ಅದನ್ನು ದುರುಪಯೋಗ ಪಡಿಸಬಹುದೆಂಬ ಭೀತಿಯು ಬಲವಾಗಿದೆ. ಪಕ್ಷಗಳ ಮತ್ತು ಪಕ್ಷ ನಾಯಕರ ಅಧೀನಕ್ಕೆ ಸಿಕ್ಕುವುದರ ಬದಲು ರಾಷ್ಟ್ರದಲ್ಲಿ ಒಬ್ಬ ಪ್ರಧಾನ ಪುರುಷನ ಸ್ವಚ್ಛಂದಾಧಿಕಾರವನ್ನು ಅನುಭವಿಸುವುದು ಮೇಲು ಎಂಬ ಭಾವನೆ ಅವತರಿಸಿದೆ.

## ರಾಷ್ಟ್ರನಾಯಕನ ಮುಂದಾಳ್ತನದ ಕುರುಹು

ಆಧುನಿಕ ಪರಿಸ್ಥಿತಿಯಲ್ಲಿ ರಾಷ್ಟ್ರಾಧ್ಯಕ್ಷನಿಗೆ ಅಧಿಕಾರವನ್ನು ವೃದ್ಧಿಗೊಳಿಸಲು ಅವಕಾಶವಿದೆ. ಆಡಳಿತಾಂಗಗಳೂ ಅವನ ಸ್ವಾಧೀನ; ಸೆನೆಟ್‌ನ ಬಹುಮತ ಬೆಂಬಲದಿಂದ ಪರದೇಶಗಳೊಡನೆ ಸಂಧಾನ ಮಾಡಿಕೊಳ್ಳಬಹುದು. ರಾಜದೂತರನ್ನು ವಿದೇಶಗಳಿಗೆ ಕಳುಹಿಸಬಹುದು. ಸಂಧಿವಿಗ್ರಹ ಸಂಶ್ರಯ ಮತ್ತು ಪ್ರತಿಸಂಧಾನಗಳನ್ನು ನಿರ್ಧರಿಸಬಹುದು. ರಾಷ್ಟ್ರದ

Woodrow Wilson. Congressional Government

ಇತರ ಅಂಗಗಳೊಡನೆ ಸಹಕರಿಸಬಹುದು, ಕಾಂಗ್ರೆಸ್ ಸಭೆಗಳಿಗೆ ಸಂದೇಶ ಗಳನ್ನು ಕಳುಹಿಸಬಹುದು; ಅವರ ಠರಾವುಗಳನ್ನು ತಡೆಯುಬಹುದು ಅಥವ ರದ್ದು ಮಾಡಬಹುದು; ಹತ್ತು ದಿವಸ ಅವಧಿಯಲ್ಲಿ ಅವನಿಂದ ರದ್ದಾಗದಿದ್ದರೆ ಶಾಸನಸಭೆಯ ಮಸೂದೆಗಳು ಕಾನೂನುಗಳಾಗುವುವು. ಶಾಸನಸಭೆಯು ಆರ್ಥಿಕ ಮಸೂದೆಗಳ ವಿಷಯಗಳಲ್ಲಿ ಅಧ್ಯಕ್ಷನ ವಿಶೇಷಾಧಿಕಾರವನ್ನು ಪ್ರಯೋಗಿಸದಂತೆ ತಡೆಯುಬಹುದು; ಅಧ್ಯಕ್ಷನ ಜವಾಬ್ದಾರಿ ಕಡುತರ ವಾದುದು; ಆಗರ್ಭಶ್ರೀಮಂತರನ್ನೂ ಮಾಲೀಕರನ್ನೂ ಸ್ವಾರ್ಥಾಭ್ಯುದಯ ದಲ್ಲಿ ನಿರತರಾದವರನ್ನೂ ಸಂತೋಷಗೊಳಿಸುವುದು; ರಾಜನೀತಿಯ ಪ್ರಗತಿ ಯಲ್ಲಿ ಸಾಧಕವಾಗುವ ಪುರಷರನ್ನು ನಿಯಂತ್ರಣದಲ್ಲಿಡುವುದು, ಶಾಸನಾಂಗ ಮತ್ತು ನ್ಯಾಯ್ಯಾಂಗಗಳೊಡನೆ ಸಂಶ್ರಯ, ಶಾಸನ ಸಭೆಯು ಮತ್ತು ಶ್ರೇಷ್ಠ ನ್ಯಾಯಸ್ಥಾನಗಳು ನೀತಿಗೆ ವಿರುದ್ಧವಾಗದಂತೆ ಸಂಧಾನಮಾಡುವುದು; ಸ್ವಪಕ್ಷವನ್ನು ಸುಧಾರಿಸುವುದು; ಇಂಥ ಜವಾಬ್ದಾರಿಯನ್ನು ಕೇವಲ ನಾಲ್ಕು ವರ್ಷ ಅವಧಿಯಲ್ಲಿ ಸುಗಮವಾಗಿ ಮತ್ತು ದಕ್ಷತೆಯಿಂದ ಅವನು ನಡೆಸ ಬೇಕು.

ಈ ವಿಧವಾದ ನಿಬಂಧನೆಗಳಿದ್ದರೂ, ಅಧ್ಯಕ್ಷನ ಅಧಿಕಾರವು ವೃದ್ಧಿಯಾಗಲು ಅನುಕೂಲವಾಗುವಂತೆ ಅನೇಕ ಸಂಪ್ರದಾಯಗಳಾಗಿವೆ. ರಾಷ್ಟ್ರದ ಬಹು ವಿಧ ಕಾರ್ಯಗಳೆಲ್ಲಾ ಏಕಮುಖವಾಗಬೇಕಾದ ಅಗತ್ಯ ಸನ್ನಿಹಿತವಾಗಿದೆ. ಸಂಯುಕ್ತ ಸರ್ಕಾರದ ಅಧಿಕಾರವು ಸಂಸ್ಥಾನಗಳ ಸ್ವಕಾರ್ಯನಿರ್ವಾಹಕ ಸಂಸ್ಥೆಗಳ ಸ್ವಾತಂತ್ರ್ಯವನ್ನು ಪ್ರತಿಬಂಧಿಸಿದೆ; ಕಾರ್ಯಾಂಗದ ಮತ್ತು ರಾಷ್ಟ್ರಾಧ್ಯಕ್ಷನ ಪ್ರಭಾವ ಮಹತ್ವದ್ದಾಗಿದೆ. ಸಾಮಾಜಿಕ, ಆರ್ಥಿಕ ಮತ್ತು ವಿದೇಶಾಂಗ ನೀತಿಯ ಪ್ರಶ್ನೆಗಳು ಜಟಿಲವಾಗಿ ತ್ವರಿತವಾದ ನಿರ್ಣಯಗಳು ಆಗಬೇಕಾದುದರಿಂದ ಶಾಸನರಚನೆ, ಪರಿಶೀಲನೆ ಮತ್ತು ಪ್ರಯೋಗಗಳಲ್ಲಿ ಹೆಚ್ಚುಹೆಚ್ಚಾಗಿ ಕಾರ್ಯಾಂಗವೂ ಮತ್ತು ಅಧ್ಯಕ್ಷನೂ ಸಹಕರಿಸಬೇಕಾಗಿದೆ. ಈ ವಿಧವಾದ ರಾಷ್ಟ್ರಾಧ್ಯಕ್ಷನ ಅಧಿಕಾರದ ಉಚ್ಛ್ರಾಯವು ವೈಯಕ್ತಿಕ ಸ್ವಾತಂತ್ರ್ಯಕ್ಕೆ

ಮತ್ತು ಬೆಳವಣಿಗೆಗೆ ಪ್ರತಿಬಂಧಕವಾಗಬಹುದೆಂಬ ಭೀತಿ ಅಲ್ಲಲ್ಲಿ ತಲೆದೋರಿದೆ. ಸಂಯುಕ್ತ ರಾಷ್ಟ್ರರಚನೆ, ಅದರ ವಿಧಾನ, ನಿರೋಧ, ನಿರೋಧಕ ಸಾಧನೆಗಳು, ವ್ಯಕ್ತಿ ಪ್ರಭಾವ, ಪೌರೇಯನ ಉತ್ಸಾಹ ಮತ್ತು ಜಾಗರೂಕತೆ–ಇವುಗಳ ಯಾವ ವಿಧವಾದ ಸ್ವೇಚ್ಛಾವರ್ತನೆಗಳಿಗೆ ಅವಕಾಶ ಕೊಡುವುದಿಲ್ಲ.

ಇಪ್ಪತ್ತೈದು ವರ್ಷಗಳಿಂದೀಚಗೆ ರಾಷ್ಟ್ರದ ಆರ್ಥಿಕ ದುಃಸ್ಥಿತಿಯು ಪರಿಣಾಮವಾಗಿ ಪ್ರೆಸಿಡೆಂಟ್ ನ್ಯೂಡೀಲ್ (New Deal) ಯೋಜನೆಯು ಉಪಕ್ರಮವಾಯಿತು. ದಿ ನ್ಯಾಷನಲ್ ಇಂಡಸ್ಟ್ರಿಯಲ್ ರಿಕವರಿ ಆಕ್ಟು ಮತ್ತು ಅಗ್ರಿಕಲ್ಚರಲ್ ಅಡ್ಜಸ್ಟಮೆಂಟ್ ಆಕ್ಟುಗಳ (The National Industrial Recovery Act and Agricultural Adjustment Act) ವ್ಯವಸಾಯದ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೂ, ವಾಹನ, ಬ್ಯಾಂಕ್, ಸಹಕಾರ ಸಂಸ್ಥೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳನ್ನು ನಿಯಂತ್ರಿಸುವುದಕ್ಕೂ, ಪ್ರಜಾಹಿತಸಾಧಕ ಉದ್ಯಮಗಳನ್ನು ಮುಂದುವರಿಸುವುದಕ್ಕೂ ರಾಷ್ಟ್ರಾಧ್ಯಕ್ಷನಲ್ಲಿ ವಿಶೇಷಾಧಿಕಾರವನ್ನು ವಹಿಸಿದನು. ನ್ಯಾಷನಲ್ ರಿಕವರಿ ಅಡ್ಮಿನಿಸ್ಟ್ರೇಷನ್ (National Recovery Administration) ಐದು ವಿಧವಾಗಿ ಆದವು; ಸರ್ಕಾರ ಸಾಲ ಕೊಡುವುದು, ವ್ಯಾಪಾರ ಉದ್ಯೋಗಗಳ ವ್ಯವಸ್ಥೆ, ಹಣ ಮತ್ತು ಬ್ಯಾಂಕುಗಳನ್ನು ಕ್ರಮಪಡಿಸುವಿಕೆ, ಸಾಮಾಜಿಕ ಸುಧಾರಣೆ, ನಿರ್ದಿಷ್ಟ ಆರ್ಥಿಕ ಗಣಗಳ ಅಭಿವೃದ್ಧಿಗಾಗಿ ನಿಯಮಗಳು. ನ್ಯೂಡಿಲ್ ಶಾಸನಗಳಿಗೆ ಸುಪ್ರೀಂ ಕೋರ್ಟ್ ವಿರೋಧಿಸಿದರೂ, ರಾಷ್ಟ್ರದ ವೈಯಕ್ತಿಕ, ಸಾಮಾಜಿಕ ಸಾಮ್ಯತತ್ವವೂ ಶಾಸನಗಳ ಮೂಲಾಧಾರವಾದುದರಿಂದ ಸಂಯುಕ್ತ ರಾಷ್ಟ್ರದ ಆರ್ಥಿಕ ರಚನೆಯೇ ಪರಿವರ್ತನೆಯಾಗುವ ಸ್ಥಿತಿಯು ಸನ್ನಿಹಿತವಾಯಿತು. ಶಾಸನವು ಶ್ರೀಮಂತರಿಗೂ, ಕಾರ್ಖಾನೆ ಮಾಲೀಕರಿಗೂ, ವಿರೋಧವಾಗಿಯೂ ಗಣ್ಯ ಸಂಘಗಳಿಗೆ ಉತ್ತೇಜಕವಾಗಿಯೂ ಆದವು. ರಾಷ್ಟ್ರದ ವ್ಯಾಪಾರ ಮತ್ತು ಉದ್ಯೋಗ, ಕಾರ್ಖಾನೆಗಳನ್ನು ಪುನರ್ರಚಿಸಲು ಮತ್ತು ವೃದ್ಧಿಮಾಡಲು ವಿಶೇಷವಾದ

ನಿಯಂತ್ರಣ ಅಧಿಕಾರವನ್ನು ರಾಷ್ಟ್ರಾಧ್ಯಕ್ಷನು ವಹಿಸಿದನು; ಇದರ ಫಲಿತಾಂಶಕ್ಕೆ ಒಳಪಡದವಾಗಿ ಫೆಡರಲ್ ಸೋಷಿಯಲ್ ಸೆಕ್ಯೂರಿಟಿ ಆಕ್ಟ್, ದಿ ನ್ಯಾಷನಲ್ ಲೇಬರ್ ರಿಲೇಶನ್ಸ್ ಆಕ್ಟ್, ವಾಗ್ನರ ಆಕ್ಟ್ (Federal Social Service Act, the National Labour Relations Act, Wagner Act) ಗಳೇ ಮಂತಾದ ಶಾಸನಗಳೂ ಸಂಯುಕ್ತ ನ್ಯಾಯಾಂಗವೂ ಅಧ್ಯಕ್ಷನ ಉಚ್ಚಾಧಿಕಾರವನ್ನು ಅನುಮೋದಿಸಿವೆ ಎನ್ನುವುದಕ್ಕೂ ನಿದರ್ಶನಗಳಾದವು.

ಪ್ರೆಸಿಡೆಂಟ್ ರೂಸ್ವೆಲ್ಟನ ಆಡಳಿತದಿಂದೀಚೆಗೆ ಕ್ರಮೇಣ ಎಲ್ಲಾ ಸಾಮಾಜಿಕ ಮತ್ತು ಆರ್ಥಿಕ ಕೇಂದ್ರಗಳನ್ನು ಸರ್ಕಾರವು ಆವರಿಸುತ್ತಿದೆ. ದೂರ ದೃಷ್ಟಿಯಿಂದಲೂ ದಕ್ಷತೆಯಿಂದಲೂ ಮತ್ತು ಉದಾತ್ತ ಧ್ಯೇಯಗಳ ಸ್ಫೂರ್ತಿಯಿಂದಲೂ ರಾಷ್ಟ್ರದ ವಿಧಾಂಗಗಳನ್ನು ಸಂಯೋಜಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆರ್ಥಿಕ ವಿದ್ಯಮಾನಗಳು ವರಣಕರ್ತ ಸಮಾಜ ಮತ್ತು ಶಾಸನ ಸಭೆಗಳು, ರಾಷ್ಟ್ರ ಮತ್ತು ಸಮಾಜ ಸುಧಾರಣೆ— ಎಲ್ಲವೂ ಅಧ್ಯಕ್ಷನ ರಾಷ್ಟ್ರಹಿತಸಾಧಕವಾದ ನಿರಾಲಂಬ ಪ್ರಭುತ್ವಕ್ಕೆ ಅನುಮತಿಯನ್ನು ಕೊಟ್ಟಿವೆ. ಸ್ವದೇಶ ಮತ್ತು ವಿದೇಶಾಂಗ ನೀತಿ ರಚನೆ ಮತ್ತು ಪ್ರತಿಪಾದನೆ ಸಂಪೂರ್ಣವಾಗಿ ಅಧ್ಯಕ್ಷನದಾಗಿದೆ—ಯುದ್ಧ ಪರಿಸ್ಥಿತಿಯಲ್ಲಿ ರೂಸ್ವೆಲ್ಟ್ ಮತ್ತು ಈಚೆಗೆ ಐಸನ್ ಹೋವರ್, ವಿಶೇಷ ಮೇಲ್ಮೆದರ್ಜೆ ದಿಂದಲೂ ವಿದೇಶಾಂಗ ನೀತಿ ರಚಿಸಿ ರಾಷ್ಟ್ರಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅಮೆರಿಕ ಸಂಯುಕ್ತ ರಾಷ್ಟ್ರವು ಪ್ರಜಾಪ್ರಭುತ್ವದನೆಲೆ, ಮತ್ತು ಆಯುಧ ಶಾಲೆಯೆಂದೂ, ತಾವು ಪ್ರಜಾಪ್ರಭುತ್ವವನ್ನು ಎಲ್ಲಾ ರಾಷ್ಟ್ರಗಳಲ್ಲಿಯೂ ಪಾಲಿಸಲು ಬದ್ಧಕಂಕಣರಾಗಿರುವುದಾಗಿಯೂ ಪದೇ ಪದೇ ತಿಳಿಸಿದ್ದಾರೆ. ಆದುದರಿಂದ ರಾಷ್ಟ್ರಾಭ್ಯುದಯದಲ್ಲಿ ನಂಬಿಕೆಯನ್ನಿಟ್ಟು ಪರಮಾಧಿಕಾರವನ್ನು ಪಡೆದಿರುವ ವರಣದಾತರು ಹೆಚ್ಚಿನ ಅಧಿಕಾರವನ್ನು ಅಧ್ಯಕ್ಷರಿಗೆ ಒಪ್ಪಿಸಿದರೆ ಸಾರ್ವಜನಿಕ ಕಲ್ಯಾಣವಾಗುವುದೆಂದು ಲಾಸ್ಕಿ ರಾಜನೀತಿಜ್ಞನು ಅಭಿಪ್ರಾಯ ಪಟ್ಟಿದ್ದಾನೆ.

# ಪ್ರಕರಣ ೭

## ಸ್ವಿಸ್ ರಾಷ್ಟ್ರ ವಿಧಾನ

ಕಾಬಿನೆಟ್ ಮತ್ತು ಪ್ರೆಸಿಡೆನ್ಷಿಯಲ್ ಪದ್ಧತಿಗಳೆರಡರ ಮುಖ್ಯ ತತ್ವಗಳನ್ನೊಳಗೊಂಡು, ಅವುಗಳಿಂದ ಪ್ರಭೇದವಾಗಿ ವೈಶಿಷ್ಟ್ಯವನ್ನು ಹೊಂದಿರುವ ರಾಷ್ಟ್ರವು, ಸ್ವಿಸ್ಟ್ಜರ್‌ಲೆಂಡ್. 1874ರಲ್ಲಿ ಇಪ್ಪತ್ತೆರಡು ಕಾನ್ಟನ್ (Canton) ಗಳಿಂದ ಕೂಡಿದ ಸಂಯುಕ್ತ ರಾಷ್ಟ್ರವಾಯಿತು. ರಾಷ್ಟ್ರ ವಿಧಾನದ ಆರ್ಟ್ಟಿಕಲ್ಸ್ (2,3,5) ಪ್ರಕಾರ ಕಾನ್ಟನ್‌ಗಳು, ಪರಮಾಧಿಕಾರ, ಪೌರೇಯ ಹಕ್ಕುಗಳು, ಸ್ವಾತಂತ್ರ್ಯ ಸಂಪೂರ್ಣತೆ, ಪರರಾಷ್ಟ್ರಗಳೊಡನೆ ಸಂಧಾನ ಮುಂತಾದ ವಿಶೇಷ ಹಕ್ಕು ಮತ್ತು ಜವಾಬ್ದಾರಿಯನ್ನು ಪಡೆದಿವೆ. ಸಂಯುಕ್ತ ಸರ್ಕಾರದ ಅಧಿಕಾರಗಳನ್ನು ಎಣಿಕೆ ಮಾಡಲಾಗಿದೆ. ಸ್ವಿಸ್ ಸಂಯುಕ್ತ ಶಾಸನಾಂಗಗಳ (Bundes Versamlung) ನ್ಯಾಷನಲ್ ಕೌನ್ಸಿಲ್ ಮತ್ತು ಕೌನ್ಸಿಲ್ ಅಫ್ ಸ್ಟೇಟ್ಸ್‌ಗಳಿಂದ ಕೂಡಿದೆ. ಸ್ವಿಸ್ ಫೆಡರಲ್ ಕೌನ್ಸಿಲ್ (Bundesrath) ಕಾರ್ಯಾಂಗವೂ, ಫೆಡರಲ್ ಟ್ರೈಬ್ಯುನಲ್ ನ್ಯಾಯಾಂಗವೂ ತ್ರಿವಿಧಾಂಗತತ್ತ್ವಗನುಸಾರವಾಗಿ ಶಾಸಕಾಂಗದಿಂದ ಪ್ರತ್ಯೇಕವಾಗಿವೆ.

ಆಡಳಿತಾಧಿಕಾರವು ಸ್ವಿಸ್ ರಾಷ್ಟ್ರದಲ್ಲಿ ಒಬ್ಬ ನಾಯಕನಿಗೆ ಸೇರಿಲ್ಲ; ಇಡೀ ಕಾರ್ಯಾಂಗ ಸಮಿತಿಗೆ ಸೇರಿದೆ. ಶಾಸನಾಂಗ ಸಭೆಯಿಂದ 3 ವರ್ಷದವರಿಗೆ ಚುನಾಯಿಸಲ್ಪಟ್ಟ ಏಳು ಸದಸ್ಯರಿಂದ ಕೂಡಿದ ಆಲೋಚನ ಸಭೆಯು ರಾಷ್ಟ್ರದ ಸಮಸ್ತ ಆಡಳಿತ ಕಾರ್ಯಗಳನ್ನು ನಿರ್ವಹಿಸುತ್ತದೆ. ರಾಷ್ಟ್ರ ಸಭೆಯಷ್ಟೇ ಕಾರ್ಯಾಂಗದ ಅವಧಿ; ಖಾಲಿಯಾದ ಸ್ಥಾನಗಳಿಗೆ ರಾಷ್ಟ್ರ ಸಭೆಯು ಹೊಸ ಸದಸ್ಯರನ್ನು ನೇಮಿಸುತ್ತದೆ. ಒಬ್ಬ ಸದಸ್ಯನಿಗಿಂತಲೂ ಹೆಚ್ಚಾಗಿ ಯಾವ ಕಾನ್ಟನ್‌ಗಳನ್ನೂ ಪ್ರತಿನಿಧಿಗಳನ್ನೂ ಚುನಾಯಿಸಕೂಡದು. ಪ್ರತಿನಿಧಿಗಳ ಬಂಧುಗಳು, ಜ್ಞಾತಿಗಳು, ವಿವಾಹ ಸಂಬಂಧಿಗಳು, ಷಡ್ಡಕರು

ಕಾರ್ಯಾಂಗ ಸಮಿತಿಯ ಸದಸ್ಯರಾಗಕೂಡದು; ಆಗಿದ್ದರೂ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು. ಜುರಿಚ್ ಮತ್ತು ಬೆರನ್ ಕಾನ್ಟನ್‌ಗಳಿಗೆ ಒಬ್ಬ ಸದಸ್ಯ. ಮಿಕ್ಕ ಐದು ಸದಸ್ಯಸ್ಥಾನಗಳನ್ನು ಮಿಕ್ಕ ಇಪ್ಪತ್ತು ಕಾನ್ಟನ್‌ಗಳಿಗೆ ಹಂಚಲಾಗಿದೆ. ಪುನರಾವರ್ತಿ ಚುನಾವಣೆಗೆ ನಿಂತ ಸದಸ್ಯರನ್ನು ನೇಮಿಸುವುದು ವಾಡಿಕೆ: ಆದುದರಿಂದಲೇ ಹದಿನೈದರಿಂದ ಮೂವತ್ತು ವರ್ಷ ಸದಸ್ಯರಾಗಿ ಅನುಭವ ಪಡೆದ ನೀತಿಜ್ಞರು ಕಾರ್ಯಾಂಗ ಸಮಿತಿಯಲ್ಲಿ ಇದ್ದಾರೆ. ಕಾರ್ಯಾಂಗದ ಸದಸ್ಯರಾದ ಕೂಡಲೆ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು. ಒಂದು ವರ್ಷ ಮಾತ್ರ ಸದಸ್ಯರಲ್ಲಿ ಒಬ್ಬನು ಸಭಾಧ್ಯಕ್ಷ್ಯ ಮತ್ತೊಬ್ಬನು ಉಪಾಧ್ಯಕ್ಷನಾಗುತ್ತಾನೆ; ಎರಡು ವರ್ಷ ಅನುಕ್ರಮವಾಗಿ ಯಾರೂ ಅಧ್ಯಕ್ಷರಾಗಕೂಡದು. ಕಾರ್ಯಾಂಗ ಸಮಿತಿಯ ಕೆಲಸವನ್ನು ನಿರ್ವಹಿಸುವುದು, ರಾಷ್ಟ್ರದ ಮತ್ತು ವಿದೇಶದ ಉತ್ಸವಗಳಲ್ಲಿ ಭಾಗವಹಿಸುವುದು ಸಭಾಧ್ಯಕ್ಷನ ಹಕ್ಕು. ಅಧ್ಯಕ್ಷನಿಗೆ ಶಾಸನಗಳ ನಿಷೇಧಾಧಿಕಾರವಿಲ್ಲ; ಮತ್ತು ಇತರ ಯಾವ ವಿಧವಾದ ವೈಶಿಷ್ಟ್ಯವಿಲ್ಲ. ಸದಸ್ಯರ ಸಂಬಳ 25,000 ಪ್ರಾಂಕ್‌ಗಳು; ಅಧ್ಯಕ್ಷನು 26,500 ಪ್ರಾಂಕ್‌ಗಳನ್ನು ವೇತನವಾಗಿ ಪಡೆಯುತ್ತಾನೆ.

ರಾಷ್ಟ್ರ ವಿಧಾನ ನಿಯಮಗಳನ್ನೂ ಕಾನ್ಟನಲ್ ವಿಧಾನಗಳ ನಿಯಮಗಳನ್ನೂ ರಕ್ಷಿಸುವುದು, ಸಂಯುಕ್ತ ಸಭೆಗೆ ಶಾಸನಗಳನ್ನು ಮತ್ತು ಆಜ್ಞೆಗಳನ್ನು ಅರಿಕೆ ಮಾಡುವುದು, ಸಂಯುಕ್ತ ಶಾಸನಗಳನ್ನೂ ನ್ಯಾಯಾಂಗದ ತೀರ್ಪುಗಳನ್ನೂ ಜಾರಿಗೆ ತರವುದು, ಶಾಸಕಸಭೆಗಳು ಮಾಡದಿದ್ದರೆ ಆಡಳಿತ ಅಧಿಕಾರಿಗಳನ್ನು ನೇಮಿಸುವುದು, ಕಾನ್ಟನ್‌ಗಳಿಗೂ, ವಿದೇಶಗಳಿಗೂ ಆಗುವ ವ್ಯಾಪಾರ, ವಾಣಿಜ್ಯಗಳ ಒಪ್ಪಂದಗಳನ್ನು ಪರಿಶೀಲಿಸುವುದು, ಸಂಯುಕ್ತ, ಸೈನಿಕ, ಆರ್ಥಿಕ ಮತ್ತು ವಿದೇಶಾಂಗ ನೀತಿಗಳನ್ನು ರಚಿಸುವುದು — ಇವೇ ಮುಂತಾದ ಕಾರ್ಯಗಳನ್ನು ಕಾರ್ಯಾಂಗ ಸಮಿತಿಯು ನಿರ್ವಹಿಸುತ್ತದೆ. ಬಹುವಿಧವಾದ ಕೆಲಸಗಳನ್ನು ನಡೆಸಲು ಏಳು ಆಡಳಿತ ಶಾಖೆಗಳಿವೆ. ಕಾರ್ಯಾಂಗ ಸಮಿತಿಯು ವಾರಕ್ಕೆ ಎರಡಾ

ವರ್ತಿ ಬೆರನ್ (Bern) ನಲ್ಲಿ ಸಭೆಸೇರುವುದು; ನಿರ್ಣಯಗಳಿಗೆ ಅಗತ್ಯವಾದ ಪರಸ್ಪರಸಂಖೆ ನಾಲ್ಕು; ಅರ್ಧಕ್ಕೆ ಮಿಾರಿದ ಅಭಿಮತವು ನಿರ್ಣಯವಾಗಬೇಕಾದರೆ ಅಗತ್ಯ. ಸಾಮೂಹಿಕವಾಗಿ ವರ್ತಿಸುವುದರಿಂದ ಸದಸ್ಯರು ಪ್ರತ್ಯೇಕ ಅಭಿಪ್ರಾಯಗಳನ್ನು ತಿಳಿಸಬಹುದು, ಮತ್ತು ಶಾಸನ ಸಭೆಗಳಲ್ಲಿ ಒಬ್ಬರನ್ನೊಬ್ಬರು ವಿರೋಧಿಸಬಹದು.

ಕಾರ್ಯಾಂಗ ಸಮಿತಿಯು ಕೆಲವು ಕ್ರಮಗಳಲ್ಲಿ ಬ್ರಿಟಿಷ್ ಕಾಬಿನೆಟ್ ಪದ್ಧತಿಯನ್ನು ಹೋಲುತ್ತದೆ. ನ್ಯಾಷನಲ್ ಕೌನ್ಸಿಲ್ ಸಭೆಯು ಶಾಸನ ಸಭೆಯ ಒಂದು ಸಮಿತಿ; ಪ್ರತಿಯೊಬ್ಬ ಸದಸ್ಯನು ಶಾಸನಸಭೆಯ ಒಬ್ಬ ಪ್ರತಿನಿಧಿ, ಮತ್ತು ಯಾವುದಾದರೂ ಒಂದು ಆಡಳಿತ ಶಾಖೆಗೆ ಮುಖ್ಯಾಧಿ ಕಾರಿ; ಸದಸ್ಯರು ಎರಡು ಸಭೆಗಳಲ್ಲಿಯೂ ಸ್ಥಾನ ಪಡೆಯಬಹುದು, ಮಸೂದೆಗಳನ್ನು ಸೂಚಿಸಬಹುದು, ಮತ್ತು ಕ್ರಮಬದ್ಧರಾಗಿ ಶಾಸನಸಭೆಗಳ ಪ್ರಶ್ನೆ, (Inter-pellations) ಗಳಿಗೆ ಉತ್ತರವನ್ನು ಕೊಡಬಹುದು. ಆದರೆ ಮಸೂದೆಗಳ ವಿಚಾರದಲ್ಲಿ ವೋಟ್ ಕೊಡಕೂಡದು ಮತ್ತು ಶಾಸನ ಸಭೆಯ ನಿಯಂತ್ರಣಕ್ಕೆ ಒಳಗಾಗಿ ತಮ್ಮ ವೈಯಕ್ತಿಕ ಅಭಿಮತಗಳು ವಿಫಲ ವಾದಾಗ ಸಭೆಯ ನಿರ್ಣಯಗಳಿಗೆ ತಲೆಬಾಗಬೇಕು. ಆದರೆ ಬ್ರಿಟಿಷ್ ಕಾಬಿನೆಟ್‌ನಂತೆ ಶಾಸನಸಭೆಯ ಮುಂದಾಳ್ತನವನ್ನು ಪಡೆದು, ಆರ್ಥಿಕ, ಸಮಾಜಕ, ವಿದೇಶಾಂಗನೀತಿಗೆ ಸಂಬಂಧಪಟ್ಟ ಮಸೂದೆಗಳನ್ನು ರಚಿಸಿ ಅವುಗಳನ್ನು ಸಭೆಯಲ್ಲಿ ಪ್ರತಿಪಾದಿಸಿ ಸಭಾಸದಸ್ಯರ ಅನುಮತಿಯನ್ನು ಬೇಡಬಹುದು.

ಆದರೆ ಕೆಲವು ಸಂದರ್ಭಗಳಲ್ಲಿ ಕಾಬಿನೆಟ್ ಸರ್ಕಾರದಂತಿಲ್ಲ. ಶಾಸನಸಭೆಯ ಪ್ರಧಾನಪಕ್ಷದ ಅಥವ ಪಕ್ಷಗಳ ಗುಂಪಿನ ಅಭಿಮತದ ನಿಯೋಗವಲ್ಲ; ಆದುದರಿಂದ ಸಮಿತಿಯ ಸದಸ್ಯರು ಬೇರೆಬೇರೆ ಪಕ್ಷಗಳ ಮತದಾತರಾಗಿರಬಹುದು; ಸಜಾತಿಯ ಸಮಿತಿಯಿಲ್ಲವಾದುದರಿಂದ ಸದಸ್ಯ ರಲ್ಲಿ ರಾಷ್ಟ್ರದ ಮುಖ್ಯ ಪ್ರಶ್ನೆಗಳು ವಿಮರ್ಶೆಗೆ ಬಂದಾಗ ಭಿನ್ನಾಭಿಪ್ರಾಯ ಗಳನ್ನು ಮಂಡಿಸಬಹುದು. ಪ್ರಶ್ನಾವಳಿಗಳ ಪರಿಣಾಮವಾಗಿ ಸಹ ಸದಸ್ಯರ

ಆಕ್ಷೇಪಣೆ ಸೆನ್ಸರ್ (Censure) ಆಗಲಿ, ಒಪ್ಪಿಗೆಯಾಗಲಿ ಇಲ್ಲ; ಸಭಾಸದಸ್ಯರ ವಿಶ್ವಾಸವನ್ನು ಕಳೆದುಕೊಂಡರೆ ಶಾಸನಸಭೆಗೆ ಜವಾಬ್ದಾರರಲ್ಲವಾದುದರಿಂದ ರಾಜೀನಾಮೆ ಕೊಡಬೇಕಾದುದಿಲ್ಲ. ಕಾರ್ಯಾಂಗ ಸಮಿತಿಯು ಭಿನ್ನಾಭಿಪ್ರಾಯಕ್ಕಾಗಿ ಶಾಸನಸಭೆಯನ್ನು ರದ್ದುಮಾಡುವ ಅಧಿಕಾರವನ್ನು ಪಡೆದಿಲ್ಲ. ಆದರೆ ಶಾಸನಸಭೆಯು ಮತ್ತು ಕಾರ್ಯಾಂಗವು ವರಣದಾತರಿಗೆ ಗಹನವಾದ ವಿಷಯಗಳು ಚರ್ಚೆಗೆ ಬಂದಾಗ, ಪ್ರಜಾಭಿಮತವನ್ನು ಸೂಚಿಸುವಂತೆ ಅರಿಕೆಮಾಡಿಕೊಳ್ಳಬಹುದು. ಶಾಸನ ಸಭೆಗೆ ಜವಾಬ್ದಾರಿಯಿಲ್ಲದೆ ಸಲಹೆಗಳನ್ನು ಕೊಡುವುದೂ; ಪಕ್ಷರಹಿತವಾಗಿ, ಪಕ್ಷಗಳಲ್ಲಿ ಬಿಕ್ಕಟ್ಟಾದಾಗ ಮಧ್ಯಸ್ಥಿಕೆ ಮಾಡುವುದೂ ಮತ್ತು ಕ್ಲಿಷ್ಟ ವಿಷಯಗಳನ್ನು ಪರಿಹರಿಸಿ, ಸಮಾಧಾನಗೊಳಿಸುವುದೂ, ರಾಷ್ಟ್ರದಲ್ಲಿ ಕುಶಲರೂ, ಪ್ರಾಜ್ಞರೂ, ರಾಜನೀತಿಜ್ಞರೂ ಆದ ಪುರುಷರಿಗೆ ಸಮಿತಿಯ ಸದಸ್ಯತ್ವಕ್ಕೆ ಸ್ಪರ್ಧಿಸುವಂತೆ ಅವಕಾಶಕೊಟ್ಟು ಅಧಿಕಾರವನ್ನು ಒಪ್ಪಿಸುವುದೂ, ರಾಷ್ಟ್ರನೀತಿಯನ್ನು ಪ್ರತಿಬಂಧಕವಿಲ್ಲದೆ ಸತತವಾಗಿ ಪೋಷಿಸುವುದಕ್ಕೆ ಅವಕಾಶ ಕಲ್ಪಿಸುವುದೂ ಇವೇ ಮುಂತಾದ ಸಂಪ್ರದಾಯಗಳಿಂದ ಕೂಡಿದ ಸ್ವಿಸ್ ಸಂಯುಕ್ತರಾಷ್ಟ್ರದ ಕಾರ್ಯಾಂಗಸಮಿತಿಯ ರಚನೆಯು,—ಪ್ರಸಿದ್ಧ ರಾಜನೀತಿಜ್ಞರ ಮೆಚ್ಚಿಗೆಯನ್ನು ಪಡೆದಿದೆ.

# ಸೋವಿಯಟ್ ಸರ್ಕಾರ

ಸಾವಿರದ ಒಂಭೈನೂರ ಹದಿನೇಳರಲ್ಲಿ ನಡೆದ ಮಹಾಕ್ರಾಂತಿಯ ಪರಿಣಾಮವಾಗಿ ರಷಿಯನ್ ಸೋಷಿಯಲಿಸ್ಟ ಫೆಡರಲ್ ಸೋವಿಯಟ್ ರಿಪಬ್ಲಿಕ್ ಸ್ಥಾಪಿತವಾಯಿತು. ನೂತನ ಕಲ್ಪನೆಗಳಿಂದ ಸ್ಫೂರಿತವಾದ ಈ ನವೀನ ರಾಷ್ಟ್ರವು, ಮಾರ್ಕ್ಸನು ಕಮ್ಯುನಿಸ್ಟ ಮಾನಿಫೆಸ್ಟೊನಲ್ಲಿ ಪ್ರತಿಪಾದಿಸಿದ ಸಮಾಜವಾದದ ಮೇಲೆ ಮತ್ತು ಮಾರ್ಕ್ಸವಾದವನ್ನು ಪರಿಶೀಲಿಸಿ ಅದನ್ನು ಕಾಲಾನುಗುಣವಾಗಿ ಮಾರ್ಪಾಟುಮಾಡಿ ಸ್ಥಿರಮತವನ್ನಾಗಿ ಮಾಡಿದ ಲೆನಿನ್‌ನ ವಾದದ ಆಧಾರದ ಮೇಲೂ ನಿಂತಿದೆ. ಬಂಡವಾಳಗಾರ ಸಮಾಜದಿಂದ ಸಮ್ಯವಾದೀ ಸಮಾಜ ಕಾರ್ಮಿಕ ವಿಮೋಚನೆಯು ವರ್ಗದವರ ಪೂರ್ಣಾಧಿಕಾರದಿಂದಲೂ ಅವರು ನಿರ್ಮಿಸುವ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳಿಂದಲೇ ಸಾಧ್ಯವೆಂಬುದು ಮಾರ್ಕ್ಸವಾದ; ೧೯೨೪ರಲ್ಲಿ ರಚಿತವಾದ ರಾಷ್ಟ್ರವಿಧಾನದ ಮೂಲಾಧಾರ ಸಿದ್ಧಾಂತವಿದು. ರಾಷ್ಟ್ರದ ಕಾರ್ಮಿಕವರ್ಗವು ಸೈನಿಕರೊಡನೆ ಸಹಕರಿಸಿ ಕ್ರಾಂತಿಯನ್ನು ಉಂಟುಮಾಡಿ, ಕಮ್ಯುನಿಸ್ಟ್ ಪಾರ್ಟಿಯ ಮೂಲಕ ಕೂಲಿಕಾರರ, ಸಿಪಾಯಿಗಳ ಮತ್ತು ರೈತರ ಸಂಘ ಮತ್ತು ಸಂಸ್ಥೆಗಳನ್ನು ನಿರ್ಮಾಣಮಾಡಿ ಕ್ರಾಂತಿಯ ಧ್ಯೇಯಗಳನ್ನು ನೆರವೇರಿಸಿತು. ೧೯೧೭ರಲ್ಲಿದ್ದ ರಷ್ಯದ ಪ್ರೊಲಿಟೇರಿಯಟ್ ವರ್ಗವು ಸಮಗ್ರ ರಷ್ಯದ ಪ್ರಜಾಸಂಖ್ಯೆಯಲ್ಲಿ ಅಲ್ಪವಾದುದು. ಅಲ್ಪವಾದರೂ ರಾಷ್ಟ್ರದ ಎಲ್ಲೆಗಳಲ್ಲೆಲ್ಲ ಹರಡಿರದೆ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿಯೂ ನಗರಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ಗುಂಪು ಕಟ್ಟಿತು. ಭೂಮಿ, ಧನಗಳಿಲ್ಲದೆ ಹಸಿವು ಬಾಯಾರಿಕೆಗಳಿಂದ ಬಳಲಿ ಗುಲಾಮರಂತೆ ನಿರ್ಬಂಧಕ್ಕೆ ಸಿಕ್ಕಿದ್ದ ಕಾರ್ಮಿಕವರ್ಗವು ಕ್ರಾಂತಿಯನ್ನು ಸುಗಮವಾಗಿ ನಡೆಸಲು ರೈತರ ಸಹಾಯವನ್ನು ಕೋರಿ ಅವರನ್ನು ಪ್ರೊಲಿಟೇರಿಯಟ್ಸ್ ಅಂದರೆ ಸಂಪೂರ್ಣವಾಗಿ ಅವರ ಜೀವನವನ್ನು ನವೀನ ಸಿದ್ಧಾಂತಗಳಿಗನು

ಸಾರವಾಗಿ ಪರಿವರ್ತಿಸಿ ರಾಷ್ಟ್ರವನ್ನು ಯಶಸ್ವಿಯನ್ನಾಗಿ ಮಾಡಿತು. ರೈತರ ಜೀವನದ ಪರಿವರ್ತನೆ ಸಾವಧಾನವಾಗಿ ನಡೆಯುತ್ತಿರುವುದರಿಂದ ತತ್ಕಾಲಿಕವಾಗಿ ನಗರ ಕಾರ್ಮಿಕರ ಸಂಸ್ಥೆಗಳೆಲ್ಲವುಗಳಲ್ಲಿಯೂ ಪ್ರಬಲ ರಾಗಿದ್ದಾರೆ.

ಸೋವಿಯಟ್ ರಾಷ್ಟ್ರವಿಧಾನವು ಸುಲಭವಾದರೂ ವೈಶಿಷ್ಟ್ಯದಿಂದ ಕೂಡಿದೆ; ಈ ವಿಧವಾದ ರಚನೆ, ಮಿಕ್ಕ ಯಾವ ರಾಷ್ಟ್ರಗಳಲ್ಲಿಯೂ ಇಲ್ಲ. ಮಾರ್ಕ್ಸ್‌ವಾದವು ಪ್ರಯೋಗದಲ್ಲಿರುವುದರಿಂದ ಪ್ರತಿಯೊಂದು ಪ್ರಶ್ನೆಯು ರಾಜಕೀಯ ಪ್ರಶ್ನೆ, ಮತ್ತು ಪ್ರತಿಯೊಬ್ಬ ಕೂಲಿಗಾರನು ರಾಷ್ಟ್ರಮಾಲಿಕ ತನಕ್ಕೆ ಅಧೀನ. ಬಂಡವಾಳತನವನ್ನು ನಾಶಮಾಡಿ ಕೂಲಿಕಾರರ, ಸಿಪಾಯಿಗಳ ಮತ್ತು ರೈತರ ಪ್ರಭುತ್ವವೆಂದು ಘೋಷಿಸಲಾಗಿದೆ. ಈರಾಷ್ಟ್ರ ಸ್ವಕಾರ್ಯ ನಿರ್ವಾಹಣ ಗಣರಾಷ್ಟ್ರಗಳ ಬೀಡು. ಏಕರೀತಿಯಾದ ರಾಜ ನೀತಿಯುಳ್ಳ ಕಮ್ಯುನಿಸ್ಟ್ ಪಾರ್ಟಿಯ ನಿಯಂತ್ರಣಕ್ಕೂ ಮತ್ತು ಮುಂದಾಳ್ತ ನಕ್ಕೂ ಒಳಗಾದ ಏಳು ಸ್ವಕಾರ್ಯ ನಿರ್ವಾಹಕ ಗಣರಾಷ್ಟ್ರಗಳಿಂದ ಕೂಡಿದ ಸಂಯುಕ್ತ ರಾಷ್ಟ್ರವು ಸೋವಿಯಟ್ ರಷ್ಯ. ಈ ಗಣರಾಷ್ಟ್ರಗಳ ವಿಸ್ತೀರ್ಣ ೮೦ ಲಕ್ಷ ಚದರು ಮೈಲಿ; ಆಸ್ಟ್ರೇಲಿಯ ಖಂಡದ ಮೂರರಷ್ಟು ಮೈಲಿ ವಿಸ್ತಾರ; ಪ್ರಜಾಸಂಖ್ಯೆ ಹದಿನೇಳು ಕೋಟಿ; ಮತ್ತು ೧೫೦ ಭಾಷೆಗಳು ಆಚರಣೆಯಲ್ಲಿವೆ. ಇಷ್ಟು ಸಂಕೀರ್ಣವಾದ ಸಂಯುಕ್ತ ರಾಷ್ಟ್ರದಲ್ಲಿ ಸಂಯುಕ್ತ ಸರ್ಕಾರವೇ ವಿಶೇಷಾಧಿಕಾರವನ್ನು ಪಡೆದಿದೆ: ರಾಜಕೀಯ ಮತ್ತು ಆರ್ಥಿಕ ಜೀವನವೆಲ್ಲವೂ ಸಂಯುಕ್ತ ಸರ್ಕಾರ ಸಾಧನಗಳ ಅಧೀನ. ಗಣರಾಷ್ಟ್ರಗಳು ಸ್ಥಳೀಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಮಾತ್ರ ಪೂರ್ಣ ಸ್ವಾತಂತ್ರ್ಯವನ್ನು ಪಡೆದಿವೆ. ಪ್ರಪಂಚದಲ್ಲೆಲ್ಲಾ ರಾಷ್ಟ್ರಗಳನ್ನು ಸೇರಿಸಿ ಒಂದು ದೊಡ್ಡ ಸಂಯುಕ್ತ ಪ್ರಪಂಚ ಮಾಡಬೇಕೆನ್ನುವುದು ಸರ್ಕಾರದ ಉದಾತ್ತ ಧ್ಯೇಯ. ಆದರೆ ಈ ಧ್ಯೇಯವು ಕೈಗೂಡ ಬೇಕಾದರೆ ಏಕರೀತಿಯಾದ ಆರ್ಥಿಕ ಮತ್ತು ಸಾಮಾಜಿಕ ಸಿದ್ಧಾಂತ ಮತ್ತು ಏಕಮುಖವಾದ ಸಾಮಾಜಿಕ ಸಂಸ್ಥೆಗಳು ಪ್ರತಿಯೊಂದು ರಾಷ್ಟ್ರ

ರಚನೆಯ ತಳಹದಿಯಾಗಬೇಕು. ರಷ್ಯದಲ್ಲಿ ಎರಡು ಮುಖ್ಯ ಗಣರಾಷ್ಟ್ರ
ಳು: ರಷ್ಯನ್ ಫೆಡರೇಟೆಡ್ ರಿಪಬ್ಲಿಕ್ ಮತ್ತು ಯುಕ್ರೇನಿಯನ್
ರಿಪಬ್ಲಿಕ್; ಫೆಡರೇಟೆಡ್ ರಿಪಬ್ಲಿಕ್‌ನ ಪ್ರಜಾಸಂಖ್ಯೆ ೧೦ ಕೋಟಿ.
ಯುಕ್ರೇನಿಯನ್ ರಿಪಬ್ಲಿಕ್‌ನಲ್ಲಿ ಮೂರು ಕೋಟಿ. ಫೆಡರೇಟೆಡ್
ರಿಪಬ್ಲಿಕ್‌ನ ಹನ್ನೊಂದು ಸಂಸ್ಥಾನಗಳೂ ಅನೇಕ ಸ್ವಕಾರ್ಯ ನಿರ್ವಾಹಕ
ಕ್ಷೇತ್ರಗಳಿಂದ ಕೂಡಿದ ಸಂಯುಕ್ತ ರಾಷ್ಟ್ರ. ವೈಟ್‌ರಷ್ಯ, ಟ್ರಾನ್ಸ್
ಕಕೇಶಿಯಾ, ಟಿಜೀಕಿಸ್ತಾನ್, ಯುಸ್ಬೆಚಿಕ್‌ಸ್ತಾನ್ ಮತ್ತು ಟರ್ಕೊಮೆನಿ
ಸ್ತಾನ್, ಇತರ ಗಣರಾಷ್ಟ್ರಗಳು. ರಾಷ್ಟ್ರವಿಧಾನದ ಪ್ರಕಾರ ಯಾವಾಗ
ಬೇಕಾದರೂ ಸಂಸ್ಥಾನಗಳು ಸಂಯುಕ್ತ ರಾಷ್ಟ್ರದಿಂದ ಪ್ರತ್ಯೇಕವಾಗ
ಬಹುದು. ಸಂಯುಕ್ತ ರಾಷ್ಟ್ರದಲ್ಲಿ ಇಲ್ಲದ ಸಂಸ್ಥಾನ ಸೇರಬಹುದು.

ರಾಷ್ಟ್ರವಿಧಾನವು ಪ್ರೊಲಿಟೇರಿಯಟ್ ಸರ್ಕಾರವನ್ನು ಸ್ಥಾಪಿಸಿದೆ.
೧೯೩೬ರಲ್ಲಿ ಮಾರ್ಪಾಡಾದಾಗ ಕೆಲವು ನವೀನ ಕಲ್ಪನೆಗಳನ್ನು ಸೇರಿಸ
ಲಾಯಿತು. ರಾಷ್ಟ್ರವು ಸಮಾಜವಾದ ಸಿದ್ಧಾಂತದಿಂದ ಸ್ಫುರಿತವಾದ
ಕಾರ್ಮಿಕರ ಮತ್ತು ರೈತರ ರಾಷ್ಟ್ರ; ಯು. ಎಸ್. ಎಸ್. ಆರ್. ನ ರಾಜ
ಕೀಯಾಂಗಗಳು ಕಾರ್ಮಿಕ ವರ್ಗದವರ ನಿಯೋಗಿಗಳ ಸೋವಿಯಟ್
ಅಥವಾ ಗೋಷ್ಠಿಗಳು; ಪರಮಾಧಿಕಾರವು ನಗರ ಮತ್ತು ನಾಡಿನ ಕೂಲಿ
ಕಾರರಿಗೆ ಸೇರಿದೆ. ಬಂಡವಾಳತನ, ವೈಯಕ್ತಿಕ ಸಂಪತ್ತು ಮತ್ತು ಪುರುಷ-
ಪುರುಷ ಬೇಟೆ ಅಳಿದುಹೋಗಿ ಅದರ ಬದಲಾಗಿ ಸಮಾಜ ಆರ್ಥಿಕ ಸಿದ್ಧಾಂತ
ಮತ್ತು ಸಮಸ್ತ ಉತ್ಪಾದನೆಯ ವಸ್ತುಗಳು ಮತ್ತು ಸಾಧನಗಳು ರಾಷ್ಟ್ರಕ್ಕೆ
ಸೇರಿದ್ದು ಎಂಬ ಭಾವನೆಯ ಆಧಾರದ ಮೇಲೆ ಯು. ಎಸ್. ಎಸ್. ಆರ್.
ರಚಿತವಾಗಿರುವುದು; ಸಮಾಜ ಸಂಪತ್ತು ಸಾರ್ವಜನಿಕ ಸಂಪತ್ತು
ಇಲ್ಲವೇ ಪ್ರತ್ಯೇಕ ಸಹಕಾರಸಂಘಗಳ, ಕೃಷಿಕ್ಷೇತ್ರಗಳ ಸಂಪತ್ತು;
ಭೂಮಿ ಭೂಗರ್ಭದಲ್ಲಿ ಅಡಗಿರುವ ಖನಿಜಗಳು, ನೀರಾವರಿ, ಕಾಡು,
ಕಾರ್ಖಾನೆ, ರೇಲ್ವೆ, ನೀರು ಮತ್ತು ಬೆಳಕು, ವಾಹನ, ಬ್ಯಾಂಕುಗಳು,
ವಾಹಕ ಸಾಧಕಗಳು, ವಸತಿಗಳು, ನಗರದಲ್ಲಿ ಮತ್ತು ಔದ್ಯೋಗಿಕ ಕೇಂದ್ರ

ಗಳಲ್ಲಿ ವಸತಿಗಳನ್ನು ಕಟ್ಟಲು ಬೇಕಾಗುವ ಸೈಟು ಮತ್ತು ಇತರ ಸೌಕರ್ಯ ಗಳು–ಇಡೀ ಪ್ರಜಾಸಂಪತ್ತು ರಾಷ್ಟ್ರಸಂಪತ್ತಾಗಿದೆ. ಸಹಕಾರ ಕೃಷಿಕ್ಷೇತ್ರ ಗಳು ಮತ್ತು ಸಂಘಗಳಲ್ಲಿರುವ ಸಾಮಗ್ರಿ, ದನಕರು, ತಯಾರಾದ ಮಾಲು, ಉತ್ಪನ್ನವಾದ ವಸ್ತು, ಮನೆಮಠಗಳು ಎಲ್ಲವೂ ಸಹಕಾರ ಕ್ಷೇತ್ರ ಗಳ (Collective Farms) ಮತ್ತು ಸಹಕಾರ ಸಂಘಗಳ (Collective organisation) ಸಂಪತ್ತು; ಪ್ರತಿಯೊಂದು ಕಲೆಕ್ಟಿವ್ ಫಾರಂನ ಕುಟುಂಬವು ಸ್ವಲ್ಪ ಭೂಮಿ, ಅದಕ್ಕೆ ಸಂಬಂಧಪಟ್ಟ ಒಕ್ಕಲತನ, ದನಕರು, ಪೌಲ್ಟ್ರಿ, ಕೋಳಿ, ಕುರಿ, ಅಲ್ಪಕೃಷಿಕ ಸಾಧನಗಳನ್ನು ವೈಯಕ್ತಿಕ ಸಂಪ ತ್ತಾಗಿ ಹೊಂದಬಹುದು; ಫಾರಂಗಳ ದರ್ಜೆಯಂತೆ ಈ ಸೌಕರ್ಯಗಳ ವಿನಿಯೋಗ ಮತ್ತು ಕಲೆಕ್ಟಿವ್ ಫಾರಂಗಳು ಆಕ್ರಮಿಸಿರುವ ಭೂಮಿಯು ಅನಾದ್ಯಂತವು ಅವರಿಗೇ ಸೇರಿದ್ದು. ಇತರ ಶ್ರಮಜೀವಿಗಳ ಶೋಷಣೆ ಇಲ್ಲ ದಿದ್ದರೆ ಅಲ್ಪಸ್ವಲ್ಪ ವೈಯಕ್ತಿಕ ಉದ್ಯಮಗಳಿಗೆ ಅವಕಾಶವುಂಟು; ಕೆಲಸ ದಿಂದ ಸಂಪಾದಿಸಿದ ವೇತನ, ಉಳಿತಾಯ, ವಾಸಗೃಹ, ಅದಕ್ಕೆ ಸಂಬಂಧ ಪಟ್ಟ ಒಕ್ಕಲತನ, ಶ್ರಮದಿಂದ ಉನ್ನತವಾದ ಪಿತ್ರಾರ್ಜಿತ ಆಸ್ತಿಗೆ ಹಕ್ಕು ಮುಂತಾದವುಗಳನ್ನು ರಾಷ್ಟ್ರವಿಧಿಯು ರಕ್ಷಿಸತಕ್ಕದ್ದು. ಇವು ಸಾರ್ವಜನಿಕ ಸಂಪತ್ತನ್ನು ಹೆಚ್ಚಿಸಿ ವಾಸ್ತವಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಎತ್ತಿ ಕಾರ್ಮಿಕ ಜನಾಂಗದ ಅಭ್ಯುದಯವನ್ನು ಸಾಧಿಸಿ ಯು. ಎಸ್. ಎಸ್. ಆರ್. ನ ಸ್ವತಂತ್ರತೆ ಮತ್ತು ರಕ್ಷಣಬಲಗಳನ್ನು ವೃದ್ಧಿಗೊಳಿಸುವುವು; ಯು. ಎಸ್. ಎಸ್. ಆರ್. ನಲ್ಲಿ ಕೆಲಸ ಮಾಡುವುದು ಪುರುಷನ ಕರ್ತವ್ಯ ಮತ್ತು ಆತ್ಮಗೌರವಕ್ಕೆ ಪವಿತ್ರವಾದುದು. ಕೆಲಸ ಮಾಡದಿದ್ದರೆ ಅನ್ನವಿಲ್ಲ. ಮೂಲಾಧಾರವಾದ ಸಮಾಜ ಸಿದ್ಧಾಂತವೂ, ಯು. ಎಸ್. ಎಸ್. ಆರ್. ನಲ್ಲಿ ಈ ರೀತಿಯಾಗಿದೆ: "ಅವನವನ ಯೋಗ್ಯತಾನುಸಾರ ಕೆಲಸ ಮತ್ತು ವಸ್ತು ಉತ್ಪತ್ತಿ, ಅವನವನ ಕೆಲಸಕ್ಕನುಸಾರವಾಗಿ ಪ್ರತಿಫಲ."

ರಾಷ್ಟ್ರವಿಧಾನವು ಪೌರೇಯರಿಗೆ ಕೆಲವು ಮುಖ್ಯವಾದ ಹಕ್ಕುಗಳನ್ನು ಗಳಿಸಿಟ್ಟಿದೆ. ಯು. ಎಸ್. ಎಸ್. ಆರ್. ನ ಪೌರೇಯರಿಗೆ ಸರ್ಕಾರ ವೃತ್ತಿ

ಗಳನ್ನು ಕಲ್ಪಿಸಿ, ಜೀವನೋಪಾಯಗಳನ್ನು ಸ್ಥಾಪಿಸಿ ಕೆಲಸಕ್ಕೆ ತಕ್ಕಂತೆ ಮಜೂರಿಯನ್ನು ಕೊಡುವುದು ಅದರ ಭಾರ. ವಿಶ್ರಾಂತಿಗೂ, ವಿದ್ಯಾಭ್ಯಾಸಕ್ಕೂ, ಮುಪ್ಪಿನಲ್ಲಿ ನಿಶ್ಚಿಂತೆಯಿಂದಿರುವುದಕ್ಕೂ ಪುರುಷರಿಗೆ ಸರ್ಕಾರವು ಸೌಕರ್ಯವನ್ನು ಕಲ್ಪಿಸಿದೆ. ಸ್ತ್ರೀಯರು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ರಾಷ್ಟ್ರಜೀವನಗಳಲ್ಲಿ ಪುರುಷರಿಗೆ ಸಮವಾದ ಹಕ್ಕನ್ನು ಪಡೆದಿದ್ದಾರೆ. ಕೆಲಸ, ಕೆಲಸಕ್ಕೆ ತಕ್ಕ ಮಜೂರಿ, ವಿಶ್ರಾಂತಿ, ವಿಮೆ, ವಿದ್ಯಾಭ್ಯಾಸ, ಮತ್ತು ಕಾರ್ಯಭಾರವನ್ನು ನಿರ್ವಹಿಸುವುದರಲ್ಲಿ ಬೇಕಾದ ರಕ್ಷಣೆ, ಮೆಟರ್ನಿಟಿ ಹೋಂ, ನರ್ಸರಿಗಳು, ಕಿಂಡರ್‌ಗಾರ್ಟನ್‌ಗಳು — ಈ ಸೌಕರ್ಯಗಳೆಲ್ಲಾ ಹೆಂಗಸರದು. ಜಾತಿ, ಕುಲ, ವರ್ಣಗಳ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನಾಧಿಕಾರ. ಜಾತಿವೈಷಮ್ಯ, ತಾತ್ಸಾರ, ಜಾತಿ ವರ್ಣಬೇಧಗಳಿಗೆ ಅನುಗುಣವಾದ ವಿಶೇಷ ಹಕ್ಕುಗಳು ಮತ್ತು ಅಂತರಗಳು ಕಂಡುಬಂದಲ್ಲಿ, ಸರ್ಕಾರವು ಅಂತಹ ಸಂದರ್ಭಗಳಲ್ಲಿ ಕಠೋರ ಶಾಸನಗಳನ್ನು ಮಾಡಿ ಇವಕ್ಕೆ ಕಾರಣರಾದವರನ್ನು ಶಿಕ್ಷಿಸುವುದು. ಪ್ರತಿಯೊಬ್ಬನಿಗೂ ತನ್ನ ಪ್ರತ್ಯೇಕ ಅಂತರಾತ್ಮನನ್ನು ಪೂಜಿಸುವ ಹಕ್ಕು ಇರುವುದರಿಂದ ಮತ-ಧರ್ಮಗಳಿಗೆ ಅವಕಾಶವಿಲ್ಲ. ಮತಾಚರಣೆಯನ್ನು ನಿರ್ಬಂಧಿಸಿದರೆ ಶಿಕ್ಷೆಗೆ ಗುರಿಯಾಗಬೇಕು. ವ್ಯಕ್ತಿಗೆ ಧಾರ್ಮಿಕಸ್ವಾತಂತ್ರ್ಯ ಮತ್ತು ಮಠಗಳ ಧರ್ಮಪ್ರಚಾರವನ್ನು ಪ್ರತಿಬಂಧಿಸುವ ಸ್ವತಂತ್ರವೂ-ಎರಡೂ ಸೇರಿದೆ. ಸಮಾಜಸರ್ಕಾರವನ್ನು ವೃದ್ಧಿಗೊಳಿಸಲು ಪ್ರತಿಯೊಬ್ಬ ಪೌರೇಯನು ಕಾರ್ಯ, ವಾಣಿ, ಭಾಷಣ, ಮುದ್ರಣ, ವಿಚಾರ, ನಾಗರಿಕ, ಆರ್ಥಿಕ, ನೈತಿಕ ರಾಷ್ಟ್ರೀಯ, ನೈಸರ್ಗಿಕ ಮತ್ತು ಸಂಘಸ್ವಾತಂತ್ರ್ಯಗಳನ್ನು ಪಡೆದಿದ್ದಾನೆ. ಪೌರೇಯನು ಉತ್ಸವ ಮತ್ತು ಕಾರ್ಮಿಕಸಂಘ ಪ್ರದರ್ಶನಗಳಲ್ಲಿಯೂ ಸಹಕಾರಸಂಘಗಳ, ಸಾಂಸ್ಕೃತಿಕ, ವೈಜ್ಞಾನಿಕ, ಸಂಶೋಧಕ ಸಂಸ್ಥೆಗಳ ಕಾರ್ಯಗಳಲ್ಲಿಯೂ ಭಾಗವಹಿಸಬಹುದು. ಸರ್ಕಾರದ ಅನುಮತಿಯಿಲ್ಲದೆ ಯಾರನ್ನೂ ಯಾವ ಅಧಿಕಾರಿಯೂ ನಿರ್ಬಂಧಿಸಲಾಗದು. ಹಾಗೆಯೇ

ವ್ಯಕ್ತಿಯ ವಸತಿಗಳನ್ನೂ ಕುಟುಂಬ ಜೀವನವನ್ನೂ, ಪತ್ರವ್ಯವಹಾರವನ್ನೂ ಮತ್ತು ಪ್ರಶ್ನೆ ಸಂವಾದಗಳ ಸ್ವಾತಂತ್ರ್ಯವನ್ನೂ ಸರ್ಕಾರವು ರಕ್ಷಿಸುವುದು. ಚಮೂ ಶಿಕ್ಷಣ ( Military Seivice ) ದ ನಿರ್ಬಂಧವಿದೆ. ರಾಷ್ಟ್ರಸ್ವತ್ತು ಬಹಳ ಪ್ರಮುಖವಾದುದೆಂದು ಎಲ್ಲರಿಗೂ ಮನವರಿಕೆಯಾಗಿ ಸ್ವತ್ತಿಗಾಗಿ ಆಸೆ ಪಟ್ಟವರನ್ನು ರಾಷ್ಟ್ರದ್ರೋಹಿಗಳೆಂದು ಎಣಿಸಬೇಕೆನ್ನುವುದು ರಾಷ್ಟ್ರವಿಧಿ. ಆಕಸ್ಮಿಕ ಘಟನೆಗಳು ಸಂಭವಿಸಿದಾಗ ಪ್ರಜಾವರ್ಗವೆಲ್ಲವೂ ಏಕೀಭವಿಸಿ ನಿವಾರಣೋದ್ಯಮಗಳಲ್ಲಿ ತೊಡಗಬೇಕಾದುದು ಧರ್ಮ. ದಾರಿದ್ರ್ಯ, ಯುದ್ಧ ಮುಂತಾದವು ಅನುಸಂಘಿಕ ಘಟನೆಗಳು. ಅಂತಹ ವಿಶೇಷ ಪರಿಸ್ಥಿತಿಗಳಲ್ಲಿ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನರಿತು ಪರಿಹಾರೋಪಾಯ ಗಳನ್ನು ಪ್ರತಿಯೊಬ್ಬ ವ್ಯಕ್ತಿಯು ತನ್ನ ಚೈತನ್ಯಕ್ಕನುಗುಣವಾಗಿ ನಡೆಸಲು ತನು-ಮನ ಮತ್ತು ಧರ್ಮಗಳನ್ನೂ ಪವಿತ್ರವಾದ ರಾಷ್ಟ್ರದ ತೇಜಸ್ಸನ್ನೂ, ಬಲವನ್ನೂ, ಸ್ವಾತಂತ್ರ್ಯವನ್ನೂ ರಕ್ಷಿಸುವುದಕ್ಕಾಗಿ ಅರ್ಪಿಸಲು ಸಿದ್ಧನಾಗಿರ ಬೇಕು. ಜ್ಞಾನಸಾಧನೆಗೆ, ನ್ಯಾಯತೀರ್ಮಾನಕ್ಕೆ, ಭ್ರಾತೃಜೀವನಕ್ಕೆ, ದೇವತಾರ್ಚನೆಗೆ, ಶಿಕ್ಷಣಕ್ಕೆ, ಉತ್ಸವ-ವಿನೋದಗಳಿಗೆ, ಆರೋಗ್ಯ ಸಾಧನೆಗೆ, ಕಲಾಭಿವೃದ್ಧಿಗೆ, ವ್ಯಕ್ತಿಯ ವೈಶಿಷ್ಟ್ಯಕ್ಕೆ, ಸೋವಿಯಟ್ ರಾಷ್ಟ್ರವೇ ಪವಿತ್ರಸ್ಥಲವಾಗಿರುವದಾಗಿ ಪ್ರತಿಯೊಬ್ಬ ಕಾರ್ಮಿಕನಲ್ಲಿಯೂ ಮನವರಿಕೆಯಾಗಬೇಕು. ಇವು ಸೋವಿಯಟ್ ಯೂನಿಯನ್ನಿನ ಮೂಲಾ ಧಾರವಾದ ಸಿದ್ಧಾಂತಗಳು..

ಸಾರ್ವತ್ರಿಕ ಸಮಾನತೆ ಮತ್ತು ಪ್ರತ್ಯಕ್ಷ ಮತಾಧಿಕಾರವು ಸೋವಿ ಯಟ್‌ಪ್ರಜಾಪ್ರಭುತ್ವದಲ್ಲಿದೆ. ನಿಯೋಗಿಗಳ (Deputies) ಚುನಾವಣೆ ಸಾರ್ವತ್ರಿಕವಾದುದು. ಜಾತಿ, ಕುಲ, ವರ್ಣಭೇದ, ವಸತಿ, ವಿದ್ಯಾ ರ್ಜನೆ, ಸತ್ಕುಲ, ಆಸ್ತಿ, ಪೂರ್ವಸಂಸ್ಕೃತಿಯ ಅಗತ್ಯವಿಲ್ಲ. ಸ್ತ್ರೀ ಮತ್ತು ಪುರುಷರು ಹದಿನೆಂಟು ವಯಸ್ಸು ಮುಟ್ಟಿದ ಕೂಡಲೇ ಮತಾಧಿಕಾರವನ್ನು ಪಡೆಯಬಹುದು; ಉಮೇದುವಾರರಾಗಿ ನಿಲ್ಲಬಹುದು. ಪ್ರತಿಯೊಬ್ಬ ಮತದಾರನಿಗೂ ಒಂದೊಂದು ವೋಟ್. ಪೌರೇಯರಿಗೆಲ್ಲಾ ಮತಾಧಿಕಾರ

ದಲ್ಲಿ ಸಮನಾದ ಹಕ್ಕು. ಸಾರ್ವತ್ರಿಕ ವೋಟಿಂಗ್ ಗೌಪ್ಯವಾಗಿ ನಡೆಯ ತಕ್ಕದ್ದು. ಉಮೇದುವಾರರನ್ನು ವರಣ ಕ್ಷೇತ್ರಗಳು ನೇಮಿಸತಕ್ಕದ್ದು. ಸಾರ್ವಜನಿಕ ಸಂಸ್ಥೆಗಳು, ಕಾರ್ಮಿಕ ಸಂಘಗಳು, ಕಮ್ಯುನಿಸ್ಟ ಪಕ್ಷದ ಸಂಸ್ಥೆಗಳು, ಟ್ರೇಡ್‌ಯೂನಿಯನ್‌ಗಳು ಯುವಕ ಸಂಘಗಳು, ಸಂಸ್ಕೃತಿಯ ಸಂಸ್ಥೆಗಳು ಉಮೇದುವಾರರನ್ನು ನೇಮಿಸುವ ಅಧಿಕಾರವನ್ನು ಹೊಂದಿವೆ. ಪ್ರತಿನಿಧಿಯಾಗಿ ಚುನಾಯಿತನಾದವನು ಆಗಿಂದಾಗ್ಗೆ ವರಣದಾತರಿಗೆ ತನ್ನ ಕಾರ್ಯಕಲಾಪಗಳ ವಿಷಯವಾಗಿ ವರದಿ ಮಾಡಬೇಕು. ಕಾರ್ಯ ಅಸಮರ್ಪಕವಾದುದಲ್ಲಿ ವರಣದಾತರು ಯಾವಾಗಬೇಕಾದರೂ ಅವನನ್ನು ಹಿಂದಕ್ಕೆ ಕರೆಯಿಸಬಹುದು.

ಸೋವಿಯಟ್ ಯೂನಿಯನ್‌ನಲ್ಲಿ ಅಪ್ರತ್ಯಕ್ಷ ಚುನಾವಣೆ ಪದ್ಧತಿಯು ಜಾರಿಯಲ್ಲಿದೆ. U. S. S. R. ನ ರಚನೆಯು ಗೋಪುರದಂತಿದೆ. ಅನೇಕ ನಾಡಿನ ಮತ್ತು ಕಾರ್ಖಾನೆಗಳ ಸೋವಿಯಟ್ ಸಮಿತಿಗಳು ಅದರ ಅಸ್ತಿಭಾರ. ಸೆಂಟ್ರಲ್ ಎಕ್ಸಿಕ್ಯೂಟಿವ್ ಕಮಿಟಿ ಮತ್ತು ಪ್ರೆಸಿಡಿಯಂ ಅದರ ಶಿಖರ. ಸ್ಥಳೀಯ ವ್ಯವಹಾರಗಳೆಲ್ಲಾ ಒಂದು ನಿರ್ದಿಷ್ಟ ಎಲ್ಲೆಯಲ್ಲಿ ಗ್ರಾಮದ ಸೋವಿಯಟ್ ಪರಮಾಧಿಕಾರವನ್ನು ಹೊಂದಿವೆ. ಮಕ್ಕಳು, ಹುಚ್ಚರು ವಿನಾ, ಮಿಕ್ಕವರಿಗೆಲ್ಲ ಗ್ರಾಮ ಪ್ರಜೆಯು ಗ್ರಾಮದ ಸೋವಿಯಟ್‌ನ ಮತಾಧಿಕಾರವನ್ನು ಗಳಿಸಿಟ್ಟಿದೆ. ಸದ್ಯದಲ್ಲಿ ಇಡೀ ಸೋವಿಯಟ್ ಯೂನಿಯನ್‌ನಲ್ಲಿ ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದ ಸುಮಾರು ೮ ಲಕ್ಷ ಪ್ರಜೆಗಳಿಗೆ ಮಾತ್ರ ಮತಾಧಿಕಾರವಿಲ್ಲ. ಎಲೆಕ್ಟೊರಲ್ ಸಮಿತಿಗಳು, ಆಡಳಿತಾಂಶ ಮತ್ತು ಕೋರ್ಟುಗಳು ಒಪ್ಪಿಸಿದ ತಪಶೀಲಿನ ಆಧಾರದ ಮೇಲೆ ಯಾರು ಮತಾಧಿಕಾರಕ್ಕೆ ಅನರ್ಹರು ಎಂದು ನಿರ್ಧರಿಸುವರು. ಸೈದ್ಧಾಂತಿಕವಾಗಿ ವೋಟು ಮಾಡುವುದು ಹಕ್ಕಲ್ಲ, ಒಂದು ಪವಿತ್ರವಾದ ಕರ್ತವ್ಯ. ವಿದೇಶೀಯ ಕಾರ್ಮಿಕರೂ ಈ ಕರ್ತವ್ಯವನ್ನು ನಿರ್ವಹಿಸಬೇಕು. ಟೆರಿಟೋರಿಯಲ್ ಆಧಾರದ ಮೇಲೆ ವೋಟಿಂಗ್ ನಡೆಯುವುದಿಲ್ಲ, ಉದ್ಯೋಗ ಮತ್ತು ವ್ಯಕ್ತಿ ಆಧಾರದ ಮೇಲೆ, ಕಾರ್ಖಾನೆ, ಕಲೆಕ್ಟಿವ್

ಫಾರಂ ಟ್ರೇಡ್ ಯೂನಿಯನ್‌ಗಳು ಬೇರೆ ಬೇರೆ ವರಣ ಕ್ಷೇತ್ರಗಳಾಗುವವು. ಗುಪ್ತ ಬೆಲೆಟ್‌ಯಿಲ್ಲ. ವರಣ ಕ್ಷೇತ್ರಾಧಿಕಾರಿಯ ಮುಂದೆ ಬಂದು ತನ್ನ ಅಭಿಮತನ್ನು ಸೂಚಿಸಬಹುದು. ಗ್ರಾಮ ಮತ್ತು ಕಾರ್ಖಾನೆ ಚುನಾವಣೆಗಳಲ್ಲಿ ಕೈ ಎಣಿಕೆಯೇ ಮುಖ್ಯ. ಕಾರ್ಖಾನೆ ಸೋವಿಯಟ್‌ಗಳು ಹೆಚ್ಚಾಗಿರುವುದರಿಂದ ಪ್ರಚಲಿತ ರಾಷ್ಟ್ರವಿಧಾನದಲ್ಲಿ ಅವರಿಗೆ ನಾಡಿನ ಸೋವಿಯಟ್‌ಗಳಿಗಿಂತ ಹೆಚ್ಚು ಮತಾಧಿಕಾರ ದೊರಕಿದೆ. ೨೦೦೦ ಕಾರ್ಖಾನೆ ವರಣದಾತರಿಗೆ ಒಬ್ಬ ಪ್ರತಿನಿಧಿಯಂತೆಯೂ ಆಲ್ ಯೂನಿಯನ್ ಕಾಂಗ್ರೆಸ್ಸಿಗೆ ಚುನಾಯಿಸುವರು. ಬಂಡವಾಳತನದಿಂದ ಕಾರ್ಮಿಕಾಧಿಕಾರಕ್ಕೆ ಪರಿವರ್ತನೆಯಾಗುತ್ತಿರುವಾಗ ನಾಡಿನ ಜನರಿಗಿಂತ ಹೆಚ್ಚು ಅನುಭವವುಳ್ಳ ವಿದ್ಯಾವಂತರೂ, ರಾಜನೀತಿ ನಿಪುಣರೂ ಆದ ನಗರ ಕಾರ್ಮಿಕರು ರಾಷ್ಟ್ರಪ್ರಗತಿಗಾಗಿ ಮುಂದಾಳ್ತನವನ್ನು ಪಡೆಯಬೇಕೆಂಬ ಸಿದ್ಧಾಂತದ ಆಧಾರದ ಮೇಲೆ ಪ್ರಚಲಿತ ಪರಿಸ್ಥಿತಿಯಲ್ಲಿ ಕಾರ್ಖಾನೆ ಸೋವಿಯಟ್‌ಗಳಿಗೂ ಗ್ರಾಮ ಮತ್ತು ನಾಡಿನ ಸೋವಿಯಟ್‌ಗಳಿಗೂ ಅಷ್ಟು ಅಂತರವಿರುವುದು. ರಾಜಕೀಯ ವ್ಯವಹಾರಗಳಲ್ಲಿ ರೈತರು ಮತ್ತು ನಾಡಿನ ಜನರು ಹೆಚ್ಚು ಚೈತನ್ಯಪಡೆದಾಗ ಈಗಿರುವ ಅಸಾಮ್ಯತೆಯು ಮಾಯವಾಗುವುದು.

ಮುನ್ನೂರು ಪ್ರಜಾಸಂಖೆಯಿರುವ ಗ್ರಾಮ, ನೂರು ಕೂಲಿಕಾರರಿರುವ ಕಾರ್ಖಾನೆಗಳು ಪ್ರತ್ಯೇಕವಾಗಿ ಸೋವಿಯಟ್ ಸಮಿತಿಯನ್ನು ನಿರ್ಮಿಸುವ ಅಧಿಕಾರವನ್ನು ಪಡೆದಿವೆ. ಕಾರ್ಖಾನೆಯ ಅಡಿಗೆಮನೆ, ಕೂಲಿಕಾರರ ವಸತಿಗಳು, ಮಕ್ಕಳ ವಿದ್ಯಾಭ್ಯಾಸ ಮುಂತಾದ ಕಾರ್ಯಗಳನ್ನು ಈ ಸಮಿತಿಗಳು ಪರಿಶೀಲಿಸುವವು. ಸ್ವಕಾರ್ಯನಿರ್ವಾಹ ಸ್ಥಳೀಯ ಸಮಿತಿಗಳಾದರೂ ಕಮ್ಯುನಿಸ್ಟ್ ಪಕ್ಷದ ಮತ್ತು ಕೇಂದ್ರಸರಕಾರದ ಆಜ್ಞೆಯನ್ನು ಶಿರಸಾವಹಿಸಿ ನಿರ್ವಹಿಸಬೇಕಾದುದು, ಇವುಗಳ ಪ್ರಥಮ ಕರ್ತವ್ಯ. ಗ್ರಾಮ ಮತ್ತು ಕಾರ್ಖಾನೆ ಸೋವಿಯಟ್‌ನ ಮೇಲಿನ ಅಂತಸ್ತಿನಲ್ಲಿರುವ ಜಿಲ್ಲಾ ಸೋವಿಯಟ್ (District Soviet) ನಲ್ಲಿ ಗ್ರಾಮಗಳ

ಮತ್ತು ಕಾರ್ಖಾನೆಗಳ ಸೋವಿಯಟ್ ಸಮಿತಿಗಳ ಸದಸ್ಯರು ಚುನಾಯಿಸಿದ ಪ್ರತಿನಿಧಿಗಳು ಸದಸ್ಯರಾಗುವರು. ಡಿಸ್ಟ್ರಿಕ್ಟ್ ಸೋವಿಯಟ್‌ಗಳು ಜಿಲ್ಲಾ ಸಾಮಾಜಿಕ ರಾಜಕೀಯ ಮುಂತಾದ ಕೆಲಸಗಳನ್ನೂ ಕೇಂದ್ರಸರಕಾರವು ಆಜ್ಞಾಪಿಸಿದುದನ್ನೂ ನಿರ್ವಹಿಸುತ್ತವೆ. ಜಿಲ್ಲಾ ಸೋವಿಯಟ್‌ಗೆ ಮೇಲಿನ ಅಂತಸ್ತಿನದು ರೀಜನಲ್ ಸೋವಿಯಟ್ (Regional Soviets). ವಿವಿಧ ಸೋವಿಯಟ್ ಸಮಿತಿಗಳ ಸದಸ್ಯರೂ ಮತ್ತು ನಗರಗಳ ಮತ್ತು ಕಾರ್ಖಾನೆಗಳ ಸೋವಿಯಟ್ ಸಮಿತಿಯ ಸದಸ್ಯರೂ ರೀಜನಲ್ ಸೋವಿಯಟ್‌ಗಳ ಪ್ರತಿನಿಧಿಗಳನ್ನು ಚುನಾಯಿಸುವರು. ರೀಜನಲ್ ಕಾಂಗ್ರೆಸ್‌ಗಳಿಗೆ ಗ್ರಾಮಗಳ ಸೋವಿಯಟ್‌ಗಳು ಪ್ರತ್ಯಕ್ಷವಾಗಿ ಪ್ರತಿನಿಧಿಗಳನ್ನು ಚುನಾಯಿಸುವುದಿಲ್ಲ.

ಯು. ಎಸ್. ಎಸ್. ಆರ್. ನಲ್ಲಿರುವ ಹನ್ನೊಂದು ಸಾಮ್ಯವಾದೀ ಗಣರಾಷ್ಟ್ರಗಳ ಒಂದೊಂದು, ಅನೇಕ ರೀಜನ್‌ಗಳಾಗಿ ವಿಭಾಗಿಸಲ್ಪಟ್ಟಿದೆ. ರೀಜನಲ್ ಸೋವಿಯಟ್‌ಗಳು ಪ್ರಾಂತ ಸೋವಿಯಟ್ ಸಮಿತಿಗಳ ಮೇಲಿನ ಅಂತಸ್ತಿನವರು ರಿಪಬ್ಲಿಕ್ ಕಾಂಗ್ರೆಸ್ಸುಗಳು. (Republican Congress). ೧೯೧೮ರಲ್ಲಿ ಒಂದೇ ಗಣರಾಷ್ಟ್ರವಿತ್ತು. ೧೯೧೮ ರಿಂದ ೧೯೩೬ರಲ್ಲಿ ಆರು ಗಣರಾಷ್ಟ್ರಗಳನ್ನು ಹೆಚ್ಚಾಗಿ ಆರ್. ಎಸ್. ಎಫ್. ಎಸ್. ಆರ್. ಗೆ ಸೇರಿಸಲಾಯಿತು. ಪ್ರತಿಯೊಂದು ಗಣರಾಷ್ಟ್ರದಲ್ಲಿಯೂ ಸಣ್ಣ ಸಣ್ಣ ಮತ್ತು ಸ್ವಕಾರ್ಯನಿರ್ವಾಹಕ ಗಣಗಳು ಸಂಸ್ಕೃತೀಯ, ಆರ್ಥಿಕ, ವಿದ್ಯಾಭ್ಯಾಸ, ಮತ್ತು ಭಾಷಣ, ಮುದ್ರಣ, ಸ್ವಾತಂತ್ರ್ಯಗಳನ್ನು ಪಡೆದಿವೆ. ಗಣರಾಷ್ಟ್ರಗಳು ಯು. ಎಸ್. ಎಸ್. ಆರ್. ಪ್ರತ್ಯೇಕವಾಗುವ ಮತ್ತು ಸ್ವಿಸ್ ಕಾನ್ಸಸ್‌ಗಳ ಹಾಗೆ ಸ್ವತಂತ್ರವಾಗಿ ವಿದೇಶಾಂಗ ನೀತಿಯನ್ನು ಬೆಳೆಸುವ ಪರಮಾಧಿಕಾರವನ್ನು ಇತ್ತೀಚೆಗೆ ಪಡೆದವು.

ಸೋವಿಯಟ್ ಯುನಿಯನ್‌ನಲ್ಲಿ ೧೮೯ ಜನಾಂಗಗಳೂ ೧೫೦ ಭಾಷೆಗಳೂ ಮತ್ತು ೪೫ ಮತಗಳೂ ಇವೆ. ಜನಾಂಗಗಳನ್ನು ಸಾಮಾಜಿಕ, ಸಂಸ್ಕೃತೀಯ ಮತ್ತು ಸಂಪ್ರದಾಯಗಳ, ಭೂಗುಣ ಮತ್ತು ವಾಯುಗುಣ

ಗಳನುಗುಣವಾಗಿ, ವಿಭಾಗಿಸಲಾಗಿದೆ: ಒಂದುಕಡೆ ಆರ್ಟಿಕ್ ಸಮುದ್ರದ ಚುಕ್ಚಿ (Chuckchi) ಜನರು; ತಿಮಿಂಗಲುಗಳನ್ನು ಬೇಟೆಯಾಡಿ ಜೀವಿಸುವ ಕಾಮುಶ್ಚಟ್ಕ, ಸಖಾಲಿನ್ ಮತ್ತು ಇವೆಸ್ಕಿ ಜನರು; ಕಲಾಕೌಶಲ್ಯಗಳಲ್ಲಿ ಪ್ರಸಿದ್ಧರಾದ ಇಕ್ರೇನಿಯನ್ ಪರ್ವತಗಳ ಇವೋರಿಯನ್ ಜನರು; ಪಾಶ್ಚಾತ್ಯ ಜನಾಂಗಗಳಂತೆ ಪ್ರಗತಿಶೀಲರಾದ ಮತ್ತು ಸುಸಂಸ್ಕೃತರಾದ ಕ್ರಿಮಿಯ ಮತ್ತು ವೈಟ್‌ರಷ್ಯದ ಜನರು. ಕೆಲವು ಪ್ರದೇಶಗಳಲ್ಲಿ ಪೈತೃಕ ಸಿದ್ಧಾಂತ, ಯಾನೇಜನರಲ್ಲಿ ಮಾತೃಸತ್ತಾವಾದ ಮತ್ತು ಕೌಟುಂಬಿಕ ಮಾತೃ ಅಧಿಕಾರ. ವಿವಿಧ ಸಂಪ್ರದಾಯಗಳಿರುವ ಸಾಮೂಹಿಕ ಜೀವನ ಸೋವಿಯಟ್ ಯೂನಿಯನ್‌ನಲ್ಲಿದೆ. ಶೋಷಣೆ, ಲಾಭಾರ್ಜನೆ, ಮತ್ತು ಸ್ಪರ್ಧೆ-ಪ್ರತಿಸ್ಪರ್ಧೆರಹಿತವಾದ ಮತ್ತು ಸಾರ್ವಜನಿಕ ಹಿತಸಾಧಕವಾದ ಆರ್ಥಿಕಧ್ಯೇಯ ಮತ್ತು ರಚನೆಯಲ್ಲಿ ಜನಾಂಗಗಳ ವ್ಯಕ್ತಿತ್ವ, ಸಾಂಸ್ಕೃತೀಯ ಮತ್ತು ಭಾಷಾವ್ಯಕ್ತಿತ್ವ ಮುಂತಾದ ಭೇದ ಪ್ರಭೇದಗಳು ಅಡಗಿವೆ. ಯಾವುದೊಂದು ನಿರ್ದಿಷ್ಟ ರಾಷ್ಟ್ರದ ರಾಜಕೀಯ ಮತದ ನಿರ್ಬಂಧವಿಲ್ಲ. ಅವರವರ ಪ್ರಾಚೀನ ಸಂಪ್ರದಾಯ-ಸಂಸ್ಕೃತಿ-ಸಂಪತ್ತಿಗನುಸಾರವಾಗಿ ಅಲ್ಪಸಂಖ್ಯಾತ ಜನಾಂಗಗಳೂ ಆತ್ಮಶಾಸನವನ್ನು ಮಾಡಿಕೊಳ್ಳಬಹುದು. ರಾಷ್ಟ್ರೀಯತ್ವವು ಆತ್ಮಧರ್ಮದಹಾಗೆ ವೈಯಕ್ತಿಕವಾದುದು. ಮತಧರ್ಮಗಳಲ್ಲಿ ವ್ಯಕ್ತಿಗಳು ಸ್ವಾತಂತ್ರ್ಯವನ್ನು ಬಯಸುವ ಹಾಗೆ ನಿರ್ಭಯವಾಗಿ ರಾಷ್ಟ್ರೀಯತ್ವವನ್ನು ಬಯಸಬಹುದು. ಯಾವ ಬಹುಸಂಖ್ಯಾತ ಜನಾಂಗವೂ ಅಲ್ಪಸಂಖ್ಯಾತ ಜನರನ್ನು ಆರ್ಥಿಕ, ರಾಜಕೀಯ ಅಥವಾ ಸಾಮಾಜಿಕ ವಿಚಾರಗಳಲ್ಲಿ ನಿರ್ಬಂಧಿಸಕೂಡದು.

U. S. S. R. ನಲ್ಲಿ ಅಂಗಭೂತ ರಾಷ್ಟ್ರಗಳಾಗಬೇಕಾದರೆ ಒಂದು ನಿರ್ದಿಷ್ಟ ಪ್ರದೇಶದ ಜನರು ಬಹುಮತವಾಗಿ ಸ್ವರಾಜ್ಯ ಸೃಷ್ಟಿಯನ್ನು ಬಯಸಬೇಕು. ಸ್ವರಾಜ್ಯ ಆಕಾಂಕ್ಷೆ ಇರುವ ಪ್ರಜೆಗಳು ಹತ್ತು ಲಕ್ಷಕ್ಕೆ ಕಮ್ಮಿಯಿರಬಾರದು. (Republics) ಬಯಸಿದಾಗ ಇತರ ರಾಷ್ಟ್ರಗಳಿಂದ ಪ್ರತ್ಯೇಕವಾಗುವ ಸಲುವಾಗಿ ನದಿ, ದುರ್ಗ, ಮತ್ತು ಪರ್ವತಗಳ ಮೇರೆಯಿರ

ಬೇಕು. ಒಂದು ನಿರ್ದಿಷ್ಟ ರಿಪಬ್ಲಿಕ್‌ನಲ್ಲಿ ಜನಸಂಖ್ಯೆ ಕಮ್ಮಿಯಾಗಿ ಬಹುಮತ ಬೆಂಬಲವಿಲ್ಲದ ಜನಾಂಗವು ಅಟಾನಮಸ್ ರಿಪಬ್ಲಿಕ್‌ಗಳೂ (Autonomous Republics) ಆಗಬಹುದು. ಅನೇಕ ಪ್ರದೇಶಗಳಲ್ಲಿ ಒಂದು ಜನಾಂಗವು ಅಲ್ಪಸಂಖ್ಯಾಕರಾಗಿ ವಿಸ್ತರಿಸಿದ್ದಲ್ಲಿ ಅವರು ಅಲ್ಲಲ್ಲಿ (Autonomus Regions) ಅಟಾನಮಸ್ ರೀಜನ್‌ಗಳಾಗಿ ಪ್ರತ್ಯೇಕರಾಗ ಬಹುದು. ಸ್ವರಾಜ್ಯವನ್ನು ಹೊಂದಲು ಅವಕಾಶವಿರುವುದರಿಂದ ರಷ್ಯದಲ್ಲಿರುವ ಅನೇಕ ಜನಾಂಗಗಳು ರೀಜನಗಳಾಗಿಯೋ, ಸ್ವರಾಜ್ಯ ಗಣರಾಷ್ಟ್ರಗಳಾಗಿಯೋ ಪ್ರತ್ಯೇಕವಾಗುತ್ತಿವೆ. U.S.S.R.ನಲ್ಲಿ ೫ ರೀಜನ್‌ಗಳು ೩೪ ಪ್ರಾಂತಗಳು, ೨೨ ಸ್ವರಾಜ್ಯ ಪ್ರಾಂತಗಳಿವೆ. ಸೋವಿಯಟ್ ಸೆಂಟ್ರಲ್ ಏಷ್ಯಾಟಿಕ್ ರಿಪಬ್ಲಿಕ್‌ಗಳು ನಿರ್ಮಾಣವಾಗುತ್ತಿವೆ. (Soviet Central Asiatic Republics) ಯುಜಿಟಿಕ್ ರಾಷ್ಟ್ರವನ್ನು ಟಾಜಿಕ್ (Tajik), ಕಿರ್ಗಿಜ್ (Kirghis), ಕವಕಲ್ಪಕ್ (Kava Kalpak) ಗಣರಾಷ್ಟ್ರಗಳನ್ನಾಗಿ ವಿಭಾಗಿಸಲಾಗಿದೆ. ಯಾವ ಒಂದು ಪ್ರದೇಶದಲ್ಲಿ ಒಂದು ಜನಾಂಗವು ಬಹುಸಂಖ್ಯೆಯಲ್ಲಿದ್ದರೆ ಮತ್ತೊಂದು ಪ್ರದೇಶದಲ್ಲಿ ಅಲ್ಪಸಂಖ್ಯಾಕವಾಗಿರುವುದು; ಗ್ರಾಮ ಅಥವಾ ಜಿಲ್ಲೆಗಳಲ್ಲಿ ಬಹುಸಂಖ್ಯಾಕವಾಗಿದ್ದರೆ ಆ ಜನಾಂಗದ ಭಾಷೆ, ಸಂಪ್ರದಾಯ, ಮತ್ತು ಸಂಸ್ಕೃತಿಯನ್ನು ಕಾಪಿಡಲು ಪ್ರತ್ಯೇಕ ಸೋವಿಯಟ್‌ಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಅರಿಕೆಮಾಡ ಬಹುದು. ಯಹೂದ್ಯರ–ಜೂನ್ (Jewish Nation) ಜನಾಂಗವು ಏಕ ಜಾತೀಯವಾಗಿ ಯಾವ ಒಂದು ರಾಷ್ಟ್ರದಲ್ಲಿಯೂ ಬಹುಸಂಖ್ಯಾಕವಾಗಿಲ್ಲ. ಆದರೂ ಯುಕ್ರೇನ್‌ನಲ್ಲಿ ೧೧೫ ಯಹೂದ್ಯರ ಸೋವಿಯಟ್, ವೈಟ್‌ರಷ್ಯದಲ್ಲಿ ೧೫ ಸೋವಿಯಟ್‌ಗಳಿವೆ. ಆಮೂರ್ ನದಿಯ ದಡದಲ್ಲಿರುವ (Biro Bidgan) ನಲ್ಲಿಯೂ ಒಂದು ಯಹೂದ್ಯರ ಸ್ವರಾಜ್ಯ ಮಂಡಲವು ರಚಿತವಾಗಿದೆ. ರಾಷ್ಟ್ರಗಳ ಪರಸ್ಪರ ಸಂಬಂಧದಲ್ಲಿ ಸಮಾನ ಹಕ್ಕುಬಾಧ್ಯತೆಗಳುಂಟು. ಕೇಂದ್ರಸರ್ಕಾರದ ದೃಷ್ಟಿಯಲ್ಲಿಯೂ ಎಲ್ಲಾ ರಾಷ್ಟ್ರಗಳು ಸಮಾನ ಅಧಿಕಾರವನ್ನು ಪಡೆದಿವೆ. ಕೇಂದ್ರ ಸರ್ಕಾರದ ಅಂಗಗಳಲ್ಲಿ

ರಿಪಬ್ಲಿಕ್‌ಗಳಿಗೂ, ಸ್ವರಾಜ್ಯ ಪ್ರದೇಶಗಳಿಗೂ, ಅಲ್ಪಸಂಖ್ಯಾಕರಿಗೂ ಸಮಾನ ಪ್ರಾತಿನಿಧ್ಯವಿದೆ. ಕಾರ್ಯನಿರ್ವಾಹಕಾಂಗಗಳ ಆಡಳಿತದಲ್ಲಿ ರಿಪಬ್ಲಿಕನ ಪ್ರತಿನಿಧಿಗಳು ಸಹಕರಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಚಮೂಶಿಕ್ಷಣ, ಸರ್ವಗ್ರಾಹ್ಯ ವಿಧ್ಯಾಭ್ಯಾಸ, ಇವುಗಳಿಗೆ ಅವಶ್ಯವಾಗಿ ಬೇಕಾಗುವ ಆರ್ಥಿಕ ಸಹಾಯ ಎಲ್ಲವನ್ನೂ ಕೇಂದ್ರ ಸರ್ಕಾರವು ಪರಿಶೀಲಿಸಿ ರಾಷ್ಟ್ರಗಳ ಪ್ರಜೆಗಳ ಸೌಹಾರ್ದವನ್ನು ಬೆಳಸಿ ಸಾಮೂಹಿಕವಾಗಿ ಜೀವನವನ್ನು ಪ್ರಗತಿಪರವನ್ನಾಗಿ ಮಾಡಬೇಕೆನ್ನುವುದು ಸರ್ಕಾರದ ಘನ ಉದ್ದೇಶ.

## ಕೇಂದ್ರ ಸರ್ಕಾರ

ಸೋವಿಯಟ್ ಕಾಂಗ್ರೆಸ್ ಶಾಸನಸಭೆಯಲ್ಲಿ ೨೫೦೦೦ ನಗರ ವರಣದಾತರಿಗೆ ಒಬ್ಬ ಪ್ರತಿನಿಧಿ, ಮತ್ತು ೧೨೫೦೦೦ ನಾಡಿನ ವರಣದಾತರಿಗೆ ಒಬ್ಬ ಪ್ರತಿನಿಧಿಯಂತೆ ೫೦೦೦ ಪ್ರತಿನಿಧಿಗಳಿದ್ದಾರೆ. ವರ್ಷಕ್ಕೊಂದಾವರ್ತಿ ಸಭೆ ಸೇರುವುದು. ರಾಷ್ಟ್ರಗಳ ಪರಮಾಧಿಕಾರ ಈ ಶಾಸನಸಭೆಗೆ ಸೇರಿದೆ. ಸೋವಿಯಟ್ ಕಾಂಗ್ರೆಸ್ ಕೌನ್ಸಿಲ್ ಆಫ್ ದಿ ಯುಸಿಯನ್, ಶಾಸನ ಸಭೆಯನ್ನು ಚುನಾಯಿಸುತ್ತದೆ. ಅದರ ಸದಸ್ಯರು ೪೭೨. ಸೋವಿಯಟ್ ಅಂಗಭೂತ ರಾಷ್ಟ್ರಗಳಿಂದ ಅನುಪಾತಿಕ ಪ್ರಾತಿನಿಧ್ಯ ಪದ್ಧತಿಯನುಸಾರವಾಗಿ ಯೂನಿಯನ್ ಸಭೆಯು ಸ್ಥಾಪಿತವಾಗಿದೆ; ಸ್ವರಾಜ್ಯಗಣರಾಷ್ಟ್ರಕ್ಕೆ ೫ ರಂತೆ ಸ್ವರಾಜ್ಯ ಪ್ರದೇಶ ( Regions )ಕ್ಕೆ ಒಂದರಂತೆ 138 ಪ್ರತಿನಿಧಿಗಳೊಳಗೊಂಡ ಕೌನ್ಸಿಲ್ ಆಫ್ ನ್ಯಾಷನಾಲಿಟೀಸ್ ಎಂಬ ಮತ್ತೊಂದು ಶಾಸನ ಸಭೆಯನ್ನು ಕಾಂಗ್ರೆಸ್ ಸಭೆಯು ಚುನಾಯಿಸುತ್ತದೆ. ಯೂನಿಯನ್ ಕೌನ್ಸಿಲ್ ಆಫ್ ನ್ಯಾಷನಾಲಿಟೀಸ್ ( Council of the Union and Council of Nationalities ) ಇವೆರಡು ಸಭೆಗಳು ಕಾಂಗ್ರೆಸ್ ಸಭೆ ಸೇರುವುದಕ್ಕೆ ಅವಕಾಶವಿಲ್ಲದಿದ್ದಾಗ ಪರಮಾಧಿಕಾರವನ್ನು ಪಡೆದು ರಾಷ್ಟ್ರದ ಕರ್ತವ್ಯಗಳನ್ನು ಯೂನಿಯನ್ ಸೆಂಟ್ರಲ್ ಎಕ್ಸಿಕ್ಯೂಟಿವ್ ( Union Central Executive ) ಎಂಬ ಹೆಸರಿನಿಂದ ನಿರ್ವಹಿಸುತ್ತವೆ.

ಶಾಸಕಾಂಗ, ನ್ಯಾಯಾಂಗ ಮತ್ತು ಆಡಳಿತಾಂಗಗಳೆಲ್ಲವೂ ಇವೆರಡು ಸಭೆಗಳ ಅಧೀನ. ಮೂರು ತಿಂಗಳಿಗೆ ಒಂದಾವರ್ತಿ ಸಭೆನೇರುವುದು. ಸಭೆನೇರುವ ಮಧ್ಯಕಾಲದಲ್ಲಿ ೨೧ ಸದಸ್ಯರಿಂದ ಕೂಡಿದ ಪ್ರೆಸಿಡಿಯಂ (Presidium) ಎಂಬ ಕಾರ್ಯನಿರ್ವಾಹಕ ಸಮಿತಿಯು ಸೆಂಟ್ರಲ್ ಎಕ್ಸಿಕ್ಯೂಟಿವ್ ಸಮಿತಿಯ ಸಮಸ್ತ ಅಧಿಕಾರವನ್ನು ವಹಿಸಿಕೊಂಡು ಎಲ್ಲಾ ರಾಷ್ಟ್ರಕಾರ್ಯಭಾರವನ್ನು ನಿರ್ವಹಿಸುತ್ತದೆ. ಸೆಂಟ್ರಲ್ ಸಮಿತಿಯು ಪ್ರೆಸಿಡಿಯಂನ್ನೂ ನೇಮಿಸಿದ ಹಾಗೆ 17 ಸದಸ್ಯರುಳ್ಳ ಮತ್ತು ಶಾಖಾಧಿಕಾರಿಗಳಿಂದ ಕೂಡಿದ ಪೀಪಲ್ಸ ಕಮಿಸರೀಸ್ (Peoples Commissaries) ಸಮಿತಿಯನ್ನು ಚುನಾಯಿಸುತ್ತದೆ. ಯೂನಿಯನ್ ಕೌನ್ಸಿಲ್ ಆಫ್ ಪೀಪಲ್ಸ ಕಮಿಸರೀಸ್ (Union Council of Peoples Commissaries) ಬ್ರಿಟಿಷ್ ಕಾಬಿನೆಟನಂತೆ ರಚಿತವಾಗಿದೆ. ಪ್ರತಿಯೊಬ್ಬ ಕಮಿಸರೀಸ್‌ಗೂ ಇಬ್ಬಿಬ್ಬರು ನಿಯೋಗಿಗಳು ತಮಗೆ ವಹಿಸಿದ ಶಾಖಾ (Department) ಅಧಿಕಾರವನ್ನು ನಿರ್ವಹಿಸುವದರಲ್ಲಿ ಸಹಾಯ ಮಾಡುವರು. ರಾಷ್ಟ್ರದ ಆಡಳಿತದ ಕಾರ್ಯಗಳನ್ನೆಲ್ಲಾ ನಿರ್ವಹಿಸುವ ಪ್ರೆಸಿಡಿಯಂ ಮತ್ತು ಪೀಪಲ್ಸ ಕಮಿಸರೀಸ್ ಅಪ್ರತ್ಯಕ್ಷವಾಗಿ ಚುನಾಯಿತವಾದ ರಾಷ್ಟ್ರಾಂಗಗಳು.

## ಕಮ್ಯುನಿಸ್ಟ್ ಪಾರ್ಟಿ—Communist Party

ರಾಷ್ಟ್ರದಲ್ಲೆಲ್ಲಾ ಮುಖ್ಯವಾದ ಮತ್ತು ಸಮಾಜ ಆಧಾರಭೂತವಾದ ಪರಿವರ್ತನೆಗಳನ್ನು ಸೂಚಿಸುವ ಅಂಗವೆಂದರೆ ಕಮ್ಯುನಿಸ್ಟ್ ಪಾರ್ಟಿ (Communist Party). ಈ ಪಕ್ಷಕ್ಕೆ ಸೇರಿದವರು ರಾಜಕೀಯ, ಸಾಮಾಜಿಕ, ಧಾರ್ಮಿಕ, ಕಲಾ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಧಾನ ಪಾತ್ರವನ್ನು ವಹಿಸಿರುವರು. ಮೂವತ್ತು ಲಕ್ಷಕ್ಕೆ ಹೆಚ್ಚು ಸದಸ್ಯರಿರುವರು. ಅಧ್ಯಕ್ಷನು ರಾಷ್ಟ್ರಕ್ಕೆ ಸರ್ವಾಧಿಕಾರಿಯಾದರೂ ಸರ್ಕಾರದಂಗಗಳ ಸದಸ್ಯತ್ವವಾಗಲೀ, ಬೇರೆಯ ವಿಧವಾದ ಪದವಿಯಾಗಲೀ ಹೊಂದಿಲ್ಲ; ಕಮ್ಯುನಿಸ್ಟಪಾರ್ಟಿಯ ಕಾರ್ಯದರ್ಶಿಯಾಗಿ ಈ ಉನ್ನತ ಪದವಿ

ಯನ್ನು ಪಡೆದಿದ್ದಾನೆ. ಪಾರ್ಟಿಯು ತನ್ನ ಕಾರ್ಯದರ್ಶಿಯ ಮೂಲಕ ರಾಷ್ಟ್ರದ ಸಮಸ್ತ ಕಾರ್ಯಭಾರವನ್ನು ವಹಿಸಿದೆ.

ಧರ್ಮದ ಸಂಸ್ಥೆಗಳೋಪಾದಿಯಲ್ಲಿ ಕಮ್ಯುನಿಸ್ಟ ಪಾರ್ಟಿಯು ಗುಪ್ತವಾದ ಮಂಡಲ; ಅದರ ಸದಸ್ಯತ್ವವನ್ನು ಪಡೆಯುವುದು ಕಷ್ಟಸಾಧ್ಯ. ಪದೇ ಪದೇ ಪಾರ್ಟಿಯು ಶಿಸ್ತಿಗೊಳಗಾಗದ ಮತ್ತು ಅನಾಧರ ತೋರಿದ ಸದಸ್ಯರನ್ನು ತೆಗೆದುಹಾಕುವುದಲ್ಲದೇ ಉಗ್ರ ಶಿಕ್ಷೆಗೆ ಗುರಿ ಮಾಡುವುದು. ವೇತನದ ಒಂದು ಭಾಗವನ್ನು ಪಾರ್ಟಿಗೆ ಚಂದಾವಾಗಿ ಕೊಟ್ಟು ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಬೇಕಾದುದು ಒಂದು ನಿಯಮ. ಪ್ರತಿಯೊಬ್ಬ ಸದಸ್ಯನು ಸಮಾಜ ಹಿತಕಾರ್ಯಕ್ಕಾಗಿ ತನು-ಮನ-ಧನಗಳನ್ನು ಅರ್ಪಿಸಿ ನಿಷ್ಕಳಂಕ ಭಕ್ತಿಯಿಂದ ಭಿನ್ನಾಭಿಪ್ರಾಯಗಳಿಗೆ ಎಡೆಗೊಡದೆ, ಪಾರ್ಟಿಯ ಘನ ಉದ್ದೇಶಗಳನ್ನು ಮುಂದುವರಿಸಬೇಕು. ಸಾಮಾನ್ಯವಾಗಿ ಕೊಮ್ಸೊಮೋಲ್ (Komsomol Young Communist League) ಯುವಕರ ಪಾರ್ಟಿಗಳಿಂದಲೇ ಹೆಚ್ಚಾಗಿ ಪಾರ್ಟಿ ಸದಸ್ಯತ್ವವನ್ನು ಪಡೆಯುವರು. ಬಾಯ್‌ಸ್ಕೌಟ ಮತ್ತು ಗರ್ಲ್‌ಗೈಡ್ಸ ಚಳುವಳಿಗಳೂ ಪಾರ್ಟಿಯ ಅಧೀನದಲ್ಲಿವೆ. ಕಮ್ಯುನಿಸ್ಟ ಪಾರ್ಟಿಯು ಜಪಾನಿನ ಸಮುರೆ ಅಧವಾ ಪ್ಲೇಟೊ ಚಿತ್ರಿಸಿರುವ ಗಾರ್ಡಿಯನ್ಸ ರಚನೆ ಕ್ರಮದಂತೆ ಕಠಿಣ ಶಿಸ್ತಿನಿಂದ ರಚಿತವಾಗಿರುವುದು.

ಪಾರ್ಟಿಯ ಕನಿಷ್ಟ ಪ್ರಮಾಣ ಮತ್ತು ಪ್ರಾಥಮಿಕ ಅಂಗವೆಂದರೆ Cell (Yacheika); ನಾಡಿನ ಅಧವಾ ಕಾರ್ಖಾನೆಯ ಸಮಿತಿಯನ್ನು ಒಂದು ಕಾರ್ಖಾನೆಯಲ್ಲಿ ಅಥವಾ ಗ್ರಾಮದಲ್ಲಿ, ಮೂರು ಅಧವಾ ನಾಲ್ಕು ಸದಸ್ಯರಿಗೆ ಕಮ್ಮಿಯಿಲ್ಲದ ಸಮಿತಿಯು, * ಸೆಲ್‌ಗಳು, ಕ್ರಾಂತೀಯ ಮತ್ತು

* ೧೯೨೮ರಲ್ಲಿ ೪೯೩೨೧ ಸೆಲ್‌ಗಳು ಸ್ಥಾಪಿತವಾದವು. ಅವುಗಳಲ್ಲಿ ಶೇಕಡ ೨೫ರಷ್ಟು ಕಾರ್ಖಾನೆಗಳಲ್ಲಿಯೂ, ೫೩ರಷ್ಟು ಗ್ರಾಮಗಳಲ್ಲಿಯೂ, ೧೯ರಷ್ಟು ಕಛೇರಿ, ವಿದ್ಯಾಸಿಲಯಗಳಲ್ಲಿಯೂ ಮತ್ತು ಇತರ ಸಂಸ್ಥೆಗಳಲ್ಲಿಯೂ ಸ್ಥಾಪಿಸಲ್ಪಟ್ಟವು. (R. L. Buell :– New Governments of Europe P. 348).

ರೀಜನಲ್ ಅಂಗಗಳ ನಿಯೋಗಿಗಳನ್ನೂ (Delegates), ಪ್ರಾಂತ ಮತ್ತು ರೀಜನಲ್ ಅಂಗಗಳು ಆಲ್ ಯೂನಿಯನ್ ಪಾರ್ಟಿ ಕಾಂಗ್ರೆಸ್ (All Union Party Congress) ಸದಸ್ಯರನ್ನೂ ಚುನಾಯಿಸುವುವು. ಎರಡು ವರ್ಷಕ್ಕೆ ಒಂದಾವರ್ತಿ ಕಾಂಗ್ರೆಸ್ ಸಭೆಸೇರುವದು. ಏತನ್ಮಧ್ಯೆ ಕಾಂಗ್ರೆಸ್ ಸಭೆಯು ಚುನಾಯಿಸಿದ ಸೆಂಟ್ರಲ್ ಎಕ್ಸಿಕ್ಯೂಟಿವ್ (Central Executive) ಪಾರ್ಟಿಯ ಕಾರ್ಯಕಲಾಪಗಳನ್ನು ಪರಿಶೀಲಿಸುವುದು. ಸೆಂಟ್ರಲ್ ಕಾರ್ಯಾಂಗಸಮಿತಿಯ ಮುಖ್ಯಾಧಿಕಾರಿಯು ಸೆಕ್ರೆಟರಿ ಜನರಲ್ (Secietary General). ಘನಹೊಂದಿದ ಸ್ಥಾನವನ್ನು ಅಧ್ಯಕ್ಷನು ಪಡೆದು ಪಾರ್ಟಿಯ ಮತ್ತು ರಾಷ್ಟ್ರಾಡಳಿತದ ನೀತಿಗಳನ್ನು ಅಳವಡಿಸಿಕೊಂಡು ಪಾರ್ಟಿಯನ್ನು ಪ್ರಗತಿಪರವನ್ನಾಗಿ ನಡೆಸುತ್ತಾನೆ. ರಾಷ್ಟ್ರಸರ್ಕಾರ ಮತ್ತು ಕಮ್ಯೂನಿಸ್ಟ ಪಾರ್ಟಿ, ಇವೆರಡು ಪ್ರತ್ಯೇಕಾಂಗಗಳಾದರೂ ಪಾರ್ಟಿಯೇ ಸರ್ಕಾರದ ಚಕ್ರವನ್ನು ತಿರುಗಿಸುವುದು. ೧೯೩೪ರಲ್ಲಿ ನಡೆದ ಏಳನೇ ಕಾಂಗ್ರೆಸ್ ಸಮಾರಂಭದಲ್ಲಿ ಇವೆರಡು ಪ್ರಧಾನ ಅಂಗಗಳನ್ನು ಸಂಯೋಜಿಸಿ ಸಮಗ್ರ ಒಂದು ಅಂಗವನ್ನಾಗಿ ಮಾಡಬೇಕೆದು ನಿರ್ಣಯಿಸಿತು. ಇದರ ಪರಿಣಾಮವಾಗಿ ಪಾರ್ಟಿಯ ಪ್ರಭಾವ, ರಾಷ್ಟ್ರಾಡಳಿತಾಂಗ ಮತ್ತು ಕ್ಷೇತ್ರಗಳಲ್ಲಿ ಸಾಮಾಜಿಕ, ರಾಜಕೀಯ, ದಾರ್ಶನಿಕ ಮತ್ತು ಕಲಾಪ್ರಪಂಚದಲ್ಲಿ ವಿಶೇಷವಾಗಿ ಹೆಚ್ಚಿದೆ. ಪಕ್ಷಕ್ಕೆ ಸೇರದಿದ್ದವರ ಸಂಖ್ಯೆ ಕ್ರಮೇಣ ಕಮ್ಮಿಯಾಗುತ್ತಿದೆ. ರಾಷ್ಟ್ರದಲ್ಲೆಲ್ಲಾ ಲಕ್ಷಾಂತರ ಜನರು ಪಾರ್ಟಿಯ ಸದಸ್ಯರಾಗಿ ಸೇರುತ್ತಿದ್ದಾರೆ. ಪ್ರತಿಯೊಂದು ಕಾರ್ಖಾನೆ ಮತ್ತು ಸಂಸ್ಥೆಯಲ್ಲಿಯೂ ಆಯಾ ಸಮಿತಿಗಳ ಸದಸ್ಯನಾಗಿ ಒಬ್ಬ ಪಾರ್ಟಿಸದಸ್ಯನಿದ್ದು ಪಾರ್ಟಿಯ ಉದ್ದೇಶಗಳನ್ನು ನೆರವೇರಿಸುವಂತೆ ನಿರ್ಬಂಧಿಸುವನು. (Red Triangle)

## ರಷ್ಯದಲ್ಲಿ ಅಧಿಕಾರಿಗಳ ಪ್ರಭುತ್ವ

ರಷ್ಯದ ಮಹಾಕ್ರಾಂತಿಯಾಗುವ ಮುನ್ನ ಸುಮಾರು ಒಂದು ನೂರು ವರ್ಷ ಝಾರ್ ಸರ್ಕಾರದಲ್ಲಿ ಅಧಿಕಾರಿಗಳ ಸ್ವಚ್ಛಂದ ಪ್ರಭುತ್ವವು ಜಾರಿಯಲ್ಲಿತ್ತು; ಪ್ರಜೆಗಳ ಯಾವ ವಿಧವಾದ ನಿಯಂತ್ರಣವೂ ಇರಲಿಲ್ಲ.

ಆಡಳಿತಾಧಿಕಾರಿಗಳ ಅಂತಸ್ತುಗಳಿಂದ ಕೂಡಿತ್ತು. ಪ್ರತಿಯೊಬ್ಬ ಅಧಿಕಾರಿಯು ಒಂದು ನಿರ್ದಿಷ್ಟ ಚಿನ್ (Chin) ಅಥವಾ ಅಂತಸ್ತಿಗೆ ಸೇರಿದವನು; ಸರ್ಕಾರದ ಕೋಷ್ಟಕದಲ್ಲಿ ಮೆಟ್ಟಲಿನಿಂದ ಮೆಟ್ಟಲಿಗೆ ಏರಿ ಪ್ರಾಪ್ತ ವಯಸ್ಸಿನಲ್ಲಿ ವಿಶ್ರಾಂತಿಯನ್ನು ಹೊಂದುವನು. ಅಂತಸ್ತುಗಳು, ಬಿರುದುಗಳು, ವಿಶ್ರಾಂತಿ ವೇತನ ಮುಂತಾದ ಸೌಕರ್ಯಗಳು ಅಧಿಕಾರ ವರ್ಗವನ್ನು ಸಾಮಾನ್ಯ ಪ್ರಜೆಗಳಿಂದ ಪ್ರತ್ಯೇಕಿಸಿ ಒಂದು ನೌಕರಶಾಹಿ ಅಥವಾ ನೌಕರರ ಸ್ವಚ್ಛಂದಾಧಿಕಾರಕ್ಕೆ ಮಾರ್ಗವಾಗಿದ್ದವು. ಪ್ರಾಂತೀಯ ಸಭೆಗಳು ಈ ಅಧಿಕಾರಿಗಳನ್ನು ನಿಯಂತ್ರಣದಲ್ಲಿಡಲು ಮಾಡಿದ ಪ್ರಯತ್ನಗಳು ಸಫಲವಾಗಿದ್ದವು. ಜನವರಿ ೧೯೧೮ ರಲ್ಲಿ ಸೋವಿಯಟ್ ಸರ್ಕಾರವು ಔದ್ಯೋಗಿಕ ಕೇಂದ್ರಗಳನ್ನು, ಬ್ಯಾಂಕುಗಳನ್ನು ರಾಷ್ಟ್ರೀಯುತವಾಗಿ ಮಾಡಿತು. ರಾಷ್ಟ್ರದ ಸಮಸ್ತ ಕಾರ್ಖಾನೆಗಳು, ಉದ್ಯೋಗ ಕೇಂದ್ರಗಳು, ಮತ್ತು ಇತರ ಸಾಮಾಜಿಕ ವ್ಯವಹಾರ ಸಂಸ್ಥೆಗಳನ್ನು ಶಿಸ್ತಿನಲ್ಲಿಟ್ಟು ಅವುಗಳ ಕಾರ್ಯವನ್ನು ಪರಿಶೀಲಿಸಲು ಒಂದು ಪರಮಾಧಿಕಾರವುಳ್ಳ ಆರ್ಥಿಕ ಸಮಿತಿಯನ್ನು (Supreme Economic Council) ಏರ್ಪಡಿಸಲಾಯಿತು. ಕಾರ್ಮಿಕರ ಸಂಖ್ಯೆ ೩೦ ಲಕ್ಷಕ್ಕೆ ಏರಿತು; ಅಧಿಕಾರಿಗಳೇ ೨೦ ಲಕ್ಷ; ಎಲ್ಲಾ ಸಮಾಜ ಸಮಸ್ತ ವಸ್ತು ಸೃಷ್ಟಿಗೆ ಮೂಲಭೂತವಾದ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ೮೦ ಲಕ್ಷವಾಯಿತು. ಆದರೆ ರೈತ ಜನಾಂಗದಿಂದ ಕಾರ್ಮಿಕರನ್ನು ಆರಿಸುತ್ತಿದ್ದರಿಂದ ವಸ್ತು ಉತ್ಪಾದನೆಯು ಸಾಕಷ್ಟು ಆಗದೆ ಆರ್ಥಿಕ ಆಂದೋಲನಗಳುಂಟಾಗಿ ಅನೇಕ ಕೂಲಿಕಾರರು ಅನಾದಿಯಿಂದ ಬಂದ ವ್ಯವಸಾಯ ಕೆಲಸಕ್ಕಾಗಿ ಹಿಂತಿರುಗಿದರು. ಇದರ ಪರಿಣಾಮವಾಗಿ ವಸ್ತು ಉತ್ಪಾದನ ಮತ್ತು ವಸ್ತು ವಿನಿಮಯ ಸಂಸ್ಥೆಗಳ ಶಕ್ತಿ ಪತನವಾಗಿ ಸರ್ಕಾರವು ಆರ್ಥಿಕ ಗೊಂದಲದಲ್ಲಿ ಸಿಕ್ಕಿತು. ಔದ್ಯೋಗಿಕ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರೂ ಸರ್ಕಾರದ ಅಧೀನದಲ್ಲಿದ್ದ ೩೫ ಲಕ್ಷ ಅಧಿಕಾರಿ ವರ್ಗದವರೂ ರೈತರು ಬೆಳೆದ ಅಲ್ಪಸ್ವಲ್ಪ ಆಹಾರವನ್ನು ಹಂಚಿಕೊಳ್ಳಬೇಕಾಯಿತು.

ಫುಡ್ ಆರ್ಮಿ ಇಲಾಖೆಯು (Department of the Food Army) ೭೫ ಜನರಿಂದಲೂ, ಮೂರು ಮೆಷಿನ್‌ಗನ್‌ಗಳಿಂದಲೂ ಕೂಡಿದ ದಳ ವಿಭಾಗಗಳನ್ನು ರಚಿಸಿ ರೈತರಿಂದ ನಿರ್ಬಂಧವಾಗಿ ಆಹಾರ ಪದಾರ್ಥ ಗಳನ್ನು ಕಸಿದುಕೊಳ್ಳಬೇಕಾಯಿತು. ಬೆಳೆಯು ಕಮ್ಮಿಯಾಗಿ ಸರ್ಕಾರವು ರೈತ ಜನಾಂಗದೊಡನೆ ಪೇಟೆಗಳಲ್ಲಿ ರೈತರು ಬೆಳೆದ ಆಹಾರ ಪಧಾರ್ಥಗಳ ಬದಲಾಗಿ ಅವರಿಗೆ ಬೇಕಾದ ಕೈಗಾರಿಕೆ ಸಾಮಾನುಗಳನ್ನು ವಿನಿಮಯ ಮಾಡುವ ಒಡಂಬಡಿಕೆಯಾಯಿತು. ಲೆನಿನ್ ಸ್ಥಾಪಿಸಿದ ಈ ನವೀನ ಆರ್ಥಿಕ ನೀತಿ ( New Economic Policy ) ಯ ಪ್ರಕಾರ ಸಹಕಾರ ಸಂಘಗಳಿಗೂ ಮತ್ತು ವೈಯಕ್ತಿಕ ವ್ಯವಹಾರಗಳಿಗೂ ಆಸ್ಪದವಾಯಿತು. ಕೆಲವು ವ್ಯಾಪಾರಕ್ಕೂ ರಾಷ್ಟ್ರೀಯ ಕೈಗಾರಿಕೆಗಳನ್ನು ಮಾತ್ರ ನಿಯಂತ್ರಿಸಿ ಮಿಕ್ಕ ಸ್ವಂತ ಕೈಗಾರಿಕೆ ಮತ್ತು ಸಂಸ್ಥೆಗಳ ಹುಟ್ಟುವಳಿಯಲ್ಲಿ ಶೇಕಡಾ ೨೦ ರಷ್ಟು ಸರ್ಕಾರಕ್ಕೆ ಒಪ್ಪಿಸಬೇಕೆಂದು ಆಜ್ಞೆಯಾಯಿತು. ಸರ್ಕಾರವೇ ಬಂಡ ವಾಳಗಾರನಾಗಿ ಬ್ಯಾಂಕುಗಳನ್ನು ರಚಿಸಿ ಹೊಸದಾಗಿ ಸ್ಥಾಪಿತವಾಗುವ ಕೈಗಾರಿಕೆಗಳಿಗೆ ಹಣವನ್ನು ಒದಗಿಸಲು ಏರ್ಪಾಡುಗಳನ್ನು ಮಾಡಿತು.

ಈ ವಿಧವಾದ ನೀತಿ ಪರಿಪಾಲನೆಯಿಂದ ರಾಷ್ಟ್ರಕ್ಕೆ ಹೆಚ್ಚು ಪ್ರಯೋ ಜನವಾಗಲಿಲ್ಲ. ಶ್ರೀಮಂತ ರೈತರು ( Kulaks ) ಮತ್ತು ಸಣ್ಣ ಕಾರ್ಖಾನೆಗಳ ಮಾಲೀಕರು ( Nepmen ) ಪ್ರಗತಿ ಹೊಂದಿ ರಾಷ್ಟ್ರದ ಹುಟ್ಟುವಳಿಯನ್ನು ಮುಂದುವರಿಸಿದರೂ ರೈತರನ್ನು ಸಮಾಧಾನಗೊಳಿಸಿ ಮೂಲಭೂತ ಕೈಗಾರಿಕೆಗಳಿಗೂ ಮತ್ತು ಕಾರ್ಖಾನೆಗಳಿಗೂ ( Primary and Secondary Industries) ನಿಕಟ ಸಂಬಂಧವನ್ನು ಬೆಳೆಸಿ ಈ ದ್ವಿವಿಧ ವರ್ಗಗಳೊಡನೆ ಸಹಕರಿಸಿದರೆ ರಾಷ್ಟ್ರಹಿತ ಸಾಧನೆಗಾಗಿ ಸಮಾಜ ವಾದವು ಸಿದ್ಧಿಯಾಗುವುದು. ಇದಕ್ಕಾಗಿ ನಾಡೆಲ್ಲ ಕೈಗಾರಿಕೆ ಮತ್ತು ಉದ್ಯಮಗಳಿಂದ ನಾಗರಿಕವಾಗಬೇಕು. ಸಣ್ಣ ಭೂಮಿಯ ಸಾಗುವಳಿಯು ವಿದ್ಯುಚ್ಛಕ್ತಿ ಮತ್ತು ಕಾರ್ಖಾನೆಯ ಉತ್ಪಾದನಾ ವಸ್ತುಗಳ ಸಹಾಯ ದಿಂದ ನಡೆದು ರಾಷ್ಟ್ರದಲ್ಲಿ ಪ್ರಧಾನ ಕೈಗಾರಿಕೆಯಾಗಬೇಕೆಂದು ಲೈನಿನ್‌ನು

ಘೋಷಿಸಿದನು. '೧೯೧೭ರಲ್ಲಿ ಪರಿಸ್ಥಿತಿಯು ಪರಿಪಕ್ವವಾಗಿದೆ. ಮಹಾ ಕ್ರಾಂತಿಯಿಂದ ಸಮಾಜ ನೂತನ ಸೃಷ್ಟಿಯನ್ನು ಮಾಡಬಹುದೆಂದು ನಿರ್ಧರಿಸಿದ ಲೆನಿನ್‌ನ ಮಹತ್ವಾಕಾಂಕ್ಷೆಯ ಸಮಾನವಾದ ನಿರ್ಧಾರ ಸ್ಟಾಲಿನ್ನದು' ಎಂದು ಒಬ್ಬ ಪ್ರಸಿದ್ಧ ರಾಜನೀತಿಜ್ಞನು ಹೇಳಿದ್ದಾನೆ.

ನಾಡಿನಲ್ಲೆಲ್ಲಾ ಕಾರ್ಖಾನೆಗಳನ್ನು ಸ್ಥಾಪಿಸುವುದರ ಸಲುವಾಗಿ ಐದು ವರ್ಷದ ಯೋಜನೆಯನ್ನು ೧೯೨೮ರಲ್ಲಿ ಮಾಡಲಾಯಿತು. ೧೯೩೨ರೊಳಗಾಗಿ ⅔ ಭಾಗ ರೈತರ ಭೂಮಿಯೆಲ್ಲವೂ ಕೊಲೋಜ್ (Kolhoze) ಸಾಮುದಾಯಿಕ ಕೃಷಿಕ್ಷೇತ್ರಗಳಾಗಿ ಪರಿವರ್ತನೆಯಾದವು. ಕೈಗಾರಿಕೆಯಿಂದ ವಸ್ತುಗಳು ವಿಶೇಷವಾಗಿ ತಯಾರಾದವು; ಹತ್ತಿ ಬಟ್ಟೆಗಳು ಹೆಚ್ಚು ತಯಾರಾಗಲಿಲ್ಲ. ರೈಲ್ವೆರಚನೆ ಮತ್ತು ಏರ್ಪಾಡುಗಳು ಅಷ್ಟು ಸಮರ್ಪಕವಾಗಿರಲಿಲ್ಲವಾದುದರಿಂದ, ನಗರಗಳಿಗೆ ಆಹಾರ ಪದಾರ್ಥಗಳು, ಕಾರ್ಖಾನೆ ಕೇಂದ್ರಗಳಿಗೆ ಬೇಕಾದ ಕಚ್ಚಾಮಾಲುಗಳು ಸಕಾಲದಲ್ಲಿ ಸೇರಲು ಅಡ್ಡಿಯಾಗಿ ಔದ್ಯೋಗಿಕ ಪ್ರಗತಿಗೆ ಅಡಚಣೆಯಾಯಿತು. ಆದರೂ ಮುಖ್ಯವಾದ ಕಾರ್ಖಾನೆ ಮತ್ತು ರಾಷ್ಟ್ರ ಕೆಲಸಗಳು ಐದು ವರ್ಷಗಳಲ್ಲಿ ಈ ರೀತಿಯಾಗಿ ನಡೆದವು: ನೀಪರ್ ಡ್ಯಾಂ ಮತ್ತು ಹೈಡ್ರೊ-ಎಲೆಕ್ಟ್ರಿಕ್ ಪ್ಲಾಂಟ್, ಬಾಲ್ಟಿಕ್ ಪುಟಸೀ ಕಾಲುವೆ, ಕಬ್ಬಿಣ ಕಾರ್ಖಾನೆಗಳು, ಟ್ರ್ಯಾಕ್ಟರ್ ಪ್ಲಾಂಟು ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಕಾರ್ಖಾನೆಗಳು. ೧೯೩೨-೩೭ ಮತ್ತು ೧೯೩೭-೪೨ರ ಎರಡನೆಯ ಮತ್ತು ಮೂರನೆಯ ಐದುವರ್ಷ ಯೋಜನೆಯಲ್ಲಿ ರೈಲ್ವೆಗಳಿಗೆ, ಬಟ್ಟೆ, ಸಕ್ಕರೆ, ಆಹಾರ ಪದಾರ್ಥಗಳ, ಗ್ಲಾಸ್ ಮತ್ತು ಮಣ್ಣಿನ ಸಾಮಾನುಗಳ ತಯಾರಿಕೆಗಾಗಿ ಹೆಚ್ಚು ಹಣವನ್ನು ಮೀಸಲಾಗಿ ಇಡಲಾಯಿತು.

U. S. S. R. ನಲ್ಲಿ ಸೋಷಿಯಲಿಸ್ಟ್ ಸರ್ಕಾರವು ಎಲ್ಲಾ ಇಲಾಖೆಗಳಿಗಿಂತಲೂ ವ್ಯವಸಾಯ ಇಲಾಖೆಯನ್ನು ಮುಂದುವರಿಸಿ ಆಹಾರ ಉತ್ಪತ್ತಿ ಮತ್ತು ಸದ್ವಿನಿಯೋಗದಲ್ಲಿ ಅತ್ಯಂತ ಮಹತ್ವಪೂರಿತವಾದ ಕೆಲಸವನ್ನು ಮಾಡಿದೆ. ೧೯೧೭ರಲ್ಲಿ ಜಮೀನುದಾರರಿಂದ ಭೂಮಿಯನ್ನು

ಕಸಿದುಕೊಳ್ಳಲಾಯಿತು. ಬಡಬಗ್ಗರ ಸಮಿತಿಗಳು ಮತ್ತು ಸರ್ಕಾರದ ಬಂಜಲಭೂಮಿಯನ್ನು ಸಾರ್ವಜನಿಕ ಸಾಗುವಳಿಗಾಗಿ ಬಿಟ್ಟು ಕೊಟ್ಟರು. ಕಮ್ಯುನಿಸ್ಟಿಕ್ ಕೃಷಿಕ್ಷೇತ್ರಗಳಿಗಾಗಿ ರಾಷ್ಟ್ರ ಪ್ರಜೆಗಳ ಆಹಾರಕ್ಕೆ ಬೇಕಾಗುವಷ್ಟು ಬೆಳೆಯಲು ಸಾಗುವಳಿಯ ಪದ್ಧತಿಗಳನ್ನು ಮಾರ್ಪಾಡು ಮಾಡಲಾಯಿತು. ೧೯೩೪ರಲ್ಲಿ ೨,೨೨,೫೦೦ ಕಮ್ಯುನಿಸ್ಟ್ ಸಾಮೂಹಿಕ ಕೃಷಿ ಕ್ಷೇತ್ರಗಳು ಸುಮಾರು 1½ ಕೋಟಿ ಸಣ್ಣ ಸಣ್ಣ ಸ್ವಕೀಯ ರೈತರ ಭೂಮಿಯನ್ನೊಳಗೊಂಡು ಹದಿನಾರು ಕೋಟಿ ಪ್ರಜೆಗಳಿಗೆ ಅಗತ್ಯವಾಗಿ ಬೇಕಾದ ಧಾನ್ಯಾದಿಗಳನ್ನು ಒದಗಿಸಿತು.

ಈ ರೀತಿ ಆಹಾರ ಸರಬರಾಯಿ ಮತ್ತು ವಿನಿಮಯದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದವು, ಕೇಂದ್ರ ಸರಬರಾಯಿ ಇಲಾಖೆಗಳು. ಮಾಸ್ಕೋ ಪಟ್ಟಣದಲ್ಲಿರುವ ಎರಡು ಮೋಡಿಖಾನೆಗಳಲ್ಲಿ (Commissariats) ಒಂದು ರಾಷ್ಟ್ರ ಸರಬರಾಯಿ ಇಲಾಖೆಗಳನ್ನೊಳಗೊಂಡ ಸೋವಿಯಟ್ ಯೂನಿಯನ್ನಿನ ಜಾಯಿಂಟ್ ಸರಬರಾಯಿ ಇಲಾಖೆ (Joint Commissariats of the Soviet Union) ಇನ್ನೊಂದು ಫೆಡರೇಟೆಡ್ ಗಣರಾಷ್ಟ್ರಗಳ ಕಮಿಸರಿಯಟ್ (Commissariat of the Russian Federated Republic). ಕಾರ್ಮಿಕರ ಮತ್ತು ರೈತರ ಇನ್ಸ್ಪೆಕ್ಟರೇಟ್, ಆರ್ಥಿಕ, ಬೇಕಾದ ವಸ್ತುಸಂಗ್ರಹ, ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ, ನ್ಯಾಯಾಂಗ, ಸೋಷಿಯಲ್ ವಿಮೆ, ಕಾರ್ಮಿಕ ಮತ್ತು ಸಾರ್ವಜನಿಕ ವೆಚ್ಚ ನಿರ್ವಾಹಕ ಕೆಲಸಗಳು-ಇವುಗಳ ಪರಿಶೀಲನೆಯೂ ಈ ಇಲಾಖೆಗಳ ಕರ್ತವ್ಯ. U. S. S. R. ನ ಐರೋಪ್ಯ ಭಾಗವನ್ನು ಹನ್ನೆರಡು ಮತ್ತು ಏಷ್ಯಾ ಭಾಗವನ್ನು ಎಂಟು ಆರ್ಥಿಕ ಕ್ಷೇತ್ರಗಳನ್ನಾಗಿ (Economic Regions) ಗೆಸ್‌ಪ್ಲಾನ್ Gesplan ಯೋಜನೆಯೂ ವಿಭಾಗಿಸಿತು. ಇವು ರಾಜಕೀಯ ವಿಭಾಗಗಳಿಗೆ ಹೋಲುವುದಿಲ್ಲ. ನೂರಾರು ಅರಿತ ವಿಜ್ಞಾನಸ್ಥರು (Statistical Officers) ದೇಶದ ಧಾನ್ಯ ಮುಂತಾದ ಅವಸ್ಥಾ ವಿಶೇಷಗಳ ಅಂಕಿ, ಸಂಖ್ಯೆಗಳ ಟಿಪ್ಪಣಿಗಳನ್ನು ತಯಾರು ಮಾಡಿ

ವ್ಯವಸಾಯ ಮತ್ತು ಸರಬರಾಯಿ ಇಲಾಖೆಗಳು ಆಯಾ ಆರ್ಥಿಕ ಕ್ಷೇತ್ರಗಳ ಅಗತ್ಯಗಳಿಗೆ ಸುಗಮವಾಗಿ ಹೆಚ್ಚು ಕಡಿಮೇ ಧಾನ್ಯಾದಿಗಳನ್ನು ಸರಬರಾಯಿ ಮಾಡಲು ಸಹಕರಿಸುವರು. ಬೆಳೆಗಳನ್ನು ಹೆಚ್ಚಿಸುವ ವಿಧಾನಗಳನ್ನು ಸೂಚಿಸಲು ಅನೇಕ ವಿಶಿಷ್ಟ ವಿಜ್ಞಾನಮಂದಿರಗಳು ಪ್ರತಿ ಮೂರು ಪಟ್ಟಣಗಳಲ್ಲಿಯೂ ಸ್ಥಾಪಿಸಲ್ಪಟ್ಟಿವೆ. ಡೇರಿ ಹಾಲು, ಬೆಣ್ಣೆ, ಮಾಂಸ, ಮೀನು, ಎಣ್ಣೆ, ಸಕ್ಕರೆ ಮುಂತಾದ ಅತ್ಯಾಗತ್ಯ ಆಹಾರ ಪದಾರ್ಥಗಳನ್ನು ಪರಿಶೋಧಿಸಿ ಹೆಚ್ಚು ಉತ್ಪತ್ತಿಗೆ ಕಾರಣವಾಗುವ ಮೂಲಭೂತ ವಿಧಾನ ತೋರಿಸುವ ಸಂಸ್ಥೆಗಳ ಅಡಿಗಲ್ಲಾಗಿವೆ. ಸಾಮೂಹಿಕ ಕೃಷಿಕ್ಷೇತ್ರಗಳು ತಮಗೆ ನಿರ್ದಿಷ್ಟವಾದ ಬೆಳೆಯನ್ನು ತೆಗೆದು ಅಲ್ಪ ಭಾಗವನ್ನು ಕಂದಾಯ ರೂಪವಾಗಿ ಸರ್ಕಾರಕ್ಕೆ ಕೊಟ್ಟು ಮಿಕ್ಕದ್ದನ್ನು ಕನ್ಸೂಮರ್ ಸಹಕಾರ ಸಂಘಗಳ ಮೂಲಕ ಮಾರಿಸಬಹುದು. ಈ ಆರ್ಥಿಕ ಕ್ಷೇತ್ರಗಳ ಸಮಿತಿಗಳು ಕೇಳಿದಷ್ಟು ಬೆಳೆಯನ್ನು ಬೆಳೆಸುವುದರಲ್ಲಿ ತಮಗೆ ಅಗತ್ಯವಾಗಿ ಬೇಕಾದ ಬಿತ್ತಗಳನ್ನೂ ಯಂತ್ರೋಪಯಂತ್ರಗಳನ್ನೂ, ಫಲವತ್ತು ಮಾಡುವ ರಸಾಯನಿಕ ಪದಾರ್ಥಗಳನ್ನೂ, ಸ್ಟೇಟ್ ಬ್ಯಾಂಕುಗಳಿಂದ ಸಾಲವನ್ನೂ, ಸರ್ಕಾರದಿಂದ ಪಡೆಯಬಹುದು. ೩೦೦೦ ಮೆಷಿನ್ ಟ್ರ್ಯಾಕ್ಟರ್ ಸ್ಟೇಷನ್‌ಗಳನ್ನು (Machine Tractor Stations) ರಾಷ್ಟ್ರದಲ್ಲಿ ಸ್ಥಾಪಿಸಲಾಗಿದೆ. ಭಾರವಾದ ಟ್ರ್ಯಾಕ್ಟರ್ ಯಂತ್ರಗಳನ್ನು ಆಗಿಂದಾಗ್ಗೆ ಕೃಷಿಕ್ಷೇತ್ರಗಳಿಗೆ ಕೊಡಲಾಗುವುದು. ಹಾಗೆಯೇ ಯಂತ್ರ ಶಾಸ್ತ್ರಜ್ಞರೂ, ಸುಶಿಕ್ಷಿತ ಯಂತ್ರ ಸಾರಥಿಗಳೂ, ವ್ಯವಸಾಯ ಶಾಸ್ತ್ರಜ್ಞರೂ (Agronomists) ಭೂಮಿಗಳಿಗನುಗುಣವಾಗಿ ರಸಾಯನಿಕ ಪದಾರ್ಥಗಳನ್ನು ಸರಬರಾಯಿ ಮಾಡುವ ರಸಾಯನಿಕ ಪ್ರಯೋಗಶಾಲೆಗಳೂ, ಅಗತ್ಯವಾಗಿ ಬೇಕಾದ ಸಲಹೆಗಳನ್ನು ಕೊಡುವವು. ಸರ್ಕಾರಿ ಅಧಿಕಾರಿಗಳು ಬಿತ್ತನೆ, ದನಕರುಗಳ ಆರೋಗ್ಯ ಸ್ಥಿತಿ, ಕ್ಷೇತ್ರಗಳಿಗೆ ಪ್ರಜಾನುಕೂಲಗಳು ತೃಪ್ತಿಕರವಾಗಿರುವಂತೆ ಪ್ರತಿಯೊಂದು ಕೃಷಿ ಕ್ಷೇತ್ರವನ್ನೂ, ಯಂತ್ರೋಪಯಂತ್ರಗಳನ್ನೂ ಕೂಲಿ ಕೆಲಸಗಾರರ ವಸತಿಗಳನ್ನೂ, ಅವರಿಗೆ ವೇತನರೂಪದಲ್ಲಿ

ಸಲ್ಲುವ ಆಹಾರ ಪದಾರ್ಥಗಳನ್ನೂ ಪರಿಶೀಲಿಸುವರು.*

ಸಮಸ್ತ ವ್ಯವಸಾಯ ಸಂಶೋಧನೆ ಇಲಾಖೆಗಳು ಮಾಸ್ಕೋವಿನಲ್ಲಿರುವ ವಸ್ಕನಿಲ್ (Vakhnil) ವಿಜ್ಞಾನ ಇಲಾಖೆಗೆ (All Union Lenin Academy of Agricultural Science) ಅಧೀನ ಸಂಸ್ಥೆಗಳಲ್ಲಿ ಮುಖ್ಯವಾದುವು. ಭೂಮಿ ಪರಿಶೋಧನೆ, ಹೊಗೆಸೊಪ್ಪು, ಹತ್ತಿ ಮುಂತಾದ ಸಂಶೋಧನ ಇಲಾಖೆಗಳು ಸರಟೋವ್, ಸುಕುಂ ಟಾಸಕೆಂಟ್ ಮುಂತಾದ ಪಟ್ಟಣಗಳಲ್ಲಿವೆ.

U.S.S.R. ರಾಷ್ಟ್ರವು ಯುದ್ಧದ ಭಯಂಕರ ಪರಿಸ್ಥಿತಿಯಲ್ಲಿ ಶತ್ರುವಿನ ಅಗಾಧ ಸೈನಿಕ ಮತ್ತು ಯಂತ್ರಬಲವನ್ನು ತಡೆದು ಆಕ್ರಮಿತ ಪ್ರದೇಶಗಳಿಂದ ಶತ್ರುವನ್ನು ದೂಡಿ ಈಗ ಶತ್ರುವಿನ ರಾಷ್ಟ್ರಾಕ್ರಮಣದಲ್ಲಿ ನಿರತರಾಗಿರುವುದು ಪ್ರಪಂಚವನ್ನೇ ಮುಗ್ಧಗೊಳಿಸಿದೆ. ಯುದ್ಧದ ಪೂರ್ವ

---

* ಸಾಧಾರಣವಾಗಿ ಒಬ್ಬ ಕೂಲಿಕಾರನಿಗೆ ದಿನಕ್ಕೆ ೭ ಪೌಂಡು ಧಾನ್ಯ, ೧೦ ಪೌಂಡು ಆಲುಗೆಡ್ಡೆ, ೧೬ ಪೌಂಡು ಹುಲ್ಲು, ೬ ಪೌಂಡು ತರಕಾರಿ ಸಾಲುತ್ತದೆ.

ಯುಕ್ರೇನಿನ ಕೃಷಿ ಕ್ಷೇತ್ರಗಳ (ಧಾನ್ಯ ವಿನಿಮಯ)
ಈ ರೀತಿಯಾಗಿರುವುದು.

| | |
|---|---|
| ೨೬·೬ | ಸರ್ಕಾರದ ಕಂದಾಯ. |
| ೮·೬ | ಯಂತ್ರೋಪಯಂತ್ರಗಳ ಸರಬರಾಯಿಗಾಗಿ. |
| ೨·೫ | ಬಿತ್ತ ಸರಬರಾಯಿ ಸರ್ಕಾರಕ್ಕೆ ರೀಫಂಡ್ ಸಂಚಿಕೆ ನಿಧಿಗೆ. |
| ೧೪·೫ | ಬಿತ್ತದ ಫಂಡ್. |
| ೧೩·೮ | ಗ್ರಾಸ ಮತ್ತು ಮೇಲಿನ ಸಂಚಿತ ನಿಧಿಗೆ. |
| ೩೪·೦ | ಕೃಷಿ ಕ್ಷೇತ್ರಗಳ ಸದಸ್ಯರ ವಿನಿಯೋಗಕ್ಕಾಗಿ. |
| ೧೦೦·೦ | |

ಭಾವಿಯಾಗಿ ಸ್ಥಾಪಿಸಲಾಗಿದ್ದ ಅನೇಕ ಕಾರ್ಖಾನೆಗಳು ಪ್ರಚಲಿತ ಪರಿಸ್ಥಿತಿಯಲ್ಲಿ ಸೈಬೀರಿಯಾ ಮತ್ತು ಯುರಲ್ಸ ಪ್ರದೇಶಗಳಿಗೆ ವರ್ಗಾಯಿಸಲ್ಪಟ್ಟಿವೆ. ಮಾಸ್ಕೋ, ಕಾರ್‍ಕಾಲ್, ಲೆನಿನ್‌ಗ್ರಾಡ್ ಪಟ್ಟಣಗಳು ವಿದ್ಯುಚ್ಛಕ್ತಿ, ಎಂಜಿನಿಯರಿಂಗ್, ಹಡಗುಗಳ ನಿರ್ಮಾಣ, ಮತ್ತು ಭಾರಿಯಂತ್ರಗಳ ತಯಾರಿಕೆಗಳಿಗೆ ಪ್ರಸಿದ್ಧವಾಗಿವೆ. ಸೈಬೀರಿಯಾದಲ್ಲಿನ ಕಸ್ನಟೆಸ್ಕ್ ಬೇಸಿನ್ (Kusnetak Basin) ಮತ್ತು ಡೋನೆಟ್ ಬೇಸಿನ್ (Donetz Basin) ಕಲ್ಲಿದ್ದಲಿಗೂ ಆಟ್ಟೆಯು ಮತ್ತು ಯುರಲ್ಸ ಪರ್ವತಗಳ ತಪ್ಪಲು ಕಬ್ಬಿಣಕ್ಕೂ ಬಾಲ್ಕಸ್ ಸರೋವರದ ಮತ್ತು ಯುರಲ್ಸಿನ ತಪ್ಪಲುಗಳು ತಾಮ್ರಕ್ಕೂ, ಬಾಕೂ ಎಣ್ಣೆಗೂ, ನೀಪರ್, ವೊಲ್ಗಾ ಕಾಕಸಸ್, ಅಂಗರ, ಏನಿಸೆ, (Yenesai) ಹೈಡ್ರೋಇಲೆಕ್ಟ್ರಿಕ್ ಯೋಜನೆಗಳಿಗೂ ಅತ್ಯಂತ ಪ್ರಸಿದ್ಧವಾಗಿವೆ. ಯಂತ್ರೋಪಕರಣಗಳನ್ನು, ಕಚ್ಚಾ ಮಾಲುಗಳನ್ನು, ಒಂದು ಪ್ರದೇಶದಿಂದ ಮತ್ತೊಂದಕ್ಕೆ ಸಾಗಿಸುವುದಕ್ಕೆ ಸಾಕಾಗುವಷ್ಟು ವಾಹನಾದಿಗಳು ಇಲ್ಲದಿರುವುದರಿಂದ ಮತ್ತು ರೈಲ್ವೆ ಖರ್ಚನ್ನು ಕಡಿಮೆ ಮಾಡುವುದಕ್ಕೂ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಿಕ್ಕುವ ಖನಿಜ ಮುಂತಾದುವುಗಳನ್ನು ಅಲ್ಲಿಯೇ ಕಾರ್ಖಾನೆಗಳಲ್ಲಿ ತಯಾರು ಮಾಡಿ ಇತರ ಪ್ರದೇಶಗಳಿಗೆ ಸಾಗಿಸುವುದರಿಂದ ರಾಷ್ಟ್ರದ ಆರ್ಥಿಕಸ್ಥಿತಿಯು ಉತ್ತಮಗೊಳ್ಳುವದೆಂದು ಭಾವನೆ. ಪ್ರಜಾ ಸಂಖ್ಯೆ ಶೇಕಡ ೧೬ ರಂತೆ ಏರಿದೆ; ಹತ್ತು ಲಕ್ಷ ಪ್ರಜೆಗಳ ಪಟ್ಟಣಗಳು ಒಂಬತ್ತು, ಒಂದು ಲಕ್ಷದಿಂದ ಐದು ಲಕ್ಷ ಪ್ರಜೆಗಳುಳ್ಳ ಪಟ್ಟಣಗಳು ಎಪ್ಪತ್ತು. ಮಾಸ್ಕೋ ಪಟ್ಟಣದಲ್ಲಿ ೪೦ ಲಕ್ಷ, ಲೆನಿನಗ್ರಾಡ್ ಪಟ್ಟಣದಲ್ಲಿ ೩೦ ಲಕ್ಷ ಪ್ರಜೆಗಳಿದ್ದಾರೆ.

ಪ್ರಚಲಿತ ಪ್ರಪಂಚದಲ್ಲಿ ಬೆಳೆದುಬಂದಿರುವ ಇಸ್ಲಾಮಿಕ್, ಹಿಂದೂ, ಕ್ರೈಸ್ತ ಸಂಸ್ಕೃತಿಗಳಲ್ಲಿಲ್ಲದಿರುವಂತಹ ಮಹತ್ವಾಕಾಂಕ್ಷೆಯಿಂದ ಕೂಡಿರುವ ನವೀನ ಸಂಸ್ಕೃತಿ, ರಷ್ಯದಲ್ಲಿ ಆವಿರ್ಭವಿಸಿದೆ. ಎಲ್ಲಾ ಸಂಸ್ಕೃತಿಗಳಲ್ಲಿಯೂ ಬಂಡವಾಳತನದ ಪದ್ಧತಿ ಜಾರಿಯಲ್ಲಿದೆ. ಭಯಂಕರ ಸ್ಪರ್ಧೆ ಪ್ರತಿಸ್ಪರ್ಧೆಗಳು, ಲಾಭವೇ ಸಮಾಜದ ಅಂತಿಮ ಗುರಿಯಾದುದ

ರಿಂದ ಶ್ರಮಜೀವಿಗಳ ಶೋಷಣ, ಅತಿರಿಕ್ತ ಉತ್ಪಾದನೆ ಅದರ ಪರಿಣಾಮ ವಾಗಿ ಸಮಾಜದಲ್ಲಿ ಆರ್ಥಿಕ ಗೊಂದಲ ಮತ್ತು ಬಹುಸಂಖ್ಯಾತ ವರ್ಗಗಳ ಶೋಚನೀಯ ಪರಿಸ್ಥಿತಿ, ಅಂತರ್ರಾಷ್ಟ್ರೀಯ ಮಂಡಿಗಳಿಗಾಗಿ ಭೇಟಿ, ಆರ್ಥಿಕ ಮತ್ತು ರಾಜಕೀಯ ಪ್ರಭಾವ ಕ್ಷೇತ್ರಗಳ ಹತೋಟಿಗಾಗಿ ಸ್ಪರ್ಧೆ–ಇವು ಬಂಡವಾಳತನದ ಕುರುಹುಗಳು. ಬಂಡವಾಳ ಸಂಸ್ಕೃತಿಯಲ್ಲಿ ವ್ಯಕ್ತಿವಾದ ಪ್ರಾಧಾನ್ಯ. ಉಪಯುಕ್ತ ವಸ್ತುಗಳ ತಯಾರಿಕೆಗಾಗಿ ಯಂತ್ರಗಳ ಉತ್ಪಾದನೆ, ಮತ್ತು ಅವುಗಳನ್ನು ಹೆಚ್ಚು ಲಾಭ ಪಡೆಯುವುದಕ್ಕಾಗಿ ಸಾಧನಗಳನ್ನಾಗಿ ಉಪಯೋಗಿಸುವುದು, ಐಚ್ಛಿಕವಾಗಿ ಮಾಲಿಕರು ಕಾರ್ಖಾನೆಗಳನ್ನು, ಖನಿಗಳನ್ನು ಮುಚ್ಚುವುದು ಉಪಯುಕ್ತ ವಸ್ತು ತಯಾರಿಕೆಯನ್ನು ನಿಲ್ಲಿಸುವುದು, ಬಹುಧಾನ್ಯ ಸಂವತ್ಸರದಲ್ಲಿ 5 ಲಕ್ಷ ಕುರಿ, 60 ಲಕ್ಷ ದನ, 2½ ಕೋಟಿ ಚೀಲ ಕಾಫಿ ಬೀಜವನ್ನು ಹಾಳುಮಾಡಿದಂತೆ ಹೆಚ್ಚಾದಾಗ ಫಸಲುಗಳನ್ನು ನಾಶಮಾಡುವುದು ವ್ಯಕ್ತಿವಾದದ ಚಿನ್ಹೆ. ಸಾಮೂಹಿಕ ಉತ್ಪಾದನೆಯಿದ್ದರೂ ವ್ಯಕ್ತಿಗೆ ಅಗತ್ಯವಾಗಿ ಬೇಕಾದ ಉಪ ಯುಕ್ತ ವಸ್ತುಗಳ ನಿರ್ಮಾಣವನ್ನು ನಿಧಾನಿಸಿ, ಬಂಡವಾಳವನ್ನು ಮತ್ತು ವೈಜ್ಞಾನಿಕರು ಸೃಷ್ಟಿಸಿದ ಯಂತ್ರಗಳನ್ನು ಸ್ವಕೀಯ ಅಭ್ಯುದಯಕ್ಕಾಗಿ ಶ್ರೀಮಂತರು ಉಪಯೋಗಿಸಿಕೊಳ್ಳುತ್ತಿರುವುದರ ನಿದರ್ಶನಗಳನೇಕವಿವೆ. ಇಂತಹ ಪರಿಸ್ಥಿತಿಯಲ್ಲಿ ನ್ಯಾಯ, ಧರ್ಮ, ಸ್ವತಂತ್ರ ಪರಿಪೂರ್ಣತೆ, ಸಾಮ್ಯತೆಗಳಿಗೆ ಅವಕಾಶವಿಲ್ಲದಂತಾಗುವುದೆಂದು ಸಮಾಜವಾದಿಗಳು ಹೇಳುತ್ತಿದ್ದಾರೆ.

U.S.S.R. ನಲ್ಲಿ ಸಮುದಾಯಸಂಸ್ಥಾನ ಸ್ಪರ್ಧೆಗಳ ಬದಲಾಗಿ ರಾಷ್ಟ್ರ ಯೋಜನೆ, ವ್ಯಕ್ತಿವಾದದ ಬದಲು ಸಮಾಜವಾದ, ವೈಯಕ್ತಿಕ ಸಂಪತ್ತಿಗೆ ಬದಲಾಗಿ ಸಾಮೂಹಿಕ ಸಂಪತ್ತು, ವ್ಯಕ್ತಿಯ ಹಿತದ ಬದಲು ಸಾರ್ವಜನಿಕ ಹಿತ ಮತ್ತು ಆರೋಗ್ಯ-ಇವು ನಿರ್ದಿಷ್ಟವಾದ ಧ್ಯೇಯಗಳು. ರಷ್ಯದಲ್ಲಿ ವರ್ಗಗಳಿಲ್ಲ, ಲಾಭವಿಲ್ಲ; ಸಾರ್ವಜನಿಕ ಸೇವೆಯೇ ಪರಮ ಧ್ಯೇಯ. ಶ್ರಮ ಪಡದಿದ್ದರೆ ಅನ್ನವಿಲ್ಲ ಮತ್ತು ಸುಖವಿಲ್ಲ. ಜೀವನದ

ಸೌಕರ್ಯಗಳು ಮತ್ತು ಪೌರೇಯಾನುಕೂಲಗಳು, ಹಣ್ಣು, ಗಾಡಿ, ವಿದ್ಯಾ ಮತ್ತು ಆರೋಗ್ಯ, ಶಾರೀರಕ ಮತ್ತು ಮಾನಸಿಕ ಸಂಪತ್ತು–ಏಕರೀತಿ ಯಾಗಿ ಬಡತನ ಮತ್ತು ಸಿರಿತನಗಳ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಸೇರಿದೆ. ಜಾತಿ ಬಣ್ಣಗಳ ಭೇದವಿಲ್ಲ, ಮಠಗಳಿಲ್ಲ, ಒಂದು ನಿರ್ದಿಷ್ಟ ವಾದ ಧರ್ಮವಿಲ್ಲ. ರಾಜಕೀಯ, ಆರ್ಥಿಕ, ಮತ್ತು ಸಾಮಾಜಿಕ ವಿಚಾರ ಗಳಲ್ಲಿ ಸಾಮ್ಯತೆಯಿದೆ. ಸಾರ್ವಜನಿಕ ಹಿತಕ್ಕಾಗಿ ಮತ್ತು ವಿದ್ಯಾಪ್ರಚಾರ ಕ್ಕಾಗಿ ಒಂದೇ ವಿಧವಾದ ಪಾಠಶಾಲೆಗಳಿವೆ.

ರಷ್ಯದಲ್ಲಿ ಒಂದು ನವೀನ ಧಾಟಿ, ಕಲ್ಪನೆ ಮತ್ತು ಚೇತನ ಕಾಣ ಬರುತ್ತದೆ. ಪ್ರಾಚೀನ ಸಂಕೋಲೆಗಳಿಂದ ಕಾರ್ಮಿಕ ವರ್ಗವನ್ನು ಬಿಡಿಸಲು ಅಗಾಧ ಪ್ರಯತ್ನ ನಡೆದಿದೆ. ಪೂರ್ವಜನ್ಮದ ಕರ್ಮ, ಪ್ರಾರಬ್ಧ, ಅದೃಷ್ಟ ಮತ್ತು ಹಣೆಬರಹ, ಸೃಷ್ಟಿಕ್ರಮ, ಈಶ್ವರನ ಲೀಲೆ, ಧರ್ಮಾಧರ್ಮಗಳು, ಶಿಕ್ಷೆ, ನರಕ, ಮುಂತಾದ ಪುರುಷ ಕಲ್ಪಿತ ಭಾವನೆಗಳಿಂದ ವೀಣಾನಾದಕ್ಕೆ ಮೋಸಹೋಗಿ ಪ್ರಾಣವನ್ನು ಕಳೆದುಕೊಳ್ಳುವ ಜಿಂಕೆಗಳಂತೆ ಕಾರ್ಮಿಕರು ವಂಚಿತರಾಗಿ ಈಗ ಜೀವಂತ ಶವಗಳಾಗಿದ್ದಾರೆಂದು ಸಮಾಜವಾದಿಗಳ ಸಿದ್ಧಾಂತ. ಸಾಮಾಜಿಕ ವ್ಯವಸ್ಥೆಗಳು ಕರ್ಮಾನುಸಾರವಾಗಿ ನಡೆಯು ತ್ತಿವೆ ಎಂಬ ಧರ್ಮಪಾಶಕ್ಕೆ ಸಿಕ್ಕಿರುವ ಶೋಷಿತವರ್ಗಕ್ಕೆ ಆತ್ಮಹಸಿವಿನ ಪರಿಹಾರವಿಲ್ಲ. ಅನ್ನಸೃಷ್ಟಿಯನ್ನು ಮಾಡುವ ಚೇತನ ಪ್ರತಿಯೊಬ್ಬ ವ್ಯಕ್ತಿ ಯಲ್ಲಿಯೂ ಅಂತರ್ಗತವಾಗಿದೆ ಎಂಬ ಭಾವನೆ ಅಂಕುರಿಸುತ್ತಿದೆ.

U.S.S.R. ನಲ್ಲಿ ಸ್ತ್ರೀಯರಿಗೆ ನಿಜವಾದ ಸ್ವಾತಂತ್ರ್ಯವು ದೊರಕಿದೆ. ಹೆಂಗಸು ಮನುಷ್ಯನ ಆಟದ ಬೊಂಬೆಯಲ್ಲ. ಸಂತಾನೋತ್ಪಾದನೆ ಮತ್ತು ಪರಿಪಾಲನೆಯ ಯಂತ್ರವಲ್ಲ. ಪುರುಷನನ್ನು ಪೂರ್ಣಗೊಳಿಸಬೇಕೆಂಬುದು ಸ್ತ್ರೀಯ ಆಕಾಂಕ್ಷೆಯಲ್ಲ. ಪುರಷನ ಸೇವೆ, ಮಕ್ಕಳ ಸೇವೆ, ಅದರ ಮೂಲಕ ಸಮಾಜದ ಸೇವೆ ಈ ಭಾವನೆಯಿಂದ ಸ್ತ್ರೀ ವಿಕಾಸವು ಕುಂಠಿತ ವಾಗಿದೆ. ಉಚ್ಚ, ನೀಚ, ಕೀಳು, ಮೇಲುಗಳ ಭಾವನೆ ಎಲ್ಲಿಯ ವರೆಗಿರುವುದೋ ಅಲ್ಲಿಯವರೆಗೆ ಏಕತ್ವ ಭಾವನೆಯಿಲ್ಲ. ಪ್ರೇಮ, ಸ್ನೇಹ

ಭಾವನೆಗಳಿಂದ ಪುರುಷರೊಡನೆ ಸಹಕರಿಸಿದರೆ ಆಂತರಿಕ ಗ್ಲಾನಿ. ಅಜ್ಞತೆ ಮತ್ತು ಪರಾಧೀನತೆ ಎಲ್ಲವೂ ಮಾಯವಾಗುವವು. ಸ್ವತಂತ್ರ ಸಂಗ್ರಾಮದಿಂದ ಸ್ತ್ರೀಯು ಸಾರ್ವಜನಿಕ ಸೇವಾಕಾರ್ಯಗಳಲ್ಲಿ ಪುರುಷರೊಡನೆ ಬೆರೆಯುವ ಅಧಿಕಾರವನ್ನು ಪಡೆದಿದ್ದಾಳೆ. ರಷ್ಯದಲ್ಲಿ ಚುನಾವಣೆ ಮತಾಧಿಕಾರ, ಉಚ್ಚಶಿಕ್ಷಣ, ವೇತನಕ್ಕೆ ದುಡಿಯುವ ಹಕ್ಕು, ನೈತಿಕ, ರಾಜಕೀಯ, ಪೌರೇಯ ಸ್ವಾತಂತ್ರ್ಯಗಳನ್ನು ಹೆಂಗಸು ಗಳಿಸಿದ್ದಾಳೆ. ಪುರುಷರ ಅನುಸರಣೆ ಹೋಗಿ ಹೊಸ ಸಂಪ್ರದಾಯ ಮೂಡಿದೆ. ತಮ್ಮ ತಮ್ಮ ಆರ್ಥಿಕ ಮತ್ತು ಮಾನಸಿಕ ಏಳಿಗೆಗೆ ಹೊಡೆದಾಡಿ ತಮ್ಮ ಉನ್ನತಿ ಮಾರ್ಗಗಳನ್ನು ನಿಷ್ಕಂಟಕವನ್ನಾಗಿ ಮಾಡಿಕೊಂಡಿದ್ದಾರೆ. ಪ್ರಗತಿಸಾಧಕವಾದ ಆದರ್ಶಮಾರ್ಗವನ್ನು ಹಿಡಿದಿದ್ದಾರೆ. ಆರ್ಥಿಕ ಸ್ವಾತಂತ್ರ್ಯವಿದ್ದರೆ ಧಾರ್ಮಿಕ ಜೀವನ ಸಾಧ್ಯವಾಗುವುದು ಎಂಬುದು ಸಮಾಜವಾದಿಗಳ ಭಾವನೆ. ತೊಂಬತ್ತು ಲಕ್ಷ ಸ್ತ್ರೀ ಕೂಲಿಕಾರರಿದ್ದಾರೆ. ಒಂದು ಲಕ್ಷ ಎಂಜನಿಯರರು, ಐವತ್ತು ಸಾವಿರ ವೈದ್ಯರು, ಶೇಕಡ ೪೨ ರಂತೆ ಪ್ರೌಢ ವಿದ್ಯಾಶಾಲೆ, ವಿಜ್ಞಾನ ಮಂದಿರಗಳಲ್ಲಿ ವಿದ್ಯಾರ್ಥಿನಿಯರಿದ್ದಾರೆ. ಮಕ್ಕಳುಗಳನ್ನು ಬೆಳೆಸಲು ಬೇಕಾಗುವ ವಿಶಿಷ್ಟ ಕಲೆಯು ಶ್ರೀಮಂತರ ಜೀವನದ ಅಥವಾ ಕೆಲವು ಕಸಬುದಾರರ ಕಾದಿಟ್ಟ ವಸ್ತುವಲ್ಲ: ಸಾರ್ವಜನಿಕವಾದುದು. ಆಹಾರಕ್ಕಿರುವ ಹಸಿವು ಕಲೆಗಳಿಗೆ ಇದೆ. ಕಲಾ ಪೋಷಕನು ಕಾರ್ಮಿಕ ವರ್ಗಕ್ಕೆ ಸೇರಿದವನು. ಅವರ ಹಸಿವು, ಬಾಯಾರಿಕೆ, ಕಾಮ, ಯಾತನೆ, ಸುಖ-ದುಃಖಗಳನ್ನು ಅರಿತವನು. ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ, ಚಿತ್ರ, ನೃತ್ಯ, ಮತ್ತು ಅಭಿನಯಗಳಲ್ಲಿ ವಿಶೇಷ ಸಾಧನೆ ನಡೆದಿದೆ. ಕೆಲಸವಿಲ್ಲದ ಜೀವನ ಕಳ್ಳತನ, ಕಲಾರಹಿತವಾದ ಕೆಲಸ ಪಾಮರತನ, ಪ್ರಜೆಗಳು ಪ್ರೇಕ್ಷಕರಲ್ಲ, ಕಲಾಸೃಷ್ಟಿಯಲ್ಲಿ ಭಾಗಿಗಳು. ವಿಜ್ಞಾನ ಶಾಸ್ತ್ರಗಳು, ಸಂಶೋಧನೆಯಿಂದ ಉತ್ಪನ್ನವಾದ ತತ್ವಗಳು ವ್ಯಕ್ತಿಯ ಜೀವನದ ಮಟ್ಟವನ್ನೇರಿಸಲು ನಿರತವಾಗಿರುವುದರಿಂದ ಅವೇ ಧರ್ಮವಾಗಿವೆ. ಕಲೆಯೇ ಜೀವನಕ್ಕೆ ಒಂದು ವಿಧವಾದ ಪುಷ್ಟಿ ಮತ್ತು ತೇಜಸ್ಸನ್ನು ಕೊಟ್ಟಿದೆ. ಕಲಾ

ವಿಷಯ ಬೌದ್ಧಿಕ ಅಥವಾ ಅಧ್ಯಾತ್ಮಿಕವಾದುದಲ್ಲ. ನಿತ್ಯಜೀವನವನ್ನು ಸರಿಪಡಿಸುವ ವಿಧಾನಗಳು, ಕುಡಿತ, ಅಜ್ಞತೆ, ಕ್ರೂರತನ ಅವುಗಳಿಂದ ಉಂಟಾಗುವ ವಿಪತ್ತುಗಳು, ಇವುಗಳ ಪರಿಹಾರ ಮತ್ತು ನೂತನ ಸಮಾಜ ಸೃಷ್ಟಿಗನುಗುಣವಾದ ಜೀವನ, ವ್ಯಕ್ತಿಯ ಜವಾಬ್ದಾರಿಗಳು.

U. S. S. R. ನಲ್ಲಿ ಕಲಾಭಿರುಚಿಯನ್ನು ಹೆಚ್ಚಿಸಲು ಸರ್ಕಾರವು ನಾಟಕ, ನೃತ್ಯ, ವಾಸ್ತುಚಿತ್ರಗಳ ಮೂಲಕ ಉತ್ತೇಜನಕೊಟ್ಟಿದೆ. ಕಲಾ ಸಂಪರ್ಕರಹಿತವಾದ ಜೀವನ ಪಶುತ್ವವೆಂಬ ನಂಬಿಕೆ ಅಂಕುರಿಸಿದೆ. ಹೆಂಗಸರು, ಪುರುಷರು ಕಲೋಪಾಸಕರಾಗಿದ್ದಾರೆ. ರಷ್ಯವು ಕಲಾದೇವಿಯ ಅತ್ಯಂತ ಶ್ರೇಷ್ಠ ಆವಾಸಸ್ಥಾನವಾಗಿದೆ. ಹೊಸ ಜನಪದ, ಹೊಸ ಕಲೆ, ಇವುಗಳಿಗನುಗುಣವಾಗಿ ಹೊಸ ಸಾಹಿತ್ಯ ಸರ್ವತೋಮುಖವಾಗಿ ಬೆಳೆಯುತ್ತಿದೆ. ಸಣ್ಣಕತೆ, ನೀಳ್ಗತೆ, ಕಾದಂಬರಿ, ಏಕಾಂಕ ನಾಟಕ, ಪೂರ್ಣ ನಾಟಕ, ಗದ್ಯ-ಪದ್ಯ, ನಾಟಕ-ಗೀತೆಗಳು, ದೊಡ್ಡಕಾವ್ಯಗಳು, ವಿಮರ್ಶೆಗಳು, ಜೀವನ ಚರಿತ್ರೆಗಳು, ಎಲ್ಲಾ ಬಗೆಯ ಸಾಹಿತ್ಯ ರೂಪಗಳು ತಲೆ ಹಾಕಿವೆ. ಸಾಹಿತ್ಯದ ರಚನೆಯಲ್ಲಿ ನೂತನ ಕಲ್ಪನೆ, ಸ್ವಾತಂತ್ರ್ಯ ನಡಿಗೆ, ರೂಢಿ, ಸಂಪ್ರದಾಯ ಮುಂತಾದವುಗಳನ್ನು ಅನುಕರಣಮಾಡಿದೆ. ಸ್ವತಂತ್ರ ಗ್ರಂಥರಚನೆ ಮತ್ತು ಅನುವಾದವೂ ಹೆಚ್ಚಾಗಿದೆ. ಪ್ರಜೆಗಳಿಗೆ ವಿಶ್ರಾಂತಿ ದೊರಕಿರುವುದರಿಂದ ಓದುವುದಕ್ಕೆ ಅಭಿರುಚಿ ಹೆಚ್ಚಾಗಿದೆ. ೧೯೧೩ರಲ್ಲಿ ೮೫೯ ದಿನಪತ್ರಿಕೆಗಳು ಅಚ್ಚಾಗುತ್ತಿದ್ದವು. ಈಗ ಸುಮಾರು ೮೫೨೧ ದಿನ ಮತ್ತು ಮಾಸಪತ್ರಿಕೆ ಸೌಕರ್ಯಗಳಿವೆ. ರಾಷ್ಟ್ರೀಯ ಮತ್ತು ಸಾಮಾಜಿಕ ವಿಮೆ ಸಂಸ್ಥೆಗಳು, ಶಿಶುವಿಹಾರಗಳು, ಅಡಿಗೆ ಶಾಲೆಗಳು, ಶಿಶು ಸಂರಕ್ಷಣಾಲಯ (Creches), ಬಾಲ ಗೃಹಗಳು, ಮಕ್ಕಳ ವಿಹಾರ ಸ್ಥಾನಗಳು, ಕಿಂಡರಗಾರಟನ್‌ಗಳು, ಬೇಸಿಗೆ ಶಿಬಿರಗಳು, ಆರೋಗ್ಯ ರಕ್ಷಣಾ ಶಾಲೆಗಳು (Sanitoria), ಆಟಕ್ಕೆ ಅರಮನೆಗಳು, ಸ್ಟೇಡಿಯಂಗಳು, ವಿಶ್ರಾಂತಿ ಗೃಹಗಳು ಪ್ರತಿಯೊಂದು ಪಟ್ಟಣ ಹಳ್ಳಿಗಳಲ್ಲಿಯೂ ಸ್ಥಾಪಿಸಲ್ಪಟ್ಟಿವೆ. ಭೋಜನ ಶಾಲೆಗಳು ಮತ್ತು ಸಲುವೆ ಮನೆಗಳು

ವೈಶಿಷ್ಟ್ಯವಿದೆ. ಮಲಿನವಾಗಿರುವುದು, ಮಲಿನವಾಗಿ ಇತರರ ಮನೆಗಳಿಗೆ ಹೋಗುವುದು, ಹಲ್ಲು ಉಜ್ಜದೇ ಇರುವುದು, ರಸ್ತೆಯಲ್ಲಿ ಸೀಚಭಾವನೆ ತೋರುವುದು, ಪುಸ್ತಕಗಳಲ್ಲಿ ಅನಾದರ, ಪ್ರಗತಿಪರ ವಿಜ್ಞಾನ ತತ್ವಗಳಲ್ಲಿ ಅಸಡ್ಡೆಯಾಗುವುದು, ಅನಾಗರಿಕತೆಯೆಂದು ರಷ್ಯದಲ್ಲಿ ನಂಬಿಕೆ. ನೂತನ ಭಾವನೆಗಳಿಂದ ಕೂಡಿದ ರಷ್ಯ ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅತ್ಯಂತ ಪ್ರಭಾವಯುತವಾದ ಸ್ಥಾನವನ್ನು ಪಡೆದಿದೆ. ಅಮೆರಿಕಾ ಜನರ ಹಾಗೆ ವಿಜ್ಞಾನ ಕ್ಷೇತ್ರಗಳಲ್ಲಿ ರಷ್ಯಾ ಜನರು ಮುಂದುವರಿದಿದ್ದಾರೆ. ಅಣು ಶಕ್ತಿ ಪ್ರಯೋಗಗಳಲ್ಲಿ ಎಲ್ಲಾ ಜನಾಂಗಗಳಿಗಿಂತಲೂ ಮುಂದುವರಿದಿರುವರು. ರಾಷ್ಟ್ರ ಮತ್ತು ವಿಶ್ವನಾಶಕರ ಸಾಧನೆಗಳನ್ನು ಪಡೆದಿರುವುದರಿಂದ ಅವರ ತೇಜಸ್ಸು ಹೆಚ್ಚಿದೆ. ಏಷ್ಯಾ ಜನಾಂಗಗಳ ವಿಮೋಚನೆ ಮತ್ತು ಸ್ವಾತಂತ್ರ್ಯ ಜೀವನದ ಮುನ್ನಡೆಗೆ ರಷ್ಯವು ತಳಹದಿಯಾಗಿದೆ. ಬಿಳಿ ಜನಾಂಗಗಳ ಹತೋಟಿ ತಪ್ಪಿದೆ. ಸೋವಿಯಟ್ ಸರ್ಕಾರದ ಅಂತರರಾಷ್ಟ್ರೀಯ ನೀತಿಯಿಂದ ಏಷ್ಯಾಖಂಡದ ಜನರು ಪ್ರಗತಿಗಾಮಿಗಳಾಗಿದ್ದಾರೆ.

# ಪ್ರಕರಣ ೮

## ಪ್ರಜಾ ಚೈನದ ಪ್ರಜಾ ಸರ್ಕಾರ

ಇಪ್ಪತ್ತು ಲಕ್ಷ ಚದುರ ಮೈಲಿ ವಿಸ್ತೀರ್ಣವುಳ್ಳ ಚೈನ ರಾಷ್ಟ್ರದಲ್ಲಿ ಪರಮಾಧಿಕಾರವು ಅವರ ಸರ್ಕಾರ ಅಥವ ಅಂಗದಲ್ಲಿ ಐಕ್ಯವಾಗಿದೆ ಎಂದು ನಿರ್ದಿಷ್ಟವಾಗಿ ಈಗ ಹೇಳಲು ಸಾಧ್ಯವಾಗಿದೆ. ನ್ಯಾಂಕಿಂಗ್‌ನಲ್ಲಿ ಒಂದು ಸರ್ಕಾರ, ಕೆಂಟನ್‌ನಲ್ಲಿ ಇನ್ನೊಂದು, ಮಂಚುಕುವೊ ಮತ್ತು ಮಂಗೋಲಿಯಗಳಲ್ಲಿ ಬೇರೆ ಸರ್ಕಾರಗಳು, ಷಾಂಗೈ, ಟೈನ್‌ಸಿಸ್, ಹಾಂಗ್ ಕಾಂಗ್ ಮತ್ತು 'ಟ್ರೀಟ ಪೋರ್ಟಗಳಲ್ಲಿ' ಅಂತರ್‍ರಾಷ್ಟ್ರೀಯ ಸರ್ಕಾರಗಳು ಸ್ಥಾಪಿತವಾಗಿದ್ದವು; ಜಪಾನೀಯರ ಆಕ್ರಮಣದ ಮುನ್ನ ಕಮ್ಯುನಿಸ್ಟ್ ಮತ್ತು ರಾಷ್ಟ್ರೀಯ ಸರ್ಕಾರಗಳು ಚೈನದ ಪೂರ್ಣಾಧಿಕಾರಕ್ಕಾಗಿ ಸ್ಪರ್ಧಿಸುತ್ತಿದ್ದವು. ಹೂನನ್ ಮತ್ತು ಹೂಪೆ, ಕೆಂಟನ್ ಮತ್ತು ನೈಂಕಿಂಗ್‌ಗಳ ಮಧ್ಯೆ ಇರುವ ಫಲವತ್ತಾದ ಪ್ರದೇಶಗಳು ಕಮ್ಯುನಿಸ್ಟ್ ಸರ್ಕಾರದ ಪ್ರಭಾವಕ್ಷೇತ್ರವಾಗಿದ್ದವು.

1912ರಲ್ಲಿ ಚೈನ ರಿಪಬ್ಲಿಕ್ ಸರ್ಕಾರವು ಸ್ಥಾಪಿತವಾಯಿತು. ಚೈನದ ನ್ಯಾಷನಲಿಸ್ಟಸ್ ಪಾರ್ಟಿಯ ನಾಯಕನಾದ ಸನ್‌ಯಟ್‌ಸೇನನು (Sun-yat-sen) ರಾಷ್ಟ್ರಾಧಿಪತಿಯಾದನು. ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಆಚರಣೆಯಲ್ಲಿರುವ ಪಾರ್ಲಿಮೆಂಟ್ ಸರ್ಕಾರವನ್ನು ಚೈನದಲ್ಲಿ ಸ್ಥಾಪಿಸಲು ವಿಶೇಷ ಚಳುವಳಿಗಳು ನಡೆದವು; ಆದರೆ ಉತ್ತರ ರಾಷ್ಟ್ರಗಳು ಪ್ರತಿಸ್ಪರ್ಧಿಸಿದ ಯುಯಾನ್‌ಷಿಕೆ (Yuanshikai) ನಾಯಕತ್ವವು ಸ್ಥಾಪಿತವಾಯಿತು. ಯುಯಾನನು ಸನ್‌ಯಟ್‌ಸೇನನ ಸಮಾಜವಾದ ಪೂರಿತ ಪ್ರಜಾಧಿಪತ್ಯ (National Democrative Socialism) ವನ್ನು ಒಪ್ಪಲಿಲ್ಲ. ಜಪಾನರ ಪ್ರಭಾವವು ಉತ್ತರರಾಷ್ಟ್ರಗಳಲ್ಲಿ ಹೆಚ್ಚುತ್ತಾ ಯುಯಾನನ ಬಲವು ಕ್ಷೀಣವಾಗಿ ಒಳಸಂಚುಗಳ ಅಪಜಪಕ್ಕೆ ತುತ್ತಾದನು. ಸ್ಪರ್ಧೆ

ಪ್ರತಿಸ್ಪರ್ಧೆಗಳ ಪರಿಣಾಮವಾಗಿ ಚೈನವು ಬಲಹೀನವಾದರೂ ಜಪಾನಿನ ಆಕ್ರಮಣವನ್ನು ತಡೆಯಲು ರಾಷ್ಟ್ರಗಳೆಲ್ಲಾ ಸೇರಿ ಏಕಮುಖ ಸರ್ಕಾರವನ್ನು ಏರ್ಪಡಿಸಲು ಪ್ರಯತ್ನ ಮಾಡಿದವು. ಇಂತಹ ಸನ್ನಿವೇಶದಲ್ಲಿ ಸಮಾಜವಾದಿಗಳು ಸಾಮ್ಯವಾದವನ್ನು ಪ್ರಚಾರ ಮಾಡತೊಡಗಿದರು. ಮಾಸ್ಕೊ ಸರ್ಕಾರದ ಪ್ರಭಾವವು ವಿಶೇಷವಾಗಿ ಹೆಚ್ಚಿತು. ಜೋಫೆಬ್ಲುಷೆರ್, ಮತ್ತು ಜೊರೋಡ್ಕನ್ ಮುಂತಾದ ಕಮ್ಯುನಿಸ್ಟ್ ನಾಯಕರು ಚೈನದಲ್ಲಿ ಬೋಲ್ಷವಿಕ ತತ್ವಗಳಿಂದ ಸ್ಫೂರ್ತಿಗೊಂಡ ಸೈನ್ಯ ರಚನೆಯಲ್ಲಿ ಉದ್ಯುಕ್ತರಾದರು. ಮಾಸ್ಕೊವಿನಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದ ಚಿಯಾಂಗನು ಹಿಂತಿರಿಗಿಬಂದು ವಾಂಪುಚಯ ಸಂಸ್ಥೆಗೆ ಅಧಿಪತಿಯಾದನು.

ಕಮ್ಯುನಿಸ್ಟ್ ಪಾರ್ಟಿಯ ದಿವ್ಯಮೂಲಭೂತತತ್ವಗಳನ್ನು ಹೀರಿಕೊಂಡು ಕೂಮಿಂಗ್‌ಟಾಂಗ್ ಪಾರ್ಟಿಯನ್ನು ಪುನರ್ರಚಿಸಿದನು; ಕಮ್ಯುನಿಸ್ಟ್ ತತ್ವಗಳನ್ನು ಬಿಟ್ಟಿದ್ದರೂ ಅದು ಬಲವಾಗಿ ಚೈನದಲ್ಲಿ ಕ್ರಾಂತಿ ಚಳುವಳಿಯನ್ನು ಉಂಟುಮಾಡದಂತೆ ಪ್ರತಿಬಂಧಿಸಿದನು. ಸಮರ್ಥ ಅಧಿಕಾರಗಳಿಂದಲೂ, ಇತರ ಪ್ರಕೃತಿ ಮತ್ತು ಪೂರ್ವಾಚಾರಗಳಿಂದಲೂ ಒಳಗೊಂಡ ಮತ್ತು ಚೈನಾ ಜನಾಂಗದ ಮನೋಭಾವನೆಯ ಪ್ರತಿಬಿಂಬವೆನ್ನುವ ನೂತನ ತತ್ವಗಳಿಂದ ಸ್ಫೂರ್ತಿಗೊಂಡ ಸೈನ್ಯವನ್ನು ರಚಿಸಿದನು. ವಿದೇಶಿಯ ಸರ್ಕಾರಗಳ ಬೆಂಬಲದಿಂದ ಸಮಾಜ ಕ್ರಾಂತಿವಾದಿಗಳನ್ನೂ ರಾಷ್ಟ್ರಾಭಿವೃದ್ಧಿ ವೈರಿಗಳನ್ನೂ ತಡೆಗಟ್ಟಿದನು. ವಿದ್ಯಾರ್ಥಿಗಳೇ ನೂತನ ಚೈನಾದ ನಿರ್ಮಾಣ ಕರ್ತರಾದರು. 1927 ರಿಂದ 1930 ರಲ್ಲಿ ನಾಂಕಿಂಗ್ ಸರ್ಕಾರವು ಅಖಂಡವಾದ ವಸ್ತುಸ್ಥಿತಿಗೆ, ಹೆಚ್ಚು ವೃತ್ತಿಗಳ ನಿರ್ಮಾಣಕ್ಕೆ ಜನರ ಮೌಢ್ಯ ತೊಲಗುವಿಕೆಗೆ ಅಗತ್ಯವಾದ ಸುಧಾರಣೆಗಳನ್ನು ಕೈಗೊಂಡಿತು; ಸಾಮಾಜಿಕ, ಮತ್ತು ಸಾಂಸ್ಕೃತಿಕ ಸಂಸ್ಥೆಗಳೇರ್ಪಾಡಾದವು. ರಾಷ್ಟ್ರದ ಐಕ್ಯತೆ ಮತ್ತು ಪ್ರಗತಿಗನುಗುಣವಾಗಿ ರಾಷ್ಟ್ರದ ವಿಧಿ (Law) ಯನ್ನು ಮಾರ್ಪಾಟು ಮಾಡಲಾಯಿತು. ಈ ವಿಧವಾಗಿ ಸೃಷ್ಟಿಯಾದ ಸರ್ಕಾರವು 1932 ರಿಂದ ಇಲ್ಲಿಯವರಿಗೂ ಜಪಾನಿನ ಆಕ್ರಮಣವನ್ನು ತಡೆದು ಬಲಕ್ಷೀಣವಾದರೂ

ಎದೆಗುಂದದೇ ವೀರಾವೇಶದಿಂದ ಹೋರಾಡುತ್ತಾ ರಾಷ್ಟ್ರಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ವಿಶ್ವಪ್ರಯತ್ನವನ್ನು ಮಾಡಿತು.

## ಚೀನಾ ಸರ್ಕಾರ—1949

ನಾಕಿಂಗ್ ಸರ್ಕಾರ ಸಮಗ್ರ ಚೈನಾಕ್ಕೆ ಅನ್ವಯಿಸಿದ್ದರೂ ಅದರ ಪ್ರಭಾವವು ಚೈನಾ ರಾಷ್ಟ್ರದಲ್ಲೆಲ್ಲಾ ಹರಡಿತೆನ್ನಬಹುದು. ಸರ್ವಾಧಿಕಾರವೂ ಕೂಮಿಂಟಾಂಗ್ ಪಾರ್ಟಿಗೆ ಸೇರಿತು. ಸಂಯತ್ ಸೇನಿನ 'ಟೆಸ್ಟಮೆಂಟ್' 1928ರಲ್ಲಿ ರಚಿತವಾದ ಸರ್ಕಾರದ ಮೂಲಭೂತವಾಯಿತು. ರಾಷ್ಟ್ರ ವಿಧಾನದಲ್ಲಿ ಪರಮಾಧಿಕಾರವು ಪಂಚಸಮಿತಿಗಳಿಗೆ (Yuan) ಸೇರಿತು; ಕಾರ್ಯಾಂಗ, ಶಾಸನಾಂಗ, ನ್ಯಾಯಾಂಗ, ಪರಿಕ್ಷಾತ್ಮಕ ಮತ್ತು ನಿಯಂತ್ರಿಸುವ ಸಮಿತಿಗಳು (Examining and Controlling councils). ಆಡಳಿತಾಂಗಗಳ ಮುಖ್ಯಾಧಿಕಾರಿಗಳು ಮತ್ತು ಈ ಸಮಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾದ ಸಚಿವರ ಕಾಬಿನೆಟ್ ಸಮಿತಿಯು ಈ ಪಂಚಸಮಿತಿಗಳಿಂದ ಪ್ರತ್ಯೇಕವಾಯಿತು. ಕಾರ್ಯಾಂಗ ಸಮಿತಿಯು, ಮಂತ್ರಿಮಂಡಲವನ್ನು ರಚಿಸಬಹುದು, ಅಥವಾ ರದು ಮಾಡಬಹುದು; ಶಾಸನಾಂಗ ಸಮಿತಿಯು ಮಸೂದೆ ಮತ್ತು ಆರ್ಥಿಕ ನಿರ್ಣಯಗಳನ್ನು ಮಾಡುವ ಅಧಿಕಾರವನ್ನೂ ಕಾರ್ಯಾಂಗ ಸಮಿತಿಯನ್ನು ನಿಯಂತ್ರಣದಲ್ಲಿಡುವ ಅಧಿಕಾರವನ್ನೂ ಪಡೆದಿದೆ; ಆದರೆ ಶಾಸನಾಂಗ ಸಭೆಯು ಚುನಾಯಿತ ಸಭೆಯಲ್ಲಿ ಕೂಮಿಂಟಿಂಗ್ ಪಕ್ಷವು ನೇಮಕಮಾಡಿದ ಸದಸ್ಯರಿಂದ ಕೂಡಿದ ಸಭೆ. ನ್ಯಾಯಾಂಗ ಸಮಿತಿಯು ಎಲ್ಲಾ ಕೋರ್ಟುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದೆ. ಪರಿಕ್ಷಾತ್ಮಕ ಸಮಿತಿಯು ಚೈನ ರಾಷ್ಟ್ರ ಸರ್ಕಾರದಲ್ಲಿ ಬಹುಮುಖ್ಯವಾದ ಅಂಗ. ಆಡಳಿತಾಂಗಗಳಿಗೆ ಅಗತ್ಯವಾಗಿ ಬೇಕಾದ ಅಧಿಕಾರಿಗಳನ್ನು ಪರಿಕ್ಷೆಗಳ ಮೂಲಕ ಚುನಾಯಿಸುವ ಅಧಿಕಾರವು ಎಕ್ಸಾಮಿನಿಂಗ್ ಸಮಿತಿಗೆ ಸೇರಿದೆ; ಸಾರ್ವಜನಿಕ ಅಧಿಕಾರಗಳಿಗೆಲ್ಲ ಪರೀಕ್ಷೆಗಳಲ್ಲಿ ಉತ್ತಮರೀತಿಯಲ್ಲಿ ಉತ್ತೀರ್ಣರಾದವರನ್ನೇ ಚುನಾಯಿಸಬೇಕೆಂಬ

ನಿಬಂಧನೆ ಕಟ್ಟುನಿಟ್ಟಾಗಿದೆ. ಸಮಸ್ತ ಆಡಳಿತಾಂಗಗಳ ಕಾರ್ಯಗಳನ್ನು ಪರಿಶೀಲಿಸುವುದು, ಲೆಕ್ಕಾಚಾರ, ಆಯವ್ಯಯ ಪದ್ಧತಿಗಳನ್ನು ವಿಮರ್ಶಿಸುವುದು ನಿಯಂತ್ರಣ ಸಮಿತಿಯ ಕೆಲಸ.

ಪಂಚಸಮಿತಿಗಳನ್ನು ಕುಂಮಿಂಟೆಗ್ ಪಕ್ಷವು ನೇಮಿಸುತ್ತದೆ. ಸದಸ್ಯರ ನೇಮಕ, ಅವಧಿ, ಅವರ ವೈಯಕ್ತಿಕ ಮತ್ತು ಸಮೂಹಿಕ ಅಧಿಕಾರ, ಕೆಲಸದಿಂದ ರದ್ದಾಗುವಿಕೆ ಇವೇ ಮುಂತಾದ ಸಮಸ್ತ ಅಧಿಕಾರವು ಪಾರ್ಟಿಗೆ ಸೇರಿದೆ. ಇಟಲಿ, ಜರ್ಮನಿ ಮತ್ತು U S.S.R. ನಂತೆ ಚೈನವೂ ಏಕ ಪಕ್ಷ ರಾಷ್ಟ್ರವೆಂದು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಫಾಸಿಸ್ಟ್ ಮತ್ತು ನಾಟ್ಜಿ ಪಾರ್ಟಿಗಳಷ್ಟು ಐಕ್ಯತೆ ಮತ್ತು ಏಕಮುಖ ದೃಷ್ಟಿಯಿಲ್ಲ; ವ್ಯಾಪಾರಸ್ಥರು, ಬಂಡವಾಳಗಾರರು ಸಮಾಜದ ವೈರಿಗಳು ಒಂದು ಕಡೆ; ಚಮೂಶಿಕ್ಷಣಾಧಿಕಾರಿಗಳೂ, ವೈಜ್ಞಾನಿಕರು, ಆರ್ಥಿಕ ಮತ್ತು ರಾಜ್ಯಶಾಸ್ತ್ರ ಪ್ರವೀಣರು—ಕ್ರಾಂತಿವಾದಿಗಳು, ಪರಿಣಾಮ ವಿಕಾಸವಾದಿಗಳು ಇತರರು ಮತ್ತೊಂದುಕಡೆ. ಪಕ್ಷಪಕ್ಷಗಳ ಸ್ಪರ್ಧೆಯಿಂದಲೇ ರಾಷ್ಟ್ರನಾಯಕನು ಆಡಳಿತ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಬಹುದು.

ಕಾರ್ಯಾಂಗ, ಶಾಸನಾಂಗ, ನ್ಯಾಯಾಂಗ, ಪರಿಷಾತ್ಮಕ, ಪರಿಶೀಲಾತ್ಮಕ (Censorate) ನಿಯಂತ್ರಣ ಯುಯಾನ್‌ಗಳು, ಶಾಶ್ವತವಾದ ಸಮಿತಿಗಳು, ವಿಶೇಷ ಪರಿಸ್ಥಿತಿಗಳಲ್ಲಿ ಮತ್ತೆರಡು ಸಮಿತಿಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಸುಪ್ರೀಂ ನೇಷನಲ್ ಡಿಫೆನ್ಸ್ ಕೌನ್ಸಿಲ್ (The Supreme National Defence Council) ಮತ್ತು ಪೀಪಲ್ಸ್ ಪೊಲಿಟಿಕಲ್ ಕೌನ್ಸಿಲ್ (People's Political Council) ಸಮಸ್ತ ಆಡಳಿತಾಂಗಗಳು 1939 ರಲ್ಲಿ ಡಿಫೆನ್ಸ್ ಸಮಿತಿಯ ಅಧೀನವಾದವು; ಚಿಯಾಂಗ್‌ಸು ಸಮಿತಿಯ ಅಧ್ಯಕ್ಷನಾದನು. ಇದರ ಕಾರ್ಯಕಲಾಪಗಳು ಗೋಪ್ಯವಾಗಿ ನಡೆದರೂ, ಬಹುಮಟ್ಟಿಗೆ ಪ್ರಜಾಪ್ರತಿನಿಧಿ ಸರ್ಕಾರದ ಆಡಳಿತಕ್ಕೆ ಪ್ರತಿಬಂಧಕವಾಗಿಲ್ಲವೆಂದು ಭಾವನೆ. ಯುದ್ಧ ಪರಿಸ್ಥಿತಿಗನುಗುಣವಾದ ನೀತಿಯನ್ನು ರಚಿಸಿ ಸಮಸ್ತ ಸಾಮಾಜಿಕ, ಸೈನಿಕ ಮತ್ತು ಆರ್ಥಿಕ ವ್ಯವಸ್ಥೆ

ಗಳನ್ನು ಮಾಡಲು ಮತ್ತು ಚಿಯಾಂಗ್ ಸಮಿತಿಗೆ ಸಲಹೆಗಳನ್ನು ಕೊಡಲು ಒಂದು ಪ್ರಜಾಪ್ರತಿನಿಧಿ ಸಭೆಯನ್ನು 1938ರಲ್ಲಿ ಸ್ಥಾಪಿಸಲಾಯಿತು. ಇದರ ಸದಸ್ಯರ ಸಂಖ್ಯೆಯು 240; ಡಿಫೆನ್ಸ್ ಸಮಿತಿಯಿಂದ 20 ಸದಸ್ಯರು, ರಾಜಕೀಯ ಪಕ್ಷಗಳಿಂದ 46, ಕುಮಿಂಟಾಂಗ್‌ನಿಂದ 30, ವಿಶ್ರಾಂತಿ ಪಡೆದ ಸರ್ಕಾರದ ನೌಕರರಿಂದ 56, ಸಾಂಸ್ಕೃತಿಕ, ವೈಜ್ಞಾನಿಕ ಪ್ರಪಂಚದಿಂದ ಪ್ರಸಿದ್ಧರಾದ 56 ಸದಸ್ಯರು, ವ್ಯಾಪಾರ ಮತ್ತು ಆರ್ಥಿಕ ಕೇಂದ್ರಗಳಿಂದ ದಕ್ಷಿಣದ 21 ಸದಸ್ಯರು; 95 ದಂಡನಾಯಕರು, ಮತ್ತು 6 ಮಠ ಮತ್ತು ಧರ್ಮಗಳಲ್ಲಿಗಣ್ಯರಾದವರು. 1941ರಲ್ಲಿ ಪ್ರಾಂತೀಯ ಮತ್ತು ಮುನಿಸಿಪಲ್ ಮತ್ತು ರಾಜಕೀಯ ಸಮಿತಿಗಳು ಚುನಾಯಿಸಿದ 90 ಸದಸ್ಯರು, ರಾಷ್ಟ್ರದ ಬಹು ವಿಧವಾದ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಸ್ಥೆಗಳು ಚುನಾಯಿಸಿದ 138 ಸದಸ್ಯರು, ವಿದೇಶಾಂಗ ನೀತಿಗೆ ಸಂಬಂಧಪಟ್ಟ 12 ಸದಸ್ಯರೂ, ಪ್ರಜಾಪಕ್ಷ ಸಮಿತಿಯ ಸಭೆಯಲ್ಲಿ ಕುಳಿತರು. ಪ್ರತ್ಯಕ್ಷ ಚುನಾವಣಾ ಪದ್ಧತಿಯ ಪ್ರಕಾರ ಪ್ರಾಂತೀಯ ಮತ್ತು ಮುನಿಸಿಪಲ್ ಸಮಿತಿಗಳಿಂದ 1942 ಅಕ್ಟೋಬರ್ ಸಮ್ಮೇಳನದಲ್ಲಿ ಪ್ರಜಾಪಕ್ಷ ಸಮಿತಿಗೆ ⅔ ಭಾಗದಷ್ಟು ಸದಸ್ಯರನ್ನು ಚುನಾಯಿಸಲಾಯಿತು. ಪ್ರಜಾಪಕ್ಷ ಸಮಿತಿಗೆ ಈ ವಿಶೇಷ ಸನ್ನಿವೇಶದಲ್ಲಿ ಹೆಚ್ಚು ಅಧಿಕಾರವಿರಲಿಲ್ಲ. ಆದರೆ ಅದರ ರಚನೆ, ಪ್ರಗತಿ, ಮತ್ತು ಸಾಧನಗಳಿಂದ ಕಾಲಕ್ರಮೇಣ ರಾಷ್ಟ್ರದಲ್ಲಿ ಅತ್ಯಂತ ಮುಖ್ಯವಾದ ಅಂಗವಾಗಿ ಪರಿಣಮಿಸಬಹುದೆಂದು ಊಹಿಸಿತ್ತು. ಪ್ರಾಂತಿಯ ಸಭೆಗಳು ಪ್ರಜಾಪಕ್ಷಕ್ಕೆ ಸದಸ್ಯರನ್ನು ಚುನಾಯಿಸುವುದರಿಂದ, ಚುನಾವಣೆಯು ಅಪ್ರತ್ಯಕ್ಷವಾದರೂ ರಾಷ್ಟ್ರದ ಚರಿತ್ರೆಯಲ್ಲಿ ಈ ವಿಧವಾದ ಸಮಿತಿಗಳ ರಚನೆ ಗಮನಾರ್ಹವಾದುದೆಂದು ಭಾವನೆ ಇತ್ತು.

## ಪೀಪಲ್ಸ್ ಕಾಂಗ್ರೆಸ್

1941ರಲ್ಲಿ ನವಂಬರ್‌ನಲ್ಲಿ ಪ್ರಜಾಪಕ್ಷ ಸಮಿತಿಯು (Peoples political Council) ಪ್ರಜಾ ಸರ್ಕಾರ ಸ್ಥಾಪನೆಯ ಮಸೂದೆಯನ್ನು ಅನುಮೋದಿಸಿತು, (Government-by-the Peoples Bill); ಇದು

ಚೈನ ರಾಷ್ಟ್ರದಲ್ಲಿ ಘೋರ ಯುದ್ಧದ ತರುವಾಯ ಸ್ಥಾಪನೆಯಾಗುವ ರಾಷ್ಟ್ರ ವಿಧಾನದ ಗಹನವಾದ ರಾಜನೀತಿ ಮತ್ತು ತತ್ವಗಳನ್ನು ಒಳಗೊಂಡಿದೆ. ಸರ್ಕಾರಕ್ಕೆ ವಿಶೇಷ ಅಧಿಕಾರವನ್ನು ಕೊಟ್ಟಿದೆ; ಆದರೂ ಅನೇಕ ವಿಧಾನಗಳಲ್ಲಿ ಪರಮಾಧಿಕಾರವನ್ನು ಪಡೆದಿರುವ ವರ್ಣಕರ್ತಸಮಾಜವು ಸರ್ಕಾರವನ್ನು ನಿಯಮಿಸುತ್ತದೆ; ಪ್ರಜಾಶಕ್ತಿಗೂ ಮತ್ತು ಸರ್ಕಾರದ ಅಧಿಕಾರಕ್ಕೂ ನಿಕಟಸಂಬಂಧವನ್ನು ಏರ್ಪಡಿಸಲಾಗಿದೆ. ಅಪ್ರತ್ಯಕ್ಷ ಚುನಾವಣೆಯಿಂದ ಸ್ಥಾಪಿತವಾಗುವ ಪ್ರಜಾಪ್ರಭುತ್ವ ಚೈನದಲ್ಲಿ ಆದರಿಸಲಾಗಿದೆ. ಅದು ಏಕ ಸಭಾತ್ಮಕ ಪ್ರಜಾಧಿಪತ್ಯ. ಚೈನ ಕಾಂಗ್ರೆಸ್, ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯಂತೆ ಪರಮಾಧಿಕಾರವನ್ನು ಹೊಂದಿ, ಪ್ರಜಾಧಿಪತ್ಯದ ಸಕಲ ಶಾಸನಾಂಗ ಮತ್ತು ಕಾರ್ಯಾಂಗ ಯೂನಿಯನ್‌ಗಳನ್ನು ರಚಿಸಿ, ಅವುಗಳ ಅಧಿಕಾರಿಗಳನ್ನು ನಿರ್ಧರಿಸಿ, ಅವುಗಳ ಆಚರಣೆಯಲ್ಲಿ ನಿಯಂತ್ರಣಾಧಿಕಾರವನ್ನು ಪ್ರಯೋಗಿಸುತ್ತದೆ. ಪ್ರಜಾ ಕಾಂಗ್ರೆಸ್ ಸಭೆಯು ಆಡಳಿತದ ಗೋಜಿಗೆ ಹೋಗದೆ ರಾಷ್ಟ್ರವರ್ಧಕ ಮತ್ತು ಹಿತಸಾಧಕನೀತಿಯ ಪ್ರತಿಪಾದನೆಯಲ್ಲಿ ಮಾತ್ರ ನಿರತವಾಗಿರುವುದು.

ಪ್ರಜಾಧಿಪತ್ಯದ ಪರಮಾಧಿಕಾರವು, ಪೌರೇಯ ಹಕ್ಕುಗಳನ್ನು ಪಡೆದಿರುವ ಸಮಸ್ತ ಪ್ರಜೆಗಳಲ್ಲಿಯೂ ಅಡಗಿದೆ. ರಾಷ್ಟ್ರದ ಐಕ್ಯತೆಯ ಚೇತನ, ಪ್ರಗತಿ, ಪ್ರಜಾಪ್ರಭುತ್ವ, ಪ್ರಜಾಶಕ್ತಿ ಮತ್ತು ಸ್ವಾತಂತ್ರ್ಯ, ಪುರುಷನಿಗೆ ಅಗತ್ಯವಾಗಿ ಜೀವನೋಪಾಯಕ್ಕೆ ಬೇಕಾದ ಪರಿಕರಗಳನ್ನು ಒದಗಿಸುವುದು, ಮೊದಲನೆಯ ತತ್ವ. ಪ್ರಜಾಪ್ರಭುತ್ವ ಧ್ಯೇಯಗಳನ್ನು ಕಾರ್ಯಕಾರಿಯಾಗಿ ಮಾಡಲು, ಅಪ್ರತ್ಯಕ್ಷ ಚುನಾವಣೆ ಪದ್ಧತಿಯಾಗಲಿ, ಪ್ರಾಂತೀಯ ಸರ್ಕಾರಗಳ ಮತ್ತು ಅವುಗಳ ಸದಸ್ಯರ ಮೂಲಕ ಜವಾಬ್ದಾರಿಯಾಗಲಿ ಪ್ರತಿಬಂಧಕವಲ್ಲ. ಪ್ರಜಾಪ್ರಭುತ್ವವು ಆರ್ಥಿಕ ತಳಹದಿಯ ಮೇಲೆ ನಿಂತಿದೆ. ರಾಷ್ಟ್ರದ ಸಮಸ್ತ ವ್ಯಾಪಾರ, ಕಾರ್ಖಾನೆ, ವೈಯಕ್ತಿಕ ಮತ್ತು ಸಾಮೂಹಿಕ ಸಂಪತ್ತುಗಳನ್ನು ನಿಯಂತ್ರಿಸುವ ಅಧಿಕಾರವನ್ನು ಸರ್ಕಾರವು ಪಡೆದಿರಬೇಕು. ಡಾ॥ ಸನ್‌ಯತ್‌ಸೇನ್‌ನು ಪ್ರತಿಪಾದಿಸಿದ ಈ ಮೂರು

ತತ್ವಗಳು ಯುದ್ಧಾನಂತರ ಸೃಷ್ಟಿಯಾಗುವ ಪ್ರಜಾಧಿಪತ್ಯದ ಮೂಲಭೂತವಾದ ತತ್ವಗಳು. ನೂತನವಾಗಿ ರಚನೆಯಾಗುವ ಸರ್ಕಾರವನ್ನು ದಕ್ಷತೆಯಿಂದ ನಿರ್ವಹಿಸಬೇಕಾದರೆ ರಾಷ್ಟ್ರದಲ್ಲೆಲ್ಲಾ ವಿದ್ಯಾಭ್ಯಾಸದ ಮೂಲಕ ಜನರಲ್ಲಿ ಹೊಸ ಚೇತನ ಮತ್ತು ಹೊಸ ದೃಷ್ಟಿಯುಂಟಾಗಬೇಕು; ವಿದ್ಯಾಪ್ರಚಾರ ರಾಷ್ಟ್ರಸರ್ಕಾರದ ವಿಶೇಷ ಜವಾಬ್ದಾರಿಯಾದುದರಿಂದ ಸಾಮಾನ್ಯವಾಗಿ, ಶೇಕಡ ಮೂವತ್ತು ರಾಷ್ಟ್ರ ಪ್ರಾಂತೀಯ ಬಡ್ಜೆಟ್ಟುಗಳನ್ನು ಮೀಸಲಾಗಿ ಸಿಮಸ್ ( Simes ) ಕೌಂಟಿ, ಮುಂತಾದುಗಳಲ್ಲಿ ಪ್ರಜಾವರ್ಗವು ಇನಿಷಿಯಟೀವ್, ಮತ್ತು ರೆಫರೆಂಡಂ ಮೂಲಕ ಸಮಸ್ತ ರಾಜಕೀಯ, ಸಾಮಾಜಿಕ ಪ್ರಶ್ನೆಗಳನ್ನು ಸುಗಮವಾಗಿ ಪರಿಹರಿಸುವಂತೆ, ಉತ್ತೇಜನ ಕೊಡಬೇಕು. ಇವು ಚಿಯಾಂಗ್‌ಷೇಕನು ಕಾಣುತ್ತಿದ್ದ ಕನಸುಗಳು. ಚೈನ ರಾಷ್ಟ್ರವನ್ನು ಕ್ರಮಕ್ರಮವಾಗಿ ಜಪಾನು ನುಂಗುತ್ತಿದೆ; U. S. S. R. ಗೂ ಜಪಾನಿಗೂ ತತ್ಕಾಲಿಕ ಒಪ್ಪಂದವಿದೆ. ಆದರೆ ಪಾಶ್ಚಿಮಾತ್ಯರಂಗದಲ್ಲಿ ಯುದ್ಧವು ಮುಗಿದ ನಂತರ, U. S. S. R. ರಾಷ್ಟ್ರವು ತನ್ನ ಪೌರಾತ್ಯ ವಿದೇಶಾಂಗನೀತಿಯಲ್ಲಿ ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬರುವಂತೆ ನಿರ್ಬಂಧಿಸಲ್ಪಡುವುದು. ಚೈನ ರಾಷ್ಟ್ರವು ಜಪಾನಿಗೆ ಸ್ವಾಧೀನವಾದರೆ ಫಾಸಿಸ್ ಮತವು ಹರಡಿ, ಭಾರತ, ಮತ್ತು ಇತರ ರಾಷ್ಟ್ರಗಳ ಆಕ್ರಮಣಕ್ಕೆ ಮಾರ್ಗವಾಗುವುದು. U.S.S.R. ಜಪಾನಿನೊಡನೆ ಹೋರಾಡಿ ಚೈನ ರಾಷ್ಟ್ರದಲ್ಲಿ ಪ್ರಭಾವಕ್ಷೇತ್ರಗಳನ್ನು ರಚಿಸಿ ನಿಕಟಬಾಂಧವ್ಯವನ್ನು ಬೆಳಸಿದರೆ ಸಾಮ್ಯವಾದವು ಇಡೀ ಪ್ರಪಂಚವೆಲ್ಲಾ ಹರಡುವುದೆಂಬ ಕಲ್ಪನೆ ಮೂಡಿತ್ತು.

## ಚೀನಾ ದೇಶದ ರಾಜ್ಯಾಂಗ ಸಂವಿಧಾನ: 1949–55

ಜನಸೈನ್ಯವು ಚಿಯಾಂಗ್ ಕೈ ಷೇಕನನ್ನು ಸೋಲಿಸಿ, 1949ರಲ್ಲಿ ಜಯವನ್ನು ಗಳಿಸಿತು. ಅಂದಿನಿಂದ ಕಮ್ಯೂನಿಷ್ಟ್ ಚೀನಾ ದೇಶವು ಮೊಸುತುಂಗ್ ಮತ್ತು ಚಿಯಾನ್‌ಲೈಯ್ ನಾಯಕತ್ವದಲ್ಲಿ ಹೊಸ ರಾಜ್ಯಾಂಗ ಸಂವಿದಾನವನ್ನು ತಯಾರು ಮಾಡಲು ಹೊರಟಿತು. ಜನ ಸರ್ಕಾರದ ಕೇಂದ್ರ ಸಮಿತಿಯು 26 ಸದಸ್ಯರನ್ನೊಳಗೊಂಡ ಒಂದು

ಸಮಿತಿಯನ್ನು ನಿಯಮಿಸಿತು. ಅದಕ್ಕೆ ಮೊತ್ಸೆತುಂಗರು ಅಧ್ಯಕ್ಷರಾದರು. ಈ ಸಮಿತಿಯು ತಯಾರಿಸಿದ ರಾಜ್ಯಾಂಗ ಸಂವಿದಾನವನ್ನು, ಜನಾಭಿಪ್ರಾಯವನ್ನು ತೆಗೆದುಕೊಂಡಮೇಲೆ ಸಮಸ್ತ ಚೀನಾದ ಜನತಾ ಸಭೆಯು ಅಂಗೀಕರಿಸಿತು.

ರಾಜ್ಯಾಂಗ ಸಂವಿದಾನದಲ್ಲಿ ಮೊದಲು Preamble ಆಮೇಲೆ 106 Articles A ಭಾಗಗಳೂ ಇವೆ. ಮುನ್ನುಡಿಯು ದೊಡ್ಡದು. ಇದರಲ್ಲಿ ಸಮತಾ ಸಮಾಜವನ್ನು ಸ್ಥಾಪಿಸುವುದೇ ಧ್ಯೇಯವೆಂದು ಹೇಳಿದೆ. ಇದು ದೇಶದಲ್ಲಿರುವ ಎಲ್ಲಾ ಜನಾಂಗಗಳನ್ನು ರಕ್ಷಿಸುವುದೆಂದು ಭರವಸೆಯಿದೆ. ಶಾಂತಿಗಾಗಿ ಹೋರಾಡುವ ಪ್ರಪಂಚದ ಇತರ ರಾಷ್ಟ್ರಗಳೊಡನೆ ಮೈತ್ರಿಭಾವವನ್ನು ಬೆಳಸುವುದೆಂದು ಆಶೆಯನ್ನು ವ್ಯಕ್ತಪಡಿಸಿದೆ.

ಮೊದಲನೆಯ ಭಾಗದಲ್ಲಿ ಸಾಮಾಜಿಕ ಮತ್ತು ಆರ್ಥಿಕ ತಳಹದಿಯನ್ನು ಹಾಕುವ ಕಾಯಿದೆಗಳಿವೆ. ಚೀನಾದೇಶದ ಜನತಾಸರ್ಕಾರವು ಕೆಲಸಗಾರರಿಂದ ನಡೆಸಲ್ಪಡುವ ಪ್ರಜಾಪ್ರಭುತ್ವ. ರೈತರು ಮತ್ತು ಕೆಲಸಗಾರರೇ ಸರ್ಕಾರಕ್ಕೆ ಬೆನ್ನುಮೂಳೆ. ಹಾಗಿರುವುದರಿಂದ ಸರ್ವಾಧಿಕಾರ ಅವರಿಗೇ ಸೇರಿದುದು.

ಎರಡನೆ ಭಾಗದಲ್ಲಿ ಸಮತಾವಾದದ ಸಮಾಜ ನಿರ್ಮಾಣಕ್ಕೆ ಕಾಯಿದೆಗಳಿವೆ. ಆಸ್ತಿಯನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸುತ್ತದೆ. ಸರ್ಕಾರದ ಆಸ್ತಿ, ಸಹಕಾರ ಸಂಘಗಳ ಆಸ್ತಿ, ಕೆಲಸಗಾರರ ಆಸ್ತಿ, ಮತ್ತು ಬಂಡವಾಳಗಾರರ ಆಸ್ತಿ. ಕಾಲಾನುಕ್ರಮೇಣ ಕೊನೆಯ ಮೂರು ವಿಧದ ಆಸ್ತಿಗಳಿಗಿಂತಲೂ ಸರ್ಕಾರದ ಆಸ್ತಿಯನ್ನು ಹೆಚ್ಚುಮಾಡಿ ಸಮತಾ ಸಮಾಜವನ್ನು ಸ್ಥಾಪಿಸುವ ಧ್ಯೇಯವನ್ನು ಹೊಂದಿದೆ. ಸರ್ಕಾರವು ಕ್ರಮೇಣವಾಗಿ, ಧನಿಕ ಜಮೀನ್ದಾರನನ್ನೂ ಬಂಡವಾಳಗಾರನನ್ನೂ ನಿರ್ಮೂಲ ಮಾಡುತ್ತದೆ. ರಾಷ್ಟ್ರೀಯ ಯೋಜನೆಗಳ ಮೂಲಕ ಸರ್ಕಾರವು ದೇಶದ ಸಂಪತ್ತನ್ನು ಹೆಚ್ಚಿಸುತ್ತದೆ. ಕೆಲಸವು ಪ್ರತಿಯೊಬ್ಬ ಪೌರನ ಗೌರವಕರ್ತವ್ಯವೆಂದು ವಿಧಿಸಿದೆ. ಮೂರನೆಯ ಭಾಗದಲ್ಲಿ ಪೌರನ ಹಕ್ಕು ಭಾದ್ಯತೆಗಳನ್ನು ವಿವರಿಸುತ್ತದೆ. 18ವರ್ಷಕ್ಕೆ ಮೇಲ್ಪಟ್ಟಿರುವ ಎಲ್ಲರೂ

ಯಾವ ಜಾತಿಬಣ್ಣಗಳ ಕಸಬುಗಳ ಮತ್ತು ಲಿಂಗ ವೆತ್ಯಾಸವಿಲ್ಲದೆ ತಮ್ಮ ಮತವನ್ನು ( Vote ) ಕೊಡಬಹುದು; ಯಾವ ಬಿನ್ನಭಾವವೂ ಇಲ್ಲದೆ ಎಲ್ಲರೂ ವಿದ್ಯಾವಂತರಾಗಬಹುದು. ವಾಕ್‌ಸ್ವಾತಂತ್ರ್ಯ ಮೊದಲಾದ ಎಲ್ಲಾ ಸ್ವಾತಂತ್ರ್ಯಗಳನ್ನು ಪಡೆಯುಬಹುದು. ನಾಲ್ಕನೆಯ ಭಾಗದಲ್ಲಿ, ರಾಷ್ಟ್ರದ ಬಾವುಟ, ರಾಷ್ಟ್ರದ ಗುರುತು ಮತ್ತು ರಾಜಧಾನಿಯನ್ನು ನಿಯಮಿಸುವ ಕಾಯಿದೆಗಳಿವೆ.

## ಆಡಳಿತ ಕ್ರಮ—ಕಾಂಗ್ರೆಸ್—Congress

( ಲೆನಿನ್ ಹೇಳಿದಂತೆ ) ಚೀನಾದೇಶದಲ್ಲಿ ತ್ರಿವಿಧಾಂಗತತ್ವ ಪ್ರತಿವಾದನೆ ಇಲ್ಲ. All China Peoples Congress ಎಂಬ ಒಂದೇ ಸಭೆಯು ( unicameral ) ದೇಶದ ಎಲ್ಲಾ ಅಧಿಕಾರ ಸೂತ್ರಗಳನ್ನು ಹಿಡಿದಿರುವುದು; ಕಾಂಗ್ರೆಸ್ಸಿನ ಸದಸ್ಯರು ಚುನಾಯಿತದಾರರು. ಇದು ನೇರವಾದ ಚುನಾವಣೆಯಲ್ಲ. ಪ್ರಾಂತದ ಪೌರರೂ, ವಿಶೇಷ ಮುನಿಸಿಪಾಲಿಟಿಗಳೂ, ಅಲ್ಪಸಂಖ್ಯಾತರೂ, ಸೈನಿಕರೂ, ವಿದೇಶದಲ್ಲಿರುವ ಚೀನೀಯರೂ ಚುನಾಯಿಸಬೇಕು. ಕಾಂಗ್ರೆಸ್ಸಿನ ಅವಧಿಯು 4 ವರ್ಷಗಳು ಮಾತ್ರ. ಆದರೆ, ಹೊಸ ಕಾಂಗ್ರೆಸ್ಸಿಗೆ ಚುನಾವಣೆ ನಡೆಸಲು ಅವಕಾಶವಾಗದಿದ್ದಲ್ಲಿ ಹಿಂದಿನ ಕಾಂಗ್ರೆಸ್ಸೇ ಅಧಿಕಾರದಲ್ಲಿರುವುದು. ಸದಸ್ಯರನ್ನು ಕಾಂಗ್ರೆಸ್ಸಿನ ಅನುಮತಿಯಿಲ್ಲದೆ, ಬಂಧಿಸುವುದಾಗಲೀ ಅಥವ ಅವರ ಮೇಲೆ ಮೊಕದ್ದಮೆಗಳನ್ನು ಹೂಡುವುದಾಗಲೀ ಕೂಡದು. ಸದಸ್ಯರು ತಮ್ಮ ವರ್ಣಕರ್ತ ಕ್ಷೇತ್ರಗಳಿಗೆ ಜವಾಬ್ದಾರರು. ಇವರ ಕೆಲಸ ಅಸಮರ್ಪಕವೆಂದು ಕಂಡುಬಂದರೆ ಕ್ಷೇತ್ರದವರು ಹಿಂದಕ್ಕೆ ಕರೆಯಿಸಿಕೊಳ್ಳಬಹುದು.

ಕಾಂಗ್ರೆಸ್ ಸಾಮಾನ್ಯವಾಗಿ ವರ್ಷಕ್ಕೊಂದುಬಾರಿ ಸೇರುತ್ತದೆ. ಅನಿವಾರ್ಯ ಸಂದರ್ಭವಿದ್ದರೆ ಯಾವಾಗ ಬೇಕಾದರೂ ಸೇರಬಹುದು. ಪ್ರತಿಯೊಂದು ಬಾರಿಯೂ ಒಬ್ಬ ಚುನಾಯಿತ ಅಧ್ಯಕ್ಷರು ಕಾರ್ಯಕ್ರಮವನ್ನು ನಡೆಸುವರು.

ಕಾಂಗ್ರೆಸ್ ರಾಷ್ಟ್ರದ ಉನ್ನತೋನ್ನತ ಸಂಸ್ಥೆ. ಇದಕ್ಕೆ ರಾಜ್ಯಾಂಗ ಸಂವಿದಾನವನ್ನು ತಿದ್ದುವ ಹಕ್ಕಿದೆ. ಕಾನೂನುಗಳನ್ನು ಮಾಡುವುದು, ರಾಷ್ಟ್ರದ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವುದು ಮುಖ್ಯ ಮಂತ್ರಿಯನ್ನು ಅಧ್ಯಕ್ಷರ ಅನುಮತಿಯಂತೆ ನಿಯಮಿಸುವುದು, ದೇಶದ ರಕ್ಷಣಾಬಲದ ಅಧಿಕಾರಿಗಳನ್ನು ನಿಯಮಿಸುವುದು, ಅತ್ಯಂತ ಉನ್ನತ ನ್ಯಾಯಾಸ್ಥಾನದ ನ್ಯಾಯಾಧಿಪತಿಯನ್ನು ಚುನಾಯಿಸುವುದು, ದೇಶದ ಮೇಲ್ವಿಚಾರಕ ( Procurator-General ) ನ್ನು, ನಿಯಮಿಸುವುದು, ಯುದ್ಧ ಅಥವ ಶಾಂತಿಯನ್ನು ತೀರ್ಮಾನಿಸುವುದು, ಅಧ್ಯಕ್ಷ, ಉಪಾಧ್ಯಕ್ಷ ಮಂತ್ರಿಗಳು, ಮೊದಲಾದವರನ್ನು ಕೆಲಸದಿಂದ ತೆಗೆಯಬಲ್ಲ ಈ ಸಮಸ ಅಧಿಕಾರಗಳೂ ಕಾಂಗ್ರೆಸ್ಸಿಗೆ ಸೇರಿವೆ.

ಸಾಮಾನ್ಯ ಬಹುಮತದಿಂದ ಕಾನೂನನ್ನೂ ಮೂರನೆ ಎರಡರ ಬಹುಮತದಿಂದ ರಾಜ್ಯಾಂಗ ತಿದ್ದುಪಡಿಯನ್ನೂ ಮಾಡಬಹುದು.

## Standing Committee

ಕಾಂಗ್ರೆಸ್ಸು ಸಭೆ ಸೇರದಿದ್ದಾಗ ಆಡಳಿತವನ್ನು ನಡೆಸಲೂ, ಕಾಂಗ್ರೆಸ್ಸಿಗೆ ಚುನಾವಣೆಯನ್ನು ನಡೆಸಲೂ Standing Committee ಎನ್ನುವ ಇನ್ನೊಂದು ಸಮಿತಿಯಿದೆ. ಇದರ ಸದಸ್ಯರನ್ನು ಕಾಂಗ್ರೆಸ್ಸು ಚುನಾಯಿಸುವುದು. ಈ ಸಮಿತಿಯು ಕಾಂಗ್ರೆಸ್ಸಿನ ಜವಾಬ್ದಾರಿಯನ್ನು ಹೊತ್ತಿದೆ. ಇದರ ಸದಸ್ಯರನ್ನು ಹಿಂತಿರುಗಿ ಕರೆಸಿಕೊಳ್ಳುವ ಅಧಿಕಾರ ಕಾಂಗ್ರೆಸ್ಸಿಗಿದೆ. ಈ ಸಮಿತಿಗೆ ಸಾಮಾನ್ಯವಾಗಿ ಕಾಂಗ್ರೆಸ್ಸಿಗೆ ಇರುವ ಅಧಿಕಾರವಿದೆ. ಇದು ರಷ್ಯಾದೇಶದ ಪ್ರಿಸಿಡಿಯಮ್‌ಗೆ ಸ್ವಲ್ಪಮಟ್ಟಿಗೆ ಹೋಲುತ್ತದೆ.

## ಪ್ರೆಸಿಡೆಂಟ್—President

ಕಾಂಗ್ರೆಸ್ ರಾಷ್ಟ್ರದ ಅಧ್ಯಕ್ಷರನ್ನು ಚುನಾಯಿಸುತ್ತದೆ. ಅಧ್ಯಕ್ಷರ ಅವಧಿ 4 ವರ್ಷಗಳು; 35 ವರ್ಷಕ್ಕೆ ಮೇಲ್ಪಟ್ಟ ಯಾವ ಪೌರನಾದರೂ

ಅಧ್ಯಕ್ಷನಾಗಬಹುದು. ಅಧ್ಯಕ್ಷರು ಕೇವಲ ಅಲಂಕಾರ ಮೂರ್ತಿಗಳಲ್ಲ; ಅಧಿಕಾರ ಮೂರ್ತಿಗಳು. ಎಲ್ಲಾ ವಿದೇಶಾಂಗ ಸಂಬಂಧಗಳಲ್ಲೂ ದೇಶವನ್ನು ಪ್ರತಿನಿಧಿಸುವವರು ಅಧ್ಯಕ್ಷರು. ರಾಯಭಾರಿಗಳನ್ನು ಕಳುಹಿಸುವವರೂ, ಕರೆಯಿಸಿಕೊಳ್ಳುವವರೂ ಅಧ್ಯಕ್ಷರು. ಕೌಲು, ಸಂಧಿ ಮೊದಲಾದುವುಗಳನ್ನು ಮಾಡುವ ಹಕ್ಕು ಇವರಿಗಿದೆ. ಮುಖ್ಯ ಮಂತ್ರಿಯನ್ನು ನಿಯಮಿಸುವವರೂ, ಸ್ವತಃ ಕಾನೂನುಗಳನ್ನೂ ಅಪ್ಪಣೆಗಳನ್ನೂ ಹೊರಡಿಸುವವರು, ಕ್ಷಮಾಪಣೆಯನ್ನು ಕೊಡುವವರು, ಯುದ್ಧಕಾಲವನ್ನು ತೀರ್ಮಾನಿಸಿ ಯುದ್ಧ ಕಾನೂನನ್ನು ಜಾರಿಗೆ ತರುವವರು. ಸಂಬಂಧಪಟ್ಟ ಮಂತ್ರಿಗಳನ್ನು ಕೇಳದೇ ಇಷ್ಟನ್ನೂ ಮಾಡಬಹುದಾದ ಇವರ ಅಧಿಕಾರವು ಗಮನಾರ್ಹವಾದುದು.

ಅಧ್ಯಕ್ಷರೆ ಸೈನ್ಯಾಧಿಪತಿಗಳು. ಈ ಕಾರಣದಿಂದ ಸೈನ್ಯವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬಹುದು. ಅಲ್ಲದೆ ಅಗತ್ಯವಾದರೆ ದೇಶದ ಹಿರಿಯರ ಒಂದು ಸಭೆಯನ್ನು ಸೇರಿಸಿ, ಮುಖ್ಯ ವಿಷಯಗಳನ್ನು ಚರ್ಚಿಸಿ, ಕಾಂಗ್ರೆಸ್ಸಿಗೂ ಇತರ ಸಂಸ್ಥೆಗಳಿಗೂ ತಮ್ಮ ಅಭಿಪ್ರಾಯವನ್ನು ಸೂಚಿಸಿ ಅದರಂತೆ ನಡೆಯಬೇಕೆಂದು ಒತ್ತಾಯಮಾಡಬಹುದು.

ಚುನಾವಣೆ ಅಧಿಕಾರಾವಧಿ ಮೊದಲಾದುವುಗಳು ಅಧ್ಯಕ್ಷರಿಗಿರುವಂತೆಯೇ, ಅಧ್ಯಕ್ಷರಿಗೆ ಖಾಯಿಲೆ ಆದರೆ ಅಥವ ಆ ಸ್ಥಾನ ಖಾಲಿಬಿದ್ದರೆ, ಉಪಾಧ್ಯಕ್ಷರೆ ಅಧ್ಯಕ್ಷರಾಗುವರು.

## ಮಂತ್ರಿಮಂಡಲ

ಇದರಲ್ಲಿ ಮುಖ್ಯಮಂತ್ರಿಗಳು, ಇತರ ಮಂತ್ರಿವರ್ಗದವರು, ದೇಶದ ಉನ್ನತ ಅಧಿಕಾರಿಗಳು ಇರುವರು. ಇದು ಕಾಂಗ್ರೆಸ್ಸಿಗೆ ಜವಾಬ್ದಾರಿಯನ್ನು ಹೊತ್ತಿದೆ. ಕಾಂಗ್ರೆಸ್ಸಿನ ಕಾನೂನನ್ನು ಜಾರಿಗೆ ತರುವುದು, ಹಣಕಾಸಿನ ಆಯವ್ಯಯವನ್ನು ಕಾಂಗ್ರೆಸ್ಸಿಗೆ ಕಳುಹಿಸುವುದು, ಮೊದಲಾದ ಕರ್ತವ್ಯಗಳನ್ನು ಮಾಡುವುದು. ಆದರೆ, ಅಧ್ಯಕ್ಷರ ಪ್ರಭಾವದ

ಎದುರು ಮಂತ್ರಿಮಂಡಲದ ಪ್ರಭಾವ ಅಷ್ಟಾಗಿ ನಡೆಯುವುದಿಲ್ಲ.

## ಸ್ಥಳೀಯ ಸಂಸ್ಥೆಗಳು

ದೇಶವನ್ನು ಪ್ರಾಂತಗಳಾಗಿ, ಪ್ರಾಂತಗಳನ್ನು ಇನ್ನೂ ಚಿಕ್ಕಚಿಕ್ಕ ಭಾಗಗಳನ್ನಾಗಿ ವಿಂಗಡಿಸಿದೆ. ಪ್ರತಿಯೊಂದು ಮಟ್ಟದಲ್ಲಿಯೂ ಜನತಾ ಸಮಿತಿಗಳೂ, ಜನತಾ ಕಾರ್ಯಕಾರಿ ಸಮಿತಿಗಳೂ ಇವೆ. ಪ್ರಾಂತದ ಸಮಿತಿಗಳ ಅವಧಿಯು 4 ವರ್ಷ. ಉಳಿದ ಸಮಿತಿಗಳ ಅವಧಿಯು 2 ವರ್ಷ. ಈ ಸಮಿತಿಗಳು ಕಾನೂನಿನಂತೆ ದೇಶದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹೊಂದಿವೆ. ಆದರೆ ಎಲ್ಲಾ ಅಧಿಕಾರವೂ ಕೇಂದ್ರೀಕೃತವಾಗಿರುವುದರಿಂದ ಪಾಶ್ಚಿಮಾತ್ಯ ಸ್ಥಳೀಯ ಸಂಸ್ಥೆಗಳಿಗಿರುವಂತೆ, ಸ್ವಾತಂತ್ರ್ಯವಿಲ್ಲ.

## ಅಲ್ಪಸಂಖ್ಯಾತರ ಸಂಸ್ಥೆಗಳು

ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಕಾನೂನಿನ ಪ್ರಕಾರ ಸರ್ವಸ್ವಾತಂತ್ರ್ಯವನ್ನು ಅವರ ಅಭಿವೃದ್ಧಿಗಾಗಿ ಕೊಡಲಾಗಿದೆ. ಅವರು ತಮ್ಮ ಮಾತೃಭಾಷೆಯಲ್ಲಿ ತಮ್ಮ ವ್ಯವಹಾರವನ್ನು ನಡೆಸಿಕೊಳ್ಳಬಹುದು. ನ್ಯಾಯಸ್ಥಾನಗಳಲ್ಲಿಯೂ ತಮ್ಮ ಮಾತೃಭಾಷೆಯನ್ನು ಬಳಸಬಹುದು. ಅಲ್ಲಿ ಭಾಷಾಂತರಿಸುವ ಒಬ್ಬ ಅಧಿಕಾರಿ ಇರುತ್ತಾನೆ.

## ನ್ಯಾಯಾಸ್ಥಾನಗಳು

ನ್ಯಾಯಾಧಿಪತಿಗಳು ಸ್ವತಂತ್ರರು; ಕಾನೂನಿಗೆ ಮಾತ್ರ ಅವರು ಒಳಪಟ್ಟಿರುವರು. ತನಿಖೆಗಳೆಲ್ಲವೂ ಬಹಿರಂಗವಾಗಿ ನಡೆಯುತ್ತವೆ. ವಿಶೇಷ ಸಂದರ್ಭದಲ್ಲಿ ಮಾತ್ರ ಮರೆಯಲ್ಲಿ ನಡೆಯುತ್ತವೆ. ಅಪಾದಿತನಿಗೆ ತನ್ನದನ್ನು ಸಾಧಿಸಲು ಸಂಪೂರ್ಣವಕಾಶವನ್ನು ಕೊಟ್ಟಿದೆ. ಎಲ್ಲಾ ತನಿಖೆಗಳಲ್ಲಿಯೂ Assessors ಇರುತ್ತಾರೆ.

ಉಚ್ಚನ್ಯಾಯಸ್ಥಾನವು ಕೆಳಗಿನ ನ್ಯಾಯಸ್ಥಾನಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.

ದೇಶದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಪ್ರಾಕುರೇಟರ್ಸ್ ಅಧಿಕಾರಿಗಳು ಇದ್ದಾರೆ. ಮುಖ್ಯ ಮೇಲ್ವಿಚಾರಕರು ಮಂತ್ರಿಮಂಡಲವನ್ನು ಪರಿಶೀಲಿಸುತ್ತಾರೆ.

ಈ ರೀತಿಯಾಗಿ ಚೀನಾದೇಶದ ರಾಜ್ಯಾಂಗ ಸಂವಿದಾನವು ಕೆಲಸಗಾರರಿಗೆ ಮತ್ತು ರೈತರಿಗೆ ಪ್ರಾಮುಖ್ಯವನ್ನು ಕೊಡುವ ಪ್ರಜಾಪ್ರಭುತ್ವ; ಅಧಿಕಾರ ಕೇಂದ್ರಿಕೃತವಾದ ಪ್ರಜಾಪ್ರಭುತ್ವ. Liu Shao-Chi ಯುವರು ಸೆಪ್ಟೆಂಬರ್ 15, 1954ರಲ್ಲಿ ಮೊದಲನೆ ಕಾಂಗ್ರೆಸ್ಸಿನಲ್ಲಿ ಮಾಡಿದ ಭಾಷಣದಲ್ಲಿ ಇದನ್ನು ಹೇಳುತ್ತಾರೆ. ಪ್ರಜಾಪ್ರಭುತ್ವ ಎಂದರೆ, ಧನಿಕರ ಹಿತದೃಷ್ಟಿಯಿಂದ ನಡೆಯುವ ಸರ್ಕಾರವಲ್ಲ; ಬಹುಜನರ ಹಿತದೃಷ್ಟಿಯಿಂದ ನಡೆಯುವ ಸರ್ಕಾರ. ಆದುದರಿಂದ ಜನತಾ ಸರ್ಕಾರದ ವಿರುದ್ಧವಾಗಿ ವರ್ತಿಸುವ ಎಲ್ಲರನ್ನು ಹತೋಟಿಗೆ ತರುವ ಹಕ್ಕು ಸರ್ಕಾರಕ್ಕಿದೆ. Franklin W. Houn ಫ್ರಾಂಕ್ಲಿನ್ ಹೌನ್ ಎಂಬುವವರು ವಾಷಿಂಗ್ ಟನ್‌ನಿಂದ ಆಗಸ್ಟ್ 1954ರಲ್ಲಿ ಬರೆಯುತ್ತಾ, ಜನತಾ ಸರ್ಕಾರದಲ್ಲಿರುವ ಎಲ್ಲ ಪೌರರಿಗೂ ಸಂಪೂರ್ಣ ಸ್ವಾತಂತ್ರ್ಯವಿದೆ, ಆದರೆ ಸರ್ಕಾರದ ಶತ್ರುಗಳಿಗೆ ಯಾವ ಸ್ವಾತಂತ್ರ್ಯವೂ ಇಲ್ಲ ಎಂದು ಹೇಳುತ್ತಾರೆ. ಆದರೆ, ಪಾಶ್ಚಿಮಾತ್ಯರ ಬೆರಕೆಯಿಲ್ಲದ ಸ್ವಚ್ಛಂದ ಪ್ರಜಾಪ್ರಭುತ್ವದಲ್ಲಿಯೂ ಈ ವಿಧದ ಸ್ವಾತಂತ್ರ್ಯವಿರಲಾರದು.

ಚೌ ಎನ್‌ಲಾಯಿಯುವರು ಜನತಾ ಕಾಂಗ್ರೆಸ್ಸಿನ ಮೊದಲನೆ ಅಧಿವೇಶನದಲ್ಲಿ ಮಾತನಾಡುತ್ತ ಚೀನಾದೇಶದ ರಾಜ್ಯಾಂಗದ ಅನೇಕ ಕಲ್ಯಾಣಗುಣಗಳನ್ನು ಎತ್ತಿ ಹಿಡಿದಿದ್ದಾರೆ. ಚೀನಾ ರಾಜ್ಯಾಂಗ ಸಂವಿದಾನವು ಪ್ರಪಂಚದಲ್ಲಿ ಶಾಂತಿಸ್ಥಾಪನೆಗಾಗಿ ಸಹರಾಷ್ಟ್ರಗಳೊಡನೆ ಸಹಕರಿಸುವ ಸದುದ್ದೇಶವನ್ನು ಇಟ್ಟುಕೊಂಡಿದೆ ಎಂದು ಹೇಳಿದ್ದಾರೆ. ಸಹಬಾಳ್ವೆಯ ಪಂಚಶೀಲಗಳನ್ನು ಒತ್ತಿ ನುಡಿದಿದ್ದಾರೆ.

# ಪಕ್ಷಗಳು

ಪ್ರಜಾಪ್ರಭುತ್ವವಿರುವ ದೇಶಗಳಲ್ಲಿ ಸರ್ಕಾರದ ಜವಾಬ್ದಾರಿಯು ರಾಜಕೀಯ ಪಕ್ಷದಲ್ಲಿ ಅಡಗಿದೆ ಎಂಬ ಭಾವನೆಯುಂಟಾಗಿದೆ. ಈ ಜವಾಬ್ದಾರಿ ದ್ವಿವಿಧವಾಗಿದೆ. ಎಲ್ಲಿ ಕಠಿಣವಾದ ಮತ್ತು ಅನಿರ್ದಿಷ್ಟವಾದ ಕಾನೂನಿನಿಂದ ರಾಷ್ಟ್ರವಿಧಾನ ಸರ್ಕಾರ ರಚಿತವಾಗಿದೆಯೋ, ಎಲ್ಲಿ ರಾಜಕೀಯ ಪಕ್ಷಗಳ ಮೂಲಕ ಸರ್ಕಾರದಲ್ಲಿ ಭಾಗವಹಿಸಿ ಸಹಕರಿಸುತ್ತಾರೆಯೋ ಅಲ್ಲಿ ಜವಾಬ್ದಾರಿ ಸರ್ಕಾರ ಇದೆ ಎನ್ನಬಹುದು. ವಿಧಾನ ಸರ್ಕಾರವನ್ನೇ ರಚಿಸುವುದು ಎಂದರೆ ಪ್ರಜೆಗಳು ಸರ್ಕಾರದ ಕಾರ್ಯಗಳಲ್ಲಿ ಭಾಗವಹಿಸಿದಂತೆ; ಸರ್ಕಾರದ ಕಾರ್ಯಗಳು ಪ್ರಜಾವರ್ಗದವರ ವಿಮರ್ಶೆಗೆ ಒಳಗಾದರೂ, ಆಧುನಿಕ ಸರ್ಕಾರಗಳು ಅನೇಕ ನ್ಯೂನತೆಗಳಿಂದ ಕೂಡಿವೆ ಮತ್ತು ಪ್ರಜಾಸರ್ಕಾರಗಳು ನೀತಿಯುತ ಜವಾಬ್ದಾರಿ ಸರ್ಕಾರವಲ್ಲವೆಂದೂ. ಭಿನ್ನಾಭಿಪ್ರಾಯಗಳು ತಲೆದೋರಿವೆ.

ಸರ್ಕಾರವು ಜವಾಬ್ದಾರಿಯುತವಾಗಬೇಕಾದರೆ, ವ್ಯಕ್ತಿಗೂ ರಾಷ್ಟ್ರ ಸರ್ಕಾರಕ್ಕೂ ನಿಕಟಸಂಬಂಧವೇರ್ಪಟ್ಟು, ಅವರ ಪರಸ್ಪರ ಹಕ್ಕುಬಾಧ್ಯತೆಗಳ ರೀತಿ, ವ್ಯಕ್ತಿಗೂ ಸರ್ಕಾರಕ್ಕೂ ಮನವರಿಕೆಯಾಗಬೇಕು. ಹೀಗಾದರೆ ಸರ್ಕಾರವು ವ್ಯಕ್ತಿಯ ಸಮಸ್ಯೆಗಳನ್ನು ಅರಿತು, ಅವುಗಳ ಪರಿಹಾರಕ್ಕೆ ಉಚಿತ ಸುಧಾರಣೆಗಳನ್ನು ನಿರ್ಮಿಸಿ, ರಾಷ್ಟ್ರದ ನೀತಿಗೂ ಪ್ರಗತಿಗೂ ಮುಖ್ಯ ಸಾಧನೆಯಾಗುತ್ತದೆ. ಆದರೆ ಸರ್ಕಾರದ ಉದ್ದಿಶ್ಯಗಳು ವ್ಯಕ್ತಿಗಾಗಲಿ ವ್ಯಕ್ತಿಯ ಕಷ್ಟ, ನಿಷ್ಠೂರ, ಹಕ್ಕುಗಳು ಸರ್ಕಾರಕ್ಕಾಗಲಿ ನಿರ್ದಿಷ್ಟವಾಗಿ ತಿಳಿಯಲು ಆಧುನಿಕ ಪರಿಸ್ಥಿತಿಯಲ್ಲಿ ಅಸಾಧ್ಯವಾದುದರಿಂದ, ಸರ್ಕಾರ ಮತ್ತು ವ್ಯಕ್ತಿಯ ಸಮಸ್ಯೆಗಳನ್ನು ಕೂಲಂಕಶವಾಗಿ ವಿಮರ್ಶಿಸಿ, ಪರಿಹಾರವನ್ನ ಸೂಚಿಸುವ ಒಂದು ನಿಶ್ಚಿತವಾದ ಸಂಸ್ಥೆಗಳು ಅಥವಾ ಬಣಗಳು ಅತ್ಯಾವಶ್ಯಕ.

ವ್ಯಕ್ತಿಗೂ ಸರ್ಕಾರಕ್ಕೂ ಸಾಂಪ್ರದಾಯಕವಾಗಿ ಯಾವ ರೀತಿಯಲ್ಲಿ ನಿಕಟಸಂಬಂಧ ಏರ್ಪಟ್ಟಿದೆ ಎಂಬುದನ್ನೇ ವಿಮರ್ಶಿಸಬಹುದು. ರಾಷ್ಟ್ರದಲ್ಲಿ, ಪೌರೇಯ ಅಧಿಕಾರವನ್ನು ಪಡೆದ ಪ್ರಜೆ ಇಡೀ ಪ್ರಜಾವರ್ಗದಲ್ಲಿ; ರಾಜಕೀಯ ರಂಗದಲ್ಲಿ ಪ್ರವೇಶಿಸುವ ಹಕ್ಕನ್ನು ಪಡೆದ ಒಂದು ವರ್ಣಕರ್ತಸಮಾಜ; ಅದರಲ್ಲಿಯೂ, ಪ್ರಭಾವ ಮತ್ತು ಉತ್ಸುಕತೆಯಿಂದ ಕೂಡಿರುವ, ವಿಶಿಷ್ಟ ಸನ್ನಿವೇಶಗಳಲ್ಲಿ ರಾಷ್ಟ್ರಹಿತಧ್ಯೇಯವನ್ನು, ಸಾಧಿಸತಕ್ಕ, ಮತದಾತರು; ಸರ್ಕಾರದ ಅಧಿಕಾರವನ್ನು ಪಡೆದು ಮತದಾತರಾಭಿಮತಕ್ಕೆ ಅನುಗುಣವಾದ ರಾಜನೀತಿಯನ್ನ ಸಾಧಿಸುವ ಬಣ; ಈ ಬಣಗಳು. ಶಾಸನ, ಕಾರ್ಯಾಂಗ, ಮತ್ತು ಆಡಳಿತಾಂಗಗಳಿಗೆ ಅಧಿಕಾರಿಗಳನ್ನು ನೇಮಿಸಿ, ಬಣಕ್ಕೂ, ಬಣಗಳ ಮೂಲಕ ವರ್ಣಕರ್ತಸಮಾಜಕ್ಕೂ ಜವಾಬ್ದಾರಯುತರನ್ನಾಗಿ ಮಾಡುವುದು. ಅಂದರೆ ಬಣವೇ ಪ್ರಜಾಪ್ರಭುತ್ವ; ಪ್ರಜಾ ಪ್ರತಿನಿಧಿಸಭೆಯು ಮತ್ತು ಜವಾಬ್ದಾರಿಯುತ ಸರ್ಕಾರದ ತಳಹದಿ. ಆದರೆ ಪಕ್ಷ ಪ್ರಜಾಪ್ರಭುತ್ವ ಸರ್ಕಾರದಲ್ಲಿ, ಅನೇಕ ರಾಜನೀತಿಜ್ಞರಿಗೆ ಅನಾದರವಿದೆ. ಏಕೆಂದರೆ, ಸಂಯುಕ್ತ ರಾಷ್ಟ್ರದಲ್ಲಿಯೂ, ಮತ್ತು ನಿರೋಧ್ಯ ನಿರೋಧಕಭಾವನೆಯುಳ್ಳ ವಿಧಾನ ಸರ್ಕಾರಗಳಲ್ಲಿಯೂ, ನ್ಯಾಯಾಂಗವೇ ಹೆಚ್ಚು ಪ್ರಾಬಲ್ಯವಿರುವ ಸರ್ಕಾರಗಳಲ್ಲಿಯೂ,–ರಾಜಕೀಯದಲ್ಲಿ ಬಣಗಳ ಪ್ರಭಾವವು ಕಾಣುವುದಿಲ್ಲ: ಪಕ್ಷ ಸರ್ಕಾರಗಳಲ್ಲಿ ಪಕ್ಷಸದಸ್ಯರ ಅಭಿಮತಕ್ಕೂ, ಶಾಸನಸಭಾಸದಸ್ಯರ ಅಭಿಮತಕ್ಕೂ ಹೆಚ್ಚು ಅಂತರವಿಲ್ಲದಿರುವುದರಿಂದ, ವರ್ಣಕರ್ತರ ಸಮಾಜವು ಚುನಾಯಿಸಿದ ಸದಸ್ಯರು ಶಾಸನಸಭಾ ಸದಸ್ಯರಾಗುವ ಪ್ರಮೇಯವಿರುವುದರಿಂದ ಬಣವು ಪ್ರಾಧಾನ್ಯ ಹೊಂದಿಲ್ಲ. ಅಲ್ಲದೆ ಕೆಲವು ಪ್ರಶ್ನೆಗಳು ಬಹುಸಂಖ್ಯಾತರಿಂದ ಆವಿರ್ಭವಿಸಿದಾಗ ಅವುಗಳನ್ನು ವಿಶದಪಡಿಸಲು ಸಾರ್ವಜನಿಕರ ಅವಗಾಹನಕ್ಕೆ ತರಲು ಪಕ್ಷಕ್ಕೆ ಸಾಧ್ಯವಾಗಿಲ್ಲ. ಅಲ್ಲದೆ, ಪ್ರಜಾ ಅಭಿಪ್ರಾಯಗಳು ಏಕಮುಖವಾಗಿ ಸಾಧಿಸಲು ಪ್ರತಿಬಂಧಕಗಳಿವೆ. ಸಭಾಸದಸ್ಯನಿಗೂ, ವರ್ಣಕರ್ತಸಮಾಜಕ್ಕೂ ನಿಕಟಸಂಬಂಧವಾಗಲಿ, ವರ್ಣಕರ್ತಸಮಾಜದ ಅಭಿಮತವನ್ನೆ ನೇರವಾಗಿ ಮತ್ತು ನಿರ್ದಿಷ್ಟವಾಗಿ ಸೂಚಿಸುವ

ಅಧಿಕಾರ, ಪಕ್ಷದ ನಿಯಂತ್ರಣಕ್ಕೆ ಒಳಗಾದ ಸಭಾಸದಸ್ಯನಿಗೆ ಇಲ್ಲ. ಪಕ್ಷ ಸರ್ಕಾರದಲ್ಲಿ ನೌಕರಿಶಾಹಿ ಮಂಡಲ ವಿಶೇಷ ಜವಾಬ್ದಾರಿಯನ್ನೆ ಹೊತ್ತು ಸ್ವಚ್ಛಂದಪ್ರಭುತ್ವಕ್ಕೆ ಹೆದ್ದಾರಿಯಾಗಿದೆ. ಅಧಿಕಾರಿಗಳು ಮಾಡುವ ಕೆಲಸವು ಸಾಮಾನ್ಯ ಜನರಿಗೆ ಕ್ಲಿಷ್ಟವಾದುದರಿಂದ, ಅಧಿಕಾರಿಗಳು ವರ್ಣಕರ್ತ ಸಮಾಜದ ಪರಮಾಧಿಕಾರದ ಬಹುಭಾಗವನ್ನು ತಾವೇ ವಹಿಸಿಕೊಂಡು, ನಿರಂಕುಶಪ್ರಭುತ್ವಕ್ಕೆ ಬೆಂಬಲರಾಗುತ್ತಿದ್ದಾರೆ.

ಈ ನ್ಯೂನತೆಗಳು ಪಕ್ಷ ಸರ್ಕಾರಗಳಲ್ಲಿ ಸಹಜವಾದುದರಿಂದ, ಇವುಗಳನ್ನು ಪರಿಹರಿಸುವ ಸುಧಾರಣೆಗಳು ಅತ್ಯಾವಶ್ಯಕವೆಂದು ಅನೇಕ ನೀತಿಯುತ ಸರ್ಕಾರಗಳಲ್ಲಿ ಕಂಡುಬಂದಿದೆ. ಆದರೂ, ಸರ್ಕಾರದ ಪ್ರಗತಿಯಲ್ಲಿ ಬಣಗಳು ಅತ್ಯಾವಶ್ಯಕ ; ಇದರಿಂದ ಪ್ರತಿಯೊಬ್ಬ ವ್ಯಕ್ತಿಯೂ, ಬಣಗಳ ಮೂಲಕ ಸರ್ಕಾರದ ಆಡಳಿತದ ಕ್ರಮದಲ್ಲಿ ಪ್ರವೇಶಿಸಿ, ಸ್ವಾರ್ಥವನ್ನು ಸಾಮಾಜಿಕ ಹಿತವನ್ನು ಸಾಧಿಸಬಹುದು. ಸಣ್ಣ ರಾಷ್ಟ್ರಸರ್ಕಾರಗಳಲ್ಲಿ ವ್ಯಕ್ತಿ ಪ್ರಾಧಾನ್ಯ. ಸಂಕೀರ್ಣ ರಾಷ್ಟ್ರಸರ್ಕಾರಗಳಲ್ಲಿಯೂ, ಬಹುಸಂಖ್ಯಾ ಪ್ರಜಾ ರಾಷ್ಟ್ರಗಳಲ್ಲಿಯೂ, ಪಕ್ಷ ಪ್ರಾಧಾನ್ಯ. ನಿದರ್ಶನವಾಗಿ, ಸಂಯುಕ್ತ ರಾಷ್ಟ್ರ ಮತ್ತು ಇಂಗ್ಲೆಂಡ್ ದೇಶದಲ್ಲಿಯೂ ಬಣಗಳೇ ಶಾಸನಾಂಗ ಮತ್ತು ಕಾರ್ಯಾಂಗಗಳ ಕಾರ್ಯಗಳನ್ನು ನಿರ್ಧರಿಸುತ್ತವೆ. ಆದರೆ Rousslau ಎಂಬ ರಾಜನೀತಿಜ್ಞನು ಹೇಳುವಂತೆ ವ್ಯಕ್ತಿಯೇ ನೇರವಾಗಿ ಶಾಸನಾಂಗ, ಕಾರ್ಯಾಂಗ, ನ್ಯಾಯಾಂಗ ಕಾರ್ಯಗಳಲ್ಲಿ ಭಾಗವಹಿಸಿ, ಸರ್ಕಾರವನ್ನು ನಿಯಂತ್ರಿಸುವ ಅಧಿಕಾರವನ್ನು ಪಡೆಯುವ ಪರಿಸ್ಥಿತಿ ಒದಗಿದರೆ ನೈಜವಾದ ಪ್ರಜಾತಂತ್ರ ಅಥವಾ ಸರ್ವೋಪರಿಸತ್ತಾತ್ಮಕ ಪ್ರಭುತ್ವ ಏರ್ಪಾಡಾಗುತ್ತದೆ. ಆಗ ಪಕ್ಷಗಳು ಅನಾವಶ್ಯಕ.

ರಾಜಕೀಯ ಪಕ್ಷವೆಂದರೇನು? ರಾಜಕೀಯ ಪಕ್ಷಗಳ ರಚನೆ ಮತ್ತು ಅವರ ಕಾರ್ಯ ವಿವರಣೆಯಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ ಪಕ್ಷವೆಂತಹುದು ಎಂಬುದನ್ನು ನಿರ್ದಿಷ್ಟವಾಗಿ ವಿವರಿಸಲು ಸಾಧ್ಯವಿಲ್ಲ. ಮುಖ್ಯವಾಗಿ Burke ಬರ್ಕ್ ಎಂಬುವನು ವಿವರಿಸುವಂತೆ, ರಾಷ್ಟ್ರಧ್ಯೇಯಕ್ಕೂ ಮತ್ತು ಪ್ರಗತಿಗೂ ಸಾಧಕವಾದ ನಿರ್ದಿಷ್ಟ ತತ್ವಗಳನ್ನು ಅನುಮೋದಿಸುವ ಮತ್ತು

ಅವುಗಳನ್ನು ಕಾರಿಕಾರ್ಯಗಳಾಗಿ ಮಾಡುವ ವ್ಯವಹಾರವನ್ನೊಳಗೊಂಡ, ಪ್ರಜಾವರ್ಗದ ಒಂದು ಸಂಸ್ಥೆಗೆ ಬಣವೆಂದು ತಿಳಿಯಬಹುದು. ಪಕ್ಷದ ಅಂತಿಮ ಧ್ಯೇಯಗಳಲ್ಲಿ ಹೆಚ್ಚು ಭಿನ್ನಾಭಿಪ್ರಾಯ ವಿಲ್ಲದಿದ್ದರೂ, ಪಕ್ಷಗಳ ಉದ್ಭವ, ಪಕ್ಷ ಸದಸ್ಯರ ಸಂಖ್ಯೆ, ಅವರ ಯೋಗ್ಯತೆ, ಭಾವನೆಗಳು ಮತ್ತು ಸರ್ಕಾರದ ನಿಯಂತ್ರಣಕ್ಕಾಗಿ ಅಗತ್ಯನಾದ ಚುನಾವಣೆಗಳ ವರ್ಣಕ್ಷೇತ್ರ ಗಳ ಹತೋಟಿ, ಅಧಿಕಾರ ಸ್ವೀಕಾರ ಮಾಡುವ ವಿಧಾನ ಮತ್ತು ಸಾರ್ವತ್ರಿಕ ವಾಗಿ ಪಕ್ಷ ಧ್ಯೇಯಗಳನ್ನು ಮುಂದುವರಿಸಲು ಬೇಕಾಗುವ ಸಾಧನೆಗಳ ರೀತಿ, ಇವೇ ಮುಂತಾದುವುಗಳಲ್ಲಿ ಪಕ್ಷಗಳಿಗೆ ಅಂತರವಿದೆ. ಆದುದರಿಂದ ಒಬ್ಬ ರಾಜನೀತಿಜ್ಞನು ಬಣರನ್ನು ವಿವರಿಸಿದಂತೆ, ಇನ್ನೊಬ್ಬನು ವಿವರಿಸುವುದಿಲ್ಲ.

ಸಂಯುಕ್ತ ರಾಷ್ಟ್ರಗಳಲ್ಲಿ ದಾಸ್ಯತ್ವವನ್ನು ನಿರ್ಮೂಲ ಮಾಡಲು ಉದ್ಭ ವಿಸದ ರಿಪಬ್ಲಿಕನ್ ಪಕ್ಷವೂ, ರಾಷ್ಟ್ರದ ಹಕ್ಕುಗಳ ಆವಿಷ್ಕರಣ ಮತ್ತು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿ ಉದ್ಭವಿಸುವ ಡೆಮೋಕ್ರಾಟಿಕ್ ಬಣವೂ, ತಮ್ಮ ಬೆಳೆವಣಿಗೆಯಲ್ಲಿ ಮೂಲಾಧಾರ ತ್ವತ್ವಗಗಳ ಆಧಾರದ ಮೇಲೆ ನಿಲ್ಲದೆ, ತಾತ್ಕಾಲಿಕವಾಗಿ, ರಾಜಕೀಯದಲ್ಲಿ ಏಳುವ ಜಟಿಲ ಪ್ರಶ್ನೆಗಳ ಅನು ಗುಣವಾಗಿ ಸಂಪ್ರದಾಯಗಳನ್ನು ನಿರ್ಮಿಸಿಕೊಂಡು ತಮ್ಮ ಸದಸ್ಯ ವರ್ಗ ವನ್ನು ವಿಷದ ಪಡಿಸಿಕೊಂಡಿವೆ. ರಿಪಬ್ಲಿಕನ್ ಬಣ, ಸ್ಥಿತಿ ಪಾಲಕವೂ, ಮತ್ತು ಡೆಮೋಕ್ರಾಟಿಕ್ ಬಣ ಪ್ರಗತಿ ಪರವಾಗಿದ್ದರೂ ಈ ಮೂಲಾಧಾರ ತತ್ವ ಗಳನ್ನು ತಮ್ಮ ಬೆಳೆವಣಿಗೆಯಲ್ಲಿ ಮನ್ನಿಸಿಲ್ಲ. ಆದುದರಿಂದ ಬಣಗಳ ಪ್ರಣಾ ಲಿಯಲ್ಲಿ ಉದ್ಭವಿಸುವ ಸಂಪ್ರದಾಯಗಳು ಮುಖ್ಯವೇ, ಬಣರಚನಾಕಾಲ ದಲ್ಲಿ ಒಪ್ಪಿದ ಮೂಲಾಧಾರ ತತ್ವಗಳು ಮುಖ್ಯವೇ ಎಂಬುದು ಬಣಗಳ ಭಿನ್ನತೆಗೆ ಮೂಲಕಾರಣ. ಸಂಪ್ರದಾಯ ಮತ್ತು ತತ್ವಗಳಿಗೆ ನ್ಯತ್ಯಾಸ ವಿದ್ದರೂ, ರಾಜಕೀಯ ಬಣಗಳು ರಾಜಕೀಯದಲ್ಲಿ ಪ್ರವರ್ತಿಸುವ ಏಕರೀತಿ ಭಾವನೆಗಳುಳ್ಳ ಸದಸ್ಯರುಗಳಿಂದ ಘನೀಭೂತವಾಗಿವೆ. ಅವರು ಅಭಿಮತ ವನ್ನು ಬಣಗಳಿಗೆ ಕೊಡಲಿ, ಕೊಡದಿರಲಿ, ತಮ್ಮ ಬೆಂಬಲವಿತ್ತರೆ ಆ ಪಕ್ಷಕ್ಕೇ ಸೇರಿದ ಸದಸ್ಯರಾಗುತ್ತಾರೆ.

ಎರಡನೇಯದಾಗಿ, ಪಕ್ಷ ಸಂಘಟ್ಟನೆಗೆ ಕೇವಲ ಬೆಂಬಲವಿತ್ತ ಮಾತ್ರಕ್ಕೆ ಆವನು ಸದಸ್ಯನಾಗಲಾರನು. ಡೆಮೊಕ್ರಾಟ್ ಮತ್ತು ರಿಪಬ್ಲಿಕನ್ ಬಣಗಳ ಶ್ರೇಯಿಸ್ಸಿಗಾಗಿ ಅಭಿಮತಕೊಟ್ಟಮಾತ್ರಕ್ಕೆ ಮತದಾತನು ಪಕ್ಷಗಳ ಸದಸ್ಯನಾದ ಹಾಗಲ್ಲ. ಆದರೆ ಪಕ್ಷರಚನೆಯಲ್ಲಿ ಸೇರಿ, ಅದರ ಕಟ್ಟುನಿಟ್ಟು ಗಳಿಗೆ ಒಳಗಾಗಿ, ಹಣ ಸಹಾಯಮಾಡಿ, ಪಕ್ಷಪ್ರಗತಿಗೆ ಸಾಧಕವಾದರೆ, ಅವನು ಪಕ್ಷದ ಸದಸ್ಯ. ಹೀಗೆ ಪಕ್ಷಗಳು ರಾಷ್ಟ್ರಸರ್ಕಾರಗಳಲ್ಲಿ ಅಂಗ ಗಳಿಂದ ಕೂಡಿ, ವಿಭಾಗಿಸಿದ ಸಣ್ಣ ಸಣ್ಣ ಸಂಸ್ಥೆಗಳಲ್ಲಿಯೂ ಅಧಿಕಾರಿಗಳ ಮೂಲಕ ಸಮಿತಿ, ಕಾಕಸ್ (Caucus) ಮುಂತಾದ ಅಂಗಗಳನ್ನು ರಚಿಸಿ, ಪ್ರತಿಯೊಂದು ಗ್ರಾಮ ಜಿಲ್ಲೆ ಪಟ್ಟಣ ಮತ್ತು ಕೇಂದ್ರಸರ್ಕಾರ ಗಳಲ್ಲಿ ತಮ್ಮ ಸದಸ್ಯರ ಮೂಲಕ, ಪಕ್ಷಧ್ಯೇಯಗಳನ್ನು ಸಾಧಿಸುತ್ತವೆ. ರಾಷ್ಟ್ರಸರ್ಕಾರದ ರಚನೆಯಾದಂತೆ ಪಕ್ಷಸರ್ಕಾರವೂ ರಚನೆಯಾಗಿದೆ.

ಮೂರನೆಯ ಭಾವನೆ, ರಾಷ್ಟ್ರಸಮಸ್ಯೆಗಳ ವಿಮರ್ಶೆ ಮತ್ತು ಪರಿಹಾರದಲ್ಲಿ ಏಕಮುಖರಾದ ಪ್ರಜಾಸಂಘವೆಂಬುದೇ ಪಕ್ಷ. ಇದು ರಾಜಕೀಯಕಾರ್ಯಗಳನ್ನೆ ಇಡೇರಿಸುವುದರಲ್ಲಿ ಅಂತರ್ಗತವಾದ ರಾಜಕೀಯಾಂಗವೆಂದಲ್ಲ. ಸರ್ವತೋಮುಖವಾಗಿ ಬೆಳೆಯುತ್ತಿರುವ ಸಮಾಜದ ಕಲ್ಪನೆ. ಭಾವನೆಗಳನ್ನು ನಿರ್ದಿಷ್ಟರೂಪದಲ್ಲಿ ತಿಳಿಸುವ ಒಂದು ಸಂಸ್ಥೆ. ರಾಜ್ಯಾಂಗವಾಗಬಹುದು ಅಥವಾ ಸಮಾಜಾಂಗವಾಗಿ ವಿವಿಧ ಸರ್ಕಾರಾಂಗಗಳನ್ನು ನಿಯಂತ್ರಿಸಬಹುದು. ಅದೇ ಆಧುನಿಕ ಪ್ರಜಾ ಪ್ರಭುತ್ವಗಳಲ್ಲಿ ಸಮಾಜಾಂಗವಾಗಿ ಪಕ್ಷವು ಪ್ರಶಸ್ತಿ ಪಡೆದಿದೆ. ಸರ್ಕಾರದ ಸಾಧನೆಯಿಂದ ಸಾಮಾಜಿಕ ಧ್ಯೇಯಗಳನ್ನೆ ಮುಂದುವರಿಸುತ್ತದೆ.

ಎಲ್ಲಾ ರಾಷ್ಟ್ರದ ಪಕ್ಷಗಳ ಮುಖ್ಯಕಾರ್ಯಕರ್ತವ್ಯಗಳು ಯಾವು ವೆಂದರೆ (1) ಸಂಘದ ಕಾರ್ಯಗಳನ್ನೆ ನೆರವೇರಿಸುವ ಅಧಿಕಾರಿಗಳ ಚುನಾ ವಣೆ ಅಥವಾ ನಾಮಕರಣಮಾಡುವಿಕೆ; (8) ಸಾಮಾಜಿಕ ಸಂಘ ಸರ್ಕಾರದ ಕೆಲಸಗಳನ್ನು ನೆರವೇರಿಸುವಿಕೆ ಮತ್ತು ನೆರವೇರಿಸಿದ ಕಾರ್ಯ ಗಳನ್ನು ವಿಮರ್ಶಿಸುವಿಕೆ; ಸಾರ್ವಜನಿಕವಾಗಿಯೂ, ರಾಜಕೀಯ ವಿಚಾರ

ದಲ್ಲಿ ಪ್ರಜಾವರ್ಗಕ್ಕೂ ತಿಳುವಳಿಕೆಯನ್ನುಂಟುಮಾಡುವಿಕೆ, ಸರ್ಕಾರ ಮತ್ತು ವ್ಯಕ್ತಿಗೆ ನಿಕಟಸಂಬಂಧವನ್ನೇರ್ಪಡಿಸಲು ಬೇಕಾದ ಸಾಧನೆಗಳನ್ನು ಕಲ್ಪಿಸಿ ಮಧ್ಯಸ್ಥಿಗೆ ಮಾಡುವುದು; ರಾಷ್ಟ್ರದಲ್ಲಿ ಸಮಗ್ರಭಾವನೆಯನ್ನು ಪೋಷಿಸಿ ರಾಷ್ಟ್ರದ ಐಕ್ಯತೆಯನ್ನು ಸಾಧಿಸಲು ಬೇಕಾದ ಕಾರ್ಯಗಳನ್ನು ಕೈಕೊಳ್ಳುವುದು; ವ್ಯಕ್ತಿ ಮತ್ತು ಸರ್ಕಾರ ಸಂಬಂಧಗಳನ್ನು ಸಾಧಿಸುವುದು, ಸರ್ಕಾರಾಂಗಗಳ ಮತ್ತು ಪಕ್ಷಾಂಗಗಳ ಪರಸ್ಪರ ಸಂಬಂಧವನ್ನು ಏರ್ಪಡಿಸಿ, ನ್ಯಾಯಾಂಗ, ಕಾರ್ಯಾಂಗಗಳಿಗೆ ಪರಸ್ಪರ ಘರ್ಷಣೆಗಳುತ್ಪನ್ನ ವಾಗದ ಹಾಗೆ ಎಚ್ಚರಿಸುವುದು; ಸಮಸ್ತ ಪಕ್ಷಗಳ ಸಮ್ಮಿಳಿತ ಅಭಿಪ್ರಾಯ ಗಳನ್ನು, ರಾಷ್ಟ್ರದ, ಆರ್ಥಿಕ ಸಾಮಾಜಿಕ ಪ್ರಗತಿಗಾಗಿ ಪ್ರಜಾವರ್ಗದ ಅವಗಾಹನೆಗೆ ತರಲು ತಕ್ಕ ಶಿಸ್ತುಕ್ರಮಗಳು ಏರ್ಪಡಿಸಿಕೊಳ್ಳುವುದು; ವರ್ಣಕರ್ತಸಮಾಜಕ್ಕೆ ವಿದ್ಯಾಭ್ಯಾಸ ಮುಂತಾದುವುಗಳಿಂದ ರಾಜಕೀಯ ರಂಗದಲ್ಲಿ, ತನ್ನ ಪರಮಾಧಿಕಾರವನ್ನು ಗಳಿಸಿಕೊಳ್ಳುವ ವಿಚಾರದಲ್ಲಿಯೂ, ಸರ್ಕಾರವನ್ನು ಜವಾಬ್ದಾರಿಯುತವನ್ನಾಗಿ ಮಾಡುವುದರಲ್ಲಿಯೂ, ತಿಳಿ ವಳಿಕೆಯನ್ನು ಕೊಡುವುದು; ಮತ್ತು ಪದೇ ಪದೆ ರಾಷ್ಟ್ರಸರ್ಕಾರದ ಆಡಳಿತದಲ್ಲಿ ಉಂಟಾಗುವ ನ್ಯೂನತೆ ಮತ್ತು ತೊಡಕುಗಳನ್ನು ಸಾರ್ವ ಜನಿಕವಾಗಿ ವಿಮರ್ಶಿಸಿ, ಪರಿಹಾರವನ್ನು ಸೂಚಿಸುವ ವಿಧಾನಗಳೂ ಮನವರಿಕೆಯಾಗುವಂತಹ ರೀತಿಯಲ್ಲಿ ವಿಷದಪಡಿಸುವುದು. ಪಕ್ಷವು ಇವೇ ಮುಂತಾದ ಕಾರ್ಯಗಳಿಂದ, ಪ್ರಜಾಪ್ರಭುತ್ವ ಸರ್ಕಾರದ ಪ್ರಗತಿ ಸಾಧನೆಗೆ ಅನಿವಾರ್ಯವಾದ ಮತ್ತು ಅಂತರ್ಗತವಾದ ಅಂಗವಾಗಿ ಪರಿಣಮಿ ಸುತ್ತದೆ.

## ಪಕ್ಷರಚನಾಕ್ರಮ — Party Organization

ಮೊದಲು ಪಕ್ಷದ ಸಿದ್ಧಾಂತವನ್ನು ನಿರ್ಧರಿಸುವುದು, ಸಿದ್ಧಾಂತ ಪ್ರಚಾರಕ್ಕಾಗಿ ಹಣಗಳಿಸುವುದು, ಅಧಿಕಾರ ಸ್ವೀಕಾರಕ್ಕಾಗಿ ಯೋಗ್ಯರಾದ ಸದಸ್ಯರನ್ನೇ ಚುನಾಯಿಸುವುದು, ಮತದಾತರನ್ನು ಪಕ್ಷವರ ಅಭಿಮತ

ವನ್ನು ಕೊಡುವುದಕ್ಕೆ ಪ್ರೇರೇಪಿಸುವುದು, ವಿರುದ್ಧಪಕ್ಷಗಳ ಸಿದ್ಧಾಂತಗಳನ್ನು ವಿಮರ್ಶಿಸುವುದು, ಇವು ಪಕ್ಷದ ಕೆಲವು ಮುಖ್ಯ ಕಾರ್ಯಗಳು. ಪಕ್ಷರಾಷ್ಟ್ರಗಳಲ್ಲಿ ವಿರುದ್ಧ ಪಕ್ಷಗಳನ್ನು ಅವರ ಸಿದ್ಧಾಂತವನ್ನೆ ನಿರ್ಮೂಲಮಾಡಿ, ಅನೇಕ ವಿಧಾನಗಳಿಂದಲೂ, ಉಪಚಾರ ಮತ್ತು ನಿರ್ಬಂಧಗಳಿಂದ ಪ್ರಜೆಗಳಿಗೆ ನಿಕಟಸಂಬಂಧವನ್ನೇರ್ಪಡಿಸಿಕೊಂಡು ಅವರ ಮನೋಭಾವನೆಯನ್ನು ಪರಿವರ್ತಿಸಿ ಪಕ್ಷಹಿತಸಾಧಕರಾಗುವಂತೆ ಪಕ್ಷನಾಯಕರು ಪ್ರೇರೇಪಿಸುವರು. ಪಕ್ಷವು, ಕಠಿಣ ಶಿಸ್ತು, ಕಾರ್ಯಕ್ರಮಗಳಿಂದ ಕೂಡಿರುವುದರಿಂದ, ಸದಸ್ಯತ್ವವು ಸುಲಭಸಾಧ್ಯವಲ್ಲ. ವಿಶೇಷ ಹಕ್ಕುಗಳಿಂದಲೂ, ವಿಶೇಷ ಜವಾಬ್ದಾರಿಯಿಂದಲೂ ಕೂಡಿದೆ. ಗಣ್ಯ ಸದಸ್ಯರಿಂದ ಪಕ್ಷಸದಸ್ಯನಾಗುವವನ ಚುನಾವಣೆ; ಒಂದು ನಿರ್ದಿಷ್ಟ ಕಾಲ, ಅವನ ನಡವಳಿಕೆಗಳ ವಿಮರ್ಶೆ ಅಂತ್ಯದಲ್ಲಿ ಸದಸ್ಯನಾಗಿ ನೇಮಕ—ಇವು ಮುಖ್ಯ. ಸದಸ್ಯನಿಗೆ ಪಕ್ಷಸಿದ್ಧಾಂತವು ಮನವರಿಕೆಯಾಗಿರಬೇಕು. ರಾಷ್ಟ್ರನಾಯಕನಲ್ಲಿ ಪೂಜ್ಯತೆ ಮತ್ತು ಭಕ್ತಿ, ಪುರಸ್ಸರವಾದ ನಡೆವಳಿಕೆ, ಪಕ್ಷಧ್ಯೇಯಸಾಧನೆಗಾಗಿ, ತನ್ನ ತನುಮನಧನಗಳನ್ನು ಅರ್ಪಿಸಲು ಸಿದ್ಧನಾಗಿರಬೇಕು.

ಪಕ್ಷವು, ನಿರ್ದಿಷ್ಟವಾದ ಧ್ಯೇಯಗಳಿಂದ ಕೂಡಿರುವ ಒಂದು ಸಂಸ್ಥೆ. ಚುನಾವಣೆಯ ಕೆಲಸದಲ್ಲಿ ವರ್ಣಕರ್ತ ಸಮಾಜವನ್ನು ಮತ್ತು ಮತದಾತರನ್ನು ಪ್ರೇರೇಪಿಸುವುದರಲ್ಲಿ ನಿರತರಾದ ದಕ್ಷತೆಯುಳ್ಳ ಜನರು, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳ, ಕಾರ್ಮಿಕ ಸಂಘಗಳ ಕಾರ್ಯದರ್ಶಿಗಳ ಆಸೆ ಆಕಾಂಕ್ಷೆಗಳು, ಇವುಗಳ ಒಟ್ಟು ಸಮುದಾಯದ ಒಂದು ವರ್ಗ ಮತ್ತು ಅವರ ಕಾರ್ಯ ವಿಶೇಷಗಳು. ಪ್ರಭಾವಯುತವಾದ ಪಕ್ಷಗಳು ರಾಷ್ಟ್ರದಲ್ಲಿ ಅತ್ಯಂತ ಸಣ್ಣ ಸಂಸ್ಥೆಗಳನ್ನು ಮತ್ತೆ ಅತ್ಯಂತ ಹಿರಿದಾದ ಸಂಸ್ಥೆಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಜವಾಬ್ದಾರಿಯುತರಾದ ಆವಶ್ಯಕರಾದ ಪಕ್ಷನಾಯಕರನ್ನು ಸಾಧಾರಣವಾಗಿ ಶಾಸನಸಭೆಗಳಿಂದಲೂ; ವಿಶ್ರಾಂತಿ ಹೊಂದಿರುವ ಸಚಿವರುಗಳಿಂದಲೂ, ವಾಙ್ಮಿಗಳಿಂದಲೂ ಆರಿಸುವರು. ಪಕ್ಷನಾಯಕರೇ ಪಕ್ಷ ಕಾರ್ಯಗಳ

ಪ್ರಗತಿಗೆ ಬೇಕಾಗುವ ಸಾಧನೆಗಳನ್ನೂ, ಪಕ್ಷಗೀತೆಯನ್ನೂ ನಿರ್ಧರಿಸುವರು. ಪಕ್ಷದ ಫಂಡುಗಳನ್ನು ಸಂಗ್ರಹಿಸಿ, ಉಚಿತ ರೀತಿಯಲ್ಲಿ ನಿರ್ವಹಿಸುವರು. ಮುದ್ರಣಾಲಯ, ಕಛೇರಿ, ರಂಗಸ್ಥಳ, ಚಲನಚಿತ್ರಗಳು, ರೇಡಿಯೋ, ತನಿಖೆಕ್ರಮ, ಮುಂತಾದ ಸಲಕರಣೆಗಳನ್ನು ಒಟ್ಟುಗೂಡಿಸಿ ಪಕ್ಷಧ್ಯೇಯಗಳನ್ನು ಸಾಧಿಸಬೇಕಾದ್ದರಿಂದ ವಿಶೇಷವಾಗಿ ಹಣ ಗಳಿಸಬೇಕಾವುದು, ಆದುದರಿಂದ ವರ್ಣಕರ್ತ ಸಮಾಜದಭಿಮತವನ್ನು ಮತ್ತು ಮನೋಗತವನ್ನೇ ಅರಿಯಲೆತ್ನಿಸುವ ಮತ್ತು ಅವಕ್ಕೆ ಸ್ವರೂಪವನ್ನು ಕೊಡುವ ಪಕ್ಷನಾಯಕರು ಮತ್ತು ಪಕ್ಷಸದಸ್ಯರೂ ಆಗರ್ಭ ಶ್ರೀಮಂತರ ಮತ್ತು ಹಣವಂತರಾದ ಕಾರ್ಖಾನೆ ಮಾಲಿಕರ ಪ್ರಭಾವಕ್ಕೆ ಅಧೀನವಾಗುವುದು ಸಹಜ. ಹಣಬಲದಿಂದ ಪಕ್ಷನಾಯಕರು, ಪಕ್ಷದ ಶಿಸ್ತನ್ನೂ ನಿರ್ವಹಿಸುವರು. ಗಣಪೂರಕರ (Whips) ಮೂಲಕ ಕೇಂದ್ರ ಕಛೇರಿ ಮತ್ತು ವಿವಿಧ ಗ್ರಾಮ ಜಿಲ್ಲಾ ಕಛೇರಿಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡು, ರಾಜಕೀಯ ವಿಷಯಗಳಲ್ಲಿ, ಯೋಗ್ಯರೂ, ಮತ್ತು ನಿಷ್ಣಾತರೂ ಆದ ಉಮೇದುವಾರರನ್ನೇ ನೇಮಿಸಿ ಸಾರ್ವತ್ರಿಕ ಚುನಾವಣೆಗಳಲ್ಲಿ, ಇತರ ಪಕ್ಷಗಳ ಉಮೇದುವಾರರೊಡನೆ ಸ್ಪರ್ಧಿಸುವ ಹಾಗೆ ತಕ್ಕ ಸಾಧನೆಗಳನ್ನು ಏರ್ಪಡಿಸುವರು.

ಇಂಗ್ಲೆಂಡ್ ಸರ್ಕಾರವು ಪಕ್ಷಸರ್ಕಾರವಾದುದರಿಂದ, ಪಕ್ಷಗಳ ರಚನೆ ಮತ್ತು ಧ್ಯೇಯಗಳು ಬಹಳ ಪ್ರಭಾವಯುತವಾಗಿವೆ. ಎಲಿಜಿಬತ್ ಕಾಲದಿಂದ ಪಕ್ಷರೀತ್ಯಾ ಸರ್ಕಾರದ ನೀತಿಯು ನಿರ್ಧರಿಸಲ್ಪಟ್ಟಿದೆಯೆಂದು ಊಹಿಸಬಹುದು. (Cavaliers) ಕೆವಿಲಿಯರ್ಸ್ ಮತ್ತು (Round Heads) ರೌಂಡ್ ಹೆಡ್ಸ್, (Abhorrers) ಅಭಾರರ್ಸ್, (Tories and Whigs) ಟೋರಿ ಮತ್ತು ವಿಗ್ ಪಕ್ಷಗಳು ಚಾರಿತ್ರಕವಾದುವು. 1877 ರಿಂದ ಈಚೆಗೆ, ಸರ್ಕಾರವು ಪಕ್ಷರಚನೆಗೆ ವಿಶೇಷ ಗಮನಕೊಟ್ಟಿದೆ. 1861 ರಲ್ಲಿ ಲಿಬರಲ್ ರಿಜಿಸ್ಟ್ರೇಷನ್ ಅಸೋಸಿಯೇಷನ್, ಮತ್ತು 1867 ರಲ್ಲಿ National Conservative ಅಸೋಸಿಯೇಷನ್, ಸಂಸ್ಥೆಗಳು ಸ್ಥಾಪಿತವಾದವು. ಈ ಕೇಂದ್ರ ಸಂಸ್ಥೆಗಳಿಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳೂ

ಕಾರ್ಯಗಳು. ಏಣಿ ಅಥವಾ ಗೋಪುರಗಳಂತೆ ಪಕ್ಷ ಸಮಿತಿಗಳು ಏರ್ಪಾಟು ಗಳಾಗಿವೆ. ಪಕ್ಷದ ಉಪರಿಭಾಗದಲ್ಲಿ ಪ್ರತಿಯೊಂದು ಸಂಸ್ಥಾನಕ್ಕೆ ಪಕ್ಷ ಏಕಪ್ರತಿನಿಧಿಯಂತೆ ಚುನಾಯಿಸಲ್ಪಟ್ಟ ನ್ಯಾಷನಲ್ ಸಮಿತಿಯೂ, ರಾಷ್ಟ್ರ ಶಾಸನ ಸಭೆಗಳ ಸದಸ್ಯರ ಚುನಾವಣೆಯ ಕಾಲದಲ್ಲಿ ಪಕ್ಷದ ಉಮೇದು ವಾರಿಕೆಯನ್ನು ಮುಂದುವರಿಯುವಂತಹ ಕಾಂಗ್ರೆಸ್‌ನಲ್ ಕಮಿಟಿಗಳು; ಹಾಗೇಯೇ, ಜಿಲ್ಲಾ, ನಗರ, ಮೊಹಲ್ಲಾಗಳಲ್ಲಿ ಪಕ್ಷದ ಕಾರ್ಯಕ್ರಮ ಗಳನ್ನು ಕೈಗೊಳ್ಳಲು (State Central Committee ರಾಷ್ಟ್ರ ಕೇಂದ್ರ ಸಮಿತಿಗಳು), ಅಸೆಂಬ್ಲಿ, ಡಿಸ್ಟ್ರಿಕ್ಟ್ ಕೌಂಟಿ, ಸಿಟಿ, ಮತ್ತು ವಾರ್ಡ್ ಕಮಿಟಿಗಳು ಏರ್ಪಾಟಾಗಿವೆ.

Primary ಎಂಬುವ ಸಂಸ್ಥೆಯು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಇರುವ ಮತದಾತರ ಸಭೆ. ಸ್ವಯಂಪ್ರೇರಣೆಯಿಂದ ಪಕ್ಷದ ಉಮೇದುವಾರ ರನ್ನೇ ನೇಮಿಸುವುದಕ್ಕೋಸ್ಕರವಾಗಿ, ವರ್ಣಕ್ಷೇತ್ರಗಳಲ್ಲಿ ಸೇರುವ ಮತ ದಾರ ಸಭೆಗೆ ಪ್ರೈಮರಿ ಎಂದು ಹೆಸರು. ಶಿಸ್ತುಕ್ರಮರಹಿತವಾದ ಪ್ರೈಮರಿಗಳು, (Unregulated Primary) ಕಾಲಕ್ರಮದಲ್ಲಿ, ಮತದಾತರ ನಿರ್ದಿಷ್ಟ ವಾದ ಅಭಿಮತವನ್ನು ವಿಷದ ಪಡಿಸಿ, ಜನಾಂಗದ ಅವಗಾಹನೆಗೆ ತಂದು, ರಾಷ್ಟ್ರ ಸರ್ಕಾರವನ್ನು ಜವಾಬ್ದಾರಿಯುತವನ್ನಾಗಿ ಮಾಡುವುದಕ್ಕೋಸ್ಕರ, ಶಿಸ್ತುಕ್ರಮಬದ್ಧವಾದಾಗ ರೆಗ್ಯುಲೆಟೆಡ್ ಪ್ರೈಮರಿಗಳೆಂದು (Regulated Primaries) ಪ್ರಸಿದ್ಧಿ ಹೊಂದುವುವು. ಈ ಪ್ರೈಮರಿಗಳಲ್ಲಿ, Direct. ತನ್ನ ಧ್ಯೇಯವನ್ನು ಸಾಧಿಸವುದಕ್ಕಾಗಿ (ಪ್ರತ್ಯಕ್ಷ) ಪ್ರೈಮರಿಗಳು, (ಗುಪ್ತ) (Closed Primaries), Non-Partisan ಪ್ರೈಮರಿ ಗಳೆಂದು ನಾನಾ ವಿಧವಾಗಿದೆ. ರಾಷ್ಟ್ರ ಸಮಸ್ಯೆಗಳನ್ನು ಅವಲೊಕಿಸಿ, ಅವು ಗಳಿಗೆ ಪರಿಹಾರಗಳನ್ನು ಸೂಚಿಸುವ ವಿಶೇಷ ಜವಾಬ್ದಾರಿಯನ್ನು ಪ್ರೈಮರಿ ಸಭೆಗಳ ಮೂಲಕ, ವರ್ಣಕರ್ತ ಸಮಾಜವು ಗಳಿಸಿಕೊಂಡಿದೆ. ಪ್ರೈಮರಿಗಳು ಬೆಳೆದು ಜವಾಬ್ದಾರಿ ಹೊತ್ತ ಷ್ಟೂ, ರಾಷ್ಟ್ರದ ಪರಮಾಧಿಕಾರವು, ಸಂಸ್ಥಾನ ಮತ್ತು ರಾಷ್ಟ್ರಸರ್ಕಾರಗಳ ನೀತಿಮಾರ್ಪಾಟುಗಳೂ ಮತ್ತು ರಾಷ್ಟ್ರ ವಿಧಾನದ

ಮಾರ್ಪಾಟುಗಳನ್ನು ಮಾಡುವ ಅಧಿಕಾರವೂ ವರ್ಣಕರ್ತ ಸಮಾಜದಲ್ಲಿ ಐಕ್ಯವಾಗುವ ಸಂಭವವಿದೆ. ಈ ವಿಧವಾಗಿ ರಚಿತವಾದ ಪಕ್ಷವು ಸ್ಥಳೀಯ ಸಂಸ್ಥಾನ ಮತ್ತು ರಾಷ್ಟ್ರ ಸರ್ಕಾರಗಳನ್ನು ನಿಯಂತ್ರಿಸುವ ಸಂಭವ ವಿರುವುದರಿಂದ, ಪಕ್ಷಗಳೇ, ಗುಪ್ತಸರ್ಕಾರಗಳಾಗಿವೆ. (Invisible Government).

## ಆಧುನಿಕ ರಾಷ್ಟ್ರಪಕ್ಷಗಳು

ವರ್ಣಕರ್ತಸಮಾಜವು ಪಕ್ಷಗಳಾಗಿ ಆಧುನಿಕ ಸರ್ಕಾರಗಳಲ್ಲಿ ವಿಭಾಗ ವಾಗಿವೆ. ಸರ್ಕಾರದ ರಚನೆ ಸಂಕೀರ್ಣವಾದ ಹಾಗೆಲ್ಲಾ ವರ್ಣಕರ್ತಸಮಾಜವು ವಿಶಿಷ್ಟ ಪರಿಸ್ಥಿತಿಯಲ್ಲಿ ಬಣಗಳನ್ನು ನಿರ್ಮಿಸುತ್ತದೆ. ಅವು ಅನುಷಂಗಿಕವಾಗಿ ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳ ಸಂಶೋಧನೆ ಮಾಡಿ ಪರಿಹಾರಕೊಡುತ್ತವೆ. ಸ್ವಯಂಪ್ರೇರಣೆಯಿಂದಉದ್ಭವಿಸಿದ ಸಂಸ್ಥೆಗಳು ಸರ್ಕಾರದಲ್ಲಿ ಅಂತರ್ಗತವಾದ ಪಕ್ಷದ ಅಧಿಕಾರಿಗಳ ಹಕ್ಕು ಬಾಧ್ಯತೆಗಳ ರೀತಿ ಮತ್ತು ಸರ್ಕಾರಕ್ಕೆ ಬಾಹ್ಯವಾಗಿರುವ ಪಕ್ಷದ ಅಧಿಕಾರಿಗಳ ಹಕ್ಕು ಬಾಧ್ಯತೆಗಳ ರೀತಿಗಳು ಬೇರೆಬೇರೆಯಾಗಿವೆ. ಸರ್ಕಾರದ ನೀತಿಯ ನಿರ್ಧಾರ ಅದನ್ನು ಕಾರ್ಯಕಾರಿಯಾಗಿ ಮಾಡುವ ಏಕಭಾವನೆ ಪಕ್ಷಕ್ಕೆ ಸೇರಿದೆ. ಇದರಿಂದಲೇ ಅಧಿಕಾರ ಕೇಂದ್ರೀಕೃತವಾಗಿಯೂ ಜವಾಬ್ದಾರಿಯುತ ವಾಗಿಯೂ ಇದೆ. ಎರಡನೆಯ ಅರ್ಥದಲ್ಲಿ, ರಾಷ್ಟ್ರನೀತಿ ನಿರ್ಧಾರ ಮಾತ್ರ ಪಕ್ಷಗಳಿಗೆ ಸೇರಿದೆ. ಕಾರ್ಯಕಾರಿಯಾಗಿ ಮಾಡುವ ಅಧಿಕಾರ ಸರ್ಕಾರಕ್ಕೆ ಸೇರಿದೆ. ರಾಷ್ಟ್ರದ ಸಾಮಾಜಿಕ ಪ್ರಶ್ನೆಗಳು ಆರ್ಥಿಕ ಗೊಂದಲಕ್ಕೆ ಸಿಕ್ಕಿ ಸಂಕೀರ್ಣವಾಗುತ್ತಿರುವುದರಿಂದಲೂ, ಸಾಮಾನ್ಯ ಮತದಾತನಿಗೆ ಇವುಗಳಲ್ಲಿ ಹೆಚ್ಚು ತಿಳಿವಳಿಕೆಯಿಲ್ಲದಿರುವುದರಿಂದಲೂ, ಸಮಸ್ಯೆಗಳನ್ನು ಪ್ರತ್ಯೇಕಿಸಿ, ಸಂಶೋಧಿಸಿ, ಪರಿಹರಿಸಿ, ನಿರ್ದಿಷ್ಟಜ್ಞಾನವನ್ನು ಮತಧಾತನಿಗೆ ಕೊಡುವುದು ಪವಿತ್ರಕಾರ್ಯವಾಗಿರುವುದರಿಂದ, ಪಕ್ಷಗಳು ಆಧುನಿಕ ರಾಷ್ಟ್ರಗಳಲ್ಲಿ ಬಹಳ ಪ್ರಭಾವ ಹೊಂದಿವೆ. ಈ ವಿಧವಾದ ಪಕ್ಷಗಳಿಗೂ, ಸರ್ಕಾರದಲ್ಲಿ ಅಂತರ್ಗತವಾದ ಪಕ್ಷನೀತಿಗೂ ಮತ್ತು ಅಧಿಕಾರಕ್ಕೂ ನಿಕಟ

ಸಂಬಂಧವನ್ನು ಏರ್ಪಡಿಸುವ ರೀತಿಯಲ್ಲಿಯೂ ರಾಷ್ಟ್ರ ರಾಷ್ಟ್ರದ ರಚನೆಯಲ್ಲಿ ವ್ಯತ್ಯಾಸವಿದೆ. ರಾಷ್ಟ್ರದ ಶಾಸನಸಭೆಯು ರಚನೆಯು ವರ್ಣಕರ್ತ ಸಮಾಜಕ್ಕೆ ಸಂಪೂರ್ಣವಾಗಿ ಅಧೀನವಾಗಿ ಏಜೆಂಟ್‌ನಂತೆ ವರ್ತಿಸುತ್ತ ದೆಯೇ, ಅಥವಾ ಪ್ರಜಾಪ್ರತಿನಿಧಿ ಸಭೆಯಾಗಿ, ಸದಸ್ಯರಿಗೆ ರಾಷ್ಟ್ರಹಿತ ಸಾಧಕವಾದ ಪರಿಹಾರಗಳನ್ನು ಸ್ವಯಂಪ್ರೇರಣೆಯಿಂದ ಸೂಚಿಸುವ ಸ್ವಾತಂತ್ರ್ಯಹೊಂದಿದೆಯೇ ಎಂಬ ಪ್ರಶ್ನೆ ಆಯಾ ರಾಷ್ಟ್ರಗಳ ಪಕ್ಷರಚನೆಯ ಮೂಲಾಧಾರ ತತ್ವವಾಗಿದೆ. ಸದಸ್ಯನೇ ಏಜೆಂಟ್ ಅದಪಕ್ಷದಲ್ಲಿ, ಪಕ್ಷ ಪ್ರಾಬಲ್ಯವಿದೆ. ಪ್ರತಿನಿಧಿಯಾಗಿ ಆತ್ಮವಿಕಾಸಕ್ಕೆ ಅವಕಾಶವನ್ನು ಪಡೆದಿದ್ದಲ್ಲಿ, ಪಕ್ಷಪ್ರಾಬಲ್ಯವಿಲ್ಲ. ಇವುಗಳ ಅನುಗುಣವಾಗಿ ವಿವಿಧ ರಾಷ್ಟ್ರಪಕ್ಷಗಳ ರಚನೆಯಾಗಿವೆ ಮತ್ತು ಕಾರ್ಯಗಳಲ್ಲಿ ಪರಸ್ಪರವಾಗಿ ವ್ಯತ್ಯಾಸವಿದೆ.

## ಇಂಗ್ಲೆಂಡ್

ಇಂಗ್ಲೆಡ್ ದೇಶದ ಪಕ್ಷಗಳ ಅಭಿವೃದ್ಧಿಯು ಬಹಳ ಆಧುನಿಕ ವಾದುದು. ಇಲ್ಲಿಯ ವರ್ಣಕರ್ತ ಸಮಾಜದ ಪದ್ಧತಿಯಲ್ಲಿ ಅನೇಕ ನ್ಯೂನತೆಗಳೂ, ಮೋಸಗಳಿದುದ್ದರಿಂದಲೂ, 1832 ರಲ್ಲಿ ನಡೆದ ಚಳುವಳಿಯಲ್ಲಿ ಪ್ರಾಪ್ತವಯಸ್ಕರಿಗೆ ಮತಾಧಿಕಾರ ಕೊಟ್ಟಮೇಲೆ ವರ್ಣಕರ್ತ ಸಮಾಜವು ವಿಸ್ತೃತವಾಗಿ ನೂತನವಾದ ಪಕ್ಷರಚನೆಗೆ ಸಹಾಯವಾಯ್ತು. ಬಹಳ ವರ್ಷಗಳ ಹಿಂದೆ ಪ್ರಜಾಪ್ರತಿನಿಧಿಗಳಿಂದ ಕೂಡಿದ ಜವಾಬ್ದಾರಿ ಸರ್ಕಾರದ ಆಡಳಿತಕ್ಕೆ ರಾಜಕೀಯ ಪಕ್ಷಗಳು ನೆರವಾಗಿದ್ದುವು. ಇತ್ತೀಚೆಗೆ ಪಕ್ಷಗಳು ಸರ್ಕಾರಕ್ಕೆ ಬಾಹ್ಯವಾಗಿ ಉದ್ಭವಿಸಿ ಸಮಾಜದ ಆವಶ್ಯಕತೆಗನುಗುಣವಾಗಿ ಸರ್ಕಾರದ ಕಾರ್ಯಗಳನ್ನು ಪ್ರತ್ಯಕ್ಷವಾಗಿ ನಿಯಂತ್ರಣ ಮಾಡಬೇಕೆಂಬ ಅಭಿಪ್ರಾಯವನ್ನು ತೋರಿವೆ. ಬಹುಸಂಖ್ಯಾತ ಪ್ರಜಾವರ್ಗದ ಅನುಮೋದನೆಯಿಲ್ಲದೆ ಯಾವ ಸಚಿವ ಮಂಡವೂ ಅಧಿಕಾರವಲ್ಲಿರಲಾರದು ಎಂಬುದು ನಿರ್ದಿಷ್ಟ ವಾದರೂ ಪ್ರಜಾವರ್ಗದ ಪರಮಾಧಿಕಾರವು, ಸಚಿವ ಮಂಡಲವು ನಿರ್ಧರಿಸಿ ಕಾರ್ಯಕಾರಿಯಾಗಿ ಮಾಡುವ ರಾಜನೀತಿಯನ್ನು,

ಒಪ್ಪುವುದು. ಆದರೆ ನಿರಾಕರಿಸುವ ಅಧಿಕಾರವನ್ನು ಮಾತ್ರ ಪಡೆದಿದೆ. ಅಂದರೆ, ಪ್ರಜಾಭಿಮತವೆಂಬದು ಅಪ್ರತ್ಯಕ್ಷವಾಗಿ ಸಚಿವಮಂಡಲದ ಅಧಿಕಾರವನ್ನು ನಿಯಂತ್ರಿಸುತ್ತದೆ. ಅಂತ್ಯದಲ್ಲಿ ಸರ್ಕಾರದ ಒಳಾಡಳಿತ ಮತ್ತು ವಿದೇಶಾಂಗದ ನೀತಿಗಳನ್ನು ವಿಮರ್ಶಿಸಿ, ನಿರಾಕರಿಸಿದರೆ, ಶಾಸನ ಸಭೆಯು ರದ್ದಾಗಿ, ಸಾರ್ವತ್ರಿಕ ಚುನಾವಣೆಗೆ ಮಾರ್ಗವಾಗುತ್ತದೆ. ರಾಜನೀತಿ ಮತ್ತು ಶಾಸನ ರಚನೆ, ಮಸೂದೆಗಳನ್ನು ಮಾಡುವುದು, ಸಮಾಜದ ಮನೋಗತವನ್ನು ತಿಳಿದು, ಮಸೂದೆಗಳನ್ನು ಶಾಸನ ರೂಪದಲ್ಲಿ ರಚಿಸುವುದು ಮುಂತಾದುವುಗಳು, ಸರ್ಕಾರದಲ್ಲಿ ಅಂತರ್ಗತವಾದ ಪಕ್ಷಗಳಿಗೆ ಸೇರಿದೆ. ಸರ್ಕಾರದ ನಿರ್ಧಾರಗಳನ್ನು ಮುದ್ರಣಾಲಯ, ಅರ್ಜಿಗಳು, ಮತ್ತೆ ಸಮ್ಮೇಳನಗಳ ಮೂಲಕ ಅಂಗೀಕರಿಸಬಹುದು ಅಥವಾ ನಿರಾಕರಿಸಬಹುದು. ಆದರೆ, ರಾಜನೀತಿಯು ಯಾವ ಸ್ವರೂಪವನ್ನು ತಾಳಬೇಕು ಎಂಬುದನ್ನು ಮತದಾತರು ನಿರ್ಣಯಿಸಲಾರರು.

ಎರಡನೆಯದಾಗಿ, ಮತದಾತರನ್ನು ಪಕ್ಷಗಳಾಗಿ ವಿಭಾಗಿಸುವುದು, ಹಾಗೆಯೇ ಅವರ ಅಭಿಮತಗಳನ್ನು ಯಾಚಿಸುವುದು ಸಾರ್ವಜನಿಕಸಮಸ್ಯೆಗಳು ಹೊರಬಿದ್ದಾಗ. ವೈಯುಕ್ತಿಕ ವಿಚಾರಗಳಲ್ಲಾಗಲಿ, ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಅಧಿಕಾರಗಳನ್ನು ಕೊಡುವ ವಿಚಾರಗಳಲ್ಲಾಗಲಿ ಪಕ್ಷಗಳ ಅಭಿಮತದ ನಿರ್ಬಂಧವಿಲ್ಲ. ಸಚಿವ ಮಂಡಲವು ನಿರ್ಧರಿಸಿದ ರಾಜನೀತಿಯು ಅಥವಾ ಅದರ ಪ್ರತಿಪಕ್ಷದ ರಾಜನೀತಿಯನ್ನು ಮತದಾತರು ಅಂಗೀಕರಿಸುವುದು. ಚುನಾವಣೆಯ ಕಾಲದಲ್ಲಿ ಮಾತ್ರ ವ್ಯಕ್ತಿಗಳ ಪ್ರತ್ಯೇಕ ಅಭಿಮತಗಳಿಗೆ ಪ್ರಾಶಸ್ತ್ಯವಿಲ್ಲ. ಇಂಗ್ಲೆಂಡಿನಲ್ಲಿ ರಾಜಕೀಯ ಪಕ್ಷಗಳು ಆಡಳಿತಾಂಗಗಳನ್ನು ನಿಯಂತ್ರಿಸುವ ಗೋಜಿಗೆ ಹೋಗುವುದಿಲ್ಲ. ಯಾರು ಯಾವ ಶಾಖೆಯ ಅಧಿಕಾರವನ್ನು ಪಡೆಯಬೇಕು ಎಂಬ ಆಕಾಂಕ್ಷೆಯೂ ಇಲ್ಲ. ಆದುದರಿಂದಲೇ ಇಂಗ್ಲೀಷ್ ಸರ್ಕಾರವು ಪ್ರತಿನಿಧಿಸರ್ಕಾರವೇ ಹೊರತು ಪ್ರಜಾಪ್ರಭುತ್ವವಲ್ಲ. ಪ್ರತಿನಿಧಿಯು ಸ್ವಕೀಯ ಅಭಿಮತವನ್ನು ಸೂಚಿಸುವ ಸ್ವಾತಂತ್ರ್ಯವನ್ನು

ಪಡೆದಿರುವನು. ಗಿಣಿಯಂತೆ ಮತದಾತರ ಅಭಿಮತದ ಪ್ರತಿಧ್ವನಿಯಲ್ಲ. ಅಧಿಕಾರವು ಮತ್ತು ಜವಾಬ್ದಾರಿಯೂ ಸರ್ಕಾರದಲ್ಲಿ ಅಡಗಿದೆ. ಪ್ರಜಾಭಿಮತವು ಸರ್ಕಾರದ ನೀತಿಯನ್ನು ನಿಯಂತ್ರಿಸುತ್ತದೆ. ಈ ವೈಶಿಷ್ಟ್ಯಕ್ಕೆ ಕಾರಣಗಳೇ ಬೇರೆ; ಮೊದಲು ಇಂಗ್ಲೆಂಡಿನ ರಾಜ್ಯಪದ್ಧತಿಯಲ್ಲಿ, ಸರ್ಕಾರದ ಎಲ್ಲಾ ಅಧಿಕಾರಗಳು ರಾಜನಲ್ಲಿ ಐಕ್ಯವಾಗಿತ್ತು. ಕ್ರಮಕ್ರಮವಾಗಿ ವರ್ಗಗಳು ಒಂದರ ತರುವಾಯ ಒಂದು ಬಂದು ವಿದ್ಯಾವಂತರಾಗಿ ರಾಜಕಾರ್ಯದಲ್ಲಿ ಪ್ರವೇಶಿಸಿ ಅಧಿಕಾರವನ್ನು ಪಡೆಯುವ ಮೂಲಾಧಾರ ಹಕ್ಕನ್ನು ಪಡೆದವು; ಮತ್ತೆ ಪ್ರಜಾವರ್ಗದ ಬಹು ಭಾಗವು ಯಾವಾಗಲೂ ಅಧಿಕಾರವನ್ನು ಪ್ರತ್ಯಕ್ಷನಾಗಿ ನಿರ್ವಹಿಸುವ ಇಚ್ಛೆಯನ್ನು ವಿಷದಪಡಿಸಿರಲಿಲ್ಲವಾಗಿ ಪ್ರಜಾಪ್ರಭುತ್ವ ತತ್ವವನ್ನು ಪ್ರಜೆಗಳೇ ನಿರಾಕರಿಸಿರಬಹುದೆಂದು ಮನದಟ್ಟಾಗಿ ಸರ್ಕಾರವು ಪ್ರತಿನಿಧಿಯುತವಾಯಿತು. ಪ್ರಜೆಗಳು ಪ್ರತಿನಿಧಿಗಳ ಮೂಲಕ ತಮ್ಮ ರಾಜಕಾರ್ಯಹಕ್ಕುಗಳನ್ನು ನಿರ್ವಹಿಸುವುದು; ಪ್ರತಿನಿಧಿಗಳು ಸರ್ಕಾರದ ಮೂಲಾಧಾರ ತತ್ವಗಳೇನೆಂಬುದನ್ನು ನಿರ್ಧರಿಸುವುದು ಮತ್ತು ಯಾವ ರೀತಿಯಲ್ಲಿ ನಿರ್ಧಾರಗಳನ್ನು ಕಾರ್ಯಕಾರಿಯಾಗಿಮಾಡುವುದು:– ಇವು ಇಂಗ್ಲೆಂಡ್‌ನ ರಾಜಕೀಯದ ವಿಶೇಷ ಸಂಗತಿ. ಬಹು ಮುಖ್ಯವಾಗಿ, ಪರಮಾಧಿಕಾರವನ್ನು ಪಡೆದಿರುವ ಶಾಸನ ಸಭೆ ಮತ್ತು ಸರ್ಕಾರವು, ಪ್ರಜಾಹಿತ ಆಕಾಂಕ್ಷೆಯಿಂದಲೇ ಅಧಿಕಾರವನ್ನು ನಡೆಸಬೇಕು ಎಂಬುದು ಪವಿತ್ರವಾದ ತತ್ವ. ಅಲ್ಲದೇ, ವಿಶೇಷ ಅಧಿಕಾರವನ್ನು ಗಳಿಸಿರುವ ಅಧಿಕಾರಿಗಳು ತಮ್ಮ ತಮ್ಮ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ನೀತಿ ಅನೀತಿಗಳನ್ನು ವಿಮರ್ಶಿಸುವ ಪ್ರಜಾವರ್ಗಕ್ಕೂ ಸಂಪೂರ್ಣವಾಗಿ ಜವಾಬ್ದಾರರು. ಅಧಿಕಾರಿಗಳು ಮಾಡುವ ತಮ್ಮ ಖರ್ಚು ವೆಚ್ಚಗಳನ್ನೂ ಮತ್ತು ರಾಷ್ಟ್ರದ ಆರ್ಥಿಕಸ್ಥಿತಿಯನ್ನೂ ಪ್ರಜೆಗಳು ಆಗಿಂದಾಗ್ಗೆ ಸಂಶೋಧಿಸಿ, ಅಧಿಕಾರಿಗಳನ್ನು ನೀತಿಯುತರನ್ನಾಗುವಂತೆ ನಿರ್ಬಂಧಿಸುವುದು ಗಮನಾರ್ಹವಾದ ವಿಷಯ.

## ಅಮೆರಿಕಾ ಮತ್ತು ಇಂಗ್ಲೆಂಡ್

ಈ ಎರಡು ದೇಶಗಳ ಪ್ರಜಾವರ್ಗವು ಒಂದೇ ಜಾತಿ," ಸಂಸ್ಕೃತಿ, ಮತ್ತು ಮೂಲಭೂತವಾದ ರಾಜಕಾರ್ಯಧ್ಯೇಯಗಳಿಂದ ಕೂಡಿದ್ದರೂ ಪ್ರಜಾ ಸರ್ಕಾರವನ್ನು ಗಳಿಸುವುದರಲ್ಲಿ ಭಿನ್ನ ಭಿನ್ನವಾದ ಮಾರ್ಗಗಳನ್ನು ಅನುಸರಿಸಿವೆ. ಎರಡು ಸರ್ಕಾರಗಳೂ ಮೊದಲಿನಲ್ಲಿ ಪ್ರಜಾಪ್ರಭುತ್ವದಲ್ಲಿ ಅನಾದರ ತೋರಿಸಿ ನಂತರ ಪ್ರಜಾಪ್ರತಿನಿಧಿಸರ್ಕಾರದಲ್ಲಿ ಆದರವನ್ನು ತೋರಿಸಿವೆ. ಈ ಎರಡು ರಾಷ್ಟ್ರಗಳಲ್ಲಿ ದ್ವಿಪಕ್ಷ ಸರ್ಕಾರದ ಸ್ಥಾಪನೆಯಾಗಿದೆ; ಮತ್ತು ನಿಯಮಿಸಿದ ಸಚಿವರ, ಮತ್ತು ಅಧಿಕಾರಿಗಳ ಜವಾಬ್ದಾರಿಯು ಸಾಮೋಹಿಕವಾದುದೇ ಹೊರತು ವೈಯಕ್ತಿಕವಾದುದಲ್ಲ. ಆದರೆ ಬೇರೆ ಬೇರೆ ರಾಜಕೀಯ ಸಂಸ್ಥೆಗಳನ್ನು ರಚಿಸಿಕೊಂಡಿವೆ. ಇಂಗ್ಲೆಂಡಿನಲ್ಲಿ ಪ್ರತಿನಿಧಿ ಸರ್ಕಾರವಿದೆ. ಅಮೆರಿಕಾದಲ್ಲಿ ಪ್ರತಿನಿಧಿಯ ತತ್ವದ ಬದಲಾಗಿ ಏಜನ್ಸಿ (Agency) ಯ ತತ್ವವನ್ನು ಅನುಸರಿಸಿ ಪ್ರತಿನಿಧಿ ಸರ್ಕಾರವು ಇನಿಷಿಯೇಟಿವ್, ರೆಫರೆಂಡಮ್ ಮತ್ತು ರಿಕಾಲ್ ಮುಂತಾದ ಸಾಧನಗಳಿಂದ ಸಾರ್ವಜನಿಕರು ಮಸೂದೆಗಳನ್ನು ಪ್ರಜೆಗಳೇ ಸೂಚಿಸುವುದು, ಮತ್ತು ಮೇಲಿನಧಿಕಾರಿಗಳನ್ನು ಕೆಲಸದಿಂದ ನಿವೃತ್ತಿಮಾಡುವ, ವಿಶೇಷಾಧಿಕಾರವುಳ್ಳ ಪ್ರಜಾಪ್ರಭುತ್ವವಾಗಿ ಪರಿವರ್ತಿಸಲ್ಪಟ್ಟಿದೆ. ಇದರ ಪರಿಣಾಮವಾಗಿ ಸಂಯುಕ್ತರಾಷ್ಟ್ರಪಕ್ಷಗಳ ಧ್ಯೇಯ, ನೀತಿ, ಮತ್ತು ಜವಾಬ್ದಾರಿಯು ಬೇರೆ ವಿಧವಾಗಿದೆ. ಪಕ್ಷಗಳು ಶಾಸನಗಳನ್ನೂ ರಚಿಸುವುದು, ನೀತಿಯನ್ನು ಪ್ರಜಾಪರವಾಗಿ ನಿರ್ಧರಿಸುವುದು, ಮುಂತಾದ ಕೆಲಸಗಳನ್ನೆ ಮಾಡುವುದರಿಂದ ಸರ್ಕಾರಕ್ಕೆ ಮೀಸಲಾಗಿರುವ ಅಧಿಕಾರ ಮತ್ತು ಜವಾಬ್ದಾರಿ, ಇವುಗಳನ್ನು ಅಮೆರಿಕಾದಲ್ಲಿ ಪಕ್ಷಗಳೇ ನಿರ್ವಹಿಸುತ್ತಿವೆ. ಆದರೆ ನೀತಿನಿರ್ಧಾರಮಾಡುವ ಪಕ್ಷಕ್ಕೂ ಕಾರ್ಯಕಾರಿಯನ್ನಾಗಿ ಮಾಡುವ ಪಕ್ಷಕ್ಕೂ ನಿಕಟಸಂಬಂಧವಿಲ್ಲ. ಒಂದು ಪಕ್ಷವು ರಾಷ್ಟ್ರ ಸರ್ಕಾರದಲ್ಲಿ ಘಟಕಾಂಗವಾಗಿದೆ. ಮತ್ತೊಂದು ಜವಾಬ್ದಾರಿಯುತ ಮತ್ತು ಅಧಿಕಾರರಹಿತವಾದುದರಿಂದ ಅಧಿಕಾರ ಲಾಲಸೆಯಿಂದ

ಸೇರುವ ವ್ಯಕ್ತಿಗಳಿಂದ ಕೂಡಿದೆ. ಇದು ಸರ್ಕಾರಕ್ಕೆ ಬಾಹ್ಯವಾಗಿರುವ ಪಕ್ಷ. ಪಕ್ಷಗಳಿಗೆ ಉಮೇದುವಾರರನ್ನು ಚುನಾಯಿಸುವುದೇ ಮುಖ್ಯ ಕಾರ್ಯವಾಗಿ, ರಾಜಕೀಯಧ್ಯೇಯಗಳನ್ನು ಒತ್ತಟ್ಟಿದೆ. ಇಂತಹ ಪಕ್ಷಗಳು ಸೂಚಿಸುವ ಅಸಂಪೂರ್ಣ ಮತ್ತು ಅಸಮರ್ಪಕವಾದ ನಿರ್ಧಾರಗಳನ್ನು ರಾಷ್ಟ್ರದ ಶಾಸನಾಂಗವು ಅನುಸರಿಸಬೇಕೆಂಬ ನಿರ್ಬಂಧವಿರುವುದರಿಂದ, ಘರ್ಷಣೆಗಳಿಗೆ ಆಸ್ಪದವಾಗಿದೆ.

## ಫ್ರಾನ್ಸ್

ಇಲ್ಲಿನ ಪಕ್ಷ ಪದ್ಧತಿಗಳು ಭಿನ್ನರೀತಿಯಲ್ಲಿವೆ. ರಾಜಕೀಯ ಪಕ್ಷಗಳು ಸರ್ಕಾರಕ್ಕೂ ಬಾಹ್ಯವಾಗಿ ರಚಿತವಾಗಿವೆ. ಇಂಗ್ಲೆಂಡ್ ಮತ್ತು ಅಮೆರಿಕಾದೇಶಗಳಲ್ಲಿರುವಂತೆ ಇಲ್ಲಿ ಪಕ್ಷಗಳು ಬಲಿಷ್ಠತೆಯನ್ನು ಪಡೆದಿಲ್ಲ. ಪ್ರತಿಯೊಬ್ಬ ಉಮೇದುವಾರನೂ ನಾಮಕರಣಹೊಂದಿ ತನ್ನದೇ ಆದ ಒಂದು ರಂಗಸ್ಥಳವನ್ನೇರ್ಪಡಿಸಿ ಆವರ್ಣಕ್ಷೇತ್ರದಲ್ಲಿಯೇ ಬಹುಸಂಖ್ಯಾತ ಅಭಿಮತ ಪಡೆಯಲು ಸಾಹಸಪಡೆಯುತ್ತಾನೆ. ಕೆಳಗಿನ ಸಭೆಯಲ್ಲಿರುವ ಸದಸ್ಯರ ಸಂಖ್ಯೆಗನುಗುಣವಾಗಿ ರಂಗಸ್ಥಳಗಳು ಏರ್ಪಟ್ಟು ಅನೇಕ ಪಕ್ಷಗಳು ಉದ್ಭವಿಸಿವೆ. ಪಕ್ಷಗಳಲ್ಲಿ ಉಪಸಮಿತಿಗಳಿವೆ; ವರ್ಗಗಳಿವೆ. Conservative Moderates, ಮತ್ತು Republican. ಇವಲ್ಲದೆ Progressive Republican, radical republican, Socialist radicals ಮುಂತಾದುವುಗಳು. ಫ್ರೆಂಚರ ರಾಜಕೀಯವು ಜ್ಞಾನ ಸಿದ್ಧಾಂತದಲ್ಲಿ ನುರಿತಿಲ್ಲ. ಪ್ರತಿಪಕ್ಷಕ್ಕೂ ಒಬ್ಬ ನಾಯಕನು ಇದ್ದಾನೆ. ಆದರೆ ಪಕ್ಷಗಳು ಸರ್ಕಾರದಲ್ಲಿ ಯಾವುದೊಂದು ಪವಿತ್ರಕಾರ್ಯವನ್ನು ಸಾಧಿಸದೆ ಸರ್ಕಾರದ ಆಡಳಿತಆಕ್ರಮಣಕ್ಕಾಗಿ ನಿರ್ಮಾಣವಾಗುವುದರಿಂದ ಪಕ್ಷನಾಯಕನ ಪ್ರಭಾವವು ಹೆಚ್ಚಾಗಿದೆ. ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿರುವಂತೆ ಸಾಮೂಹಿಕಪಕ್ಷದ ಜವಾಬ್ದಾರಿ ಇಲ್ಲಿಲ್ಲ. ಪಕ್ಷನಾಯಕರ ಅಧೀನದಲ್ಲಿರುವ ಸದಸ್ಯರುಗಳನ್ನು ಅನೀತಿಯುತವಾದ ಕ್ರಮಗಳಿಂದ

---

Finer. Theory and Practice of Modern Government. 549

ಸಮುಷ್ಟಿಸಿದ್ಧಾಂತಕ್ಕಾಗಿ ನಿರ್ಬಂಧಿಸಿ ಶಾಸನಸಭೆಯು ತನ್ನ ಮಸೂದೆಗಳಾಗಿ ಬಹುಮತದವರ ಅಂಗೀಕಾರ ಪಡೆಯಬೇಕಾಗುತ್ತದೆ. ಇದರ ಪರಿಣಾಮವಾಗಿ ವ್ಯಕ್ತಿ ವ್ಯಕ್ತಿಗಳ, ಸಂಸ್ಥೆ ಸಂಸ್ಥೆಗಳ, ರಾಷ್ಟ್ರ ಉತ್ತಮ ಅಧಿಕಾರಸ್ಥಾನಗಳಿಗಾಗಿ, ಪರಸ್ಪರ ಭಯಂಕರ ಸ್ಪರ್ಧೆಗಳುಂಟಾಗುತ್ತವೆ. ಅಲ್ಲದೆ ಸರ್ಕಾರವನ್ನು ಅನೀತಿಯುತವಾಗಿ ವರ್ತಿಸುವಂತೆ ಪ್ರೇರೇಪಿಸುತ್ತಾರೆ. ಪ್ರತಿನಿಧಿಸಭೆಯು ಶಕ್ತಿಶೂನ್ಯವಾದುದು, ಅವಧಿ ಅಲ್ಪ, ಪ್ರಜೆಗಳು ದಕ್ಷರಾದ ಅಧಿಕಾರಿಗಳನ್ನು ಬಯಸುತ್ತಾರಾದುದರಿಂದ ರಾಜ್ಯತ್ವ ಅಭಿಮತಕ್ಕೆ ಹೆದ್ದಾರಿಯಾಗಿದೆ. ರಿಪಬ್ಲಿಕ್ ಸರ್ಕಾರವೇರ್ಪಡಬೇಕಾದರೆ, ಸ್ಥಿರವೂ ಬಲಿಷ್ಠವೂ ಮತ್ತು ನೀತಿಯುತವಾದ ರಾಜ್ಯಭಾರವನ್ನು ಹೊರುವ ಎರಡು ಸರ್ಕಾರ ಪಕ್ಷ ಮತ್ತು ಪ್ರತಿಪಕ್ಷಗಳು ಮಾತ್ರ ಅನಿವಾರ್ಯವೆಂಬ ಭಾವನೆ ರಾಜಕೀಯದಲ್ಲಿ ಮೂಡಬೇಕು. ಸ್ವಿಟಸರ್‌ಲೆಂಡನಲ್ಲಿ ಮಾತ್ರ ಪ್ರಜೆಗಳೇ ರಾಜಕೀಯ ಅಧಿಕಾರವನ್ನು ತಮ್ಮಲ್ಲಿಯೇ ಪಡೆದಿದ್ದಾರೆ. ಕೆಲವು ಕಾಂಟನುಗಳಲ್ಲಿ ವರ್ಣದಾತರೇ ಶಾಸನಸಭೆಯ ಸಹಾಯಕರಾಗಿದ್ದಾರೆ. ಕೆಲವು ಕಡೆಯಲ್ಲಿ **ಇನಿಷಿಯೆಟಿವ್ ಮತ್ತು ರೆಫರೆಂಡಮ್** ವಿಧಾನಗಳು ಆಚರಣೆಯಲ್ಲಿವೆ. ಶಾಸನ ಸಭೆಯು ಪ್ರಜಾವರ್ಗಕ್ಕೂ ಅಧೀನವಾಗಿರುವುದರಿಂದ, ಶಾಸನ ನಿರೂಪಣೆ ಮತ್ತು ಆಡಳಿತ ಅಧಿಕಾರಗಳನ್ನೂ ಪಡೆದಿದೆ. ಎಲ್ಲಿ ಪ್ರಜಾವರ್ಗವೇ ಪ್ರಜೆ ಮಸೂದೆಗಳನ್ನು ನಿರೂಪಿಸಿ, ಒಳಾಡಳಿತ, ವಿದೇಶಾಂಗನೀತಿಗಳ ವಿಚಾರದಲ್ಲಿ ನಿರ್ಧಾರಗಳನ್ನು ಮಾಡುತ್ತಾರೆಯೋ, ಶಾಸನ ಸಭೆಯು ಪ್ರತ್ಯಕ್ಷವಾಗಿ ಮತ್ತು ಸಂಪೂರ್ಣವಾಗಿ ಪ್ರಜಾಧೀನವಾಗಿದೆಯೋ ಅಲ್ಲಿ ರಾಜಕಾರ್ಯಪಕ್ಷಗಳ ನಿರ್ಬಂಧವಿಲ್ಲ. ಇಂಗ್ಲೆಂಡಿನಲ್ಲಿರುವಂತೆ, ರಾಜನೀತಿಯ ನಿರ್ಧಾರವನ್ನು ಸರ್ಕಾರವು ಮಾಡಬೇಕಾಗಿಲ್ಲ. ಅಥವಾ ಅಮೆರಿಕಾದಲ್ಲಿ ಸರ್ಕಾರಕ್ಕೂ ಬಾಹ್ಯವಾಗಿರುವ ಪಕ್ಷಗಳು ನಿರ್ಧರಿಸುವಂತೆ, ಇಲ್ಲಿ ಮಾಡಬೇಕಾದ್ದಿಲ್ಲ. ಮತದಾತರೇ ರಾಷ್ಟ್ರಸಮಸ್ಯೆಗಳಿಗನುಗುಣವಾಗಿ ಅಂಗೀಕಾರ ಅಥವಾ ನಿರಾಕರಣೆಗಳಿಗಾಗಿ ಭಾಗವಹಿಸುವರು. ಪ್ರಜಾವರ್ಗ ಸಂಸ್ಥೆಗಳು ಪ್ರಗತಿಪರ ಶಾಸನಗಳನ್ನು ರಚಿಸುವುವು. ಇಲ್ಲವೇ ಒಪ್ಪುವುವು.

ಹಾನಿಕರವೆಂದು ತೋರಿದುದನ್ನು ನಿರಾಕರಿಸುವುದು. ಆದುದರಿಂದ ಅಧಿಕಾರಾಕ್ರಮಣಕ್ಕಾಗಿ ಸ್ಪರ್ಧಿಸುವ ಪಕ್ಷಗಳ ಗೊಂದಲ ಸ್ವಿಸ್‌ರಾಷ್ಟ್ರದಲ್ಲಿ ಕಾಣಿಸುವುದಿಲ್ಲ. ಈ ವಿಧವಾದ ಪಕ್ಷರಹಿತ ಸರ್ಕಾರವನ್ನು ಧ್ಯೇಯಾತ್ಮಕ ಸರ್ಕಾರವೆಂದು ಭಾವಿಸಬಹುದು.

## ಡೊಮಿನಿಯನ್ ರಾಷ್ಟ್ರಗಳಲ್ಲಿ — Canada

ಕೆನಡಾದ ರಾಷ್ಟ್ರವಿಧಾನದಲ್ಲಿ ಪಕ್ಷಗಳ ಸಂಘಟನೆ (Organisation) ಆಗಲಿ, ರಾಜಕೀಯ ಧ್ಯೇಯಗಳಿಂದ ಕೂಡಿದ ಕಾರ್ಯಗಳಾಗಲೀ, ಕಂಡುಬರುವುದಿಲ್ಲ. ನಿಯಂತ್ರಣವಿಲ್ಲದ, ಸ್ವಚ್ಛಂದವರ್ತನೆ ಮತ್ತು ಗೂಢ ವ್ಯಾಪಾರವುಳ್ಳ ಪಕ್ಷಗಳೇ ಸರ್ಕಾರ ಯಂತ್ರದ ಚಲನೆಗೆ *ಮುಖ್ಯ ಸಾಧನಗಳು. ಲಿಬರಲ್ಸ್, ಮತ್ತು ಕನ್‌ಸರವೇಟಿವ್ ಎಂಬ ಎರಡು ಪಕ್ಷಗಳು ಕೆನಡಾ ಪಾರ್ಲಿಮೆಂಟು ಸರ್ಕಾರದಲ್ಲಿ ಪ್ರಾಬಲ್ಯ ಹೊಂದಿತ್ತು. ಇವೆರಡರ ಕಾರ್ಯಕ್ರಮಗಳು ಪ್ರೊಟೆಕ್ಷನಿಸ್ಟ್ ಮತ್ತು ಫ್ರೀಟ್ರೇಡ್ ಧ್ಯೇಯಗಳನ್ನು ಸಾಧಿಸುವ, ಅಂತರ ರಾಷ್ಟ್ರನೀತಿಯಲ್ಲಿ ಕೆನಡಾ ರಾಷ್ಟ್ರಕ್ಕೆ ಉತ್ತಮ ಸ್ಥಾನವನ್ನು ಪಡೆಯುವ ರೀತಿಯಲ್ಲಿಯೂ ನಿರತವಾಗಿವೆ. ಇತ್ತೀಚೆಗೆ ಪ್ರಬಲವಾಗುತ್ತಿರುವ ಕಾರ್ಮಿಕ ಪಕ್ಷದ ಧ್ಯೇಯದ ನಿರಾಕರಣೆಯಲ್ಲಿ ತೊಡಗಿದೆ. ಆದರೆ ರೈತಜನಾಂಗ ಮತ್ತು ಕಾರ್ಮಿಕ ವರ್ಗದವರು (Farmers Platform) ಮತ್ತು ಲೇಬರ್ ಪಾರ್ಟಿಗಳನ್ನು ರಚಿಸಿಕೊಂಡು, ರಾಜಕೀಯಾಧಿಕಾರಕ್ಕಾಗಿ ಸ್ಪರ್ಧಿಸುತ್ತಿದ್ದಾರೆ. ವಿಶ್ವಶಾಂತಿ, ಸಾಮ್ರಾಜ್ಯ ಭಾವನೆಯ ನಿರಾಕರಣೆ, ಅಂತರರಾಷ್ಟ್ರೀಯ ಹಕ್ಕುಗಳಲ್ಲಿ ಸಮಾನತ್ವ, ಬಂಡವಾಳಗಾರರ ನಿಯಂತ್ರಣ, ಅನುಕ್ರಮಣೀಯವಾದ ತೆರಿಗೆಗಳ ಮೂಲಕ ಮುದ್ರಣ ಸ್ವಾತಂತ್ರ್ಯ. ಅನುಪಾತಿಕ ಪ್ರಾತಿನಿಧ್ಯ, ಸ್ತ್ರೀಯರ ಸ್ವಾತಂತ್ರ್ಯ, ಪಾರ್ಲಿಮೆಂಟಸಭೆಯಲ್ಲಿ, ಸ್ತ್ರೀಯರಿಗೆ ಉಮೇದುವಾರಿಕೆಯ ಹಕ್ಕು, ಇವೇ Farmers Platform ನಿನ ಧ್ಯೇಯಗಳು: ಆಸ್ತಿಯ ಹಕ್ಕು ಮತ್ತು ಕೃತಕವಾದ ವ್ಯಾಪಾರ ಹಕ್ಕುಗಳಿಗಿಂತ ಮಾನವನ ಹಕ್ಕುಗಳೇ ಪವಿತ್ರ

* Dawson. Constitutional Issues in Canada. P. 357.

ವಾದುದರಿಂದ ಸಮಾಜವಾದವನ್ನು ಅಂಗೀಕರಿಸಿದೆ. ಈ ವರ್ಗದ ಧ್ಯೇಯದ ಪ್ರಕಾರ, ಭೂಮಿ, ಸ್ವತ್ತು ಮತ್ತು ಕಾರ್ಖಾನೆಗಳ ಮಾಲಿಕತ್ವ, ಬ್ಯಾಂಕುಗಳೂ. ಉತ್ಪತ್ತಿಯ ಸಾಧನೆಗಳೂ ಇವೆಲ್ಲವೂ ಸರ್ಕಾರಕ್ಕೆ ಸೇರ ಬೇಕು. ಹಾಗೆಯೇ ಸ್ತ್ರೀ, ವರ್ಗ, ಜಾತಿ, ಮತ, ಇವುಗಳ ಭೇದವಿಲ್ಲದೆ ವ್ಯಕ್ತಿಗೆ ಸಮಾನವಾದ ಪೌರೇಯ ಅಧಿಕಾರವನ್ನು ಕೊಟ್ಟು, ಸಾರ್ವ ಜನಿಕ ವಿದ್ಯಾಭ್ಯಾಸದ ಮೂಲಕ, ಜನ ಜೀವನದ ಮಟ್ಟವನ್ನು ಎತ್ತುವುದು. ಕಾರ್ಮಿಕರ ವರ್ಗದ ಧ್ಯೇಯ.

## ದಕ್ಷಿಣ ಆಫ್ರಿಕ—South Africa

1910 ರಲ್ಲಿ ಭೋಧನು (Botha) ರಚಿಸಿದ ಸೌತ್ ಆಫ್ರಿಕ ಪಾರ್ಟಿಯು ಈಗ ಅತ್ಯಂತ ಪ್ರಬಲವಾಗಿ, Het Volk ಮುಂತಾದ ಸಾಂಪ್ರದಾಯಪರವಾಗಿ ಬಂದ ಪಕ್ಷಗಳನ್ನು ಒಳಗೊಂಡಿದೆ. ಡಚ್ಚ ಜನ ರನ್ನೂ, ಇಂಗ್ಲೀಷ್ ಜನರನ್ನೂ, ಒಟ್ಟುಗೂಡಿಸುವುದು, ಸೌತ್ ಆಫ್ರಿಕಾ ದಲ್ಲಿರುವ ಎಲ್ಲಾ ಜನಾಂಗಗಳಿಗೂ ಸೌಹಾರ್ದವನ್ನು ಬೆಳಿಸುವುದು, ಬ್ರಿಟಿಷ್ ಸಾಮ್ರಾಜ್ಯದಲ್ಲಿ, ಸೌತ್ ಆಫ್ರಿಕಾ ಸರ್ಕಾರಕ್ಕೆ ಉತ್ತಮ ಸ್ಥಾನ ವನ್ನು ಗಳಿಸುವಂತೆ ಮಾಡುವುದು, ಇವು ಸೌತ್ ಆಫ್ರಿಕಾಪಾರ್ಟಿಯ ಧ್ಯೇಯ. 1912 ರಲ್ಲಿ Hert Zog ರಾಜನೀತಿಜ್ಞನು ಸೌತ್ ಆಫ್ರಿಕಾ ಪಾರ್ಟಿಗೆ ಪ್ರತಿ ಪಕ್ಷವಾದ, ನ್ಯಾಷನಲಿಸ್ಟ್ ಪಕ್ಷವನ್ನು ರಚಿಸಿದನು. ಸೌತ್ ಆಫ್ರಿಕಾಯೂನಿಯನ್ ಸರ್ಕಾರವನ್ನು ಸಾಮ್ರಾಜ್ಯದಿಂದ ಪ್ರತ್ಯೇಕಿಸಿ, ಪರಮಾಧಿಕಾರದಿಂದ ಕೂಡಿದ ಪ್ರಜಾಪ್ರಭುತ್ವಸರ್ಕಾರವನ್ನು ನಿರ್ಮಾಣ ಮಾಡುವುದು, ಇದರ ಧ್ಯೇಯ. *ಇವೆರಡು ಪಕ್ಷಗಳ ಸ್ಪರ್ಧೆಯ ಪರಿಣಾಮವಾಗಿ 1931 ರಲ್ಲಿ West Minister Statute ಪ್ರಕಾರ ನ್ಯಾಷನಲಿಸ್ಟ್ ಪಾರ್ಟಿಯ ಅನೇಕ ಮೂಲಾಧಾರ ತತ್ವಗಳೇ ರಾಷ್ಟ್ರದಲ್ಲಿ ಹೆಚ್ಚು ಪ್ರಶಸ್ತಿಯನ್ನು ಪಡೆಯಿತು. ರಾಷ್ಟ್ರದ ಐಕಮತ್ಯವನ್ನೇ ಸಾಧಿಸಲು ನ್ಯಾಷನಲಿಸ್ಟ್ ಪಾರ್ಟಿಯ ಅಂಗಗಳಾಗಿ, ರಿಪಬ್ಲಿಕನ್ ಪಾರ್ಟಿ, ಮಲನ್‌ಪಾರ್ಟಿ ಮತ್ತು ಲೇಬರ್ ಪಾರ್ಟಿಗಳು ಉದ್ಭವವಾಗಿವೆ.

---

* Hofmeyr South Africa P 2 30. Bryce. Modern Dmocracies II 224

## Australia — ಆಸ್ಟ್ರೇಲಿಯಾ

ಆಸ್ಟ್ರೇಲಿಯಾದಲ್ಲಿ ಜವಾಬ್ದಾರಿ ಸರ್ಕಾರವು ಸುವ್ಯವಸ್ಥಿತವಾದ ಪಕ್ಷಗಳಆಧಾರದ ಮೇಲೆ ನಿಂತಿದೆ. Protectionist Free Trade, ಮತ್ತು ಲೇಬರ್ ಪಾರ್ಟಿಗಳು ಮುಖ್ಯವಾದ ಪಕ್ಷಗಳು. ಲೇಬರ್‌ಪಾರ್ಟಿಯು ಇತ್ತೀಚೆಗೆ ಬಹು ಸಂಖ್ಯಾತರ ಅಭಿಮತವನ್ನೇ ರಾಷ್ಟ್ರದ ಪ್ರಜಾವರ್ಗದಲ್ಲಿ ಮಾತ್ರವಲ್ಲದೆ, ಸರ್ಕಾರದ ಶಾಸನಸಭೆಗಳಲ್ಲಿಯೂ ಪಡೆದಿದೆ. ಇತ್ತೀಚೆಗೆ ಲೇಬರ್ ಪಾರ್ಟಿಯನ್ನು ಯಶಸ್ವಿಯಾಗಿ ಸ್ಪರ್ಧಿಸಲು Protectionist ಮತ್ತು Free Trade ಪಾರ್ಟಿಗಳು ಒಂದಾಗಿ ನ್ಯಾಷನಲಿಸ್ಟ್ ಪಾರ್ಟಿಯೆಂದೂ, ಅಥವಾ ಯುನೈಟೆಡ್ ಆಸ್ಟ್ರೇಲಿಯ ಪಾರ್ಟಿಯೆಂದೂ ಹೆಸರು ಪಡೆದಿದೆ. * ಲೇಬರ್ ಪಾರ್ಟಿ ಮತ್ತ Farmers ಪಾರ್ಟಿಗಳು Manifesto ಗಳಿಂದಲೂ, ಗುಪ್ತಸಮಿತಿಗಳಿಂದಲೂ, ಅನೇಕ ಸಂಸ್ಥೆಗಳನ್ನು ಮತ್ತು ಉಮೇದುವಾರರನ್ನು ಮತ್ತು ಮತದಾತರನ್ನು ಇವರುಗಳನ್ನು ನಿಯಂತ್ರಿಸುವುದರಿಂದಲೂ, ಸರ್ಕಾರದ ಶಾಸಕಾಂಗ ಮತ್ತು ಕ್ಯಾಬಿನೆಟ್ ಅಂಗಗಳನ್ನೇ ನಿರ್ಬಂಧಿಸುವುದರಿಂದಲೂ, ತನ್ನ ಸಮಾಜವಾದದಧ್ಯೇಯಗಳನ್ನು ಸಾಧಿಸುತ್ತಿವೆ. ಯುನೈಟೆಡ್ ಆಸ್ಟ್ರೇಲಿಯಾ ಪಾರ್ಟಿಯು ಲೇಬರ್ ಪಾರ್ಟಿಯ ಹಾಗೆ, ಸುವ್ಯವಸ್ಥಿತ ಸಾಧನೆಗಳಿಂದ, ಸಮಾಜವಾದದ ವಿರುದ್ಧ ಭಾವನೆಗಳನ್ನು ಪ್ರಚಾರಮಾಡಿ ಬಂಡವಾಳತನದ ಪ್ರಾಶಸ್ತ್ಯವನ್ನು ಸರ್ಕಾರದಲ್ಲಿ ಹೆಚ್ಚಿಸಲು ಪ್ರಯತ್ನಿಸುತ್ತಿದೆ.

## Autocracy

ಸ್ವಚ್ಛಂದ ಪ್ರಭುತ್ವದಲ್ಲಿ ಪಕ್ಷಗಳರಚನೆಗೆ ಅವಕಾಶವಿಲ್ಲ. ನಿರಂಕುಶ ಪ್ರಭುತ್ವದಲ್ಲಿ ಪಕ್ಷಗಳ ರಚನೆಗೆ ಅವಕಾಶವಿಲ್ಲದೆ ಸರ್ಕಾರವನ್ನೆ ಆಕ್ರಮಿಸುವ ಧ್ಯೇಯವನ್ನೇ ಹೊಂದಿರುವ ಒಂದು ನಿರ್ದಿಷ್ಟ ಪಕ್ಷಕ್ಕೆ ಮಾತ್ರ ಹೆಚ್ಚು ಮನ್ನಣೆ. ಪಕ್ಷರಹಿತವಾದ ರಾಷ್ಟ್ರವೇ ಪ್ರಗತಿಪರವೆಂಬುದು, ಭಾವನೆ-

* Hofmeyr South Africa P 2 30. Bryce. Modern Dmocracies 11 224

ಜರ್ಮನಿಯಲ್ಲಿ ಹಿಟ್ಲರ್ ನಿರಂಕುಶಾಧಿಕಾರವನ್ನು ಸ್ಥಾಪಿಸುವ ಮುನ್ನ ಅನೇಕ ಪಕ್ಷಗಳಿದ್ದವು. ವಂಶಪಾರಂಪರ್ಯವಾದ ಕಾರ್ಯಾಂಗ ಸಮಿತಿಗೆ ಹೆಚ್ಚು ಅಧಿಕಾರವಿತ್ತುದರಿಂದ ಪಕ್ಷಗಳು ರಚಿಸಿದ ಸಚಿವ ಮಂಡಲಕ್ಕೆ ಅಧಿಕಾರ ವಿರಲಿಲ್ಲ. ಪ್ರಜಾವರ್ಗವು ಸಜಾತೀಯವಾಗಿಲ್ಲವಾದುದರಿಂದ ಐಕ್ಯಮತ್ಯಕ್ಕೆ ಆಸ್ಪದವಾಗಿರಲಿಲ್ಲ. ವ್ಯಕ್ತಿಯ ಸ್ವಾರ್ಥತೆಯೇ ಹೆಚ್ಚಿದ್ದುದರಿಂದ ಪಕ್ಷಗಳು ಸುವ್ಯವಸ್ಥಿತವಾಗಿರಲಿಲ್ಲ. ಪ್ರಜಾಪ್ರತಿನಿಧಿ ಸರ್ಕಾರವಿದ್ದರೂ ಜವಾಬ್ದಾರಿ ಸರ್ಕಾರವಿರಲಿಲ್ಲ. ಪಕ್ಷಪ್ರತಿ ಪಕ್ಷಗಳ ರಾಜಕೀಯ ಧ್ಯೇಯಗಳು ನಿರ್ದಿಷ್ಟವಾಗಿರಲಿಲ್ಲವಾದುದರಿಂದಲೂ ಮತ್ತು ಯಾವಾಗ ಮತ್ತು ಎಷ್ಟು ಅವಧಿ ಸರ್ಕಾರವನ್ನು ಪಕ್ಷಗಳು ರಚಿಸಬಹುದೆಂಬ ವಿಚಾರ ಸಂದಿಗ್ಧವಾದುದರಿಂದಲೂ ಇಂಗ್ಲೆಂಡ್ ಮತ್ತು ಅಮೆರಿಕಾ ಪಕ್ಷಗಳ ದಕ್ಷತೆ ಮತ್ತು ಜವಾಬ್ದಾರಿಯು ಜರ್ಮನ್ ಪಕ್ಷಗಳಿಗಿರಲಿಲ್ಲ. ಪಕ್ಷಗಳು ಹೆಚ್ಚು ಪ್ರಗತಿ ಪಡೆಯದ ಹಾಗೆ, ಸರ್ಕಾರವು ತಡೆಯುತ್ತಿತ್ತು. ಮುದ್ರಣಾಲಯಗಳನ್ನು ನಿಯಂತ್ರಿಸಿ, ಸಾಮಾಜಿಕರ ಪ್ರಶ್ನೆಗಳನ್ನು ಪ್ರಕಟಿಸಲು ಅವಕಾಶಕೊಡದೆ ಪಕ್ಷಗಳ ಸ್ಪರ್ಧೆಗಳನ್ನು ಹೆಚ್ಚಿಸಿ ಅವುಗಳು ಬಲಗುಂದಿ ಅಧೀನವಾಗುವ ಪರಿಸ್ಥಿತಿಯನ್ನು ಕಟ್ಟಿಸಿತ್ತು. ರಾಷ್ಟ್ರಸಚಿವರು ಪಕ್ಷಗಳ ಅಧೀನರಾಗಿರಲಿಲ್ಲ; ಫ್ರಾನ್ಸ್‌ನಲ್ಲಿರುವಂತೆ 1934 ರ ವರೆಗೆ National Peoples ಪಾರ್ಟಿ ಜರ್ಮನ್ ಪೀಪಲ್ಸ್ ಪಾರ್ಟಿ, Democrats, Social Democrats, ಮತ್ತು ಇತರ 9 ಪಕ್ಷಗಳು ಸರ್ಕಾರದ ಹತೋಟಿಗಾಗಿ ಸ್ಪರ್ಧಿಸುತ್ತಿದ್ದುವು. ಇತ್ತೀಚೆಗೆ ಅತ್ಯಂತ ಪ್ರಬಲದಿಂದ ಪಾರ್ಟಿಯಾದುದು ನಾಜ್ಜಿ (Nazi) ಪಾರ್ಟಿ. ಸಮಾಜವಾದ ಪ್ರಚಾರವನ್ನು ಪ್ರತಿಬಂಧಿಸಲು ಬವೇರಿಯಾ ಮುಂತಾದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಕ್ರಾಂತಿ ಪ್ರತಿಕ್ರಾಂತಿಗಳ ಪರಿಣಾಮವಾಗಿ ನಾಜ್ಜಿ ಪಾರ್ಟಿಯು ಉತ್ಪನ್ನವಾಯಿತು.

1923 ರಲ್ಲಿ ಜನರಲ್ ಲೂಡೆಂಡಾರ್ಫ್ ಸೇರಿದಮೇಲೆ ಪಾರ್ಟಿಯು

---

Fiver. Theory and Practice of modern Government Vol 1. P 5 G. D. Cole. The Intelligent Man's guide to Socialism

ಬಲವಾಯಿತು. 1928ರಲ್ಲಿ ಅನೇಕ ಉತ್ತಾಪಕರ ಘಟನೆಗಳು ನಡೆದು ಆರ್ಥಿಕ ಗೊಂದಲವು ಹೆಚ್ಚಿ ಜರ್ಮನಿಯಲ್ಲಿ ಸಮಾಜಿಕ ಮತ್ತು ಆರ್ಥಿಕ ಸುಧಾರಣೆಗಳ ಅವಶ್ಯಕತೆ ತಲೆದೋರಿತು. ನಾಜ್ಜಿಪಾರ್ಟಿಯ ಸದಸ್ಯರು ಪ್ರಜಾ ಮನರಂಜಕವಾದ ಕಾರ್ಯಕ್ರಮಗಳಿಂದ ರೈಷ್ಟ್‌ಗ್ಜ (Reishstag) ಸಭೆಯಲ್ಲಿ ಬಹುಭಾಗ ಸದಸ್ಯತ್ವವನ್ನು ಪಡೆದರು. ಜನರಲ್ ಹಿಂಡೆಂಬರ್ಗನ ಸಹಾಯದಿಂದ 1933ರಲ್ಲಿ ಹಿಟ್ಲರ್‌ನು ತನ್ನ ಪಾರ್ಟಿಯ ವಿರುದ್ಧಪಕ್ಷಗಳನ್ನೆಲ್ಲಾ ರದ್ದುಮಾಡಿ, ನಾಷನಲಿಸ್ಟ ಪಾರ್ಟಿಯ ಸದಸ್ಯರನ್ನು ಸೇರಿಸಿಕೊಂಡು ನಾಜ್ಜಿ ಸರ್ಕಾರವನ್ನು ರಚಿಸಿದನು. 1934 ರಿಂದ ಈಚೆಗೆ ರಾಷ್ಟ್ರಸರ್ಕಾರದಲ್ಲಿ ಮೇಲಿನ ಸಭೆ ರೈಕ್ ರಾತ್ (Richasrat) ರದ್ದಾಯಿತು; ರೈಕ್‌ಸ್ಟಾಗ್ (Reichstag)ನ ಕೆಳಗಿನ ಸಭೆಯನ್ನು ದುರ್ಬಲವನ್ನಾಗಿ ಮಾಡಲಾಯಿತು. ಅನುಪಾತಿಕ ಪ್ರಾತಿನಿಧ್ಯದ ಆಚರಣೆ ರದ್ದಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ನಾಜಿ ಮತಾವಲಂಬಿಗಳೇ ವರ್ಣಕರ್ತಸಮಾಜದ ಅಭಿಮತವನ್ನು ಕೊಡುವ ಅಧಿಕಾರವನ್ನು ಪಡೆಯಿತು. ಆದುದರಿಂದ ರಾಷ್ಟ್ರದ ಕೆಳಗಿನ ಸಭೆಯು ನಾಜ್ಜಿ (Nazi) ತತ್ವಗಳ ಪ್ರತಿಬಿಂಬವಾಯಿತು. ಹಿಂಡೆಂಬರ್ಗ (Hindenburgh) ನ ಮರಣಾನಂತರ, ಪ್ರೆಸಿಡೆಂಟ್ ಅಧಿಕಾರ ಮತ್ತು ಛಾನ್ಸಲೆರ್ ಅಧಿಕಾರಿಗಳೆರಡು ನಾಜ್ಜಿ ಪಾರ್ಟಿನಾಯಕನಾದ ಹಿಟ್ಲರ್‌ನಲ್ಲಿ ಐಕ್ಯವಾಯಿತು. ವೈಮಾರ್ ರಾಷ್ಟ್ರವಿಧಾನವು (Weimar Constitution) ಅಳಿದು ಹೋಗಿ, ನಾಜ್ಜಿ ತತ್ವಯುತವಾದ ಏಕ ನಾಯಕ ಪ್ರಭುತ್ವವು ಏರ್ಪಾಟಾಯಿತು.

ನಾಜಿ ಪಕ್ಷದ ಕಾರ್ಯಕ್ರಮ ಮೂರು ವಿಧವಾಗಿತ್ತು. ಮಾರ್ಕ್ಸ್‌ನ ಸಮಾಜಸಿದ್ಧಾಂತಕ್ಕೆ ವಿರುದ್ಧ ಚಳುವಳಿ ಮತ್ತು ಮಾರ್ಕ್ಸ್‌ಸಿದ್ಧಾಂತವನ್ನು ಒಪ್ಪಿರುವ ರಾಷ್ಟ್ರಗಳ ದೂಷಣೆ; ನಾಜ್ಜಿ ತತ್ವದನುಗುಣವಾಗಿ ಇಡೀ ಜರ್ಮನ್‌ರಾಷ್ಟ್ರದ ಜೀವನ, ಸಂಸ್ಥೆಗಳು, ಕಾರ್ಯಕ್ರಮಗಳು, ಮನೋಭಾವನೆ ಮುಂತಾದುವುಗಳನ್ನು ಪರಿವರ್ತಿಸುವುದು; ಅನಾರ್ಯರಾದವ

ರನ್ನು ರಾಷ್ಟ್ರದಿಂದ ದೂಡಿ, ಜರ್ಮನ್ ಜನಾಂಗವನ್ನು ಪರಿಶುದ್ಧವನ್ನಾಗಿ ಮಾಡುವುದು. ನ್ಯಾಷನಲ್ ಸೋಷಿಯಲಿಸಮ್ (National Socialisum) ಎಂಬುದು ರಾಷ್ಟ್ರೀಯತೆಯ ಪರಾಕಾಷ್ಟತೆ. ಇದು ಅನೇಕ ರೂಪಗಳಲ್ಲಿ ಜರ್ಮನ್ ರಾಷ್ಟ್ರದಲ್ಲಿ ಅವತರಿಸಿತು. ನಾಜ್ಜಿ ತತ್ವ ಯುತವಾದ ಭಾವನೆಯೆಂದರೆ ವರ್ಣಕರ್ತಸಮಾಜ, ಮತದಾತರು, ಅವರ ಹಕ್ಕುಗಳು, ಇವುಗಳಿಂದ ಪ್ರಜಾಪ್ರಭುತ್ವದ ಸರ್ವನಾಶ. ಅನಾರ್ಯ ರೆನ್ನುವ ಜ್ಯೂಸ್ (Jews) ಜನಾಂಗದವರನ್ನು ಸದೆಬಡಿದು, ಅವರ ಆಸ್ತಿ ಪಾಸ್ತಿಗಳನ್ನು ಆಕ್ರಮಿಸಿ ಅನೇಕ ವಿಧವಾದ ಸಮಾಜ ಸುಧಾರಣೆಗಳಿಂದ ಜನಾಂಗವನ್ನು ಆರ್ಯಜನಾಂಗವನ್ನಾಗಿ ಪರಿವರ್ತಿಸುವುದು. ಹಿಟ್ಲರ್‌ನು, ನಾಜ್ಜಿ ಪಕ್ಷಯುತವಾದ ಏಕ ಪಕ್ಷರಾಷ್ಟ್ರವನ್ನು ನಿರ್ಮಿಸಿ, ಪರಮಾಧಿ ಕಾರವನ್ನು ರಾಷ್ಟ್ರನಾಯಕನಲ್ಲಿ ಕೇಂದ್ರೀಕರಿಸಿ, ವರ್ಸೈಲ್ (Versailles Treaty of 1918) ಒಪ್ಪಂದದ ನ್ಯೂನತೆಗಳನ್ನು ಹೋಗಲಾಡಿಸಿ, ವಿದೇಶಾಂಗನೀತಿಯಲ್ಲಿ ಅತ್ಯಂತ ಉತ್ತಮಸ್ಥಾನವನ್ನು ಪಡೆಯಲು ಅಗತ್ಯ ವಾದ ಕಾರ್ಯಕ್ರಮವನ್ನು ಕೈಕೊಂಡನು. ಇದರ ಪರಿಣಾಮವಾಗಿ ಜರ್ಮನ್ ರಾಷ್ಟ್ರವು ಪ್ರಭಾವಯುತವಾಗಿ, ಹಿಟ್ಲರಿನ ಮುಂದಾಳತ್ವದಲ್ಲಿ ಐರೋಪ್ಯರ ಅನೇಕ ರಾಷ್ಟ್ರಗಳನ್ನು ಆಕ್ರಮಿಸಿತು. ಇತ್ತೀಚೆಗೆ ನಡೆದಿರುವ ಭಯಂಕರ ಘಟನೆಗಳಿಂದ ಹಿಟ್ಲರಿನ ನಾಜ್ಜಿ ಪಾರ್ಟಿಯು ನಾಶವಾಯಿತು. ಈಗ ಜರ್ಮನ್‌ರಾಷ್ಟ್ರವೂ ಬ್ರಿಟಿಷ್, ಅಮೆರಿಕಾ ಮತ್ತು ರಷ್ಯ ಇವರುಗಳಿಂದ ಆಕ್ರಮಿಸಲ್ಪಟ್ಟು ಪ್ರಜಾಪ್ರಭುತ್ವದ ರಚನಾತ್ಮಕ ಕಾಲವೂ ಸಮಾಪಿಸಿದೆ ಯೆಂದು ನಿರ್ದಿಷ್ಟವಾಗಿ ಹೇಳಬಹುದು.

ಜರ್ಮನ್ ರಾಷ್ಟ್ರದಲ್ಲಿ ಏರ್ಪಟ್ಟಿರುವಂತೆಯೇ ಇಟಲಿ ಮತ್ತು ಇತರ ಸರ್ಕಾರಗಳಲ್ಲಿ ಏಕಪಕ್ಷ ನಾಯಕಪ್ರಭುತ್ವವು ಏರ್ಪಟ್ಟಿತ್ತು. ಇಟಲಿ ಯಲ್ಲಿದ್ದ ಪಕ್ಷಕ್ಕೆ ಫ್ಯಾಸಿಸ್ಟ್ (Fascist) ಎಂತಲೂ, ರಷ್ಯಾದಲ್ಲಿರು ವುದಕ್ಕೆ ಕಮ್ಯೂನಿಸ್ಟ್ ಪಕ್ಷವೆಂದೂ ಹೆಸರು. ಇದು ಕಠಿಣವಾದ ಶಿಸ್ತು, ನಿಯಮ, ಕಟ್ಟು ಮುಂತಾದವುಗಳಿಂದ ಸದಸ್ಯತ್ವವನ್ನು ಏರ್ಪಡಿಸಿ, ತಮ್ಮ

ತತ್ವ ಸಿದ್ಧಾಂತಗಳನ್ನು ಅನೇಕ ವಿಧವಾಗಿ ಜನಗಳಲ್ಲಿ ಪ್ರಚುರಪಡಿಸಿ, ಅವರ ಬೆಂಬಲದಿಂದ ಪರಮಾಧಿಕಾರವನ್ನು ಹೊಂದಿತ್ತು. ಸರ್ಕಾರ ವನ್ನೇ ಮುಖ್ಯ ಸಾಧನೆಯನ್ನಾಗಿಟ್ಟುಕೊಂಡು, ತಮ್ಮ ಸಿದ್ಧಾಂತವನ್ನೂ ರಾಷ್ಟ್ರ ಕ್ರಮವನ್ನೂ, ಇತರ ರಾಷ್ಟ್ರಗಳು ಅನುಮೋದಿಸುವಂತೆ ನಿರ್ಬಂಧಿ ಸುತ್ತಿತ್ತು. Fascist ರಾಷ್ಟ್ರಸರ್ಕಾರದ ಸಿದ್ಧಾಂತ ಮತ್ತು ರಚನೆ (Corporative State) **ವರ್ಗ ಸಂಘ,** Syndicates ವ್ಯಾಪಾರ ಕೇಂದ್ರಗಳ ಪ್ರಾತಿನಿಧ್ಯದಿಂದ ಕೂಡಿದ್ದುದರಿಂದ ಬಹಳ ಗಮನಾರ್ಹ ವಾಗಿತ್ತು. ಈ ವಿಧಸರ್ಕಾರದ ಸೃಷ್ಟಿಕರ್ತನಾದ ಮುಸಲನೀ ತನ್ನ ರಾಷ್ಟ್ರಾಭ್ಯುದಯಕ್ಕಾಗಿ ವಿಶೇಷ ಕಾನೂನುಗಳಿಂದ ಒಳಾಡಳಿತ ಸ್ಥಿತಿ ಗಳನ್ನು ಸುಧಾರಿಸಿ, ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಗಣ್ಯ ಸ್ಥಾನ ಗಳನ್ನು ಪಡೆದು, ಸ್ವಚ್ಛಂದಾಧಿಕಾರದಿಂದ ಸಾಮ್ರಾಜ್ಯವನ್ನು ಕಟ್ಟಿ ಅಲ್ಪ ಕಾಲದಲ್ಲಿ ಅವನತಿಯನ್ನು ಪಡೆದನು.

ರಷ್ಯ ದೇಶದ ವಿಧಾನದಲ್ಲಿ ಸೋವಿಯಟ್ ಸರ್ಕಾರದಲ್ಲಿ ಅತ್ಯಂತ ಪ್ರಭಾವಯುತಪಕ್ಷ ಕಮ್ಯೂನಿಸ್ಟ್ ಪಕ್ಷ. ಜರ್ಮನಿ ಮತ್ತು ಇಟಲಿ ರಾಷ್ಟ್ರಗಳಲ್ಲಿ ರುವಂತೆಯೇ ಇಲ್ಲಿಯೂ ಏಕಪಕ್ಷಪ್ರಭುತ್ವ. ಲೆನಿನ್ ( Lenin ) ಸೃಷ್ಟಿಸಿದ ಕಮ್ಯುನಿಸ್ಟ್ ಪಕ್ಷವನ್ನು ಮತ್ತು ಅದರ ಸಿದ್ಧಾಂತವನ್ನೂ, ರಾಷ್ಟ್ರನಾಯಕ ನಾದ ಸ್ಟಾಲಿನ್ನನು ಇಡೀ ರಷ್ಯಾದಲ್ಲೆಲ್ಲಾ ಹರಡಿ, ಸದಸ್ಯತ್ವವನ್ನು ನಿರ್ಬಂಧಿಸಿ, ರಾಷ್ಟ್ರಹಿತಸಾಧನೆಗಾಗಿ ಸತತವೂ ದುಡಿಯುವಂತೆ ಪ್ರಜೆ ಗಳನ್ನು ಹುರಿದುಂಬಿಸಿ, ಪಕ್ಷವನ್ನು ಅತ್ಯಂತ ಪ್ರಭಾವಯುತವನ್ನಾಗಿ, ಮಾಡಿದನು. ಇದರ ಪರಿಣಾಮವಾಗಿ ಸೋವಿಯಟ್ ರಾಷ್ಟ್ರವು ಮಹಾ ಯುದ್ಧದಲ್ಲಿ ಯಶಸ್ಸನ್ನು ಗಳಿಸಿ, ಅಂತರರಾಷ್ಟ್ರೀಯ ಮತ್ತು ವಿದೇಶಾಂಗ ನೀತಿಯಲ್ಲಿ ಪ್ರಧಾನಪಾತ್ರವನ್ನು ವಹಿಸಿಕೊಂಡಿದೆ.

ಆಧುನಿಕ ಸರ್ಕಾರಗಳಲ್ಲಿ ರಚಿತವಾದ ಪಕ್ಷಗಳಲ್ಲಿ ಅನೇಕ ನ್ಯೂನತೆ ಗಳು ಕಂಡುಬರುತ್ತಿವೆ. ಪ್ರಜಾಪ್ರಭುತ್ವ ರಚನೆಗೆ ಪಕ್ಷಪದ್ಧತಿಗಳು ವಿರು ದ್ಧವಾಗಿವೆ. ಇವು ಸ್ವತಂತ್ರವಾದ ಸರ್ಕಾರಕ್ಕೆ ಅತಿ ಮುಖ್ಯವಾದ, ವ್ಯಕ್ತಿಯ

ಅಭಿಮತ, ಮತ್ತು ಕಾರ್ಯಗಳನ್ನ ತಡೆಗಟ್ಟಿ, ಸಾಮಾನ್ಯರ ಅಭಿಪ್ರಾಯವನ್ನು ನಿರೋಧಿಸಿ, ಅವಹೇಳನ ಮಾಡಿ, ನಿರಂಕುಶಾಧಿಕಾರದ ಚಳುವಳಿಯನ್ನು ಪ್ರಾರಂಭಿಸುತ್ತದೆ. ಮತ್ತು ಇವು ಕೇವಲ ವಿಶೇಷ ಸಮಿತಿಯಾಗಿ ಸರ್ಕಾರದ ಸಾಧನೆಗೆ ಬಾಹ್ಯವಾಗಿ ರಚಿಸಿರುವುದರಿಂದಲೂ, ಇವು ಯಾವ ನಿಯಂತ್ರಣವಿಲ್ಲದೆ, ಬೇಜವಾಬ್ದಾರಿಯಾಗಿ Boss Rule, ಸ್ವಚ್ಛಂದ ಪ್ರಭುತ್ವ ಮೋಸ, ಅನೀತಿ ಸರ್ಕಾರ ರಚನೆಗಳಿಗೆ ಅಸ್ಪದವಾಗಿದೆ. ಸಾಮಾನ್ಯವಾಗಿ ಜನಾಂಗದ ಪ್ರಜೆಗಳಲ್ಲಿ ಪ್ರಾಚೀನ ಮತ್ತು ಸಂಪ್ರದಾಯ ಪರರು, ಸ್ಥಿತಿಪಾಲಕರು, ಪ್ರಗತಿಪರರು, ಮತ್ತು ಕ್ರಾಂತಿಭಾವನೆಯ ಪೋಷಕರು ಎಂದು ನಾಲ್ಕು ವಿಧವಾಗಿ ರಾಜಕೀಯದಲ್ಲಿ ಸ್ಪರ್ಧಿಸುವರು. Boss Rule ಮತ್ತು ಪಕ್ಷನಾಯಕರ ಸ್ವಚ್ಛಂದಾಧಿಕಾರವನ್ನು, ಕೌಕಸ್‌ಗಳ ನಿರಕುಂಶ ಪ್ರಭುತ್ವವನ್ನು, 'Graft' ಮತ್ತು Party ಕಾರ್ಪೊರೇಷನ್‌ಗಳ ದುರಾಚರಣೆಯನ್ನು ಪ್ರತಿಬಂಧಿಸಲು, ಮೊದಲನೆಯದಾಗಿ, ರಾಷ್ಟ್ರ ಸರ್ಕಾರವು ತಾವೇ ರಾಜಕೀಯ ಪಕ್ಷಗಳ ರಚನೆ ಕ್ರಮ ಮತ್ತು ಧ್ಯೆಯಗಳನ್ನು ಸರಿಪಡಿಸಿ, ನಾಯಕರನ್ನು ಜವಾಬ್ದಾರಿಯುತರನ್ನಾಗಿ ಮಾಡಿ, ಪಕ್ಷಗಳು ಮತದಾತರ ಅಭಿಮತವನ್ನು ಪ್ರತಿಬಿಂಬಿಸುವಂತೆ ನಿರ್ಬಂಧಿಸಬೇಕು.

ಸ್ವಾತಂತ್ರಕ್ಕೆ ಹಾನಿ ಅಜ್ಞಾನವಾದುದರಿಂದ, ಸಾಮಾಜಿಕರ ವಿದ್ಯಾಭ್ಯಾಸಕ್ಕೆ ಸರ್ಕಾರವು ಹೆಚ್ಚು ಗಮನಕೊಟ್ಟು, ಮತದಾತನು ತನ್ನ ಅಭಿಮತವನ್ನು ಸುಲಲಿತವಾಗಿ ಸೂಚಿಸುವಂತೆ ಸಾರ್ವಜನಿಕ ಚುನಾವಣೆಗಳನ್ನು ಆದಷ್ಟು ಶಿಸ್ತು ಮತ್ತು ಕ್ರಮಬದ್ಧವಾಗಿ ಏರ್ಪಡಿಸಬೇಕು. ಸರ್ಕಾರವು ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ಪಡೆಯುವಂತೆ ತಕ್ಕ ಸಾಧನೆಗಳನ್ನೇ ಕೈಕೊಂಡು ಸಾಮಾಜಿಕದ ಆತ್ಮೀಯತೆ ಮತ್ತು ಸ್ವಾರ್ಥಕ್ಕಿಂತ, ಪಾರಮಾರ್ಥಿಕವೂ, ವರ್ಗದ ಮತ್ತು ಪಕ್ಷ ಧ್ಯೇಯಗಳಿಗಿಂತ ರಾಷ್ಟ್ರಧ್ಯೇಯಗಳು, ಸಾರ್ವಜನಿಕ ಹಿತಸಾಧಕವೆಂಬ ಭಾವನೆಯು ಮನರಂಜಕವಾದರೆ, ಪ್ರಜಾಪ್ರಭುತ್ವ ಸಿದ್ಧಿಯಾಗುವುದು.

# ಪ್ರಕರಣ ೯

## ವರಣದಾತರ ಅಭಿಮತದ ಸ್ವರೂಪ

ಆಧುನಿಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ತತ್ವವು ವೃದ್ಧಿಹೊಂದಿದ ಹಾಗೆಲ್ಲಾ ಶಾಸನಸಭೆಯ ಕಾರ್ಯಕಲಾಪಗಳು ಹೆಚ್ಚಾಗುತ್ತಿವೆ. ಪ್ರಾಚೀನ ಕಾಲದಲ್ಲಿ ರಾಜನೇ ಶಾಸನವನ್ನು ರಚಿಸಿ ಕಾರ್ಯರೂಪಕ್ಕೆ ತರುತ್ತಿದ್ದನು. ಇತ್ತೀಚೆಗೆ ಸಮಾಜ ಪ್ರಗತಿಯ ಪರಿಣಾಮವಾಗಿ ಪ್ರಜಾಪ್ರಭುತ್ವಕ್ಕೆ ವರಣ ಕ್ಷೇತ್ರಗಳ ರಚನೆ ಮತ್ತು ವರಣಾಧಿಕಾರವೇ ಹೆದ್ದಾರಿ ಎಂಬ ಭಾವನೆ ಪ್ರಬಲ ವಾಗಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ರಾಷ್ಟ್ರಸ್ವಾಮ್ಯ ಸೇರಿರುವುದರಿಂದ ಪ್ರಜೆಗಳೇ ರಾಷ್ಟ್ರ ಪ್ರಗತಿಗೆ ಕಾರಣರಾಗಿರಬೇಕು ; ಆದುದರಿಂದ ಆಡಳಿತವು ಇಡೀ ಜನಾಂಗದಲ್ಲಿ ಅಡಗಿರಬೇಕು. ಬಹು ಸಂಖ್ಯಾತರ ಅಭಿಪ್ರಾಯವನ್ನು ಅನುಸರಿಸಿ ದೇಶದ ಪ್ರಗತಿಗೆ ಕಾರಣವಾದ ಪ್ರಭುತ್ವವೇ ಪ್ರಜಾಪ್ರಭುತ್ವ ವೆಂದು ಅರಿಸ್ಟಾಟಲ್ ಹೇಳಿದ್ದಾನೆ; ಪ್ರಜಾಹಿತದೃಷ್ಟಿಯಿಂದ ಸ್ಥಾಪಿತ ವಾಗಿರುವ ಪ್ರಭುತ್ವವೇ ಪ್ರಜಾಪ್ರಭುತ್ವವೆಂದು ಅಬ್ರಾಹಂಲಿನ್ಕನನ ಅಭಿ ಮತ. ಪ್ರಜೆಗಳಿಗೆ ಮತಾಧಿಕಾರ, ಸಾಮಾಜಿಕ ರಾಜಕೀಯಗಳಲ್ಲಿ ಸಮತೆ, ಅನೀತಿಯುತ ಸರ್ಕಾರದಲ್ಲಿ ಅತೃಪ್ತಿ ಮತ್ತು ಕಠೋರ ಶಾಸನಗಳನ್ನೂ ನಿರಂಕುಶ ಪ್ರಭುತ್ವವನ್ನೂ ಹೋಗಲಾಡಿಸುವುದು – ಇವು ಪ್ರಜಾಪ್ರಭುತ್ವದ ಮುಖ್ಯ ಧ್ಯೇಯ.

ಪ್ರತ್ಯಕ್ಷ ಪ್ರಜಾಪ್ರಭುತ್ವವೂ ಆಧುನಿಕ ರಾಷ್ಟ್ರಗಳಲ್ಲಿ ಸಾಧ್ಯವಿಲ್ಲ. ಈಗಿನ ರಾಷ್ಟ್ರಗಳು ಬಹು ಪ್ರಜಾಸಂಖ್ಯೆಯಿಂದ ಕೂಡಿರುವುದರಿಂದ ಬಹುಸಂಖ್ಯಾತರ ಅಭಿಮತವನ್ನು ಸರ್ಕಾರದಾಡಳಿತ ಕಾರ್ಯಗಳಲ್ಲಿ ತರಲ ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭಿಪ್ರಾಯವನ್ನೂ ಸೂಚಿಸುವುದು ಪ್ರಜಾಪ್ರಭುತ್ವದಲ್ಲಿ ಅತ್ಯಾವಶ್ಯಕವಾದುದರಿಂದ ಆಧುನಿಕ ಪರಿಸ್ಥಿತಿಗಳಲ್ಲಿ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರಭುತ್ವವೇ ಸಾಧ್ಯ; ಪ್ರಜೆಗಳು ಸಾರ್ವ

ತ್ರಿಕವಾಗಿ ಶಾಸನ ಪರಿಶೀಲನೆಮಾಡಲು ಅಸಮರ್ಥರು. ಅಲ್ಲದೆ ಅವರವರ ನಿತ್ಯ ಜೀವನೋಪಾಯಗಳಲ್ಲಿ ಮತ್ತು ವೃತ್ತಿಗಳಲ್ಲಿ ಆಸಕ್ತರಾಗಿರುವುದರಿಂದ ಅವರುಗಳಿಗೆ ರಾಜಕೀಯ ವಿಚಾರಗಳಲ್ಲಿ ಹೆಚ್ಚು ಶ್ರದ್ಧೆಯಿಲ್ಲ. ಪ್ರತಿಯೊಬ್ಬನು ತನ್ನ ಅಭಿಮತವನ್ನು ಪ್ರತಿನಿಧಿಗಳ ಮೂಲಕ ತಿಳಿಸಬೇಕಾಗಿದೆ. ಪ್ರಜಾಪ್ರತಿನಿಧಿ ಸರ್ಕಾರವಿರುವ ರಾಷ್ಟ್ರದಲ್ಲಿ ಸಾರ್ವಜನಿಕರ ಅಭಿಮತದಿಂದ ಚುನಾಯಿಸಲ್ಪಟ್ಟ ಶಾಸನಸಭೆ, ಮಂತ್ರಿಮಂಡಲಗಳಿವೆ. ಈ ಶಾಸನ ಸಭೆಗಳಿಗೆ ಪ್ರತಿನಿಧಿಯಾಗಲು ಅನೇಕರು ಉಮೇದುವಾರರಾಗಿರುವುದರಿಂದ ರಾಜಕೀಯ ದೃಷ್ಟಿಯಿಂದ ರಾಜಕೀಯ ಪಕ್ಷಗಳ ಅಭಿವೃದ್ಧಿಗೆ ಆಸ್ಪದವಾಗಿದೆ. ಉಮೇದುವಾರರು ಸದಸ್ಯತ್ವವನ್ನೂ ಗಳಿಸಲು ವರಣದಾತರ ಬೆಂಬಲವನ್ನೂ ಪಡೆಯಬೇಕು. ಅವರಭಿಮತವನ್ನು ಪಡೆಯುವುದಕ್ಕಾಗಿಯೇ ರಾಜಕೀಯ ಪಕ್ಷಗಳು ಮುಖ್ಯ ಸಾಧಕಗಳಾಗಿ ಬೆಳೆದುಬಂದಿವೆ. ಸದಸ್ಯತ್ವವನು ಗಳಿಸಿದ ಉಮೇದುವಾರನು ತನ್ನ ಪಕ್ಷದ ಬೆಂಬಲ ಪಡೆದಿದ್ದರೂ ವರಣಕರ್ತ ಸಮಾಜಕ್ಕೆ ಅಧೀನನಾಗಿರಬೇಕು. ರಾಷ್ಟ್ರ ಸರ್ಕಾರವು ರಾಷ್ಟ್ರ ವರಣ ಕ್ಷೇತ್ರವನ್ನು ವಿಭಾಗಿಸಿ, ಬಹುಸಂಖ್ಯಾತ ವರಣದಾತರಿಗೆ ಬಹುಸಂಖ್ಯಾತ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕುಗಳನ್ನು ಗಳಿಸಿಕೊಟ್ಟಿದೆ. ಆದರಿಂದಲೇ ವರಣಕರ್ತ ಸಮಾಜವನ್ನು (Electorate) ರಾಜ್ಯಾಂಗಗಳಲ್ಲಿ ಪ್ರಥಮ ಅಂಗವೆಂದು ಕರೆಯಬಹುದು.

ವರಣದಾತರ ಕರ್ತವ್ಯಗಳನ್ನು ನಡೆಸುವುದು (voting) ಅಭಿಮತ ಸೂಚಿಸುವುದರಿಂದ; ಅಭಿಮತವನ್ನು ಕೊಡುವವರು ವರಣದಾತನು (voter). ವರಣ ಸೂಚನೆಗೆ ಸಾಧಕವಾದುದು ವರಣ ವಿಧಾನಗಳಲ್ಲಿ ಮುಖ್ಯವಾದುದು ಬ್ಯಾಲೆಟ್ (Ballot). ಸಾಮೂಹಿಕವಾಗಿ ನಡೆಯುವದಕ್ಕೆ ವರಣ (Election) ಎಂದು ಹೇಳಬಹುದು; ಸಾರ್ವತ್ರಿಕವಾದ ವರಣಗಳಲ್ಲಿ ಪ್ರತಿನಿಧಿಗಳ ಚುನಾವಣೆಯಾಗುವುದು.

## ಅಭಿಮತದ ಸ್ವರೂಪ

ಅಭಿಮತದ ಸ್ವರೂಪದ ವಿಚಾರವಾಗಿ ಭಿನ್ನಭಾವನೆಗಳಿವೆ. ಮತ

ವನ್ನು ಸೂಚಿಸುವುದು ನೈಸರ್ಗಿಕವಾದ ಮತ್ತು ಆತ್ಮರಕ್ಷಣೆಗೆ ಬೇಕಾದ ಹಕ್ಕು ಎಂದು ಒಂದು ಭಾವನೆ. ಸಮಾಜದಲ್ಲಿ ಸಾಮೂಹಿಕ ಮತ್ತು ಉತ್ತಮ ಜೀವನಕ್ಕಾಗಿ ಪೌರೇಯನಿಗೆ ದಯಪಾಲಿಸಿದ ಪದ (Office) ವೆಂದು ಇನ್ನೊಂದು ಭಾವನೆ. ಈ ಕರ್ತವ್ಯವು ದಕ್ಷತೆಯಿಂದ ಜರುಗಿದರೆ ರಾಷ್ಟ್ರ ಹಿತಸಾಧನೆಯಾಗುವುದೆಂಬ ತಿಳಿವಳಿಕೆಯಿರುವುದರಿಂದ ಈ ಪದವನ್ನು ಯೋಗ್ಯತೆಯುಳ್ಳ ತಾರತಮ್ಯಜ್ಞಾನವುಳ್ಳ ಜನರು ವಹಿಸಬೇಕು. ಕೆಲವು ಶತಮಾನಗಳಿಂದಲೂ, ಪ್ರಸಿದ್ಧ ರಾಜನೀತಜ್ಞರಾದ ಮಾರ್ಸ್ಸಾಗ್ಲಿಯೋ (Marsiglio) ಓಕ್ಯಾಂ (Ockam) ಮತ್ತು ಸಮಾಜ ಸಮಯ ಸಿದ್ಧಾಂತ ಕಾರನಾದ-ರೂಸೋ ಮುಂತಾದವರು ಪ್ರಸಿದ್ಧಪಡಿಸಿದ ಸಿದ್ಧಾಂತದ ಪರಿಣಾಮವಾಗಿ (Voting) ಛಂದಾಧಿಕಾರ ಒಡಹುಟ್ಟಿದ ಹಕ್ಕು ಎಂದು ಭಾವನೆ ಬೇರೂರಿತ್ತು. ಆದರೆ ಇತ್ತೀಚಗೆ ಆ ಭಾವನೆಗೆ ಪೋಷಣೆ ದೊರಕಿಲ್ಲ; ಅದು ರಾಷ್ಟ್ರ ಸರ್ಕಾರವು ದಯಪಾಲಿಸಿರುವ ಒಂದು ಅನಿವಾರ್ಯ ಕಾರ್ಯವೆಂಬ ನಂಬಿಕೆ ಬಲವಾಗುತ್ತಿದೆ. ಅಧಿಕಾರದಲ್ಲಿ ಕರ್ತವ್ಯವು ಹೇಗೊ ಹಾಗೆ ಕರ್ತವ್ಯದಲ್ಲಿ ಅಧಿಕಾರವುಂಟು. ಅಭಿಮತವನ್ನು ಕೊಡುವುದು ಒಂದು ದೃಷ್ಟಿಯಿಂದ ಅಧಿಕಾರ. ರಾಷ್ಟ್ರ ಪ್ರಜಾವರ್ಗ ಹಿತವನ್ನು ಸಾಧಿಸಲು ಮಾಡಬೇಕಾದ ಕರ್ತವ್ಯ,[1] ಈ ಕರ್ತವ್ಯವನ್ನು ನಿರ್ವಹಿಸದ ಪಕ್ಷದಲ್ಲಿ ರಾಷ್ಟ್ರಕ್ಕೆ ಹಾನಿಯಾಗುವುದೆಂದು ಭೀತಿಯಿರುವುದರಿಂದ, ಬಲವಂತದಿಂದ ಅಭಿಮತವನ್ನು ಕೊಡಿಸಬೇಕೆಂಬ ಭಾವನೆ ಅನೇಕ ರಾಷ್ಟ್ರಗಳಲ್ಲಿ ತಲೆದೋರುತ್ತಿದೆ. ಸ್ವಿಸ್, ರೊಮೆನಿಯ, ಬೆಲ್ಜಿಯಂ, ನೆದರ್‌ಲೆಂಡ್ಸ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲಿ ಬಲವದ್ಬಂಧ ಪದ್ಧತಿ[2] ಆಚರಣೆಯಲ್ಲಿ ಬಂದಿದೆ. ಮತದಾತರನ್ನು ತಮ್ಮ ಕಾರ್ಯವನ್ನು ನಿರ್ವಹಿಸಬೇಕೆಂದು ಬಲವಂತಿಸುವ ಚಳುವಳಿಗಳೂ ಅಲ್ಲಲ್ಲಿ ಕಂಡುಬಂದಿದೆ. ಅದು ಆಕ್ಷೇಪಕರ ಎಂಬುದು, ಬಲವಂತದಿಂದ ಮತದಾತನು ಹೆಚ್ಚು ಶ್ರದ್ಧೆ ವಹಿಸಲಾರನು; ವೋಟಿಂಗಿನಲ್ಲಿ ಹೆಚ್ಚು ಉದಾಸೀನರಾಗಿರುವವರು

---

1. Bryce, Hindrances to good Citizenship P 55. 2. Robson, Compulsory Voting Pol ScQuarterly 1923.

ಶ್ರೀಮಂತರು, ವಿದ್ಯಾವಂತರು ಮತ್ತು ವ್ಯವಹಾರಗಳಲ್ಲಿ ಹೆಚ್ಚು ನಿರತ ರಾದವರು, ಪುರನಿವಾಸಿಗಳಿಗಿಂತ ಜನಪದಕ್ಕೆ ಅಭಿಮತವನ್ನು ಸೂಚಿಸು ವುದರಲ್ಲಿ ಹೆಚ್ಚು ಉತ್ಸಾಹ. ಇದು ತಿಳಿದುಬಂದ ವಿಷಯ.

ಅಭಿಮತವನ್ನು ಯಾರು ಸೂಚಿಸಬೇಕು, ಯಾರಿಗೆ ಕೊಡಕೂಡದು, ಎಂಬ ಪ್ರಶ್ನೆಗಳ ವಿಚಾರವಾಗಿ, ಸೈದ್ಧಾಂತಿಕವಾಗಿಯೂ ಆಚರಣೆಯಲ್ಲಿಯೂ ಕಾಲಕಾಲಕ್ಕೂ ರಾಷ್ಟ್ರ ರಾಷ್ಟ್ರದಲ್ಲೂ ವ್ಯತ್ಯಾಸಗಳಿವೆ. ಪ್ರಜಾಸರ್ಕಾರದ ಹಿನ್ನೆಲೆಯನ್ನು ಅವಲೋಕಿಸಿದರೆ ಈ ವಿಷಯ ವೇದ್ಯವಾಗುವುದು. ಅಸಾಮ್ಯತೆಯಿಂದ ಕೂಡಿ ಸಂಕುಚಿತದೃಷ್ಟಿಯನ್ನು ಹೊಂದಿ ಪರೋಕ್ಷದಲ್ಲಿ ಸೂಚಿಸುವುದಕ್ಕೆ ಅವಕಾಶ ಕಲ್ಪಿಸಿದ್ದ ಪದ್ಧತಿಯು ಈಗ ಅಳಿದುಹೋಗಿ ಸಾರ್ವಜನಿಕರಿಂದ ಸಾಮ್ಯಸಿದ್ಧಾಂತ ಒಳಗೊಂಡ, ಪ್ರತ್ಯಕ್ಷವಾಗಿ ಸೂಚಿ ಸುವ ಓಟಿಂಗ್ ಪದ್ಧತಿಗೆ ಅವಕಾಶವಾಗಿದೆ.

## ಸಾರ್ವತ್ರಿಕ ಮತಾಧಿಕಾರ—Universal Sulfrage

ಪ್ರಾರಂಭದಲ್ಲಿ ಪುರಷರಿಗೆ ಮಾತ್ರ ಮತಾಧಿಕಾರವಿತ್ತು. ಅನೇಕ ರಾಷ್ಟ್ರ ಗಳಲ್ಲಿ ಸ್ತ್ರೀಪುರುಷರಿಗೆ ಭೇದವಿಲ್ಲದೆ ಎಲ್ಲರಿಗೂ ವರಣಾಧಿಕಾರವಿದೆ. ಮತ ದಾತರ ವಯಸ್ಸಿನ ಎಲ್ಲೆ ದೇಶದಿಂದ ದೇಶಕ್ಕೆ ಬೇರೆಬೇರೆಯಾದುದು. ಕೆಲವು ಪ್ರಜಾಪ್ರತಿನಿಧಿ ಸಭೆಗಳಿಗೆ ಇಪ್ಪತ್ತು ವಯಸ್ಸಿನ ನಿರ್ಬಂಧವಿದೆ, ಮತ್ತು ಏಳು ವರ್ಷವಾದರೂ ಆ ದೇಶದ ನಿವಾಸಿಯಾಗಿರಬೇಕು; ಸಂಯುಕ್ತ ರಾಷ್ಟ್ರದ ಸೆನೆಟ್ ಸಭೆಯ ಸದಸ್ಯರಿಗೆ ಮೂವತ್ತು ವರ್ಷ ವಯಸ್ಸು ಮತ್ತು ಒಂಬತ್ತು ವರ್ಷ ವಾಸವಾಗಿರಬೇಕು. ಮತವನ್ನು ಸೂಚಿಸುವುದರಲ್ಲಿಯೂ ನಿರ್ಬಂಧಗಳು ಬೇರೆಬೇರೆಯಾಗಿವೆ; ಕೆಲವು ಕಡೆ ಗುಪ್ತವಾಗಿಯೂ ಕೆಲವು ಕಡೆ ವಿಚಾರಾತ್ಮಕವಾಗಿಯೂ ಇವೆ. ಚುನಾವಣೆಯಲ್ಲಿ ಅನೇಕ ವಿಧ ಗಳುಂಟು. ಸ್ವಿಟ್ಸರ್‌ಲೆಂಡ್ ರಾಷ್ಟ್ರದಲ್ಲಿ ರಾಷ್ಟ್ರೀಯ ಸಭೆಯ ಸದಸ್ಯರು ಅನು ಪಾತಿಕ ಪ್ರಾತಿನಿಧ್ಯ ಪದ್ಧತಿಯಿಂದ ಚುನಾಯಿತರಾಗುವರು. ಕೆನಡ ದೇಶದ ಕೆಳಗಿನ ಸಭೆಯವರು ಸಾರ್ವಜನಿಕ ಚುನಾವಣೆಯಿಂದ ಆರಿಸಿದವರು. ಇಲ್ಲಿ 1920ನೆ ಡೊಮಿನಿಯನ್ ಆಕ್ಟ್ ಪ್ರಕಾರ ಸ್ತ್ರೀಯರಿಗೆ ಮತಾಧಿಕಾರ ಮತ್ತು

ಪ್ರಜಾಪತಿನಿಧಿಸಭೆಯ ಸದಸ್ಯತ್ವಗಳು ದೊರಕಿದವು. ಪುರುಷ ಮತ್ತು ಸ್ತ್ರೀಯರಿಬ್ಬರಿಗೂ ಸಮಾನ ಪ್ರಾಪ್ತ ವಯಸ್ಕರ ಮತಾಧಿಕಾರ ದೊರಕಿರುವುದರಿಂದ ಕಾರ್ಮಿಕವರ್ಗದವರಿಗೆ ಆ ರಾಷ್ಟ್ರದಲ್ಲಿ ವಿಶೇಷ ಬೆಂಬಲವಿದೆ. ಯೂರೋಪ್ ದೇಶದವರಿಗೆ ಪ್ರಾಪ್ತ ವಯಸ್ಕರ ಮತಾಧಿಕಾರ ಆವಶ್ಯಕವಾದರೂ, ಆಸ್ತಿಯೋಗ್ಯತೆಯ ನಿರ್ಬಂಧವಿಲ್ಲ. ಹೀಗೆ ರಾಷ್ಟ್ರ ಸ್ವರೂಪಗಳ ಪರಿಶೀಲನೆಯಿಂದ ಎಲ್ಲಾ ದೇಶಗಳಲ್ಲಿಯೂ ಪ್ರಾಪ್ತ ವಯಸ್ಕರ ವರಣಾಧಿಕಾರಗಳು ಏಕರೀತಿಯಾಗಿ ಆಚರಣೆಯಿಲ್ಲವೆಯೆಂದು ತಿಳಿಯಬಹುದು.

ಸಮಾನ ವರಣಾಧಿಕಾರವೇ ಪ್ರಜಾಪ್ರಭುತ್ವದ ಮೂಲಾಧಾರವಾದ ತತ್ವ; ಅದರಲ್ಲಿ 'ಒಬ್ಬ ವ್ಯಕ್ತಿಗೆ ಒಂದು ಓಟು' ಎಂಬ ಗಹನ ಸಿದ್ಧಾಂತವು ಅಡಗಿದೆ. ಸಾಪೇಕ್ಷಕ ಮತಾಧಿಕಾರ (differential voting) ಪದ್ಧತಿ ಅನೇಕ ರಾಷ್ಟ್ರಗಳಲ್ಲಿ ಆಚರಣೆಯಲ್ಲಿತ್ತು ಮತ್ತು ರಾಜನೀತಿಜ್ಞರ ಮನ್ನಣೆಯನ್ನು ಪಡೆದಿತ್ತು[1]. ಫ್ರಾನ್ಸ್ ದೇಶದಲ್ಲಿ ಅಧಿಕಾಂಶ ಮತಾಧಿಕಾರ ಪದ್ಧತಿಯು 1921 ರಲ್ಲಿ ರದ್ದಾಯಿತು. ಟೇನ್ (Taine) ಎಂಬ ತತ್ವಜ್ಞಾನಿಯು ಓಟಿನ ಸಂಖ್ಯೆಗಿಂತ ಓಟಿನ ತೂಕವನ್ನು ನಿರ್ಧರಿಸಬೇಕೆಂದು ಪ್ರತಿಪಾದಿಸಿದ ಪರಿಣಾಮವಾಗಿ ಬೆಲ್ಜಿಯಂ ಮುಂತಾದ ರಾಷ್ಟ್ರಗಳಲ್ಲಿ ಸಾರ್ವತ್ರಿಕ, ಮತಾಧಿಕಾರದ ಜೊತೆಗೆ ಪ್ರಜಾಯೋಗ್ಯತಾನುಸಾರ 'ವೇಟೆಡ್ ಓಟಿಂಗ್' ಅಧಿಕಾರ ಕೊಡಲಾಯಿತು. ಇಂಗ್ಲಿಷ್ ಸಿದ್ಧಾಂತಕಾರಿಯಾದ ಮಿಲ್ ಮತ್ತು ಅವನ ಅನುಯಾಯಿಗಳೂ ವಿಶ್ವವಿದ್ಯಾನಿಲಯದ ಪದವೀಧರರಿಗೆ ಅಧಿಕಾಂಶ ಮತಾಧಿಕಾರದ ಅವಶ್ಯಕತೆಯನ್ನು ಅನುಮೋದಿಸಿದರು. ಅಧಿಕಾಂಶ ಮತಾಧಿಕಾರ ಪದ್ಧತಿ (Plural voting) ಯು ಇಂಗ್ಲೆಂಡ್ ರಾಷ್ಟ್ರದಲ್ಲಿ 1918 ಮತ್ತು 1928 ಸಪ್ರೇಟ್ ಆಕ್ಟುಗಳ ಸಮ್ಮತಿ ಪಡೆದು ಈಗಲು ಆಚರಣೆಯಲ್ಲಿದೆ. ಜಪಾನ್ ಮತ್ತು ಫ್ರಾನ್ಸ್ ರಾಷ್ಟ್ರಗಳಲ್ಲಿ ಕುಟುಂಬ ಮತಾಧಿಕಾರದಿಂದ (family voting)[2] ಅಧಿಕಾಂಶದಲ್ಲಿ ಪ್ರಜಾಭಿವೃದ್ಧಿಗೆ ಕಾರಣವಾಗಿ

1. Sidgwick Elements of Politics P. 390 Ogg. Governments of Europe P 130. 2. Gooch, Family Voting Am pol sc. Review. XX. 1926.

ರಾಷ್ಟ್ರರಕ್ಷಣೆಗೆ ಮಾರ್ಗವಾಗುತ್ತದೆ ಎಂಬ ಭಾವನೆ, ಯುದ್ಧದಿಂದುಂಟಾದ ನಷ್ಟದ ಪರಿಣಾಮವಾಗಿ ಅಲ್ಲಲ್ಲಿ ತಲೆದೋರುತ್ತಿದೆ: ಮನೆಯ ಯಜಮಾನನ ಓಟಿಗೆ ಹೆಂಡತಿ ಮತ್ತು ಒಂದು ಮಗುವಿಗೆ ಒಂದು ಓಟನಂತೆ ಹೆಚ್ಚಾಗಿ ಓಟುಗಳು ಸೇರುವುದು. ಆದರೆ ಈ ಪದ್ಧತಿ ಆಚರಣೆಗೆ ಬಂದಿಲ್ಲ.

ಪ್ರಜಾಪ್ರತಿನಿಧಿಗಳಿಗೆ ಹೆಚ್ಚು ಅಧಿಕಾರ ಕೊಡಬೇಕಾದರೆ ವರಣಕರ್ತ ಸಮಾಜವು ಹೆಚ್ಚುಹೆಚ್ಚಾಗಿ ಪ್ರಜಾವರ್ಗದವರನ್ನು ಸೇರಿಸಿಕೊಳ್ಳಬೇಕು. ಪ್ರಾಪ್ತವಯಸ್ಕರೂ, ವಿದ್ಯಾವಂತರೂ, ಧನಾಢ್ಯರಾದವರೇ ವರಣಕರ್ತ ಸಮಾಜವಾದರೆ ಸ್ವಚ್ಛಂಥ ಪ್ರಭುತ್ವವಾಗುವುದು. ಆದುದರಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ವರಣಕರ್ತ ಸಮಾಜದ ವಿಸ್ತೃತೆಗಾಗಿ ಚಳುವಳಿಗಳಾದವು. ಮತದಾರರ ಸಂಖ್ಯೆಯು ಅಧಿಕವಾಗುವುದಕ್ಕೆ ಪಾರ್ಲಿಮೆಂಟ್ ಸಭೆಯೇ ಸಹಕಾರಿಯಾಯಿತು. ಆಸ್ತಿವಂತನೇ ವಿದ್ಯಾವಂತನು, ಸಾಮಾಜಿಕ ಅಭಿಮತ ಸೂಚಕನು ಎಂಬ ತಪ್ಪು ತಿಳಿವಳಿಕೆಗಳು ಮಾಯವಾಯಿತು. ವರಣದಾತರು ತಮ್ಮ ಅಭಿಮತವನ್ನು ತಮ್ಮ ಪ್ರತಿನಿಧಿಗಳ ಮೂಲಕ ವಿಷದಪಡಿಸದಿದ್ದಲ್ಲಿ ಸರ್ಕಾರದಲ್ಲಿ ಅನೀತಿ ಅನ್ಯಾಯಗಳು ತಲೆದೋರಿ ಪ್ರಗತಿಗೆ ಪ್ರತಿಬಂಧಕವಾಗಬಹುದೆಂದು ಮನವರಿಕೆಯಾಯಿತು. ಜವಾಬ್ದಾರಿ ಸರ್ಕಾರವೇರ್ಪಾಡಾಗಬೇಕಾದರೆ ಹೆಚ್ಚು ಹೆಚ್ಚಾಗಿ ಅಕ್ಷರಸ್ತರಾಗಬೇಕು, ಜನರು ವರಣಕರ್ತ ಸಮಾಜವಾಗಬೇಕೆಂಬ ನಂಬಿಕೆಯು ಬಲವಾಗುತ್ತಿದೆ.

ಅನಕ್ಷರಸ್ತರು ರಾಜ್ಯಾಡಳಿತದಲ್ಲಿ ಪ್ರವೇಶಿಸಿ ನ್ಯಾಯುಬದ್ಧವಾಗಿಯೂ ಮತ್ತು ದಕ್ಷತೆಯಿಂದಲೂ ರಾಜಕಾರ್ಯಗಳನ್ನು ನಿರ್ವಹಿಸಲಾರರೇ ಎಂಬ ವಿಷಯ ಚರ್ಚಾರ್ಹವಾದುದು. ವಿದ್ಯಾವಂತರೇ ನೀತಿವಂತರು ರಾಷ್ಟ್ರ ಹಿತಾಕಾಂಕ್ಷೆಯುಳ್ಳವರು ಎಂಬುದು ತಪ್ಪುಭಾವನೆ. ನಿರಕ್ಷರಸ್ತರಲ್ಲಿಯೂ ಸಹಜವಾದ ಬುದ್ಧಿ ಗುಣಗಳಿರಬಹುದು, ಹೆಚ್ಚು ಅನುಭವಸ್ತರು, ದಯಾಶೀಲರು, ನೀತಿ ಅನೀತಿಗಳನ್ನು ಶೀಘ್ರವಾಗಿ ವಿವೇಚನೆಯಿಂದ ಪ್ರತ್ಯೇಕಿಸಬಲ್ಲ ಶಕ್ತಿಯುಳ್ಳವರಾಗಿರಬಹುದು. ಆದುದರಿಂದ ರಾಜಕೀಯದಲ್ಲಿ ಬೇಕಾದ ಉತ್ಸಾಹ, ಕುಶಲತೆ, ನೈಸರ್ಗಿಕ ಮತ್ತು ನೈತಿಕ ಗುಣಗಳು

ವಿದ್ಯಾಭ್ಯಾಸದಿಂದಲೇ ಆವಿರ್ಭವಿಸುವುವು ಎಂದು ಪ್ರತಿಪಾದಿಸುವುದು ತಪ್ಪು. ಅಲ್ಲದೆ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜನ್ಮಸಿದ್ಧ ಹಕ್ಕುಗಳನ್ನು ಪಡೆಯಲು ಅವಕಾಶವಿರುವಾಗ, ವ್ಯಕ್ತಿ, ಅನಕ್ಷರಸ್ತ, ನಿರ್ಗತಿಕವೆಂಬ ವ್ಯತ್ಯಾಸಗಳನ್ನು ಕಲ್ಪಿಸಿ ಅವರಿಗೆ ಅಭಿಮತದ ಅಧಿಕಾರವನ್ನು ನಿರಾಕರಿಸುವುದು ಅನೀತಿಯುತವಾದುದು. ಅಭಿಮತದವಶ್ಯಕತೆಯು ಮತ್ತು ಅದರ ಲಕ್ಷ್ಯಗಳನ್ನರಿಯದಿದ್ದರೂ, ನಿರಕ್ಷರಸ್ತರು ಸಾಮಾನ್ಯ ಜನರಿಗೆ ಬೇಕಾಗುವ ಅವಶ್ಯಕತೆಗಳನ್ನು ಗಳಿಸಲು ಸಿದ್ಧರಾಗಿರುವುದರಿಂದ, ಅವರಿಗೆ ಅಭಿಮತಾಧಿಕಾರ ಕೊಟ್ಟು ರಾಜಕೀಯವಿಚಾರಗಳಲ್ಲಿ ವಿದ್ಯಾಭ್ಯಾಸದಿಂದ ಹೆಚ್ಚು ತಿಳಿವಳಿಕೆಯನ್ನುಂಟುಮಾಡಬೇಕಾದುದು ಪವಿತ್ರ ಕರ್ತವ್ಯ.[1]

ಹಾಗೆಯೇ ಆಸ್ತಿ ಮತ್ತು ಕಂದಾಯ ಕೊಡುವ ಯೋಗ್ಯತೆಗಳು ಮತಾಧಿಕಾರ ಪಡೆಯುವುದಕ್ಕೆ ಅತ್ಯಾವಶ್ಯಕವೆಂದು ಕೆಲವರ ಅಭಿಪ್ರಾಯ. ಈ ತತ್ವದ ಅನುಕರಣೆಯಿಂದ ಅನೇಕ ಪ್ರಜೆಗಳು ಮತಾಧಿಕಾರ ರಹಿತರಾಗುವುದರಿಂದ, ಆಚರಣೆಯಲ್ಲಿದ್ದ ಕಡೆಗಳಲ್ಲಿಯೂ, ಪ್ರತಿಪಕ್ಷಗಳು ಹೆಚ್ಚುತ್ತಿವೆ. ನೀಗ್ರೊಜನರಿಗೆ ವರಣಾಧಿಕಾರ ಕೊಡಲೊಡಂಬಡದೆ ಓದುಬರಹ ಪರೀಕ್ಷೆಗಳನ್ನು ಏರ್ಪಡಿಸಿ ಅವುಗಳಲ್ಲಿ ಉತ್ತೀರ್ಣರಾದವರಿಗೆ ಓಟನ್ನು ಕೊಡುವುದು, ಸಂಯುಕ್ತರಾಷ್ಟ್ರದಲ್ಲಿ ಇತ್ತೀಚನವರೆಗೆ ಜಾರಿಯಲ್ಲಿತ್ತು. ಈಗ ಚಿರಕಾಲ ವಾಸತ್ವವೇ ಅಭಿಮತಕ್ಕೆ ತಕ್ಕ ಯೋಗ್ಯತೆಯೆಂದು ನಿರ್ಣಯವಾಗಿದೆ.

## ಸ್ತ್ರೀಯರ ಮತಾಧಿಕಾರ

ಸ್ತ್ರೀಯರಿಗೆ ಅನೇಕ ದೇಶಗಳಲ್ಲಿ ಈಗಲೂ ವರಣಾಧಿಕಾರವಿಲ್ಲ. ರಾಜಕೀಯ ವಿಚಾರಗಳಲ್ಲಿ ಪ್ರವೇಶಿಸಿ ವರಣಾಧಿಕಾರವನ್ನು ಪಡೆಯಲು ಅರ್ಹ

"To vest the power of choosing those who are to rule the State in the hands of incapable and unworthy classes would mean state suicide" *Bluntschli*.

Give the suffrage to the ignorant, and they will fall into anarchy today and into despotism tomorrow, *Laveleye*.

1. J. S. Mill Considerations on Representative Government. James Bryce, Modern Democracies Vol. I P. 73, 74.

ರಲ್ಲವೆಂಬ ಅಭಿಪ್ರಾಯವಿದೆ. ಪುರುಷನೇ ಸ್ತ್ರೀಯರ ಅಧಿಪತಿ, ಸಂಸಾರ ದಲ್ಲಿ ಯಜಮಾನ; ಸ್ತ್ರೀಯರಿಗೆ ಮನೆಯೆ ಸರ್ವಸ್ವ. ಆದುದರಿಂದ ಸ್ತ್ರೀಯ ರಿಗೆ ಅವರ ಪತಿಗಳೇ ಪ್ರತಿನಿಧಿಗಳೆಂಬ ತಿಳಿವಳಿಕೆ ಇತ್ತು. ನಾಗರಿಕ, ವೈಯ ಕ್ತಿಕ, ಆರ್ಥಿಕ, ನೈತಿಕ, ಭಾಷಣ, ವಿಚಾರ, ನೈಸರ್ಗಿಕ ಮತ್ತು ರಾಜ ಕೀಯ ಸ್ವಾತಂತ್ರ್ಯಗಳನ್ನು ಪಡೆಯಲು ಸ್ತ್ರೀಯು ಪುರುಷರಿಗೆ ಸಮಾನ ಅಧಿ ಕಾರ ಪಡೆದಿರುವಳು ಎಂಬ ತತ್ವದ ಆಧಾರದ ಮೇಲೆ ಇತ್ತೀಚೆಗೆ ರಾಜಕೀಯ ವಿಷಯಗಳಲ್ಲಿ ಸ್ತ್ರೀಯರು ಮುನ್ನುಗ್ಗಲು ಪ್ರಯತ್ನಿಸುತ್ತಿದ್ದಾರೆ. ಜಾನ್ ಸ್ಟ್ಯುವರ್ಟ್‌ಮಿಲ್ ಮತ್ತು ಚಾರ್ಲ್ಸ್‌ಬ್ರಾಡ್ಲಾರವರುಗಳ ಪ್ರಚಾರ ಪರಿಣಾಮ ವಾಗಿ ಸ್ತ್ರೀಯರಿಗೆ ವರಣಾಧಿಕಾರ ಕೊಡುವ ಚಳುವಳಿಯು ಸಮಾಜದಲ್ಲಿ ಉಗ್ರರೂಪವನ್ನು ತಾಳಿತು. ಸ್ತ್ರೀಯರೇ ತಮ್ಮ ಹಕ್ಕುಗಳನ್ನು ಹೊಂದಲು, ಪ್ರಚಲಿತ ಸ್ಥಿತಿಗತಿಗಳನ್ನು ಪ್ರತಿಭಟಿಸಿ, ಸಾಮೂಹಿಕವಾಗಿ ಚಳುವಳಿಯನ್ನು ಮೊದಲನೆಯ ಘೋರಯುದ್ಧಾನಂತರ ಪ್ರಾರಂಭಿಸಿದರು. ಈಚಿನ ಪಾರ್ಲಿ ಮೆಂಟಿನ ವರದಿಗಳಲ್ಲಿ ಆರೋಗ್ಯ, ಗೃಹಕಾರ್ಯ ಶಾಂತಿಸಲಹೆ, ಆರ್ಥಿಕ ವಿಷಯ, ಸಾಮಾಜಿಕ ಸುಧಾರಣೆ, ಅಂತರ್ರಾಷ್ಟ್ರೀಯ ಸೌಹಾರ್ದ ಮುಂತಾದುವುಗಳನ್ನು ಏರ್ಪಡಿಸಿರುವುದರಲ್ಲಿ, ಎಷ್ಟರ ಮಟ್ಟಿಗೆ ಸ್ತ್ರೀಯರು ಆಸಕ್ತಿಯನ್ನು ಹೊಂದಿದ್ದಾರೆಂಬುದು ವಿಷದವಾಗಿದೆ. ಅಲ್ಲದೆ ಈ ವಿಧ ವಾದ ಚಳುವಳಿಯು ಇತರರ ಮತ್ತು ಪುರುಷರ ಪ್ರೇರಣೆಯಿಂದಲ್ಲ; ಅವರಲ್ಲಿಯೇ ಸ್ವಾಭಾವಿಕವಾಗಿ ಉತ್ಪನ್ನವಾದ ಉತ್ಸಾಹವು ಕಾರಣ ವೆಂದು ವೇದ್ಯವಾಗಿದೆ.

ಸ್ತ್ರೀಪುರುಷರ ಸಮಾಗಮದಿಂದ, ರಾಜಕೀಯ ಕ್ಷೇತ್ರದಲ್ಲಿ ವೈಪರಿತ್ಯ ಉಂಟಾಗಬಹುದು; ಸ್ತ್ರೀಯರಿಗಾಗಿ ಕಲಹಗಳುತ್ಪನ್ನವಾಗಿ, ಶಿಸ್ತು ನಾಶ ಹೊಂದಿ, ಜನರು ಅವಮರ್ಯಾದೆಗೆ ಕಾರಣರಾಗುತ್ತಾರೆ; ಸ್ತ್ರೀಯರು ಇತ ರರಿಗೋಸ್ಕರ ಕಾದಾಡುವರು.—ಇವೇ ಮುಂತಾದ ಆರೋಪಣೆಗಳಿವೆ. ಈ ವಿಧವಾದ ನಿಂದನೆಗೆ ಸ್ತ್ರೀಯ ದೌರ್ಬಲ್ಯವೇ ಕಾರಣ. ಆದರೆ ಅಭಿಮತ ವನ್ನು ಕೊಡುವುದು ಸಿಡ್ವಿಕ್ ಹೇಳುವಂತೆ ಧ್ಯೈಹಿಕವಾದುದಲ್ಲ, ಮತಾಧಿ

ಕಾರ ಮಾನಸಿಕ ಪ್ರಪಂಚಕ್ಕೆ ಸೇರಿದ್ದು.[1] ರಾಷ್ಟ್ರನಿಯಮಗಳ ಮತ್ತು ಸಮಾಜ ಶಿಸ್ತುಗಳ ರಕ್ಷಣೆಯಲ್ಲಿ ಅಧೀನರಾಗಿರುವುದರಿಂದ ಗಂಡಸರಿಗಿಂತ ಹೆಂಗಸರಿಗೆ ಹೆಚ್ಚಾಗಿ ಮತಾಧಿಕಾರಬೇಕೆಂದು ಮಿಲ್ ಹೇಳಿದ್ದಾನೆ. ಅನೀತಿಯುತ ವರ್ಗಪರ ಶಾಸನಗಳ ಆಕ್ರಮಣಕ್ಕೆ ಸಿಕ್ಕಿದಂತೆಯೂ ಮತ್ತು ಆತ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೂ ಮತಾಧಿಕಾರ ಹೆಂಗಸರಿಗೆ ಅತ್ಯಾವಶ್ಯಕ. ಸರ್ಕಾರವೆನ್ನುವುದು ಪುರುಷರದು; ಪುರುಷರ ಶಾಸನಾಧಿಕಾರ, ಬಂಡವಾಳಗಾರನ ಶಾಸನಾಧಿಕಾರದಂತೆ; ಶೋಷಕವರ್ಗವೂ ತನ್ನ ಧನದ ಶಕ್ತಿಯಿಂದ ದಳಿತವರ್ಗವನ್ನು ಹೇಗೆ ನಿಯಂತ್ರಣದಲ್ಲಿಡುತ್ತದೆಯೋ ಹಾಗೆಯೇ ಪುರುಷರು ಕಾರ್ಮಿಕರ, ಔದ್ಯೋಗಿಕ, ವ್ಯಾಪಾರ ಕೇಂದ್ರಗಳಲ್ಲಿ ಕೆಲಸಮಾಡುವ ಹೆಂಗಸರ ವಿಚಾರವಾಗಿ ಅನೀತಿಯುತವಾಗಿ ಅಧಿಕಾರವನ್ನು ನಡೆಸಬಹುದು. ಆದುದರಿಂದ ಶಾರೀರಕ ಮತ್ತು ಆತ್ಮರಕ್ಷಣೆಗಾಗಿ ಪುರುಷರಹಾಗೆ ಹೆಂಗಸರಿಗೆ ಸಮಾನ ಮತಾಧಿಕಾರ ಅವಶ್ಯಕ. ಆಸ್ತಿಗಳನ್ನು ಸಾಲಗಳನ್ನು ಕೊಡುವುದು ತೆಗೆದುಕೊಳ್ಳುವುದಕ್ಕೂ, ವ್ಯವಹಾರಗಳನ್ನು ನಡೆಸುವುದಕ್ಕೂ ಬೇಕಾದ ನಾಗರಿಕ ಮತ್ತು ವೈಯುಕ್ತಿಕ ಸ್ವಾತಂತ್ರ್ಯವನ್ನು ಗಳಿಸಿರುವುದರಿಂದ ರಾಜನೀತಿಕ ಸ್ವಾತಂತ್ರ್ಯವನ್ನು ಮತ್ತು ಪುರುಷರ ಹಕ್ಕುಗಳಿಗೆ ಸಮಾನವಾದ ಹೆಂಗಸರು ಮತಾಧಿಕಾರವನ್ನೂ ಕೇಳುವುದರಲ್ಲಿ ಅಪವಾದವಿಲ್ಲ. ಹೆಂಗಸರು ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಿಸುವುದರಿಂದ ಪರಿಶುದ್ಧವಾದ ಮತ್ತು ತ್ಯಾಗಾತ್ಮಕವಾದ ಸನ್ನಿವೇಶವು ರಚನೆಯಾಗಬಹುದು.

ವರಣಾಧಿಕಾರದಲ್ಲಿ, ಪುರುಷ ಸ್ತ್ರೀ ಬೇಧರಹಿತವಾದ ವರಣಾಧಿಕಾರ, ಪ್ರಾಪ್ತ ವಯಸ್ಕರ ವರಣಾಧಿಕಾರ ಎಂದು ಎರಡು ವಿಧ. ಅನೇಕ ರಾಷ್ಟ್ರಗಳಲ್ಲಿ ಸಾರ್ವತ್ರಿಕಮತಾಧಿಕಾರವಿದ್ದರೂ ಹೆಂಗಸರಿಗೆ ಪ್ರವೇಶವಿಲ್ಲ. ಬೆಲ್ಜಿಯಂ, ಸ್ಪೇನ್, ಇಟಲಿ, ಜಿಗೊಸ್ಲಾವಿಯ ಮುಂತಾದ ರಾಷ್ಟ್ರಗಳಲ್ಲಿ ಸ್ತ್ರೀಯರಿಗೆ ಮತಾಧಿಕಾರವಿಲ್ಲ. ಸಂಯುಕ್ತ ರಾಷ್ಟ್ರ ಮತ್ತು ಬ್ರಿಟನ್‌ನಲ್ಲಿ ಇತ್ತೀಚೆಗೆ ಹೆಂಗಸರಿಗೆ ಆ ಹಕ್ಕು ದೊರಕಿದೆ. ಜಪಾನಿನಲ್ಲಿ ಚುನಾವಣೆ

---

Sidgwic – Elements of Politics P 385

ಸುಧಾರಣೆಗಳು ನಡೆದುದರ ಪರಿಣಾಮವಾಗಿ ವರಣಕರ್ತಸಮಾಜ ಬಹಳ ವಿಸ್ತೃತವಾದರೂ ಸ್ತ್ರೀಯರಿಗೆ ಮಾತ್ರ ವರಣಾಧಿಕಾರವಿಲ್ಲ. 1921ರಲ್ಲಿ ಸಂಯುಕ್ತ ರಾಷ್ಟ್ರದಲ್ಲಿಯೂ ಬ್ರಿಟನಿನಲ್ಲಿಯೂ ಹೆಂಗಸರನ್ನು ವರಣಕರ್ತ ಸಮಾಜಕ್ಕೆ ಸೇರಿಸಲಾಯಿತು. ಸ್ತ್ರೀಯರಿಗಭಿಮತ ಕೊಟ್ಟಿರುವುದರಿಂದ ಮತದಾತರ ಸಂಖೆ ಇಮ್ಮಡಿಯಾಯಿತು. 1867ರಲ್ಲಿ ಜಾರಿಗೆ ಬಂದ ಸುಧಾರಣೆಯಿಂದ 1928ರವರಿಗೆ ಕಾರ್ಮಿಕ ವರ್ಗದವರೂ ಮತ್ತು ಹೆಂಗಸರು ಹೋರಾಟ ಮಾಡಿ ಮತದಾತರ ಸಂಖ್ಯೆಯನ್ನು ಹೆಚ್ಚಿಸಿದರು. ಇಂಗ್ಲೆಂಡಿನಲ್ಲಿ 1950ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಕೊಟ್ಟ 26,7,50,000 ರವರಲ್ಲಿ 1,22,50,000 ಗಂಡಸರು ಮತ್ತು 1,45,00,000 ಹೆಂಗಸರು.

## ಮತಾಧಿಕಾರದ ಕೆಲವು ನಿಯಮಗಳು

ಸಾರ್ವತ್ರಿಕ ಮತಾಧಿಕಾರವು ಪ್ರಜಾಪ್ರಭುತ್ವಕ್ಕೆ ತಳಹದಿಯಾಗ ಬೇಕಾದರೆ, ಮೊಟ್ಟಮೊದಲು ಮತದಾತರು ತಮ್ಮ ಅಭಿಮತವನ್ನು ಸೂಚಿಸುವುದಕ್ಕೆ ಅಧಿಕವಾಗಿ ಅವಕಾಶಗಳನ್ನು ಸರ್ಕಾರ ಕಲ್ಪಿಸಿಕೊಡಬೇಕು. ನಿರ್ವಾಚಕ ಅಧಿಕಾರಗಳು ( Election Offices ) ಹೆಚ್ಚಾಗಿರಬೇಕು. ಅಂತಹ ಸಂಸ್ಥೆಗಳಿಗೆ ಅಧಿಕಾರಿಗಳನ್ನು ಚುನಾವಣೆಮೂಲಕ ಮತದಾತರು ನೇಮಿಸುವಹಾಗಿರಬೇಕು. ಐರೋಪ್ಯರಾಷ್ಟ್ರಗಳಲ್ಲಿ ಕಾರ್ಯಾಂಗ, ಆಡಳಿತ ಮತ್ತು ನ್ಯಾಯಾಂಗ ಸ್ಥಾನಗಳಿಗೆ ಅಧಿಕಾರಗಳನ್ನು ಚುನಾಯಿಸುವುದಿಲ್ಲ. ಫ್ರಾನ್ಸಿನಲ್ಲಿ ಸಾರ್ವತ್ರಿಕ ಮತಾಧಿಕಾರವಿದ್ದರೂ ಕಾರ್ಯಾಂಗ ಮತ್ತು ನ್ಯಾಯಾಂಗದ ಹುದ್ದೆಗಳಿಗೆ ಕಾರ್ಯಾಂಗವೇ ಮೂಲಾಧಿಕಾರ. ಸಂಯುಕ್ತ ರಾಷ್ಟ್ರದ ಸಂಸ್ಥಾನಗಳಲ್ಲಿ ಅನೇಕ ಆಡಳಿತ ಮತ್ತು ನ್ಯಾಯಸಂಸ್ಥೆಗಳ ಹುದ್ದೆಗೆ ಪ್ರಜೆಗಳೇ ಅಧಿಕಾರಿಗಳನ್ನು ಚುನಾಯಿಸುತ್ತಾರೆ. ಎರಡನೆಯದಾಗಿ ಚುನಾವಣೆಗಳು ಪ್ರತ್ಯಕ್ಷವೇ, ಪರೋಕ್ಷವೇ ಎಂಬುದರ ಆಧಾರದ ಮೇಲೆ ಮತಾಧಿಕಾರದ ಬಲ ನಿಂತಿದೆ. ರಷ್ಯ, ಡೆನ್ಮಾರ್ಕ್, ಸ್ವೀಡನ್ ಮತು

ಫ್ರಾನ್ಸ್‌ಗಳಲ್ಲಿ ಅಪ್ರತ್ಯಕ್ಷ ಚುನಾವಣೆ ಪದ್ಧತಿ ಜಾರಿಯಲ್ಲಿದೆ. ಇತರ ರಾಷ್ಟ್ರಗಳಲ್ಲಿ ಪ್ರತ್ಯಕ್ಷ ( Direct Election ) ಚುನಾವಣ ಪದ್ಧತಿ ಇದೆ.

ಮತಾಧಿಕಾರವು ಪ್ರಯೋಜನಕರವಾಗಬೇಕಾದರೆ ವರಣ ಅಥವ ನಿರ್ವಾಚನದ ವಿಧಾನ ಗುಪ್ತವಾದದ್ದೇ ಅಥವ ಪ್ರತ್ಯಕ್ಷವಾಗಿ ನಡೆಯುತಕ್ಕದ್ದೇ ಎಂಬುದರಮೇಲೆ ನಿಂತಿದೆ. ಓಟಿಂಗ್ ಎಲ್ಲರಿಗೂ ತಿಳಿಯುವಹಾಗೆ ಮತ್ತು ಪ್ರತ್ಯಕ್ಷವಾಗಿ ನಡೆಯಬೇಕೆಂದೂ ವ್ಯತಿರಕ್ತವಾಗಿ ನಡೆದರೆ ಪುರುಷನ ಪವಿತ್ರ ಕರ್ತವ್ಯ[1] ಭಂಗವಾದಹಾಗೆ ತಿಳಿಯಬೇಕೆಂದು ಮಿಲ್ ಹೇಳಿದ್ದಾನೆ. ಆದರೆ ಆಧುನಿಕ ರಾಷ್ಟ್ರಗಳಲ್ಲಿ ಅನುಭವ ಬೇರೆ ರೀತಿಯಾಗಿದೆ; ಮತದಾತನು ಆತ್ಮರಕ್ಷಣೆಗಾಗಿ ಗುಪ್ತವಾಗಿ ತನ್ನ ಛಂದವನ್ನು ಸೂಚಿಸಲು ಬಯಸುತ್ತಾನೆ. ಕೊನೆಯದಾಗಿ, ಕಾರ್ಮಿಕ ವರ್ಗದವರು ಮತ್ತು ಬಹುಸಂಖ್ಯಾತ ವರಣ ದಾತರು ತಮ್ಮ ಅಭಿಮತವನ್ನು ಸೂಚಿಸುವುದಕ್ಕೆ ಕೆಲವು ಅನುಕೂಲಗಳನ್ನು ಬಯಸುವರು. ಎಲ್ಲರಿಗೂ ಅನುಕೂಲವಾಗುವಂತಹ ಅಂದರೆ ಭಾನುವಾರ ದಿವಸಗಳಲ್ಲಿ ಚುನಾವಣೆಯು ನಡೆಯಬೇಕು; ವರಣ ಕ್ಷೇತ್ರಗಳು ಸಂಕುಚಿತವಾಗಿರಬೇಕು, ಮತಕೊಡುವ ಸ್ಥಾನಗಳು ಮತದಾತನಿಗೆ ಸಾಧ್ಯವಾದಷ್ಟು ಹತ್ತಿರವಿರಬೇಕು, ಅದಿಲ್ಲದಿದ್ದರೆ ಅನೇಕರು ಬಿಸಲಿನ ತಾಪದಿಂದಲೊ ಚಳಿಗಾಳಿಗಳ ನೆವದಿಂದಲೊ ದೂರ ಹೋಗಲಿಚ್ಚಿಸದೆ ಅಭಿಮತವನ್ನು ಸೂಚಿಸುವದರಲ್ಲಿ ಉದಾಸೀನರಾಗುವರು. ಸಂಯುಕ್ತ ಸಂಸ್ಥಾನಗಳಲ್ಲಿ ಅನಾರೋಗ್ಯ, ಕೆಲಸ, ವ್ಯವಹಾರಗಳ ತೊಡಕಿನಿಂದ ಅಭಿಮತವನ್ನು ವರಣ ಸ್ಥಾನಗಳಲ್ಲಿ ಕೊಡುವುದು ತೊಂದರೆಯಾದರೆ, ಪೋಸ್ಟ್‌ನಲ್ಲಿ ಕಳುಹಿಸಬಹುದು. 1918ನೆ ಬ್ರಿಟಿಷ್ ರೆಪ್ರೆಸೆನ್‌ಟೇಷನ್ಸ್ ಆವ್ ಪೀಪಲ್ಸ್ ಆಕ್ಟ್ (British Representations of peoples' Act) ಬ್ರಿಟನನಲ್ಲಿಯೂ ಪೋಸ್ಟನಲ್ಲಿ ಅಭಿಮತವನ್ನು ಸೂಚಿಸುವ ಅಧಿಕಾರವನ್ನು ಅನಾನುಕೂಲಗಳಿಗೆ ಸಿಕ್ಕಿದ ಮತದಾತನಿಗೆ ಗಳಿಸಿಕೊಟ್ಟಿದೆ.

1. Mill Representative Government Ch 10.

# ಪ್ರಕರಣ ೧೦

## (ಸರ್ಕಾರ ಅಧಿಕಾರಗಳ ವಿಭಜನೆ)

ಮಾನವನು ತನ್ನ ಜೀವನವನ್ನೂ, ಸ್ವಾತಂತ್ರವನ್ನೂ, ಆಸ್ತಿಪಾಸ್ತಿಗಳನ್ನೂ ಆತ್ಮಗೌರವ ಮತ್ತು ಹಕ್ಕುಬಾಧ್ಯತೆಗಳನ್ನೂ ಇತರರ ಹಕ್ಕುಗಳಿಗೆ ಸ್ವಲ್ಪವೂ ಕುಂದಕ ಬಾರದಂತೆ ಕಾಪಾಡಿಕೊಳ್ಳುವುದು ಶ್ರೇಷ್ಠತರವಾದ ವೃತ್ತಿ. ಇಂತಹ ಸ್ವಾತಂತ್ರ್ಯ ಜೀವನವನ್ನು ಹೊಂದಬೇಕಾದರೆ ಎಲ್ಲರಿಗೂ ಸಮನಾದ ಹಕ್ಕುಗಳಿವೆ ಎಂದು ತಿಳಿದು ತನ್ನ ಸ್ವಾತಂತ್ರ್ಯ ಆಚರಣೆಗೂ ಒಂದು ಪರಮಾವಧಿ ಮತ್ತು ಎಲ್ಲೆಗಳಿವೆಯೆಂದು ಗಮನಿಸಬೇಕು. ಆದರೆ ವಾಕ್ ಸ್ವಾತಂತ್ರ್ಯ ಜನತೆಯ ಸಂಘ ಮತ್ತು ಸಭೆಗಳ ಹಕ್ಕುಗಳು ಪ್ರಗತಿ ಪರವಾದುದರಿಂದ ಅವುಗಳ ಎಲ್ಲೆಗಳನ್ನೂ ನಿರ್ಧರಿಸಿ ಸ್ವಾತಂತ್ರ್ಯ ಬೆಳವಣಿಗೆಗೆ ಪ್ರತಿಬಂಧಕ ತರಬಾರದು; ಏತಕ್ಕೆಂದರೆ ಒಂದು ನಿರ್ದಿಷ್ಟ ಕಾಲದಲ್ಲಿ ಆಗಿನ ಸಮಾಜವು ಒಪ್ಪಿದ ಸ್ವಾತಂತ್ರ್ಯ ಮೂಲಭೂತ ಹಕ್ಕುಗಳು ಬೇರೊಂದು ಯುಗದಲ್ಲಿ ಮಾನವನ ಸರ್ವತೋಮುಖ ಬೆಳವಣಿಗೆಗೆ ನಿರ್ಬಲವಾಗಿ ಕಂಡುಬಂದು ನವೀನ ಕಲ್ಪನೆಗಳಿಂದ ಸ್ಫೂರ್ತಿ ಹೊಂದಬೇಕಾಗುವುದು. ಸೂಕ್ತವಾದ ರಾಜಕೀಯ ಸಾಧನೆಗಳಿಲ್ಲದಿದ್ದರೆ ಅವಿಚ್ಛಿನ್ನವಾಗಿ ಬೆಳೆಯುತ್ತಿರುವ ಹಕ್ಕುಗಳನ್ನು ಸ್ವಾತಂತ್ರ ಭಾವನೆಗಳನ್ನು ಕಾಪಾಡಲಸಾಧ್ಯ. ಶಾಂತಿ ರಕ್ಷಣೆ ಮತ್ತು ಶಿಸ್ತುಗಳು ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಅಧಿಕಾರ ವರ್ಗಕ್ಕೆ ಪ್ರಜಾಬೆಂಬಲಬೇಕು. ಸರ್ಕಾರವು ಪ್ರಜಾಭ್ಯುದಯ ಧ್ಯೇಯಗಳಿಗನುಗುಣವಾಗಿ ನಿಯಮ ಕಾನೂನುಗಳನ್ನು ಮಾಡಿ ತನ್ನ ಆಡಳಿತವನ್ನು ಬದಲಾಯಿಸಿಕೊಳ್ಳಬೇಕು.

ನಿರಂಕುಶಾಧಿಕಾರವನ್ನು ದೂಷಿಸುವುದು ಜನರ ಸ್ವಾಭಾವಿಕ ಗುಣ. ಸ್ವೇಚ್ಛಾಪ್ರವರ್ತಕವಾಗಿ ವ್ಯಕ್ತಿಯ ಹಕ್ಕನ್ನು ನಿರಾಕರಿಸಿ ಪ್ರಜಾಹಿತಕ್ಕೆ ಅಡ್ಡಿಬರುವುದರಿಂದ ನಿರಂಕುಶ ಅಧಿಕಾರವನ್ನು ತಡೆದು ಪ್ರಜಾಹಕ್ಕುಗಳ ರಕ್ಷಣೆಗೆ ತಕ್ಕ ವ್ಯವಸ್ಥೆಗಳನ್ನು ಮಾಡುವುದಕ್ಕಾಗಿ ನೀತಿಯುತ

ಸರ್ಕಾರದ ರಚನೆಯು ಆವಶ್ಯಕ. ಆದುದರಿಂದ ಪ್ರಜಾಪ್ರಭುತ್ವದ ಮೂಲ ಸೂತ್ರಗಳಲ್ಲಿ, ಅಧಿಕಾರವರ್ಗದವರ ಹಿಂಸೆಯಿಂದ ವ್ಯಕ್ತಿಯನ್ನು ರಕ್ಷಿಸಲೂ ಪ್ರಜಾಸಮುದಾಯದ ಹಕ್ಕುಗಳನ್ನು ಮನ್ನಿಸಿ ಪ್ರಜಾಭಿಪ್ರಾಯದಂತೆ ಸರ್ಕಾರವನ್ನು ನಡೆಸಲು ತ್ರಿವಿಧಾಂಗಗಳ ರಚನೆ, ಸಚಿವತಂತ್ರ ಮತ್ತು ರಾಷ್ಟ್ರಧರ್ಮ ಘೋಷಣೆ (Rule of law) ಬಹಳ ಮುಖ್ಯವಾದುದು. ಪ್ರಜಾಪ್ರಭುತ್ವದಲ್ಲಿ ಸರ್ವಾಧಿಕಾರವು ಪ್ರಜೆಗಳಲ್ಲಿಯೇ ಅಡಗಿದೆ. ಪ್ರತಿಯೊಬ್ಬನು ಆಡಳಿತಾಧಿಕಾರದಲ್ಲಿ ತನ್ನ ಜವಾಬ್ದಾರಿಯುತವಾದ ಕೈವಾಡವನ್ನು ಹೊಂದಿದ್ದಾನೆ; ಸರ್ಕಾರದ ಅಂಗಗಳ ರಚನೆಯಲ್ಲಿಯೂ ಸಮಸ್ತ ಹಕ್ಕುಭಾದ್ಯತೆಗಳನ್ನು ಪಡೆಯಲು ಬೇಕಾಗುವ ಸಂಸ್ಥೆಗಳ ನಿರ್ಮಾಣದಲ್ಲಿಯೂ ವ್ಯಕ್ತಿಗೆ ಸಂಪೂರ್ಣಾಧಿಕಾರವುಂಟು. ಆಡಳಿತದಲ್ಲಿನ ಅಂಗಗಳನ್ನು ರಚಿಸಿ, ಖಾತೆಗಳನ್ನು ಹಂಚಿ, ಕಾರ್ಯಕ್ಷೇತ್ರಗಳನ್ನು ವ್ಯಕ್ತಪಡಿಸಿ ಎಲ್ಲಾ ಅಂಗಗಳೂ ಒಂದಕ್ಕೊಂದು ಜವಾಬ್ದಾರಿಯುತವಾಗಿರುವಂತೆ ಪ್ರಜಾಪ್ರಭುತ್ವವು ರಚಿತವಾಗಿದೆ. ಪ್ರಜಾತಂತ್ರವು ಪೌರೇಯ ಸ್ವಾತಂತ್ರ್ಯವನ್ನು ವಿವರಿಸಿ, ಅದರ ಅನುಭವಕ್ಕೆ ಪ್ರತಿಬಂಧಕಗಳನ್ನು ಪರಿಹರಿಸಿ ಸಮಸ್ತರಿಗೂ ಪ್ರಯೋಜನಕಾರಿಯಾದ ಕಾನೂನುಗಳನ್ನು ತಯಾರಿಸಿ ಜಾರಿಗೆ ತಂದಿದೆ. ಸ್ವಾತಂತ್ರ್ಯಕ್ಕೆ ಪ್ರಜೆಗಳೇ ರಚಿಸಿದ ಕಾನೂನುಗಳು ಮತ್ತು ಅಧಿಕಾರ ವರ್ಗವು ಪ್ರತಿಬಂಧಕವಾಗಬೇಕೇ ಹೊರತು ಪ್ರಜಾಭಿಮತ ಶೂನ್ಯವಾದ ಅಧಿಕಾರ ಮತ್ತು ರಾಜಕೀಯ ಸೂತ್ರಗಳಲ್ಲ. ಆದುದರಿಂದ ಪ್ರಜಾಕ್ಷೇಮಕ್ಕೆ ಆಂತರ್ಯ ಅಥವ ಬಾಹ್ಯ ತೊಡಕುಗಳು ಒದಗಿದ್ದಲ್ಲಿ, ಸಂಸ್ಥೆಗಳು, ವರ್ಗಗಳು ಹತೋಟಿ ತಪ್ಪಿದ್ದಲ್ಲಿ ಪೌರೇಯ ಸ್ವಾತಂತ್ರ್ಯವನ್ನು ಬಲಹೀನವನ್ನಾಗಿ ಮಾಡುವ, ಆಡಳಿತಾಂಗಗಳ ಜವಾಬ್ದಾರಿಯನ್ನು ವಿಶದಪಡಿಸುವ ಒಂದು ರಾಜ್ಯಾಂಗವೂ ಪ್ರಜಾಪ್ರಭುತ್ವ ರಚನೆಯಲ್ಲಿ ಅಡಗಿದೆ. ಸರ್ಕಾರ ಅಂಗಗಳ ರಚನೆ, ಹಕ್ಕುಗಳು, ಶಾಸನ ರಚನಾಕ್ರಮ, ಶಾಸನ ಸಂಬಂಧಾಧಿಕಾರಗಳನ್ನು ಅರಿಸುವುದು, ನಿಷೇಧಿಸುವುದು, ಕಾರ್ಯಾಂಗ ನ್ಯಾಯಾಂಗಗಳ ರಚನೆ ಮತ್ತು ಪರಸ್ಪರ ಸಂಬಂಧಗಳು — ಇವುಗಳೆಲ್ಲಾ ಸಂಯುಕ್ತ ರಾಷ್ಟ್ರ

ವಿಧಾನದಲ್ಲಿ ಅಧಿಕೃತವಾಗಿರುವ, ವಿಶೇಷಾಧಿಕಾರವಾಗಿರುವ, ಅನ್ಯ ಕಾನೂನುಗಳಿಂದ ಪ್ರತ್ಯೇಕಿಸಲ್ಪಟ್ಟ ಮತ್ತು ವಿಚಿತ್ರ ರೀತಿಯಲ್ಲಿ ಮಾತ್ರ ಮಾರ್ಪಾಟು ಹೊಂದುವ ರಾಜ್ಯಶಾಸನಗಳಲ್ಲಿ ವಿಶದಪಡಿಸಿದೆ.

ವ್ಯಕ್ತಿ ಸ್ವಾತಂತ್ರ್ಯ, ಸಾಮ್ಯತೆ, ಮತ್ತು ರೂಲ್ ಆಫ್ ಲಾ ಮುಂತಾದ ಸೂತ್ರಗಳು ಸರ್ಕಾರದಲ್ಲಿ ವಿಂಗಡಿಸಿದ ತ್ರಿವಿಧಾಂಗಗಳ ತತ್ವದಲ್ಲಿ ಅಡಗಿವೆ ಯೆಂದು ರಾಜ್ಯ ಶಾಸ್ತ್ರಜ್ಞರ ಮತ. ಅಂಗವಿಭಜನಾಧಿಕಾರಗಳು, ಆಡಳಿತ ದನುಕೂಲಕ್ಕಾಗಲೀ ಅಥವಾ ಸಮರ್ಥ ಆಡಳಿತ ರಚನೆಗಾಗಲೀ ಸಾಧಕ ವಲ್ಲ; ರಾಜಕಾರ್ಯನಿರ್ವಹಣೆಯು ಪ್ರಜಾಸೌಕರ್ಯಕ್ಕೆಂದು ಎಚ್ಚರಿಕೆ ಕೊಡುವು ದಕ್ಕಾಗಿ, ವ್ಯಕ್ತಿ ಮತ್ತು ಸಂಘ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕಾಗಿ ರಾಷ್ಟ್ರದ ತ್ರಿವಿಧಾಂಗಗಳು ಶಾಸನಾಂಗ, ನ್ಯಾಯಾಂಗ, ಕಾರ್ಯಾಂಗಗಳು ವ್ಯಕ್ತಿ ಮತ್ತು ಸಂಘಗಳಿಗಿರುವ ಸ್ವಾತಂತ್ರ್ಯವು ಸರ್ಕಾರದಿಂದ ಪ್ರತ್ಯೇಕ ವಾದುದೆಂದೂ, ವ್ಯಕ್ತಿ ಸ್ವಾತಂತ್ರ್ಯ ಹೆಚ್ಚಿದ ಹಾಗೆಲ್ಲಾ ಸಾಮೂಹಿಕ ಸ್ವಾತಂತ್ರ್ಯ ಬಲಹೀನವಾಗುವುದೆಂಬ ತತ್ವಗಳ ಆಧಾರದಮೇಲೆ ನಿಂತಿವೆ.

## ರಾಷ್ಟ್ರದ ತ್ರಿವಿಧಾಂಗಗಳು—Separation of Powers

ರಾಷ್ಟ್ರದ ಕಾರ್ಯರೂಪಗಳು ವೃದ್ಧಿಹೊಂದಿದಹಾಗೆಲ್ಲಾ ಆಡಳಿತಾಂಗ ರಚನೆ ಮತ್ತು ಅಧಿಕಾರಗಳು ಸಂಕೀರ್ಣವಾಗಿ ಅಂಗಗಳ ವಿಭಜನೆಯು ಪ್ರಶ್ನೆ ಏಳುತ್ತದೆ. ಚಾರಿತ್ರಕ ದೃಷ್ಟಿಯಿಂದ ನೋಡಿದರೆ ಪ್ರಾಚೀನ ರಾಜಪ್ರಭುತ್ವಗಳಲ್ಲಿಯೂ ರಾಜನ ಕಾರ್ಯನಿರ್ವಹಣೆಯಲ್ಲಿ ದೇಶದ ಶ್ರೀಮಂತರೂ ಮತ್ತು ಪ್ರಬುದ್ಧರಾದ ಜನರು ಸಹಕರಿಸುತ್ತಿದ್ದ ರೆಂದು ವ್ಯಕ್ತವಾಗುತ್ತದೆ. ಶಾಸನ ರಚನೆಯ ನ್ಯಾಯತೀರ್ಮಾನ, ಮತ್ತು ಆಡಳಿತ ವಿಚಾರಗಳನ್ನು ಪ್ರತ್ಯೇಕ ಸಮಿತಿಗಳು ಪ್ರಸ್ತಾಪಿಸುತ್ತಿದ್ದವು. ಪ್ರಜೆಗಳು ತಮ್ಮ ಜವಾಬ್ದಾರಿಯನ್ನರಿತಾಗ, ಶಾಸನ ರಚನೆ, ಅದನ್ನು ಕಾರ್ಯಕಾರಿಯನ್ನಾಗಿ ಮಾಡುವ ಅಧಿಕಾರವನ್ನು ರಾಜನಲ್ಲಿಯಾಗಲಿ ಶ್ರೀಮಂತರಲ್ಲಾಗಲಿ ಕ್ರೋಢೀಕರಿಸಿದರೆ ನಿರಂಕುಶಾಧಿಕಾರ ಉತ್ಪನ್ನವಾಗಿ ಸ್ವಾತಂತ್ರ್ಯಕ್ಕೆ ಪ್ರತಿಬಂಧಕವಾಗುವುದೆಂದು ಮನವರಿಕೆಯಾಯಿತು.

ತ್ರಿವಿಧಾಂಗಗಳ ಪ್ರತ್ಯೇಕ ರಚನೆಯ ಅಗತ್ಯವನ್ನು ಅರಿಸ್ಟಾಟಲ್, ಸಿಸಿರೊ, ಮತ್ತು ಪೊಲಿಬಿಯಸ್ ಮುಂತಾದ ಪ್ರಾಚೀನ ರಾಜನೀತಜ್ಞರು ಪ್ರತಿಪಾದಿಸಿದ್ದರು. ಆಡಳಿತಾಂಗಗಳನ್ನು ಶಾಸನ ರಚನೆ, ಯುದ್ಧ ಘೋಷಣೆ ಮತ್ತು ಶಾಂತಿಸಲಹೆಗಳನ್ನು ಸೂಚಿಸುವ ಡೆಲಿಬರೆಟಿವ್ (Deliberative) ಸಮಿತಿಯೂ ಮೆಜಿಸ್ಟೀರಿಯಲ್ (Majesterial) ಎಂಬ ಕಾರ್ಯಕಾರಿ ಸಮಿತಿ ಎಂದು ಅರಿಸ್ಟಾಟಲ್‌ನು ವಿಭಜಿಸಿದನು. ಆ ಕಾಲದಲ್ಲಿ ಅಂಗಗಳು ಪ್ರತ್ಯೇಕವಾಗಿಲ್ಲದಿದ್ದರೂ ಅನುಸರಣೆಯಲ್ಲಿ ಪ್ರತ್ಯೇಕವೆಂಬ ಭಾವನೆಯಿತ್ತು. ಹದಿನಾರನೆಯ ಶತಮಾನದಲ್ಲಿ 'ಬೊಡಿನ್' ಎಂಬ ರಾಜನೀತಜ್ಞನು, ರಾಜನಿಗೆ ನ್ಯಾಯಾಧಿಕಾರವನ್ನು ಕೊಡುವುದರಿಂದ ರಾಷ್ಟ್ರಕ್ಕೆ ವಿಪತ್ತು ಸಂಭವಿಸುವುದರಿಂದ ಪ್ರತ್ಯೇಕ ಸಮಿತಿಗೆ ಒಪ್ಪಿಸುವುದು ಕ್ಷೇಮಕರವೆಂದು ಸೂಚಿಸಿದನು. ಪ್ಯೂರಿಟನ್ ಕ್ರಾಂತಿಕಾಲದಲ್ಲಿ ತ್ರಿವಿಧಾಂಗಗಳ ಪ್ರತ್ಯೇಕ ರಚನೆ ಸಿದ್ಧಾಂತವಾಯಿತು; ಪ್ಯೂರಿಟನ್‌ರ ಅನುಯಾಯಿಯಾದ Cromwell 'ಕ್ರಾಂವೆಲ್'ನು ಶಾಸನಾಂಗವನ್ನು ಮಂತ್ರಿಮಂಡಳದಿಂದ ಪ್ರತ್ಯೇಕಿಸಲು ಪ್ರಯತ್ನಿಸಿದನು. 1689ನೆ ಶೋಣಿತ ರಹಿತಕ್ರಾಂತಿಗೆ ಆಧಾರಭೂತವಾದ ತತ್ವಗಳನ್ನು ಪ್ರತಿಪಾದಿಸಿದ ಜಾನ್ ಲಾಕ್ (John Locke)ನು ಸರ್ಕಾರದ ಅಧಿಕಾರವನ್ನೂ ಲೆಜಿಸ್ಲಟಿವ್ (Legislative), ಎಕ್ಸಿಕ್ಯುಟಿವ್ (Executive) ಫೆಡರೆಟಿವ್ (Federative) ಆಗಿ ವಿಭಜಿಸಿದರೆ ರಾಷ್ಟ್ರಕ್ಕೆ ಕಲ್ಯಾಣವೆಂದು ಘೋಷಿಸಿದನು.

## ಮಾಂಟೆಸ್ಕ್ಯೂ ಮತ್ತು ತ್ರಿವಿಧಾಂಗ ತತ್ವ

ಸಮಾಜ ಪ್ರಗತಿಯಲ್ಲಿ ಅನೇಕ ಜಟಿಲ ಪ್ರಶ್ನೆಗಳು ಏಳುವುದರಿಂದ ಅವುಗಳನ್ನು ಪರಿಹರಿಸುವುದಕ್ಕಾಗಿ ಸರ್ಕಾರವು ಹೊಸಹೊಸ ನಿಯಮಗಳನ್ನು ರಚಿಸಿ ಅವುಗಳನ್ನು ಪ್ರತಿಪಾದಿಸಲು ಸಲುವಾಗಿ ಅಂಗಗಳ ವಿಭಜನೆಯನ್ನು ಮಾಡುತ್ತದೆ. ಸಂಸ್ಕೃತಿ ಬೆಳೆದಹಾಗೆಲ್ಲಾ ಸ್ವಾತಂತ್ರ್ಯದ ವಿಷಯದಲ್ಲಿ ಜನಾಭಿಮತವು ಬದಲಾಯಿಸುತ್ತದೆ. ಅಂಗಗಳ ರಚನೆ ಮತ್ತು ಕಾರ್ಯಗಳು ಈ ಬದಲಾವಣೆಗಳ ಮತ್ತು ಅವುಗಳಲ್ಲಿ ಅಡಗಿರುವ

ಅಂತರಾತ್ಮ ಮತ್ತು ನೈಸರ್ಗಿಕ ಸಂಬಂಧಗಳನ್ನು ಬಹಿರಂಗವಾಗಿ ವ್ಯಕ್ತಪಡಿಸುವ ವಿಧಾನಗಳಿಗನುಗುಣವಾಗಿಯೇ ನಡೆಯಬೇಕು. ಈ ತತ್ವವನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿ, ರಾಜಕೀಯ, ಸಾಮಾಜಿಕ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳನ್ನು ರಕ್ಷಿಸಲು ಪ್ರತಿಯೊಂದು ರಾಷ್ಟ್ರದಲ್ಲಿಯೂ ಪ್ರತ್ಯೇಕವಾಗಿ ಅಂಗಗಳಿಗೆ ಅಧಿಕಾರ ವಹಿಸಿಕೊಡಬೇಕೆಂದು ಪ್ರಚುರಪಡಿಸಿದವನು ಫ್ರೆಂಚ್ ದೇಶದ ಸುಪ್ರಸಿದ್ಧ ರಾಜನೀತಜ್ಞನಾದ ಮಾಂಟೆಸ್ಕ್ಯೊ (Montesquieu). ಬ್ಲಾಕ್‌ಸ್ಟನ್ (Black Stone) ಎಂಬ ಇಂಗ್ಲಿಷ್ ರಾಜನೀತಜ್ಞನು 'Commentaries on the Laws of England' ಎಂಬ ಗ್ರಂಥದಲ್ಲಿ ಈ ಸಿದ್ಧಾಂತವನ್ನು ಅನುಮೋದಿಸಿದ್ದಾನೆ. ಅಮೆರಿಕಾ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮುಗಿದು ಸಂಯುಕ್ತ ರಾಷ್ಟ್ರವಿಧಾನ ಏರ್ಪಟ್ಟಾಗ ಮಾಂಟೆಸ್ಕ್ಯೊವಿನ ಸಿದ್ಧಾಂತವು ರಾಷ್ಟ್ರವಿಧಾನದ ಆಧಾರ ಭೂತವಾದ ತತ್ವವಾಯಿತು. ಸಂಯುಕ್ತರಾಷ್ಟ್ರ ಸೃಷ್ಟಿಕರ್ತರಾದ ಮಾಡಿಸನ್, ಜಾರ್ಜ್ ವಾಷಿಂಗ್‌ಟನ್, ಅಡಮ್ಸ್, ಜಫರ್ಸನ್, ಸ್ಟೋರಿ, ಹ್ಯಾಮಿಲ್ಟನ್ ಮುಂತಾದ ಪ್ರಭುತಿಗಳು ವೈಯುಕ್ತಿಕ ಸ್ವಾತಂತ್ರ್ಯಕ್ಕೂ ಮಾಂಟೆಸ್ಕ್ಯೊ 'Spirit of the Laws' ಎಂಬ ಗ್ರಂಥದಲ್ಲಿ ಪ್ರತಿಪಾದಿಸಿರುವ ಈ ಸಿದ್ಧಾಂತವೂ ಮೂಲಾಧಾರವಾದುದೆಂದು ಒಪ್ಪಿದ್ದಾರೆ.

ಅಧಿಕಾರವೆಂಬುದು ( Powers ) ರಾಜ್ಯಾಡಳಿತ ತ್ರಿವಿಧಾಂಗಗಳಿಗೆ ಅನ್ವಯಿಸುತ್ತದೆ. ಶಾಸನದ ರಚನೆ ಮೊದಲನೆಯ ಅಂಗ; ಕಾನೂನುಗಳನ್ನು ಜಾರಿಗೆ ತರಲು ಬೇಕಾಗುವ ಸಾಧನಗಳನ್ನು ರಚಿಸಿ ಅವುಗಳನ್ನು ಕಾರ್ಯಕಾರಿಯಾಗಿ ಮಾಡುವುದು ಕಾರ್ಯಾಂಗ ಎರಡನೆಯದು; ವ್ಯಕ್ತಿಗೂ ಮತ್ತು ಸರ್ಕಾರಕ್ಕೂ ಇರುವ ಅಂತರ ಮತ್ತು ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಕಾನೂನನ್ನು ಅತಿಕ್ರಮಣ ಮಾಡಿದವರನ್ನು ಶಿಕ್ಷಿಸುವ ಅಧಿಕಾರವುಳ್ಳ ನ್ಯಾಯಾಂಗ ಮೂರನೆಯದು. ಮಾಂಟೆಸ್ಕ್ಯೊವು Spirit of Laws ನಲ್ಲಿ ಈ ರೀತಿ ಹೇಳಿದ್ದಾನೆ. "ಶಾಸನ ರಚಿಸುವ ಮತ್ತು ಅದನ್ನು ಅನುಷ್ಠಾನಕ್ಕೆ ತರುವ ಎರಡು ಅಧಿಕಾರಗಳು ಒಂದು ವ್ಯಕ್ತಿಯಲ್ಲಿಯಾಗಲಿ,

ಅಥವ ಸಭೆಯಲ್ಲಿಯಾಗಲಿ ಐಕ್ಯವಾದರೆ ವ್ಯಕ್ತಿ ಮತ್ತು ಪ್ರಜಾಸ್ವಾತಂತ್ರ್ಯಕ್ಕೆ ಹಾನಿ; ಕ್ರೂರ ಕಾನೂನುಗಳನ್ನು ಮಾಡಿ ರಾಜ್ಯಭಾರ ನಡೆಸಬಹುದು. ನ್ಯಾಯಾಂಗವನ್ನು ಕಾರ್ಯಾಂಗ ಮತ್ತು ಶಾಸನಾಂಗಗಳಿಂದ ಪ್ರತ್ಯೇಕಿಸದಿದ್ದರೆ ಸ್ವಾತಂತ್ರ್ಯವೆನ್ನುವುದು ಬರಿ ಭ್ರಮೆಯಾಗುವುದು; ನ್ಯಾಯಾಂಗವು ಶಾಸನಾಂಗದೊಡನೆ ಸಹವರ್ತಿಸಿದರೆ ಪೌರೇಯ ಸ್ವಾತಂತ್ರ್ಯವು ನಾಶವಾಗಿ ನಿರಂಕುಶ ಪ್ರಭುತ್ವಕ್ಕೆ ಹೆದ್ದಾರಿಯಾಗುತ್ತದೆ; ಆಗ ಶಾಸಕ ಕರ್ತನೇ ನ್ಯಾಯಾಧೀಶನಾಗುವನು; ನ್ಯಾಯಾಂಗವು ಕಾರ್ಯಾಂಗದೊಡನೆ ಸೇರಿದರೆ ನ್ಯಾಯಾಧಿಪತಿಯು ಹಿಂಸಾತ್ಮಕನಾಗಬಹುದು; ಈ ಅಧಿಕಾರಗಳು ರಾಜನಲ್ಲಿಯಾಗಲಿ, ಶ್ರೀಮಂತರಲ್ಲಿಯಾಗಲಿ, ಪ್ರಜಾಪ್ರತಿನಿಧಿ ಸಭೆಯಲ್ಲಿಯಾಗಲಿ ಕೇಂದ್ರೀಕೃತವಾದರೆ ರಾಷ್ಟ್ರನಾಶವಾಗುವುದು".

ಸ್ವಾತಂತ್ರ್ಯವೇ ಮಾನವನ ಉದಾತ್ತವಾದ ಧ್ಯೇಯ; ಸ್ವೇಚ್ಛಾಪ್ರವರ್ತನೆಯಿಂದಾಗಲಿ, ಕಾನೂನುಗಳ ವಿರೋಧ ವರ್ತನೆಯಿಂದಾಗಲಿ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವಿಲ್ಲ. ದೇಶದ ಪದ್ಧತಿಗಳು, ನಾಗರಿಕತೆ, ನಿತ್ಯಜೀವನ, ಸಮಾಜದ ಧ್ಯೇಯಗಳೆಲ್ಲವೂ ಅಲಿಖಿತ ಶಾಸನಗಳಲ್ಲಿ ಅಂತರ್ಗತವಾಗಿವೆ; ಆದುದರಿಂದಲೆ ಕಾನೂನುಗಳನ್ನೂ, ಶಾಸನಗಳನ್ನೂ ಸಂಸ್ಕೃತಿಯ ಮೇಲ್ಮೆಯ ಕುರುಹು ಎಂದು ತಿಳಿಯಬಹುದು. ಕಾನೂನಿನ ಮತ ಮತ್ತು ವ್ಯಾಪ್ತಿಗಳ ತಿಳಿವಳಿಕೆಯಿದ್ದರೆ ಅಧಿಕಾರಗಳೆಲ್ಲವೂ ಏಕಾಧಿಪತ್ಯದಲ್ಲಿ ಐಕ್ಯವಾದರೂ ಅದನ್ನು ಪ್ರತಿಭಟಿಸಿ ನಿವಾರಣೆಯನ್ನು ಹೊಂದಬಹುದು. ಅಲ್ಲದೆ, ಶಾಸನರಚನೆಯ ವಿಸ್ತಾರ, ಮತ್ತು ಅದರ ಅನುಷ್ಠಾನ ಮಾಡುವ ಅಂಗಗಳನ್ನು ಬೇರೆಬೇರೆಯಾಗಿ ನಿರ್ಮಾಣ ಮಾಡಿದರೆ, ಯಾವ ಅಂಗವು ನಿಯಮಗಳನ್ನುಲ್ಲಂಘಿಸಿ, ಬಲಯುತವಾಗಿ ಸ್ವಾತಂತ್ರ್ಯ ವಿರೋಧಿಯಾಗಿ ವರ್ತಿಸಲು ಸಾಧ್ಯವಾಗುವುದಿಲ್ಲ. ತ್ರಿವಿಧಾಂಗಗಳ ಸಹಯೋಗದಿಂದಲೇ ಸ್ವಾತಂತ್ರ್ಯ ರಚನೆಯು ಮತ್ತು ಶಾಸನ ವಿರೋಧಾಕಾಂಕ್ಷೆಯುಳ್ಳ ಬಂಧನವೂ ಸಾಧ್ಯ. ಅಂಗಗಳ ಸ್ಪರ್ಧೆ ಪ್ರತಿಸ್ಪರ್ಧೆಗಳಿಂದ ಸ್ವಾತಂತ್ರಾಭಿವೃದ್ಧಿ ಮತ್ತು ಅಧಿಕಾರಸಾಧನಗಳ ನಿಯಂತ್ರಣ, ಮಾನವನ

ನೈಜವಾದ ಸ್ವಾತಂತ್ರ್ಯದ ರೀತಿನೋಟ, ಬೆಳವಣಿಗೆಗಳನ್ನು, ತಿಳಿಸುವ ತತ್ವವು ಈ ತ್ರಿವಿಧಾಂಗಗಳಲ್ಲಿ ಅಡಗಿದೆ. ತ್ರಿವಿಧಾಂಗ ತತ್ವವಿಲ್ಲದ ಸರ್ಕಾರ ರಚನೆಯಲ್ಲಿ ಸ್ವಾತಂತ್ರ್ಯ ಬೆಳವಣಿಗೆಗೆ ಅವಕಾಶವಿಲ್ಲ; ಹಾಗೆಯೇ ನ್ಯಾಯ ಬದ್ಧವಾದ ಮತ್ತು ಪಕ್ಷಪಾತರಹಿತವಾದ ಕಾನೂನುಗಳು ರಚನೆಯಿಲ್ಲದ ಪಕ್ಷದಲ್ಲಿ ಉತ್ತಮ ಸರ್ಕಾರವಿಲ್ಲ.

ಮಾಂಟೆಸ್ಕೊ ಪ್ರತಿಪಾದಿಸಿರುವ ತತ್ವದ ಪ್ರಕಾರ ಅಂಗಗಳ ಅಧಿಕಾರ ಗಳು ಬೇರೆಬೇರೆಯಾಗಿರಬೇಕು; ಆಡಳಿತದ ಯಾವ ಅಂಗವೂ ಮತ್ತೊಂದು ಅಂಗದ ಅಧಿಕಾರಾಕ್ರಮಣ ಮಾಡಲಾಗದು. ತನಗೆ ಸಂಬಂಧಿಸಿದ ಕಾನೂನು ರಚನೆ ಮತ್ತು ಅಧಿಕಾರದಲ್ಲಿ ಮಾತ್ರ ನಿರತವಾಗಿರಬೇಕು. ಈ ವಿಧವಾದ ತ್ರಿವಿಧಾಂಗ ತತ್ವವನ್ನೂ ಸಂಯುಕ್ತ ರಾಷ್ಟ್ರವು ತನ್ನ ಸರ್ಕಾರ ರಚನೆಯಲ್ಲಿ ಅನುಷ್ಠಾನಕ್ಕೆ ತಂದಿದೆ. ಕಾಂಗ್ರೆಸ್ ಸಭೆಯು ಸೆನೆಟ್ ಸಭೆಯ ಸ್ವೇಚ್ಛಾ ಪ್ರವರ್ತನೆಗೆ ಅಡ್ಡಿ; ಇವೆರಡರ ಕಾರ್ಯಗಳನ್ನು ನಿಷೇಧಿ ಸುವ ಅಧಿಕಾರವನ್ನು ಅಧ್ಯಕ್ಷನು ಪಡೆದಿದ್ದಾನೆ; ನ್ಯಾಯಾಂಗವು ರಾಷ್ಟ್ರ ವಿಧಾನವನ್ನು ವಿವರಿಸಿ, ರಾಷ್ಟ್ರಸ್ವರೂಪಧ್ಯೇಯವನ್ನು ಇತರ ಅಂಗಗಳು ತಪ್ಪಾಗಿ ತಿಳಿದರೆ, ಮತ್ತು ಅತಿಕ್ರಮಿಸಿದರೆ ಆಗ ಅವರ ಕಾರ್ಯಗಳನ್ನೂ, ನ್ಯಾಯಬದ್ಧವಲ್ಲವೆಂದು ಎಚ್ಚರಿಕೆ ಕೊಡುವ ಅಧಿಕಾರ ಪಡೆದಿದೆ. ಅಧಿ ಕಾರವೆಂಬುದು ಒಂದು ಬುಗ್ಗೆಯು; ಬಹಳ ಬಿರುಸಾಗಿಯೂ ಗಂಭೀರ ವಾಗಿಯೂ ಹರಿಯುತ್ತದೆ. ಸ್ಥಿರವಾದ ಅಂತರಾಳದಿಂದ ಮೇಲೆ ಉಕ್ಕಿದೆ. ಹೀಗೆ ಬಂದ ಪ್ರವಾಹವು ನಾನಾ ಮುಖವಾಗಿ ಹರಿದರೂ ಸುವ್ಯವಸ್ಥಿತ ದಡಗಳಿಂದ ಕೂಡಿರುವುದರಿಂದ ಹಾನಿವುಂಟಾಗಲಾರದು; ಅಲ್ಲದೆ ಯಾವ ಅಧಿಕಾರ ಪ್ರವಾಹವು ದಡಮೀರಿ ಹರಿಯಲು ಸಾಧ್ಯವಿಲ್ಲ'' ಎಂದು ಪ್ರಸಿದ್ಧ ರಾಜನೀತಜ್ಞನಾದ ವೈಕೊಂಟ್ ಬ್ರೈಸ್ ಹೇಳಿದ್ದಾನೆ.

## ತ್ರಿವಿದಾಂಗತತ್ವ ಮತ್ತು ಆಧುನಿಕ ರಾಷ್ಟ್ರಗಳು

ಏಕಮುಖ ಮತ್ತು ಸಂಯುಕ್ತ ರಾಷ್ಟ್ರಗಳ ರಚನೆಯಲ್ಲಿ ಅಂಗಗಳ

ವಿಭಜನೆ ಆಚರಣೆಯಲ್ಲಿದ್ದರೂ ವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಗೆ ಮೂಲಾಧಾರವಾದ ತತ್ವವೆಂದು ರಾಷ್ಟ್ರವಿಧಾನದಲ್ಲಿ ಸೂಚಿಸಿಲ್ಲ. ಸರ್ಕಾರದ ಜವಾಬ್ದಾರಿಯು ಹೆಚ್ಚುತ್ತಾ ಅಧಿಕಾರಗಳನ್ನು ಪ್ರತ್ಯೇಕಿಸಿ ಅವುಗಳಾಚರಣೆಗಾಗಿ ಬೇರೆಬೇರೆ ಅಂಗಗಳನ್ನು ರಚಿಸಬೇಕಾಗುವುದು; ಈ ಅಂಗಗಳು ತಮ್ಮ ತಮ್ಮ ನಿರ್ದಿಷ್ಟವಾದ ಕಾರ್ಯಗಳಲ್ಲಿ ನಿರತರಾಗಿರಬೇಕೆಂಬ ಸಂಪ್ರದಾಯವು ಎಲ್ಲಾ ರಾಷ್ಟ್ರಗಳಲ್ಲಿಯೂ ಜಾರಿಗೆ ಬರುತ್ತಿದೆ. ಆಧುನಿಕ ರಾಷ್ಟ್ರಗಳಲ್ಲಿ ನ್ಯಾಯಾಂಗವನ್ನು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಪ್ರತ್ಯೇಕಿಸಲ್ಪಟ್ಟಿದೆ. ವರಣಕರ್ತ ಸಮಾಜವಾಗಲಿ, ಶಾಸಕಾಂಗವಾಗಲಿ, ಕಾರ್ಯಾಂಗವಾಗಲಿ ನ್ಯಾಯಾಧೀಶರ ಅಧಿಕಾರವಧಿಯನ್ನು ಕಡಮೆ ಮಾಡಲಾರರು. ಅಲ್ಲದೆ ನ್ಯಾಯಾಧೀಶರು ತಮ್ಮ ಕರ್ತವ್ಯಗಳನ್ನು ವಿಪಕ್ಷಗಳ, ಸಚಿವರ ಇತರರ ಯಾವ ಅಡ್ಡಿಯಿಲ್ಲದೆ ನಿರ್ಭಯರಾಗಿ ನಡೆಸಬಹುದು. ಇಂಗ್ಲೆಂಡಿನಲ್ಲಿ ನ್ಯಾಯಾಂಗಗಳ ರಚನೆಯ ಮೂಲತತ್ವಗಳನ್ನು ಮಾರ್ಪಾಟು ಮಾಡುವ ಅಧಿಕಾರವು ಶಾಸಕಾಂಗಕ್ಕಿದ್ದರೂ ನ್ಯಾಯಾಂಗ ತೀರ್ಪುಗಳನ್ನು ವ್ಯತ್ಯಾಸ ಮಾಡುವ ಅಧಿಕಾರವಿಲ್ಲ; ಅದರಿಂದಲೆ ನ್ಯಾಯಾಂಗಗಳು ಅನೇಕ ಕಾನೂನುಗಳನ್ನು ಸ್ವಾತಂತ್ರ್ಯ ರಕ್ಷಣೆಗಾಗಿ ರಚಿಸಲು ಸಾಧ್ಯವಾಗಿದೆ.

ಇಂಗ್ಲೆಂಡಿನ ರಾಷ್ಟ್ರವಿಧಾನವನ್ನನುಸರಿಸಿರುವ ಇತರ ರಾಷ್ಟ್ರಗಳಲ್ಲಿಯೂ ಶಾಸಕಾಂಗವು ನ್ಯಾಯಾಂಗಗಳನ್ನು ರಚಿಸಬಹುದು, ರದ್ದು ಮಾಡಬಹುದು, ನ್ಯಾಯಾಧೀಶರನ್ನು ನೇಮಿಸಬಹುದು. ಅಲ್ಲದೆ ಶಾಸಕಾಂಗ ಮತ್ತು ಕಾರ್ಯನಿರ್ವಾಹಕ ಸಮಿತಿಗಳು ನ್ಯಾಯಾಂಗಗಳೊಡನೆ ಸಹಕರಿಸಿ ಕಾನೂನುಗಳನ್ನು ರಚಿಸಬಹುದು. ಕರ್ತವ್ಯಭ್ರಷ್ಟರಾದ ಸಚಿವರನ್ನು ಮತ್ತು ಅಧಿಕಾರಗಳನ್ನು ಶಾಸಕಾಂಗವು ಪರೀಕ್ಷಿಸಬಹುದು. ಆಡಳಿತಾಚರಣೆಯಲ್ಲಿ ಏಳುವ ವಿವಾದಾಸ್ಪದವಾದ ಪ್ರಶ್ನೆಗಳನ್ನು ನ್ಯಾಯಾಂಗಗಳಂತೆ ಕಾರ್ಯನಿರ್ವಾಹಕ ಸಮಿತಿಯು ಪರಿಹರಿಸಬಹುದು ನ್ಯಾಯಾಂಗಗಳು ಕಾರ್ಯಾಂಗಗಳು ಮತ್ತು ಆಡಳಿತ ವರ್ಗದವರು

ನಿರ್ವಹಿಸಬೇಕಾದ ಕೆಲಸಗಳನ್ನು ನಡೆಸುವುವು; ಹಾಗೆಯೇ ಇಂಜೆಕ್ಷನ್‌ಗಳನ್ನು ಜಾರಿಗೆ ತರುವುದರಲ್ಲಿಯೂ ಕಾನೂನುಗಳ ತಿರಳನ್ನು ವಿಶದಪಡಿಸುವುದರಲ್ಲಿಯೂ, ಕಾನೂನುಗಳನ್ನು ಆಚರಣೆಗೆ ತರಲು ಆಸ್ಪದಗಳನ್ನು ಹೆಚ್ಚು ಕಮ್ಮಿ ಮಾಡುವುದರಲ್ಲಿಯೂ, ಕಾನೂನುಗಳು ನ್ಯಾಯಬದ್ಧವೊ ಅಥವ ಅಲ್ಲವೊ ಎಂಬುದನ್ನು ನಿರ್ಧರಿಸುವುದರಲ್ಲಿಯೂ, ನ್ಯಾಯಾಂಗಗಳು ಶಾಸಕಾಂಗಗಳ ಅಧಿಕಾರವನ್ನು ಆಚರಿಸುತ್ತವೆ.

ನ್ಯಾಯಾಂಗವು, ಅಧಿಕಾರಿಗಳು ಸಾರ್ವಜನಿಕವಾಗಿ ನಡೆಸಿದ ಕೆಲಸ ಮತ್ತು ವೆಚ್ಚಗಳನ್ನು ಪರಿಶೀಲಿಸುತ್ತದೆ. ಅನೇಕ ಏಕಮುಖ ರಾಷ್ಟ್ರಗಳಲ್ಲಿ ಅಧಿಕಾರಿಗಳು ಸಾರ್ವಜನಿಕ ಕೋರ್ಟುಗಳಿಗೆ ಅಧೀನರಾಗಬೇಕು, ಯಾತಕ್ಕೆಂದರೆ ರಾಷ್ಟ್ರಧರ್ಮವು ಅಧಿಕಾರಿಗಳಿಗೂ, ಸಾಮಾನ್ಯ ಜನರಿಗೂ ಒಂದೇ. ಆದರೆ ಫ್ರಾನ್ಸ್ ದೇಶದ ಅಧಿಕಾರಗಳು ಕಾರ್ಯನಿರ್ವಾಹಕ ನ್ಯಾಯಾಂಗಗಳಿಗೆ ಅಧೀನರೇ ಹೊರತು ಸಾರ್ವಜನಿಕ ನ್ಯಾಯಾಂಗಗಳಿಗಲ್ಲ. ಫ್ರೆಂಚ್ ರಾಷ್ಟ್ರವಿಧಾನವು ತ್ರಿವಿಧಾಂಗ ತತ್ವವನ್ನು ಒಪ್ಪಿರುವುದರಿಂದ ಕಾರ್ಯಾಂಗವು ಶಾಸಕಾಂಗದಿಂದ ಪ್ರತ್ಯೇಕಿಸಲ್ಪಟ್ಟಿದೆ, ಮತ್ತು ಈ ಅಂಗಗಳಿಗೆ ವಿಶೇಷಾಧಿಕಾರವನ್ನೂ ಗಳಿಸಿಕೊಟ್ಟಿದೆ. ಕಾರ್ಯಾಂಗದ ಸ್ವೇಚ್ಛಾ ಪ್ರವರ್ತನೆಯಿಂದ ವ್ಯಕ್ತಿ ಮತ್ತು ಪೌರೇಯ ಸ್ವಾತಂತ್ರ್ಯಕ್ಕೆ ಹಾನಿ ತರಬಹುದೆಂಬ ಭೀತಿಯಿರುವುದರಿಂದ, ಕಾರ್ಯಾಂಗವಾಗಲಿ ಶಾಸಕಾಂಗವಾಗಲಿ ರಾಷ್ಟ್ರವಿಧಾನಕ್ಕೆ ವಿರುದ್ಧವಾಗಿ ವರ್ತಿಸಿದ ಪಕ್ಷದಲ್ಲಿ ಅವುಗಳನ್ನು ತಡೆಗಟ್ಟಲು ಬಲವಾದ ನ್ಯಾಯಾಂಗವು ಅತ್ಯಾವಶ್ಯಕ.

ಶಾಸಕಾಂಗ ಮತ್ತು ಕಾರ್ಯಾಂಗಗಳು ಪಾರ್ಲಿಮೆಂಟರಿ ಸರ್ಕಾರ ರಹಿತ ರಾಷ್ಟ್ರಗಳಲ್ಲಿ ಪ್ರತ್ಯೇಕವಾಗಿಯೂ, ಏಕಮುಖರಾಷ್ಟ್ರಗಳಲ್ಲಿ ನಿಕಟ ಸಂಬಂಧವುಳ್ಳವಾಗಿಯೂ ಇವೆ. ಪಾರ್ಲಿಮೆಂಟರಿ ಸರ್ಕಾರವಿರುವ ರಾಷ್ಟ್ರಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಅಧೀನ; ಶಾಸಕಾಂಗದ ಸಮಿತಿಯಾಗಿ ಆಡಳಿತಾಂಗಗಳನ್ನು ನಿರ್ಮಿಸಿ ಕಾರ್ಯಾಂಗವು ತನ್ನ ಆಡಳಿತವನ್ನು ನಡೆಸುತ್ತದೆ. ಶಾಸಕಾಂಗದ ಭರವಸೆಯಿರುವವರಿಗೂ ಅಧಿಕಾರ

ದಲ್ಲಿದ್ದು, ಶಾಸಕಾಂಗದ ನಂಬಿಕೆಯನ್ನು ಕಳೆದುಕೊಂಡಾಗ ನಾಶ ಹೊಂದುತ್ತದೆ. ಆದುದರಿಂದ ಶಾಸನವನ್ನು ರಚಿಸುವುದು ಅದನ್ನು ಕಾರ್ಯ ಕಾರಿಯಾಗಿ ಮಾಡುವ ಜವಾಬ್ದಾರಿಗಳು ಎರಡು ಶಾಸಕಾಂಗಕ್ಕೆ ಸೇರಿದೆ. ಇಂಗ್ಲೆಂಡಿನ ಕಾರ್ಯಾಂಗವು ಶಾಸಕಾಂಗಕ್ಕೆ ಅಧೀನವಾದರೂ ಸ್ವಾತಂತ್ರ್ಯ ದಿಂದ ವರ್ತಿಸಬಹುದು; ಫ್ರೆಂಚ್ ನ್ಯಾಯಾಂಗವು ಶಾಸಕಾಂಗಕ್ಕೆ ಸಂಪೂರ್ಣವಾಗಿ ಅಧೀನವಾಗಿದೆ. ಡೊಮಿನಿಯನ್ ರಾಷ್ಟ್ರಗಳೂ ಪಾರ್ಲಿ ಮೆಂಟರಿ ಸರ್ಕಾರವನ್ನು ಒಪ್ಪಿರುವುದರಿಂದ, ಶಾಸಕಾಂಗ ಮತ್ತು ಕಾರ್ಯಾಂಗವೂ ಆಡಳಿತದಲ್ಲಿ ಸಹಕರಿಸುತ್ತವೆ. ಕೆನಡ ದೇಶದಲ್ಲಿ; ಶಾಸನಸಭೆಯ ಅವಧಿ ಮುಗಿಯುವುದರೊಳಗಾಗಿ ಅದನ್ನು ರದ್ದುಗೊಳಿಸಿ ಪ್ರಜೆಗಳಿಗೆ ಅಪೀಲುಮಾಡುವ ವಿಶೇಷ ಅಧಿಕಾರವು ಕಾರ್ಯಾಂಗ ಸಮಿ ತಿಗೆ ಸೇರಿದೆ. ಆಫ್ರಿಕಾ ಮತ್ತು ನ್ಯೂಜಿಲೆಂಡ್ ರಾಷ್ಟ್ರಗಳಲ್ಲಿಯೂ ಇದೇ ರೀತಿಯಾದ ನಿಕಟ ಸಂಬಂಧವು ಶಾಸಕ ಮತ್ತು ಕಾರ್ಯಾಂಗಗಳಿಗೆ ಇವೆ. ಆಸ್ಟ್ರೇಲಿಯಾ ರಾಷ್ಟ್ರದಲ್ಲಿಯೂ ಕ್ಯಾಬಿನೆಟ್ ಸಭೆಯು ಕೆಳಗಿನ ಸಭೆಗೆ ಸಂಪೂರ್ಣವಾಗಿ ಅಧೀನವಾಗಿದೆ.

ಪಾರ್ಲಿಮೆಂಟರಿ ಸರ್ಕಾರರಹಿತ ರಾಷ್ಟ್ರಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ರಚನೆ, ಅವಧಿ ಮತ್ತು ಅಧಿಕಾರಗಳಲ್ಲಿ ಅಧೀನವಲ್ಲ. ಆದರೂ ಆಡಳಿತದ ನಿತ್ಯಜೀವನದ ಅನುಭವದಿಂದ ಈ ಅಂಗಗಳಿಗೆ ಹೆಚ್ಚು ಹೆಚ್ಚು ಸಂಬಂಧಗಳು ಬೆಳೆದುಬರುತ್ತಿದೆ. ಸಮರ್ಥ ಸರ್ಕಾರವು ಏರ್ಪಾ ಡಾಗಬೇಕಾದರೆ ಶಾಸನ ಸಭೆಗಳ ಕಾರ್ಯಗಳಲ್ಲಿ ಕಾರ್ಯಾಂಗವು ಪ್ರವರ್ತಿಸಿ, ಸಲಹೆಗಳನ್ನು ಕೊಟ್ಟು ತನ್ನ ನಿಷೇದಾಧಿಕಾರದಿಂದ ಶಾಸನ ಸಭೆಯ ಸದಸ್ಯರ ಸ್ವೇಚ್ಛಾಪ್ರವರ್ತನಕ್ಕೆ ಅಡ್ಡಿತರಬೇಕು. ಹಾಗೆಯೇ ನಿಬಂಧನೆ, ಕ್ಷಮಾ ಮತ್ತು ಶಿಕ್ಷಾಧಿಕಾರಗಳ ಮೂಲಕ ನ್ಯಾಯಾಂಗ ಕಾರ್ಯಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬಹುದು. ದೇಶಕ್ಕೆ ಸಂಬಂಧಿಸುವ ಮತ್ತು ಸಾರ್ವಜನಿಕ ಪ್ರಿಯವಾದ ಕಾನೂನುಗಳನ್ನೂ, ಆರ್ಡಿನೆನ್ಸ್‌ಗಳನ್ನೂ ಮಾಡಬಹುದು. ಶಾಸಕಾಂಗವು ಆರ್ಥಿಕನಿಯಂತ್ರಣಗಳ ಮೂಲಕ

ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನೂ ಅಂಕೆಯಲ್ಲಿಡಬಹುದು, ಕಾರ್ಯಾಂಗದ ನಿಷೇದಾಧಿಕಾರವನ್ನು ಅಡಗಿಸಬಹುದು, ಅಧಿಕಾರಿಗಳನ್ನು ನೇಮಿಸಿ ಆಡಳಿತ ನ್ಯೂನತೆಗಾಗಿ ದೂಷಿಸಬಹುದು. ಒಂದು ಮಾತಿನಲ್ಲಿ ಹೇಳುವುದಾದರೆ, ಸಂಯುಕ್ತ ರಾಷ್ಟ್ರದಲ್ಲಿ ಕಾರ್ಯಾಂಗವು ಶಾಸಕಾಂಗ ದಿಂದ ಪ್ರತ್ಯೇಕಿಸಲ್ಪಟ್ಟರೂ, ನ್ಯಾಯಾಂಗಕ್ಕೆ ಅಧೀನ; ಫ್ರೆಂಚ್ ರಾಷ್ಟ್ರದಲ್ಲಿ ಕಾರ್ಯಾಂಗವು ನ್ಯಾಯಾಂಗದಿಂದ ಬೇರೆಯಾಗಿ ಶಾಸಕಾಂಗಕ್ಕೆ ಸಂಪೂರ್ಣ ಅಧೀನವಾಗಿದೆ. ಇಂಗ್ಲೆಂಡಿನಲ್ಲಿ ಕಾರ್ಯಾಂಗವು ನ್ಯಾಯಾಂಗ ಮತ್ತು ಶಾಸಕಾಂಗವೆರಡಕ್ಕೂ ಅಧೀನವಾಗಿದೆ.

## ತ್ರಿವಿಧಾಂಗ ತತ್ವವಿಮರ್ಶೆ

ಆಧುನಿಕ ಸರ್ಕಾರದಲ್ಲಿ ಕರ್ತವ್ಯವಿಭಾಗದಲ್ಲಿ ಭಿನ್ನಭಿನ್ನ ಕರ್ತವ್ಯಗಳಿ ಗನುಗುಣವಾಗಿ ವಿಶಿಷ್ಟತೆ ಮತ್ತು ದಕ್ಷತೆಯು ಅತ್ಯಾವಶ್ಯಕವಾದುದರಿಂದ ಸಾಧಾರಣವಾಗಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ, ಆಡಳಿತಾಂಗ ಗಳ ಅವುಗಳ ಬೇಧ ಪ್ರಬೇಧಗಳು ಹುಟ್ಟುವುದು ಸಹಜ. ಸರ್ಕಾರ ಪ್ರಕೃತಿಯಲ್ಲಿ ಅಂಗಗಳ ರಚನೆ ಮತ್ತು ಅಧಿಕಾರಗಳು ಏಕರೀತಿಯಾಗಿರು ವುದಿಲ್ಲ. ಅಂಗಗಳ ರಚನೆ ಯಾವ ರೀತಿ ಇರಬೇಕು, ಎಷ್ಟು ಅಧಿಕಾರ ಹೊಂದಿರಬೇಕೆಂಬ ಪ್ರಶ್ನೆಗಳು ದೇಶದ ಆವಶ್ಯಕತೆ, ಸಂಸ್ಥೆಗಳ ಧ್ಯೇಯ, ರಾಜಕೀಯ ಕಟ್ಟು ನಿಯಮಗಳು ಮತ್ತು ಜನಜಾಗ್ರತಿಗಳಿಗೆ ಅಧೀನ ವಾಗಿರುತ್ತವೆ. ಸರ್ಕಾರದ ರಚನೆಯಾಗಲಿ, ಅದರ ಅಂಗಗಳ ವಿಭಜನೆ ಮತ್ತು ಅಧಿಕಾರವಾಗಲಿ ಪೂರ್ವಭಾವಿಯ ಯೋಜನೆಗಳಿಂದ ಉತ್ಪನ್ನ ವಾದುವಲ್ಲ; ಸಮಾಲೋಚನೆಯಿಂದ ಜೋಡಿಸಿದವಲ್ಲ ಅಥವಾ ಪ್ರತ್ಯೇಕಿಸಿ ದವಲ್ಲ; ತ್ರಿವಿದಾಂಗ ತತ್ವವನ್ನು ಮೂಲಾಧಾರ ಸೂತ್ರವಾಗಿ ಸಂಯುಕ್ತ ರಾಷ್ಟ್ರವು ಒಪ್ಪಿದರೂ, ಕಾಲಚಕ್ರದಲ್ಲಿ ತತ್ವದ ವ್ಯಾಪ್ತಿ ಸಂಕುಚಿತವಾಗಿ ಕಂಡುಬಂದಿದ್ದರಿಂದ ಸರ್ಕಾರವನ್ನು ಸುಲಲಿತವಾಗಿ ನಡೆಸಲು ಬೇರೆಬೇರೆ ಅಂಗಗಳನ್ನು ಸೃಷ್ಟಿಸಬೇಕಾಯಿತು. ರಾಜಕೀಯ ಕ್ಷೇತ್ರದಲ್ಲಿ ನಡೆದ

ಘಟನೆಗಳು, ಅಂದೋಲನ, ಯುದ್ಧ, ಶಾಂತಿಗಳು ಆರ್ಥಿಕ ಸಾಮಾಜಿಕ ಚಳುವಳಿಗಳೆ ಅಂಗಗಳ ಬೆಳವಣಿಗೆಗೆ ಮೂಲಕಾರಣವಾದವು.

ಸರ್ಕಾರದ ವಿಷಯ ಮತ್ತು ಕಾರ್ಯ ವಿಭಾಗಗಳು ಎಷ್ಟು ಭಿನ್ನ ವಾದರೂ ಸಹಕಾರ ಸಹಯೋಗದಿಂದ ವರ್ತಿಸಿಬೇಕಾಗುತ್ತವೆ. ರಾಷ್ಟ್ರ ಮತವನ್ನು ನಿರೂಪಿಸುವುದರಲ್ಲಿಯೂ ಅದನ್ನು ಕಾರ್ಯಕಾರಿಯಾಗಿ ಮಾಡು ವುದರಲ್ಲಿಯೂ ಸಂಯೋಗಬೇಕು; ಶಾಸಕಾಂಗವು ಕಾರ್ಯಾಂಗದ ಅಧಿ ಕಾರವನ್ನೂ, ನ್ಯಾಯಾಂಗವು ಶಾಸಕಾಂಗದ ಅಧಿಕಾರವನ್ನೂ, ಎಲ್ಲವೂ ಮಿಳಿತು ರಾಷ್ಟ್ರವರ್ಧಕ ಕಾರ್ಯಗಳನ್ನೂ ಮಾಡಬೇಕಾಗುವುದು. ಸರ್ಕಾ ರದ ವಿಷಯುವನ್ನು ಸಂಕೃಷ್ಟ ಮತ್ತು ವಿಕೃಷ್ಟ ( Centralised and Decentralised) ಕರ್ತವ್ಯಗಳಾಗಿ ವಿಭಾಗಿಸಬಹುದು; ಕೆಲವು ಕಾರ್ಯಗಳು ಕೇಂದ್ರೀ ಭೂತವಾದವು, ಕೆಲವು ಸ್ಥಳೀಯ. ಈ ವಿಭಾಗಗಳನುಗುಣವಾಗಿ ಸಂಕೃಷ್ಟ ಮತ್ತು ವಿಕೃಷ್ಟಾಂಗಗಳನ್ನು ರಚಿಸಿ ಅವುಗಳಿಗೆ ಸಹಜಸಿದ್ಧ ಅಧಿ ಕಾರಗಳನ್ನು ನಿರೂಪಿಸಬೇಕಾಗುವುದು. ಕೇಂದ್ರೀ ಭೂತಕಾರ್ಯಗಳು ವಿಶೇಷ ವಾಗಿ ಹೆಚ್ಚಿದಲ್ಲಿ ರಾಷ್ಟ್ರದಲ್ಲಿ ನೌಕರಷಾಹಿ ಪ್ರಭುತ್ವವಾಗಲಿ, ಸ್ವಚ್ಛಂಧ ಪ್ರಭುತ್ವವಾಗಲಿ ನಿರ್ಮಾಣವಾಗಬಹುದು; ಸ್ಥಳೀಯ ಕರ್ತವ್ಯಗಳೇ ಹೆಚ್ಚಿದಲ್ಲಿ ಸಾರ್ವಜನಿಕ ಪ್ರಿಯವಾದ ಸರ್ಕಾರವು ಏರ್ಪಾಡಾಗಬಹುದು.

ಸ್ವಾತಂತ್ರ್ಯವೆಂಬುದು ಯಾವ ರಚನೆಗೂ ಅಳವಟ್ಟಿಲ್ಲ. ಲಿಖಿತ ಶಾಸನದಲ್ಲಿ ಅಡಗಿರುವ ಸ್ವಾತಂತ್ರ್ಯ ನಿಯಮಗಳಾಗಲಿ, ವಿಂಗಡಿಸಿದ ತ್ರಿವಿ ಧಾಂಗಗಳಾಗಲಿ ಸ್ವತಂತ್ರ್ಯತೆಯನ್ನು ದೊರಕಿಸಲಾರವು. ನಿರಂಕುಶಾಧಿಕಾರ ದಿಂದಲೂ ಕಠೋರ ಶಾಸನಗಳಿಂದಲೂ ಏರ್ಪಟ್ಟ ಸ್ವಾತಂತ್ರ್ಯವು ಕ್ಷಣಿಕ; ಆರ್ಥಿಕ ಪೂರ್ಣತಾ ಮತ್ತು ಸಮೃದ್ಧಿಯಿಂದ ಜನಿತವಾದ ಸ್ವಾತಂತ್ರ್ಯವೂ ಸ್ಥಿರವಾದುದಲ್ಲ. ಸ್ವಾತಂತ್ರ್ಯಾಭಿಲಾಷೆಯುಳ್ಳವರಿಗೆ ಅದನ್ನೇ ಧ್ಯಾನಿಸುವ ವರಿಗೆ, ಅನುಭವಿಸುವವರಿಗೆ ಸ್ವತಂತ್ರ್ಯ ರಚನೆಯನ್ನು ವಿಷಯ ವಿಭಾಗ ಗಳನ್ನು ವಿವರಿಸಲು ಸಾಧ್ಯ. ಅನುಭವ ರಹಿತರಿಗೆ ತ್ರಿವಿಧಾಂಗ ರಚನೆ ಯಾಗಲಿ ಯಾವ ರಿಯಾಯಿತಿಯಾಗಲಿ ಅನಾವಶ್ಯಕ.

## ರಾಷ್ಟ್ರದಲ್ಲಿ ಶಾಸಕಾಂಗದ ಪ್ರಾಧಾನ್ಯತೆ

ರಾಷ್ಟ್ರ ಅಭಿಮತವನ್ನು ನಿರೂಪಿಸುವ ಅಂಗಗಳಲ್ಲಿ ಅತಿ ಮುಖ್ಯವಾದುದು ಶಾಸಕಾಂಗ. ಏಕೀಭೂತ ಏಕಮುಖ ರಾಷ್ಟ್ರಗಳಲ್ಲಿ ಸರ್ಕಾರದ ಅಧಿಕಾರಗಳನ್ನೂ ಸಂಕೃಷ್ಟವಾಗಿಯೋ ವಿಕೃಷ್ಟವಾಗಿಯೋ ವಿಭಜಿಸುವ ಅಧಿಕಾರವನ್ನು ಹೊಂದಿವೆ. ವೈಧ ಸರ್ಕಾರವಿಲ್ಲದ ರಾಷ್ಟ್ರದಲ್ಲಿ ಶಾಸಕಾಂಗವು ಸರ್ಕಾರ ಮತ್ತು ಆಡಳಿತಾಂಗಗಳನ್ನು ಅವುಗಳ ಪ್ರತ್ಯೇಕ ಅಧಿಕಾರಗಳನ್ನು ಅವುಗಳ ಪರಸ್ಪರ ಸಂಬಂಧಗಳನ್ನು ನಿರೂಪಿಸುತ್ತದೆ; ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗನುಗುಣವಾಗಿ ಹೊಸ ಹೊಸ ಹುದ್ದೆಗಳನ್ನು ರಚಿಸಿ ಅವುಗಳನ್ನು ತನ್ನ ಆರ್ಥಿಕ ಬಲದಿಂದ ನಿಯಂತ್ರಣದಲ್ಲಿಟ್ಟುಕೊಂಡಿರುತ್ತದೆ; ಫ್ರೆಂಚ್ ರಾಷ್ಟ್ರರಚನೆಯಲ್ಲಿ ಇದನ್ನು ನೋಡಬಹುದು. ಶಾಸಕಾಂಗವು ಆಡಳಿತವನ್ನು ನಿಬಂಧಿಸುವ ಮುಖ್ಯಾಂಶವೆಂದು ಹೇಳಬಹುದು. ನ್ಯಾಯವನ್ನೂ ಮತ್ತು ಸಮಾನತೆಯನ್ನೂ ನೆಲೆಗೊಳಿಸುವುದು ರಾಷ್ಟ್ರದ ಮುಖ್ಯ ಉದ್ದೇಶವಾದುದರಿಂದ ಆ ಉದ್ದೇಶ ಸಾಧನೆಗಾಗಿ ರಾಷ್ಟ್ರದಲ್ಲಿ ನ್ಯಾಯ ತತ್ವಗಳನುಸಾರವಾಗಿ ಮತ್ತು ಸಮಾಜದ ಶಾಂತಿ ಪ್ರಗತಿಗಳಿಗೆ ಆವಶ್ಯಕವಾದ ಕಾನೂನುಗಳನ್ನು ಶಾಸಕಾಂಗವು ರಚಿಸುವುದರಿಂದ, ಅದು ಎಲ್ಲಾ ಅಂಗಗಳಲ್ಲಿಯೂ ಪ್ರಧಾನವಾದುದು. ಕಾನೂನು ರಚನೆಯಿಲ್ಲದಿದ್ದರೆ ನ್ಯಾಯ ವಿಮರ್ಶೆಯಾಗಲಿ, ಆಡಳಿತದ ಕೆಲಸವಾಗಲಿ ಸಾಧ್ಯವಿಲ್ಲದಿರುವುದರಿಂದಲೂ ಆಡಳಿತ ಕಾರ್ಯಗಳನ್ನೂ ನ್ಯಾಯ ಪರಿಶೀಲನೆಯನ್ನೂ ಮಾಡುವ ಅಂಗಗಳನ್ನು ಶಾಸಕಾಂಗವೇ ನಿರ್ಮಾಣ ಮಾಡಬೇಕಾದುದರಿಂದಲೂ ಅನೇಕ ರಾಷ್ಟ್ರಗಳ ರಚನೆಯಲ್ಲಿ ಆ ಅಂಗಕ್ಕೆ ಪರಮಾಧಿಕಾರವಿದೆ. ಇಂಗ್ಲೆಂಡಿನಲ್ಲಿ ಶಾಸಕಾಂಗಕ್ಕೆ ರಾಷ್ಟ್ರಸ್ಥಿತಿಗೆ ಆಧಾರಭೂತವಾದ ಅಂಗ ಮುಂತಾದ ರಚನೆಗಳನ್ನು ಮಾಡುವುದು (Constituent power) ಮತ್ತು ನಿತ್ಯ ಜೀವನಕ್ಕೆ ಬೇಕಾಗುವ ಕಟ್ಟು ಮತ್ತು ನಿಯಮಗಳನ್ನು ಮಾಡುವುದು. ( ordinary law making power )—ಎರಡು ಅಧಿಕಾರಗಳೂ ಸೇರಿವೆ.

# ಪ್ರಕರಣ ೧೧

## ಪ್ರಾಚೀನ ಶಾಸಕ ಸಭೆಗಳು

ಪ್ರಾಚೀನರು ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರತಿನಿಧಿಸಭೆಯನ್ನು ಕಾಣರು. ರಾಜರು ಶ್ರೀಮಂತಸಭೆ ಅಥವ ಪ್ರಜೆಗಳೇ ಸಮೂಹಿಕವಾಗಿ ಶಾಸನವನ್ನು ರಚಿಸುತ್ತಿದ್ದರು. ಟ್ಯುಟನ್‌ರ ಫೋಕ್ ಮೂಟ್ (Folk moot) ಗಳಲ್ಲಿಯೂ ಇಂಗ್ಲೆಂಡಿನ ಪ್ರಾಚೀನ ವಿಟ್‌ನೆಜಿಮೋಟ್ (Witanagemote) ಸಭೆಯಲ್ಲಿಯೂ ಪ್ರಜಾಪ್ರತಿನಿಧಿತ್ವವನ್ನು ಮೊದಲು ನೋಡಬಹುದು. ಮಧ್ಯಮಯುಗದಲ್ಲಿ ಶ್ರೀಮಂತರು, ವೈದಿಕರು ಮತ್ತು ಪಟ್ಟಣವಾಸಿಗಳಿಂದ ಕೂಡಿದ ಪ್ರತಿನಿಧಿಗಳಿಂದ ಕೂಡಿದ ಸಭೆಯು ಮೊದಲಾಯಿತು. ಆದರೆ ಅಲ್ಲಿ ಔದ್ಯೋಗಿಕ ಮತ್ತು ವರ್ಗಗಳ ಪ್ರಾತಿನಿಧ್ಯವೇ ಹೊರತು ಪ್ರಜಾಪ್ರತಿನಿಧ್ಯವಿರಲಿಲ್ಲ. ಪ್ರಾರಂಭದಲ್ಲಿ ಈ ವರ್ಗಗಳ ಪ್ರತಿನಿಧಿಗಳು ಬೇರೆ ಬೇರೆ ಕೊಠಡಿಗಳಲ್ಲಿ ರಾಜಕೀಯ ಪ್ರಶ್ನೆಗಳಿಗಾಗಿ ವಿಮರ್ಶೆಗಾಗಿ ಸೇರುತ್ತಿದ್ದರು; ಪ್ರತಿನಿಧಿಗಳು ತಮ್ಮ ವರಣಕ್ಷೇತ್ರಗಳು ನಿರ್ಧರಿಸಿದ ತತ್ವಗಳನ್ನೂ ಅಭಿಮತವನ್ನು ಮಾತ್ರ ಶಾಸಕಾಂಗ ಸಭೆಯಲ್ಲಿ ನಿರೂಪಿಸಬೇಕಾಗಿತ್ತು. ಐಚ್ಛಿಕವಾಗಿ ಮತ್ತು ಸ್ವಯಂಪ್ರೇರಣೆಯಿಂದ ಅಭಿಮತವನ್ನು ಸೂಚಿಸಿ ವರಣಕ್ಷೇತ್ರ ಸಮಾಜಕ್ಕೆ ವ್ಯತಿರಿಕ್ತವಾಗಿ ನಡೆದ ಪಕ್ಷದಲ್ಲಿ ದೂಷಣೆಗೆ ಗುರಿಯಾಗಬೇಕಾಗಿತ್ತು; ಇದನ್ನು ಫ್ರೆಂಚರು (Mandate Imperatif) ಎಂದು ಕರಿಯುತ್ತಾರೆ. ಬಹಳ ಕಾಲದವರಿಗೆ ಪ್ರಜಾ ಸಭೆಗಳು ರಾಜನಿಗೆ ಅಭಿಮತವನ್ನು ಕೊಡುವುದು, ಅಪೀಲು ಮಾಡುವುದು ನ್ಯೂನತೆಗಳ ಪರಿಹಾರಕ್ಕಾಗಿ ರಾಜನನ್ನು ಬೇಡುವುದು ಮುಖ್ಯ ಕರ್ತವ್ಯವಾಗಿತ್ತು, ಶಾಸನ ರಚನೆಯಲ್ಲ. 1689 ರಿಂದೀಚೆಗೆ ಪ್ರಜಾಪ್ರತಿನಿಧಿ ಸಭೆಗಳು ಶಾಸನರಚನೆಯನ್ನು ಪ್ರಧಾನಕಾರ್ಯವನ್ನಾಗಿ ಎಣಿಸಿದೆ.

ಹತ್ತೊಂಬತ್ತನೆಯ ಶತಮಾನದ ಮೊದಲಿನಲ್ಲಿ ಬೆಂಜಾಮಿನ್

---

Goodnow Comparative Administrative Law Vol. P. 31.

ಫ್ರಾಂಕಲಿನ್ ಅಮೆರಿಕಾದಲ್ಲಿಯೂ, ಬೆಂಥಂ ಇಂಗ್ಲೆಂಡಿನಲ್ಲಿಯೂ ದ್ವಯಾತ್ಮಕ ಸಭೆಗಿಂತ ಏಕ ಸಭೆಯಿಂದ ರಾಷ್ಟ್ರಕ್ಕೆ ಹೆಚ್ಚು ಅನುಕೂಲವೆಂದು ಸಾರಿದರು. ಲಿಮಾರ್ಟಿನ್, ಟರ್ಗೊ, ಮತ್ತು ಸಿಯೇ Sieye's ಮುಂತಾದ ಪ್ರಸಿದ್ಧ ಪ್ರೆಂಚ್ ರಾಜನೀತಜ್ಞರು ಪ್ರಜಾಸ್ವಾಮ್ಯವು ಏಕರೀತಿಯಾಗಿ ನಿರ್ಧರಿಸಬೇಕಾದುದೆಂದೂ, ಪ್ರಜೆಗಳ ಪರಮಾಧಿಕಾರ ಛಿದ್ರವಾಗಲಾರದೆಂದೂ, ಏಕ ಸಭೆಯಲ್ಲಿ ರಾಷ್ಟ್ರದ ಐಕ್ಯತೆಯನ್ನು ಸೂಚಿಸಬಹುದೆಂದು ದ್ವಯಾತ್ಮಕ ಸಭೆಗಳಲ್ಲಿ ಅಧಿಕಾರ ಭಿನ್ನಭಿನ್ನವಾಗಿ ಒಡೆದುಹೋಗುವುದೆಂದೂ ಪ್ರತಿಪಾದಿಸಿದರು. ಪ್ರಥಮ ಸಭೆಯ ಅಭಿಮತಕ್ಕೆ ವ್ಯತಿರೇಕ್ತವಾದುದನ್ನು ಮೇಲಿನ ಸಭೆಯೂ ಸೂಚಿಸಿದರೆ ಆಗ ಅದು ರಾಷ್ಟ್ರಕ್ಕೆ ಹಾನಿಯಾಗಿ ಪರಿಣಮಿಸುತ್ತದೆ. ಎರಡು ಸಭೆಗಳ ಏಕರೀತಿಯಾದ ಅಭಿಮತವನ್ನು ಸೂಚಿಸಿದರೆ ಮೇಲಿನ ಸಭೆಯ ರಚನೆ ಅನಾವಶ್ಯಕವೆಂದು ಈ ರಾಜನೀತಜ್ಞರ ಅಭಿಪ್ರಾಯ.

## ಏಕ ಮತ್ತು ದ್ವಯಾತ್ಮಕ ಸಭೆಯ ತತ್ವ

ಒಂದೇ ಸಭೆಯು ರಾಷ್ಟ್ರದಲ್ಲಿ ಪರಮಾಧಿಕಾರವನ್ನು ಗಳಿಸಿದರೆ ಜವಾಬ್ದಾರಿಯುತ ಕಾರ್ಯಾಂಗಗಳನ್ನು ದೂಡಿ ನಿರಂಕುಶಾಧಿಕಾರವನ್ನು ರಚಿಸುತ್ತದೆ ಎಂದು ಫ್ರಾಂನ್ಸಿಸ್ ಲೀಬೆರ್ ಮತ್ತು ಲೆಕ್ಕಿ ಯವರಲ್ಲಿ ಅಭಿಮತ. ರಾಷ್ಟ್ರದಲ್ಲಿ ಎರಡು ಶಾನಕಸಭೆಗಳಿದ್ದರೆ ಶಾಸನ ರಚನೆ ನಿಧಾನವಾಗಬಹುದು, ಭಿನ್ನಾಭಿಪ್ರಾಯಗಳುಂಟಾಗಿ ಘರ್ಷಣೆಯಲ್ಲಿ ಪರಿಣಮಿಸಬಹುದು; ಅಹಿತವಾದ ಶಾಸನ ರಚನೆಗೆ ಯಾರು ಜವಾಬ್ದಾರರು ಎಂದು ನಿರ್ಧರಿಸಲು ಪ್ರಯಾಸವಾಗಬಹುದು; ಪ್ರತಿನಿಧಿಗಳ, ನೌಕರರ ಸಂಬಳಗಳ ವಿನಿಯೋಗದಿಂದ ಸಾರ್ವಜನಿಕ ವೆಚ್ಚ ಇಮ್ಮಡಿಯಾಗಬಹುದು.

ಆದರೂ ದ್ವಯಾತ್ಮಕ ಸಭೆಗಳು ರಾಷ್ಟ್ರಕ್ಕೆ ಪ್ರತಿಕೂಲ ಮಾಡುವುದಕ್ಕಿಂತ ಅನುಕೂಲವನ್ನೆ ಕಲ್ಪಿಸುವುವೆಂಬುದು ಅನುಭವಸಿದ್ಧವಾದ ಮಾತು. ಒಂದು ಸಭೆಯಲ್ಲಿ ಪರಿಶೀಲನೆಯಾದ ಮಸೂದೆ ಇನ್ನೊಂದು ಸಭೆಯಲ್ಲಿಯೂ ಅನುಮತಿಯನ್ನು ಪಡೆಯಬೇಕಾದುದರಿಂದ ಕ್ರಾಂತಿಕಾರಿ

ಕಲ್ಪನೆಗಳಿಗಾಗಲಿ, ರಾಷ್ಟ್ರಾಭ್ಯುದಯಕ್ಕೆ ಪ್ರತಿಬಂಧಕಗಳಾಗುವ ವಿಷಯ ಗಳಿಗಾಗಲಿ ಮನ್ನಣೆಯಿಲ್ಲ. ಮಸೂದೆಯು ಕಾನೂನಾಗಿ ಪರಿವರ್ತನೆ ಹೊಂದ ಬೇಕಾದರೆ ಅನೇಕ ಮೆಟ್ಟಲುಗಳನ್ನು ದಾಟಬೇಕು. ಪ್ರತಿನಿಧಿಗಳ ಮತ್ತು ಪ್ರಜೆಗಳ ಅಭಿಮತವನ್ನೂ ತಿಳಿಯಲು ಅವಕಾಶವಿರುತ್ತದೆ. ಅವಸರದ ಠರಾವುಗಳಿಗೆ ಆಸ್ಪದವಿರುವುದಿಲ್ಲ. ಪ್ರಜಾಪ್ರತಿನಿಧಿ ಸಭೆಯು ಒಂದೇ ಆದರೆ ಕಠೋರ ಶಾಸನಗಳನ್ನು ಮಾಡಿ ತನ್ನ ಸ್ವೇಚ್ಛಾ ಪ್ರವರ್ತನೆಯಿಂದ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಪ್ರತಿಬಂಧಕವಾಗಬಹುದು. ಎರಡು ಸಭೆಗಳಿ ದ್ದರೆ, ಶಾಸ್ತ್ರಜ್ಞನಲೋಕಾನುಭವ, ನಿಸ್ಪೃಹತೆಗಳಿಂದ ಕೂಡಿರುವ ಪ್ರತಿನಿಧಿ ಗಳು ಅವುಗಳಲ್ಲಿರುವುದರಿಂದ, ನಿರಂಕುಶಾಧಿಕಾರಕ್ಕೆ ಅಡ್ಡಿಯಾಗಿ ಸ್ವಾತಂತ್ರ್ಯ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ವರ್ಗಗಳಿಗೂ, ಶ್ರೀಮಂತರಿಗೂ ಪ್ರಾತಿ ನಿಧ್ಯವು ದೊರಕುವುದು. ಅಲ್ಲದೆ ಎರಡು ಸಭೆಗಳ ಪದ್ಧತಿ ಮಂತ್ರಾಲೋಚನೆ ಯಿಂದ ಉತ್ಪನ್ನವಾದುದಲ್ಲ, ಚಾರಿತ್ರಿಕವಾಗಿ ಬೆಳೆದು ಬಂದದು.

## ಮೇಲಿನ ಸಭೆಗಳು — Upper Chambers

ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಎರಡು ಸಭೆಗಳಿವೆ. ಪ್ರಜಾ ಪ್ರಭುತ್ವಕ್ಕೂ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೂ ಏಕಶಾಸನ ಸಭೆಯಿದ್ದರೆ ಸಾಲದೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಪ್ರಜಾಪ್ರಭುತ್ವವೇ ಸ್ವೇಚ್ಛೆಯಿಂದ ವರ್ತಿಸಬಹುದೆಂಬ ಭೀತಿಯಿಂದ, ಪ್ರಥಮ ಸಭೆಯನ್ನು ನಿಯಂತ್ರಣದಲ್ಲಿ ಇಡಲು ದ್ವಿತೀಯ ಸಭೆಯು ಅವಶ್ಯವೆಂದು ರಾಜ ಶಾಸ್ತ್ರಜ್ಞರು ಒಪ್ಪಿದ್ದಾರೆ. ಸಂಯುಕ್ತರಾಷ್ಟ್ರಗಳಲ್ಲಿ ದ್ವಿತೀಯ ಸಭೆಯು ಬಹುಮುಖ್ಯವಾದ ಅಂಗವಾಗಬೇಕೆಂದು ತಿಳುವಳಿಕೆ.

ಏಕಮುಖ ಮತ್ತು ಸಂಯುಕ್ತರಾಷ್ಟ್ರಗಳಲ್ಲಿ ಮೂರು ವಿಧವಾದ ಸಭೆ ಗಳನ್ನು ನೋಡಬಹುದು. ರಚನೆಯಲ್ಲಿ ವ್ಯತ್ಯಾಸ, ಹಕ್ಕುಬಾಧ್ಯತೆ ಗಳಲ್ಲಿ ಕೆಳಗಿನ ಸಭೆಗೆ ಸಮಾನವಾದ ಅಧಿಕಾರವುಳ್ಳದ್ದು ಒಂದು ವಿಧ; ರಚನೆ, ಹಕ್ಕು ಮತ್ತು ಶಕ್ತಿಗಳ ಸಮಾನತೆ ಎರಡನೆಯದು; ಸೈದ್ಧಾಂತಿಕ ವಾಗಿ ಸಮಾನತೆ, ಆಚರಣೆಯಲ್ಲಿ ಕೀಳು, ಮೂರನೆ ವಿಧ, ಸಭೆಯು

ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿ ಕೆಲವು ರಾಷ್ಟ್ರಗಳಲ್ಲಿ ಮುಖ್ಯಾಧಿಕಾರಿಗೆ ಸೇರಿದೆ; ಇನ್ನೂ ಕೆಲವು ರಾಷ್ಟ್ರಗಳಲ್ಲಿ ಚುನಾವಣೆ ಮತ್ತು ನಾಮಕರಣ; ಮತ್ತೆ ಕೆಲವುದರಲ್ಲಿ ಅದರಲ್ಲೂ ಸಂಯುಕ್ತರಾಷ್ಟ್ರಗಳಲ್ಲಿ ಚುನಾವಣೆ ಪದ್ಧತಿಯೆ ವಿಶೇಷವಾಗಿ ಆಚರಣೆಯಲ್ಲಿದೆ; ಆದರೆ ಅದು ಪ್ರತ್ಯಕ್ಷ ಅಥವ ಅಪ್ರತ್ಯಕ್ಷ ಚುನಾವಣೆಯಾಗಬಹುದು.

## ರಚನೆ: ಇಂಗ್ಲೆಂಡ್

ಇಂಗ್ಲೆಂಡ್ ದೇಶದಲ್ಲಿರುವ ಮೇಲಿನ ಸಭೆಯನ್ನು ಶ್ರೀಮಂತ ಸಭೆಯೆಂದು ಕರೆಯಬಹುದು. ಇದರ ಸದಸ್ಯರಲ್ಲಿ ಕೆಲವರು ವಂಶಪಾರಂಪರ್ಯವಾಗಿ ಬಂದವರು; ಬಿರುದಾಂಕಿತರು, ಪ್ರಧಾನ ಹುದ್ದೇದಾರರು; ಮತ್ತೆ ಕೆಲವರು ಚುನಾಯಿತರಾದವರು. ಅಂದರೆ ರಾಜಕೀಯ, ಆರ್ಥಿಕ, ಸಾಹಿತ್ಯ ಮತ್ತು ವಿಜ್ಞಾನ ರಂಗಗಳಲ್ಲಿ ಪ್ರಸಿದ್ಧರಾದವರನ್ನೂ ಸದಸ್ಯರನ್ನಾಗಿ ಆರಿಸುವ ಹಕ್ಕನ್ನು ಶ್ರೀಮಂತ ಸಭೆಯು ಪಡೆದಿದೆ. ಅಲ್ಲದೆ ಚರ್ಚು, ಚುನಾಯಿಸಿದ 26 ವೈದಿಕರು, ಹದಿನಾರು ಸ್ಕಾಟಿಷ್ ಮತ್ತು ಹದಿನೆಂಟು ಐರಿಷ್ ಪಿಯರ್ಸ್‌ಗಳು ಸಭೆಯಲ್ಲಿದ್ದಾರೆ. ಸ್ಕಾಟಿಷ್‌ಪಿಯರ್ಸ ವಂಶಪಾರಂಪರ್ಯ ಹಕ್ಕು ಉಳ್ಳವರು; ಐರಿಷ್‌ಪಿಯರ್ಸ ಜೀವಾವಧಿ ಸದಸ್ಯತ್ವವನ್ನು ಹೊಂದಿದ್ದಾರೆ. ವಂಶಪಾರಂಪರ್ಯತತ್ವದಿಂದ ಕೂಡಿದ ಶ್ರೀಮಂತ ಸಭೆಯನ್ನು ಕಾರ್ಮಿಕ ವರ್ಗದವರು ಖಂಡಿಸಿದ್ದಾರೆ. ಇದರ ಸಲುವಾಗಿ 1918 ರಲ್ಲಿ ಬ್ರೈಸ್ ಸಮಿತಿಯು ರಚಿತವಾಯಿತು. ಕೆಳಗಿನಸಭೆಯಿಂದ 246 ಸದಸ್ಯರನ್ನು ಒಟ್ಟು ಪಾರ್ಲಿಮೆಂಟ್ ಸಮ್ಮೇಳನದಲ್ಲಿ 81 ಸದಸ್ಯರನ್ನು ಚುನಾಯಿಸಿದರೆ ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ ದೊರಕಿದಂತಾಗುವುದೆಂದು ಸಲಹೆ ಮಾಡಿತು. ಸಮಿತಿಯ ವರದಿಯನ್ನು ಜನಾಂಗವು ಅನುಮೋದಿಸಿದರೂ, ಆರ್ಥಿಕಸ್ಥಿತಿ ಕೆಟ್ಟುದುದರಿಂದಲೂ, ವಿದೇಶಾಂಗ ನೀತಿಯಲ್ಲಿ ಬದಲಾವಣೆಯಾದುದರಿಂದಲೂ, ಸಮಿತಿಯ ಸಲಹೆಗಳನ್ನು ಕಾರ್ಯಕಾರಿಯಾಗಿ ಮಾಡಲು ಸಾಧ್ಯವಾಗಿಲ್ಲ.

## ಫ್ರಾನ್ಸ್‌ನ ಸಭೆಯು ರಚನೆ

ಪ್ರಾನ್ಸ್‌ದೇಶದಲ್ಲಿ ನಾಮಕರಣ ಪದ್ಧತಿಯು ಆಚರಣೆಯಲ್ಲಿಲ್ಲ. ಅಪ್ರತ್ಯಕ್ಷ ಚುನಾವಣೆಯ ಮೂಲಕ ರಾಷ್ಟ್ರದ ಕೌನ್ಸಿಲ್ ಸಭೆಯು ರಚಿತ ವಾಗಿದೆ. ಕೆಳಗಿನಸಭೆಯ ಪ್ರತಿನಿಧಿಗಳೂ, ಜಿಲ್ಲಾ ಸಮಿತಿಗಳ ಸದಸ್ಯರೂ, ಮುನಿಸಿಪಲ್ ಸಮಿತಿಗಳ ಸದಸ್ಯರೂ ಒಟ್ಟಿಗೆ ಕೌನ್ಸಿಲ್ ಸಭೆಯು ವರಣಕರ್ತ ಸಮಾಜವಾಗಿ ಹಕ್ಕು ಪಡೆದಿದ್ದಾರೆ. ಕೌನ್ಸಿಲ್‌ಸಭೆಯು ಸಂಖ್ಯೆ 314. ಎಲ್ಲರೂ ನಲ್ವತ್ತು ವರ್ಷ ಮೇಲ್ಪಟ್ಟವರು; ಇವರ ಅವಧಿ ಒಂಭತ್ತು ವರ್ಷ; ಪ್ರತಿ ಮೂರು ವರ್ಷಗಳ ಕೊನೆಯಲ್ಲಿ 1/3 ಭಾಗ ಪ್ರತಿನಿಧಿಗಳು ನಿವೃತ್ತರಾಗುತ್ತಾರೆ. ಫ್ರೆಂಚ್ ಸಾಮ್ರಾಜ್ಯಕ್ಕೆ ಅಧೀನವಾದ ರಾಷ್ಟ್ರ ಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಕೌನ್ಸಿಲ್ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ. ಸಂಕುಚಿತ ಮತಾಧಿಕಾರದಿಂದಲೂ ಮತ್ತು ಅಪ್ರತ್ಯಕ್ಷ ಚುನಾವಣೆಯಿಂದಲೂ ಸದಸ್ಯರನ್ನು ಆರಿಸುವ ಪದ್ಧತಿಯು ಬೇರೆ ರಾಷ್ಟ್ರ ಗಳಲ್ಲಿ ಕಾಣುವುದಿಲ್ಲ.

## ಸ್ವಿಸ್ ರಾಷ್ಟ್ರಸಭೆ

ಸ್ವಿಸ್ ರಾಷ್ಟ್ರದಲ್ಲಿ ಕಾನ್ಟಾನ್ ಜಿಲ್ಲೆಗಳು ಸಮಾನ ಮತಾಧಿಕಾರ ವನ್ನು ಪಡೆದಿವೆ. ಆದರೆ ಕೆಲವು ಜಿಲ್ಲೆಗಳು ಮೇಲಿನ ಸಭೆಯ ಪ್ರತಿನಿಧಿ ಗಳನ್ನೂ ಚುನಾಯಿಸುತ್ತವೆ; ಕೆಲವು ಜಿಲ್ಲೆಗಳಲ್ಲಿನ ಶಾಸನ ಸಭೆಗಳ ಪ್ರತಿ ನಿಧಿಗಳನ್ನು ಚುನಾಯಿಸಿ ರಾಷ್ಟ್ರಸಭೆಯ ಸದಸ್ಯರನ್ನಾಗಿ ನೇಮಿಸುತ್ತಾರೆ. ಅಂದರೆ ಸ್ವಿಸ್ ರಾಷ್ಟ್ರದಲ್ಲಿ ರಾಷ್ಟ್ರಸಭೆಯ ಸದಸ್ಯರ ಯೋಗ್ಯತೆಗಳನ್ನು ಚುನಾಯಿಸುವ ಮತ್ತು ಸದಸ್ಯರ ಯೋಗ್ಯತೆಗಳನ್ನು ನಿರ್ಧರಿಸುವ ಪೂರ್ಣಾಧಿಕಾರವನ್ನು ಜಿಲ್ಲೆಗಳು ಪಡೆದಿವೆ.

## ಸಂಯುಕ್ತ ರಾಷ್ಟ್ರದ ಮೇಲಿನಸಭೆ

ಶಾಸನ ಸಭೆಗಳ ರಚನೆಯಲ್ಲಿ ಸಂಯುಕ್ತ ಸಂಸ್ಥಾನದಲ್ಲಿ ಪ್ರತ್ಯಕ್ಷ

ಚುನಾವಣೆ ಪದ್ಧತಿಗೆ ಬಹುಮತ ಬೆಂಬಲವಿದೆ. ಅಲ್ಲಿನ ಸೆನೆಟ್ ಸಭೆಯ ಸದಸ್ಯರನ್ನು ಆರಿಸುವ ಅಧಿಕಾರವು ಸಂಸ್ಥಾನಗಳಿಗೆ ಸೇರಿದೆ. ಕೆಳಗಿನ ಸಭೆಯು ಇಡೀ ಜನಾಂಗದ ಅಭಿಮತದ ಪ್ರತಿಬಿಂಬವಾಗಿಯೂ, ಮೇಲಿನ ಸಭೆಯು ಏಕೀಕರಣಕ್ಕೆ ಒಪ್ಪಿರುವ ಸಂಸ್ಥಾನಗಳ ಪರಮಾಧಿಕಾರದ ಪ್ರತಿ ಬಿಂಬವಾಗಿಯೂ ರಚಿಸಲ್ಪಡಬೇಕೆಂಬ ತತ್ವವು ಸಂಯುಕ್ತರಾಷ್ಟ್ರಗಳಲ್ಲಿ ಆಚರಣೆಯಲ್ಲಿರುವುದರಿಂದ, ಪ್ರಜಾಸಂಖ್ಯೆ, ಐಶ್ವರ್ಯ ಪ್ರಗತಿಗಳಲ್ಲಿ ಎಷ್ಟು ಅಂತರವಿದ್ದರೂ ಪ್ರತಿಯೊಂದು ಸಂಸ್ಥಾನಕ್ಕೂ ಇಬ್ಬರು ಸದಸ್ಯರನ್ನು ಚುನಾಯಿಸುವ ಪೂರ್ಣಾಧಿಕಾರವಿದೆ. ಒಂದು ಕೋಟಿ ಜನಸಂಖ್ಯೆ ಇರುವ ನ್ಯೂಯಾರ್ಕ್ ಸಂಸ್ಥಾನವೂ, ಕೇವಲ ಕೆಲವು ಲಕ್ಷ ಪ್ರಜೆಗಳಿರುವ ಡಿಲಾವರ್, ಇಲಿನಾಯಿಸ್ ಸಂಸ್ಥಾನಗಳೂ ಸಮಾನ ಪ್ರಾತಿನಿಧ್ಯವನ್ನು ಹೊಂದಿವೆ. ಸಂಸ್ಥಾನ ಶಾಸನ ಸಭೆಗಳಿಗೆ ಇದ್ದ ಪ್ರತಿನಿಧಿಗಳನ್ನು ಆರಿಸುವ ಅಧಿಕಾರ, ಈಗ ಅಳಿದು ಹೋಗಿದೆ; ಸಂಸ್ಥಾನಗಳ ಮತದಾತರು ಪ್ರತಿನಿಧಿ ಗಳನ್ನು ಚುನಾಯಿಸುತ್ತಾರೆ. ಆಯಾ ಸಂಸ್ಥಾನಗಳ ಸದಸ್ಯರ ಸ್ಥಾನಗಳು ಖಾಲಿಬಿದ್ದಾಗ ಆ ಸಂಸ್ಥಾನಗಳ ಸರ್ಕಾರದವರು ನಾಮಕರಣ ಮಾಡು ತ್ತಾರೆ. ಸೆನೆಟ್ ಸಭೆಯು ಸಂಯುಕ್ತ ಸಂಸ್ಥಾನ ಪ್ರಜೆಗಳ ಪ್ರತಿನಿಧಿಯಲ್ಲ; 52 ಪ್ರತ್ಯೇಕ ಸಂಸ್ಥಾನಗಳ ಪ್ರತಿನಿಧಿ. ಆದುದರಿಂದ ರಾಷ್ಟ್ರಸಭೆಯ ಸಂಖ್ಯೆ ಒಟ್ಟು 104; ಸಭೆಯ ಅವಧಿ ಆರು ವರ್ಷ; ಮೂರನೆಯ ಒಂದು ಭಾಗ ಸದಸ್ಯರು ಪ್ರತಿ ಎರಡು ವರ್ಷದ ಕೊನೆಯಲ್ಲಿ ನಿವೃತ್ತರಾಗುತ್ತಾರೆ. ಸೆನೆಟ್ ಸಭೆಯ ಉಮೇದುವಾರನಿಗೆ 30 ವರ್ಷ ವಯಸ್ಸು ಮೀರಿರಬೇಕು, ಸಂಸ್ಥಾನದ ಪೌರಾಧಿಕಾರವನ್ನು ಹೊಂದಿರಬೇಕು. ಸದಸ್ಯನಾದ ಮೇಲೆ ಅವನು ತನ್ನ ಸರ್ಕಾರದ ಪ್ರತಿನಿಧಿಯಲ್ಲ, ಇಡೀ ಸಂಸ್ಥಾನದ ಪ್ರಜಾವರ್ಗದ ಪ್ರತಿನಿಧಿ.

## ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಕೆನಡ ಸಭೆಗಳು

ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಕೆನಡಾ ಸಂಯುಕ್ತ ರಾಷ್ಟ್ರಗಳಲ್ಲಿ ಮೇಲಿನ ಸಭೆಯ ರಚನೆಯು ಬ್ರಿಟಿಷ್ ಮತ್ತು ಅಮೆರಿಕಾ ವಿಧಾನಗಳನ್ನು

ಹೋಲುತ್ತದೆ. ಆಸ್ಟ್ರೇಲಿಯಾ ಸೆನೆಟ್ ಸಭೆಯಲ್ಲಿ ಒಟ್ಟು 36 ಸದಸ್ಯರಿರುವರು; ಇವರು ಪ್ರತ್ಯಕ್ಷ ಚುನಾವಣೆಯಿಂದ ಆರಿಸದವರು. ಪ್ರತಿಯೊಂದು ಸಂಸ್ಥಾನಕ್ಕೂ ಆರು ಸದಸ್ಯರನ್ನು ಚುನಾಯಿಸುವ ಅಧಿಕಾರವಿದೆ. ಈ ಸಂಖ್ಯೆಯನ್ನು ವೃದ್ಧಿ ಅಥವ ಕಮ್ಮಿ ಮಾಡುವ ಅಧಿಕಾರ ಪಾರ್ಲಿಮೆಂಟ್ ಸಭೆಗೆ ಸೇರಿದೆ. ಆದರೆ ಸಂಸ್ಥಾನಗಳ ಸಮಾನ ಪ್ರತಿನಿಧಿತ್ವ ತತ್ವವನ್ನು ಅತಿಕ್ರಮಿಸಬಾರದು. ಸೆನೆಟ್ ಸಭೆಯ ಅವಧಿ ಆರು ವರ್ಷ; ಖಾಲಿಸ್ಥಾನಗಳನ್ನು ಆಯಾ ಸಂಸ್ಥಾನದ ಸರ್ಕಾರವೇ ಭರ್ತಿಮಾಡುವುದು. ಆ ಸಭೆಯ ಅವಧಿ ಮುಗಿಯುವುದರೊಳಗಾಗಿ ಇದಕ್ಕೂ ಕೆಳಗಿನ ಸಭೆಗೂ ಘರ್ಷಣೆಯಾಗಿ ಪರಿಹಾರವಾಗದಿದ್ದಲ್ಲಿ ಚಕ್ರವರ್ತಿಯ ಪ್ರತಿನಿಧಿಯು ಅವಧಿಗೆ ಮುಂಚೆಯೇ ಎರಡು ಸಭೆಗಳನ್ನೂ ರದ್ದುಗೊಳಿಸಬಹುದು.

ಆಫ್ರಿಕಾ ಸಂಯುಕ್ತ ರಾಷ್ಟ್ರವು ನಾಲ್ಕು ಸಂಸ್ಥಾನಗಳಿಂದ ಕೂಡಿದೆ; ಇಲ್ಲಿನ ಸೆನೆಟ್ ಸಭೆಯು ನಾಮಕರಣ ಮತ್ತು ಚುನಾವಣೆ ಪದ್ಧತಿಗಳಿಂದ ರಚಿತವಾಗಿದೆ. ಸಭೆಯ ಒಟ್ಟು ಸದಸ್ಯರು 40; ಪ್ರತಿಯೊಂದು ಸಂಸ್ಥಾನವೂ 8 ಸದಸ್ಯರನ್ನು ಚುನಾಯಿಸುತ್ತಾರೆ. ಚಕ್ರವರ್ತಿಯ ಪ್ರತಿನಿಧಿಯು 8 ಸದಸ್ಯರನ್ನೂ ತನ್ನ ಸರ್ಕಾರದ ಬೆಂಬಲಕ್ಕಾಗಿ ನೇಮಿಸಿಕೊಳ್ಳುವನು. ಸೆನೆಟ್ ಸಭೆಯ ಅವಧಿಯು ಹತ್ತು ವರ್ಷ. ಬಹು ಸಂಖ್ಯಾತರಾದ ಕಾರ್ಮಿಕ ವರ್ಗ ಪ್ರತಿನಿಧಿಗಳ ಸ್ವೇಚ್ಛಾ ಪ್ರವರ್ತನೆಯನ್ನು ತಡೆಗಟ್ಟಲು ಸೆನೆಟ್ ಸಭೆಯು ಆವಶ್ಯಕವೆಂದು ತಿಳುವಳಿಕೆ. ಎರಡು ಸಭೆಗಳಿಗೆ ತಿಕ್ಕಾಟವಾದರೆ ಚಕ್ರವರ್ತಿಯ ಪ್ರತಿನಿಧಿಯು ಎರಡು ಸಭೆಗಳನ್ನೂ ರದ್ದುಮಾಡುವ ಅಧಿಕಾರವನ್ನು ಹೊಂದಿದ್ದಾನೆ.

ಕೆನಡಾ ಸಂಯುಕ್ತರಾಷ್ಟ್ರದಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ ಚಕ್ರವರ್ತಿ ಪ್ರತಿನಿಧಿಯೇ ತನ್ನ ಮುಖ್ಯಮಂತ್ರಿಯ ಸಲಹೆಯಿಂದ ಸೆನೆಟ್ ಸಭೆಯ ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿಯು ಆಚರಣೆಯಲ್ಲಿದೆ. ಹಾಗೆಯೇ ಮೂರರಿಂದ ಆರು ಸದಸ್ಯರನ್ನು ಸ್ವಂತವಾಗಿ ನೇಮಿಸುವ ಅಧಿಕಾರ ಚಕ್ರವರ್ತಿ ಪ್ರತಿನಿಧಿಗೆ ಸೇರಿದೆ. ಹೊಸ ಹೊಸ

ಪ್ರಾಂತಗಳು ಆರ್ಥಿಕ ಮತ್ತು ರಾಜಕೀಯ ಪ್ರಗತಿಗಳಿಗನುಗುಣವಾಗಿ ನಿರ್ಮಾಣವಾಗುತ್ತಿರುವುದರಿಂದ ಸಭೆಯ ಸದಸ್ಯರು ಇಷ್ಟೆಂದು ನಿರ್ಧಾರ ವಾಗಿಲ್ಲ. 1867 ರಲ್ಲಿ ಎಪ್ಪತ್ತೆರಡು ಸದಸ್ಯರಿದ್ದರು; ಈಗ ನೂರುನಾಲ್ಕು ಸದಸ್ಯರಿದ್ದಾರೆ. ಮೂವತ್ತು ವರ್ಷ ವಯಸ್ಸು, ಪ್ರಾಂತವಾಸತ್ವ, 4000 ಡಾಲರ್ ಬೆಲೆ ಕಮ್ಮಿಯಿಲ್ಲದಷ್ಟು ಆಸ್ತಿ-ಇವುಗಳು ಉಮೇದುವಾರನ ಮುಖ್ಯ ಯೋಗ್ಯತೆ. ಅವಿಧೇಯತೆ, ದಿವಾಳಿತನ ಮುಂತಾದ ಕಾರಣ ಗಳಿಂದ ಸದಸ್ಯನು ಸ್ಥಾನಚ್ಯುತನಾಗಬಹುದು. ಒಂದು ದೃಷ್ಟಿಯಲ್ಲಿ ಸೆನೆಟ್ ಸಭೆಯ ರಚನೆಯು ಇಂಗ್ಲೆಂಡ್ ಶ್ರೀಮಂತಸಭೆಯ ನಾಮಕರಣ ಪದ್ಧತಿ ಯನ್ನು ಅನುಸರಿಸಿದೆ. ಪ್ರತಿಯೊಂದು ಪ್ರಾಂತವೂ ಇಬ್ಬರು ಸದಸ್ಯರನ್ನು ಚುನಾಯಿಸುವುದರಿಂದ ಸಂಯುಕ್ತರಾಷ್ಟ್ರಗಳ ಸಮಾನ ಪ್ರತಿನಿಧಿತ್ವ ತತ್ವ ವನ್ನು ಒಪ್ಪಿದೆ. ಈ ದ್ವಿವಿಧ ತತ್ವಗಳ ಆಚರಣೆಯ ಪರಿಣಾಮವಾಗಿ ಶ್ರೀಮಂತ ಸಭೆಯಂತಾಗಲೀ ಸಂಯುಕ್ತರಾಷ್ಟ್ರ ಸೆನೆಟ್ ಸಭೆಯಂತಾಗಲೀ ಕಾರ್ಯ ಗೌರವವನ್ನು ಹೊಂದದೆ ಅತ್ಯಂತ ಬಲಹೀನವಾಗಿ ಕೆಳಗಿನ ಸಭೆಯ ಅಡಿಯಾಳಾಗಿ ನಿಂತಿದೆ.

## ಮೇಲಿನ ಸಭೆಯ ಕಾರ್ಯಗಳು—

ರಾಷ್ಟ್ರ ರಾಷ್ಟ್ರಕ್ಕೂ ರಚನೆಯಲ್ಲಿ ವ್ಯತ್ಯಾಸವಿರುವುದರಿಂದ ಮೇಲಿನ ಸಭೆಯ ಕಾರ್ಯವು ಬಹುವಿಧವಾಗಿದೆ. ಇಂಗ್ಲೆಂಡಿನಲ್ಲಿ ಎರಡು ಸಭೆಗಳೂ ಶಾಸಕಾಂಗಗಳಾದರೂ, ಪ್ರಜಾಪ್ರತಿನಿಧಿಸಭೆಯಷ್ಟು ಅಧಿಕಾರವನ್ನು ಪಡ ದಿಲ್ಲ. 1911 ರ ವರೆಗೆ ಶ್ರೀಮಂತ ಸಭೆಯು ಕೆಳಗಿನ ಸಭೆಗೆ ಸಮಾನ ಅಧಿಕಾರವನ್ನೂ ಹೊಂದಿತ್ತು; ಅಲ್ಲಿಂದೀಚೆಗೆ ಶಾಸನಗಳನ್ನು ರಚಿಸುವುದ ರಲ್ಲಿ ಸಹಕರಿಸುವ ಅಧಿಕಾರವನ್ನು ಮಾತ್ರ ಹೊಂದಿದೆ.

## ಬ್ರಿಟನ್ನಿನ ಶ್ರೀಮಂತ ಸಭೆ:

ಕೆಳಗಿನ ಸಭೆಯು ಒಪ್ಪಿದ ಸಾಮಾಜಿಕ ಮತ್ತು ಆರ್ಥಿಕ ಮಸೂದೆ

ಗಳನ್ನು, ಮೂರಾವರ್ತಿ ತಿರಸ್ಕರಿಸುವ ಅವಕಾಶವಿದೆ. ಅದರ ತರುವಾಯ ಕೆಳಗಿನ ಸಭೆಯು ರಾಜನ ಅನುಮತಿಯನ್ನು ಪಡೆದು ಕಾನೂನುಗಳನ್ನಾಗಿ ಮಾಡಬಹುದು. ಆರ್ಥಿಕ ಮಸೂದೆಗಳಿಗೆ ಮೇಲಿನ ಸಭೆಯ ಅನುಮತಿಯು ನಿರ್ಬಂಧವಿಲ್ಲ. ಸಭೆಯು ನಿಷೇಧಿಸಿದ ಮಸೂದೆಗಳು ಕಾನೂನುಗಳಾದರೂ, ಮಂತ್ರಿ ಬದಲಾವಣೆ ಮತ್ತು ಸಾರ್ವಜನಿಕ ಚುನಾವಣೆಯ ಪರಿಣಾಮವಾಗಿ ಹೊಸ ಮಂತ್ರಿಮಂಡಳ ರಚಿಸಲ್ಪಟ್ಟಲ್ಲಿ ಆಗ ಆ ಮಸೂದೆಗಳು ಅವರ ಅವಗಾಹನೆಗೆ ಬರಬಹುದು.

ಆದರೆ ರಾಜಕೀಯದಲ್ಲಿ ಶ್ರೀಮಂತ ಸಭೆಗೆ ಶ್ರೇಷ್ಠ ಸ್ಥಾನವಿದೆ. ಸಾಮಾಜಿಕ ಮತ್ತು ಆಡಳಿತ ವಿಚಾರಗಳಲ್ಲಿ ವಿಶೇಷ ಅನುಭವವನ್ನು ಹೊಂದಿರುವ, ರಾಜಕೀಯ ಜಟಿಲ ಪ್ರಶ್ನೆಗಳನ್ನು ಪರಿಹರಿಸಲು ಬೇಕಾದ ವಿಮರ್ಶನಾಶಕ್ತಿ ಮತ್ತು ದಕ್ಷತೆಗಳನ್ನು ಪಡೆದಿರುವ ನಿಪುಣರಾದ ವಿಶ್ರಾಂತಿ ಹೊಂದಿರುವ ಸಚಿವರ ಮತ್ತು ನ್ಯಾಯಾಧೀಶರ ನೆಲೆಬೀಡಾಗಿದೆ. ಇದರ ಸದಸ್ಯರು ಸಂಪ್ರದಾಯಪರರು; ರಾಜಕೀಯ, ಆರ್ಥಿಕ ಸಾಮಾಜಿಕ ಸ್ಥಿತಿ ಗತಿಗಳಿಗನುಗುಣವಾಗಿ ಬದಲಾವಣೆಗಳನ್ನು ಒಪ್ಪುವರು. ಆದುದರಿಂದ ಪ್ರಜಾಪ್ರಭುತ್ವ ಪ್ರಶ್ನೆಗಳ ವಿಮರ್ಶೆಗಾಗಿ ರಚಿತವಾಗಿರುವ ಅಂತ್ಯನ್ಯಾಯಾಸ್ಥಾನದಂತಿದೆ. ಪ್ರಗತಿಪರ ಮತ್ತು ಕ್ರಾಂತಿಪರ ತತ್ವಗಳನ್ನು ಮತ್ತು ನವೀನ ಕಲ್ಪನೆಗಳನ್ನು ಕೂಲಂಕಷವಾಗಿ ವಿಮರ್ಶಿಸುವ ದೃಷ್ಟಿಯನ್ನು ಹೊಂದಿರುವುದರಿಂದ ಇಡೀಜನಾಂಗಕ್ಕೆ ಮಾರ್ಗದರ್ಶಿಯಂತಿದೆ. ಕೆಳಗಿನ ಸಭೆಯ ಕ್ರಾಂತಿಯುತ ಮತ್ತು ದಬ್ಬಾಳಿಕೆಯಿಂದ ಕೂಡಿರುವ ಪ್ರಭುತ್ವವನ್ನು ತಡೆಗಟ್ಟಲು ಉಪಯುಕ್ತವಾಗಿದೆ. ಪ್ರಾಚೀನ ಸಂಪ್ರದಾಯ ಮತ್ತು ಪದ್ಧತಿಗಳನ್ನು ಕಾಪಾಡಿಕೊಂಡು ಬಂದಿರುವುದರಿಂದಲೂ ಎಲ್ಲಾ ವರ್ಣ ಮತ್ತು ಪಣ್ಯಗಳ ಪ್ರತಿನಿಧಿಗಳಿಂದಲೂ, ರಾಜಕಾರಣ ಪಟುಗಳಿಂದಲೂ ಕೂಡಿರುವುದರಿಂದಲೂ, ಈ ಸಭೆಯನ್ನು ನಡೆಸಿಕೊಂಡು ಬರುವುದರಲ್ಲಿ ಪ್ರಜಾವರ್ಗಕ್ಕೆ ವಿಶೇಷ ಶ್ರದ್ಧೆ. ವರಣಕರ್ತಸಮಾಜದ ಅನುಮತಿ ಇಲ್ಲದೆ. ಕೆಳಗಿನ ಸಭೆಯು ಹೊಸಕಾನುನಗಳನ್ನು ರಚಿಸಿ, ಅಥವಾ ಹೊಸ ತೆರಿಗೆ

ಗಳನ್ನು ವಿಧಿಸಿ ಪ್ರಜಾಭ್ಯುದಯಕ್ಕೆ ಕುಂದಕವನ್ನು ಒಡ್ಡಿದಾಗ ಮೇಲಿನ ಸಭೆಯು ಸಮಾಜದ ಘನ ಉದ್ದೇಶಗಳನ್ನು ತಿಳಿದು ಸಮಾಜದ ಪರಮಾಧಿಕಾರವನ್ನು ನಿರ್ವಹಿಸಲು ಮುಖ್ಯ ರಾಜ್ಯಾಂಗವಾಗುವ ಅವಕಾಶವನ್ನು ಹೊಂದಿದೆ.

ವಂಶಪಾರಂಪರತತ್ವದ ಆಧಾರದ ಮೇಲೆ ರಚಿತವಾಗಿರುವುದರಿಂದ ಪ್ರಗತಿಪರ ಪ್ರಜಾಪ್ರಭುತ್ವದ ಹೆದ್ದಾರಿಯಲ್ಲಿ ಶ್ರೀಮಂತ ಸಭೆಯು ಪ್ರತಿಬಂಧಕವಾಗಿದೆ ಎಂದು ಕಾರ್ಮಿಕ ವರ್ಗದವರ ತಿಳುವಳಿಕೆ. ಶ್ರೀಮಂತ ಸಭೆಯು ಮುಖ್ಯ ರಾಷ್ಟ್ರಾಂಗವಾಗಿರಬೇಕೇ ಅಥವ ಅಳಿದುಹೋಗಬೇಕೇ ಎಂಬ ಪ್ರಶ್ನೆಗಳು ಎದ್ದಿವೆ. ಕೆಲವರು ಶ್ರೀಮಂತ ಸಭೆಯನ್ನು ರದ್ದುಗೊಳಿಸಿ ಪ್ರಜಾಪ್ರತಿನಿಧಿ ಸಭೆಯನ್ನು ಉಳಿಸಿಕೊಳ್ಳಬೇಕೆನ್ನುವರು; ಶ್ರೀಮಂತ ಸಭೆಯನ್ನೂ, ಆಧುನಿಕ ದೃಷ್ಟಿಯಿಂದ ಮಾರ್ಪಾಡುಮಾಡಿ ರಾಷ್ಟ್ರೋನ್ನತಿಗೆ ಸಹಕಾರಿಯಾಗುವಂತೆ ಮಾಡಬೇಕೆನ್ನುವರು. ಘೋರ ಯುದ್ಧಾನಂತರ ಈಚಿಗೆ ಸಮಸ್ಯೆಗಳು ಮತ್ತೆ ಎದ್ದಿವೆ.

## French Council of the Republic

ಫ್ರೆಂಚ್ ಕೌನ್ಸಿಲ್ ಸಭೆಯು ಕೆಳಗಿನ ಸಭೆಗೆ ಸಮಾನ ಅಧಿಕಾರವನ್ನು ಪಡೆದಿದ್ದರೂ, ಕಾಲಕ್ರಮದಲ್ಲಿ ಪಡೆದಿದ್ದ ಅಧಿಕಾರವನ್ನು ವೃದ್ಧಿಮಾಡುತ್ತ ಬಂದಿದೆ. ಆರ್ಥಿಕ ಮಸೂದೆಗಳನ್ನು ರಚಿಸುವ ಹಕ್ಕು ಇಲ್ಲದಿದ್ದರೂ, ಮಸೂದೆಗಳನ್ನು ಸಂಶೋಧಿಸುವ ಅಧಿಕಾರವನ್ನು ಪಡೆದಿದೆ. ಸಭೆಯವರನ್ನು ತೆಗೆದುಹಾಕುವ, ರಾಜೀನಾಮೆ ಕೊಡುವಂತೆ ಮಾಡುವ ಕೆಳಗಿನ ಸಭೆಯನ್ನು ರದ್ದುಗೊಳಿಸಲು ಅನುಮತಿಯನ್ನು ಕೊಡುವ ಹಕ್ಕುಗಳನ್ನು ಹಿಂದೆ ಪಡೆದಿತ್ತು. 1947 ರಿಂದೀಚೆಗೆ ಕೆಳಗಿನ ಸಭೆಯಂತೆ ವರಣಕರ್ತ ಸಮಾಜದಿಂದಲೇ ಕೌನ್ಸಿಲ್ ಸದಸ್ಯರು ಚುನಾಯಿತರಾಗುವುದಿಲ್ಲವಾದುದರಿಂದ ಕೆಳಗಿನ ಸಭೆಯನ್ನು ಪ್ರತಿಸ್ಪರ್ಧಿಸಲು ಅವಕಾಶವನ್ನು ಹೊಂದಿಲ್ಲ. ವಿದ್ಯಾವಂತರು ನಿವೃತ್ತ ಸಚಿವರು, ರಾಜಕಾರಣಪಟುಗಳು ಸದಸ್ಯರಾಗು

ಕೆಳಗಿನ ಸಭೆಯು ನಿರೂಪಿಸಿದ ಮಸೂದೆಗಳನ್ನು ಪರಿಶೀಲಿಸಿ ಹೊಸ ವಾಕ್ಯ ಗಳನ್ನು (Tacking) ಜೋಡಿಸಿ ಮಸೂದೆಗಳನ್ನು ಮಾರ್ಪಾಟು ಮಾಡಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿದೆ. ಯಾವ ಮಸೂದೆಯೂ ಸೆನೆಟ್ ಸಭೆಯ ಒಪ್ಪಿಗೆಯಿಲ್ಲದೆ ಕಾನೂನಾಗಿ ಪರಿಣಮಿಸಲಾಗದು. ಪ್ರತಿ ಯೊಂದು ಮಸೂದೆಯೂ ಸೆನೆಟ್ ಸಭೆಯ ಪರಿಶೀಲನೆ "Senatorial Scrutiny" ಯ ತತ್ವಕ್ಕೆ ಒಳಪಟ್ಟಿದೆ. ಈ ಪದ್ಧತಿಯ ಆಚರಣೆಯಿಂದ ಅನೇಕ ವಿವಾದಾಸ್ಪದವಾದ ಮಸೂದೆಗಳು ಮಾರ್ಪಾಟು ಹೊಂದಿವೆ, ರದ್ದಾಗಿವೆ, ಸಂಶೋಧಿಸಲ್ಪಟ್ಟು ಕಾನೂನಾಗಿ ಪರಿವರ್ತನೆ ಹೊಂದಿವೆ.

ರಾಷ್ಟ್ರದ ಕಾರ್ಯಾಂಗ ಅಧಿಕಾರವನ್ನು ಪರಿಶೀಲಿಸಿ ಅಧಿಕಾರಿ ಗಳೊಡನೆ ಸಹಕರಿಸುತ್ತದೆ. ಸೆನೆಟ್ ಸಭೆಯ ⅔ ಭಾಗ ಸದಸ್ಯರು ವಿದೇಶಾಂಗ ನೀತಿಗೆ ಸಂಬಂಧಪಟ್ಟ, ಮತ್ತು ಆರ್ಥಿಕ, ರಾಜಕೀಯ ಕರಾರು ಗಳನ್ನು ಕಾರ್ಯಾಂಗ ಮತ್ತು ರಾಷ್ಟ್ರಾಧ್ಯಕ್ಷನೊಡನೆ ನಿರ್ಧರಿಸುತ್ತಾರೆ. ರಾಯಭಾರಿಗಳನ್ನೂ, ವಿದೇಶಕ ಪ್ರತಿನಿಧಿಗಳನ್ನೂ ನೇಮಿಸುವುದರಲ್ಲಿ ಅಧ್ಯಕ್ಷನು ಸಭೆಯ ಅನುಮತಿಯನ್ನು ಪಡೆಯಬೇಕು. ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಆರಿಸುವ ಅಧಿಕಾರವನ್ನು ಅಧ್ಯಕ್ಷನು ಪಡೆದಿದ್ದರೂ, ಅವನ ನೇಮಕವನ್ನು ನಿರಾಕರಿಸುವ ಅಧಿಕಾರ ಸಭೆಗೆ ಸೇರಿದೆ. ಪ್ರತಿ ಯೊಬ್ಬ ಸದಸ್ಯನು ತನ್ನ ಸಂಸ್ಥಾನಕ್ಕೆ ಒಳಪಟ್ಟ ಅಧಿಕಾರಿಗಳ ನೇಮಕದಲ್ಲಿ ತನ್ನ ಪರಿಶೀಲನ ವಿಶೇಷಾಧಿಕಾರವನ್ನು ಆಚರಿಸಬೇಕೆಂಬುದು ಸಂಪ್ರದಾಯ ವಾಗಿದೆ. ಪ್ರಜಾನುರಾಗವನ್ನು ಪಡೆದಿರುವ ಸಭೆಯ ಬೆಂಬಲವನ್ನು ಅಧಿಕಾರಿ ಗಳನ್ನು ನೇಮಿಸುವುದರಲ್ಲಿಯೂ, ಕೌಲುಗಳನ್ನು ಮಾಡುವುದರಲ್ಲಿಯೂ ಅಧ್ಯಕ್ಷನು ಪಡೆಯುವುದು ಉಚಿತ. 1926 ರಲ್ಲಿ ರಚಿಸಿದ ಮಸೂದೆ ಪ್ರಕ್ರಾರ ಅಧಿಕಾರಿಗಳನ್ನು ವಜಾಮಾಡುವಾಗ ಸದಸ್ಯರ ಅನುಮತಿಯನ್ನು ಪಡೆಯ ಬೇಕಾಗಿಲ್ಲ. ಅಧ್ಯಕ್ಷನೊಡನೆ ಸಹಕರಿಸಿ ಕೌಲುಗಳನ್ನು ರಚಿಸುವ ಮತ್ತು ಪುನರ್ರಚಿಸುವ ಅಧಿಕಾರವನ್ನು ಸಭೆಯು ಪಡೆದಿದೆ. ಕೌಲುಗಳಿಗೆ ಸಭೆಯ ⅔ ನೆ ಭಾಗ ಸದಸ್ಯರ ಅಭಿಮತ ಆವಶ್ಯಕ. ಆದರೆ ವಿದೇಶಾಂಗ ನೀತಿಯಲ್ಲಿ

ಸ್ವಾರ್ಥತೆ ಆತ್ಮ ಪ್ರತಿಷ್ಠೆ, ಮತ್ತು ಪಕ್ಷಪಾತ ಬುದ್ಧಿಯನ್ನು ಪ್ರದರ್ಶಿಸುತ್ತಿರುವುದರಿಂದ ಕೌಲುಗಳನ್ನು ನಿರ್ದಿಷ್ಟವಾಗಿ ನಿರ್ಣಯಿಸುವ ಅಧಿಕಾರವು ಅಧ್ಯಕ್ಷನದಾಗಿ ಅಂತ್ಯದಲ್ಲಿ ಪರಿಣಮಿಸುತ್ತಿದೆ.

ಇತರ ರಾಷ್ಟ್ರಗಳ ಮೇಲಿನ ಸಭೆಗಳಿಗೆಲ್ಲಾ ಅಮೆರಿಕಾ ಸೆನೆಟ್ ಸಭೆಯು ರಚನಾಪದ್ಧತಿ, ಅಧಿಕಾರ ಮುಂತಾದುವುಗಳಲ್ಲಿ ಮಾರ್ಗದರ್ಶಿಯಾಗಿದೆ. ಸಭೆಯು ಶಕ್ತಿಯುತ ಮತ್ತು ಪ್ರಬಲವಾಗುವುದಕ್ಕೆ, ಅದರ ದೀರ್ಘಾವಧಿ, ಪ್ರಜಾಪ್ರತಿನಿಧಿಗಳು ಅದರ ಸದಸ್ಯರಾಗಲು ಇರುವ ಅವಕಾಶ, ಅದಕ್ಕೂ ರಾಷ್ಟ್ರ ಪಕ್ಷಗಳಿಗೂ ಇರುವ ನಿಕಟಸಂಬಂಧ, ಅಲ್ಪ ಸಂಖೆಯ ಸದಸ್ಯತ್ವ ಮತ್ತು ಸಂಪೂರ್ಣ ವಿಚಾರ ಮತ್ತು ವಾಣಿ ಸ್ವಾತಂತ್ರ್ಯಗಳೇ ಮೂಲಕಾರಣ. ರಾಷ್ಟ್ರದ ಸಭೆಗಳೆರಡು ಏಕವರಣಕರ್ತಸಮಾಜದ ಪ್ರತಿನಿಧಿಗಳಾದುದರಿಂದಲೂ, ಸಾರ್ವಜನಿಕ ಅಭಿಮತಕ್ಕೆ ಒಳಪಟ್ಟಿರುವುದರಿಂದಲೂ, ಮಸೂದೆಗಳ ಪರಿಶೀಲನೆಯಲ್ಲಿ ಘರ್ಷಣೆಯಾದ ಪಕ್ಷದಲ್ಲಿ ಎರಡು ಸಭೆಗಳ ಸಮ್ಮೇಳನದಿಂದಲೇ ಪರಿಹಾರವೇ ಹೊರತು, ಇತರ ಸಾಧನಗಳಿಂದಲ್ಲ.

## ಡೊಮಿನಿಯನ್ನಿನ ಮೇಲಿನ ಸಭೆಗಳು

ಡೊಮಿಯನ್‌ಗಳಲ್ಲಿ ಜವಾಬ್ದಾರಿ ಸರ್ಕಾರವು ವ್ಯವಸ್ಥಿತವಾದಂದಿನಿಂದಲೂ ಕ್ರಾಂತಿಕಾರಿ ಮಸೂದೆಗಳನ್ನು ತಡೆಗಟ್ಟುವುದಕ್ಕಾಗಿಯೂ, ಜನಾಂಗದ ಏಕಮುಖ ಅಭಿಮತವನ್ನು ಸೂಚಿಸುವುದಕ್ಕಾಗಿಯೂ ದ್ವಯಾತ್ಮಕ ಸಭೆಯ ಆವಶ್ಯಕತೆಯು ಕಂಡುಬಂದಿದೆ. ಡೊಮಿನಿಯನ್ ರಾಷ್ಟ್ರಗಳಲ್ಲಿ ಏಕರೀತಿಯಾದ ಮೇಲಿನ ಸಭೆಯ ರಚನೆಯಾಗಲಿ, ಅಧಿಕಾರವಾಗಲಿ ಒಂದು ನಿರ್ದಿಷ್ಟವಾದ ಕ್ರಮ ಅಥವ ವಿಧಾನವಾಗಲಿ ಕಂಡುಬಂದಿಲ್ಲ.

## South Africa

ದಕ್ಷಿಣ ಆಫ್ರಿಕಾ ಖಂಡದಲ್ಲಿ ಏಕಮುಖ ಸರ್ಕಾರ ಸ್ಥಾಪಿತವಾಗಿದೆ.

ಆಫ್ರಿಕಾದ ಸೆನೆಟ್ ಸಭೆಯು ಆರ್ಥಿಕ ಮಸೂದೆಗಳನ್ನು ಸೂಚಿಸುವ ಹಕ್ಕನ್ನು ಪಡೆದಿಲ್ಲ; ಅವುಗಳನ್ನು ನಿರಾಕರಿಸಬಹುದು. ಶಾಸನ ರಚನೆಯಲ್ಲಿ ಎರಡು ಸಭೆಗಳಿಗೂ ಸಮಾನ ಅಧಿಕಾರವಿದೆ. ಆದರೆ ವಿವಾದಾಸ್ಪದವಾದ ಮಸೂದೆಯ ನಿರ್ಣಯದಲ್ಲಿ ಘರ್ಷಣೆಯಾದರೆ ಎರಡು ಸಭೆಗಳು ಸಮ್ಮೇಳನದ ಮೂಲಕ ಪರಿಹರಿಸುತ್ತಾರೆ. ಆರ್ಥಿಕ ಮಸೂದೆಗಳ ನಿರ್ಣಯದಲ್ಲಿ ಸಮ್ಮೇಳನ ಪದ್ಧತಿಯನ್ನು ಆಚರಿಸಿರುವುದು ಆಫ್ರಿಕಾ ಸಂಯುಕ್ತ ರಾಜ್ಯಾಂಗದ ವಿಶೇಷ ಸಂಗತಿ.

## Canada

ಕೆನೆಡಾ ಸೆನೆಟ್ ಸಭೆಯೂ ಆರ್ಥಿಕ ಮಸೂದೆಗಳನ್ನು ಮಾರ್ಪಾಡು ಮಾಡುವ ಮತ್ತು ನಿರಾಕರಿಸುವ ಅಧಿಕಾರವನ್ನು ಹೊಂದಿದೆ. ಆದರೆ ಚಕ್ರವರ್ತಿಯ ಪ್ರತಿನಿಧಿಯೇ ಸಭೆಯ ನೂತನ ಸದಸ್ಯರನ್ನೂ ಸಭೆಯ ಅಧ್ಯಕ್ಷನನ್ನೂ ನೇಮಿಸುವ ಮತ್ತು ರದ್ದುಗೊಳಿಸುವ ವಿಶೇಷಾಧಿಕಾರವನ್ನು ಪಡೆದಿದ್ದಾನೆ. ಸಭೆಯು ತನ್ನ ಹಕ್ಕುಗಳನ್ನೂ ಕ್ರಮ ವಿಧಾನಗಳನ್ನೂ ನಿರ್ಣಯಿಸುವ ಸ್ವಾತಂತ್ರ್ಯವನ್ನು ಹೊಂದಿಲ್ಲ; ಅಲ್ಲದೆ ರಾಷ್ಟ್ರದ ಪಕ್ಷಗಳ ಕೈಗೊಂಬೆಯಾದುದರಿಂದ ಸೆನೆಟ್ ಸಭೆಯು ಅಧಿಕಾರ ಶೂನ್ಯವಾಗಿದೆ.

## Australian Senate

ಸಮಾನ ಪ್ರತಿನಿಧಿತ್ವ ತತ್ವವು ಆಚರಣೆಯಲ್ಲಿರುವುದರಿಂದ ಆಸ್ಟ್ರೇಲಿಯಾ ರಾಷ್ಟ್ರವಿಧಾನಕ್ಕೂ ಸಂಯುಕ್ತ ರಾಷ್ಟ್ರವಿಧಾನಕ್ಕೂ ಹೋಲಿಕೆ ಕಾಣುತ್ತದೆ. ಇಂಗ್ಲೆಂಡಿನ ಪ್ರಜಾಪ್ರಭುತ್ವ ಮತ್ತು ಮಂತ್ರಿ ಮಂಡಳ ರಚನೆಯ ಪದ್ಧತಿಯನ್ನು ತನ್ನ ರಾಷ್ಟ್ರ ವಿಧಾನದಲ್ಲಿ ಆಚರಣೆಗೆ ತಂದಿರುವುದರಿಂದ ಇಂಗ್ಲೆಂಡಿನ ರಾಷ್ಟ್ರ ಪದ್ಧತಿಗೆಯೇ ಹೆಚ್ಚು ಹೋಲಿಕೆಯಿದೆ. ಆಸ್ಟ್ರೇಲಿಯಾದ ಸೆನೆಟ್ ಸಭೆಯು ಜ್ಞಾನಿಗಳ ಬೀಡಲ್ಲ: ಯಾವ ನಿರ್ದಿಷ್ಟವಾದ ಹಕ್ಕಾಗಲಿ, ಅಧಿಕಾರವಾಗಲಿ, ವಿದೇಶಾಂಗನೀತಿ ಮುಂತಾದುವು

ಗಳನ್ನು ಸ್ಪರ್ಧಿಸುವ ದೃಷ್ಟಿಯಾಗಲೀ ಕಂಡು ಬರುವುದಿಲ್ಲ; ಇದರ ಅಧಿಕಾರ-ಕೆಳಗಿನ ಸಭೆಯೊಡನೆ ಸಹಕರಿಸಿ ಕಾನೂನುಗಳನ್ನು ರಚಿಸುವುದು. ಆರ್ಥಿಕಮಸೂದೆಗಳನ್ನು ಮಾರ್ಪಡಿಸುವ ಅಧಿಕಾರವಿಲ್ಲದಿದ್ದರೂ, ನಿಷೇಧಿಸವುದರಲ್ಲಿ ಸಂಪೂರ್ಣ ಅಧಿಕಾರವಿದೆ. ಕೆಳಗಿನಸಭೆಯು ಆಯವ್ಯಯ ಪಟ್ಟಿಯನ್ನು ಏಕಕಾಲದಲ್ಲಿ ನಿರ್ಣಯಿಸಲಾಗದು; ಅಂಕಿ ಅಂಶಗಳನ್ನು ಕೂಲಂಕಶವಾಗಿ ಪರಿಶೀಲಿಸುವ ಮತ್ತು ಪಟ್ಟಿಯ ಮಾರ್ಪಾಟುಗಳನ್ನು ಸೂಚಿಸುವ ಅಧಿಕಾರವನ್ನು ಪಡೆದಿದೆ. ಎರಡು ಸಭೆಗಳಿಗೂ ಆರ್ಥಿಕ ಮಸೂದೆಗಳ ವಿಮರ್ಶೆಯಲ್ಲಿ ಘರ್ಷಣೆಯಾದರೆ, ಹಿಂದಿನ ಫ್ರೆಂಚ್ ಸೆನೆಟ್ ಸಭೆಯಂತೆ ಕೆಳಗಿನ ಸಭೆಯನ್ನು ರದ್ದುಗೊಳಿಸುವ ಸೂಚನೆಯನ್ನು ಸರ್ಕಾರಕ್ಕೆ ತಿಳಿಸುವ ಅಧಿಕಾರ ಸೆನೆಟಿನದು.

ತನ್ನ ಅವಧಿಯು ಮುಗಿಯುವವರಿಗೂ ಸೆನೆಟ್ ಸಭೆಯು ರದ್ದಾಗುವುದಿಲ್ಲ; ಆದರೆ ಕೆಳಗಿನ ಸಭೆಯನ್ನು ರದ್ದುಗೊಳಿಸುವುದಕ್ಕೆ ಅದರ ಅನುಮತಿ ಅವಶ್ಯಕ. ಸಚಿವೋತ್ತಮನ ಕೇಳಿಕೆಗಳನ್ನು ನಿರಾಕರಿಸಿ ಅವನು ನಿರ್ಣಯಿಸಿದ ಮಸೂದೆಗಳನ್ನು ಉಲ್ಲಂಘಿಸಿ ಕೆಳಗಿನ ಸಭೆಯನ್ನೂ ಅವನು ರದ್ದುಮಾಡುವಂತೆ ನಿರ್ಬಂಧಿಸಬಹುದು. ಈ ಸಂಪೂರ್ಣ ಮತ್ತು ವಿಶೇಷಾಧಿಕಾರವನ್ನು ರಾಷ್ಟ್ರವಿಧಾನವು ಸೆನೆಟ್ ಸಭೆಗೆ ಕಲ್ಪಿಸಿಕೊಟ್ಟಿದೆ. 57 ನೇ ಸೆಕ್ಷನ್ ಪ್ರಕಾರ ಎರಡು ಸಭೆಗಳಿಗೆ ಧೀರ್ಘಕಾಲ ಘರ್ಷಣೆಯಾದರೆ, ಎರಡು ಸಭೆಗಳನ್ನು ರದ್ದುಮಾಡುವ ಅಧಿಕಾರವು ಚಕ್ರವರ್ತಿ ಪ್ರತಿನಿಧಿಗೆ ಸೇರಿದೆ. ಕೆಳಗಿನ ಸಭೆಯು ನಿರ್ಣಯಿಸಿದ ಮಸೂದೆಯನ್ನು ಸೆನೆಟ್ ಸಭೆಯು ತಿರಸ್ಕರಿಸಿದರೆ, ಮಾರ್ಪಾಟುಮಾಡಿ ಒಪ್ಪಿದರೆ, ಹಾಗೆ ಪರಿವರ್ತಿಸಿದ ಮಸೂದೆಗಳನ್ನು ಕೆಳಗಿನ ಸಭೆಯು ನಿರಾಕರಿಸಿದರೆ, ಮೂರು ತಿಂಗಳನಂತರ ಕೆಳಗಿನ ಸಭೆಯು ನಿರ್ಣಯಿಸಿದ ಅದೇ ಮಸೂದೆಯನ್ನು ಸೆನೆಟ್ ಸಭೆಯು ನಿರಾಕರಿಸಿದರೆ ಆಗ ಚಕ್ರವರ್ತಿ ಪ್ರತಿನಿಧಿಯು ಏಕಕಾಲದಲ್ಲಿ ಎರಡು ಸಭೆಗಳನ್ನೂ ರದ್ದುಗೊಳಿಸಬಹುದು. ಸಾಧಾರಣವಾಗಿ, ಎರಡು ಸಭೆಗಳ ಸಮ್ಮೇಳನದಲ್ಲಿ ಮಸೂದೆಯು ಬಹುಮತ ಅಂಗೀಕಾರ ಪಡೆದಪಕ್ಷದಲ್ಲಿ

ಘರ್ಷಣದ ವಿಶೇಷ ಪರಿಸ್ಥಿತಿಯು ಉಂಟಾಗುವುದಿಲ್ಲ. ಒಂದೇ ವರಣಕರ್ತ ಸಮಾಜದಿಂದ ಎರಡು ಸಭೆಗಳ ಸದಸ್ಯರು ಚುನಾಯಿತರಾಗುವುದರಿಂದಲೂ, ಮೇಲಿನ ಸಭೆಯ ಸದಸ್ಯರ ಎರಡರಷ್ಟು ಸಂಖ್ಯೆ ಸದಸ್ಯರು ಕೆಳಗಿನ ಸಭೆಯಲ್ಲಿರುವುದರಿಂದಲೂ, ಕೆಳಗಿನ ಸಭೆಯ ಬಹುಮತ ಅಂಗೀಕಾರವಿದ್ದ ಪಕ್ಷದಲ್ಲಿ ಮೇಲಿನ ಸಭೆಯ ಸಮ್ಮತಿಯ ಅಗತ್ಯವಿಲ್ಲದಿರುವುದರಿಂದಲೂ ಘರ್ಷಣೆಗಳಿಗೆ ಆಸ್ಪದವಿಲ್ಲ. ಅಲ್ಲದೆ ವರಣಕರ್ತ ಸಮಾಜವೇ ಅನೇಕ ಮಸೂದೆಗಳಿಗೂ ತಮ್ಮ ಅಭಿಮತವನ್ನು ಸೂಚಿಸುವ ಚಳುವಳಿ ರಾಜಕೀಯ ರಂಗದಲ್ಲಿ ತಲೆದೋರುತ್ತಿದೆ. ಅಧಿಕಾರರಹಿತರಾಗುವ ಭಯವಿರುವುದರಿಂದ ಎರಡು ಸಭೆಯ ಸದಸ್ಯರೂ ಪದೇಪದೇ ಪಕ್ಷಗಳ ಮೂಲಕ ಸಮಾಜದ ಅಭಿಮತವನ್ನೂ ತಿಳಿಯಲು ನಿರತರಾಗಿದ್ದಾರೆ. 1938 ರಲ್ಲಿ ವಿಶೇಷ ಅಧಿವೇಶನ ನಡೆದುದರ ಫಲವಾಗಿ ಎರಡು ಸಭೆಗಳಿಗೂ ಪರಸ್ಪರ ಸೌಹಾರ್ದ ಹೆಚ್ಚಿದೆ. ಕಾನೂನು ರಚನೆಯಲ್ಲಿ ತಲೆದೋರುವ ತೊಡಕುಗಳನ್ನು ನಿವಾರಿಸಲೂ, ರಾಷ್ಟ್ರವಿಧಾನಗಳನ್ನು ವಿಮರ್ಶಿಸಲೂ 1939 ನೇ ಪ್ರಾರಂಭದಲ್ಲಿ ಎರಡು ಸಭೆಗಳು ಸೇರಿದ್ದವು. ಬಹು ಮುಖ್ಯ ಮಸೂದೆಗಳ ನಿರ್ಣಯದಲ್ಲಿ ಸಭೆಗಳ ಸಮ್ಮೇಳನ ಪದ್ಧತಿಯು ಆಸ್ಟ್ರೇಲಿಯದಂತೆ ಅನೇಕ ರಾಷ್ಟ್ರಗಳಲ್ಲಿ ಜಾರಿಗೆ ಬರುತ್ತಿದೆ.

## Council of States — ರಾಜ್ಯಸಭೆ

1947ನೇ ಆಕ್ಟ್ ಪ್ರಕಾರ ಇಂಡಿಯದಲ್ಲಿ ಎರಡು ಸಭೆಗಳ ರಚನೆಗೆ ಅವಕಾಶವಿದೆ; ಎರಡು ಸಭೆಗಳ ಆವಶ್ಯಕತೆಯು ಚಾರಿತ್ರಕವಾಗಿಲ್ಲ; ಸೈದ್ಧಾಂತಿಕವಾಗಿಲ್ಲ. ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ A ಮತ್ತು B ಪ್ರಾಂತ್ಯಗಳ ಸಭೆಗಳ 238 ಸದಸ್ಯರು ಇದ್ದಾರೆ. ಶೇಕಡ ನೂರಕ್ಕೆ ತೊಂಬತ್ತರಂತೆ ಸ್ಥಾನಗಳು ಸಂಸ್ಥಾನಗಳಿಗೆ ಮೀಸಲಾಗಿವೆ. ಇಂಡಿಯ ರಾಷ್ಟ್ರರಚನೆಯಲ್ಲಿ ಸಂಸ್ಥಾನಗಳಿಗೆ ಮೇಲಿನ ಸಭೆಯಲ್ಲಿ ಪ್ರಾತಿನಿಧ್ಯ, ಕೆಳಗಿನ ಸಭೆಯಲ್ಲಿ ವರಣಕರ್ತಸಮಾಜಕ್ಕೆ ಪ್ರಾತಿನಿಧ್ಯವೆಂಬ ಸಂಯುಕ್ತರಾಷ್ಟ್ರ

ವಿಧಾನ ತತ್ವವು ಆಚರಣೆಯಲ್ಲಿಲ್ಲ. ದೇಶವಿಸ್ತಾರದಲ್ಲಿ, ಪ್ರಜಾಸಂಖ್ಯೆಯಲ್ಲಿ, ಪ್ರಾಚೀನತೆ, ಸಂಪ್ರದಾಯಗಳಲ್ಲಿ ಸಂಸ್ಥಾನಗಳ ಅಂತರವು ವಿಶೇಷವಾಗಿರುವುದರಿಂದ ಸಮಾನ ಪ್ರಾತಿನಿಧ್ಯಕ್ಕೆ ಅವಕಾಶವಿಲ್ಲ. ಮೇಲಿನ ಸಭೆಯಲ್ಲಿ, ಅನೇಕವರ್ಗಗಳ ಪ್ರಾತಿನಿಧ್ಯವಿರುವುದರಿಂದ ಭಿನ್ನಾಭಿಪ್ರಾಯಕ್ಕೂ ಆಸ್ಪದವಿದೆ. ಆದರೆ ಮಸೂದೆಗಳ ನಿರ್ಣಯದಲ್ಲಿ ಸಮಾನವಾದ ಸ್ವಾತಂತ್ರ್ಯವು ಎಲ್ಲಾ ವರ್ಗಗಳಿಗಿವೆ—ಸಭೆಯಸದಸ್ಯರು ಒಂದೇ ವರಣಕರ್ತ ಸಮಾಜಕ್ಕೆ ಒಳಗಾದವರಾದುದರಿಂದ.

ದೀರ್ಘಾವಧಿಯಿರುವುದರಿಂದಲೂ, ವರಣಕರ್ತಸಮಾಜದ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದಲೂ, ಮೇಲಿನಸಭೆಯನ್ನು ಕೆಳಗಿನ ಸಭೆಯಾಗಲಿ, ಸಮಾಜವಾಗಲಿ ರದ್ದುಮಾಡಲಾಗುವುದಿಲ್ಲ. ವಿದೇಶರಾಷ್ಟ್ರಗಳಲ್ಲಿ ಕೆಳಗಿನ ಸಭೆಯು ಆರ್ಥಿಕಮಸೂದೆಗಳನ್ನು ಸೂಚಿಸುವುದು, ಮೇಲಿನ ಸಭೆಯು ಅವುಗಳನ್ನು ಅನುಮೋದಿಸುವುದೆಂಬ ತತ್ವ ಜಾರಿಯಲ್ಲಿದ್ದರೆ, ಇಂಡಿಯಾ ರಾಷ್ಟ್ರವಿಧಾನದಲ್ಲಿ, ಮೇಲಿನ ಸಭೆಗೆ ಅಭಿಮತವನ್ನು ಸೂಚಿಸುವ ಮತ್ತು ಆರ್ಥಿಕ ಮಸೂದೆಗಳನ್ನು ಪರಿವರ್ತಿಸುವ ಸಮನಾದ ಅಧಿಕಾರ ಸೇರಿದೆ. ಸಂಸ್ಥಾನಗಳ 238 ಸದಸ್ಯರು ಪ್ರಾಂತಪ್ರತಿನಿಧಿಗಳ ಸಮ್ಮಿಳಿತದಿಂದ ಆರ್ಥಿಕಮಸೂದೆಗಳನ್ನು ಪ್ರತಿಸ್ಪರ್ಧಿಸಬಹುದು; ನೂತನ ಆರ್ಥಿಕಮಸೂದೆಗಳನ್ನು ಪ್ರತಿಬಂಧಕವೆಂದು ಬಿಡಬಹುದು. ಸಂಯುಕ್ತ ರಾಷ್ಟ್ರದ ಸಚಿವರು ಇತರ ರಾಷ್ಟ್ರಗಳಲ್ಲಿ ಕೆಳಗಿನಸಭೆಗೆ ಅಧೀನರು. ಎರಡು ಸಭೆಗಳಿಗೂ ಸಮಬಲವಿರುವುದರಿಂದ ಕೆಳಗಿನ ಸಭೆಗೆ ಸಚಿವರು ಜವಾಬ್ದಾರಿಯಾಗಿರಬೇಕೆಂದು ನಿರ್ದಿಷ್ಟವಾಗಿ ತಿಳಿಯಬೇಕಾಗಿದೆ. ಪ್ರೆಂಚ್ ರಾಷ್ಟ್ರವಿಧಾನದಲ್ಲಿ ಕಾರ್ಯಾಂಗವು ಎರಡು ಸಭೆಗಳಿಗೂ ಅಧೀನವಾಗಿದ್ದುದರಿಂದ, ಮಂತ್ರಿಮಂಡಳ ರಚನೆಯು ಅಸ್ಥಿರವಾಗಿತ್ತು. ಎರಡು ಸಭೆಗಳಿಗೂ ಸಮಾನ ಅಧಿಕಾರವಿರುವುದರಿಂದ ಘರ್ಷಣೆಗಳು ಅನಿವಾರ್ಯ. ಸಭೆಗಳು ಸಮ್ಮೇಳನದ ಮೂಲಕ ಮಸೂದೆಗಳನ್ನು ನಿರ್ಣಯಿಸಬಹುದು.

## ಆಧುನಿಕ ರಾಷ್ಟ್ರದಲ್ಲಿ ಮೇಲಿನ ಸಭೆಗಳ ಪಾತ್ರ

ಜನಾಂಗದ ಐಕ್ಯಮತ್ಯವನ್ನು ಸೂಚಿಸುವ ಒಂದು ಸಭೆಯೂ ಸಂಸ್ಥಾನಗಳ ಪ್ರತ್ಯೇಕ ಪ್ರಾತಿನಿಧ್ಯವನ್ನು ಸೂಚಿಸುವ ಮತ್ತೊಂದು ಸಭೆಯೂ ಸಂಯುಕ್ತರಾಷ್ಟ್ರವಿಧಾನದ ಮುಖ್ಯ ತತ್ವವೆಂದು ಆಧುನಿಕ ದೃಷ್ಟಿಯಿಂದ ವಿಶದ ಪಡಿಸಬಹುದು. ಸಂಸ್ಥಾನದ ಪ್ರತಿನಿಧಿಗಳು ಇಡೀ ಜನಾಂಗದ ಅಭಿಮತವನ್ನು ದೂಡಿ ತಮ್ಮ ಸಂಸ್ಥಾನದ ಅಭಿಮತವನ್ನು ಮಾತ್ರ ಮೇಲಿನ ಸಭೆಯಲ್ಲಿ ಯಾವಾಗಲೂ ವಿಶದಪಡಿಸುವುದಲ್ಲ. ಹಾಗೆಯೇ ಜನಾಂಗದ ಐಕ್ಯಮತ್ಯ ದೃಷ್ಟಿಯಿಂದ ಸ್ಫೂರಿತವಾಗಿರಬೇಕಾದ ಕೆಳಗಿನ ಸಭೆಯ ಸದಸ್ಯರು ಯಾವಾಗಲೂ ಸಂಕುಚಿತ ದೃಷ್ಟಿಯನ್ನು ತೋರಿಸದಿರಲಾರರು.

ಆಧುನಿಕ ರಾಜಕೀಯ ಪರಿಸ್ಥಿತಿಯಲ್ಲಿ ಪೌರೇಯನು ತನ್ನ ಸಂಸ್ಥಾನಕ್ಕೆ ಮಾತ್ರ ಸಂಬಂಧಪಟ್ಟ ವಿಷಯಗಳಿಗೆ ಹೆಚ್ಚುಗಮನ ಕೊಡದೆ ಸಮಗ್ರ ರಾಷ್ಟ್ರಾಭ್ಯುದಯಕ್ಕೆ ಪ್ರಯತ್ನಿಸುವುದರಿಂದ ಸಂಕುಚಿತದೃಷ್ಟಿಯು ಮಾಯವಾಗುತ್ತಿದೆ. ವಿಶೇಷವಿದ್ಯಾಪ್ರಚಾರ, ಪಕ್ಷಗಳ ಪ್ರಗತಿ ಮತ್ತು ಸಮಾಜಕ್ಕೆ ಅವರ ಬೆಂಬಲ ಇವುಗಳ ಪರಿಣಾಮವಾಗಿ ಮಸೂದೆಗಳನ್ನು ಸೂಚಿಸುವ ಮತ್ತು ಶಾಸಕಾಂಗಸಭೆಗಳು ನಿರ್ಣಯಿಸಿದ ಮಸೂದೆಗಳನ್ನು ವಿಮರ್ಶಿಸುವ ಅಧಿಕಾರವನ್ನು ಪಡೆಯಲು ವರಣಕರ್ತಸಮಾಜವು ಕಾತುರದಿಂದಿದೆ. ಶ್ರದ್ಧೆಯು ಹೆಚ್ಚುತ್ತಾ ಸಭೆಗಳ ರಚನೆ ಮತ್ತು ಸೈದ್ಧಾಂತಿಕವಾಗಿ ಅವುಗಳೊಳಗಿರುವ ವ್ಯತ್ಯಾಸಗಳು ಅಳಿದು ಹೋಗುವ ಪ್ರಸಂಗವು ಒದಗಬಹುದು. ಅಲ್ಲದೆ ಅನೇಕ ಸಂಸ್ಥಾನಗಳ ಪ್ರಜಾಸಂಖ್ಯೆಯು ಇಡೀ ಜನಾಂಗದ ಪ್ರಜಾ ಸಂಖ್ಯೆಯಲ್ಲಿ ಅಲ್ಪಪ್ರಮಾಣವಾದುದರಿಂದ ಸಣ್ಣ ಮತ್ತು ದೊಡ್ಡ ಸಂಸ್ಥಾನಗಳ ಮೇಲಿನ ಸಭೆಗೆ ಸಮಾನಪ್ರಾತಿನಿಧ್ಯವನ್ನು ದೊರಕಿಸಿದರೆ ಅಲ್ಪ ಪ್ರಜಾ ಸಂಸ್ಥಾನಗಳ ಸದಸ್ಯರ ಸಮ್ಮಿಳಿತ ಅಭಿಮತವು ಸಭೆಯ ಬಹು ಸಂಖ್ಯಾತ ಅಭಿಮತವಾದುದರಿಂದ ದೊಡ್ಡ ದೊಡ್ಡ ಸಂಸ್ಥಾನಗಳ ಸದಸ್ಯರು ಅದನ್ನು ಒಪ್ಪಬೇಕಾಗುವುದು.

ಈ ಕಾರಣಗಳಿಂದ ಎರಡು ಸಭೆಗಳ ಆವಶ್ಯಕತೆಯಿಲ್ಲವೆಂದು ಅನೇಕರ

ಮತ. ಜವಾಬ್ದಾರಿ ಸರ್ಕಾರದ ವಿಕಾಸದಲ್ಲಿಯೂ, ಸಂಯುಕ್ತರಾಷ್ಟ್ರ ವಿಧಾನಗಳ ಪ್ರಗತಿಯಲ್ಲಿಯೂ ಸಹಕಾರಿಯಾಗುವುದರಿಂದ ಮೇಲಿನ ಸಭೆಯು ಉಳಿಯಬೇಕೆಂದು ಕೆಲವರ ಮತ. ಮೇಲಿನ ಸಭೆಯು ಐಶ್ವರ್ಯವಂತರ ನೆಲೆಯಾಗಕೂಡದು; ವರಣಾಧಿಕಾರವು ಸಾರ್ವಜನಿಕವಾಗಿ ಸಾಮಾನ್ಯಪ್ರಜೆಗೂ ಮೇಲಿನ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಲು ಅವಕಾಶವನ್ನು ಒದಗಿಸಬೇಕು. ಈ ರೀತಿಯಲ್ಲಿ ವಿಸ್ತೃತವಾದ ಹಕ್ಕನ್ನು, ಕೆಳಗಿನ ಸಭೆಯ ವಿಶೇಷಾಧಿಕಾರವನ್ನು ಅವಹೇಳನಮಾಡಲು ದುರುಪಯೋಗಪಡಿಸಲಾಗದು.

ರಾಷ್ಟ್ರದಲ್ಲಿ ಎರಡು ಸಭೆಗಳ ಆವಶ್ಯಕತೆ ಇದ್ದಪಕ್ಷದಲ್ಲಿ ವರಣದಾತರಿಗೂ, ಉಮೇದವಾರರಿಗೂ ಸ್ವಲ್ಪ ಆಸ್ತಿಯೋಗ್ಯತೆಯಿಂದ ಅವರ ಅಂತರವನ್ನೂ ನಿರ್ಧರಿಸಬೇಕು. ಎರಡು ಸಭೆಗಳ ಉಮೇದುವಾರರಿಗೂ ಮತದಾತರಿಗೂ ಇದೇ ವಿಧವಾದ ಅಂತರವಿರಬೇಕು. ಎರಡು ಸಭೆಗಳ ಸದಸ್ಯರಿಗೂ, ವರಣದಾತರಿಗೂ ಯೋಗ್ಯತೆಗಳು ಏಕರೀತಿಯಾದ ಪಕ್ಷದಲ್ಲಿ ಅಧಿಕಾರದಲ್ಲಿ ಸಾಯುಜ್ಯ, ತತ್ಪರಿಣಾಮವಾಗಿ ಘರ್ಷಣೆಗಳು ಅನಿವಾರ್ಯ.

ಅಪ್ರತ್ಯಕ್ಷ ಚುನಾವಣೆ ಮೂಲಕ ಸಭೆಯನ್ನು ರಚಿಸಿದರೆ ಪಕ್ಷಗಳು ಸ್ಥಳೀಯವಿಚಾರಗಳೂ ಪಕ್ಷನಾಯಕರೂ ಬಲವಾಗಿ ರಾಷ್ಟ್ರಾಭ್ಯುದಯಕ್ಕೆ ಕುಂದಕ ತರುವರು. ಪ್ರತ್ಯಕ್ಷಚುನಾವಣೆಯನ್ನು ಆಚರಿಸಿದರೆ ಅದು ಸಾರ್ವಜನಿಕ ಮನ್ನಣೆಯನ್ನು ಪಡೆದು ಮತದಾತನಿಗೆ ಹೆಚ್ಚು ಸ್ವಾತಂತ್ರ್ಯವನ್ನು ಗಳಿಸುವುದು. ಒಂದೇ ವರಣಕರ್ತಸಮಾಜದಿಂದ ರಚಿತವಾದ ಸಭೆಗಳು ಸಮಬಲವಾಗಿ ಪ್ರತ್ಯೇಕ ಅಧಿಕಾರ ವೃದ್ಧಿಗಾಗಿ ಸ್ಪರ್ಧಿಸುವುವು. ಆದರೂ ವೈಯುಕ್ತಿಕ ಸ್ವಾತಂತ್ರ್ಯ ರಕ್ಷಣೆಗೂ, ಅಲ್ಪಸಂಖ್ಯಾತರ ಅಭಿಮತ ಮನ್ನಣೆಗೂ ದ್ವಿತೀಯ ಸಭೆಯ ರಚನೆಯು ಅನಿವಾರ್ಯವಾದುದರಿಂದ ಪ್ರತ್ಯಕ್ಷಚುನಾವಣೆಯು ಆವಶ್ಯಕ. ಹಾಗೆಯೇ, ಮೇಲಿನ ಸಭೆಯ ಮತದಾತನ ಮತ್ತು ಉಮೇದುವಾರನ ಯೋಗ್ಯತೆಗಳು, ಕೆಳಗಿನ ಸಭೆಯ ಮತದಾತನ ಮತ್ತು ಉಮೇದುವಾರನ ಯೋಗ್ಯತೆಗಳು ಬೇರೆಬೇರೆಯಾಗಿರ

ಬೇಕು. ಶ್ರೀಮಂತರ ಪಕ್ಷಪಾತಿಗಳ ಮತ್ತು ಉತ್ತಮವರ್ಗದ ತೀವ್ರ ಮನೋಭಾವನೆಯು ಪ್ರಜಾಪ್ರಭುತ್ವಕ್ಕೆ ಪ್ರತಿಬಂಧಕವಾಗದಂತೆ, ಅವರಿಗೂ ಪ್ರಾತಿನಿಧ್ಯವಿರಬೇಕು.

ಮೇಲಿನ ಸಭೆಯ ಪಾತ್ರ ಅಧಿಕಾರಿಗೆ ಅಧೀನನಾಗುವ ಗುಮಾಸ್ತನಂತಿರಬಾರದು; ದುಷ್ಟಪುತ್ರನನ್ನು ದಂಡಿಸುವ ತಂದೆಯಂತಿರಬಾರದು; ಧೂರ್ತಸಹೋದರನಿಗೆ ತಿಳುವಳಿಕೆಯನ್ನು ಬೋಧಿಸುವ ಜ್ಯೇಷ್ಠ ಸಹೋದರನಂತಿರಬೇಕು. ಕೆಳಗಿನ ಸಭೆಯು ರಚಿಸಿದ ಮಸೂದೆಗಳ ಬಾಷಾ ಮತ್ತು ವ್ಯಾಕರಣ ತಪ್ಪುಗಳನ್ನು ತಿದ್ದುವ ಪಾತ್ರವಲ್ಲ. ಪ್ರಜಾವರ್ಗದ ಅವಿವೇಕ ಮನೋಭಾವನೆಗಳು ಎಷ್ಟರಮಟ್ಟಿಗೆ ರಾಷ್ಟ್ರಗೊಂದಲ ಮತ್ತು ಪೀಡೆಗೆ ಕಾರಣಭೂತರಾಗುವುವೆಂಬ ಅಂಶವನ್ನು ತೋರ್ಪಡಿಸುವ ವಿಮರ್ಶಾತ್ಮಕ ಶಕ್ತಿ ದ್ವಿತೀಯ ಸಭೆಗೆ ಸೇರಿದ್ದು. ಪಾರಂಪರೆಯಾಗಿ ನಡೆದುಬಂದ ಸಂಪ್ರದಾಯಗಳನ್ನು ಮನ್ನಿಸಿ, ಕ್ರಾಂತಿಕಾರಿತತ್ವಗಳನ್ನು ಪ್ರತಿಪಾದಿಸದೆ, ಸುಧಾರಣೆಗಳ ಸೂಚನೆಮೂಲಕ ಪ್ರಗತಿಪರವಾಗಿರಬೇಕು.

# ಪ್ರಕರಣ ೧೨

## ಕೆಳಗಿನ ಸಭೆಗಳ ಮೂಲಭೂತ ತತ್ವಗಳು

## Constitution of Lower Chambers

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಪ್ರಜೆಗಳು ತಮ್ಮ ಕರ್ತವ್ಯವನ್ನೂ ಪ್ರತ್ಯಕ್ಷವಾಗಿ ನಿರ್ದೇಶಿಸಲು ಅಸಾಧ್ಯವಾದುದರಿಂದ ರಾಷ್ಟ್ರದ ಒಂದು ವಿಭಾಗದವರು ಒಬ್ಬ ಪ್ರತಿನಿಧಿಯನ್ನು ಗೊತ್ತುಮಾಡಿ ಆತನ ಮೂಲಕ ಅಭಿಮತವನ್ನು ಸೂಚಿಸುವ ಸಂಪ್ರದಾಯವು ರೂಢಿಯಲ್ಲಿದೆ. ಹಾಗೆಯೆ ಪ್ರತಿನಿಧಿ ತತ್ವವು ಶಾಸಕಾಂಗಕ್ಕೆ ಪ್ರಧಾನ ಲಕ್ಷಣವಾಗಿ ಪರಿಣಮಿಸಿದೆ; ಅಲ್ಲದೆ ಬಹುಭಾಗದ ಅಭಿಪ್ರಾಯವೇ ಸಭೆಯ ಅಭಿಪ್ರಾಯವಾಗಿದೆ. ಪ್ರತಿಯೊಂದು ರಾಷ್ಟ್ರವೂ ಒಂದು ವಿಶಿಷ್ಟಪರಿಸ್ಥಿತಿಗನುಗುಣವಾಗಿ ಸ್ವರೂಪ ವನ್ನು ತಾಳಿದರೆ ಅದರ ಲಕ್ಷಣಗಳು ಸಿದ್ಧಿಯಾಗುವುವು. ಪರಿಸ್ಥಿತಿಯು ಅನುಕೂಲವಿಲ್ಲದಿದ್ದರೂ, ಅನ್ಯಸ್ವರೂಪವನ್ನು ಅನುಕರಣಮಾಡಿಕೊಂಡರೆ ರಾಷ್ಟ್ರಧ್ಯೇಯವು ಸಿದ್ಧಿಯಾಗಲಾರದು. ಆದರೂ ಪ್ರತಿಯೊಂದು ರಾಷ್ಟ್ರ ದಲ್ಲಿಯೂ ಪ್ರತಿನಿಧಿತತ್ವಾವಲಂಬನೆಯೇ ಪ್ರಜಾಪ್ರಭುತ್ವಕ್ಕೆ ಮುಖ್ಯ ಸಾಧಕವೆಂದು ಭಾವನೆಯಿದೆ.

ಸಾರ್ವಜನಿಕ ಮತಾಧಿಕಾರ ಮತ್ತು ಅಲ್ಪಾವಧಿ ಪ್ರಾತಿನಿಧ್ಯ ತತ್ವ ಗಳಾಧಾರದ ಮೇಲೆ ಶಾಸಕಾಂಗದ ಕೆಳಗಿನ ಸಭೆಗಳನ್ನು ರಚಿಸಬೇಕು. ಮತ್ತು ಪ್ರಾತಿನಿಧ್ಯವು ಪೌರೇಯರು, ವಿದೇಶಿಯರು, ಹೆಂಗಸರು ಮತ್ತು ವಯಸ್ಕರನ್ನೊಳಗೊಂಡ ಇಡೀ ಜನಾಂಗಕ್ಕೆ ಅನ್ವಯಿಸಬೇಕೇ ಹೊರತು, ಆಸ್ತಿ ಮತ್ತು ವಿದ್ಯಾಯೋಗ್ಯತೆಗಳಿಂದ ಮತಾಧಿಕಾರವನ್ನು ಪಡೆದಿರುವ ವರಣ ದಾತರಗೆ ಮಾತ್ರ ಅನ್ವಯಿಸಕೂಡದೆಂದು ಒಂದು ಆಧುನಿಕ ದೃಷ್ಟಿ. ವರಣ ಕ್ಷೇತ್ರಗಳು ಸಮನಾದ ಪ್ರಜಾಸಂಖ್ಯೆಯುಳ್ಳವಾದರೆ ಆಗ ಪ್ರಾತಿನಿಧ್ಯ ದಲ್ಲಿ ಸಾಮ್ಯ ಸಾಧ್ಯ; ಆದುದರಿಂದ ಆಗಿಂದಾಗ್ಗೆ ಪ್ರಜಾಸಂಖ್ಯೆಗಣನೆ

ನಡೆದರೆ ಪ್ರಜೆಗಳ ಹೆಚ್ಚು ಮತ್ತು ಕಮ್ಮಿ ಸಂಖ್ಯೆಗಳನುಸಾರವಾಗಿ ಪ್ರತಿನಿಧಿಗಳನ್ನು ಹಂಚಬಹುದು.

## ವರಣಕ್ಷೇತ್ರಗಳ ವಿಭಜನೆ

## General Ticket and Single Member District

ವರಣಕ್ಷೇತ್ರವನ್ನು ಎರಡುವಿಧಾನವಾಗಿ ವಿಭಾಗಿಸಬಹುದು. ಕ್ಷೇತ್ರಕ್ಕೆ ಒಬ್ಬ ವರಣಾರ್ಥಿಯಂತೆ ಎಷ್ಟು ಪ್ರತಿನಿಧಿಗಳಿರುವರೋ ಅಷ್ಟು ವರಣಕ್ಷೇತ್ರಗಳಾಗಿ ರಾಷ್ಟ್ರವನ್ನು ವಿಭಾಗಿಸುವುದು. (Single Member District Method.) ವರಣದಾತರನ್ನೆಲ್ಲಾ ಕೆಲವು ಕ್ಷೇತ್ರಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಕ್ಷೇತ್ರದಿಂದ ಅನೇಕ ಪ್ರತಿನಿಧಿಗಳನ್ನು ಚುನಾಯಿಸುವುದು (General Ticket Method). ವರಣದಾತರನ್ನು ಸಮನಾಗಿ ಕ್ಷೇತ್ರಗಳಾಗಿ ವಿಭಾಗಿಸುವುದರಿಂದ ಪ್ರತಿನಿಧಿಗೂ ಮತ್ತು ವರಣಕ್ಷೇತ್ರಕ್ಕೂ ನಿಕಟಸಂಬಂಧವು ಬೆಳೆಯುವುದು. ಎರಡನೆಯ ವಿಧಾನದ ಆಚರಣೆಯಿಂದ ರಾಷ್ಟ್ರಾಭ್ಯುದಯಾಕಾಂಕ್ಷೆಯುಳ್ಳ ಉತ್ತಮ ದರ್ಜೆಯ ಪ್ರತಿನಿಧಿಗಳು ಚುನಾಯಿತರಾಗಬಹುದು; ಮತ್ತು ಬಹುಮತಾಭಿಪ್ರಾಯವನ್ನೂ ನಿರ್ಣಯಿಸದಂತಾಗುವುದು. ಸಂಯುಕ್ತರಾಷ್ಟ್ರವು ಮತ್ತು ಪ್ರೆಂಚ್ ರಾಷ್ಟ್ರವು ಬಹುಕಾಲ 'ಜನರಲ್ ಟಿಕೆಟ್' ಅಥವ ಸ್ಕ್ರುಟಾನ್‌ದು ಲಿಸ್ಟ್ (Scrutin de Liste) ಪದ್ಧತಿಯನ್ನು ಆಚರಿಸಿ, ಆಚರಣೆಯಲ್ಲಿ ಒದಗಿದ ಅಡಚನೆಗಳಿಗೆ ಪರಿಹಾರ ಕಾಣದೆ ಸಿಂಗಲ್ ಮೆಂಬರ್ ಪದ್ಧತಿ ಅಥವ ಸ್ಕ್ರುಟಾನ್ ದು ಆರೊಂಡಿಸೆಮೆಂಟ್ (Scrutin D' arrondisement) ಪದ್ಧತಿಯನ್ನು ಮತ್ತೆ ಒಪ್ಪಿವೆ. ಇಂಗ್ಲೆಂಡಿನಲ್ಲಿ ಸಿಂಗಲ್ ಮೆಂಬರ್ ಪದ್ಧತಿಯೇ ಯಾವಾಗಲೂ ಆಚರಣೆಯಲ್ಲಿದೆ. ಇದರಿಂದ ಅಲ್ಪ ಸಂಖ್ಯಾಕರು ಪ್ರಾತಿನಿಧ್ಯವನ್ನು ಪಡೆಯಲು ಸಾಧ್ಯವಾಗಿದೆ. ಸಿಂಗಲ್‌ಮೆಂಬರ್ ಡಿಸ್ಟ್ರಿಕ್ಟ್ ಪದ್ಧತಿಯ ಆಚರಣೆ ಸುಲಭ; ಮತ್ತು ಮತದಾತರಿಗೆ ಸ್ಥಳೀಯ ಸಮಸ್ಯೆಗಳ ತಿಳಿವಳಿಕೆಯಿರುವುದರಿಂದ ಅವುಗಳನ್ನು

ದಕ್ಷತೆಯಿಂದ ಪರಿಹರಿಸಬಲ್ಲ ಉಮೇದವಾರರನ್ನು ಮಾತ್ರ ಪ್ರತಿನಿಧಿಯಾಗಿ ಚುನಾಯಿಸಬಲ್ಲರು. ಈ ಅನುಕೂಲಗಳು ಈ ಪದ್ಧತಿಯ ಆಚರಣೆಯಿಂದ ಸಾಧ್ಯವಾದುದರಿಂದ ಪ್ರಸಿದ್ಧ ರಾಜನೀತಿಜ್ಞರಾದ ಮಾಂಟೆಸ್ಕ್ಯೊ, ಬ್ಲಂಟ್ಷ್ಲಿ ಮತ್ತು ಲಾಸ್ಕಿಯವರು ಒಪ್ಪಿರುವರು.

ಸುಮಾರು ಐವತ್ತು ವರ್ಷದ ಸಾರ್ವತ್ರಿಕ ಚುನಾವಣೆಗಳ ಅಂಕಿಗಳನ್ನು ಪರಿಶೀಲಿಸಿದರೆ ಏಕ ಪ್ರಾತಿನಿಧ್ಯ ವರಣಕ್ಷೇತ್ರಗಳಿಂದ ಎಲ್ಲಾ ಪ್ರಜೆಗಳಿಗೂ ಸಂಪೂರ್ಣ ಪ್ರಾತಿನಿಧ್ಯವನ್ನು ಪಡೆಯಲು ಅವಕಾಶವಿಲ್ಲವೆಂದು ವ್ಯಕ್ತವಾಗುವುದು. ಬ್ರಿಟನ್ನಿನಲ್ಲಿ 1922 ನೇ ಸಾರ್ವತ್ರಿಕ ಚುನಾವಣೆಯಲ್ಲಿ 5,381,433 ಕನ್ಸರ್ವೇಟಿವ್ ಮತದಾತರು 296 ಸ್ಥಾನಗಳನ್ನೂ 4,237,490 ಕಾರ್ಮಿಕವರ್ಗದವರು 138 ಸ್ಥಾನಗಳನ್ನೂ, 2,621,168 ಲಿಬಿರಲ್ ಮತದಾತರು 54 ಸ್ಥಾನಗಳನ್ನೂ ಪಡೆದರು; ಅಂದರೆ 18,180 ಕನ್ಸರ್ವೇಟಿವ್ ಪ್ರಜೆಗಳಿಗೆ 30,706 ಲೇಬರ್ ಪ್ರಜೆಗಳಿಗೆ, ಮತ್ತು 48,540 ಲಿಬರಲ್ ಪ್ರಜೆಗಳಿಗೆ ಒಬ್ಬಬ್ಬ ಪ್ರತಿನಿಧಿಯಂತಾಯಿತು. 1924 ರಲ್ಲಿ ನಡೆದ ಚುನಾವಣೆಯಲ್ಲಿ 7450 900 ಕನ್ಸರ್ವೇಟಿವ್ ಪ್ರಜೆಗಳು 382 ಸ್ಥಾನಗಳನ್ನೂ, 5,483,088 ಲೇಬರ್ ಪ್ರಜೆಗಳು 142 ಸ್ಥಾನಗಳನ್ನೂ, 30,08,077 ಲಿಬರಲ್ ಪ್ರಜೆಗಳು 32 ಸ್ಥಾನಗಳನ್ನೂ ಪಡೆದರು. 19,505 ; 38,613 ಮತ್ತು 88,473 ಪ್ರಜೆಗಳಿಗೆ ಒಬ್ಬೊಬ್ಬ ಪ್ರತಿನಿಧಿಯಾಯಿತು. ಈ ವಿಧವಾದ ವರಣಕ್ಷೇತ್ರ ವಿಭಜನೆಯಲ್ಲಿ ರಾಜಕೀಯ ಪಕ್ಷಗಳು ಅಧಿಕಾರದಲ್ಲಿ ಹೆಚ್ಚು ಘರ್ಷಣೆಗಳಿಗೆ ಆಸ್ಪದ ಕೊಟ್ಟಿವೆ. ಬಹುಸಂಖ್ಯಾಕರಿಗೆ ಹೆಚ್ಚಾಗಿ ಅಭಿಮತವನ್ನು ಸೂಚಿಸಲು ಅವಕಾಶಕೊಡುವುದರಿಂದ ರಾಷ್ಟ್ರದಲ್ಲಿ ಬಹುಮತ ತತ್ವವೇ ಪ್ರಧಾನವಾಗುವುದು. ಅಲ್ಪಸಂಖ್ಯಾಕರು ಜರಿಮಾಂಡರ್ (Gerrymander) ಪದ್ಧತಿಯನ್ನು ಅನುಸರಿಸಿ ಕೃತ್ರಿಮದಿಂದ ವರಣಕ್ಷೇತ್ರಗಳನ್ನು ಮಾರ್ಪಾಡುಮಾಡಿ ತಮ್ಮ ಸಿದ್ಧಿಯನ್ನು ಹೊಂದಬೇಕು. ತಿಳಿವಳಿಕೆಯಿಲ್ಲದ ಅನೇಕ ಮತದಾತರು

ಪಕ್ಷನಾಯಕನ ಮನೋಗತಕ್ಕೆ ಅಧೀನರಾಗುವರು. ಉಮೇದುವಾರರು ಎಷ್ಟು ನಿಷ್ಣಾತರಾದರೂ ಪಕ್ಷವನ್ನು ಅನುಸರಿಸಬೇಕಾಗುವುದು; ಅಲ್ಲದೆ ಪಕ್ಷಾಭಿಮತವನ್ನು ಶಾಸಕಾಂಗದಲ್ಲಿ ವಿರೋಧಿಸಿದ ಪಕ್ಷದಲ್ಲಿ ಸದಸ್ಯತ್ವ ಕಳೆದುಕೊಳ್ಳಬೇಕಾಗುವುದು. ಈ ವಿಧವಾದ ನ್ಯೂನತೆಗಳನ್ನು ಇಂಗ್ಲೆಂಡಿನ ರಾಯಲ್ ಕಮಿಷನ್ ಆನ್ ಎಲೆಕ್ಟರಲ್ ರಿಫಾರಂ (Royal Commission on Electoral Reform) ಮುಂತಾದ ಸಂಸ್ಥೆಗಳು ನಿವಾರಿಸಲು ಮಾಡಿದ ಪ್ರಯತ್ನಗಳು ವಿಫಲವಾದುದರಿಂದ ಅನುಪಾತಿಕ ಪ್ರಾತಿನಿಧ್ಯ ಪದ್ಧತಿಯನ್ನು (Proportional Representation) ಆಚರಿಸಬೇಕೆಂಬ ಯೋಚನೆಗಳು ಪ್ರಾರಂಭವಾಗಿವೆ.

## Qualifications for Membership in the Legislature

ಪ್ರಾತಿನಿಧ್ಯ ಸಂಪೂರ್ಣವಾಗಿಯೂ ಸಾರ್ವಜನಿಕವಾಗಬೇಕೆಂದರೆ ಅನುಪಾತಿಕ ಪ್ರತಿನಿಧಿತ್ವ ಪದ್ಧತಿಯನ್ನು ಆಚರಿಸುವುದಲ್ಲದೆ, ವಾಸ, ವಿದ್ಯಾಭ್ಯಾಸ, ಮುಂತಾದ ಇನ್ನು ಅನೇಕ ವಿಷಯಗಳ ಸುಧಾರಣೆಗಳನ್ನು ಮಾಡಿ ಉತ್ತಮ ದರ್ಜೆಯ ಪ್ರತಿನಿಧಿಗಳು ರಾಷ್ಟ್ರಕ್ಕೆ ಸೇವೆ ಸಲ್ಲಿಸುವಂತೆ ಮಾಡಬೇಕು. ವಿದೇಶಿಯರಿಗೆ ಪ್ರಾತಿನಿಧ್ಯ ಕೊಡಕೂಡದು; ಪ್ರತಿನಿಧಿಯು ದಕ್ಷತೆಯಿಂದ ತನ್ನ ಕರ್ತವ್ಯವನ್ನು ಮಾಡಬೇಕಾದರೆ ತಕ್ಕ ಬುದ್ಧಿಶಕ್ತಿ ಮತ್ತು ಅನುಭವಪಡೆದಿರಬೇಕು. ಉಮೇದುವಾರನಾಗಿ ನಿಲ್ಲುವ ಸ್ಥಳದಲ್ಲಿ ಕೆಲವು ಕಾಲ ನಿವಾಸಿಯಾಗಿರಬೇಕು; ಆದರೆ ಇದು ಕಾನೂನಾದರೆ ಪ್ರಸಿದ್ಧ ಪುರುಷರಿಗೆ, ರಾಜಕಾರಣ ಪಟುಗಳಿಗೆ ಸ್ಥಾನವಿಲ್ಲವಾಗುತ್ತದೆ; ಎ. ಜೆ. ಬಾಲಫರ್ 1905 ರಲ್ಲಿಯೂ, ವಿನ್‌ಸ್ಟನ್ ಚರ್ಚಿಲ್ 1908 ರಲ್ಲಿಯೂ ತಮ್ಮ ವರಣಕ್ಷೇತ್ರಗಳಲ್ಲಿ ಸೋತಾಗ ಬೇರೆ ಬೇರೆ ವರಣಕ್ಷೇತ್ರಗಳು ಅವರನ್ನೂ ಶಾಸನಾಂಗ ಸಭೆಗೆ ಚುನಾಯಿಸಿದರು. ಉಮೇದುವಾರನು ಸ್ವಲ್ಪ ಆಸ್ತಿವಂತನಾದರೆ ಹೆಚ್ಚು ಜವಾಬ್ದಾರಿ. ದಕ್ಷತೆ ಮತ್ತು ಶ್ರದ್ಧೆ

Federalist No. 62.

ಯಿಂದ ಶಾಸನ ರಚನೆ ಮುಂತಾದ ಶಾಸಕ ಕಾರ್ಯಗಳಲ್ಲಿ ನಿರತನಾಗುವನು. ಶಾಸನರಚನೆಯಲ್ಲಿ ಮಗ್ನನಾದ ಪ್ರತಿನಿಧಿಯು ಆಡಳಿತಕಾರ್ಯಗಳಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಲಾರನು. ಮತ್ತು ಪ್ರತಿನಿಧಿಯು ತನ್ನ ವರಣ ಕ್ಷೇತ್ರದ ಅಭ್ಯುದಯಕ್ಕಾಗಿ ಶ್ರದ್ಧೆ ವಹಿಸಬೇಕಾದರೆ ಅವನ ಸದಸ್ಯತ್ವವು ಅಲ್ಪಾವಧಿಯಾಗಿರಬೇಕು. ಎಲ್ಲಾ ರಾಷ್ಟ್ರಗಳಲ್ಲಿಯೂ ಶಾಸಕಾಂಗ ಸಭೆಗಳ ಸದಸ್ಯರಿಗೆ ರಾಷ್ಟ್ರಕೋಶದಿಂದ ವೇತನಗಳನ್ನು ಮತ್ತು ವಸತಿ ವಾಹನಾದಿಸೌಕರ್ಯಗಳನ್ನು ಕಲ್ಪಿಸಿಕೊಡುವುದು ರೂಢಿಯಾಗಿದೆ.

ಮಿಲ್ ತನ್ನ ಸುಪ್ರಸಿದ್ಧವಾದ 'ರೆಪ್ರಸೆಂಟಿಟಿವ್ ಗೌರ್ನಮೆಂಟ್' ಗ್ರಂಥದಲ್ಲಿ ಅಲ್ಪಸಂಖ್ಯಾಕರ ಸ್ವಾತಂತ್ರ್ಯವನ್ನು ರಕ್ಷಿಸುವುದು ಪ್ರಜಾ ಪ್ರಭುತ್ವದ ಮೂಲಾಧಾರವಾದ ತತ್ವವೆಂದು ಹೇಳಿದ್ದಾನೆ. ಪ್ರಜಾಪ್ರತಿನಿಧಿ ಸರ್ಕಾರಗಳಲ್ಲಿ ಬಹು ಮತಾಭಿಪ್ರಾಯಕ್ಕೆ ಅಲ್ಪ ಸಂಖ್ಯಾಕರು ತಲೆಬಾಗ ಬೇಕು; ನಿಜವಾದ ಸಾಮ್ಯತೆಯುಂಟಾಗಬೇಕಾದರೆ ಪ್ರತಿಯೊಂದು ಅಭಿ ಮತಕ್ಕೂ ಪ್ರಾತಿನಿಧ್ಯವಿರಬೇಕು; ಬಹುಸಂಖ್ಯಾಕ ಮತದಾತರ ಸಂಖೆಗನು ಗುಣವಾಗಿ ಪ್ರತಿನಿಧಿಗಳನ್ನೂ ಅಲ್ಪಸಂಖ್ಯಾಕರು ಆ ಸಂಖೆಗನುಗುಣವಾಗಿ ಪ್ರತಿನಿಧಿಗಳನ್ನೂ ಪಡೆಯಬೇಕು. ಅಲ್ಪಸಂಖ್ಯಾಕರಿಗೆ ರಾಷ್ಟ್ರದ ಶಾಸಕಾಂಗ ಸಭೆಗಳಲ್ಲಿ ಪ್ರಾತಿನಿಧ್ಯವನ್ನು ದೊರೆಕಿಸಲು ಅನೇಕ ಸುಧಾರಣೆಗಳು ಜಾರಿಗೆ ಬಂದಿವೆ: ಸಂಕುಚಿತ ಅಭಿಮತಪದ್ಧತಿ, ಸಂಕಲನ ಮತಪದ್ಧತಿ, Cumulative Vote, ಸೀಕ್ರೆಟ್ ಬ್ಯಾಲೆಟ್ ವೋಟ್, ಕಂಟನ್‌ಜಂಟ್ ವೋಟ್, ಬ್ಲಾಕ್ ವೋಟ್, ಅಥವ ಸ್ಕುಟಾನ್ ದುಲಿಸ್ಟ್. ಮತ್ತು ಸಿಂಗಲ್ ಟ್ರಾನ್ಸ್‌ಫೆರಬಲ್ ವೋಟ್ ಮುಂತಾದುವುಗಳು.

ಬ್ಲಾಕ್ ವೋಟ್ ಪದ್ಧತಿಯು ಫ್ರೆಂಚ್ ರಾಷ್ಟ್ರದಲ್ಲಿ ಆಚರಣೆಯಲ್ಲಿದೆ. ವರಣಕರ್ತಸಮಾಜದವರು ಮತ್ತು ಪಕ್ಷಗಳು ಉಮೇದುವಾರರ ಪಟ್ಟಿ ಯನ್ನು ನಾಮಕರಣ ಮಾಡುವರು. ಪಟ್ಟಿಯ ಮೇಲ್ಭಾಗದಲ್ಲಿರುವ ಕಪ್ಪು ಪ್ರದೇಶದಲ್ಲಿ ಬಿಳಿ ಸ್ಥಳವನ್ನು ಮತದಾತನು ಗುರುತು ಮಾಡಿದರೆ ಅನುಕ್ರಮಣವಾಗಿ ಸೂಚಿಸುವ ಉಮೇದುವಾರನನ್ನೂ ಮತ್ತು ಪಕ್ಷವನ್ನೂ

ಒಪ್ಪಿದಂತಾಯಿತು. ಜ್ಞಾನಿಗಳು ಸತ್ಯಸಂಧರೂ ಮತ್ತು ದಕ್ಷರಾದ ವರಣಾರ್ಥಿಗಳನ್ನು ಚುನಾಯಿಸಬೇಕೆಂದು ತೋರಿದರೆ ಪಕ್ಷಗಳು ಅನುಕ್ರಮವಾಗಿ ಸೂಚಿಸಿರುವ ಪಟ್ಟಿಯಲ್ಲಿ ಯಾರನ್ನುಬೇಕಾದರೂ ಕಪ್ಪುಗುರುತಿನಿಂದ ಆರಿಸಬಹುದು. 1927 ರಲ್ಲಿ ಫ್ರೆಂಚ್ ಸರ್ಕಾರವು ಲಿಸ್ಟ್ ಪದ್ಧತಿಯನ್ನು ರದ್ದು ಮಾಡಿ ಪುನಃ ಏಕಸದಸ್ಯ ಪ್ರಾತಿನಿಧ್ಯ ಪದ್ಧತಿಗೆ ಹಿಂತಿರಿಗಿತು.

## ಅನುಪಾತಿಕ ಪ್ರತಿನಿಧಿತ್ವ—Representation of Minorities and Proportional Representation

ಅನುಪಾತಿಕ ಪ್ರಾತಿನಿಧ್ಯ ಪದ್ಧತಿಯು ಪ್ರಜಾಪ್ರಭುತ್ವವಿರುವ ರಾಷ್ಟ್ರಗಳೆಲ್ಲಾ ಆಚರಣೆಗೆ ಬಂದಿದೆ. ಈ ಪದ್ಧತಿಯಲ್ಲಿ ಇಡೀ ಜನಾಂಗವೇ ತಮ್ಮ ಪ್ರತಿನಿಧಿಗಳ ಮೂಲಕ ಶಾಸಕಾಂಗ ಸಭೆಗಳಲ್ಲಿ ತಮ್ಮ ಮನೋರಥವನ್ನು ಸೂಚಿಸಬಹುದು. ಅನುಪಾತಿಕ ಪ್ರಾತಿನಿಧ್ಯ ಪದ್ಧತಿಯಲ್ಲಿ ವರಣಕ್ಷೇತ್ರಗಳು ವಿಶಾಲವಾಗಿರಬೇಕು, ಇದರಲ್ಲಿ ವರಣದಾತನಿಗೆ ಸ್ವೇಚ್ಛೆಯಾಗಿ ತನ್ನ ಅಭಿಮತವನ್ನು ಕೊಡುವ ಅಧಿಕಾರವಿಲ್ಲ; ಒಬ್ಬನಿಗೆ ಒಂದೇ ಅಭಿಮತಕೊಡುವ ನಿರ್ಬಂಧವಿದೆ; ಚುನಾವಣೆಯಲ್ಲಿ ಅಭಿಮತವನ್ನು ಸೂಚಿಸುವುದು ರಹಸ್ಯವಾಗಿ. ಅಭಿಮತವನ್ನು ವರ್ಗಾಯಿಸಿ ವರಣಾಧಿಕಾರಿಗಳ ಮೂಲಕ ತನ್ನ ಆಪ್ತ ವರಣಾರ್ಥಿಗಳಿಗೆ ಕೊಡಬಹುದು. ವೋಟುಗಳ ವರ್ಗದಿಂದ ಅಭಿಮತ ವ್ಯರ್ಥವಾಗುವುದಿಲ್ಲ. ಸ್ಥಾನಗಳಿಗಿಂತ ಉಮೇದುವಾರರ ಸಂಖ್ಯೆಯೇ ಅಧಿಕವಾಗಿರುವುದರಿಂದ ಅಲ್ಪಾಭಿಮತ ಪಡೆದವರನ್ನು ಆಯಾ ಪಕ್ಷ ನಾಯಕರೇ ಪಟ್ಟಿಯಿಂದ ತೆಗೆದು ಹಾಕಿ ಆ ಒಟ್ಟು ಅಭಿಮತವನ್ನು ಅನುಕ್ರಮವಾಗಿ ಹೆಚ್ಚು ಅಭಿಮತ ಪಡದವರಿಗೆ ಮತ್ತು ಒಂದು ನಿರ್ದಿಷ್ಟ ಓಟುಗಳ ಸಂಖ್ಯೆ (Quota) ಮೀರಿದವರಿಗೆ ಹಂಚುವರು.

ಅನುಪಾತಿಕ ಪ್ರಾತಿನಿಧ್ಯಪದ್ಧತಿಯಲ್ಲಿ ಪಕ್ಷಗಳು ವಿಶೇಷಜವಾಬ್ದಾರಿಯುತವಾಗಿರಬೇಕು. ಆಡಳಿತ ಕಾರ್ಯಸಿದ್ಧಿಗೆ ಸರಿಯಾದ ಬೆಂಬಲ

ಮತ್ತು ಪ್ರಯತ್ನಗಳು ಮುಖ್ಯ; ಅಂದರೆ ರಾಜಕೀಯದಲ್ಲಿ ಪಕ್ಷಸದಸ್ಯರು ತಮ್ಮ ಪಕ್ಷಕಾರ್ಯಗಳಿಗೂ ಮತ್ತು ಧ್ಯೇಯಕ್ಕೂ ವಿಧೇಯರಾಗಿರಬೇಕು. ಪಕ್ಷಗಳು ಸಂಕುಚಿತದೃಷ್ಟಿಯಿಂದ ಕೂಡಿರದೆ, ವಿಶಾಲತೆಯನ್ನು ಹೊಂದಿ, ಆಡಳಿತ ಕಾರ್ಯಗಳನ್ನು ನೆರವೇರಿಸುವುದರಲ್ಲಿ ನಿರತವಾಗಿರಬೇಕು. ಪಕ್ಷಗಳ ಧ್ಯೇಯ ಆದರ್ಶಾತ್ಮಕವಾಗಿರಬೇಕು; ಉದಾತ್ತ ವಿಚಾರಗಳಲ್ಲಿ ಏಕ ಮುಖವಾಗಿಯೂ, ತೀವ್ರವಾದ ಭಿನ್ನಾಭಿಪ್ರಾಯಗಳಿದ್ದ ಪಕ್ಷದಲ್ಲಿ ಬಹು ಮುಖವಾಗಿರಬೇಕು. ಮೂಲಾಧಾರವಾದ ಹಕ್ಕುಗಳನ್ನು ಕಾಪಾಡಲು ಮತ್ತು ರಾಷ್ಟ್ರಸರ್ಕಾರದಲ್ಲಿ ಉನ್ನತಿಯನ್ನು ಪಡೆಯಲು, ಪಕ್ಷಗಳು ತಮ್ಮ ಉಮೇದುವಾರರ ಸಂಖ್ಯೆಯನ್ನು ಆದಷ್ಟು ಹೆಚ್ಚಿಸುವರು. ಆದುದರಿಂದಲೇ ಕಾರ್ಮಿಕವರ್ಗದವರು, ವೈದಿಕರು, ವರ್ತಕರು, ಮತ್ತು ಇತರರು ಸದಸ್ಯತ್ವ ವನ್ನು ಹೊಂದಲು ಅವಕಾಶವಾಗುವುದು; ಮತ್ತು ಈ ಪ್ರತಿನಿಧಿಗಳಿಂದ ಕೂಡಿದ ಶಾಸಕಾಂಗಸಭೆಯು ಬಹುಮುಖ ಪ್ರಜಾಭಿಮತದ ಪ್ರತಿಬಿಂಬ ವಾಗುವುದು.

ಆದರೆ ಅನುಪಾತಿಕ ಪ್ರತಿನಿಧಿತ್ವ ಪದ್ಧತಿಯನ್ನು ಅಚರಣೆಗೆ ತರಲು ಕಷ್ಟ ಸಾಧ್ಯ. ವರಣಕ್ಷೇತ್ರಗಳ ವಿವರಣೆಯಿಂದ ಬಹಳ ಖರ್ಚು. ಈ ಸಂಕೀರ್ಣವಾದ ಪದ್ಧತಿಯನ್ನು ನಿರ್ವಹಿಸಲು ಸಾಕಾದಷ್ಟು ಶಕ್ತಿಯುಳ್ಳ ಅಭಿಮತಾಧಿಕಾರಿಗಳು ದೊರಕುವುದು ಸುಲಭವಲ್ಲ; ಅಭಿಮತವನ್ನು ಎಣಿ ಸುವುದು ಕಷ್ಟತರವಾದುದು. ಪಕ್ಷಗಳ ಹೆಮ್ಮೆ ಹೆಚ್ಚುವುದು, ವರಣ ಕ್ಷೇತ್ರಕ್ಕೂ ಸದಸ್ಯನಿಗೂ ಇರುವ ಸಂಬಂಧವು ಶಿಥಿಲವಾಗುವುದು. ಪಕ್ಷ ಸಭೆಗಳಲ್ಲಿ ರಾಷ್ಟ್ರೀಯ ಸಮಸ್ಯೆಗಳಿಗೆ ಪ್ರಶಸ್ತಿ ಕಡಿಮೆಯಾಗಿ ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚು ಗೌರವ ಲಭಿಸುವುದು. ಸಂಕುಚಿತಾಭಿಮತವುಳ್ಳ ಫಾಸಿಸ್ಟ್‌ನಂಥ ಪಕ್ಷಗಳು ಉಗ್ರಸ್ವರೂಪವನ್ನು ತಾಳಲು ಅವಕಾಶವಾಗು ವುದು. ಅದರಿಂದ ನೀತಿಯುತ ಸರ್ಕಾರಕ್ಕೆ ಅಡಚಣೆಯಾಗುವುದು.

## Professional and Occupational Representation

ವ್ಯವಹಾರಿಕ, ಸಾಮಾಜಿಕ, ಆರ್ಥಿಕ, ಔದ್ಯೋಗಿಕ, ಕಾರ್ಮಿಕ

ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಒದಗಿಸಿಕೊಟ್ಟರೆ ಆಧುನಿಕ ಪ್ರಾತಿನಿಧ್ಯಪದ್ಧತಿಯಲ್ಲಿನ ನ್ಯೂನ್ಯತೆಗಳ ಪರಿಹಾರ ಹೊಂದಬಹುದೆಂದು ಭಾವನೆ. ರಾಷ್ಟ್ರದ ಪ್ರತಿಯೊಂದು ವಿಭಾಗಗಳ, ಮತ್ತು ವರಣಕ್ಷೇತ್ರಗಳಾಧಾರದ ಮೇಲೆ ರಚಿಸಿದ ಪ್ರಾತಿನಿಧ್ಯ ಸಮರ್ಪಕವಾದುದರಿಂದ ಸಂಸ್ಥೆಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಪೋಲೆಂಡ್, ಇಟಲಿ,1 ಯುಗೊಸ್ಲಾವಿಯ ಮುಂತಾದ ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಜಾರಿಗೆ ಬಂದಿದೆ. ಪ್ರಜಾಪ್ರಭುತ್ವರಾಷ್ಟ್ರಗಳಲ್ಲಿಯೂ ವ್ಯವಹಾರಿಕ, ಔದ್ಯೋಗಿಕ, ವ್ಯವಸಾಯಿಕ ಮತ್ತು ಆರ್ಥಿಕ ಸಂಸ್ಥೆಗಳ ಸಮಿತಿಗಳು, ಕಾನೂನು ರಚನೆಯಲ್ಲಿ ಶಾಸಕಾಂಗಸಭೆಗಳೊಡನೆ ಸಹಕರಿಸುತ್ತವೆ.[2] ವೈಯಕ್ತಿಕ ಮತ್ತು ಸಾಂಘ್ಯ ಪ್ರಾತಿನಿಧ್ಯಗಳೆರಡರಿಂದಲೇ ಶಾಸಕಾಂಗವನ್ನು ಪ್ರಜಾಭಿಮತದ ಸಂಪೂರ್ಣ ಪ್ರತಿಬಿಂಬವನ್ನಾಗಿ ಮಾಡಬೇಕು; ಉದ್ಯೋಗ, ಸ್ವತ್ತು, ವ್ಯಾಪಾರ, ವ್ಯವಸಾಯ ಮತ್ತು ವಿಜ್ಞಾನ ಮತಗಳೂ ಕೂಡ ಶಾನಾಕಾಂಗದಲ್ಲಿ ಪ್ರಾತಿನಿಧ್ಯವನ್ನು ಪಡೆಯಬೇಕು. ರಾಷ್ಟ್ರದಲ್ಲಿ ಸುವ್ಯವಸ್ಥಿತವಾಗಿರುವ ಬಹುಸಂಖ್ಯಾತ ವರ್ಗಗಳ ಪ್ರಾತಿನಿಧ್ಯವೇ ನೈಜವಾದ ಪ್ರಜಾಪ್ರಭುತ್ವದ ಹೆದ್ದಾರಿ ಎಂದು ಪ್ರಸಿದ್ಧ ಸಮಾಜ ಸಾಮ್ಯವಾದಿಗಳಾದ ಜಿ. ಡಿ. ಹೆಚ್ ಕೋಲ್ ಮತ್ತು ಲಾಸ್ಕಿಯರು ಪ್ರತಿಪಾದಿಸಿದ್ದಾರೆ.[3] ವೈಯಕ್ತಿಕ, ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಮಸ್ಯೆಗಳ ಪರಿಹಾರದ ವಿಚಾರದಲ್ಲಿ ವ್ಯಕ್ತಿಯ ಅಭಿಪ್ರಾಯಕ್ಕೂ ಜನಾಭಿಪ್ರಾಯಕ್ಕೂ ಅಂತರವಿರುವುದು. ವ್ಯಕ್ತಿಯು ಹಿತವೆಂದು ಅರಿತಿದ್ದು ಸಂಘದೃಷ್ಟಿಯಿಂದ ಅಹಿತವಾಗಬಹುದು. ರಕ್ಷಣೆ, ಆರೋಗ್ಯ, ಶಿಸ್ತು ಮುಂತಾದ ರಾಷ್ಟ್ರಸಮಸ್ಯೆಗಳ ಪರಿಹಾರದಲ್ಲಿ ಸಂಸ್ಥೆಗಳ ಸಹಕರಣೆ ಅಗತ್ಯ. ಈ ದೃಷ್ಟಿಯಿಂದ ರಾಜಕೀಯ ಮತ್ತು

1. Mc Bain and Rogers. New Constitutions of Europe. Pl 40.
2. Herman Finer: Representative Government and a Parliament of Industry 1923
Bonn. The Crisis of European Democracy P. 75. 1925.
3. G. D. H. Cole. Social Theory, Ch. 8 1900.
Graham Walls: The Great Society, 1916.

ಸಾಮಾಜಿಕ ಸುಧಾರಣೆಗಳಾಗಿ ಶಾಸಕಾಂಗರಚನೆಯಲ್ಲಿ ರಾಷ್ಟ್ರದ ಸಮಸ್ತ ವರ್ಗ ಮತ್ತು ಸಂಸ್ಥೆಗಳಿಗೆ ಪ್ರಾತಿನಿಧ್ಯ ದೊರಕಿದ ಪಕ್ಷದಲ್ಲಿ ಸರ್ವಹಿತ ಸಾಧನೆಯಾಗುವುದೆಂದು ನಂಬಿಕೆ.

## ಪ್ರತಿನಿಧಿಯು ಪಾತ್ರವೇನು ?—Role of the Representative

ಶಾಸನದ ರಚನೆಯಲ್ಲಿ ಪ್ರತಿನಿಧಿಯ ಪಾತ್ರವೇನೆಂಬುದು ರಾಜಕೀಯದಲ್ಲಿ ಒಂದು ಜಟಿಲವಾದ ಪ್ರಶ್ನೆ. ಪ್ರತಿನಿಧಿಯು ತನ್ನ ವರಣಕ್ಷೇತ್ರಾಭಿಮತಸೂಚಕನಾಗಿ, ಶಾಸನರಚನೆಯಲ್ಲಿ ಕ್ಷೇತ್ರದ ಸಮಸ್ಯೆಗಳಿಗೆ ಹೆಚ್ಚು ಗಮನ ಕೊಡಬೇಕು ಎನ್ನುವುದು ಒಂದು ಮತ. ರಾಷ್ಟ್ರದ ಪ್ರತಿನಿಧಿಯೆಂದು ಭಾವಿಸಿ ಇತರ ಪ್ರತಿನಿಧಿಗಳೊಡನೆ ಸಹಕರಿಸಿ ಉದಾತ್ತ ಧ್ಯೇಯಸ್ಫೂರಿತನಾಗಿ ಸ್ಥಳೀಯ ಮತ್ತು ರಾಷ್ಟ್ರೀಯ ಪ್ರಶ್ನೆಗಳಲ್ಲಿ ತೊಡುಕುಂಟಾದಾಗ ರಾಷ್ಟ್ರಾಭ್ಯುದಯವನ್ನೆತ್ತಿಹಿಡಿಯಬೇಕು ಎನ್ನುವುದು ಎರಡನೆಯದು; ವರಣಕ್ಷೇತ್ರದಲ್ಲಿ ಬಹುಮತ ಹೊಂದಿದ ರಾಜಕೀಯ ಪಕ್ಷದ ಮನೋಗತವನ್ನು ತಿಳಿದು ಸ್ವಂತ ಅಭಿಪ್ರಾಯಗಳನ್ನು ಅದಮಿ ಪಕ್ಷದ ಆದೇಶಗಳನ್ನು ನಿರ್ವಂಚಿತನಾಗಿ ಭಕ್ತಿ ಶ್ರದ್ಧೆಗಳಿಂದ ಶಾಸಕಾಂಗಸಭೆಯಲ್ಲಿ ಸೂಚಿಸಿ ಸಾಧಿಸಬೇಕೆನ್ನುವುದು ಮೂರನೆಯ ಮತ; ಈ ತತ್ವವನ್ನು ಫ್ರೆಂಚ್ ಜನರು ಮಂಡಟ್ ಇಂಪರೆಟಿವ್ (Mandat Imperative) ಎಂದು ಕರೆಯುತ್ತಾರೆ, ಮತ್ತು ಈ ತತ್ತ್ವದ ಪ್ರಕಾರ ಪ್ರತಿನಿಧಿಯು ಟೆಲಿಫೋನಿನ ತಂತಿಯಂತೆಯೋ ಕಾಂಡ್ವಿಟ್ ಕೊಳಲಿನಂತೆಯೋ ಆಗುತ್ತಾನೆ.

## Representative is not a Delegate

ಆಧುನಿಕ ರಾಜಕೀಯ ಕ್ಷೇತ್ರಗಳಲ್ಲಿ ಆದಿಷ್ಟಪ್ರತಿನಿಧಿಗೆ ಮನ್ನಣೆಯಿಲ್ಲ. ಮತದಾತರ ಅಭಿಪ್ರಾಯ ಆಕಾಂಕ್ಷೆಗಳನ್ನು ಪ್ರತಿನಿಧಿಯು ನೆರವೇರಿಸಬೇಕೆಂಬುದು ಮುಖ್ಯವಾದ ತತ್ವ. ಆದರೆ ವರಣದಾತರ ಆದೇಶವೇನು, ಯಾವ ಸಾಧನೆಗಳಿಂದ ಅವರ ಉದ್ದೇಶಗಳನ್ನು ನಿರ್ವಹಿಸಬೇಕು, ಮತ

ದಾತರ ಅಭಿಮತವನ್ನು ಹೇಗೆ ಕೂಡಿಸಬೇಕು, ಸ್ವಾರ್ಥಕ್ಕಿಂತಲೂ ಸಾರ್ವಜನಿಕ ಹಿತ ಮೇಲು ಎಂಬ ಭಾವನೆಯನ್ನು ಕ್ಷೇತ್ರಪ್ರಶ್ನೆಗಳಲ್ಲಿ ಹೇಗೆ ತಿಳಿಯಬೇಕು.—ಇವೇ ಮುಂತಾದ ವಿಷಯಗಳಲ್ಲಿ ಒಂದು ಸಾರ್ವಜನಿಕ ದೃಷ್ಟಿ ಸಾಧ್ಯವಿಲ್ಲ. ಅನೇಕ ಗಮನಾರ್ಹವಾದ ತತ್ವಗಳಿಂದ ಕೂಡಿದ ಪ್ರಸ್ತಾವನೆಗಳಲ್ಲಿ ಮತದಾತನಿಗೆ ಸಂಪೂರ್ಣ ಅಜ್ಞತೆಯಿರುವುದರಿಂದ ಅಂತ್ಯದಲ್ಲಿ ಸ್ಥಳೀಯಪಕ್ಷ ನಾಯಕನ ಉದ್ದೇಶ ಮತ್ತು ವ್ಯವಸ್ಥೆಗಳನ್ನು ಮತದಾತರು ಒಪ್ಪಬೇಕಾಗುವುದು. ಅಂದರೆ ಪ್ರತಿನಿಧಿಯು ಪಕ್ಷದ ಮತ್ತು ಪಕ್ಷನಾಯಕರ ಉದ್ದೇಶವನ್ನೇ ತಮ್ಮ ಉದ್ದೇಶವಾಗಿ ಅನುಕರಣ ಮಾಡಬೇಕಾಗುತ್ತದೆ. ಮತದಾತರಲ್ಲಿ ಏಕರೀತಿಯಾದ ಅಭಿಪ್ರಾಯವಿಲ್ಲದಿರುವುದರಿಂದಲೂ, ಇದ್ದರೂ ಅದನ್ನು ತಿಳಿಯಲು ಸುಲಭಸಾಧ್ಯವಲ್ಲವಾದುದರಿಂದಲೂ ಪ್ರತಿನಿಧಿಯು ಮತದಾತರ ಯಾವ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು ಎಂಬ ಪ್ರಶ್ನೆ ಏಳುವುದು. ಇಂತಹ ಗಹನ ವಿಚಾರಗಳಲ್ಲಿ ಪ್ರತಿನಿಧಿಗಳು ಮತದಾರನ 'ಆಜ್ಞೆ' ಯನ್ನು ನಡೆಸಬೇಕೆಂದು ಅವರನ್ನು ನಿರ್ಬಂಧಿಸಿದರೆ ನೀರಿನಲ್ಲಿ ತೇಲುವ ಹಲಗೆಯಂತಾಗಿ ಪಕ್ಷ ಮತ್ತು ರಾಷ್ಟ್ರ ದೌರ್ಬಲ್ಯಕ್ಕೆ ಕಾರಣರಾಗುತ್ತಾರೆ.

ಪ್ರತಿನಿಧಿಯು ರಾಷ್ಟ್ರಸ್ಥಿತಿಗಳನ್ನು ತಿಳಿದುಕೊಂಡು ತನ್ನ ವಿವೇಚನಾಶಕ್ತಿ, ಪರಿಜ್ಞಾನಗಳಿಂದ ವಿಮರ್ಶೆಮಾಡಿ ರಾಷ್ಟ್ರಾಭ್ಯುದಯಕ್ಕೆ ಯೋಗ್ಯವಾದ ಅಭಿಮತವನ್ನು ಸೂಚಿಸಲು ಸ್ವಾತಂತ್ರ್ಯವನ್ನು ಪಡೆದಿರಬೇಕು. ಮತದಾತರ ಇಷ್ಟಾನಿಷ್ಟಗಳನ್ನು ಆಗಾಗ್ಗೆ ತಿಳಿದು ಅನೇಕ ವಿಚಾರಗಳಲ್ಲಿ ಅವರಿಗೆ ಪ್ರಜ್ಞೆಯನ್ನುಂಟುಮಾಡುವ ಮತ್ತು ತಪ್ಪು ತಿಳುವಳಿಕೆಗಳನ್ನು ತಿದ್ದುವ ಅವಕಾಶ ಪಡೆದಿರಬೇಕು. ಮತದಾತರು ಚುನಾಯಿಸಿ ಶಾಸಕಾಂಗ ಸಭೆಗೆ ಕಳುಹಿಸಿದ ಪಕ್ಷದಲ್ಲಿ ಪ್ರತಿನಿಧಿಯು ಅವರ ಭೃತ್ಯನಾಗುವುದಿಲ್ಲ.[1] ಶಾಸಕಾಂಗಸಭೆಯು ಮತದಾತರ ಪ್ರತಿಬಿಂಬವಾದುದರಿಂದ, ಸಭೆಯ ರಚನೆಯಾಗಿ ಸದಸ್ಯರಿಂದ ಕೂಡಿದ ಕೂಡಲೇ ಮತದಾತರ ಜವಾ

1 J S Mill Representative Goveinment P P 228

ಬ್ದಾರಿಯು ಪ್ರತಿನಿಧಿಗಳ ಯೋಗಕ್ಷೇಮವನ್ನು ಕಾಪಾಡುವುದರಲ್ಲಿ ಐಕ್ಯವಾಗುತ್ತದೆ. ಸದಸ್ಯನಾದಕೂಡಲೆ ಪ್ರತಿನಿಧಿಯು ರಾಷ್ಟ್ರಹಿತಸಾಧಕವೆಂದು ತಿಳಿದಿದ್ದನ್ನು ಸ್ವತಂತ್ರ್ಯದಿಂದ ಆಚರಿಸಬಹುದು. ಮತ್ತು ಸ್ವಯಂಪ್ರೇರಣೆಗಾಗಲಿ, ಸ್ವಾತಂತ್ರ್ಯಾಚರಣೆಗಾಗಲಿ ಮತದಾತರಿಗೆ ಅಧೀನನಾಗಬೇಕಾಗಿಲ್ಲ.[1] ಅಧಿಕಾರವನ್ನೂ ಉದ್ದಿಷ್ಟವಾದ ಕರ್ತವ್ಯವನ್ನು ಬಿಟ್ಟು ಬೇರೆ ಕರ್ತವ್ಯಗಳನ್ನು ವಹಿಸುವಾಗ ಮಾತ್ರ ಮತದಾತರ ಅನುಮತಿಯನ್ನು ಪಡೆಯಬೇಕಾಗುವುದು; ಆನಿಯಮವಿಲ್ಲದಿದ್ದ ಪಕ್ಷದಲ್ಲಿ ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ದುರುಪಯೋಗಪಡಿಸಬಹುದೆಂಬ ಭೀತಿಯಿದೆ. ಪರಕ್ಷೇತ್ರದ ಅಭಿಮತಕ್ಕೂ ತನ್ನ ಅಭಿಪ್ರಾಯಕ್ಕೂ ಹೆಚ್ಚು ಅಂತರವಿದ್ದ ಪಕ್ಷದಲ್ಲಿ ಪ್ರತಿನಿಧಿಯು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬಹುದು.

## ಕೆಳಗಿನ ಸಭೆಗಳ ಕರ್ತವ್ಯಕಲಾಪಗಳು

ಸಾರ್ವತ್ರಿಕ ಚುನಾವಣೆಗಳು ಮುಗಿದ ಮೇಲೆ ಸದಸ್ಯರಾಗಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ರಾಜಧಾನಿಯಲ್ಲಿಯೋ ಅಥವ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿಯೋ ಸಭೆ ಸೇರುವರು. ರಾಷ್ಟ್ರ ಮುಖ್ಯರಲ್ಲೊಬ್ಬರನ್ನು ಸಭಾಪತಿಯನ್ನಾಗಿ ನೇಮಿಸುವರು. ಇವನನ್ನು ಸ್ಪೀಕರ್ ಎಂದು ಕರೆಯುವರು. ಇವನು ಸಭಾನಿಯಮ ಮತ್ತು ಸಂಪ್ರದಾಯಗಳನ್ನು ತಪ್ಪದೆ ನಡೆಸಬೇಕು, ಚರ್ಚೆಯಾಗುವ ರೀತಿ, ನಿಶ್ಚಿತಕ್ರಮ ಮತ್ತು ಮಸೂದೆಗಳನ್ನು ರಾಜಧರ್ಮವನ್ನಾಗಿ ಮಾಡುವ ವಿಧಾನಗಳನ್ನೂ ಅಸಂಬದ್ಧ ಪ್ರಲಾಪ ಮತ್ತು ಪುನರುಕ್ತಿಗಳಿಲ್ಲವಾದ ವಿವಾದಗಳನ್ನು ನಡೆಸುವ ಕ್ರಮವನ್ನು ಜಾರಿಗೆ ತರಬೇಕು. ಪಕ್ಷ ಪ್ರತಿಪಕ್ಷಗಳು ನಿಶ್ಚಿತವಾಗುವ ವಿಷಯದಲ್ಲಿ ಸಮಾನ ಅಭಿಮತವನ್ನು ಹೊಂದಿದರೆ, ಪಕ್ಷಪಾತರಹಿತ ಬುದ್ಧಿಯುಳ್ಳ

1. Edmund Burke Speeches and Writings

"The Representative should be a pillar of State, not a weather-cock on the top of the edifice.. to indicate the shiftings of every fashionable gale"

ವನೂ, ರಾಜಕೀಯ ಪಕ್ಷಗಳ ಅಭಿಪ್ರಾಯಗಳಲ್ಲಿ ಉದಾಸೀನನೂ ಆದ ಸಭಾಧ್ಯಕ್ಷನು ತನ್ನ ಅಭಿಮತವನ್ನು ಸೂಚಿಸಿ ವಿಷಯ ನಿಷ್ಕರ್ಷೆಯನ್ನು ಮಾಡುವನು. ಸಭಾ ಪೋಲಿಸ್ 'ಸಾರ್‌ಜಂಟ್' ಗಳಿಗೆ ಒಡೆಯನಾಗಿ ಕ್ರಮತಪ್ಪಿದವರ ದುರಾಗ್ರಾಹಿಗಳ ದಂಡಾಧಿಕಾರಿಯಂತೆ ಪ್ರಜ್ಞೆಯನ್ನು ಕೊಡುವನು.

## The House of Commons: Proceedure

ಕೆಳಗಿನ ಶಾಸನ ಸಭೆಗಳ ಕಾರ್ಯಗಳು ಸಾಧಾರಣವಾಗಿ ಎಲ್ಲಾ ರಾಷ್ಟ್ರಗಳಲ್ಲಿಯೂ ಏಕರೀತಿಯಾಗಿರುವವು. ಇಂಗ್ಲೆಂಡಿನ ಪಾರ್ಲಿಮೆಂಟಿನ ರೀತಿಯು ಅಲಿಖಿತವೂ, ಸಂಪ್ರದಾಯಪರವೂ ಚಾರಿತ್ರಿಕ ವಿಕಾಸದ ಪ್ರತಿಫಲವೂ ಆಗಿದೆ. ರಾಜಭಾಷಣವಾದ ನಂತರ ಸಭೆಯ ಕಾರ್ಯಕ್ರಮಗಳು ಆರಂಭವಾಗುವುವು. ಸಭಾಪತಿಯು ಮಂತ್ರಿಮಂಡಲದ ಪಕ್ಷವನ್ನು ತನ್ನ ಬಲಗಡೆಗೂ ಪ್ರತಿಪಕ್ಷವನ್ನು ಎಡಗಡೆಗೂ ಕೂರಿಸಿ ಮಂತ್ರಿಮಂಡಲದ ಮುಖ್ಯಕಾರ್ಯಗಳನ್ನು ಸಭಿಕರ ಅವಗಾಹನಗೆ ತಂದು ಅವುಗಳ ಪರ ಪ್ರಶ್ನೋತ್ತರಗಳಿಗೆ ಅವಕಾಶಕೊಡುವನು. ಅದರ ತರುವಾಯ ವಿಷಯ ಪ್ರತಿಪಾದನೆ ಮತ್ತು ಅವುಗಳ ನಿಶ್ಚಯ, ಮಸೂದೆಗಳ ವಿಮರ್ಶೆಯೇ ಬಹು ಮುಖ್ಯವಾದ ಕಾರ್ಯ. ಮಂತ್ರಿಮಂಡಲದವರು ಮುಖ್ಯವಾಗಿ, ಸಾಮಾನ್ಯ ಸದಸ್ಯರೂ ಸ್ವಂತ ಮಸೂದೆಗಳನ್ನು ಸೂಚಿಸಬಹುದು. ಮಸೂದೆಯ ಸೂಚನೆ, ಅದರ ಅನುಮೋದನೆ, ವಿರೋಧ ಸೂಚನೆಯ ಅನುಮೋದನೆ ಇವು ಮಸೂದೆಗಳ ವಿಮರ್ಶೆಯಲ್ಲಿ ಕ್ರಮದ ಮೊದಲನೆಯ ಮೆಟ್ಟಲು. ಅನಂತರ ವಿವಾದಗಳಿಗಾಗಿ ಸಭಾವಿಭಜನೆಯಾಗಿ, ಮಸೂದೆಯ ಪಕ್ಷ ಪ್ರತಿಪಕ್ಷದವರ ಸಂಖ್ಯೆಯನ್ನೂ ಆಯಾ ಸಂಖ್ಯಾಪೂರಕನು (Whip) ಎಣಿಸಿ ಸಭೆಗೆ ತಿಳಿಸುವನು. ವಿರೋಧಿಗಳ ಸಂಖ್ಯೆಯು ಹೆಚ್ಚಾದರೆ ಮಸೂದೆಯು ಬಿದ್ದುಹೋಗುವುದು. ಮಸೂದೆಯು ಬಹುಮತದಿಂದ ಒಪ್ಪಿಗೆಯನ್ನು ಪಡೆದರೆ ಆಗ ಸ್ಪೀಕರ್‌ರಹಿತವಾದ ಸಭೆಯು ದೊಡ್ಡ

ಸಮಿತಿಯಂತೆ ಸ್ವರೂಪ ಹೊಂದಿ ಸ್ವಾತಂತ್ರ್ಯದಿಂದ ಮಸೂದೆಯನ್ನು ವಿಮರ್ಶಿಸಿ ತಿದ್ದುಪಡಿಗಳನ್ನು ಸೂಚಿಸುವುದು. ಕೂಲಂಕಷವಾಗಿ ವಿಮರ್ಶೆಯಾಗಿ ಮಾರ್ಪಾಟು ಹೊಂದಿದ ಮೇಲೆ ಮಸೂದೆಯು ಮೂರನೆಯ ಮೆಟ್ಟಿಲನ್ನು ಮುಟ್ಟುವುದು. ಅಲ್ಲಿ ಬಹುಮತ ಬೆಂಬಲ ದೊರಕಿದರೆ ಶಾಸನವಾಗಿ ಪರಿಣಮಿಸುವುದು. ಆರ್ಥಿಕ ಉಪಚಾರಗಳಲ್ಲಿ ಕೆಳಗಿನ ಸಭೆ ಹೆಚ್ಚು ಅಧಿಕಾರ ಪಡದಿದೆ. ಹಣ ಕಾಸಿನ ವಿಚಾರಗಳನ್ನು ಸಚಿವರೇ ಸೂಚಿಸುವರಾದರೂ ಸೂಚಿಸುವ ಮುನ್ನ ಸಭೆಯ ಅನುಮತಿಯನ್ನು ಪಡೆಯಬೇಕು. ನಾಲ, ತೆರಿಗೆ ಲೆಕ್ಕಾಚಾರಗಳು ಮತ್ತು ತನಿಖೆಕ್ರಮಗಳು— ಇವುಗಳಿಗೆ ಸಂಬಂಧಿಸಿದ ಶಾಸನಗಳನ್ನು ಸಮ್ಮಿಳಿತ ಸಮಿತಿಗಳು ನಿರ್ಣಯಿಸಿರುವುವು. 'ಸಪ್ಲೈ' ಸಮಿತಿಯ ಮತ್ತು 'ವೇಸ್ ಮತ್ತು ಮೀನ್ಸ್' ಸಮಿತಿಗಳು ಅಂದಾಜಿನ ವ್ಯಯದ ರೀತಿಯನ್ನು ವಿಮರ್ಶಿಸಿ ಯಾವಸಂಬಂಧಗಳ ಬಾಬತ್ತಿನಿಂದ ಹಣ ಕಾಸುಗಳು ಬರುವ ವ್ಯವಸ್ಥೆಯನ್ನು ಮಾಡಬೇಕೆಂಬುದನ್ನು ನಿಷ್ಕರ್ಷೆ ಮಾಡುವುವು. ಸಪ್ಲೈ ಸಮಿತಿಯು ವ್ಯಯದ ರೀತಿಯನ್ನೂ, ವೇಸ್ ಮತ್ತು ಮೀನ್ಸ್ ಕಮಿಟಿಯು ಆಯದ ಹುಟ್ಟುವಳಿಯ ರೀತಿಯನ್ನೂ ಸ್ಪಷ್ಟಪಡಿಸುವುವು. ಕೆಲವು 'ಅಪ್ರೋಪ್ರಿಯೇಷನ್' ಆಕ್ಟಗಳು, ಸಂಶೋಧನೆಯಿಂದಾಗಲಿ, ಹಿಂದಿನ ಕಾನೂನುಗಳನ್ನು ರದ್ದುಗೊಳಿಸುವುದರಿಂದಾಗಲಿ, ಸಪ್ಲೈ ಸಮಿತಿಯಿಂದ ನಿರ್ಣಯಿಸಲ್ಪಟ್ಟ ಹಣವನ್ನು ವ್ಯಯಮಾಡುವ ವಿಧಾನವನ್ನು ನಿರ್ಧರಿಸುತ್ತವೆ. ಕೆಳಗಿನ ಸಭೆಯಿಂದ ಅಂಗೀಕಾರ ಮಾಡಲ್ಪಟ್ಟ ಹಣ ಕಾಸಿನ ಮಸೂದೆಗಳನ್ನು ಮೇಲಿನ ಸಭೆಗಳು ನಿರಾಕರಿಸಿದರೂ ಕಾನೂನಾಗಿ ಪರಿಣಮಿಸುವುವು. ಸಮಿತಿಗಳು ಆಡಳಿತಾಂಗಗಳಿಗೆ ಬೇಕಾದುದನ್ನು ವಿಶದಪಡಿಸುವುವು; ವಿಷಯಗಳಲ್ಲಿ ಬದಲಾವಣೆ ಮತ್ತು ಸುಧಾರಣೆಗಳನ್ನು ಶಿಫಾರಸ್ಸು ಮಾಡುವುವು. ಇವುಗಳ ವರದಿಯನ್ನು ಸಾಧಾರಣವಾಗಿ ಇಡೀ ಸಭೆಯು ಒಪ್ಪುವುವು.

ಕೆನಡ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಡೊಮಿನಿಯನ್‌ಗಳು ಇಂಗ್ಲೆಂಡ್ ಪಾರ್ಲಿಮೆಂಟ್ ಸಭೆಯ ಪದ್ಧತಿಯನ್ನು ಅನುಸರಿಸುವುದರಿಂದ,

ಸಭಾಧ್ಯಕ್ಷನನ್ನು ಸಭಿಕರು ಚುನಾಯಿಸುವುದರಿಂದಲೂ ಇಲ್ಲಿಯ ಶಾಸನ ಸಭೆಯ ಕ್ರಮವು ಏಕರೀತಿಯಾಗಿದೆ. ಸಭೆಯಲ್ಲಿ ಸಮಾನ ಛಂದೋಬಲವಾದಪಕ್ಷದಲ್ಲಿ ಸ್ವಂತ ಅಭಿಮತವನ್ನು ಸೂಚಿಸಿ ಅಧ್ಯಕ್ಷನು ವಿಷಯ ನಿಷ್ಕರ್ಷೆಮಾಡಬಹುದು. ಮೂರುತಿಂಗಳು ಸಭೆಗೆ ಬರದಿದ್ದರೆ ಸದಸ್ಯರು ಸ್ಥಾನಗಳನ್ನು ಕಳೆದುಕೊಳ್ಳುವರು. ಆಸ್ಟ್ರೇಲಿಯಾ ರಾಷ್ಟ್ರದಲ್ಲಿ ಕೆಳಗಿನ ಸಭೆಗೆ ಶಾಸನ ರಚನೆಯಲ್ಲಿ ಹೆಚ್ಚು ಅಧಿಕಾರವಿದ್ದರೂ ಆಯವ್ಯಯ ಪಟ್ಟಿಯನ್ನು ತೆರಿಗೆ ಮತ್ತು ಇತರ ಆರ್ಥಿಕನಿರ್ಣಯಗಳನ್ನು ಸೂಚಿಸಲು ಶಕ್ತಿಯಿಲ್ಲ.

ಸಂಯುಕ್ತರಾಷ್ಟ್ರದಲ್ಲಿ ಅರವತ್ತಕ್ಕೆ ಮೇಲ್ಪಟ್ಟು ಸಮಿತಿಗಳಿವೆ. ಹಣಕಾಸಿನ ವರಮಾನ ನಿಷ್ಕರ್ಷೆಯ ಸಮಿತಿಗಳು ದೇಶದ ಒಳಾಡಳಿತ ವಿಷಯಗಳನ್ನು, ಸಮಿತಿ ಮತ್ತು ಸ್ಥಾಯಿ ಸಮಿತಿಗಳು ವಿದೇಶಾಂಗ ನೀತಿಗಳನ್ನು ಪ್ರತಿಪಾದಿಸುವುವು. ಕಾರ್ಯಾಂಗವು ಸ್ವತಂತ್ರವಾಗಿರುವುದರಿಂದ ಮಸೂದೆಗಳ ನಿರ್ಣಯ, ಶಾಸನ ರಚನೆ, ಆಯವ್ಯಯಗಳ ತನಿಖೆ ಮುಂತಾದ ಕಾರ್ಯಗಳನ್ನು ಸಮಿತಿಗಳು ಮಾಡುವುವು.

ಭಾರತದ ಶಾಸನ ಸಭೆಯಲ್ಲಿ ನಿರ್ದಿಷ್ಟವಾದ ನಿಯಮಗಳಿವೆ; ಶಾಸಕಾಂಗಕ್ಕೆ ಶಾಸನರಚನಾಧಿಕಾರ, ಸಂಶೋಧನಾಧಿಕಾರ, ಮತ್ತು ರದ್ದುಗೊಳಿಸುವ ಅಧಿಕಾರ ಇವು ಸೇರಿವೆ. ರಾಷ್ಟ್ರಪ್ರತಿನಿಧಿಯಿಂದ ರಚಿಸಿದ ಕಾನೂನುಗಳನ್ನು ಒಪ್ಪಬೇಕು. ರಾಷ್ಟ್ರಪ್ರತಿನಿಧಿಯ ಸಮಿತಿಗೆ ಸಭೆಯನ್ನು ಸೇರಿಸುವ, ಮುಂದೆ ಹಾಕುವ ಮತ್ತು ರದ್ದುಗೊಳಿಸುವ ಅಧಿಕಾರವಿದೆ. ಸದಸ್ಯರಿಂದ ಸೂಚಿಸಲ್ಪಟ್ಟ ವಿಷಯಗಳು ಅಧ್ಯಕ್ಷನ ಅನುಮತಿಯನ್ನು ಪಡೆದು ಸಭೆಯ ಅವಗಾಹನಗೆ ಬರುವುವು. ನಿಲುವಳಿ ಸೂಚನೆಗೆ ಅಧ್ಯಕ್ಷನ ಅನುಮತಿಬೇಕು, ವಿರುದ್ಧವಾದುದನ್ನು ತಂದ ಪಕ್ಷದಲ್ಲಿ ಹಿಂದಕ್ಕೆ ತೆಗೆದುಕೊಳ್ಳಬೇಕು. ಶಾಂತಿಗೆ ಭಂಗತರುವ ಸದಸ್ಯರನ್ನು ಸಭೆಗೆ ಬರದ ಹಾಗೆ ಅಧ್ಯಕ್ಷನು ತಡೆಯಬಹುದು. ಸಾಮಾನ್ಯ ಮತ್ತು ಆರ್ಥಿಕ ಮಸೂದೆಗಳಿಗೆಲ್ಲಾ ರಾಷ್ಟ್ರ ಪ್ರತಿನಿಧಿಯ ಅನುಮತಿ ಮುಖ್ಯ. ಸಭೆಯ ಕಾರ್ಯ

ಕ್ರಮ ಮತ್ತು ನಿಯಮಗಳನ್ನು ತಾನೇ ಮಾಡುವುದರಿಂದ ಪ್ರಶ್ನೆಗಳನ್ನು ಸಭಾ ಅಧ್ಯಕ್ಷನ ಅಪ್ಪಣೆಯಿಲ್ಲದೆ ಕೇಳಲಾಗದು. ಖಾಸಗಿ ಸದಸ್ಯರ ಮಸೂದೆ ಗಳಿಗೆ ಮನ್ನಣೆಯಿದೆ. ಆದರೆ ಇವರ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವುದರ ಮೊದಲು ರಹಸ್ಯದಲ್ಲಿ ವಿಮರ್ಶಿಸಲ್ಪಡುವುವು.

ಶಾಸನ ಸಭೆಯಲ್ಲಿ ಸಲೆಕ್ಟ ಸಮಿತಿ ( Select Committee ) ಜಾಯಿಂಟ್ ಸಮಿತಿ ಮತ್ತು (Public Accounts Committee), ಪಬ್ಲಿಕ್ ಅಕೌಂಟ್ಸ್ ಸಮಿತಿ ಎಂದು ಮೂರು ವಿಧವಾದ ಸಮಿತಿಗಳಿವೆ. ಮೇಲಿನ ಮತ್ತು ಕೆಳಗಿನ ಸಭೆಗಳು ನಿರ್ಧರಿಸಿದ ಮಸೂದೆಗಳನ್ನು ಸಲೆಕ್ಟ್ ಸಮಿತಿಯು ವಿಮರ್ಶಿಸುವುದು; ಜಾಯಿಂಟ್ ಸಮಿತಿ ಮತ್ತು ಅಕೌಂಟ್ಸ್ ಸಮಿತಿಯಲ್ಲಿಯೂ ಸದಸ್ಯರ ಜೊತೆಯಲ್ಲಿ ರಾಷ್ಟ್ರಾಧ್ಯಕ್ಷ ಪ್ರತಿನಿಧಿಯಿಂದ ನೇಮಿಸಲ್ಪಟ್ಟ ಸದಸ್ಯರಿರುವರು. ಲೆಖ್ಖಾಚಾರ ಮತ್ತು ಆರ್ಥಿಕ ವಿಚಾರ ಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸುವುದು ಅಕೌಂಟ್ ಸಮಿತಿಯ ಮುಖ್ಯ ಕೆಲಸ. ಭಾರತದ ಶಾಸನ ಸಭೆಗಳಲ್ಲಿ ಪ್ರತಿನಿಧಿಗೆ ಹೆಚ್ಚು ಹಕ್ಕು ಬಾಧ್ಯತೆಗಳಿವೆ. ಅವನು ನಿರ್ದಿಷ್ಟ ಕಾಲದಲ್ಲಿ ಸಭಾಧ್ಯಕ್ಷನ ಅನುಮತಿ ಯನ್ನು ಪಡೆದು ಮಸೂದೆಗಳನ್ನು ಸಭೆಯಲ್ಲಿಡಬೇಕು.

## ಶಾಸಕಾಂಗದ ಅಧಿಕಾರಗಳು

## Functions of Lower Chambers

ಶಾಸನಸಭೆಗಳು ಎಲ್ಲಾ ರಾಷ್ಟ್ರಗಳಲ್ಲಿಯೂ ಶಾಸನರಚನೆ, ಆಡಳಿ ತಾಂಗಗಳ ಹತೋಟಿ ರಾಷ್ಟ್ರನಿಯಮಗಳ ಸೃಷ್ಟಿ ಮುಂತಾದ ಅಧಿಕಾರ ವನ್ನು ಗಳಿಸಿದೆ. ರಾಜ್ಯಾಡಳಿತದ ಕಾರ್ಯದಲ್ಲಿ ನಿಯಂತ್ರಣಾಧಿಕಾರ, ರಾಷ್ಟ್ರ ನಿಯಮಗಳನ್ನು ಪುನರಾವರ್ತಿಸುವುದು, ಸಾಮಾಜಿಕ ಜೀವನ ಮೂಲಾಧಾರವಾದ ತತ್ವಗಳ ಪರಿಶೀಲನೆ, ಅವುಗಳನ್ನು ವಾದವಿವಾದ ಗಳಿಂದ ತಿರ್ಮಾನಿಸಿ, ನಿಶ್ಚಿತವಾದ ಅಭಿಪ್ರಾಯಗಳನ್ನು ಕಾರ್ಯಕಾರಿಯಾಗಿ ಮಾಡುವುದು, ಆಯವ್ಯಯ ಏರ್ಪಾಟುಗಳನ್ನು ಮಾಡುವುದು, ಇವು ಕೆಲವು ಶಾಸನ ಸಭೆಗಳ ಅಧಿಕಾರ.

## House of Commons; its Functions

ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯು ಅನೇಕ ಶತಮಾನಗಳಿಂದ ಕ್ರಮವಾಗಿ ಪ್ರಗತಿ ಹೊಂದಿ ಸರ್ವಾಧಿಕಾರವನ್ನು ಪಡೆದುಕೊಂಡು ಸರ್ಕಾರವನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದೆ. ಕಾನೂನನ್ನು ರಚಿಸುವುದು ಸಂಶೋಧಿಸುವುದು, ಉಪನಿವೇಶಗಳ ಮತ್ತು 'ಮಾಂಡೇಟೆಡ್' (Mandated) ಪ್ರದೇಶಗಳನುಗುಣವಾಗಿ ಶಾಸನ ರಚಿಸಿ ಅವುಗಳನ್ನು ಕಾಪಾಡುವುದರ ಅಧಿಕಾರವು ಪಾರ್ಲಿಮೆಂಟ್ ಸಭೆಗೆ ಸೇರಿದೆ. ರಾಷ್ಟ್ರವು ಮೂಲಧಾರ ಬದಲಾವಣೆಗಳನ್ನು ಮಾಡುವ ಪರಮಾಧಿಕಾರವನ್ನು ಪಡೆದಿದೆ. ಪಾರ್ಲಿಮೆಂಟ್ ಸಭೆಗೆ ಮೂಲ ಶಾಸನ ನಿಯಮಗಳು (Fundamental Law), ಮತ್ತು ಸಾಮಾನ್ಯನಿಯಮಗಳ (Ordinary Law) ರಚನೆ ಮತ್ತು ಮಾರ್ಪಾಟನಲ್ಲಿ ಏಕರೀತಿಯಾದ ಅಧಿಕಾರವನ್ನು ಹೊಂದಿದೆ. ಈ ವಿಧವಾದ ರಾಷ್ಟ್ರಾಂಗಗಳ ಬದಲಾವಣೆ ಮೂಲಾಧಾರ ಹಕ್ಕುಗಳ ವಿವರಣೆ, ಸಂಸ್ಥೆಗಳ ಪರಿವರ್ತನೆ ಮುಂತಾದ 'ಕಾನ್ಸ್ಟಿಟುಯಂಟ್' 'Constituent' ಅಧಿಕಾರವನ್ನೂ ಪಡೆದಿರುವುದರಿಂದ ಇದನ್ನು 'Constituent Assembly' ಎಂದು ಕರೆಯುತ್ತಾರೆ. ಸಂಯುಕ್ತರಾಷ್ಟ್ರ ಸಭೆಗಳಾದರೋ ಸಾಮಾನ್ಯಶಾಸನ ರಚನಾಧಿಕಾರವನ್ನು ಮಾತ್ರ ಹೊಂದಿವೆ. ರಾಷ್ಟ್ರವಿಧಾನ ನಿಯಮಗಳ ಗೋಜಿಗೆ ಹೋಗುವ ಹಾಗಿಲ್ಲ. ಪಾರ್ಲಿಮೆಂಟ್ ಸಭೆಯು ರಾಷ್ಟ್ರದ ಉತ್ತರಾಧಿಕಾರಿಯನ್ನೂ ಬದಲಾಯಿಸುವ ಅಧಿಕಾರವನ್ನೂ ವ್ಯಕ್ತಿ ಆಸ್ತಿ ಪಾಸ್ತಿಗಳ, ರಾಷ್ಟ್ರೀಯ ಮತಗಳ ತೊಡಕುಗಳನ್ನು ಬಿಡಿಸುವ ಹಕ್ಕನ್ನೂ ಪಡೆದಿದೆ. ಈ ವಿಶೇಷಾಧಿಕಾರಕ್ಕೆ ವಿಚಿತ್ರವಾದ ಸಾಂಪ್ರದಾಯಕ ಪದ್ಧತಿಯೇ ಮೂಲಕಾರಣ. ಪಾರ್ಲಿಮೆಂಟ್ ಸಭೆಯ ಪ್ರತಿನಿಧಿಗಳು ಚುನಾಯಿಸಲ್ಪಟ್ಟ ಮೇಲೆ ಪ್ರತಿನಿಧಿಗಳನ್ನು, ಧರ್ಮ ಲೋಪಕ್ಕೆ ಕಾರಣರು ಎಂಬ ತತ್ವಾನುಸಾರವಾಗಿ ಅವರನ್ನು ನಿಯಂತ್ರಣದಲ್ಲಿಡಲಾರರು; ಪಾರ್ಲಿಮೆಂಟ್ ಸಭೆಯನ್ನು ರದ್ದುಗೊಳಿಸುವ ಅಧಿಕಾರವಿಲ್ಲ; ನ್ಯಾಯಾಂಗಕ್ಕೂ ಪಾರ್ಲಿಮೆಂಟ್ ಸಭೆಯ ಪರಮಾಧಿಕಾರ

ವನ್ನು ಪರಿಶೀಲಿಸುವ ಅಧಿಕಾರವಿಲ್ಲ. ಸೈದ್ಧಾಂತಿಕವಾಗಿ ಅಧರ್ಮಗಳನ್ನು ಧರ್ಮವೆಂತಲೂ, ಅನ್ಯಾಯಗಳನ್ನು ನ್ಯಾಯವೆಂತಲೂ ಆಚರಿಸುವ ಅಧಿಕಾರ ಪಾರ್ಲಿಮೆಂಟಿನದು. ಆದರೆ ಆ ರೀತಿಯಾಗಿ ಯಾವಾಗಲೂ ವರ್ತಿಸಲು ಸಾಧ್ಯವಿಲ್ಲ. ಪ್ರಜೆಗಳು ಅನ್ಯಾಯರೀತಿಯಲ್ಲಿ ವರ್ತಿಸಿದರೆ ಅವರನ್ನು ಶಿಕ್ಷೆ ಮೂಲಕ ನ್ಯಾಯಬದ್ಧರನ್ನಾಗಿ ಮಾಡಬಹುದು. ಪ್ರಜೆಗಳನ್ನು ರಾಷ್ಟ್ರವಿರೋಧಭಾವನೆಗಾಗಿ ದೇಶಭ್ರಷ್ಟರನ್ನಾಗಿಮಾಡಬಹುದು. 1920 ಮತ್ತು 1921 ನೆಯ ಟ್ರಿಬೂನಲ್ ಅಫ್ ಇನ್‌ಕ್ವೈರಿ ಆಕ್ಟ್‌ಗಳ (General Indemnity Acts, Tribunal of Enquiry Acts) ಪ್ರಕಾರ ಸಾರ್ವಜನಿಕ ಜೀವನವನ್ನು ತಿದ್ದಲು, ಮತ್ತು ವಿಶೇಷ ಪರಿಸ್ಥಿತಿಗಳಲ್ಲಿ ವ್ಯಕ್ತಿ ಸ್ವಾತಂತ್ರವನ್ನು ತಡೆಗಟ್ಟಲು ಪರಮಾಧಿಕಾರವನ್ನು ಮಂತ್ರಿ ಮಂಡಲಕ್ಕೆ ದಯಪಾಲಿಸಬಹುದು.

## French National Assembly

ಫ್ರೆಂಚ್ ರಾಷ್ಟ್ರದ ನಿಯೋಗ ಸಭೆಗೆ ಶಾಸನಾಧಿಕಾರ ಮತ್ತು ಆರ್ಥಿಕ ಮಸೂದೆಗಳನ್ನು ಸೂಚಿಸುವ ಅಧಿಕಾರ ವಿಶೇಷವಾಗಿದೆ. ಸಭೆಯ ಬ್ಯುರೋಗಳು ಅನೇಕ ಸಮಿತಿಗಳನ್ನು (Commissions) ರಚಿಸಿ ಅವುಗಳ ಮೂಲಕ ಕಾರ್ಯಾಂಗವು ಸೂಚಿಸಿದ ಆರ್ಥಿಕ ಮಸೂದೆಗಳನ್ನೂ ಸಾರ್ವಜನಿಕ ಅಭಿಮತವನ್ನೂ ಪರಿವರ್ತಿಸಬಹುದು. ಆಡಳಿತಾಂಗಗಳಕಾರ್ಯ ವಿಮರ್ಶೆ ಮಾಡಬಹುದು; ಮಂತ್ರಿಮಂಡಲಗಳನ್ನು ಬದಲಾಯಿಸಬಹುದು. ಆದರೆ ರಾಷ್ಟ್ರ ಬಣಗಳ ಸಂಯೋಗದಿಂದಲೇ ಮಂತ್ರಿಮಂಡಲ ನಿಯಂತ್ರಣ ಸಾಧ್ಯವಾದುದರಿಂದ ಅನೇಕಾವರ್ತಿ ಬಣಗಳು ಭಿನ್ನಾಭಿಪ್ರಾಯಗಳಿಗಾಗಿ ಒಟ್ಟು ಸೇರದೆ ಮಂತ್ರಿಮಂಡಲಕ್ಕೇ ಅಧೀನವಾಗುವುವು.

## U.S.A. House of Representatives; its Functions

ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಸರ್ಕಾರದ ಆಧಾರ ಭೂತವಾದ ಪರಿವರ್ತನೆಯನ್ನು ರಾಷ್ಟ್ರವಿಧಾನದ ಮಾರ್ಪಾಡುಗಳನ್ನು ಮಾಡುವ

ಅಧಿಕಾರವು ವರಣಕರ್ತ ಸಮಾಜಕ್ಕೆ ಸೇರಿದೆ. ಆದರೆ ಈ ಪರಿಮಾಧಿಕಾರ ವನ್ನು ಆಚರಣೆಗೆ ತರಲು ಸಮಾಜದಲ್ಲಿ ಅನುಗುಣವಾದ ಸಾಧನಗಳು ಏರ್ಪ ಟ್ಟಿಲ್ಲವಾಗಿ ತಾನು ಸೃಷ್ಟಿಸಿದ ಸರ್ಕಾರವನ್ನು ಒಪ್ಪಬೇಕಾಗುವುದು. ಆದುದ ರಿಂದ ಅಮೆರಿಕಾ ರಾಷ್ಟ್ರ ವಿಧಾನದಲ್ಲಿ ಸಮಾಜದ ಆಧಾರ ಭೂತವಾದ ಪರಿ ವರ್ತನೆಗಳನ್ನು ಕಾಂಗ್ರೆಸ್ ಸಭೆಯು ಸೂಚಿಸುವುದು, ಅವುಗಳನ್ನು ವರಣ ಕರ್ತ ಸಮಾಜವು ಪರಿಶೀಲಿಸುವುದು ರೂಢಿಯಲ್ಲಿದೆ; ಅಂದರೆ ಕಾಂಗ್ರೆಸ್‌ನ ಎರಡು ಸಭೆಗಳ ಸಮ್ಮೇಳನದಲ್ಲಿ ಎದ್ದ ಬಹುಸಂಖ್ಯಾಕ ಅಭಿಮತದಿಂದ ರಾಷ್ಟ್ರದ ಮುಖ್ಯ ಮಸೂದೆಗಳನ್ನು ಸರ್ಕಾರವು ನಿರ್ಣಯಿಸಬಹುದು; ಅಥವ ಒಟ್ಟು ನಲವತ್ತೆಂಟು ಸಂಸ್ಥಾನಗಳಲ್ಲಿ ಮೂವತ್ತೆರಡು ಸಂಸ್ಥಾನಗಳ ಸರ್ಕಾರಗಳು ಜಾರಿಯಲ್ಲಿರುವ ಕಾನೂನುಗಳ ಪರಿವರ್ತನೆಯನ್ನಾಗಲಿ ಅಥವ ನೂತನ ಕಾನೂನುಗಳ ರಚನೆಯನ್ನಾಗಲಿ ಬಯಸಿದ ಪಕ್ಷದಲ್ಲಿ ಕಾನೂನುಗಳ ಪರಿಶೀಲನೆಗಾಗಿ ವಿಶೇಷ ರಾಷ್ಟ್ರ ಸಭೆಯನ್ನು ಸೇರಿಸಬಹುದು. ಈ ವಿಧಾನದಿಂದ ಸೂಚಿಸಿದ ಮಾರ್ಪಾಟುಗಳನ್ನು ¾ ಸಂಸ್ಥಾನಗಳ ಸರ್ಕಾರಗಳು ಒಪ್ಪದಿದ್ದ ಪಕ್ಷದಲ್ಲಿ ಮಸೂದೆಗಳು ಕಾನೂನುಗಳಾಗ ಲಾರವು. ಆದರೆ ಕಾಂಗ್ರೆಸ್ ಸಭೆಗಳಿಗೆ ರಾಷ್ಟ್ರ ವಿಧಾನಕ್ಕೆ ಸಂಬಂಧ ಪಟ್ಟ ಮಸೂದೆಗಳನ್ನು ಸೂಚಿಸುವ ಹಕ್ಕು ಇರುವುದರಿಂದ, ಇವೂ ಪಾರ್ಲಿ ಮೆಂಟ್‌ನಂತೆ ಕಾನ್ಸ್ಟಿಟ್ಯುಯೆಂಟ್ ಅಧಿಕಾರವನ್ನು ಹೊಂದಿವೆ ಎಂದು ನಿರ್ಧಿಷ್ಟವಾಗಿ ಹೇಳಬಹುದು. ಅಲ್ಲದೆ ಸಂಯುಕ್ತರಾಷ್ಟ್ರದ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆದಾಗ ವರಣದಾತರು ಸೂಚಿಸಿದ ಅಭಿಮತವನ್ನು ಪರಿಶೀಲಿಸಿ, ಮತದಾತರು ನಿಶ್ಚಯಕ್ಕೆ ಬರದಿದ್ದ ಪಕ್ಷದಲ್ಲಿ ಎಲೆಕ್ಟೊರಲ್ ಕಾಲೇಜ್ (Electoral College) ನಲ್ಲಿ ಅಭಿಮತ ಪಡೆದಿರುವ ಮೊದಲನೆಯ ಮೂರು ಪುರುಷರಲ್ಲಿ ಒಬ್ಬನನ್ನು 'ಬ್ಯಾಲೆಟ್' ಗುಪ್ತಚುನಾವಣೆಯ ಮೂಲಕ ನಿರ್ಧರಿಸುವ ಅಧಿಕಾರವನ್ನು ತಾನೇ ಪಡೆ ದಿದೆ. ಮೇಲಿನ ಸಭೆಯು ಉಪಾಧ್ಯಕ್ಷನನ್ನು ಇದೇ ರೀತಿಯಲ್ಲಿ ಚುನಾಯಿಸ ಬಹುದು.

ರಾಜಕೀಯ ವಿಚಾರಗಳಲ್ಲಿ ಪ್ರಜೆಗಳ ತಿಳುವಳಿಕೆಯನ್ನು ಹೆಚ್ಚಿಸುವುದರಲ್ಲಿ ಬದ್ಧ ಕಂಕಣರಾದ ಬಣಗಳನ್ನು ಮತ್ತು ಮುದ್ರಣಾಲಯ(Press) ಗಳನ್ನು ಕಾಂಗ್ರೆಸ್ ಸಭೆಯು ನಿಯಂತ್ರಣದಲ್ಲಿಟ್ಟುಕೊಂಡು ಅವುಗಳ ಮೂಲಕ ರಾಷ್ಟ್ರಹಿತವನ್ನು ಸಾಧಿಸಲು ಮುಖ್ಯಸಾದನವಾಗಿದೆ. ಆರ್ಥಿಕ ಮತ್ತು ಸಮಾಜದ ವಿಷಯಗಳನ್ನು ರಾಷ್ಟ್ರಾಧ್ಯಕ್ಷನು ಕಾಂಗ್ರೆಸ್ಸಿನ ಗಮನಕ್ಕೆ ತರಬೇಕು. ಕಾಂಗ್ರೆಸ್‌ಗೆ ತಿಳಿಸದೆ ಅಥವ ಅದನ್ನು ಸ್ಪಷ್ಟವಾಗಿ ವಿಮರ್ಶಿಸದೆ ಇರುವ ಮುಖ್ಯವಾದ ಯಾವ ಮಸೂದೆಗಳನ್ನೂ ರಾಷ್ಟ್ರಧ್ಯಕ್ಷನು ಜಾರಿಗೆ ತರಕೂಡದು. ಆದರೆ ಸಭೆಯು ಗಹನವಾದ ಸಾಮಾಜಿಕ ವಿಚಾರಗಳನ್ನು ಕಾರ್ಯಕಾರಿಯಾಗಿ ಮಾಡುವಸಲುವಾಗಿ ರಾಷ್ಟ್ರಾಧ್ಯಕ್ಷನಿಗೆ ಸೂಚಿಸಬಹುದು.

ಸರ್ಕಾರದ ವಿವಿಧಾಡಳಿತಾಂಗಗಳ ನ್ಯೂನತೆಗಳನ್ನೂ, ಅಧಿಕಾರಿಗಳ ಕರ್ತವ್ಯನಿಷ್ಠತೆಯನ್ನೂ ಪರಿಶೀಲಿಸುವ ಅಧಿಕಾರವು ಇತ್ತೀಚಿಗೆ ಕಾಂಗ್ರೆಸ್ಸಿಗೆ ದೊರಕಿದೆ. ಅಧಿಕಾರಿಗಳನ್ನು ಕರೆಯಿಸಿ ಪ್ರಶ್ನಾರ್ಥಿಕವಾಗಿ ಸರ್ಕಾರಕ್ಕೆ ಸಂಬಂಧಿಸಿದ ಅನೇಕ ಗುಪ್ತವಿಚಾರಗಳನ್ನು ಅವರಿಂದ ತಿಳಿಯಬಹುದು. ಆಹ್ವಾನವನ್ನು ನಿರಾಕರಿಸಿದ ಅಧಿಕಾರಿಗಳನ್ನು ಕೋರ್ಟಿನಂತೆ ಶಿಕ್ಷೆಗೆ ಗುರಿಮಾಡಬಹುದು.

ವಿದೇಶಾಂಗನೀತಿಯ ಪರಿಶೀಲನೆಯಲ್ಲಿಯೂ ಕೌಂಟಿಗಳ ರಚನೆಯಲ್ಲಿಯೂ ವ್ಯಾಪಾರಾದಿ ವಿಚಾರಗಳಲ್ಲಿಯೂ ರಾಷ್ಟ್ರಗಳ ಒಪ್ಪಂದಗಳಲ್ಲಿಯೂ, ರಾಯಭಾರಿಗಳನ್ನು ಚುನಾಯಿಸುವುದರಲ್ಲಿಯೂ ರಾಷ್ಟ್ರಾಧ್ಯಕ್ಷ ಮತ್ತು ಸಚಿವಮಂಡಲದೊಡನೆ ಕಾಂಗ್ರೆಸ್ ಸಭೆಯು ಸಹಕರಿಸುತ್ತದೆ. ಕಾರ್ಯಾಂಗ ಸಮಿತಿಯಂತೆ ರಾಜ್ಯಾಡಳಿತದಲ್ಲಿ ಪ್ರವರ್ತಿಸುವ ಅಧಿಕಾರವಿದೆ. ವಾಣಿಜ್ಯ, ಆರ್ಥಿಕಸ್ಥಿತಿಗಳನ್ನು ಉತ್ತಮಗೊಳಿಸುವ ವಿಚಾರದಲ್ಲಿಯೂ, ಪೌರೇಯ ಔದ್ಯೋಗಿಕ ಸಂಸ್ಥೆಗಳಿಗೆ ನಿಕಟಸಂಬಂಧವನ್ನು ಬೆಳಿಸುವುದರಲ್ಲಿಯೂ ಸಹಕಾರ ಸಂಘಗಳಂತೆ ವರ್ತಿಸುತ್ತದೆ.

ಶಾಸನ ರಚನಾಕ್ರಮವು ಅತಿ ಮುಖ್ಯವಾದುದು. ಅಮೆರಿಕಾ

ಕಾಂಗ್ರೆಸ್ ಸರ್ಕಾರವು ಶಾಸಕಾಂಗದ ರೀತಿಯನ್ನನುಸರಿಸಿ ಲಿಖಿತ ಕಾನೂನುಗಳ ನಿಯಂತ್ರಣದಲ್ಲಿದೆ. ಸರ್ಕಾರದ ಸಮಸ್ತ ಆಡಳಿತಾಂಗಗಳೂ ಸಮವಾಗಿ ವಿಭಾಗಿಸಲ್ಪಟ್ಟಿದ್ದು ಪ್ರತ್ಯೇಕಪಡಿಸಿದ್ದರೂ ಆಡಳಿತಾಂಗಗಳೆಲ್ಲಾ ಏಕ ರೀತಿಯಾಗಿ ವರ್ತಿಸಲು ಅವಕಾಶವಿದೆ. ಅನೇಕ ನೀತಿಯುತ ತತ್ವಗಳಿಂದ ಕೂಡಿದುದಾದರೂ ಒಂದು ಏಕೀಭಾವನೆ ಇದೆ. ಅಮೆರಿಕಾ ರಾಷ್ಟ್ರವಿಧಾನದ ಪರಮಾಧಿಕಾರ, ತ್ರಿವಿದಾಂಗದಾಡಳಿತಗಳು, ಕಾರ್ಯಾಂಗ ಸಮಿತಿಯ ರಚನೆ, ಚುನಾವಣೆ ಪದ್ಧತಿಗಳು, ಶಾಸಕಾಂಗ ಸಭೆಯ ರಚನೆ, ಅಧಿಕಾರಗಳು, ವರಣಾಧಿಕಾರ ಮತ್ತು ಪ್ರಾತಿನಿಧ್ಯ ಪದ್ಧತಿ, ಕಾನೂನುಗಳನ್ನು ಜಾರಿಗೆ ತರುವ ಕ್ರಮ, ನ್ಯಾಯಾಧಿಪತಿಗಳನ್ನು ನೇಮಿಸುವ ರೀತಿ ಇವೇ ಮುಂತಾದ ತತ್ವಗಳು ಚಕ್ರಬಂಧದಂತೆ ಒಂದು ಆಡಳಿತ ಸ್ವರೂಪದಲ್ಲಿ ಹೆಣೆಯಲ್ಪಟ್ಟವೆ. ಆದುದರಿಂದ ಯಾವ ರಾಷ್ಟ್ರಾಂಗಕ್ಕೂ ರಾಷ್ಟ್ರವಿಧಾನದಲ್ಲಿ ಪ್ರಧಾನಸ್ಥಾನವಿಲ್ಲ. ಅಮೆರಿಕಾ ಪ್ರಜಾತಂತ್ರ ಸರ್ಕಾರದಲ್ಲಿ ಶಾಸಕಾಂಗ ಸಭೆಯು, ಕಾರ್ರ್ಯಾಂಗ ಮತ್ತು ನ್ಯಾಯಾಂಗ ಸಭೆಗಳ ಅಧಿಕಾರಗಳನ್ನಾಗಲಿ, ಅಥವ ಎರಡರಲ್ಲಿ ಯಾವುದಾದರೂ ಒಂದರ ಅಧಿಕಾರವನ್ನಾಗಲಿ ಉಪಯೋಗಿಸುಕೊಳ್ಳುವ ಹಕ್ಕುಗಳನ್ನು ಪಡೆದಿಲ್ಲ.

## Constitution of Dominions. Lower Chambers and Functions

ಡೊಮಿನಿಯನ್ ಶಾಸಕಾಂಗ ಸಭೆಗಳು ಪಾರ್ಲಿಮೆಂಟರಿ ಶಾಸಕಾಂಗ ಸಭೆಗಳನ್ನು ರಚನೆ ಮತ್ತು ಅಧಿಕಾರಗಳಲ್ಲಿ ಹೋಲುತ್ತವೆ. 1931 ನೆ ಪೂರ್ವಭಾವಿಯಾಗಿ ಈ ಶಾಸಕಾಂಗ ಸಭೆಗಳು ತಮ್ಮ ರಾಷ್ಟ್ರಗಳಲ್ಲಿ ಪರಮಾಧಿಕಾರವನ್ನು ಪಡೆದಿರಲಿಲ್ಲ. ತನ್ನ ರಾಷ್ಟ್ರದಲ್ಲಿ ಸಾಮ್ರಾಜ್ಯ ಶಾಸಕಾಂಗ ಸಭೆಗೆ ವಿರೋಧವಿಲ್ಲದೆ ಶಾಸನ ಮಾಡುವ ಅಧಿಕಾರ ಮತ್ತು ಸಾಮ್ರಾಜ್ಯ ಶಾಸನ ಸಭೆಯು ಡೊಮಿನಿಯನ್ ರಾಷ್ಟ್ರಗಳಿಗನ್ವಯಿಸುವಂತೆ ಶಾಸನ ಮಾಡುವ ಸ್ಥಳೀಯ ಸಭೆಗಳ ಮಸೂದೆಗಳನ್ನು ನಿರೋಧಿಸುವ ಅಧಿ

ಕಾರವನ್ನು ಹೊಂದಿತ್ತು; ಕಾನೂನುಗಳಾದ ಮೇಲೂ ಅವುಗಳನ್ನು ರದ್ದು ಮಾಡುವ ಅಧಿಕಾರ ಇಂಗ್ಲೆಂಡಿನ ಶಾಸನ ಸಭೆಗೆ ಸೇರಿದ್ದು. ವಿದೇಶಾಂಗ ನೀತಿಯು ಸಂಪೂರ್ಣವಾಗಿ ಸಾಮ್ರಾಜ್ಯ ಸರ್ಕಾರಕ್ಕೆ ಅಧೀನವಾಗಿತ್ತು. ವೆಸ್ಟ್‌ಮಿನ್‌ಸ್ಟರ್ ಸ್ಟ್ಯಾಚ್ಯೂಟಿನ ಪ್ರಕಾರ ಇಂಪೀರಿಯಲ್ ಸರ್ಕಾರವು ತನ್ನ ಪರಮಾಧಿಕಾರವನ್ನು ಕಳೆದುಕೊಂಡಿದೆ. ಡೊಮಿನಿಯನ್ನಿನ ಶಾಸನ ಸಭೆಗಳ ನಿರ್ಣಯಗಳು ಸಾಮ್ರಾಜ್ಯಸಮಿತಿಗಳನುಮತಿಯಿಲ್ಲದೆ ಕಾನೂನಾಗಬಹುದು. ಡೊಮಿನಿಯನ್ ಸರ್ಕಾರದನುಮತಿಯಿಲ್ಲದೆ ಸಾಮ್ರಾಜ್ಯ ಸರ್ಕಾರವು ಡೊಮಿನಿಯನ್ನಿನ ಪರವಾಗಿ ಯಾವ ಶಾಸನಗಳನ್ನೂ ಮಾಡಕೂಡದು. ಕಾನೂನುಗಳನ್ನು ಮಾಡಿದರೂ ಅವುಗಳನ್ನು ರಾಷ್ಟ್ರ ಸರ್ಕಾರಗಳು ಅಂಗೀಕರಿಸಬೇಕಾಗಿಲ್ಲ. ಹಾಗೆಯೇ ಡೊಮಿನಿಯನ್ನಿನ ನ್ಯಾಯಾಂಗವು ಇಂಗ್ಲೆಂಡಿನ ಪ್ರಿವಿಕೌನ್‌ಸಿಲ್‌ಗೆ ವರದಿ ಮಾಡಬೇಕಾದುದಿಲ್ಲ.

ಜವಾಬ್ದಾರಿಯುತ ಸರ್ಕಾರವು ಏರ್ಪಟ್ಟಿರುವುದರಿಂದ ಪಾರ್ಲಿಮೆಂಟ್ ಸರ್ಕಾರವಿರುವ ರಾಷ್ಟ್ರಗಳಂತೆ, ಮಂತ್ರಿಮಂಡಲವು ಶಾಸಕಾಂಗಕ್ಕೆ ಅಧೀನವಾಗಿರಬೇಕು. ಡೊಮಿನಿಯನ್ನಿನ ರಾಷ್ಟ್ರಾಧ್ಯಕ್ಷನು ಡೊಮಿನಿಯನ್ ಶಾಸಕಾಂಗ ಸಭೆಗಳಿಂದ ನೇಮಿಸಲ್ಪಡುವನು. ಅವನಿಗೆ ಮಂತ್ರಿಮಂಡಲವನ್ನು ರಚಿಸುವುದಕ್ಕೂ ಮತ್ತು ರದ್ದುಮಾಡುವುದಕ್ಕೂ ಪೂರ್ಣಾಧಿಕಾರವಿದೆ ರಾಷ್ಟ್ರಾಧ್ಯಕ್ಷನು ( Governor-General ) ಸಾಮ್ರಾಜ್ಯ ಸರ್ಕಾರಕ್ಕೂ ತನ್ನ ಸರ್ಕಾರಕ್ಕೂ ನಿಕಟಸಂಬಂಧವನ್ನು ಬೆಳೆಸುವನು. ಶಾಸಕಾಂಗ ಸಭೆಯಲ್ಲಿ ಓಯಲ್ಪಟ್ಟ ಮಸೂದೆಗಳನ್ನು ರಾಷ್ಟ್ರಾಧಿಪತಿಯು ಅನುಮತಿಯನ್ನು ಕೊಡಬಹುದು, ರದ್ದುಮಾಡಬಹುದು. ಸಾಮ್ರಾಟನ ಅನುಮತಿ ಸಿಕ್ಕುವವರಿಗೆ ತಾತ್ಕಾಲಿಕ ಅನುಮತಿಯನ್ನು ಕೊಟ್ಟು ಕಾನೂನಾಗಿ ಜಾರಿಗೆಬರದಂತೆ ತಡೆಯುವುದು, ಸಾಮ್ರಾಟನ ಅನುಮತಿಗಾಗಿಯೇ ಮಸೂದೆಗಳನ್ನು ಪ್ರತ್ಯೇಕವಾಗಿಡಬಹುದು. ಮಸೂದೆಗಳು ರಾಜನ ಅನುಮತಿಯಿಲ್ಲದೆ ಕಾನೂನಾಗಲಾರದು; ಆದರೂ ಇಂಗ್ಲೆಂಡಿನ ಮಂತ್ರಿಮಂಡಲವಾಗಲಿ ಅಥವ ರಾಜನಾಗಲಿ ಮಸೂದೆಗಳನ್ನು ನಿಷೇದಿಸುವ ರೂಢಿಯು ಈಗ ಜಾರಿಯಲ್ಲಿಲ್ಲ.

## Statute of Westminster, its Implications

ಪಾರ್ಲಿಮೆಂಟ್ ಸಭೆಯು ವೆಸ್ಟ್‌ಮಿನ್‌ಸ್ಟರ್ ಸ್ಟ್ಯಾಚ್ಯೂಟ್ ಪ್ರಕಾರ ಡೊಮಿನಿಯನ್ ಸರ್ಕಾರಕ್ಕೆ ಪರಮಾಧಿಕಾರವನ್ನು ಕೊಟ್ಟು, ರಾಷ್ಟ್ರ ಸಭೆಗಳು ಪಾರ್ಲಿಮೆಂಟಿನ ಶಾಸನಗಳನ್ನು ರದ್ದುಮಾಡುವುದಕ್ಕೂ ಮತ್ತು ನ್ಯಾಯಾಂಗಗಳ ಸಮಿತಿಯಿಂದ ಆ ಶಾಸನಗಳನ್ನು ತಿರಸ್ಕರಿಸುವುದಕ್ಕೂ ಯೋಗ್ಯತೆಯನ್ನು ಪಡೆದಿವೆ. ಸೆಕ್ಷನ್ 2 ಪ್ರಕಾರ 1700 ನೇ ಸೆಟಲ್‌ಮೆಂಟ್ ಆಕ್ಟ್‌ನ್ನು ರದ್ದುಮಾಡಬಹುದು. ಸೆಕ್ಷನ್ 4 ಪ್ರಕಾರ ಡೊಮಿನಿಯನ್ ಸರ್ಕಾರದ ಅನುಮತಿಯಿಲ್ಲದೆ ಸಿಂಹಾಸನಾಧಿಪತಿಯನ್ನು ನೇಮಿಸಲಾಗದು; ಹಾಗೆಯೇ ನಿರ್ಣಯಿಸಿ ಸಾಮ್ರಾಜ್ಯದ ಹತೋಟಿಯಿಂದ ಪ್ರತ್ಯೇಕವಾಗುವ ಹಕ್ಕನ್ನು ಶಾಸನ ಸಭೆಗಳು ಪ್ರಯೋಗಿಸಬಹುದು.

ವೆಸ್ಟಮಿನಿಸ್ಟರ್ ಸ್ಟ್ಯಾಚ್ಯೂಟಿನ ಪರಿಣಾಮವಾಗಿ ಡೊಮಿನಿಯನ್ ರಾಷ್ಟ್ರಗಳಿಗೂ ಸಾಮ್ರಾಟನಿಗೂ ಇರುವ ನಿಕಟಸಂಬಂಧವೂ ಕಡಿದು ಹೋಗುವ ಸನ್ನಿವೇಶವೊದಗಿದ್ದರಿಂದ 1938 ರಲ್ಲಿ ಸಿಡ್ನಿ ಸಮ್ಮೇಳನದಲ್ಲಿ ಅಂತರ ಪ್ರಜಾತಂತ್ರ ಶಾಸಕಾಂಗ ಸಭೆಯನ್ನು ಕೂಡಿಸಿ ವರ್ಷಕ್ಕೆರಡಾವರ್ತಿ ಸೇರಿ ಸಾರ್ವಜನಿಕ ಪ್ರಶ್ನೆಗಳನ್ನು ವಿಮರ್ಶಿಸಿದರೆ, ರಾಷ್ಟ್ರಗಳಿಗೆ ಪರಸ್ಪರ ಸೌಹಾರ್ದ ಹೆಚ್ಚುವುದೆಂದು ನಿರ್ಣಯವಾಯಿತು. 1940 ರಲ್ಲಿ ಡೆಲ್ಲಿಯಲ್ಲಿ ನಡೆದ ಎಂಪೈರ್ ಕಾನ್‌ಫೆರೆನ್ಸನಲ್ಲಿ ಸಹಕಾರ ಸಹಯೋಗಗಳಿಂದ ಯುದ್ಧ ಪ್ರಯತ್ನಕ್ಕೆ ಎಷ್ಟರಮಟ್ಟಿಗೆ ಸೇವೆ ಸಲ್ಲಿಸಬಹುದೆಂದು ವ್ಯಕ್ತವಾಯಿತು. ರಾಷ್ಟ್ರಗಳ ರಕ್ಷಣೆಗೂ ಔದ್ಯೋಗಿಕ ವ್ಯಾಪಾರ ಮತ್ತು ವ್ಯವಹಾರಗಳ ಸಂಬಂಧಗಳನ್ನು ಬೆಳೆಸಲೂ ಸಲುವಾಗಿ ಅನೇಕ ನಿರ್ಣಯಗಳಾದವು. ಅಲ್ಲಿಂದೀಚೆಗೆ ರಾಷ್ಟ್ರಗಳಿಗೆ ಒಂದು ವಿಧವಾದ ನಿಕಟಸಂಬಂಧವು ಬೆಳೆಯುತ್ತಾ ಬಂದಿದೆ.

## South Africa, its Lower House

ದಕ್ಷಿಣ ಆಫ್ರಿಕಾ ಸರ್ಕಾರವು ಏಕನಾಯಕ ಮತ್ತು ಸಂಯುಕ್ತ

ರಾಷ್ಟ್ರತತ್ತ್ವಗಳಿಂದ ಕೂಡಿದ ಒಂದು ವಿಚಿತ್ರ ವಿಧಾನ. ಅಲ್ಲಿಯ ಶಾಸಕಾಂಗಸಭೆಯು ಸಾಮಾನ್ಯಶಾಸನ ರಚನೆಯನ್ನೂ ರಾಷ್ಟ್ರವಿಧಾನಗಳ ರಚನೆಯನ್ನೂ ಮಾಡಬಲ್ಲದು. ಅದರಿಂದಲೆ ಆ ಸರ್ಕಾರವನ್ನು ತಿದ್ದುಪಡಿಯನ್ನುಗೊಳ್ಳುವಂತ ವಿಧಾನವೆಂದು (Flexible Constitution) ಹೇಳಬಹುದು; ಅಂದರೆ ಪರಮಾಧಿಕಾರವುಳ್ಳ ಶಾಸನ ಸಭೆಯ ತಿದ್ದುಪಡಿಒಪ್ಪುವ ವಿಧಾನಕ್ಕೂ ಸಂಯುಕ್ತ ರಾಷ್ಟ್ರತತ್ವಕ್ಕೂ ಬಹಳ ಅಂತರವಿದೆ. ಏತಕ್ಕೆಂದರೆ ಸಂಯುಕ್ತ ವಿಧಾನದಲ್ಲಿ ಶಾಸನಸಭೆಗೆ ಪರಮಾಧಿಕಾರವಿಲ್ಲ; ತ್ರಿವಿದಾಂಗ ತತ್ತ್ವಗಳಾಧಾರದ ಮೇಲೆ ರಚಿಸಿದ ಸರ್ಕಾರಯಾವ ಅಂಗವನ್ನೂ ಪ್ರಧಾನವೆಂದು ಒಪ್ಪುವುದಿಲ್ಲ; ಅಲ್ಲದೆ ಸಂಯುಕ್ತವಿಧಾನದ ತಿದ್ದುಪಡಿಯೂ ಕಷ್ಟಸಾಧ್ಯ. (Rigid Constitutions)

ಆದುದರಿಂದ ಸೈದ್ಧಾಂತಿಕವಾಗಿ ಆಫ್ರಿಕಾಸರ್ಕಾರವು ಸಂಯುಕ್ತವಿಧಾನವಲ್ಲ. ಅಲ್ಪ ಸಂಯುಕ್ತರಾಷ್ಟ್ರದ ಚಿಹ್ನೆಗಳಿಂದ ಕೂಡಿದೆ. ಶಾಸನಸಭೆಗೆ ರಾಷ್ಟ್ರವಿಧಾನವನ್ನು ಪರಿಶೀಲಿಸಿ ಮಾರ್ಪಾಡುಗಳನ್ನು ಸೂಚಿಸುವಹಕ್ಕು ಇಲ್ಲ; ಅನುಪಾತಿಕಪ್ರಾತಿನಿಧ್ಯ ಪದ್ಧತಿಯನ್ನು ಬದಲಾಯಿಸುವುದಾಗಲಿ, ಅವಧಿ ನಿಶ್ಚಯಿಸಲ್ಪಟ್ಟ ಕಾನೂನುಗಳವಧಿಯನ್ನು ಕಮ್ಮಿಮಾಡುವುದಾಗಲಿ ನಟಾಲ್, ಆರೆಂಜ್ ಫ್ರೀ ಸ್ಟೇಟ್ ಮತ್ತು ಟ್ರಾನ್ಸ್ವಾಲ್ ಪ್ರಾಂತಪ್ರಾತಿನಿಧ್ಯಕ್ಕೆ ಸೂಚಿಸಿರುವ ಯೋಗ್ಯತೆಗಳನ್ನೂ ಮಾರ್ಪಾಟುಮಾಡುವುದಾಗಲಿ ಯಾವ ವಿಧವಾದ ಅಧಿಕಾರವನ್ನೂ ಪಡೆದಿಲ್ಲ. ಡಚ್ಚ ಮತ್ತುಇಂಗ್ಲೀಷ್ ಭಾಷೆಗಳೆರಡೂ ಪ್ರಚಾರದಲ್ಲಿರುವಾಗ ಯಾವುದೊಂದು ಭಾಷೆಯನ್ನೂ ಸಾರ್ವತ್ರಿಕಭಾಷೆಯನ್ನಾಗಿ ಮಾಡುವ ಸ್ವಾತಂತ್ರವೂ ಇಲ್ಲ. ಆದರೆಆಫ್ರಿಕಾ ಸಂಯುಕ್ತರಾಷ್ಟ್ರದಲ್ಲಿ ಪ್ರಾಂತ ಸರ್ಕಾರಗಳು ಸಂಯುಕ್ತ ಸಂಸ್ಥಾನಗಳಷ್ಟು ಶಾಸನ ರಚನೆ, ನಿಷೇದಾಧಿಕಾರಗಳಲ್ಲಿ ಹೆಚ್ಚು ಸ್ವಾತಂತ್ರ್ಯದಿಂದವರ್ತಿಸುತ್ತಿವೆ: ನ್ಯಾಯಾಂಗವೂ ಅಧಿಕಾರಯುತವಾದುದು; ಇದನ್ನುರದ್ದುಗೊಳಿಸಬೇಕಾದರೆ ಶಾಸನದ ಎರಡು ಸಭೆಗಳೂ ಒಟ್ಟಿಗೆ ತೀರ್ಮಾನಿಸಿ,ಕಾರ್ಯಾಂಗ ಸಮಿತಿಯ ಅನುಮತಿಯನ್ನು ಪಡೆಯಬೇಕು.

ಆಫ್ರಿಕಾ ಸಂಯುಕ್ತ ರಾಷ್ಟ್ರದ ರಾಜಕೀಯ ವಿಷಯಗಳು ಇತ್ತೀಚಿಗೆ ಬಹಳ ಕಠಿಣವಾಗುತ್ತಿವೆ. ಹೈಕಮಿಷನರ್‌ಗೆ ಸೇರಿದ ವಿಭಾಗಗಳಿಂದ ಆಗುತ್ತಿರುವ ಪ್ರಜಾವರ್ಗಾವರ್ಗಿಗಳು ನಾಗರಿಕ ಮತ್ತು ಸಮಾನ ಹಕ್ಕು ಸ್ವಾತಂತ್ರ್ಯಗಳುಳ್ಳ ಐರೋಪ್ಯ ಜನರನ್ನು ಇತರ ಜಾತಿ ಪ್ರಜೆಗಳಿಂದ ಪ್ರತ್ಯೇಕಿಸಿ ಜಾತಿ ವೈಷಮ್ಯಕ್ಕೆ ಕಾರಣಭೂತವಾಗಿವೆ; ಅನೇಕ ಕ್ರೂರ ಕಾನೂನುಗಳಾಗಿ ಸ್ವೇಚ್ಛಾಪ್ರವರ್ತನೆಗೆ ಮತ್ತು ದಬ್ಬಾಳಿಕೆಯ ರಾಜ್ಯ ಭಾರಕ್ಕೂ ಮಾರ್ಗವಾಗಿದೆ. ಜೆ. ಡಿ. ಕೆಸಲ್ ಸ್ಥಾಪಿಸಿರುವ ರೆಡ್ಡಿಂಗಡಾಡಿ ಭಾನ್ ಸಂಸ್ಥೆಯು, ಮತ್ತು ಒಸುವಬ್ರಾಂಡ್ ವ್ಯಾನ್ ಸಂಸ್ಥೆಯು ಆಫ್ರಿಕಾನರ್‌ನಪ್ರಗತಿಗೂ ಸ್ವತಂತ್ರರಾಷ್ಟ್ರಸ್ಥಾಪನೆಗೂ ಹೋರಾಟವನ್ನೂ ನಡೆಸುತ್ತಿವೆ.

## Canada and its House of Commons: Functions

ಕೆನಡ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳಲ್ಲಿ ಸಂಸ್ಥಾನಗಳಾಂಗಗಳು ಮತ್ತು ಸಂಯುಕ್ತಾಂಗಗಳು ಪ್ರತ್ಯೇಕವಾಗಿವೆ; ಶಾಸನಗಳ ಸಂಶೋಧನೆ ಮತ್ತು ಪರಿವರ್ತನೆ ಕಷ್ಟಸಾಧ್ಯ; ನ್ಯಾಯಾಂಗಕ್ಕೆ ರಾಷ್ಟ್ರವಿಧಾನ ತತ್ತ್ವಗಳನ್ನು ಪರಿಶೀಲಿಸುವ ಪರಮಾಧಿಕಾರವಿದೆ. ಸಂಸ್ಥಾನಗಳು ಸಂಯುಕ್ತಾಂಗಗಳಾಗುವ ಮುನ್ನ ಸ್ವಾತಂತ್ರ್ಯ ರಾಷ್ಟ್ರಗಳಾಗಿದ್ದವು. ಕೆನಡ ರಾಷ್ಟ್ರದಲ್ಲಿ ಸಂಯುಕ್ತಾಂಗಗಳಲ್ಲಿ ಪರಮಾಧಿಕಾರವು ಅಡಗಿದೆ; ಆಸ್ಟ್ರೇಲಿಯಾ ರಾಷ್ಟ್ರದಲ್ಲಿ ಸಂಸ್ಥಾನಗಳು ಪರಮಾಧಿಕಾರವನ್ನೂ ಪಡೆದು, ದೇಶೀಯ ಮತ್ತು ವಿದೇಶಾಂಗನೀತಿಯಲ್ಲಿಯೂ ಸ್ವತಂತ್ರ್ಯತೆಯಿಂದ ವರ್ತಿಸಲು ಹಕ್ಕುಗಳನ್ನು ಪಡೆದಿವೆ.

ಬ್ರಿಟಿಷ್‌ನಾರ್ತ್ ಅಮೆರಿಕಾ ಆಕ್ಟ್ ಸೆಕ್ಷನ್ 92 ಡು ಕೆನಡ ರಾಷ್ಟ್ರ ಸಂಸ್ಥಾನಗಳ ಅಧಿಕಾರವನ್ನು ವಿವರಿಸಿದೆ. ಸಂಯುಕ್ತಾಂಗಗಳ ಅಧಿಕಾರ ವೆಷ್ಟಿರಬೇಕೆನ್ನುವುದರ ಗೋಜಿಗೆ ಹೋಗಿಲ್ಲ. ಅಂತ್ಯದಲ್ಲಿ ತೀರ್ಮಾನ ಕೊಡುವ ಅಧಿಕಾರವೆಲ್ಲಾ ಕೇಂದ್ರಸರ್ಕಾರಕ್ಕೆ ಸೇರಿದೆ. ಕೇಂದ್ರಸರ್ಕಾರದಲ್ಲಿ

ಶಾಸನಸಭೆಗಳೆರಡಾದರೂ ಬ್ರಿಟಿಷ್ ಸರ್ಕಾರದಂತೆ ಏಕಸಭಾತ್ಮಕವಾಗಿ ಆಡಳಿತದಲ್ಲಿ ಕೆಳಗಿನ ಸಭೆಗೆ ಮಾತ್ರ ಪರಮಾಧಿಕಾರವನ್ನು ಗಳಿಸಿದೆ; ಆದರೆ ಅದರ ಅಧಿಕಾರ ದರ್ಪವೆಲ್ಲಾ ಸಾಮ್ರಾಟನ ಹಕ್ಕುಗಳಿಗಾಗಲಿ, ಸಂಸ್ಥಾನ ಸರ್ಕಾರಗಳಿಗೆ ಮೀಸಲಾಗಿಟ್ಟ ಅಧಿಕಾರಗಳಿಗಾಗಲಿ ಸಂಬಂಧಿಸಕೂಡದು.

ಕೆನಡಾ ಶಾಸನ ಸಭೆಗೆ ರಾಷ್ಟ್ರವಿಧಾನ ತಿದ್ದುಪಡಿಮಾಡುವ, ಪ್ರಿವಿ ಕೌನ್ಸಿಲ್‌ಗಳಿಗೆ ಅಪೀಲುಗಳನ್ನು ರದ್ದುಮಾಡುವ ಅಧಿಕಾರವನ್ನು ವೆಸ್ಟ್ ಮಿನ್‌ಸ್ಟರ್ ಸ್ಟ್ಯಾಚ್ಯೂಟ್ ಕೊಟ್ಟಿದೆ. ಇತರ ಡೊಮಿನಿಯನ್‌ಗಳೂ ಹೊಂದಿರುವ ಹಾಗೆ ಸ್ವಂತ ಧ್ವಜವನ್ನು ಉಪಯೋಗಿಸುವ ಅಧಿಕಾರವು ಇವುಗಳೆಲ್ಲಾ ಕೊಟ್ಟಿದ್ದರೂ ಸಂಪೂರ್ಣ ಸ್ವಾತಂತ್ರ್ಯತೆಯನ್ನು ಹೊಂದುವ ಸ್ಥಿತಿಗೆ ಏರಿಲ್ಲ. ನ್ಯಾಯಾಂಗ ಸಮಿತಿಯು ಪ್ರಜಾಪ್ರತಿನಿಧಿಗಳಿಂದ ರಚಿಸಿದ ಶಾಸನಗಳ ಬದಲಾಗಿ ಪ್ರತಿಯೊಂದು ಶಾಸನ ತೀರ್ಪುಗಳನ್ನು ಮಾಡಿ ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಪ್ರಗತಿಪರ ಶಾಸನಗಳನ್ನು ಮಾಡುವ ಶಾಸಕ ಸಭೆಯನ್ನು ಅಪ್ರಯೋಜಕವಾಗಿ ಮಾಡಿದೆ; ಅಲ್ಲದೆ ಪ್ರಿವಿ ಕೌನ್ಸಿಲ್ ಪ್ರಾಂತೀಯ ಸರ್ಕಾರಗಳ ಹಕ್ಕುಗಳನ್ನು ನಿಯಂತ್ರಣದಲ್ಲಿಡಲು ಶ್ರದ್ಧೆ ವಹಿಸಿರುವ ನ್ಯಾಯ ಸಮಿತಿಯ ತೀರ್ಪುಗಳನ್ನೇ ಅನುಮೋದಿಸುವುದರಿಂದ, ಒಂದು ಪಕ್ಷವು, ಪ್ರಿವಿಕೌನ್ಸಿಲ್‌ಗೆ ಅಪೀಲುಮಾಡುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ; ಅಪೀಲುಗಳನ್ನು ರದ್ದುಮಾಡಿದರೆ ಪ್ರಾಂತ ಸರ್ಕಾರದ ಹಕ್ಕುಗಳ ಮುಖ್ಯವಾದ ರಕ್ಷಣಾಕವಚವನ್ನೇ ಕಳೆದುಕೊಂಡಹಾಗಾಗುವುದೆಂದು ಮತ್ತೊಂದು ಪಕ್ಷದ ಆರ್ಭಟನೆ. ಶಾಸನ ಸಭೆಗೆ ರಾಷ್ಟ್ರವಿಧಾನ ತಿದ್ದುಪಡಿಮಾಡುವ ಅಧಿಕಾರವನ್ನು ಕೊಟ್ಟರೆ, ಪ್ರಾಂತಸರ್ಕಾರದ ಹಕ್ಕುಗಳನ್ನು ಸಂಯುಕ್ತಾಂಗಗಳು ಶೀಘ್ರವಾಗಿ ಕಸಿದುಕೊಳ್ಳುವುವೆಂಬ ಭೀತಿಯು ಇದೆ.

ಸುಧಾರಣೆ ಚಳುವಳಿಗಳೂ ಅಂತ್ಯದಲ್ಲಿ ಪ್ರಾಂತ ಹಕ್ಕುಗಳನ್ನು ರದ್ದುಮಾಡಿ ವಿಶೇಷಾಧಿಕಾರವನ್ನು ಸಂಯುಕ್ತಾಂಗಗಳಲ್ಲಿ ಕೇಂದ್ರೀಕರಿಸುವುದರಲ್ಲಿ ಸಂದೇಹವಿಲ್ಲ. ಸರ್ಕಾರದ ಆರ್ಥಿಕ ಸ್ಥಿತಿಯು ಮತ್ತು ರಾಜ

ನೀತಿಯು ಪೌರ್ವಾತ್ಯ ಪ್ರಾಂತಗಳಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿ ಪಾಶ್ಚಾತ್ಯ ಪ್ರಾಂತಗಳ ಸ್ಥಿತಿಗತಿಗಳಲ್ಲಿ ಉದಾಸೀನ ತೋರಿಸುವುದರಿಂದ ಅತೃಪ್ತಿಯುಂಟಾಗಿ ಶಾಸ್ಕಚ್ಚೆವಾನ್ ಪ್ರಾಂತಾವಾದಿಗಳು ಸಂಯುಕ್ತ ರಾಷ್ಟ್ರ ದಿಂದ ಪ್ರತ್ಯೇಕವಾಗುವ ಹೋರಾಟವನ್ನು ಆರಂಭಿಸಿದ್ದಾರೆ. ಸಾಲ ಮತ್ತು ದಾನಗಳಲ್ಲಿಯೂ ಪ್ರಾಂತ ಪ್ರಾಂತಕ್ಕೂ ಭಿನ್ನ ಭಿನ್ನವಾದ ನೀತಿಗಳನ್ನು ಕೇಂದ್ರ ಸರ್ಕಾರವು ಆಚರಿಸುತ್ತಿರುವುದರಿಂದ ಪ್ರಾಂತ್ಯಗಳ ಪರಸ್ಪರ ಸಂಬಂಧಗಳನ್ನು ವಿಮರ್ಶಿಸಲು ನೇಮಿತವಾದ ರೊವೆಲ್ ಸಮಿತಿಯ ಸಲಹೆ ಗಳನ್ನು ಆಚರಣೆಗೆ ತರಲು ಒಪ್ಪಿಗೆಯಾಗಿದೆ. ಇದರಿಂದ ಸಮಸ್ಯೆಗಳ ಶಾಶ್ವತವಾದ ನಿವಾರಣೆ ದೊರಕಬಹುದೆಂಬ ಭಾವನೆ.

## Australia: House of Representatives

ಆಸ್ಟ್ರೇಲಿಯಾದ ಸಂಯುಕ್ತ ಸರ್ಕಾರವಿಧಾನವು ಸಂಸ್ಥಾನಗಳಿಗೆ ಸ್ವತಂತ್ರಾಡಳಿತ ಅಧಿಕಾರವನ್ನು ಕೊಟ್ಟಿದೆ. ಸಂಸ್ಥಾನಗಳು ಸ್ವತಂತ್ರತೆ ಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ನಿಯಮಗಳು ಉಲ್ಲಂಘನೆಯಾದ ಪಕ್ಷದಲ್ಲಿ ಶ್ರೇಷ್ಠಸಂಯುಕ್ತ ನ್ಯಾಯಾಸ್ಥಾನ ಅಥವ ಪ್ರಿವಿ ನ್ಯಾಯಾ ಸಮಿತಿಯಿಂದ ಪರಿಹಾರವನ್ನು ಪಡೆಯಬಹುದು. ಸಂಯುಕ್ತ ಶಾಸನ ಸಭೆಗಳ ಅಧಿಕಾರವು ನಿರ್ಧರಿಸಲ್ಪಟ್ಟಿದೆ. ರಕ್ಷಣ ವಿಧಾನಗಳು, ವಿದೇ ಶಾಂಗ ನೀತಿ, ಅಂತರರಾಷ್ಟ್ರೀಯ ವ್ಯಾಪಾರ, ಸುಂಕ ತೆರಿಗೆ ಕಂದಾಯ ವಿಧಿಸುವಿಕೆ, ಅಂಚೆ, ಕಚೇರಿ, ಲೆಕ್ಕಾಚಾರ ಜಲಜಂತುಗಳ ವ್ಯಾಪಾರ ವಿವಾಹವಿಚ್ಛೇದನ, ವಿಶ್ರಾಂತಿ ವೇತನ ಪರರಾಷ್ಟ್ರದೊಡನೆ ಸಂಬಂಧಗಳು– ಇವೇ ಮುಂತಾದ ಅಧಿಕಾರ ಸಂಯುಕ್ತ ಸರ್ಕಾರದ್ದು.

## ಭಾರತದ ಲೋಕಸಭೆ—Functions

1935 ನೆಯ ಭಾರತ ರಾಷ್ಟ್ರ ವಿಧಾನ ಆಕ್ಟ್ ಪ್ರಕಾರ ಶಾಸನ ಸಭೆ ಗಳ ಸ್ಥಾನಗಳನ್ನು ಕೇವಲ ಜಾತಿಗಳನುಸಾರವಾಗಿ ವಿಭಾಗಿಸಲ್ಪಟ್ಟಿತ್ತು. ಸಂಸ್ಥಾನಗಳು ಪ್ರತ್ಯೇಕ ಶಾಸನ ಸಭೆಯಲ್ಲಿ ಪ್ರತ್ಯೇಕ ಸ್ಥಾನಗಳನ್ನು

ಪಡೆದಿದ್ದವು. ವ್ಯಯಕ್ಕನುಮತಿ, ಆಕ್ಷೇಪಣೆ, ಸಾಮಾಜಿಕಭಿಪ್ರಾಯಗಳನ್ನು ಸರಿಪಡಿಸುವುದು, ನೂತನ ಕಲ್ಪನೆಗಳನುಗುಣವಾಗಿ ಶಾಸನಗಳನ್ನು ರಚಿಸುವುದು ಇವು ಕೆಲವು ಮುಖ್ಯ ಶಾಸನ ಸಭೆಯ ಕರ್ತವ್ಯಗಳಾಗಿತ್ತು.

ಶಾಸನ ಸಭೆಯ ಸದಸ್ಯರಿಗೆ ವಾಕ್ ಸ್ವಾತಂತ್ರ್ಯವಿದ್ದರೂ ಆ ಸ್ವಾತಂತ್ರ್ಯಕ್ಕೆ ಅನೇಕ ನಿರೋಧಗಳಿದ್ದವು. ನ್ಯಾಯಾಸ್ಥಾನದಲ್ಲಿ ಹಿಂದುಳಿದಿರುವ ವಿಷಯಗಳನ್ನು ಪ್ರಸ್ತಾಪಿಸಬಾರದು; ವೈಯಕ್ತಿಕವಾಗಿ ರಾಷ್ಟ್ರಾಧಿಪತಿಯಾಗಲಿ ಅವನ ಅನುಯಾಯಿಗಳನ್ನಾಗಿ ದ್ವೇಷಿಸಿ ದೋಷಾರೋಪಣೆಯಾಗಲೀ ಅಸಂಬದ್ಧಪ್ರಲಾಪವಾಗಲಿ, ಅಪಪ್ರಚಾರವಾಗಲಿ, ಸಭೆಗೆ ವ್ಯತಿರಿಕ್ತವಾಗಿ ಪ್ರಸಂಗಗಳಲ್ಲಿ ತೊಡುಗುವುದಾಗಲಿ ಮಾಡಕೂಡದು. ಸದಸ್ಯರಿಂದ ಕೂಡಿದ ಶಾಸನಸಭೆಯ ಸ್ವಾತಂತ್ರ್ಯಕ್ಕೂ ಅನೇಕ ನಿರ್ಬಂಧಗಳಿದ್ದವು. ಸಂಯುಕ್ತಶಾಸನ ಸಭೆಯಾಗಲಿ, ಪ್ರಾಂತೀಯ ಸಭೆಯಾಗಲಿ ರಾಜವಂಶಕ್ಕೆ ಅಥವ ರಾಜಪ್ರತಿನಿಧಿ ಅಧಿಕಾರಕ್ಕೆ ಧಕ್ಕೆ ಬರುವಂತ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಹೊಂದಿರಲಿಲ್ಲ. ಭಾರತ ಸರ್ಕಾರ ವಿದೇಶಾಂಗ ಸಚಿವನ (Secretary of State) ಅನುಮತಿಯಿಲ್ಲದೆ, ಅವನು ಮಾಡಿದ ನಿಯಮಗಳನ್ನಾಗಲಿ, ಗೌವರ್ನರ್ ಜನರಲ್ ಮಾಡಿದ ತೀರ್ಪುಗಳನ್ನಾಗಲಿ ಸಂಶೋಧಿಸುವ ಅಧಿಕಾರವಿರಲಿಲ್ಲ; ಕೆಲವು ಗಹನವಾದ ವಿಷಯಗಳನ್ನ ಚರ್ಚಿಸುವುದಕ್ಕೆ ಪೂರ್ವಭಾವಿಯಾಗಿ ರಾಷ್ಟ್ರಾಧಿಪತಿಯ ಅಪ್ಪಣೆ ಅಗತ್ಯವಾಗಿತ್ತು. ಬ್ರಿಟಿಷ್ ಶಾಸನ ಸಭೆಯು ರಚಿಸಿದ ಕಾನೂನುಗಳನ್ನು ರಾಷ್ಟ್ರಾಭ್ಯುದಯಕ್ಕೆ ಎಷ್ಟೇ ವ್ಯತಿರಿಕ್ತವಾಗಿದ್ದರೂ, ಅವುಗಳನ್ನು ಸಂಶೋಧಿಸುವುದು, ತಿದ್ದುಪಡಿ ಮಾಡುವ ಅಥವ ರದ್ದು ಮಾಡುವ ಅಧಿಕಾರವನ್ನು ಹೊಂದಿರಲಿಲ್ಲ; ಸೈನ್ಯ, ನೌಕ ಮತ್ತು ಪೋಲಿಸ್‌ಗಳಿಗೆ ಸಂಬಂಧಿಸಿದ ಆಕ್ಟುಗಳನ್ನು ಗೌವರ್ನರ್ ಜನರಲ್‌ನ ಅನುಮತಿ ಪಡೆದು ಸಂಶೋಧಿಸಬಹುದಾಗಿತ್ತು. ಬ್ರಿಟಿಷ್ ಪ್ರಜೆಗಳ ನಿರಾತಂಕ ಜೀವನಕ್ಕೆ ಆತಂಕಗಳನ್ನು ತಂದೊಡ್ಡುವ ಕಾನೂನುಗಳನ್ನು ರಚಿಸುವುದಕ್ಕೆ ಸ್ವಾತಂತ್ರ್ಯವಿರಲಿಲ್ಲ.

**1935ನೆ ಭಾರತ ರಾಷ್ಟ್ರವಿಧಾನ ಆಕ್ಟ್ ಸೆಕ್ಷನ್ 110–118 ಗಳ**

ಪ್ರಕಾರ ಸಂಯುಕ್ತ ಶಾಸನ ಸಭೆಯು ಬ್ರಿಟಿಷ್ ಕೈಗಾರಿಕೆ, ವ್ಯಾಪಾರ ಮತ್ತು ಬ್ರಿಟಿಷ್ ಪ್ರಜೆಗಳ ಹಕ್ಕು ಆಸ್ತಿ ಪಾಸ್ತಿಗಳ ವಿಷಯ ಶಾಸನ ಮಾಡಲಾಗದು. ರಕ್ಷಣ ವಿಭಾಗಗಳ ವಿಚಾರವಾಗಲಿ, ಮತ ವಿಚಾರ ವಾಗಲಿ ನಿಷೇಧವಾದುದು. ಮಸೂದೆಗಳು ಕಾನೂನಾಗಿ ಪರಿವರ್ತನೆ ಹೊಂದಬೇಕಾದರೆ ಅಧಿಪತಿಯ ಸಮ್ಮತಿ ಅತ್ಯಾವಶ್ಯಕ. ಅವನು ಸಮ್ಮತಿ ಯನ್ನು ಕೊಡಬಹುದು. ಅಥವ ಚಕ್ರವರ್ತಿಯನುಮತಿಗೋಸ್ಕರ ಕೆಲವು ಕಾಲ ನಿಧಾನಿಸಬಹುದು. ರಾಷ್ಟ್ರಾಧಿಪತಿಯು ಅಗತ್ಯಕಾಲಗಳಲ್ಲಿ ಭಾರತದ ಶಾಂತಿ ಮತ್ತು ಶಿಸ್ತುಗಳಿಗೋಸ್ಕರ ಹೊಸ ಹೊಸ ವಿಶೇಷ ಕಾನೂನುಗಳನ್ನು ಮಾಡಿ ಆಚರಣೆಗೆ ತರಬಹುದು. ಈ ವಿಶೇಷಾಜ್ಞೆಗಳು ಶಾಸನ ಸಭೆಯು ರಚಿಸಿದ ಕಾನೂನುಗಳಿಂದ ಹೆಚ್ಚು ಅಂತಸ್ತನದು ಮತ್ತು ಆರು ತಿಂಗಳ ಕಾಲ ಶಕ್ತಿಯುತವಾಗಿರತಕ್ಕದ್ದು.

ಆರ್ಥಿಕ ವಿಚಾರಗಳಲ್ಲಿಯೂ ಶಾಸನಸಭೆಗೆ ಮಸೂದೆಗಳನ್ನು ಮಾಡುವ ಅಧಿಕಾರವಿರಲಿಲ್ಲ. ಅವಶ್ಯ ಖರ್ಚಿಗಾಗಿ ಉಪಯೋಗಿಸಿದ ಹಣಗಳ ಲೆಕ್ಕಾಚಾರ ಶಾಸನ ಸಭೆಯ ಮತಕ್ಕೆ ತರಬೇಕಾದ ಅಗತ್ಯ ವಿರಲಿಲ್ಲ. ಗೌವರ್ನರ್ ಜನರಲ್‌ನ ಸಂಬಳ ಮತ್ತು ವಿಶ್ರಾಂತಿವೇತನಗಳು, ಸಾಲಗಳು, ಸಚಿವರ ಸಂಬಳ ಮತ್ತು ಭತ್ಯಗಳು, ಹೈ ಕೋರ್ಟಿನ ನ್ಯಾಯಾ ಧೀಶರ ಸಂಬಳ ಮತ್ತು ಭತ್ಯಗಳು, ರಕ್ಷಣೆಗೋಸ್ಕರ ಅವಶ್ಯವಾದ ಖರ್ಚು, ಕ್ರೈಸ್ತಮತ ವಿಚಾರಗಳಿಗೆ ಸಂಬಂಧಪಟ್ಟ ಖರ್ಚು, ಸಾಮ್ರಾಜ್ಯದ ಕಾರ್ಯ ಗಳನ್ನು ನಿರ್ವಹಿಸಲು ಬೇಕಾಗುವ ಖರ್ಚುಗಳು—ಇವುಗಳನ್ನು ಶಾಸನ ಸಭೆಯು ವಿಮರ್ಶಿಸಿ ಅಭಿಮತವನ್ನು ಕೊಡಲಾಗುತ್ತಿತ್ತು.

ಸೆಕ್ಷನ್ 24–ಪ್ರಕಾರ ಫೆಡರೇಷನ್ ಆದಾಯಗಳಿಂದ ಬೇರೆ ವಿಧ ವಾದ ಖರ್ಚುಗಳನ್ನು ಮಾಡಬೇಕಾದರೆ ಶಾಸನ ಸಭೆಯನುಮತಿ ಅವ ಶ್ಯಕವಾಗಿತ್ತು. ಆದರೆ ಕೇಳಿದ ಹಣವನ್ನು ಕಮ್ಮಿ ಮಾಡಿದರೆ ಅಥವ ತಿರ ಸ್ಕರಿಸಿದರೆ ರಾಷ್ಟ್ರಾಧಿಪತಿಯು ಅದನ್ನು ಸರಿಪಡಿಸಬಹುದು. ಯಾವ ಖರ್ಚ ನ್ನಾದರೂ ಆಯವ್ಯಯ ಪಟ್ಟಿಯಲ್ಲಿ ಸೇರಿಸಬೇಕಾದರೆ ಗೌವರ್ನರ್ ಜನ

ಶಲ್‌ನ ಸಮ್ಮತಿ ಬೇಕಾಗಿತ್ತು. ಭಾರತದ ಒಟ್ಟು ಹುಟ್ಟುವಳಿಯಲ್ಲಿ ಶೇಕಡ ಎಂಬತ್ತರಷ್ಟು ಹಣದ ವಿಚಾರವಾಗಿ ಶಾಸನ ಸಭೆಯು ಅಭಿಮತವನ್ನು ಕೊಡುವ ಅಧಿಕಾರವಿರಲಿಲ್ಲ. ಆರ್ಥಿಕವಿಚಾರಗಳಲ್ಲಿ ಸಹಕರಿಸಲು ಆರ್ಥಿಕ ಸಚಿವನೊಬ್ಬನನ್ನು ಇವನು ನೇಮಿಸಕೊಳ್ಳಬಹುದಾಗಿತ್ತು. ( Section 15 )ಆರ್ಥಿಕ ಸಚಿವನು ಸಂಯುಕ್ತ ರಾಜ್ಯದ ಆರ್ಥಿಕ ವಿಚಾರಗಳಲ್ಲಿ ಸಚಿವರಿಗಳಿಗಾಗಲಿ, ಶಾಸನ ಸಭೆಗಾಗಲಿ ಅಧೀನನಲ್ಲ. ಆರ್ಥಿಕ ನಿಯಮ ಮತ್ತು ನೀತಿ ಪ್ರತಿಪಾದನೆಗಳೆಲ್ಲಾ ರಾಷ್ಟ್ರಾಧಿಪತಿಗೆ ಸೇರಿದ್ದು. ವಿರೋಧ ಚಳುವಳಿಗಳನ್ನು ಅಡಗಿಸುವುದಕ್ಕೂ ಗಸ್ತನ್ನು ಏರ್ಪಡಿಸುವುದಕ್ಕೂ ಹೆಚ್ಚು ಖರ್ಚುಗಳನ್ನು ಮಾಡುವ ಅಧಿಕಾರವಿತ್ತು (Sections 36) ಪ್ರಾಂತೀಯ ಸಾಲಗಳನ್ನು ಕೇಳುವುದಾಗಲಿ ಹೊಸ ತೆರಿಗೆಗಳನ್ನು ನಿರ್ಧರಿಸುವುದಾಗಲಿ, ಯಾವ ವಿಧವಾದ ಖರ್ಚುಗಳನ್ನು ಮಾಡುವುದಾಗಲಿ, ಪೂರ್ವಭಾವಿಯಾಗಿ ಗೌವರ್ನರ್‌ನ ಅನುಮತಿಯನ್ನು ಪಡೆಯಬೇಕಾಗಿತ್ತು. ರೈಲ್ವೆಗಳ ರಚನೆ, ಹತೋಟಿ, ರೈಲ್ವೆ ಬೋರ್ಡುಗಳ ಸದಸ್ಯರ ನೇಮಕ ಇವುಗಳಲ್ಲಿ ಅವನಿಗೆ ವಿಶೇಷಾಧಿಕಾರವಿತ್ತು. ( Sec. 183 ) ಸಾಲಗಳನ್ನು ಕೊಡುವ, ತೆಗೆದುಕೊಳ್ಳುವ, ಹಣಕಾಸುಗಳನ್ನು ವಿನಿಮಯಮಾಡುವ (Exchange) ದೇಶದ ಆರ್ಥಿಕ ಸ್ಥಿತಿಯನ್ನು ರಕ್ಷಿಸುವ ರಿಸರ್ವ್ ಬ್ಯಾಂಕ್‌ನ (Reserve Bank of India ) ಆಡಳಿತವೂ ಗೌವರ್ನರ ಜನರಲ್‌ನ ಅಧೀನವಾಗಿತ್ತು.

ಈಗ ಭಾರತ ಸಂವಿಧಾನದ ನಿಯಮಗಳ ಪ್ರಕಾರ ಇಂಗ್ಲೆಂಡಿನ ಹೌಸ್ ಅಫ್ ಕಾಮನ್ಸಿನ ಸದಸ್ಯರಿಗಿರುವ ವಾಕ್ ಸ್ವಾತಂತ್ರ, ಅಭಿಪ್ರಾಯವನ್ನು ವ್ಯಕ್ತಪಡಿಸುವ ಮತ್ತು ಲಿಖಿತ ಮೂಲಕ ವರದಿಯನ್ನು ಒಪ್ಪಿಸುವ ಸ್ವಾತಂತ್ರ್ಯ ಮೊದಲಾದುವು ಭಾರತದ ಲೋಕಸಭೆಯ ಸದಸ್ಯರಿಗೆ ಇದೆ. ಈ ಸದಸ್ಯರು ಹಣಕಾಸಿನ ವಿಚಾರದಲ್ಲಿ ಟೀಕಿಸಬಹುದು, ಶಾಸನಗಳನ್ನು ನಿರೋಧಿಸಬಹುದು. ಈ ಸದಸ್ಯರ ಭಾಷಣ, ವರದಿ, ಅಭಿಮತಗಳ ಮೇಲೆ ಯಾವ ನ್ಯಾಯಾಸ್ಥಾನಕ್ಕೂ ವಿಚಾರಣೆ ನಡೆಸುವ ಅಧಿಕಾರವಿಲ್ಲ. ಸದಸ್ಯರ ವೇತನ, ಭತ್ಯ ಇವುಗಳನ್ನು ಸಭೆಯೇ

ನಿರ್ಧರಿಸುವುದು. ಕಾರ್ಯಕಲಾಪಗಳನ್ನು ಹಿಂದೀ ಅಥವ ಇಂಗ್ಲೀಷ್‌ನ ಭಾಷೆಯಲ್ಲಿ ನಡೆಸಬಹುದು. ಇಂಗ್ಲೆಂಡ್‌ನ ಶಾಸನ ಸಭೆಯಂತೆ ಲೋಕ ಸಭೆಯೂ ಪರಮಾಧಿಕಾರವನ್ನು ಪಡೆದಿದೆ.

# ಪ್ರಕರಣ ೧೩

## ಕಾರ್ಯಾಂಗದ ಮೇಲೆ ಶಾಸಕ ಸಭೆಯ ಹತೋಟಿ
## Legislative Control of the Executive in a Democracy

ಪ್ರಜಾಪ್ರಭುತ್ವಗಳಲ್ಲಿ ಕಾರ್ಯಾಂಗವು ರಾಜನೀತಿ ಕಾರ್ಯಗಳಲ್ಲಿ ಮತದಾತರ ಮನ್ನಣೆಯನ್ನು ಪಡೆಯಬೇಕು; ಮತ್ತು ಅವರ ಅಭಿಮತವನ್ನು ಅನುಮೋದಿಸಬೇಕು. ಆರ್ಥಿಕ ಮತ್ತು ಸಾಮಾಜಿಕ ವಿಷಯಗಳು ಪ್ರಜೆಗಳಲ್ಲಿ ವೃದ್ಧಿಹೊಂದುತ್ತಿರುವಾಗ ಶಾಸಕ ಸಭೆಯು ಶಕ್ತಿರಹಿತವಾದುದರಿಂದ ಅವುಗಳನ್ನು ಆದಷ್ಟು ಬೇಗನೆ ಜಾರಿಗೆ ತರಲು ಮಂತ್ರಿಮಂಡಲಕ್ಕೆ ವಹಿಸಬೇಕು.

ಶಾಸಕ ಸಭೆಯು ಎಲ್ಲಾ ರಾಷ್ಟ್ರಗಳಲ್ಲಿಯೂ ಶಾಸನ ಮತ್ತು ನಿಯಮಗಳನ್ನು ರಚಿಸಿ ಕಾರ್ಯಾಂಗವು ಆಚರಿಸಬೇಕಾದ ರೀತಿಯನ್ನು ಮತ್ತು ದರ್ಜೆಯನ್ನು ಸ್ಥಾಪಿಸಿ, ಮಂತ್ರಿಮಂಡಲಕ್ಕೆ ಕಾರ್ಯಾಚರಣೆಯ ಸ್ವಾತಂತ್ರವನ್ನು ಮಾತ್ರ ಕೊಟ್ಟಿದೆ. ಕೆಲವು ರಾಷ್ಟ್ರಗಳಲ್ಲಿ ಶಾಸಕಾಂಗವೂ ಮತ್ತು ಕಾರ್ಯಾಂಗವೂ ಸಹಕರಿಸುತ್ತವೆ.

## English Parliament: its powers of control

ಪಾರ್ಲಿಮೆಂಟ್ ಸಭೆಗೆ ಮೂರು ವಿಧವಾದ ನಿಯಂತ್ರಣಾಧಿಕಾರವು ಚಾರಿತ್ರಿಕವಾಗಿ ಬೆಳೆದು ಬಂದಿವೆ. ಆದಾಯ ತೆರಿಗೆ ಮುಂತಾದ ವಿಷಯಗಳನ್ನು ನಿರ್ಧರಿಸುವುದು, ಆಯವ್ಯಯ ಪಟ್ಟಿಯನ್ನು ಆಚರಣೆಗೆ ತಂದ ಮೇಲೆ ಲೆಖ್ಖಾಚಾರಗಳನ್ನು ತನಿಖೆಮಾಡುವುದು, ಆಡಳಿತ ನಡೆಸುವುದರಲ್ಲಿ ಕುಂದುಕೊರತೆಗಳನ್ನು ವಿಮರ್ಶಿಸಿ, ರಾಷ್ಟ್ರಾಭ್ಯುದಯಕ್ಕೆ ಅಗತ್ಯವಾದ ಸಲಹೆಗಳನ್ನು ಕೊಟ್ಟು ವಿಶೇಷ ದೋಷಗಳಿದ್ದಲ್ಲಿ ಅವುಗಳನ್ನು ಪರಿಹರಿಸು

ವುದು; ಆಡಳಿತಾಧಿಕಾರದ ಎಲ್ಲೆಗಳನ್ನು ಮೀರಿದಲ್ಲಿ ಸಚಿವರನ್ನು (Impeach) ದೋಷಾರೋಪಣೆಗೆ ಗುರಿಮಾಡುವುದು.

ಆರ್ಥಿಕ ವಿಚಾರದಲ್ಲಿ ಪಾರ್ಲಿಮೆಂಟ್ ಸಭೆಯು ಹೊಂದಿರುವ ನಿಯಂತ್ರಣಾಧಿಕಾರವು ಬಹಳ ಫಲಕಾರಿಯಾಗಿದೆ. ವಾರ್ಷಿಕ ವ್ಯಯದ 3/4 ಭಾಗಕ್ಕೆ ಶಾಶ್ವತವಾದ ಪಾರ್ಲಿಮೆಂಟ್ ಆಕ್ಟ್‌ಗಳು ಅನುಮತಿ ಕೊಟ್ಟಿರುತ್ತವೆ; ಆದರೆ ಸೈನ್ಯದ ಅಂದಾಜು ಪಟ್ಟಿ ಪೌರೇಯ ಕಾರ್ಯಗಳು ಮುಂತಾದುವುಕ್ಕೆಲ್ಲಾ ಪ್ರತಿ ವರ್ಷವೂ ಪಾರ್ಲಿಮೆಂಟ್ ಸಮಿತಿಯ ಅನುಮತಿಯು ಅತ್ಯಾವಶ್ಯಕ; ಶಾಶ್ವತವಾಗಿ ಮಾಡಿರುವ ಖಾಯಂ ಗ್ರ್ಯಾಂಟ್‌ಗಳಿಂದಲೂ ಆಕ್ಟ್‌ಗಳಿಂದಲೂ ತನ್ನ ನಿಯಂತ್ರಣಾಧಿಕಾರವನ್ನು ಹೆಚ್ಚಿಸಿಕೊಳ್ಳುತ್ತದೆ. ಅಂದಾಜಿನ ಪಟ್ಟಿಯನ್ನು ಸಚಿವರು ಸಭೆಯ ಅವಗಾಹನೆಗೆ ತರುತ್ತಾರೆ. ವೇಸ್ ಮತ್ತು ಮೀನ್ಸ್ ಸಮಿತಿಯು ಮುಂದಿನ ವರ್ಷದ ಆಯುವ್ಯಯ (Balance Sheet) ಪಟ್ಟಿಯ ಅಂದಾಜನ್ನು ಪರೀಕ್ಷಿಸಿ ರದ್ದುಗೊಳಿಸಬೇಕಾದುದನ್ನು ರದ್ದುಗೊಳಿಸಿ ಅವಶ್ಯಕವಾಗಿದ್ದ ಪಕ್ಷದಲ್ಲಿ ಹೆಚ್ಚು ತೆರಿಗೆಗಳನ್ನು ಪ್ರಜೆಗಳ ಮೇಲೆ ವಿಧಿಸಲು ಸಲಹೆಯನ್ನು ಕೊಡುತ್ತದೆ. ಹಣ ಗಳಿಸುವ ರೀತಿಯನ್ನು ವೇಸ್ ಮತ್ತು ಮೀನ್ಸ್ ಸಮಿತಿಯು ಸೂಚಿಸಿದರೆ, ಸಪ್ಲೈ ಸಮಿತಿಯು ಹಣ ವ್ಯಯದ ವಿಧಾನವನ್ನು ಸೂಚಿಸುತ್ತದೆ. ಎಲ್ಲಾ ರಾಷ್ಟ್ರಗಳಲ್ಲಿಯೂ ಖರ್ಚಿಗಾಗಿ ಸಭೆಯ ವಾರ್ಷಿಕ ಅಭಿಮತ ಅತ್ಯಾವಶ್ಯಕ. ಆದರೆ ಲೆಖ್ಖಾಚಾರ, ತನಿಖೆಕ್ರಮ ಮತ್ತು ಆಚಾರದಲ್ಲಿ ಭಿನ್ನ ಭಿನ್ನವಾಗಿವೆ. ಲೆಖ್ಖಾಚಾರ ಸಭೆಗಳು ಫ್ರೆಂಚ್ ದೇಶದಲ್ಲಿಯೂ, ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಇಂಗ್ಲೆಂಡಿನಲ್ಲಿಯೂ, ಬ್ಯೂರೋ ಆಫ್ ದಿ ಟ್ರೆಜರಿ ಅಮೆರಿಕಾದಲ್ಲಿಯೂ ತನಿಖೆ ನಡೆಸುತ್ತಾರೆ. ಈ ಸಂಸ್ಥೆಗಳನ್ನು ಮತ್ತು ಅಧಿಕಾರಿಗಳನ್ನು ಮುಖ್ಯವಾಗಿ ಇಂಗ್ಲೆಂಡಿನಲ್ಲಿ ಕಾರ್ಯಾಂಗ ಸಮಿತಿಯು ವಜಾಮಾಡಲು ಅಧಿಕಾರ ಪಡೆದಿಲ್ಲ. ಈ ಅಧಿಕಾರಿಗಳು ಮಂತ್ರಿಮಂಡಲಕ್ಕೆ ವಿರೋಧವಾಗಿ ತೀರ್ಮಾನಿಸಿದರೆ, ಪ್ರಜೆಗಳಿಗೆ ವಿರುದ್ಧವೆಂದು ಭಾವನೆಯಾಗಿ ಸಚಿವ ಮಂಡಲವು ರದ್ದಾಗುವ ಸಂಭವವುಂಟು. ಆದರೆ ಅಮೆರಿಕಾ

ರಾಷ್ಟ್ರದಲ್ಲಿ ಸಚಿವ ಮಂಡಲವು ಕಾಂಗ್ರೆಸ್ ಸಭೆಗೆ ಅಧೀನವಲ್ಲವಾದುದರಿಂದ ರಾಜೀನಾಮೆಗೆ ಅವಕಾಶವೇ ಇಲ್ಲ. ವಿರುದ್ಧ ತೀರ್ಪುಗಳು ಮತ್ತು ಭಿನ್ನಾಭಿಪ್ರಾಯಗಳಿಗೆ ಮಾರ್ಗವಾಗಬಹುದು.

ಆಡಳಿತಾಧಿಕಾರವನ್ನು ನೇಮಿಸುವುದು, ವಜಾ ಮಾಡುವುದು, ಅತೃಪ್ತಿಕರ ಆಡಳಿತಕ್ಕಾಗಿ ಆಕ್ಷೇಪಿಸುವುದು, ಅಭಿಯೋಗ– ಇವುಗಳು ಪಾರ್ಲಿಮೆಂಟ್‌ನ ಹತೋಟಿಯ ಪ್ರತ್ಯಕ್ಷಸಾಧಕಗಳು. ಪ್ರಶ್ನೆಗಳಿಂದಲೂ, ಇನ್‌ಟರ್ ಪಲೇಷನ್‌ಗಳಿಂದಲೂ, ಸಮಿತಿ ಪರಿಶೀಲನೆಗಳಿಗೆ ಕಾರ್ಯಾಂಗವನ್ನು ಒಳಪಡಿಸುವುದು ಒಂದು ಮಾರ್ಗ; ಪ್ರಶ್ನೆಗಳು ವೈಯಕ್ತಿಕವಾಗಿಯೇ ಆಗಲಿ ಚರ್ಚಾಸ್ಪದವಾಗಲೀ ಇರಕೂಡದು. ಅಸಂಬದ್ಧ ಪ್ರಶ್ನೆಗಳಿಗೆ ಸಚಿವರು ಉತ್ತರ ಕೊಡಬೇಕಾದುದಿಲ್ಲ. ಗಹನವಿಚಾರಗಳಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟ್‌ನ ನಲವತ್ತು ಸದಸ್ಯರು ಮುಂದುವರಿಸಬಹುದು, ಇಲ್ಲವೇ ಚರ್ಚಿಸಬಹುದು. ಸಭೆಯಲ್ಲಿ ವಾದವಿವಾದಗಳ ಮೂಲಕ ಸಚಿವರನ್ನು ಪ್ರಶ್ನೆ ಕೇಳುವ ಅಧಿಕಾರವಿರುವುದರಿಂದ ಆಡಳಿತದ ಎಲ್ಲಾ ವಿಭಾಗಗಳನ್ನು ಕೂಲಂಕಶವಾಗಿ ಸದಸ್ಯರು ತಿಳಿಯಲು ಅವಕಾಶವಿದೆ. ಚರ್ಚೆಯಿಂದ ಸರ್ಕಾರದ ನ್ಯೂನತೆಗಳನ್ನು ಸರಿಪಡಿಸಿ, ಆಯವ್ಯಯಗಳನ್ನು ಮಾರ್ಪಾಟು ಮಾಡಬಹುದು.

## Non-Parliamentary Form of Government

ಪಾರ್ಲಿಮೆಂಟ್ ರೀತಿ ಸಭೆಗಳಿಲ್ಲದ ರಾಷ್ಟ್ರಗಳಲ್ಲಿ ಸಚಿವರು ಸಭೆಯ ಸದಸ್ಯರಲ್ಲದಿದ್ದರೂ ಸಭಾ ಪ್ರವೇಶಮಾಡಿ ಭಾಷಣಮಾಡುವ ಹಕ್ಕನ್ನು ಪಡೆದಿದ್ದಾರೆ ಸಾರ್ವಜನಿಕ ವಿಚಾರಗಳಲ್ಲಿ ಸದಸ್ಯರಿಗೆ ತಕ್ಕ ಉತ್ತರ ನೀಯಬೇಕು ಮತ್ತು ಆ ವಿಷಯಗಳಲ್ಲಿ ತಿಳಿವಳಿಕೆ ಕೊಡುವ ಪ್ರಶ್ನೆಗಳಿಗೆ ಕೊಡತಕ್ಕ ಉತ್ತರ ಸಮರ್ಪಕವಾಗದಿದ್ದರೆ ಆಕ್ಷೇಪಣೆಗೆ (Vote of Censure) ಆಸ್ಪದವಾಗುತ್ತಾರೆ. ಸಚಿವರು ಈ ರಾಷ್ಟ್ರಗಳಲ್ಲಿ ಸದಸ್ಯರ ನಂಬಿಕೆಗೆ ಪಾತ್ರರಲ್ಲವಾದುದರಿಂದ ಆಕ್ಷೇಪಣೆಗೆ ಒಳಗಾದರೂ ರಾಜೀನಾಮೆ

ಕೊಡುವರೆಂದು ನಿರ್ದಿಷ್ಟವಾಗಿ ಹೇಳಲಾಗದು. ಸ್ವಿಸ್ ರಾಷ್ಟ್ರದಲ್ಲಿ ಪ್ರಶ್ನೆ, ಚರ್ಚೆ ಮತ್ತು ಆಕ್ಷೇಪಣೆಗಳಿಗೆ ಆಸ್ಪದವಿಲ್ಲ. ಫ್ರಾನ್ಸ್‌ನಲ್ಲಿ ಪ್ರಶ್ನೆ ಮತ್ತು ಚರ್ಚೆಯಾಗಿ ಸಾಮಾನ್ಯವಾಗಿ ಆಕ್ಷೇಪಣೆಯಲ್ಲಿ ಪರಿಣಾಮ. ಪ್ರಶ್ನೆಗಳು ಸಚಿವರನ್ನು ಅವಹೇಳನಮಾಡಲು ದೌರ್ಜನ್ಯ ಮನೋಭಾವನೆ ಯಿಂದ ಕೂಡಿರುವುದರಿಂದ ಅನೇಕಾವರ್ತಿ ಸಚಿವರನ್ನು ರಾಜಿನಾಮೆ ಕೊಡುವಂತೆ ನಿರ್ಬಂಧಿಸುತ್ತವೆ. ( Interpellations ) ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡದಿದ್ದರೆ, ಶಾಸಕ ಸಭೆಗೆ ದ್ರೋಹಮಾಡಿ ದರೆ ರಾಜೀನಾಮೆ ಕೊಡಬೇಕು ಎಂಬುದೇ ರಾಜಕೀಯ ಸ್ವಾತಂತ್ರ್ಯಕ್ಕೆ ತಳಹದಿ.

ಆಡಳಿತದ ಪ್ರತಿಯೊಂದು ಕಾರ್ಯವನ್ನು ಕೂಲಂಕಶವಾಗಿ ವಿಮರ್ಶಿಸಬೇಕಾದರೆ ಸದಸ್ಯರ ಸಮಿತಿಗಳು ರಚಿತವಾಗಬೇಕು. ಫ್ರಾನ್ಸ್ ದೇಶದಲ್ಲಿ ನಲವತ್ತುನಾಲ್ಕು ಸದಸ್ಯರನ್ನೊಳಗೊಂಡ ಇಪ್ಪತ್ತು ಶಾಶ್ವತ ಸಮಿತಿಗಳು ಏರ್ಪಟ್ಟಿವೆ. ಪ್ರಜಾ ಸಂಖ್ಯೆಗನುಗುಣವಾಗಿ ಪಾರ್ಲಿಮೆಂಟ್ ಸಭೆಯ ಪ್ರತಿನಿಧಿಯಾಗಿ, ಕ್ರಮವಾಗಿ ಸರ್ಕಾರದ ಕಾರ್ಯಗಳನ್ನು ತಡೆಯಲು ಸಾಧನಗಳಾಗಿ ಬೆಳೆದುಬಂದಿವೆ. ಆದುದರಿಂದ ಸದಸ್ಯನು ನ್ಯಾಷನಲ್ ಸಭೆಗೆ ಮಾತ್ರವಲ್ಲದೆ, ಅದರಲ್ಲಿರುವ ಸಣ್ಣ ಸಭೆಗೂ ಕೌನ್ಸಿಲ್ ಸಭೆಗೂ ಅದರ ಉಪಸಮಿತಿಗಳಿಗೂ ಜವಾಬ್ದಾರನಾಗಿರಬೇಕು. ಈ ಸಮಿತಿ ಗಳು ವಿಷಯಾನುಸಾರ, ವ್ಯಕ್ತಿಯ ಸ್ವಂತ ಪ್ರಭಾವ, ದಕ್ಷತೆ ಮತ್ತು ಸಚಿವ ತಂತ್ರಗಳನುಗುಣವಾಗಿ ಸಹಕರಿಸಬಹುದು ಅಥವ ತಿರಸ್ಕರಿಸ ಬಹುದು. ಸಚಿವರು ದುರ್ಬಲರಾದ ಪಕ್ಷದಲ್ಲಿ ಆಡಳಿತಕ್ಕೆ ಚ್ಯುತಿಬರುವ ರೀತಿಯಲ್ಲಿ ಸಮಿತಿಗಳು ವರ್ತಿಸಬಹುದು. ಯಾವ ರಾಷ್ಟ್ರದಲ್ಲಿ ಕಾರ್ಯಾಂಗ ಸಮಿತಿಯು ಶಾಸನ ಸಭೆಗೆ ಜವಾಬ್ದಾರಿಯಾಗಿಲ್ಲವೋ ಅಲ್ಲಿ ಆಡಳಿತಗೋಷ್ಠಿ ಗಳನ್ನು ನಿಯಂತ್ರಣದಲ್ಲಿಡುವ ಸ್ಟಾಂಡಿಂಗ್ ಸಮಿತಿಗಳು ಅತ್ಯಾವಶ್ಯಕ. ಎಲ್ಲಿ ಶಾಸನ ಸಭೆಯು ಸಚಿವ ಮಂಡಲವನ್ನು ಆಕ್ರಮಣಕ್ಕಾಗಿ ರದ್ದು ಗೊಳಿಸಲು ಸಾಧ್ಯವಿಲ್ಲವೋ ಅಲ್ಲಿ ಕೆಲವು ನಿಯಮಗಳು ಜಾರಿಗೆ ಬಂದಿವೆ.

ಆರ್ಥಿಕ ವಿಚಾರದಲ್ಲಿ ತೆರಿಗೆ ವಿಧಿಸುವ ಮೂಲಕ ಕಾರ್ಯಾಂಗ ನಿಯಂತ್ರಣ, ಲೆಖ್ಖಾಚಾರ ಪರಿಶೀಲನ, ಶಾಸನ ಸಭೆಯ ಮಸೂದೆಗಳನ್ನು ಮಂತ್ರಿ ಮಂಡಲವು ಒಪ್ಪಿದೊಡನೆಯೇ ಕಾನೂನಾಗಿ ಪರಿಣಮಿಸುವಿಕೆ, ಆಡಳಿತ ವಿಮರ್ಶೆ, ಮತ್ತು ಸ್ಟಾಂಡಿಂಗ್ ಸಮಿತಿಗಳ ಪರಿಶೀಲನ ಮತ್ತು ನಿರ್ಣಯ —ಇವೇ ಮುಂತಾದ ನಿಯಮಗಳು.

## Indian Parliament and Rules

ಭಾರತದಲ್ಲಿ ಏರ್ಪಟ್ಟಿರುವ ಸಂಯುಕ್ತಾಂಗ ರಚನೆಯಲ್ಲಿ ಕಾರ್ಯಾಂಗವನ್ನು ಹತೋಟಿಯಲ್ಲಿಡಲು ಶಾಸಕ ಸಭೆಗೆ ಅವಕಾಶವಿದೆ; ಸರ್ಕಾರದ ಕಾರ್ಯಕ್ರಮಗಳನ್ನು ತಡೆಯಲು ಕೆಲವು ಉಪಾಯಗಳು ಸಾಧನೆಗಳು ಶಾಸನ ಸಭೆಯಲ್ಲಿ ಬೆಳೆದುಬಂದಿದೆ. ಆದುದರಿಂದ ಇದು ಅಧಿಕಾರ ರಹಿತವಾದರೂ ತನ್ನ ನಡವಳಿಕೆಯಿಂದ ಸರ್ಕಾರದ ಕಾನೂನುಗಳನ್ನು ಮುರಿಯಬಹುದು. ಚರ್ಚೆಯು ಯಾವ ಗತಿಯಲ್ಲಿದ್ದರೂ ಕ್ಲೋಸರ್ (Closure) ಬೇಕೆಂದು ಅರ್ಜಿಹಾಕಬಹುದು. ಅಧಿಕಾರಿ ಮತ್ತು ಖಾಸಗಿ ಮಸೂದೆಗಳ ವಿಚಾರದಲ್ಲಿ Closure ಗೆ ಅಧ್ಯಕ್ಷನ ಸಮ್ಮತಿ ಅತ್ಯಾವಶ್ಯಕ. ಅಲ್ಪ ಸಂಖ್ಯಾಕರ ಪುರೋಭಿವೃದ್ಧಿ ದೃಷ್ಟಿಯಿಂದ ಅಧ್ಯಕ್ಷನಿಗೆ ಈ ಹಕ್ಕು ಕಾಪಿಡಲಾಗಿದೆ.

ಸರ್ಕಾರದ ಸಚಿವರನ್ನು ಪ್ರಜಾ ಸಂಬಂಧವಾದ ಪ್ರಶ್ನೆಗಳನ್ನು ಕೇಳಬಹುದು, ಆಕ್ಷೇಪಿಸಬಹುದು. ಸ್ಟಾಂಡಿಂಗ್ ಆರ್ಡರ್ 13 ಮತ್ತು 7 ಪ್ರಕಾರ ಆಕ್ಷೇಪಣೀಯ ಉತ್ತರಕ್ಕೆ ಹತ್ತು ದಿವಸ ಕಾಲಾವಧಿ; ಆದರೆ ಪ್ರಶ್ನೆಗಳು ವಿದೇಶಾಂಗನೀತಿಗೆ, ಸಂಸ್ಥಾನಗಳಿಗೆ, ರಾಜವಂಶ ಮುಂತಾದುವುಗಳಿಗೆ ಅನ್ವಯಿಸಿದರೆ ಅಧ್ಯಕ್ಷನು ಅವುಗಳನ್ನು ನಿರಾಕರಿಸಬಹುದು. ಭಾರತ ಕಾರ್ಯದರ್ಶಿಗಳಿಗೂ, ಸಚಿವರಿಗೂ ಮತ್ತು ರಾಷ್ಟ್ರಾಧ್ಯಕ್ಷನಿಗೂ ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳುಂಟಾದರೆ ಅಂತಹ ವಿಚಾರಗಳಲ್ಲಿ ಪ್ರಶ್ನೆಕೇಳಬಹುದು. I. A. ಆರ್ಡರ್ಸ್ 15 ಪ್ರಕಾರ

ಸಭಾಧ್ಯಕ್ಷನು ಸಭೆಗೆ ಸಂಬಂಧಿಸಿದ ಕಾನೂನಿನ ಪ್ರಕಾರ ಪ್ರಶ್ನೆಗಳಿಗೆ ಅವಕಾಶವಿದೆಯೋ ಇಲ್ಲವೋ ವಿಮರ್ಶಿಸಿ ಪ್ರಶ್ನೆಗಳು ಉತ್ತರವೀಯುವ ರೀತಿಯಲ್ಲಿದ್ದರೆ, ಸಮ್ಮತಿ ಕೊಡಬಹುದು. ಸರ್ಕಾರದಾಡಳಿತದ ಆಕ್ಷೇಪ ಕರವಾದ ವರ್ತನೆಯನ್ನು ಮತ್ತು ನ್ಯೂನತೆಗಳನ್ನು ಪ್ರಸಿದ್ಧಪಡಿಸುವಹಕ್ಕು ಸದಸ್ಯರಿಗಿರುವುದರಿಂದ ಆಕ್ಷೇಪಣೆಯು ನಿರ್ದಿಷ್ಟವಾದ ಪಕ್ಷದಲ್ಲಿ ಅಧ್ಯಕ್ಷನನುಮತಿಯಿಂದ ಅಡ್ಜರ್ನಮೆಂಟ್ ಮೋಷನ್ (Adjournment Motion) ಕೇಳಬಹುದು. ವಿಮರ್ಶಿಸಿದ ವಿಷಯಗಳನ್ನು ಪುನರ್ವಿಮರ್ಶಿಸಲೂ ಕೂಡ ಅವಕಾಶವಿದೆ, ಮತ್ತು ಮುಂದಾಗಬಹುದಾದ ವಿಷಯಗಳನ್ನು ಮುಂದಾಲೋಚಿಸಬಹುದು. ಮುಂದಾಗಬಹುದಾದ ವಿಷಯಗಳಪರ (Adjournment Motion) ಗಳನ್ನು ಕೇಳಿದರೆ ಸರ್ಕಾರವನ್ನು ಅವಹೇಳನಮಾಡಿದಂತಾಗುವುದರಿಂದ ರಾಷ್ಟ್ರಾಧ್ಯಕ್ಷನು ಪ್ರಜಾವರ್ಗ ಪ್ರಗತಿಗೆ ಅದು ಪ್ರತಿಬಂಧಕವೆಂಬ ದೃಷ್ಟಿಯಿಂದ, ಅಂತಹ ಮೋಷನ್ನುಗಳಿಗೆ ಅವಕಾಶ ಕೊಡುವುದಿಲ್ಲ.

ಸರ್ಕಾರದ ಆಡಳಿತವನ್ನು ಟೀಕಿಸುವ ನಿರ್ಣಯಗಳು ಮತ್ತೊಂದು ವಿಧ; ನಿರ್ಣಯಗಳು ಕೇವಲ ವೈಯುಕ್ತಿಕವಾದ ಪ್ರಾರ್ಥನೆಗಳು; ಆಯಾಯಾ ವರಣಕ್ಷೇತ್ರಗಳಲ್ಲಿ ಪ್ರಜಾವರ್ಗಕ್ಕೆ ಅನುಕೂಲವಾದ ಏರ್ಪಾಟುಗಳನ್ನು ಬಯಸಿ ನಿರ್ಣಯಗಳ ಮೂಲಕ ಆಡಳಿತದವರನ್ನು ಪ್ರಾರ್ಥಿಸಬಹುದು. ವಿಷಯಗಳು ಅಸ್ಪಷ್ಟ ಮತ್ತು ಅನಿರ್ದಿಷ್ಟವಾಗಿಯೂ ವಿವಾದಾಸ್ಪದವಾಗಿಯೂ, ವ್ಯಂಗೋಕ್ತಿ ಮತ್ತು ತಪ್ಪುತಿಳುವಳಿಕೆಗಳಿಂದ ಕೂಡಿದುದಾಗಿಯೂ ಕಂಡುಬಂದಲ್ಲಿ ಅಂತಹನಿರ್ಣಯಗಳನ್ನು ಸಭಾಧ್ಯಕ್ಷನೇ ನಿರಾಕರಿಸಬಹುದು. ನಿರ್ಣಯಗಳ ಅವಧಿ ಹದಿನೈದು ದಿವಸ, ನಿರ್ಣಯವನ್ನು ಸೂಚಿಸಿದವರು ನವೀನ ತಿಳುವಳಿಕೆಯಿಂದ ಅದನ್ನು ವಾಪಸ್ಸು ತೆಗೆದುಕೊಳ್ಳಬಹುದು. ನಿರ್ಣಯಗಳು ಗಹನವಾದ ತತ್ವಗಳಿಂದ ಕೂಡಿದ್ದರೆ ಅವುಗಳನ್ನು ಸಭೆಯನುಮತಿಯಿಲ್ಲದೆ ಹಿಂದಕ್ಕೆ ತೆಗೆದುಕೊಳ್ಳಲಾಗದು.

## Committee System in U S A

ಸಂಯುಕ್ತರಾಷ್ಟ್ರದಲ್ಲಿ ಶಾಸನ ರಚನೆಯು ಬಹು ಮುಖ್ಯವಾಗಿ ಸಮಿತಿಗಳಿಂದ; ಪ್ರಜಾಪ್ರತಿನಿಧಿ ಸಭೆಯೊಂದರಲ್ಲಿಯೇ ಅರವತ್ತು ಸಮಿತಿಗಳಿವೆ; ಅವುಗಳಲ್ಲಿ ವೇಸ್ ಮತ್ತು ಮಿನ್ಸ್‌ಸಮಿತಿ, ಅಪ್ರೋಪ್ರಿಯೇಷನ್ ಸಮಿತಿ, ಮತ್ತು ವಿದೇಶಾಂಗನೀತಿಗೆ ಸಂಬಂಧಪಟ್ಟ ಸ್ಟಾಂಡಿಂಗ್ ಸಮಿತಿಗಳು. ಅಮೆರಿಕಾದಲ್ಲಿ ಕಾರ್ಯಾಂಗವು ಇನ್ನು ಯಾವ ಅಂಗಕ್ಕೂ ಆಧೀನವಾಗಿಲ್ಲದಿರುವುದರಿಂದಲೂ, ಪಾರ್ಲಿಮೆಂಟರಿ ಸರ್ಕಾರದಲ್ಲಿನಹಾಗೆ ವ್ಯಕ್ತಿ ಬಣಗಳ ಮುಂದಾಳತ್ವವಿಲ್ಲದಿರುವುದರಿಂದಲೂ ಶಾಸನರಚನೆ, ಕಾನೂನುಗಳ ವಿಮರ್ಶೆ, ಮುಂತಾದುವುಗಳು ಸದಸ್ಯರ ಸಮಿತಿಗಳಿಂದಲೇ ಜರಗಬೇಕು. ರಾಷ್ಟ್ರಬಣಗಳಿಗೆ ಸಮಿತಿಗಳಲ್ಲಿ ಪ್ರಾತಿನಿಧ್ಯವಿದೆ. ಇದರಿಂದ ಭಿನ್ನಾಭಿಪ್ರಾಯಗಳುಳ್ಳ ಜನರೂ ಸಹಕರಿಸಿ ಏಕಭಾವನೆಯನ್ನು ಹೊಂದಲೂ ಮಾರ್ಗವಿದೆ. ಅಮೆರಿಕಾದ ಕಾನೂನುಗಳ ಬಹುಭಾಗವು ರಾಷ್ಟ್ರಬಣಗಳ ಮತ್ತು ರಾಜನೀತಜ್ಞರ ಪ್ರತ್ಯೇಕ ಪ್ರತ್ಯೇಕವಾದ ಅಭಿಪ್ರಾಯಗಳ ಸಂಯೋಗದಿಂದಾದುದು. ಸಮಿತಿಗಳಿಗೆ ಪ್ರಧಾನಸ್ಥಾನವಿರುವುದರಿಂದ ದುರಾಗ್ರಹವುಳ್ಳ ಕಾರ್ಯಾಂಗವಾಗಲಿ, ದುರ್ಮನಸ್ಸಿನ ಸಭೆಯಾಗಲಿ ಪ್ರಜಾಹಾನಿಯಾಗುವಂತ ಕಾನೂನುಗಳನ್ನು ಮಾಡುವುದಕ್ಕೆ ಆಸ್ಪದವಿಲ್ಲ.

ಸಮಿತಿ ಸರ್ಕಾರವು ಅಪರಾಧ ರಹಿತವಲ್ಲ. ಅನೇಕ ನ್ಯೂನತೆಗಳಿಂದ ಕೂಡಿದೆಯನ್ನುವುದು ಅನುಭವದ ಮಾತು. ಸಮಿತಿಗಳು ಅಪ್ರಯೋಜಕ ಮತ್ತು ಕೆಲವು ವೇಳೆ ಪ್ರಜಾಹಾನಿಕರ ಮಸೂದೆಗಳನ್ನು ಮಾಡಬಹುದು; ರಾಷ್ಟ್ರಾಭ್ಯುದಯ ದೃಷ್ಟಿಯಿಲ್ಲದ, ದುರ್ವ್ಯಾಪಾರ ಬುದ್ಧಿಯುಳ್ಳ ಸದಸ್ಯರಿದ್ದ ಪಕ್ಷದಲ್ಲಿ ವ್ಯಾಪಾರಸ್ತರ ಮತ್ತು ಬಂಡವಾಳಗಾರರ ಪರವಾಗಿ ಮಸೂದೆಗಳನ್ನು ಗುಪ್ತವಾಗಿ ರಚಿಸಿ, ಕಾನೂನಗಳನ್ನಾಗಿ ಮಾಡಿಸಬಹುದು. ಕಾರ್ಯಾಂಗಕ್ಕೂ ಶಾಸಕ ಸಭೆಗೂ ನೇರವಾದ ಸಂಬಂಧವಿಲ್ಲದಿರುವುದರಿಂದಲೂ, ಪ್ರಸಿದ್ಧ ಪುರುಷರು, ರಾಜನೀತಜ್ಞರು ಸಮಿತಿಗಳಲ್ಲಿ

ಸೇರಲು ಆಸ್ಪದವಿಲ್ಲದಿರುವುದರಿಂದಲೂ, ಅನೇಕ ದುರ್ವರ್ತನೆಗಳಿಗೆ ಅವಕಾಶವಾಗಿದೆ. ರಾಷ್ಟ್ರಾಧ್ಯಕ್ಷ ಮತ್ತು ಸಚಿವರಗಳ ಸಲಹೆಗಳಿಗೂ ಸಾಮಾನ್ಯ ಸದಸ್ಯರ ಮಸೂದೆಗಳಿಗೂ ಯಾವ ವ್ಯತ್ಯಾಸವಿಲ್ಲ. ಸಮಿತಿಗಳು ಎರಡು ವಿಧವಾದ ಸಲಹೆಗಳನ್ನೂ ಸ್ವಪ್ರಯೋಜನಕ್ಕಾಗಿ ಒಪ್ಪುವುದರಿಂದ ಏಕರೀತಿಯಾಗಿ ಕಾಣುವುವು. ಗುಪ್ತ ಸಮಿತಿಗಳ ಮತ್ತು ಲಾಬಿ (Lobby) ಗಳ ಸಲಹೆಗಳು ಪ್ರಾಧಾನ್ಯತೆಯನ್ನು ಹೊಂದಿರುವುದರಿಂದ, ಪ್ರಜಾವರ್ಗದ ಅಭಿಮತವನ್ನು ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಿಲ್ಲ. ಆದುದರಿಂದ ಸಾರ್ವಜನಿಕ ಅಭಿಮತವನ್ನು ವಿಮರ್ಶಿಸಿ, ಅನುಮೋದಿಸುವ ಅಧ್ಯಕ್ಷ ಮತ್ತು ಸಚಿವ ಮಂಡಲ ಮತ್ತು ಆಡಳಿತವರ್ಗದವರಿಗೆ, ಪ್ರಜಾಪ್ರತಿನಿಧಿ ಸಭೆಯನ್ನು ಪ್ರವೇಶಿಸಿ ಸ್ವಕೀಯ ಮತ್ತು ಸಾರ್ವತ್ರಿಕ ಅಭಿಮತವನ್ನು ನಿರ್ವಂಚನೆಯಿಂದ ಸೂಚಿಸುವ ಅಧಿಕಾರವನ್ನು ರಾಷ್ಟ್ರ ಸಂವಿಧಾನ ಕೊಟ್ಟಿದೆ. ಸಮಿತಿಗಳ ಕಠೋರ ನೀತಿಯನ್ನು, ಅಲ್ಪಸತ್ತಾತ್ಮಕ ರಾಜ್ಯಾಧಿಕಾರವನ್ನು ತಡೆಯಬಹುದೆಂಬ ಭಾವನೆ ಈಗ ಬಲವಾಗುತ್ತಿದೆ. [1]

## How shall the Legislature Control the Executive in a Modern State

ಸಚಿವರ ಜವಾಬ್ದಾರಿಯು ಫಲಕಾರಿಯಾಗಬೇಕಾದರೆ ವರಣಕರ್ತ ಸಮಾಜವು ಬಹಳ ದಕ್ಷತೆಯಿಂದ ಆಗಿಂದಾಗ್ಗೆ ಆಡಳಿತವನ್ನು ಪರಿಶೀಲಿಸಬೇಕು; ಶಾಸಕ ಸಭೆಯು ವೈಯಕ್ತಿಕವಾಗಿ ಆಡಳಿತ ಸೂತ್ರವನ್ನು ನಡೆಸಲಾಗದು. ನಡೆಸುವ ಆವಶ್ಯಕತೆಯೂ ಯಿಲ್ಲ. ದಕ್ಷತೆಯಿಂದ ಕೂಡಿದ ಮಂತ್ರಿಮಂಡಲವನ್ನು ರಚಿಸಿ ಆಡಳಿತಸೂತ್ರವನ್ನು ಅದಕ್ಕೆ ವಹಿಸಿ, ಅದರ ವರ್ತನೆಯನ್ನು ಅವಿಚ್ಛಿನ್ನವಾಗಿ ವಿಮರ್ಶಿಸಲು ತೊಡುಗುವುದು ಭವ್ಯವಾದುದು. ಮತ್ತು ಮಸೂದೆಗಳ ರಚನೆ ರಾಜನಿಪುಣರಿಗೆ ಸೇರತಕ್ಕದ್ದು;

1 "American Proceedure is on the side of Respoussible, easily Understood and efficiant Governmental action" Americans Academy of oucal Sciences, 1903, P. 36

ಕಾನೂನುಗಳನ್ನು ರಚಿಸುವ ಪೂರ್ವಭಾವಿಯಾಗಿ ರಚನಕಾರನು ರಾಷ್ಟ್ರ ಮತ್ತು ಸಾಮಾಜಿಕ ವಿಷಯಜ್ಞಾನ ಅದಕ್ಕೆ ಸಂಬಂಧಿಸಿದ ದರ್ಶನಗಳು, ರಾಷ್ಟ್ರದ ಹಿತಾಹಿತ ವಿವೇಚನ, ಉಪನಿಪಾತಗಳ ನಿವಾರಣೆಗಳನ್ನು ನಿರ್ಧರಿಸುವ ವಿಧಾನಗಳು—ಇವುಗಳಲ್ಲಿ ಸಂಪೂರ್ಣವಾದ ಪರಿಶ್ರಮದಿಂದ ಉಂಟಾಗುವ ಪ್ರತಿಭೆಯನ್ನು ಪಡೆದಿರಬೇಕು. ಅನೇಕ ಶಾಸನಕಾರರು ಮತ್ತು ಸಭಾಸದಸ್ಯರು ಸಮಸ್ಯೆಗಳ ವ್ಯಾಪ್ತಿ ಎಷ್ಟೆಂದಾಗಲಿ, ಕೂಲಂಕಶವಾಗಿ ವಿಮರ್ಶಿಸುವ ಜ್ಞಾನಸವನ್ನಾಗಲೀ ಹೊಂದಿಲ್ಲ; ಇವುಗಳಲ್ಲಿ ಪರಿಪೂರ್ಣತೆಯಿದ್ದರೂ ಯಾವ ರೀತಿಯಲ್ಲಿ ನಿರ್ದಿಷ್ಟವಾಗಿ, ಸಾರ್ವಜನಿಕವಾಗಿ ಗಹನವಾದ ವಿಷಯಗಳನ್ನು ಕಾನೂನುರೂಪವಾಗಿ ಪರಿವರ್ತಿಸಬೇಕೆಂಬ ತಿಳಿವಳಿಕೆಯಿಲ್ಲ. ಆದುದರಿಂದ ಆಧುನಿಕ ರಾಷ್ಟ್ರಗಳಲ್ಲಿ ಅನೇಕ ತತ್ವಗಳಿಂದ ಕೂಡಿರುವ ಸಂಕೀರ್ಣವಾದ ಮತ್ತು ಜಟಿಲವಾದ ಸಮಸ್ಯೆಗಳು ಪ್ರಜೆಗಳ ಮುಂದೆ ತೀರ್ಮಾನಕ್ಕೆ ಬರುವುದರಿಂದ ವಿಶೇಷ ತಿಳುವಳಿಕೆ, ದಕ್ಷತೆ ಮತ್ತು ನಿಪುಣತೆಗಳಿಂದ ಕೂಡಿರುವ ರಾಜನೀತಿಜ್ಞರಿಗೆ ಕಾನೂನಗಳನ್ನು ರಚಿಸುವ ಅಧಿಕಾರವನ್ನು ವಹಿಸಬೇಕು.

ಕಾನೂನುಗಳನ್ನು ರಚಿಸುವ ಹಕ್ಕು ರಾಜನೀತಿಜ್ಞರಿಗಾದರೆ, ಕಾನೂನುಗಳನ್ನು ಟೀಕಿಸುವ ಜವಾಬ್ದಾರಿ ಸಭಾ ಸದಸ್ಯರದು. ಶಾಸನ ಸಭೆಯು ಸ್ವೇಚ್ಛೆಯಿಂದ ಕಾನೂನುಗಳನ್ನು ವಿರೋಧಿಸಿದರೆ ವರಣಕರ್ತ ಸಮಾಜಕ್ಕೆ ಅಪೀಲುಮಾಡುವ ಹಕ್ಕು ಹೊಂದಿರಬೇಕು: ಅಲ್ಲದೆ ಕ್ಯಾಬಿನೆಟ್ ಅಥವ ಸಚಿವ ಮಂಡಲಕ್ಕೆ ಶಾಸನರಚನಾತ್ಮಕ ಅಧಿಕಾರಕೊಟ್ಟು ಅದನ್ನು ವಿಮರ್ಶಿಸುವುದರಲ್ಲಿ ಉದಾಸೀನಮಾಡಿದರೆ, ಅದು ನಿರಂಕುಶಾಧಿಕಾರವನ್ನು ಏರ್ಪಡಿಸಬಹುದು. ಕ್ಯಾಬಿನೆಟ್ ಸಭೆಯು ತನ್ನ ತತ್ವಕ್ಕೆ ತಾನೇ ಜವಾಬ್ದಾರಿಯುತವಾದರೆ ತಾನು ಸೋತು ಹೋದಾಗ ರಾಜೀನಾಮೆ ಕೊಡಬೇಕಾಗುತ್ತದೆ; ಇಲ್ಲವೆ ನೀತಿಯುತವಾದ ಪ್ರಜಾಭಿಪ್ರಾಯವನ್ನನುಮೋದಿಸಿ ಬೇರೆ ಶಾಸನಗಳನ್ನು ರಚಿಸಬೇಕಾಗುವುದು. ಸಾರ್ವಜನಿಕ ಮತವನ್ನು ಪ್ರತಿಬಿಂಬಿಸುವುದಕ್ಕಿಂತ ಪ್ರಜೆಗಳಿಗೆ ಹಿತಾಹಿತವೆಂದು

ತಿಳಿದು ಅದನ್ನು ರೂಪಗೊಳಿಸುವುದು ಕಲ್ಯಾಣಕರ. ಸಚಿವಮಂಡಲವು ಕಾನೂನಿನ ರಚನೆಯನ್ನು ನಿಧಾನಿಸಬಾರದು; ತೀರ್ಪುಗಳನ್ನು ಬಹಳ ಬೇಗನೆ ವಿಷದಪಡಿಸಬೇಕು; ಪ್ರಜಾ ಪ್ರಭುತ್ವ ಸರ್ಕಾರದರೀತಿಯಲ್ಲಿ ಯಾವ ನಿರ್ಬಂಧವಾಗಲಿ, ಗೋಪ್ಯವಿಚಾರಗಳಾಗಲಿ ಇರಕೂಡದು. ಇವುಗಳಿದ್ದ ಪಕ್ಷದಲ್ಲಿ ಪ್ರಜಾ ಪ್ರಗತಿಗೆ ಪ್ರತಿಬಂಧಕವಾಗಿ ಪರಿಣಮಿಸುವುದು. ಔದ್ಯೋಗಿಕ ಕೇಂದ್ರ ಮಾಲಿಕರ, ಆಗರ್ಭಶ್ರೀಮಂತರ, ಜಮೀನುದಾರರ ಬಲಿಗೆ ತುತ್ತಾಗಿ ಸಮಾಜಹಿತಕ್ಕೆ ವಿರೋಧನಾದ ಸಾಧನವಾಗಿ ವರ್ತಿಸ ಬಹುದು. ಅಂತಹ ಸನ್ನಿವೇಶಗಳಲ್ಲಿ ಆಯವ್ಯಯ ಪಟ್ಟಿಗಳನ್ನು ತಯಾರಿಸುವ, ಅಧಿಕಾರವನ್ನು ಕೊಟ್ಟು ಮಂತ್ರಿ ಮಂಡಲವನ್ನು ರಾಷ್ಟ್ರಹಿತ ಸಾಧನೆಗಾಗಿ ಬಲಪಡಿಸುವುದರಿಂದ ವಿರೋಧವರ್ತನೆಗಳನ್ನು ಪ್ರತಿಬಂಧಿಸ ಬಹುದು. ವಿಷಯ, ವ್ಯಾಪ್ತಿ ಮತ್ತು ಶಾಸನಾವಧಿಗಳ ನಿಯಂತ್ರಣ ದಿಂದಲೂ, ಶಾಸನಗಳನ್ನು ನ್ಯಾಯಾಂಗವು ವಿಮರ್ಶಿಸುವುದರಿಂದಲೂ, ರಾಷ್ಟ್ರವಿಧಾನಗಳ ಮಾರ್ಪಾಟನಿಂದಲೂ, ರಾಷ್ಟ್ರದಲ್ಲಿ ನಿರೋಧ ನಿರೋಧಕ ಭಾವಗಳಿಂದಲೂ (Checks and balances), ವರಣಕರ್ತ ಸಮಾಜವು ಇನಿಷಿಯೇಟಿವ್ ಮತ್ತು ರೆಫರೆಂಡಂಗಳ ಮೂಲಕ ಅಭಿಮತವನ್ನು ಸೂಚಿಸುವುದರಿಂದಲೂ, ಶಾಸನಸಭೆಗಳ ಕಠೋರ ವರ್ತನೆಗಳನ್ನು ಅಡಗಿಸಬಹುದು.

ಬ್ರಿಟಿಷ್ ರಾಜ್ಯದಲ್ಲಿ ಪಾರ್ಲಿಮೆಂಟ್ ಸಭೆಯ ರಚನೆ ಮತ್ತು ಹಕ್ಕುಗಳನ್ನು ಮಾರ್ಪಾಟು ಮಾಡಬೇಕೆಂಬುದು ಈಗ ರಾಷ್ಟ್ರ ಯೋಜನೆಯಾಗಿದೆ. ಇದಕ್ಕೆ ಮುಖ್ಯ ಕಾರಣ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ನಿರಂತರ ಪರಿವರ್ತನೆ ಮತ್ತು ನೂತನ ಭಾವನೆಗಳು. ಪಾರ್ಲಿಮೆಂಟಿನ ಪರಮಾಧಿಕಾರಕ್ಕೂ ನೂತನ ಆರ್ಥಿಕ ಭಾವನೆಗಳೊಳಗೊಂಡ ಕಾರ್ಮಿಕವರ್ಗದ ವಿಮೋಚನ ಚಳುವಳಿಗೂ ಅಂತರವು ಹೆಚ್ಚಾಗುತ್ತಿದೆ. ಕೆಲವು ಕಡೆ ಪಾರ್ಲಿಮೆಂಟನ್ನು ಆರ್ಥಿಕ ಸಮಿತಿಯನ್ನಾಗಿ ಪರಿವರ್ತಿಸುವ ಭಾವನೆಯಿದೆ. ಈ ಮಾರ್ಪಾಟುಗಳಲ್ಲಿ ಸಮಗ್ರಪ್ರಜಾಮತ

ವನ್ನು ನಿರ್ದಿಷ್ಟವಾಗಿ ತಿಳಿಯಲು ತಕ್ಕ ಸಾಧನೆಗಳು ವ್ಯವಸ್ಥಿತವಾಗಿಲ್ಲ. ಪ್ರಜಾಭಿಮತ ಗೋಷ್ಠಿಗಳನ್ನು (Institutes of Public Opinion) ಏರ್ಪಡಿಸಿದರೆ ಪ್ರಜಾಭಿಮತಕ್ಕೂ ಸಭಾಭಿಮತಕ್ಕೂ ಎಷ್ಟು ಸಂಯೋಗ ಅಥವ ಅಂತರವಿದೆ ಎನ್ನುವುದು ಸ್ಪಷ್ಟವಾಗುವುದೆಂದು ಬೆರಿಡೇಲ್ ಕೀತ್ ಎಂಬ ರಾಜನೀತಿಜ್ಞನು ಹೇಳಿದ್ದಾನೆ. 1910ರಲ್ಲಿ ಛೆಂಬರ್ಲಿನ್ನನು ಮಂತ್ರಿ ಮಂಡಲದ ನಾಯಕನನ್ನಾಗಿ ನಿರ್ಧರಿಸಲ್ಪಟ್ಟಾಗ ಪ್ರಜಾಭಿಮತ ಗೋಷ್ಠಿಯು ಶೇಕಡ 32 ರಂತೆ ಅವನಪರ ಅಭಿಮತವನ್ನು ಕೊಟ್ಟದ್ದನ್ನು ನೋಡಿದರೆ ಸಭಾಭಿಮತವು ಜನಾಂಗದಭೀಮತವೆಂದು ಎಂದಿಗೂ ತಿಳಿಯಲಾಗದೆಂಬುದು ವಿಷದವಾಗುತ್ತದೆ. ಸದಸ್ಯರನ್ನು ಬಣಗಳ ಸಂಕೋಲೆಗಳಿಂದ ತಪ್ಪಿಸಿ ಪ್ರಜಾಭಿಮತಗೋಷ್ಠಿಗಳಿಗೆ ಅಧೀನರನ್ನಾಗಿ ಮಾಡುವುದು ಶುಭದಾಯಕವೆಂದು ಕೀತ್‌ನ ಅಭಿಪ್ರಾಯ. ಸಭೆಯ ಸದಸ್ಯರೇ ಸಮಾಜೋದ್ದೇಶವನ್ನು ಪ್ರತ್ಯಕ್ಷವಾಗಿ ತಿಳಿಯಲು ಈ ಗೋಷ್ಠಿಗಳು ಸಾಧಕವಾಗಬಹುದೆಂದು ಭಾವನೆ.

# ಪ್ರಕರಣ ೧೪

## ಕಾರ್ಯಾಂಗ

## ಕಾರ್ಯಾಂಗ ರಚನೆಯ ಕ್ರಮ

ಒಂದು ಜನಾಂಗದ ಆಡಳಿತಾಂಗಗಳಲ್ಲಿ ಕಾರ್ಯಾಂಗವು ದ್ವಿತೀಯ ಸ್ಥಾನ ಪಡೆದಿದೆ: ಪ್ರಗತಿಪರ ರಾಷ್ಟ್ರಗಳಲ್ಲಿ ಇತ್ತೀಚೆಗೆ ಆಡಳಿತಾಧಿಕಾರಿಗಳೂ ಮತ್ತು ವರ್ಣಕರ್ತಸಮಾಜವೂ ಪ್ರಧಾನ ರಾಜ್ಯಾಂಗಗಳಾಗಿ ಪರಿಣಮಿಸಿವೆ. ಶಾಸಕ ಸಭೆಗಳು ನಿರ್ಧರಿಸಿದ ಕಾನೂನುಗಳನ್ನು ಕಾರ್ಯಕಾರಿಯಾಗಿ ಮಾಡುವುದಕ್ಕೆ ರಚನೆಯಾಗುವ ಸಂಸ್ಥೆಗಳನ್ನು ಅವುಗಳನ್ನು ಅವಿಚ್ಛಿನ್ನವಾಗಿ ನಡೆಯುವಂತೆ ಆಡಳಿತ ಕೆಲಸವನ್ನು ಏರ್ಪಡಿಸುವ ಅಧಿಕಾರಿಗಳನ್ನು ಕಾರ್ಯಾಂಗವೆಂದು ಕರೆಯಬಹುದು. ಕಾರ್ಯನಿರ್ವಾಹ ಅಧ್ಯಕ್ಷನ ನೇಮಕ ಅವನ ಅವಧಿ, ಅಧಿಕಾರ, ಇತರ ಸರ್ಕಾರಗಳಿಗಿರುವ ನಿಕಟಸಂಬಂಧ; ಕಾರ್ಯನಿರ್ವಾಹಕಮಂಡಳಿ, (Executive Council), ಆಡಳಿತ ಇಲಾಖೆಗಳ ಅಧ್ಯಕ್ಷರನ್ನೊಳಗೊಂಡ ಕಾರ್ಯಕಾರಿ ಸರಕಾರ, (Cabinet); ಆಡಳಿತ ಇಲಾಖೆಗಳ ನೌಕರುಗಳ ನೇಮಕ, ಅವಧಿ ಮತ್ತು ರಚನೆ–ಇವುಗಳಷ್ಟನ್ನೂ ವಿವರಿಸುವ ಅಂಗ ಕಾರ್ಯಾಂಗವು.

ಶಾಸಕಾಂಗವು ಬಹುಸಂಖ್ಯಾಕವಾದುದು; ಅನೇಕ ಪ್ರತಿನಿಧಿಗಳಿಂದ ಕೂಡಿ ಸಾಮಾಜಿಕ ಸ್ಥಿತಿಗತಿಗಳನುಗುಣವಾಗಿ ಕಾನೂನುಗಳನ್ನು ಮಾಡುವುದು, ಅದರ ಲಕ್ಷ್ಯ. ಕಾರ್ಯಾಂಗವು, ಶಾಸಕಾಂಗವು ಮಾಡಿದ ಕಾನೂನಗಳನ್ನು ನ್ಯಾಯಾಂಗವು ನಿರ್ಧರಿಸಿದ ನಿಯಮಗಳನ್ನು ಜಾರಿಗೆ ತಂದು, ಅವುಗಳನ್ನು ಪ್ರಜಾವರ್ಗದವರು ಮನ್ನಿಸುವಂತೆ ಬಲವಂತಿಸುತ್ತದೆ. ಶೀಘ್ರವಾಗಿ ನಿರ್ಧಾರಕ್ಕೆ ಬಂದು ಏಕ ಮನಸ್ಸಿನಿಂದಲೂ ಮತ್ತು ಗುಪ್ತವಾಗಿಯೂ, ದಕ್ಷತೆಯಿಂದ ವರ್ತಿಸುವುದೇ ಕಾರ್ಯಾಂಗದ

ಮುಖ್ಯ ಧ್ಯೇಯ, ಆದುದರಿಂದ ಅನೇಕ ಮತದಾತರಿಂದ ಕೂಡಿದ ಸಮಿತಿಗಳಿಗಿಂತಲೂ ಒಬ್ಬನು ಅಥವ ಸಂಯೋಜನೆಯುಳ್ಳ ಕೆಲವರಿಂದ ಕೂಡಿದ ಕಾರ್ಯಾಂಗವು ಉತ್ತಮವೆಂಬ ಭಾವನೆಯಿದೆ. ಶಕ್ತಿ ಮತ್ತು ತೇಜಸ್ಸಿನಿಂದ ಕೂಡಿದ ಕಾರ್ಯಾಂಗವು ನೀತಿಯುತ ಸರ್ಕಾರದ ಚಿಹ್ನೆಯೆಂದು ಹ್ಯಾಮಿಲ್ಟನ್ ಹೇಳಿದ್ದಾನೆ.1 ಏಕಕಾರ್ಯನಿರ್ವಾಹಕ ಅಧ್ಯಕ್ಷ, ಮತ್ತು ಬಹುಸಂಖ್ಯಾಕ ಶಾಸಕ ಸಭೆ–ಇವೆರಡು ಪ್ರಜಾಪ್ರಭುತ್ವ ಸರ್ಕಾರದ ಸಹಜ ಗುಣಗಳು.2 ಬಹುಸಂಖ್ಯಾ ಕಾರ್ಯಾಂಗ ಸಮಿತಿಗಳು ಆಥೆನ್ಸ್, ಸ್ಪಾರ್ಟಾ ಮತ್ತು ರೋಂ ರಾಷ್ಟ್ರಗಳಲ್ಲಿ ಆಚರಣೆಯಲ್ಲಿದ್ದವು. ಕಾರ್ಯನಿರ್ವಾಹಕ ಅಧಿಕಾರವು ಆರ್ಕಾನ್ಸ್, ಸೇನಾಪತಿಗಳಲ್ಲಿ ವಿಭಾಗಿಸಲ್ಪಟ್ಟಿತ್ತು. ಇಬ್ಬರು ಕೌನ್ಸಲ್‌ರು ದ್ವಯಾತ್ಮಕ ಸಮಿತಿಯು ಹಾಗೆ ರೋಂ ರಾಜ್ಯಭಾರವನ್ನು ನಡೆಸಿದರು. ಇತ್ತೀಚಿಗೆ ಈ ಪದ್ಧತಿಯು (Collegiate Principle) ಮಾಯವಾಗಿ ಏಕಕಾರ್ಯನಿರ್ವಾಹಕ ಸಮಿತಿಯ ಸಿದ್ಧಾಂತವು ಜಾರಿಗೆ ಬಂದಿದೆ.

ಸ್ವಿಸ್ ರಾಷ್ಟ್ರದಲ್ಲಿ ಬಹು ಸಂಖ್ಯಾಕ ಕಾರ್ಯನಿರ್ವಾಹಕ ಮಂಡಲಿ ಇದೆ; ಆದರೆ ಪಾರ್ಲಿಮೆಂಟರಿ ಸರ್ಕಾರ ವಿರುವ ಇತರ ರಾಷ್ಟ್ರಗಳಲ್ಲಿ ಟಿಚುಲರ್ ನಾಮ ಅವಶಿಷ್ಟ ಅಧ್ಯಕ್ಷ ಅಥವ ರಾಜನನ್ನು ಬಿಟ್ಟು, ರಾಜಕಾರ್ಯ ಸರ್ಕಾರಗಳೆಲ್ಲಾ ಸಚಿವರಿಂದ ಕೂಡಿದ ಕಾಬಿನೆಟ್ ಸಮಿತಿಯಲ್ಲಿ ಅಡಗಿದೆ. ಸಚಿವರಿಂದ ಕೂಡಿದ ಕಾಬಿನೆಟ್ ಪದ್ಧತಿ ಎಲ್ಲಾ ರಾಷ್ಟ್ರಗಳಲ್ಲಿಯೂ, ಪ್ರಾಂತೀಯ ಮತ್ತು ಮುನಿಸಿಪಲ್ ಸರ್ಕಾರಗಳಲ್ಲಿ ಜಾರಿಗೆ ಬರುವ ಸೂಚನೆ ತೋರುತ್ತಿವೆ. ಅನೇಕ ಮಂತ್ರಿಗಳಿಂದ ಕೂಡಿದ ಸಮಿತಿಯು ರಚನೆಯಾದರೆ ಅಧಿಕಾರಿಗಳ ಸ್ವೇಚ್ಛಾಪ್ರವರ್ತನೆಗೆ ಅಡ್ಡಿ; ಕ್ರಾಂತಿಕಾರಿ ಚಳುವಳಿಗೆ ಆಸ್ಪದವಿರುವಲ್ಲಿ, ಏಕನಾಯಕನ ಅಧೀನದಲ್ಲಿರುವುದಕ್ಕಿಂತ ರಾಷ್ಟ್ರವು ಅನೇಕ ಸಚಿವರಧೀನದಲ್ಲಿದ್ದರೆ, ಕ್ಷೇಮ; ಅಲ್ಲದೆ

1 Hamilton: The Federalist No. 69.

2. Mill - Representative Government Ch. 14.

ಪ್ರಾಜ್ಞರೂ, ಪ್ರಗಲ್ಭರೂ ಮತ್ತು ಗುಣಪಕ್ಷಪಾತರೂ ಆದ ಮಂತ್ರಿಗಳು ರಾಷ್ಟ್ರದ ಅಭ್ಯುದಯುವನ್ನು ದಕ್ಷತೆಯಿಂದ ಕಾಪಾಡಬಲ್ಲರು. ನಾಯಕನನ್ನು ಕಾರ್ಯನಿರ್ವಾಹಕ ಮಂಡಳಿಗೆ ಅಧೀನನನ್ನಾಗಿ ಮಾಡುವ ಸಂಪ್ರದಾಯವಿದ್ದಲ್ಲಿ, ಕಾರ್ಯಗಳಲ್ಲಿ ಭಿನ್ನಾಭಿಪ್ರಾಯಗಳು ಒಡಕುಗಳು ಹುಟ್ಟುತ್ತವೆ. ಪ್ರಭಾವಶಕ್ತಿ ಒಬ್ಬನದು, ಉತ್ಸಾಹ ಅನೇಕರದು, "To Act is the function of one; to deliberate that of several". ಎಂಬ ತತ್ವಾನುಗುಣವಾಗಿ ಕಾರ್ಯಾಂಗ ರಚನೆಯಾಗಬೇಕು.1 ಕಾರ್ಯನಿರ್ವಾಹಕ ಸಮಿತಿಯು ರಾಜ್ಯಾಂಗವಾಗಿದ್ದಪಕ್ಷದಲ್ಲಿ ಅದು ನಾಯಕನಿಗೆ ಸಲಹೆಗಳನ್ನು ಕೊಟ್ಟು ಅವನ ಯೋಗಕ್ಷೇಮ ಸಾಧಕವಾಗಿರಬೇಕು.

## ರಾಷ್ಟ್ರದ ಮತ್ತು ಕಾರ್ಯಾಂಗದ ನಾಯಕನನ್ನು ನೇಮಿಸುವ ವಿಧಾನಗಳು.

ಜನರು ಪ್ರಾಚೀನರಾಷ್ಟ್ರಗಳಲ್ಲಿ ಅಭಿಜಾತನೂ ಮತ್ತು ಪ್ರಾಜ್ಞಿಯಾದವನನ್ನು ನಾಯಕನನ್ನಾಗಿ ನೇಮಿಸಿ ಅವನ ವಂಶಕ್ಕೆ ಅವನ ತರುವಾಯ ಅಧಿಕಾರವನ್ನು ವಹಿಸುತ್ತಿದ್ದರು. ವಂಶಾನುಗತ ರಾಜಪದ್ಧತಿಯು ಆಧುನಿಕ ರಾಷ್ಟ್ರಗಳ ಕೆಲವಲ್ಲಿ ಕಾಣಬಹುದು. ಇಂಗ್ಲೆಂಡ್, ಜಪಾನ್ ಮುಂತಾದ ದೇಶಗಳಲ್ಲಿ ಜಾರಿಯಲ್ಲಿರುವ ನಿಯಮಿತ ರಾಜತಂತ್ರವು ಚಾರಿತ್ರಕವಾಗಿ ಬೆಳೆದುಬಂದಿದ್ದೇ ಹೊರತು ಯಾವುದೊಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಪ್ರಜೆಗಳು ಸಾಮೂಹಿಕವಾಗಿ ಈ ವಿಧವಾದ ರಾಜ್ಯಾಧಿಪತ್ಯವನ್ನೂ ನಿರ್ಧರಿಸಲಿಲ್ಲ. ವೈಜ್ಞಾನಿಕ ದೃಷ್ಟಿಯಿಂದ ಪ್ರಜಾಪ್ರಭುತ್ವದಲ್ಲಿ ನಿಯಮಿತ ರಾಜತಂತ್ರವು ಶುಭದಾಯಕವಾಗಿ ತೋರುವುದು ಎಂದು ಬರ್ಗೆಸ್, ಬೇಜಾಹ್ಟ್ ಮತ್ತು ಟಾಡ್ ಹೇಳಿದ್ದಾರೆ.2 ಸ್ನಿಗ್ಧ ಗಂಭೀರ ವ್ಯವಹಾರವುಳ್ಳವನೂ,

1. *Burgess* · Political Science and Constitutional Government Vol. II P 308.

2. *Bagehot* The English Constitution Ch. S.
*Todd*. Parliamentary Government I IV.

ಸಂಪ್ರಿಯನೂ, ದಕ್ಷನೂ ಆದ ರಾಜನಲ್ಲಿ ಪ್ರಜೆಗಳಿಗೆ ವಿಶೇಷ ಪ್ರೀತಿ; ಸಂಕೀರ್ಣವಾದ ಅನೇಕ ಪಕ್ಷ ಮತ್ತು ಸಂಸ್ಥೆಗಳಿಂದ ಕೂಡಿರುವ ಪ್ರಜಾಪ್ರಭುತ್ವಕ್ಕಿಂತ ಜವಾಬ್ದಾರಿಯುತವಾದ ವಂಶಪಾರಂಗತ ರಾಜಶಾಸನ ಹಿರಿದಾದುದೆಂಬ ನಂಬಿಕೆ ಅನೇಕರಲ್ಲಿದೆ. ಪ್ರಜಾಪ್ರಭುತ್ವದಲ್ಲಿ ಸಾರ್ವತ್ರಿಕ ಚುನಾವಣೆಗಳ ಕಾಲದಲ್ಲಿ ಸರ್ಕಾರ ಚಕ್ರಗಳು ನಿಂತುಹೋದ ಹಾಗೆ ಭಾವನೆಯಾಗಬಹುದು; ಆದರೆ ಏಕ ರಾಜಾಧಿಪತ್ಯವು ಅವಿಚ್ಛಿನ್ನವಾಗಿ ನಡೆದು ಬರುವುದರಿಂದ ಅದರಲ್ಲಿ ಪ್ರಜೆಗೆ ದೃಢಭಕ್ತಿ. ಏಕರಾಜ್ಯ ಪದ್ಧತಿಯು, ಕ್ರಮ ವಿಕಾಸದಲ್ಲಿ ಪ್ರಜಾಸರ್ಕಾರವು ಹೆಚ್ಚುತ್ತಾ, ಅಳಿದು ಹೋಗುತ್ತಿದೆ.

## ರಾಷ್ಟ್ರನಾಯಕನ ಚುನಾವಣೆ—ಕೆಲವು ವಿಧಾನಗಳು

ರಾಜ್ಯ ಪದ್ಧತಿಗೆ ವಿರೋಧವಾದುದು ರಾಷ್ಟ್ರಾಧ್ಯಕ್ಷನನ್ನು ಪ್ರಜೆಗಳು ಚುನಾಯಿಸುವುದು. ದಕ್ಷಿಣ ಅಮೇರಿಕಾದ ರಾಷ್ಟ್ರೀಯ ಕಾರ್ಯಾಂಗಗಳು, ಪ್ರತ್ಯಕ್ಷ ಚುನಾವಣೆಯಿಂದ ಆರಿಸುವುವು. ಸಂಯುಕ್ತ ರಾಷ್ಟ್ರಾಧ್ಯಕ್ಷನೂ ಅಪ್ರತ್ಯಕ್ಷ ಚುನಾವಣೆಯಿಂದ ನೇಮಿಸಲ್ಪಟ್ಟರೂ, ಚುನಾಯಿಸುವ ರೀತಿ ಪ್ರತ್ಯಕ್ಷವರ್ಗಕ್ಕೆ ಸೇರಿದ್ದು. ಫ್ರಾನ್ಸರಾಷ್ಟ್ರದಲ್ಲಿ ಅನೇಕ ವಿಧಾನಗಳ ಪರಿಶೀಲನೆಯಾಗಿ ಪ್ರತ್ಯಕ್ಷ ಚುನಾವಣೆಯಿಂದ ಸಾಮ್ರಾಜ್ಯ ಭಾವನೆಗೆ ಹೆದ್ದಾರಿಯಾಗಬಹುದೆಂಬ ಭೀತಿಯಿಂದ 1871 ರಲ್ಲಿಯೇ ಅದು ರದ್ದಾಯಿತು. ಪ್ರತ್ಯಕ್ಷಚುನಾವಣೆ ಪ್ರಜಾ ಪ್ರಭುತ್ವರೀತಿಯಾಗಿದ್ದರೂ, ಸಾಧಾರಣವಾಗಿ ಪ್ರಜಾವರ್ಗವು ತಮ್ಮ ಅಧ್ಯಕ್ಷನನ್ನು ಚುನಾಯಿಸುವುದರಲ್ಲಿ ದಕ್ಷತೆಯನ್ನಾಗಲಿ, ಸಾಧ್ಯಾಸಾಧ್ಯ ಸ್ವರೂಪ ವಿವೇಕಜ್ಞಾನವನ್ನಾಗಲಿ ಪಡೆದಿಲ್ಲ. ಕಲಹಕ್ಕಾಸ್ಪದವಾಗಿ ಪಕ್ಷಗಳು ಉಗ್ರರೂಪದಲ್ಲಿ ತಮ್ಮ ವೈಯಕ್ತಿಕ ಮತಗಳನ್ನು ಈಡೇರಿಸುಕೊಳ್ಳುವುದಕ್ಕೆ ದಾರಿಯಾಗುತ್ತದೆ.[1]

ಅಪ್ರತ್ಯಕ್ಷ ಚುನಾವಣೆ ಮತ್ತೊಂದು ವಿಧ; ಸಂಯುಕ್ತರಾಷ್ಟ್ರದ, ಅರ್ಜಂಟೈನ, ಫಿನ್ಲ್ಯಾಂಡ್, ಸ್ಪೇನ್ ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ. ಎಲೆ

1. Hamilton. The Federalist No. 67

ಕ್ಟರಲ್ ಕಾಲೇಜಿನಲ್ಲಿ, ಆರಿಸದ ಸದಸ್ಯರುಗಳಿರುವುದರಿಂದ ಅವರು ರಾಷ್ಟ್ರ ಹಿತಸಾಧಕ ದೃಷ್ಟಿಯಿಂದಲೆ ರಾಷ್ಟ್ರನಾಯಕನನ್ನು ಚುನಾಯಿಸುವರೆಂದು ನಂಬಿಕೆಯಿದೆ.

ಶಾಸನಸಭೆಯೇ ರಾಷ್ಟ್ರನಾಯಕರನ್ನು ಚುನಾಯಿಸುವ ಪದ್ಧತಿ ಸ್ವಿಡ್‌ಸರ್‌ಲೆಂಡ್‌ನಲ್ಲಿದೆ. ಫ್ರಾನ್ಸನಲ್ಲಿ ಅಧ್ಯಕ್ಷನನ್ನು ಶಾಸನ ಸಭೆಯು ಚುನಾಯಿಸುತ್ತದೆ. ಅನೇಕ ಐರೋಪ್ಯ ರಾಷ್ಟ್ರಗಳಲ್ಲಿಯೂ ಕೆಲವು ಸಂಯುಕ್ತ ಸಂಸ್ಥಾನಗಳಲ್ಲಿಯೂ ಈ ಪದ್ಧತಿಯು ಜಾರಿಯಲ್ಲಿದೆ. ಈ ಪದ್ಧತಿಯೂ ಮಂತ್ರಿವಿಧಾಂಗತತ್ವಕ್ಕೆ ವಿರೋಧವೆಂಬುದು ಒಂದು ಆಕ್ಷೇಪಣೆ. ಈ ತತ್ವಾನುಸಾರ ಕಾರ್ಯಾಂಗವು ಶಾಸನ ಸಭೆಗೆ ಅಧೀನವಾಗಿ ಅದರ ಕಾರ್ಯಗಳಿಗೆ ಒಳಪಟ್ಟಿರಬೇಕಾದುದರಿಂದ ಕಾರ್ಯಾಂಗವು ಸ್ವಾತಂತ್ರ್ಯತೆಯಿಂದ ವರ್ತಿಸಲಾರದು, ಮತ್ತು ಐಚ್ಛಕವಾಗಿ ವರ್ತಿಸಿದರೆ ಎರಡು ಅಂಗಗಳಿಗೂ ಘರ್ಷಣೆಯಾಗುತ್ತದೆ. ಶಾಸಕಸಭೆಯೂ ಕಾರ್ಯಾಂಗವನ್ನು ನೇಮಿಸುವ ವಿಶೇಷಾಧಿಕಾರವನ್ನು ಗಳಿಸಿದರೆ ಶಾಸನ ರಚನೆಯಲ್ಲಿ ಅನಾದರವುಂಟಾಗಬಹುದು. ಆದರೂ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚುನಾವಣೆಗಳಿಗಿಂತಲೂ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯೇ ವಿವೇಕಯುತವಾದುದೆಂದು1 ಮಿಲ್ ಎಸ್ಮೆನ್ ಮತ್ತುಲೆಲಾಯಿ ಮುಂತಾದವರ ಅಭಿಪ್ರಾಯ.

## ರಾಷ್ಟ್ರನಾಯಕನ ಅವಧಿ ಎಷ್ಟು

ರಾಷ್ಟ್ರ ತೇಜಸ್ಸನ್ನು ಕಾಪಾಡಲು ಬೇಕಾದ ಅಂಶಗಳು ನಾಲ್ಕು; ಐಕ್ಯಮತ್ಯ, ಅವಧಿ, ಇವುಗಳನ್ನು ರಕ್ಷಿಸಲು ಬೇಕಾದ ಸಲಕರಣೆಗಳು, ಪ್ರಭಾವಶಕ್ತಿ; ಆದರೆ ಪ್ರಜಾವರ್ಗಕ್ಕೆ ಅಧೀನತೆ ಮತ್ತು ಜವಾಬ್ದಾರಿ, ಏರ್ಪಟ್ಟರೆ2 ಕಾರ್ಯಾಂಗದ ಅಕ್ರಮಣಕ್ಕೆ ತಡೆಯಾಗುವುದು, ಎಂದು ಹಾಮಿಲ್ಟನ್ ಹೇಳಿದ್ದಾನೆ. ರಾಷ್ಟ್ರ ನಾಯಕರ ಪ್ರಭುತ್ವ ದೀರ್ಘಾವಧಿಯಾಗಿರಬೇಕೆಂಬುದು ಸಾರ್ವಜನಿಕಮತ. ಅನೇಕ ಸಂಯುಕ್ತ ಸಂಸ್ಥಾನ

1. Mill. Representative Government.

2. Hamilton, The Federalist No. 70, 71.

ಗಳಲ್ಲಿ ಎರಡು ವರ್ಷದಿಂದ, ಏಳು ವರ್ಷದವರಿಗೂ ಅವಧಿಯಿದೆ. ಫ್ರಾನ್ಸ್ ಪೋರ್ಚುಗಲ್, ಪೋಲೆಂಡ್ ಮುಂತಾದ ರಾಷ್ಟ್ರಗಳಲ್ಲಿ ರಾಷ್ಟ್ರನಾಯಕರ ಅವಧಿ ಇಷ್ಟೇ. ಸ್ವಿಸ್ ಕಾರ್ಯಾಂಗ ಸಮಿತಿಗೆ, ಮೂರು ವರ್ಷ, ಸಂಯುಕ್ತ ರಾಷ್ಟ್ರದ ಬ್ರೆಜಿಲ್‌ನ ಅಧ್ಯಕ್ಷರಿಗೆ ನಾಲ್ಕು ವರ್ಷ, ಪೆರು ಮತ್ತು ಚೈನ ರಾಷ್ಟ್ರಾಧ್ಯಕ್ಷರಿಗೆ ಐದು ವರ್ಷ, ಅರ್ಜಂಟೈನ, ಮೆಕ್ಸಿಕೊ, ಫಿನ್‌ಲೆಂಡ್ ರಾಷ್ಟ್ರಾಧ್ಯಕ್ಷರಿಗೆ ಆರು ವರ್ಷ ಅವಧಿಗಳು. ಡೊಮಿನಿಯನ್ ನಾಮಾದಿಕಾರಿಗಳ ಅವಧಿ ಪಾರ್ಲಿಮೆಂಟ್ ಸಭೆಯ ಇಚ್ಛೆಗೆ ಒಳಪಟ್ಟಿದೆ. ಅಲ್ಪಾವಧಿಯಾದರೆ ಹಾನಿ, ಕಾಲಾವಧಿ ಹೆಚ್ಚಿದಷ್ಟು ಜವಾಬ್ದಾರಿ ಹೆಚ್ಚು ಎನ್ನುವುದು ಒಂದು ಮತ. ಉದಾತ್ತಧ್ಯೇಯಗಳನ್ನು ಆಚರಣೆಗೆ ತರಬೇಕಾದರೆ ಕಾಲಾವಧಿ ಹೆಚ್ಚಿಸಬೇಕೆಂಬ ಭಾವನೆ ಮೂಡುತ್ತಿದೆ.

## ರಾಷ್ಟ್ರನಾಯಕನನ್ನು ಪುನಃ ಚುನಾಯಿಸಬಹುದೇ?

ನಿರ್ದಿಷ್ಟವಾದ ಕಾಲಾವಧಿ ಮುಗಿದ ಮೇಲೆ ಕಾರ್ಯಾಂಗ ಸಭಾಧ್ಯಕ್ಷನು ಪುನಃ ಅಧ್ಯಕ್ಷನಾಗಬಹುದೇ, ಎಂಬುದು ಒಂದು ಜಟಿಲ ಪ್ರಶ್ನೆ. ರಾಷ್ಟ್ರಾಧ್ಯಕ್ಷನು ತನ್ನ ನಾಲ್ಕು ವರ್ಷ ಅವಧಿ ಮುಗಿದ ಮೇಲೆ ಪುನಃ ಅಧ್ಯಕ್ಷಸ್ಥಾನಕ್ಕೆ ವರಣಾರ್ಥಿಯಾಗಿ ನಿಲ್ಲಬಹುದು; ಸಂಯುಕ್ತ ರಾಷ್ಟ್ರದಲ್ಲಿ ಪುನಾರಾವರ್ತಿ ನಿಲ್ಲಬಾರದೆಂಬ ನಿರ್ದಿಷ್ಟವಾದ ನಿಷೇಧಾಜ್ಞೆಯು ಈಗ ರಾಷ್ಟ್ರವಿಧಾನದಲ್ಲಿಲ್ಲ. ಎರಡಾವರ್ತಿ ಚುನಾವಣೆಗೆ ಸಂಪ್ರದಾಯದ ಸಮ್ಮತಿಯಿದೆ; ಆದರೆ ರೂಸ್ವೆಲ್ಟನು ಮೂರಾವರ್ತಿ ಚುನಾಯಿತನಾಗಿ ನಾಲ್ಕನೆಭಾರಿ ನಿಲ್ಲಲು ಶಕ್ತನಾಗಿದ್ದನು. ಏಳು ವರ್ಷ ಅವಧಿಯಾದ ಮೇಲೆ ಫ್ರಾನ್ಸ್ ರಾಷ್ಟ್ರಾಧ್ಯಕ್ಷನು ಮತ್ತೊಂದು ಸಲ ಚುನಾಯಿತನಾಗಲಾರನು. ಸಾಮ್ಯವಾದಿಗಳು ಅಲ್ಪಾವದಿ ಮತ್ತು ಒಂದಾವರ್ತಿ ಅಧ್ಯಕ್ಷತೆಯೇ ಪ್ರಜಾಪ್ರಭುತ್ವದ ಪ್ರಗತಿದಾಯಕ ಚಿಹ್ನೆ ಎಂದು ಪ್ರಪಾದಿಸುತ್ತಿದ್ದಾರೆ. ಕಾಲಾವಧಿಯನ್ನು ಒಂದಾವರ್ತಿಗೆ ನಿರ್ಬಂಧಿಸುವುದರಿಂದ ಅಧ್ಯಕ್ಷನ ಸ್ವೇಚ್ಛಾಪ್ರವರ್ತನೆಗೆ ಅಡ್ಡಿಯಾಗಬಹುದು; ಚಾಪಲ್ಯವರ್ಜಿತನಾಗುವನು; ಪುನರ್

ಚುನಾವಣೆಗೆ ಅವಕಾಶಕೊಟ್ಟರೆ ವರಣಕರ್ತ ಸಮೂಜಕ್ಕೆ ಅಧೀನನಾಗಿ ತನಗೇ ಮತಕೊಡಬೇಕೆಂದು ಮತದಾತರನ್ನು ತನ್ನ ತೇಜಸ್ಸಿನಿಂದಲೂ ಹಣಕಾಸಿನಿಂದಲೂ ನಿರ್ಬಂಧಿಸಬಹುದು.1 ಸಂಯುಕ್ತ ರಾಷ್ಟ್ರದಲ್ಲಿ ಅಧ್ಯಕ್ಷನ ಅವಧಿಯನ್ನು ಹೆಚ್ಚಿಸಿ ಎರಡಾವರ್ತಿ ಚುನಾವಣೆಗೆ ನಿಲ್ಲದಂತೆ ಶಾಸನವಾಗಬೇಕೆಂದು ಚಳುವಳಿಯಾಗುತ್ತಿದೆ. ಈ ನೂತನ ಕಲ್ಪನೆಯು ಕಾನೂನಾದರೆ ಅಧ್ಯಕ್ಷನು ಚಾಪಲ್ಯಗಳಿಗೀಡಾಗಬೇಕಿಲ್ಲ, ತನ್ನ ಅಧಿಕಾರ ಮತ್ತು ದರ್ಪವನ್ನು ದುರುಪಯೋಗಿಸಬೇಕಾಗಿಲ್ಲ; ತನ್ನ ರಕ್ಷಣೆಗೋಸ್ಕರ ರಾಜಕೀಯ ರಂಗವನ್ನು ಪ್ರವೇಶಿಸಬೇಕಾಗಿಲ್ಲ, ಶಾಸನ ಸಭೆಗಳ ನಿಂದೆಗೆ ಅಂಜಬೇಕಾಗಿಲ್ಲ.

## ಕಾರ್ಯಾಂಗದ ಅಧಿಕಾರಗಳು.

ಕಾರ್ಯಾಂಗದ ಅಧಿಕಾರಗಳನ್ನು ಈ ರೀತಿಯಾಗಿ ವಿಂಗಡಿಸಬಹುದು: ವಿದೇಶಾಂಗ ನೀತಿಯಲ್ಲಿ ಅಧಿಕಾರ ಮತ್ತು ಸಂಸ್ಥಾನದಲ್ಲಿನ ಸರ್ಕಾರಗಳ ಆಡಳಿತ ( Diplomatic Power ) ಯುದ್ಧ ಮತ್ತು ಸೈನಿಕ ವಿಚಾರ ಗಳಲ್ಲಿ ಸಮರಿಕ ಶಕ್ತಿ ( Military Power ); ಶಾಸನ ಸಭೆಯು ಅಧಿಕಾರಗಳನ್ನು ನಿರ್ವಹಿಸುವಿಕೆ. ( Legislative Power ) ಆಡಳಿತಾಧಿಕಾರಗಳು ( Administrative Power).

## ವಿದೇಶಾಂಗ ನೀತಿ—Diplomatic Power

ಎಲ್ಲಾ ರಾಷ್ಟ್ರಗಳಲ್ಲಿಯೂ ಕಾರ್ಯಾಂಗವು ರಾಯಭಾರಿಗಳ ನೇಮಿತ, ಕೌಲುಗಳ ನಿರ್ಧಾರ ಮುಂತಾದ ರಾಜಕಾರ್ಯಗಳನ್ನು ಮಾಡುತ್ತಿದೆ. ಕೌಲುಗಳನ್ನು ರಚಿಸುವ ಅಧಿಕಾರವು ಶಾಸನಸಭೆಗೆ ಸೇರಿದ್ದರೂ ಆಧುನಿಕ ದೃಷ್ಟಿಯಲ್ಲಿ ಅದು ಕಾರ್ಯಾಂಗದಾಡಳಿತಕ್ಕೆ ಒಳಗಾಗಬೇಕೆಂದು ಬಹು ಮತ. ಇಂಗ್ಲೆಂಡ್ ಮತ್ತು ಸಂಯುಕ್ತ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗ

---

1 *Tocquelle:* Democracy in America Vol. I P. 142. "Critique and corruption are the natural defects of elective Government, when the head of a State can be re elected these evils will rise to a great height and ompromise the very existence of the Country."

ಕೌಲುಗಳನ್ನು ಮಾಡುವ ಅಧಿಕಾರವು ಶಾಸನಸಭೆಗೆ ಸೇರಬೇಕೆಂದೂ, ಕಾರ್ಯಾಂಗಕ್ಕೆ ಸೇರುವುದು ಆಕ್ರಮಣವೆಂದೂ ವಾದಿಸುತ್ತಿದ್ದಾರೆ. ಕೌಲುಗಳನ್ನು ಮಾಡುವ ಅಧಿಕಾರವು ಕಾರ್ಯಾಂಗಕ್ಕೆ ಸೇರಿದರೆ, ಪ್ರಾನ್ಸ್ ಮತ್ತು ಸಂಯುಕ್ತ ರಾಷ್ಟ್ರಗಳಲ್ಲಿ ಎರಡು ಸಭೆಗಳ ಮುಖ್ಯವಾಗಿ ಸೆನೆಟಿನ ಅನುಮತಿ ಅನಿವಾರ್ಯವೆಂದು ವಾದ. ಕರಾರು ಮಾಡುವ ರಾಜ್ಯಾಂಗಗಳನ್ನು ವಿಮರ್ಶಿಸುವ ಪರಮಾಧಿಕಾರ ಸ್ವಿಡ್ಸರ್‌ಲೆಂಡ್ ರಾಷ್ಟ್ರದಲ್ಲಿ ಪ್ರಜೆಗಳಿಗೆ ಸೇರಿದೆ.

## Military Power—ಚಮು ಆಡಳಿತಾಧಿಕಾರ

ಸೈನ್ಯಾಧಿಕಾರದಲ್ಲಿ ಸೇನಾಪತಿಗಳ ನೇಮಕ, ನೌಕ ವಾಯುಬಲಗಳ ನಿರ್ಮಾಣ, ಎಲ್ಲವೂ ಅಡಗಿವೆ. ರಾಜಪ್ರಭುತ್ವದಿಂದ ಕೂಡಿರುವ ಬ್ರಿಟನ್ ಮುಂತಾದ ದೇಶಗಳಲ್ಲಿ ಕಾರ್ರ್ಯಾಂಗ ಸಭೆಗೆ ಯುದ್ಧ ಘೋಷಣೆಮಾಡುವ ಅಧಿಕಾರವಿದೆ. ಪಾರ್ಲಿಮೆಂಟ್ ಸಭೆಯು ಇತರ ಕಾರ್ಯದಲ್ಲಿ ಪ್ರವರ್ತಿಸಿ ಯುದ್ಧವನ್ನು ಮುಂದುವರಿಸುವ ಅಧಿಕಾರವನ್ನೂ ಪಡೆದಿದೆ. ಸಂಯುಕ್ತ ರಾಷ್ಟ್ರದಲ್ಲಿ ಯುದ್ಧಘೋಷಣೆಗೆ ಕಾಂಗ್ರೆಸ್ ಸಭೆಗಳ ಸಮ್ಮತಿ ಅತ್ಯಾವಶ್ಯಕ. ಆದರೆ ಕಾರ್ರ್ಯಾಂಗ ಸಭೆಯು ಬೇಥೋವಾಯದಿಂದ ಯುದ್ಧವನ್ನು ನಿಲ್ಲಿಸುವ ನಿಷೇಧಾಧಿಕಾರವನ್ನು ಗಳಿಸಿದೆ. ಫ್ರಾನ್ಸಿನಲ್ಲಿ ಶಾಸಕ ಸಭೆಗಳೆರಡು ಯುದ್ಧಘೋಷಣೆಗೆ ಅನುಮತಿ ಕೊಡಬೇಕು. ಆದರೆ ಯುದ್ಧ ನಡೆಯುತ್ತಿರುವಾಗ ಅದಕ್ಕೆ ಸಂಬಂಧಪಟ್ಟ ರಾಜಕಾರ್ಯಗಳೆಲ್ಲಾ ರಾಜ್ಯಾಂಗ ಸಭೆಗೆ ಸೇರಿದೆ. ಪೌರೇಯರು ಶಾಂತಿಕಾಲದಲ್ಲಿ ಅನುಭವಿಸುತ್ತಿರುವ ಸಮಸ್ತ ವೈಯಕ್ತಿಕ, ಸಾಮಾಜಿಕ, ನಾಗರಿಕ ಮತ್ತು ರಾಜನೀತಿಕ ಸ್ವಾತಂತ್ರ್ಯವನ್ನು ಯುದ್ಧಕಾಲದಲ್ಲಿ ಕಾರ್ರ್ಯಾಂಗ ಸಭೆಯು ತಡೆಗಟ್ಟಬಹುದು. ಮಾರ್ಶಿಯಲ್ ಲಾ ವನ್ನು ನಿರ್ಧರಿಸುವುದು, ಹೆಬೆಯಸ್ ಕಾರ್ಪಸ್‌ನ್ನು (Habeas Corpus) ನಿಷೇಧಿಸುವುದು, ಹೀಗೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಯುದ್ಧ ಕಾಲದಲ್ಲಿ ಪ್ರತಿಬಂಧಕವಾಗುವ ಇತರ ಅಧಿಕಾರಗಳು ಇಂಗ್ಲೆಂಡ್ ಮುಂತಾದ ನೀತಿಯುತ ಪ್ರಜಾಪ್ರಭುತ್ವದಲ್ಲಿ ಕಂಡುಬರುವವು.

ಕಾರ್ಯಾಂಗ ಸಭೆಗೆ ಕ್ಷಮಾಪಣೆಕೊಡುವ ಅಧಿಕಾರ ನೈಸರ್ಗಿಕವಾದ ಹಕ್ಕು ಎಂದು ಭಾವನೆ. ಕಾನೂನು ಕಠೋರವಾಗಿದ್ದರೂ ಪ್ರಜಾವರ್ಗದಲ್ಲಿ ದಯೆ ಮತ್ತು ಕೃಪೆಗಳು ಜನ್ಮಸಿದ್ಧವಾದುದರಿಂದ ಕ್ಷಮಾಪಣೆ ಆವಶ್ಯಕ. ಕಾನೂನುಗಳು ಯಾವಾಗಲೂ ಸತ್ಯಸ್ವರೂಪವೂ ಗುಣಾತ್ಮಕವೂ ಪಕ್ಷಪಾತರಹಿತವೂ ಆದುದರಿಂದ ಅವುಗಳನ್ನು ಜಾರಿಗೆ ತರುವುದರಲ್ಲಿ ಕಠಿಣತೆಯಿದ್ದರೆ ಅನೀತಿಯುತವಾಗುವುದು. ದೇಶದ್ರೋಹಿಗಳಿಗೆ ಮತ್ತು ಸಮಾಜ ಶತ್ರುಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಸಂಯುಕ್ತ ರಾಷ್ಟ್ರ ಮತ್ತು ಬ್ರಿಟನ್ ಮುಂತಾದವುಗಳಲ್ಲಿ ಕ್ಷಮಾಧಿಕಾರ ಸಾಮಾನ್ಯ ಕ್ಷಮವಿಚಾರಗಳಿಗೆ ಮಾತ್ರ ಅನ್ವಯಿಸುವುದು.

## Administrative Power—ಆಡಳಿತಾಧಿಕಾರ

ಕಾರ್ಯಾಂಗದಧಿಕಾರಿಗಳು ಆಡಳಿತ ನೌಕರರ (Civil Service) ಸಹಾಯದಿಂದ ಶಾಸನ ಸಭೆಗಳ ತೀರ್ಪುಗಳನ್ನು ಜಾರಿಗೆ ತರಬೇಕು. ಅಧ್ಯಕ್ಷನು ಅಧಿಕಾರಿಗಳನ್ನು ನೇಮಿಸುವುದು, ತೆಗೆದು ಹಾಕುವುದು, ಬಹುಮಾನಗಳನ್ನು ವಿನಿಯೋಗಿಸುವುದು ಮುಂತಾದ ಅಧಿಕಾರಗಳನ್ನು ಹೊಂದಿದ್ದಾನೆ. ಸಂಯುಕ್ತ ರಾಷ್ಟ್ರದಲ್ಲಿ ಶಾಸಕ ಸಭೆಗಳು ಕಾರ್ಯನಿರ್ವಾಹದಲ್ಲಿಯೂ ಅಡಿಯಾಗಿದೆ. ಸೆನೆಟ್ ಸಭೆಯ ಅನುಮತಿ ಅಧಿಕಾರಿಗಳ ನೇಮಕದಲ್ಲಿ ಅಗತ್ಯ; ಆದರೆ ಅಧಿಕಾರಿಗಳನ್ನು ಸ್ವತಂತ್ರತೆಯಿಂದ ಅಧ್ಯಕ್ಷನು ವಜಮಾಡಬಹುದು. ಇಂಗ್ಲೆಂಡ್ ಮತ್ತು ಫ್ರಾನ್ಸರಾಷ್ಟ್ರಗಳಲ್ಲಿ ಕಾರ್ಯಾಂಗಕ್ಕೆ ಅಧಿಕಾರಿಗಳ ನೇಮಕ ಮತ್ತೆ ಅವರನ್ನು ನಿಯಂತ್ರಣದಲ್ಲಿಡುವುದರಲ್ಲಿ ಸಂಪೂರ್ಣ ಅಧಿಕಾರವಿದೆ. ಸ್ವಿಸರಾಷ್ಟ್ರದಲ್ಲಿ ಅಧಿಕಾರಾಂಗಗಳ ಮತ್ತು ಅಧಿಕಾರಿಗಳ ನೇಮಿಸುವ ಹಕ್ಕು ಶಾಸಕ ಸಭೆಗಳಿಗೆ ಸೇರಿದೆ.

ಸಂಯುಕ್ತ ರಾಷ್ಟ್ರದಲ್ಲಿ ಅಧ್ಯಕ್ಷನಿಗೆ ನಿಬಂಧನೆಗಳು, ನಿರ್ಣಯ, ವಿಶೇಷಾಜ್ಞೆಗಳನ್ನು ಮಾಡುವ ಅಧಿಕಾರಗಳನ್ನು ರಾಷ್ಟ್ರವಿಧಾನದಲ್ಲಿಯೇ ಸೂಚಿಸಿದೆ. ಈ ಅಧಿಕಾರಗಳೆಲ್ಲಾ ಕಾನೂನಿನಲ್ಲಿಯೇ ನಿರ್ದಿಷ್ಟವಾಗಿ

ನಿರೂಪಿಸಲ್ಪಟ್ಟಿವೆ. ಇದನ್ನು ಅಧ್ಯಕ್ಷಸ್ಥಾನದಲ್ಲಿ ನೈಸರ್ಗಿಕವಾದ ಮತ್ತು ಅದಕ್ಕೆ ಅಂಟಿರುವ ವಿಶೇಷಾಧಿಕಾರವೆಂದು ತಿಳಿಯಬಹುದು. ಎಲ್ಲಿ ರಾಷ್ಟ್ರ ವಿಧಾನವು ವಿಶೇಷಾಜ್ಞೆಗಳನ್ನು ಮಾಡುವ ಮತ್ತು ನಿಷೇಧಿಸುವ ಅಧಿಕಾರ ವನ್ನು ದಯಪಾಲಿಸುತ್ತದೆಯೋ ಅಲ್ಲಿ ಈ ವಿಧವಾದ ಅಧ್ಯಕ್ಷನಾಜ್ಞೆಗಳು ರಾಷ್ಟ್ರ ಕಾನೂನುಗಳಿಗೆ ವಿರುದ್ಧವಾಗಿರಬಾರದು; ಕಾರ್ಯಾಂಗದ ದರ್ಪ ವನ್ನು ಕ್ಷಿಪ್ರವಾಗಿ ಜರುಗಿಸಲು ಸಹಕಾರಿಯಾಗಿರಬೇಕು, ಮತ್ತು ಕಾನೂನು ಗಳಲ್ಲಿ ಬಿಟ್ಟುಹೋದ ಅಂಶಗಳನ್ನು ಸೂಚಿಸತಕ್ಕದ್ದಾಗಿರಬೇಕು. ವಿಶೇಷ ಪರಿಸ್ಥಿತಿಗಳಲ್ಲಿ ವಿಶೇಷಾಜ್ಞೆಗಳನ್ನು ಮಾಡುವ ಅಧಿಕಾರವನ್ನು ರಾಷ್ಟ್ರ ವಿಧಾನವೇ ನಿರ್ಧರಿಸುತ್ತದೆ. ಯುದ್ಧಕಾಲದಲ್ಲಿ ಪಾರ್ಲಿಮೆಂಟಿನ ಕಾನೂನು ಗಳನ್ನು ಸಾವಧಾನಿಸಿ ವಿಶೇಷ ಆರ್ಡಿನೆನ್ಸ್‌ಗಳನ್ನು ಜಾರಿಗೆ ತರುವ ಹಕ್ಕನ್ನು ಕಾರ್ಯ್ಯಾಂಗವು ಪಡೆದಿದೆ. ರಾಷ್ಟ್ರ ಮತ್ತು ಪ್ರಜಾರಕ್ಷಣೆಯ ಜವಾಬ್ದಾರಿಯ ಸಲುವಾಗಿ ಕಾರ್ಯಾಂಗವು ಅನೇಕ ನಿರ್ಣಯಗಳನ್ನು ಮಾಡಿ ರಾಷ್ಟ್ರವನ್ನು ಅವಶ್ಯಕವಿದ್ದಲ್ಲಿ ''ಮಾರ್ಷಲ್‌ಲಾ'' ಸರ್ಕಾರಕ್ಕೆ ಅಧೀನವನ್ನಾಗಿ ಮಾಡಬಹುದು.

## Ordinance Power–ವಿಶೇಷ ಆಜ್ಞೆಗಳನ್ನು ಮಾಡುವ ಅಧಿಕಾರ

ವಿಶೇಷಾಜ್ಞೆಗಳು ಎರಡುಬಗೆಯಾಗಿವೆ. ಕೆಲವು ಹೊಸ ಕಾನೂನು ಗಳನ್ನು ರಚಿಸುವುದು ಅಥವ ಪ್ರಚಲಿತ ಕಾನೂನುಗಳ್ನು ಮಾರ್ಪಾಡು ಮಾಡುವುದು, ಶಾಸನ ಸಭೆಗಳು ರಚಿಸಿದ ಕಾನೂನುಗಳಲ್ಲಿ ಅಡಗಿರುವ ವಿಷಯವನ್ನು ವಿಮರ್ಶಿಸಿ ಹೊಸ ಕಲ್ಪನೆಗಳಿಂದ ಆಡಳಿತಾಧಿಕಾರಿಗಳು ಕಾನೂನುಗಳನ್ನು ತಿದ್ದುವುದು, ಇದನ್ನು ಲಾ ಆರ್ಡಿನೆನ್ಸ್ (Law Ordinances) ಎಂದು ಹೇಳಬಹುದು; ಆಡಳಿತಾಧಿಕಾರಗಳು ವಿಶಿಷ್ಟ ಸನ್ನಿವೇಶಗಳಲ್ಲಿ ಯಾವ ರೀತಿ ವರ್ತಿಸಬೇಕು, ಯಾವ ಅಧಿಕಾರಗಳನ್ನು ಪರಿಸ್ಥಿತಿಗನುಗುಣವಾಗಿ ನಡೆಸಬೇಕು ಎಂದು ನಿರ್ಣಯಿಸುವುದನ್ನು ಅಡ್ಮಿನಿ ಸ್ಟ್ರೇಟಿವ್ ಆರ್ಡಿನೆನ್ಸ್ (Administrative Ordinance) ಎಂದು

ಕರೆಯಬಹುದು. ಇದು ಆಡಳಿತಾಧಿಕಾರಿಗಳು ನಿರ್ವಹಿಸುವ ಕಾರ್ಯ ಗಳಿಗೆ ಅನ್ವಯಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಶಾಸನ ಸಭೆಯು ಕಾರ್ಯಾಂಗ ಸಮಿತಿಗೆ ಕೆಲವು ನಿರ್ದಿಷ್ಟವಾದ ಶಾಸನಾಧಿಕಾರವನ್ನು ದಯಪಾಲಿಸಿದೆ. ಈ ವಿಧವಾದ ಕಾನೂನನ್ನು ರಚಿಸುವ ಅಧಿಕಾರಕ್ಕೆ (Delegated Legislation) ಡೆಲಿಗೇಟೆಡ್ ಲೆಜಿಸ್ಲೇಷನ್ ಎಂದು ಕರೆಯುವರು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಪರಿವರ್ತನೆ ಹೊಂದುತ್ತ ಶಾಸಕ ಸಭೆಗಳ ಪ್ರಭಾವವು ವಿಶೇಷವಾಗಿ ಅಭಿವೃದ್ಧಿಯಾಗಿ, ಕಷ್ಟವೂ ಮತ್ತು ಸಂಕೀರ್ಣವೂ ಆದ ಜವಾಬ್ದಾರಿಯನ್ನು ಕಾರ್ಯಾಂಗದೊಡನೆ ಸಮ್ಮಿಲಿತ ರೂಪದಲ್ಲಿ ವಹಿಸಬೇಕಾಗುತ್ತದೆ. ಅದರಿಂದಲೇ ಅನೇಕ ಪ್ರಗತಿ ಪರ ರಾಷ್ಟ್ರ ಗಳಲ್ಲಿ ಕಾರ್ಯಾಂಗಾಧಿಕಾರಿಗಳು ಶಾಸನ ಕರ್ತರು. ಮತ್ತು ಶಾಸನಮಾಡುವ ಅಧಿಕಾರವನ್ನೂ ಪರಮಾಧಿಕಾರವನ್ನೂ ಹೊಂದಿರುವ ಶಾಸಕ ಸಭೆಯಿಂದ ಪಡೆದಿದ್ದಾರೆ. ಪಾರ್ಲಿಮೆಂಟಿನ ಸಾಮಾನ್ಯ ತತ್ವಗಳನ್ನೂ, ಕಾನೂನುಗಳನ್ನು ಜಾರಿಗೆ ತರುವುದು, ಆಡಳಿತ ವಿಭಾಗಗಳಿಗೆ ಸ್ಟ್ಯಾಚುಟರಿ ಆರ್ಡರ್ಸ್ (Statutory Orders) ಗಳನ್ನು ವಹಿಸುವುದು—ಇವು ಕಾರ್ಯಾಂಗ ಸಮಿತಿಯ ಜವಾಬ್ದಾರಿ. ಕಾರ್ಯಾಂಗವು ರಚಿಸಿದ ಕಾನೂನುಗಳನ್ನು ಶಾಸಕ ಸಭೆಯ ಕಾನೂನುಗಳಂತೆ ವರ್ಷಕ್ಕೊಂದಾವರ್ತಿ ಪುಸ್ತಕರೂಪದಲ್ಲಿ ಪ್ರಕಟಿಸಲ್ಪಡುವುದು. ವಿದ್ಯಾಭ್ಯಾಸ, ಪ್ರಜಾರೋಗ್ಯ ಮುಂತಾದುವುಗಳಿಗೆ ಈ ಕಾನೂನುಗಳು ಅನ್ವಯಿಸುವುವು; ಸಾರ್ವತ್ರಿಕ ಹರತಾಳಗಳ ಪರಿಸ್ಥಿತಿಯಲ್ಲಿ ಜರೂರು ಅಧಿಕಾರದ ಕಾನೂನು (Emergency Power Act) ಪ್ರಕಾರ ಕಾರ್ಯಾಂಗವು ಆಸ್ತಿಪಾಸ್ತಿಗಳನ್ನು ವಾಹನಾದಿಗಳನ್ನೂ, ಹಡಗುಗಳನ್ನೂ, ಸ್ವಾಧೀನಕ್ಕೆ ತೆಗೆದುಕೊಂಡು ತಾತ್ಕಾಲೀಕವಾಗಿ ವೈಯುಕ್ತಿಕ ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರದ್ದುಮಾಡಬಹುದು.

---

Ilbert—Legislative Methods and Forms Ch. 3. Dicey—Law of the Constitution P. P. 47. Lowell—Government of England Vol I 19–20.

ಫ್ರಾನ್ಸ್ ರಾಷ್ಟ್ರದಲ್ಲಿ ಜಾರಿಯಲ್ಲಿರುವ ವಿಶೇಷಾಜ್ಞೆಗಳು ಮೂರು ವಿಧ. ರಾಷ್ಟ್ರಾಧ್ಯಕ್ಷನು (President) ತನ್ನ ಸ್ವಯಂಪ್ರೇರಣೆಯಿಂದ ಉಪನಿವೇಶಗಳಿಗಾಗಿ ಶಾಸನಗಳನ್ನು ಮಾಡುವುದು, ಅಂದರೆ ಉಪನಿವೇಶಗಳ ಪ್ರಜಾವರ್ಗಕ್ಕೆ ಅಧ್ಯಕ್ಷನೇ ಶಾಸಕಸಭೆ. ಕೆಲವು ನಿರ್ದಿಷ್ಟ ರಾಜಕೀಯ ವಿಚಾರಗಳಲ್ಲಿ ಅಧಿಕಾರಿಗಳ ಮತ್ತು ನ್ಯಾಯಾಧೀಶರ ನೇಮಕ ಮತ್ತು ಅವರ ಪ್ರಗತಿಯಲ್ಲಿ ತೆರಿಗೆ ಕಂದಾಯಗಳನ್ನು ನಿರೂಪಿಸಿರುವುದರಲ್ಲಿ ಶಾಸಕಸಭೆಯ ಆಜ್ಞೆಯಿಂದ ರಾಷ್ಟ್ರಾಧ್ಯಕ್ಷನು ವಿಶೇಷ ನಿರ್ಣಯಗಳನ್ನು ಮಾಡುವುದು ಎರಡನೆಯ ವಿಧ; ಶಾಸಕಸಭೆಯ ಕಾನೂನುಗಳನ್ನು ನಿರ್ದಿಷ್ಟ ಪರಿಸ್ಥಿತಿಗೆ ಹೆಚ್ಚುವಾಗ ಉತ್ಪನ್ನವಾಗುವ ತೊಡಕುಗಳನ್ನು ನಿವಾರಿಸಲು ಅಥವ ಹೊಸಾಂಶಗಳನ್ನು ತುಂಬಿ ಕಾನೂನುಗಳನ್ನು ಪೂರ್ಣಗೊಳಿಸಲು ಜಾರಿಗೆ ತರುವ ನೂತನ ವಿಶೇಷಾಜ್ಞೆಗಳು ಮೂರನೆಯದು, ಸಂಯುಕ್ತ ರಾಷ್ಟ್ರದಲ್ಲಿ ಸಂಸ್ಥಾನಗಳ ಶಾಸಕ ಸಭೆಗಳು ಮತ್ತು ರಾಷ್ಟ್ರಸಭೆಯು ಕಾನೂನುಗಳನ್ನು ಪರಿಪೂರ್ಣವಾಗಿ ರಚಿಸುವುದರಿಂದ ಕಾರ್ಯಾಂಗಕ್ಕೆ ವಿಶೇಷ ಕಾನೂನುಗಳನ್ನು ಮಾಡಲಾಸ್ಪದವಿಲ್ಲ. ಆದರೂ ಆಡಳಿತದ ಬಹು ವಿಭಾಂಗಗಳಿಗೂ ಅಲ್ಲಲ್ಲಿಯ ಅಧಿಕಾರಿಗಳಿಗೂ ಅನ್ವಯಿಸುವಂತೆಯೂ ಪೋಸ್ಟಲ್, ಕಾನ್ಸುಲರ್, ಪೇಟೆಂಟ್, ಇಮಿಗ್ರೇಷನ್ ಮತ್ತು ನ್ಯಾಚುರೈಲೈಸೇಷನ್ ಮುಂತಾದ ಆಫೀಸುಗಳಿಗೂ, ಆಹಾರ, ಕಾರ್ಖಾನೆ ಮತ್ತು ವ್ಯಾಪಾರಿಗಳಿಗೂ ಸಂಬಂಧಿಸುವಂತೆಯೂ ರಾಷ್ಟ್ರಾಧ್ಯಕ್ಷನು ಕಾನೂನುಗಳನ್ನು ರಚಿಸುವ ವಿಶೇಷಾಧಿಕಾರವನ್ನು ಪಡೆದಿದ್ದಾನೆ.

## ವರ್ಗಾಯಿಸಲ್ಪಟ್ಟ ಶಾಸನಾಧಿಕಾರ
## Delegated Legislation

ನಿಯಮಿತ ರಾಜಾಧಿಪತ್ಯಗಳೂ, ಮತ್ತು ಸಂಯುಕ್ತ ರಾಷ್ಟ್ರಗಳೂ ಕಾರ್ಯಾಂಗಕ್ಕೆ ಪ್ರೊರಾಗೆಟಿವ್ ನಿಷೇಧಾಧಿಕಾರ (Proragative) ಶಾಸನಬದ್ಧ ನಿರ್ಣಯಗಳು (Statutory Orders), ತಾತ್ಕಾಲಿಕ

ಕಾನೂನು ರಚನೆಗಳು (Provisional Orders) ಮತ್ತು ಆಡಳಿತಾಂಗ ನಿರ್ಣಯಗಳು (Departmental Regulations) ಮುಂತಾದುವು ಗಳನ್ನು ರಚಿಸುವ ವಿಶೇಷಾಧಿಕಾರವನ್ನು ಗಳಿಸಿಕೊಟ್ಟಿವೆ. ಆಧುನಿಕ ಪರಿಸ್ಥಿತಿ ಯಲ್ಲಿ, ಉತ್ತಾಪಕರ ಘಟನೆಗಳ ಸಂಭವವಿರುವಾಗಲೂ, ಶಾಸಕ ಸಭೆಗಳ ಸಮ್ಮೇಳನ ಅಸಾಧ್ಯವಾದುದರಿಂದ ಸಚಿವ ಮಂಡಲವೇ ಈ ಕಾರ್ಯಗಳನ್ನು ಸುಲಲಿತವಾಗಿ ಆಚರಿಸಲು ಯೋಗ್ಯ. ಆದುದರಿಂದ ಶಾಸನಸಭೆಯು ಅನೇಕ ಜವಾಬ್ದಾರಿಯುತ ಕಾರ್ಯಗಳನ್ನು ಕಾರ್ಯಾಂಗಕ್ಕೆ ವರ್ಗಾಯಿಸುವ ಸನ್ನಿ ವೇಶವು ಒದಗಿದೆ. ಹೀಗೆ ಕಾರ್ಯಾಂಗವು ಶಾಸನಸಭೆಯ ಅಧಿಕಾರಗಳನ್ನು ಗಳಿಸಿದಲ್ಲಿ ರಾಷ್ಟ್ರಕ್ಕೆ ಹಾನಿಯುಂಟಾಗಬಹುದೆಂದು, ರಾಮ್ಸೆ ಮ್ಯಕಡನಾಲ್ಡ್ ಮತ್ತು ಲಾರ್ಡ್ 2ಹ್ಯುವರ್ಟ್‌ರವರು ಪ್ರತಿಪಾದಿಸಿದ್ದಾರೆ. ನೀತಿಯುತ ಸರ್ಕಾರದಲ್ಲಿರುವ ತ್ರಿವಿಧಾಂಗ ತತ್ವವು ನಾಶಹೊಂದಿ ಪಾರ್ಲಿಮೆಂಟ್ ತನ್ನ ಸಹಜವಾದ ಪರಮಾಧಿಕಾರವನ್ನು ಕಳೆದುಕೊಂಡು ಕ್ರಮೇಣ ಅಸ್ತಿಪಂಜರ ವಾಗಬಹುದು ಎಂಬ ಭಾವನೆಯಿದೆ. ಅಲ್ಲದೆ, ಪಾರ್ಲಿಮೆಂಟಿನ ಸಭೆಯು ಕಾರ್ಯ್ಯಾಂಗ ಸಮಿತಿಯ ಕಾರ್ಯಕಲಾಪಗಳನ್ನು ಕೂಲಂಕಶವಾಗಿ ವಿಮರ್ಶಿ ಸುವುದರಲ್ಲಿ ಅನಾದರ ತೋರುತ್ತಿರುವುದರಿಂದ ಸ್ವಚ್ಛಂದ ಪ್ರವರ್ತನೆಗೆ ಮಾರ್ಗ ಬರಬಹುದು. ಕಾರ್ಯಕ್ಷೇತ್ರದ ವಿಶಾಲತೆಯಾಗಲೀ ನಿರ್ದಿಷ್ಟ ಅಧಿಕಾರವಾಗಲಿ ನಿರೂಪಿಸಿಲ್ಲವಾದುದರಿಂದ ಕಾರ್ಯ್ಯಾಂಗ ಸಭೆಯು ಅವಕಾಶ ಸಿಕ್ಕಿದಲ್ಲಿ ಶಾಸಕ ಮತ್ತು ನ್ಯಾಯಾಂಗ ಸಭೆಗಳ ಅಧಿಕಾರಾಕ್ರಮಣ ಮಾಡಬಹುದು. ಡೆಲಿಗೇಟೆಡ್ ಅಧಿಕಾರವ್ಯಾಪ್ತಿ ನಿರ್ಧಿಷ್ಟನಾಗಿಲ್ಲದಿರು ವುದರಿಂದ ನ್ಯಾಯಸ್ಥಾನಗಳ ನಿಯಂತ್ರಣವಿಲ್ಲ. ಅದರಿಂದಲೇ ಶಾಸಕ ಸಭೆಯು ದಯಪಾಲಿಸುವ ಅಧಿಕಾರಕ್ಕೆ ತಡೆಗಳಿರಬೇಕು. ವ್ಯತಿರಿಕ್ತ ವಾದಲ್ಲಿ ಶಿಸ್ತುಕ್ರಮಗಳನ್ನು ಕೈಗೊಳ್ಳಬೇಕು. ನ್ಯಾಯಾಂಗವಿಮರ್ಶೆಗೆ ಒಳಪಡಬೇಕು. ಮತ್ತು ಪಾರ್ಲಿಮೆಂಟ್ ಸಭೆಯು ಸಂಧಿಗ್ಧ ಕಾನೂನುಗಳ

2. *James Hart.* The Ordinance Making Powers of the President of the United States (1925).
*Lord Hewart.* The New Despotism (1928).

ರಚನೆಯೇ ಈ ವಿಧವಾದ ಆಕ್ರಮಣಕ್ಕೆ ಕಾರಣವಾದುದರಿಂದ ಅರ್ಥ ಪದಾಕ್ಷರಗಳ ನ್ಯೂನಾತಿರಿಕ್ತವಿಲ್ಲದ ಸಲಿಲ ಶಬ್ದಗಳಿಂದ ಕೂಡಿದ ಶಾಸನಗಳನ್ನು ಮಾಡಲು ವಿಶೇಷ ಸಮಿತಿಯನ್ನು ಮಾಡಿಸಬೇಕೆಂಬುದಾಗಿ ಸಚಿವ ಅಧಿಕಾರಿಗಳ ಸಮಿತಿಯು (Ministers' Power Committee) 1932ರಲ್ಲಿ ವರದಿ ಮಾಡಿತು. ಇತ್ತೀಚೆಗೆ ಮಹಾ ಯುದ್ಧದ ಸಲುವಾಗಿ ಶಾಸಕಾಂಗವೇ ರಾಷ್ಟ್ರಕ್ಷೇಮಕ್ಕಾಗಿ ವೈಯಕ್ತಿಕ ಸ್ವಾತಂತ್ರ್ಯವನ್ನು ತಡೆದು ರಾಷ್ಟ್ರದ ವಿಶಿಷ್ಟ ಸಂಪತ್ತನ್ನು ಶತ್ರುವನ್ನು ಸೋಲಿಸುವುದಕ್ಕಾಗಿ ವಿನಿಯೋಗಿಸುವ ಪರಮಾಧಿಕಾರವನ್ನು ಕಾಬಿನೆಟ್ ಸಮಿತಿಗೆ ಧಾರೆ ಎರೆಯಿತು.

## ಕಾರ್ಯಾಂಗ ಮತ್ತು ಶಾಸಕಾಂಗಗಳ ಸಂಬಂಧಗಳು

ಕಾರ್ಯಾಂಗವು ಪಾರ್ಲಿಮೆಂಟರಿ ಮತ್ತು ಪ್ರಸಿಡೆನ್ಷಿಯಲ್ ಸರ್ಕಾರಗಳಲ್ಲಿಯೂ ಒಂದೇ ವಿಧವಾದ ಅಧಿಕಾರವನ್ನು ಹೊಂದಿದೆ. ಎಲ್ಲೆಲ್ಲಿಯೂ ಶಾಸನಸಭೆಯ ಕಾರ್ಯವನ್ನು ಹತೋಟಿಯಲ್ಲಿಟ್ಟುಕೊಂಡಿದೆ. ಶಾಸನ ಸಭೆಯನ್ನು ಪ್ರಾರಂಭಮಾಡುವ, ಅಡ್ಜರ್ನ್‌ಮಾಡುವ ಮತ್ತು ರದ್ದುಮಾಡುವ ಅಧಿಕಾರವು, ಕಾರ್ಯಾಂಗಕ್ಕೆ ಸೇರಿದೆ; ರಿಪಬ್ಲಿಕನ್ ರಾಷ್ಟ್ರಗಳಲ್ಲಿ ವಿಶೇಷ ಪರಿಸ್ಥಿತಿಗಳಲ್ಲಿ ಶಾಸಕ ಸಭೆಯನ್ನು ಕಾರ್ಯಾಂಗವು ಸೇರಿಸುತ್ತದೆ; ಆಮೇಲೆ ಸಾಮಾನ್ಯವಾಗಿ ಕಾರ್ಯಾಂಗ ಸಮಿತಿಯ ಸಹಕಾರವಿಲ್ಲದೆ ಕೆಲಸವನ್ನು ಆರಂಭಿಸಿ ತನ್ನ ನಿರ್ದಿಷ್ಟ ಕಾರ್ಯಗಳಲ್ಲಿ ನಿರತವಾಗುತ್ತದೆ. ಕಾಬಿನೆಟ್ ಸರ್ಕಾರದಲ್ಲಿ ರಾಜನಾಗಲಿ ಅಥವಾ ಅವನ ಪ್ರತಿನಿಧಿಯು ಪ್ರಾರಂಭಭಾಷಣದೊಡನೆ ಆರಂಭೋತ್ಸವವನ್ನು ನೆರವೇರಿಸುತ್ತಾನೆ; ಪ್ರಧಾನ ಮಂತ್ರಿಯು ಅನುಯಾಯಿಗಳ ಸಹಯೋಗದಿಂದ ನಿರ್ಧರಿಸದ ಶಾಸನ ನೀತಿಯನ್ನು ಸಭೆಯ ಮುಂದೆ ಇಡುವನು. ಐರೋಪ್ಯ ರಾಷ್ಟ್ರಗಳಲ್ಲಿ ಸೇರಿದ್ದ ಸಭೆಯನ್ನು (Prorogue) ಸಾವಧಾನಿಸುವ, ಮತ್ತು ಮುಂದೆ ಹಾಕುವ ಅಧಿಕಾರವನ್ನು ಕಾರ್ಯ ಸಮಿತಿಯು ಪಡೆದಿದೆ. ಪ್ರಸಿಡೆನ್ಷಿಯಲ್ ಸರ್ಕಾರಗಳಲ್ಲಿ ಅಡ್ಜರ್ನ್

ಮೆಂಟಿನ ವಿಚಾರದಲ್ಲಿ ಎರಡು ಸಭೆಗಳಿಗೆ ಭಿನ್ನಾಭಿಪ್ರಾಯವಿದ್ದರೆ ಆಗ ಮಾತ್ರ ಕಾರ್ಯಾಂಗ ಸಮಿತಿಯು ಮುಂದುವರಿಸುವ ಅಧಿಕಾರವನ್ನು ಪಡೆದಿದೆ. ಕಾಬಿನೆಟ್ ಸಮಿತಿಯು ಪ್ರಜಾಪ್ರತಿನಿಧಿ ಸಭೆಯನ್ನು ರದ್ದು ಮಾಡಿ, ವರಣಕರ್ತ ಸಮಾಜಕ್ಕೆ ಬಿನ್ನವಿಸಿ ಸಾರ್ವತ್ರಿಕ ಚುನಾವಣೆಯ ಮೂಲಕ ಬೇರೊಂದು ಪ್ರತಿನಿಧಿಸಭೆಯನ್ನು ರಚಿಸುವಂತೆ ಪ್ರೇರೇಪಿಸ ಬಹುದು.

ಸಾರ್ವಜನಿಕ ವ್ಯಾಪಾರ ಮತ್ತು ಜೀವನವನ್ನು ಕೂಲಂಕಶ ವಾಗಿಯೂ ವಿವೇಕಯುತವಾಗಿಯೂ ಅವಲೋಕಿಸಿ ಕಾನೂನುಗಳನ್ನು ಮಾಡುವ ಸಂದರ್ಭದಲ್ಲಿ, ಶಾಸನಸಭೆಗೆ ಸಂಗ್ರಹಿಸಿದ ವಿಷಯವನ್ನು ಕಾರ್ಯಾಂಗಸಮಿತಿಯು ತಿಳಿಸಬೇಕು; ಸ್ಪುಟ ಸುಸ್ವರಯಥಾಸ್ಥಾನ ವಾಕ್ಯ ಗಳಿಂದ ಕೂಡಿದ ಮುಸುದೆಗಳನ್ನು ಸಭೆಯ ಅವಗಾಹನೆಗೆ ತರಬಹುದು; ಕೆಲವುವೇಳೆ ಸಭೆಯು ನಿರ್ಣಯಿಸಿದ ಸಂಧಿಗ್ಧ ಮುಸೂದೆಗಳನ್ನು ತಿದ್ದ ಬಹುದು, ಮತ್ತು ಮುಸುದೆಗಳನ್ನೂ ಮತ್ತು ಇತರ ಕಾರ್ಯಗಳನ್ನೂ ಒಪ್ಪಿದಪಕ್ಷದಲ್ಲಿ ಜಾರಿಗೆ ತರಬಹುದು.

ಶಾಸನಗಳಿಗೆ ಸಂಬಂಧಿಸನ ಅಧಿಕಾರದಲ್ಲಿ ಪ್ರಧಾನವಾದುದು, ಶಾಸಕಸಭೆಯು ನಿರ್ಧರಿಸಿದ ಮುಸೂದೆಗಳಿಗೆ ಅನುಮತಿ. ಮುಸೂದೆಗಳು ಕಾನೂನುಗಳಾಗಬೇಕಾದರೆ ಕಾರ್ಯಾಂಗ ಸಮಿತಿಯ ಸಮೀಕ್ಷಣೆ ಮತ್ತು ಅನುಮೋದನೆ ಅತ್ಯಗತ್ಯ. ಕಾರ್ಯಾಂಗದ ಸಮಿತಿಯ ನಿಷೇದಾಧಿಕಾರ (Power of Veto) ವನ್ನು ಎಲ್ಲಾ ರಾಷ್ಟ್ರಸರ್ಕಾರಗಳು ಒಪ್ಪಿವೆ. ವೀಟೋ ಅಧಿಕಾರವನ್ನು ಕೋಲಿಫೈಡ್ ನೆಗೆಟಿವ್ (Qualified Negative) ಎಂದೂ ಕರೆಯುತ್ತಾರೆ.1 ಪಾರ್ಲಿಮೆಂಟ್ ಸರ್ಕಾರದಲ್ಲಿ ಸಂಪೂರ್ಣ

---

*Hamilton* The Federalist 70:73 There is almost an irresistible tendency in Republican Governments for rhe representatives of the people to "assert an imperious control over the other departments." A mere parchment deliberation of the boundaries of the three departments is insufficient and each must be furnished with constitutional arm for its own department against the depreciations on the other.

ನಿಷೇಧಾಧಿಕಾರವು ಕ್ಯಾಬಿನೆಟ್‌ಗೆ ಸೇರಿರುವುದರಿಂದ ಶಾಸಕಸಭೆಯು ಬಹುಮತದಿಂದಲೂ ಅದನ್ನು ರದ್ದು ಮಾಡಲಾರದು. ಆದರೆ ರಾಜ್ಯಾಂಗಗಳ ರಚನೆಯ ತತ್ವದಲ್ಲಿ ಪರಿವರ್ತನೆಯಾಗುತ್ತಿರುವುದರಿಂದ ಈ ಅಧಿಕಾರವು ಶಿಥಿಲವಾಗಿದೆ. ಫ್ರಾನ್ಸ್ ರಾಷ್ಟ್ರದಲ್ಲಿ ನಿಷೇಧ ಅಧಿಕಾರವು ಶಾಸಕ ಸಭೆಯ ಕ್ಷಿಪ್ರಾಕಾರ ಮಸೂದೆಗಳನ್ನು ಸದ್ಯಕ್ಕೆ ತಡೆಯುವುದಾಗಿರಬೇಕೇ ಹೊರತು (Suspensive Veto) ರದ್ದು ಮಾಡಲಾಗದು. ಅನೇಕ ರಾಷ್ಟ್ರಗಳಲ್ಲಿ ಕಾರ್ಯಾಂಗ ಸಮಿತಿಗೆ ನಿಷೇಧ ಅಧಿಕಾರವಿದ್ದರೂ ಬಹುಮತ ಬೆಂಬಲದಿಂದ ಶಾಸಕಸಭೆಯು ಅದನ್ನು ವ್ಯರ್ಥಗೊಳಿಸಿ, ಪುನರಾವರ್ತಿಸಿ ಕಾನೂನಾಗಿ ನಿರ್ಧರಿಸಬಹುದು. ಆದರೂ ಶಾಸಕಸಭೆಯ ಸದಸ್ಯರ ಸ್ವಾರ್ಥತೆ ಮತ್ತು ದುರಾಗ್ರಹವನ್ನು ಅದರ ಪರಿಣಾಮವಾಗಿ ಉತ್ಪನ್ನವಾಗುವ ವಿಷಪೂರಿತ ಮಸೂದೆಗಳನ್ನು ಇತರ ರಾಜ್ಯಾಂಗಗಳ ಆಕ್ರಮಣವನ್ನು ತಡೆಯಲು ಸಲುವಾಗಿ ಕಾರ್ಯಾಂಗಕ್ಕೆ ನಿಷೇಧ ಅಧಿಕಾರವಿರಬೇಕೆಂಬುದಕ್ಕೆ ಸರ್ವಾನುಮತ ಬೆಂಬಲವಿದೆ. ಶಾಸಕ ಸಭೆಯ ಸದಸ್ಯರು ಅಸೂಯೆ ಅಸತ್ಯದಿಂದ ಕೂಡಿದವರಾಗಿ ಮಸೂದೆ ಪರಂಪರೆಗಳಿಂದ ಕ್ರಮವಾಗಿ ಕಾರ್ಯಾಂಗ ಸಮಿತಿಯ ಅಧಿಕಾರವನ್ನು ನಿರ್ಬಲವನ್ನಾಗಿ ಮಾಡಬಹುದು. 'The Veto Power is a shield to the Executive' ಎಂದು ಫೆಡರಲಿಸ್ಟನ ಪ್ರಸಿದ್ಧ ಗ್ರಂಥಕರ್ತನಾದ ಹಾಮಿಲ್ಟನ್‌ನು ಹೇಳಿದ್ದಾನೆ.

ಕಾರ್ಯಾಂಗ ಸಮಿತಿಯ ಅಧ್ಯಕ್ಷನನ್ನು ಮತ್ತು ಶಾಸನ ನೀತಿಗಳನ್ನೂ ನ್ಯಾಯಾಂಗಗಳ ಪರಿಶೀಲನೆಗೆ ಅಧೀನ ಮಾಡಲಾಗದೆಂಬುದು ಬಹುಮತ. ಸೆನೆಟ್ ಸಭೆಯು ಆಕ್ಷೇಪಣ ಸಮಿತಿಯಾಗಿ (Court of Impeachment) ರಾಷ್ಟ್ರಾಧ್ಯಕ್ಷನ ನಿಂದನಾರ್ಹವಾದ ನೀತಿಗಳನ್ನು ಖಂಡಿಸಬಹುದು, ಮತ್ತು ಅವನನ್ನು ಸ್ಥಾನ ಚ್ಯುತನನ್ನಾಗಿ ಮಾಡಬಹುದು. ನ್ಯಾಯಾಂಗವೂ ಯಾವ ವಿಧವಾದ ಕಾರ್ಯಕ್ರಮ (Judicial Process) ವನ್ನೂ ಜಾರಿಗೆ ತಂದು ಅಧ್ಯಕ್ಷನ ದೈಹಿಕ ಮತ್ತು ನಾಗರಿಕ ಸ್ವತಂತ್ರ್ಯಕ್ಕೆ ಪ್ರತಿಬಂಧಕವಾಗಲಾರದು. ಅಧ್ಯಕ್ಷನ ಅವಧಿಯ ತರುವಾಯ ಅವನು

ಸಾಮಾನ್ಯ ಪೌರನಾದ ಮೇಲೆ ಅವನನ್ನು ನಿರ್ಬಂಧಿಸಲು ನ್ಯಾಯಾಂಗಕ್ಕೆ ಸ್ವಾತಂತ್ರ್ಯವುಂಟು. ಆದರೆ ನ್ಯಾಯಾಂಗದ ವರ್ತನೆಯಿಂದ ರಕ್ಷಿಸಿಕೊಳ್ಳುವ ಅಧಿಕಾರವು ಅಧ್ಯಕ್ಷನಿಗೆ ಸಲ್ಲುವುದೇ ಹೊರತು ಅವನ ಸಹೋದ್ಯೋಗಿಗಳಿಗಾಗಲಿ, ಸಚಿವರಿಗಾಗಲೀ ಇಲ್ಲ. ಫ್ರಾನ್ಸ್ ರಾಷ್ಟ್ರದಲ್ಲಿ ಪ್ರಜಾಪ್ರತಿನಿಧಿಸಭೆಯು ರಾಷ್ಟ್ರಾಧ್ಯಕ್ಷನನ್ನು, ರಾಷ್ಟ್ರದ್ರೋಹಕ್ಕಾಗಲೀ, ಅಪಜಾಪಕ್ಕಾಗಲೀ ಮಾತ್ರ ದೂಷಿಸಬಹುದು. ಮತ್ತು ವಿಧಿ (law) ಇಲ್ಲದಿದ್ದಲ್ಲಿ ಶಿಕ್ಷೆಯಿಲ್ಲ ಎಂಬ ಸಂಪ್ರದಾಯ ಪರ ಅಧ್ಯಕ್ಷನ ದ್ರೋಹವನ್ನು ವಿವರಿಸುವ ವಿಧಿಯಿಲ್ಲವಾದುದರಿಂದ ಅವನಿಗೆ ಯಾವ ಶಿಕ್ಷೆಯನ್ನು ನಿರ್ಧರಿಸಲಾಗುವುದಿಲ್ಲ. ಬ್ರೆಜಿಲ್ ಚೈನ ರಾಷ್ಟ್ರಗಳಲ್ಲಿ ಅಧ್ಯಕ್ಷನನ್ನು ನ್ಯಾಯಾಂಗವು ನಿರ್ಬಂಧಿಸಲಾರದು. ಜರ್ಮನಿ ಮುಂತಾದ ಕೆಲವು ಐರೋಪ್ಯ ರಾಷ್ಟ್ರಗಳಲ್ಲಿ ಶ್ರೇಷ್ಠತಮ ನ್ಯಾಯಾಂಗವು ಅಧ್ಯಕ್ಷನ ಕಾರ್ಯವಿಮರ್ಶೆ ಮಾಡಬಹುದು. ಆದರೆ ತಪ್ಪಿತಸ್ಥನಾದರೆ ಶಿಕ್ಷೆಯನ್ನು ವಿಧಿಸುವ ಅಧಿಕಾರವಿಲ್ಲ. ಜರ್ಮನ್ ರಾಷ್ಟ್ರದಲ್ಲಿ ರಾಷ್ಟ್ರಾಧ್ಯಕ್ಷನನ್ನು ಅವನ ಅವಧಿಯು ಪೂರೈಸುವುದರಲ್ಲಿ ಮುಂಚೆಯೇ ಪ್ರಜಾಭಿಮಾನವನ್ನು ರೆಫೆರೆಂಡಂ ಮೂಲಕ ತಿಳಿದು ಅಧ್ಯಕ್ಷನನ್ನು ಸ್ಥಾನಚ್ಯುತನನ್ನಾಗಿ ಮಾಡಬಹುದು. ⅔ ಭಾಗ ರೈಕ್‌ಸ್ಟ್ಯಾಗ್ ಸಭೆಯು ಅಧ್ಯಕ್ಷನಿಗೆ ವಿರುದ್ಧವಾಗಿ ಅಭಿಮತವನ್ನು ಸೂಚಿಸಿದರೆ ಅಧ್ಯಕ್ಷನು ತನ್ನ ಕೆಲಸದಿಂದ ನಿವೃತ್ತನಾಗಿ, ಸಮಗ್ರ ಅಭಿಮತಕ್ಕಾಗಿ ಕಾಯಬಹುದು. ಶಾಸಕ ಸಭೆಯು ಈ ರೀತಿ ಸೂಚಿಸುವುದಕ್ಕೆ ಮುಂಚೆಯೇ ಸಭೆಯನ್ನು ತನ್ನ ಅಧಿಕಾರದಿಂದ ರದ್ದುಮಾಡಬಹುದು. ವರಣಕರ್ತ ಸಮಾಜವು ಅಧ್ಯಕ್ಷನ ನೀತಿಯನ್ನು ಒಪ್ಪಿದರೆ ಪುನರಾವರ್ತಿ ಚುನಾವಣೆಯಾದಂತೆಯೇ ಆಗುವುದು.

# ಪ್ರಕರಣ ೧೫

## ನ್ಯಾಯಾಂಗ

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ, ಶಾಂತಿಭಂಗವಾಗದಂತೆ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಮತ್ತು ಹಕ್ಕುಭಾಧ್ಯತೆಗಳನ್ನು ರಕ್ಷಿಸಲು, ರಾಷ್ಟ್ರ ಕಂಟಕರನ್ನೂ, ದುಷ್ಟರನ್ನೂ ರಕ್ಷಿಸಲು ಸಾರ್ವಜನಿಕ ಹಿತಸಾಧಕವಾದ ವಿಧಿ (law) ಮತ್ತು ವಿಧಿಗಳನ್ನನುಸರಿಸಿ, ನ್ಯಾಯಸ್ಥಾನಗಳನ್ನು ಮತ್ತು ನ್ಯಾಯಾಧೀಶರನ್ನೂ ನೇಮಿಸುವ ಪ್ರತ್ಯೇಕವಾದ ನ್ಯಾಯಾಂಗವು ಏರ್ಪಾಡಾಗುವುದು. ರಾಷ್ಟ್ರಪ್ರಜೆಗಳ ವೈಚಿತ್ರ್ಯ, ಸೌಶೀಲ್ಯಾದಿ ವಿಶಿಷ್ಟತೆಯನುಗುಣವಾಗಿ ವಿಧಿನಿರ್ಮಾಣವಾಗುವುದು; ಕಾನೂನು ರಚನೆಗೆ ಅಸ್ತಿಭಾರವಾದ, ಸಾರ್ವಲೌಕಿಕವಾದ ಮತ್ತು ನಿರ್ಣೀತವಾದ ನ್ಯಾಯತತ್ವವು, ಪ್ರಜೆಗಳು ಶಾರೀರಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಾಧನಗಳಲ್ಲಿ ಪಡೆದಿರುವ ಔನ್ನತ್ಯದ ಪ್ರತಿಬಿಂಬವೆಂದು ತಿಳಿಯಬಹುದು. ನ್ಯಾಯಬದ್ಧವಾದ ರಾಷ್ಟ್ರಗಳಲ್ಲಿ ಪ್ರಜೆಗಳು ರಾಜಕೀಯ, ಪೌರೇಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನನುಭವಿಸುತ್ತಾರೆ. ಕಾನೂನುಗಳ ಮತ್ತು ನ್ಯಾಯದಲ್ಲಿ ಅವ್ಯವಸ್ಥೆಯಾದರೆ ರಾಷ್ಟ್ರದ ಶಿಸ್ತು ಶಿಥಿಲವಾಗಿ, ಅನಾಯಕತ್ವವುಂಟಾಗಬಹುದು. ವ್ಯಕ್ತಿಗಳ ಹಕ್ಕುಗಳು ಹೆಚ್ಚಿದಷ್ಟೂ, ಮತ್ತು ಸ್ವಂತ ಪ್ರಕಟನೆಗಳು ಬೆಳೆದಷ್ಟೂ, ರಾಷ್ಟ್ರದಲ್ಲಿ ಆಚಾರದಲ್ಲಿರುವ ಕಾನೂನುಗಳು, ವಿಧಿಯೂ ಈ ನೂತನ ಭಾವನೆಗಳನ್ನು ಸಮಗ್ರವಾಗಿ ಏಕೀಭವಿಸಲಾರದೆ ಹಿಂದೆ ಬೀಳುವುದು; ಇದರಿಂದ ಅಧಿಕಾರಿಗಳ ಸ್ವಚ್ಛಂದ ಪ್ರವರ್ತನೆಗೆ ಮಾರ್ಗವಾಗುವುವು; ಕಾನೂನುಗಳ ನಿಶ್ಚಿತಾರ್ಥದಲ್ಲಿಯೂ ಪ್ರಯೋಗದಲ್ಲಿಯೂ ಶಂಕೆ ವುಂಟಾಗಿ ಧರ್ಮಲೋಪ ಬರುವುದೆಂಬ ಭಯವುಂಟಾಗಿ ವ್ಯಕ್ತಿಗೂ ಮತ್ತು ಅಧಿಕಾರಿಗಳಿಗೂ ತಿಕ್ಕಾಟವಾಗುವುದು. ಆದುದರಿಂದ ಅಧಿಕಾರಗಳನ್ನು ನಿಯಂತ್ರಣದಲ್ಲಿಟ್ಟು ರಾಷ್ಟ್ರ ವಿಧಿಯನುಗುಣವಾಗಿ

ನಿಷ್ಪಕ್ಷಪಾತ ತೀರ್ಮಾನವನ್ನು ಕೊಟ್ಟು, ವ್ಯಕ್ತಿಯ ಪೌರೇಯಾದಿ ಹಕ್ಕುಗಳನ್ನು ಕಾಪಾಡಲು ಅನೇಕ ನ್ಯಾಯಸ್ಥಾನಗಳು ಮತ್ತು ನ್ಯಾಯವಿಧಾನಗಳು ಶ್ರಿಷ್ಟಿಯಾಗಬೇಕಾಗುವುದು; ಹಾಗೆಯೆ ಅಪರಾಧಿಗಳ ವಿಚಾರಣೆ ಅಪರಾಧವನ್ನು ನಿರ್ಧಿಷ್ಟವಾಗಿ ತಿಳಿಯುವ ನೀತಿ, ಮತ್ತು ದೇಶಕಾಲಾಪರಾಧದನುಗುಣವಾಗಿ ದಂಡಪ್ರಯೋಗ–ಇವುಗಳು ರಾಷ್ಟ್ರದಲ್ಲಿ ಸ್ಥಾಪಿತವಾಗಬೇಕು.1 ಅಪರಾಧಗಳನ್ನು ಶಿಕ್ಷಿಸುವುದರಲ್ಲಿ ಪ್ರತಿಕ್ರಿಯೆಯ ದೃಷ್ಟಿಯಿರಬೇಕೇ ಅಥವಾ ನಿವಾರಣ ಮತ್ತು ಅನುಗ್ರಹ ದೃಷ್ಟಿಇರಬೇಕೇ ಎಂಬುದು ನ್ಯಾಯಾಂಗವು ವಿಷದಪಡಿಸಬೇಕಾದ ಪ್ರಶ್ನೆ. ದಂಡಪ್ರಯೋಗವು ಆಧುನಿಕ ದೃಷ್ಟಿಯಲ್ಲಿ ಏಕರೀತಿಯೂ ಮತ್ತು ಏಕಮುಖವಾಗಿಯೂ ಇರಬೇಕು, ಮತ್ತು ಸುಧಾರಕವಾಗಿರಬೇಕೆಂದು ಭಾವನೆ. ಕಮ್ಮಿ ಫಲ ಬಿಡುವ ವೃಕ್ಷಗಳನ್ನು ಫಲವತ್ತಾದ ಮತ್ತು ಪ್ರತ್ಯೇಕ ಬೆಳವಣಿಗೆಗೆ ಅನುಗುಣವಾಗಿರುವ ಸನ್ನಿವೇಶದಲ್ಲಿ ನಾಟಿದರೆ ಹೇಗೆ ಬಹು ಫಲಪ್ರದಾಯಕವಾಗುವುವೋ ಹಾಗೆಯೇ ದುರ್ಜನರ ಸನ್ನಿವೇಶವು ಪರಿವರ್ತನೆಯಾದರೆ ಅವರೂ ಕೂಡ ಉತ್ತಮದರ್ಜೆಯ ಪೌರೇಯ ಲಕ್ಷಣಗಳನ್ನು ತೋರಬಹುದು ಎಂಬ ನಂಬಿಕೆಯಿದೆ.

## ನ್ಯಾಯಾಂಗದ ಕಾರ್ಯಗಳು

ನ್ಯಾಯವು ರಾಷ್ಟ್ರದ ತಳಹದಿ; ನ್ಯಾಯವನ್ನು ಪಾಲಿಸುವ ಸ್ಥಾನಗಳು ಪವಿತ್ರಸ್ಥಾನಗಳು. ಪ್ರಾಚೀನಕಾಲದಲ್ಲಿ ತಪ್ಪಿತಸ್ಥರನ್ನೂ, ಅಪ

1 ತೀಕ್ಷ್ಣದಂಡೋಹಿ ಭೂತಾನಾಮುದ್ವೇಜನೀಯಃ । ಮೃದುದಂಡಃ ಪರಿಭೂಯತೇ । ಯಥಾರ್ಹದಂಡಃ ಪೂಜ್ಯಃ । ಸುವಿಜ್ಞಾತಾ ಪ್ರಣೀತೋ ಹಿ ದಂಡಃ । ಪ್ರಜಾಧರ್ಮಾರ್ಥಕಾಮೈರ್ಯೋಜಯತೇ । ದುಷ್ಪ್ರಣೀತಃ ಕಾಮಕ್ರೋಧಾಭ್ಯಾಮಜ್ಞಾನಾದ್ ವಾನಪ್ರಸ್ಥ ಪರಿವ್ರಾಜಕಾನಪಿ ಕೋಪಯತಿ. . . . . ಅಪ್ರಣೀತೋಹಿಮಾತ್ಸ್ಯನ್ಯಾಯಮುದ್ಭಾಯತಿ । ಬಲಿಯಾನಬಲಂ ಹಿ ಗ್ರಸತೆ ದಂಡಧರಾಭಾವೆ । ತೇನಗುಪ್ತಃ ಪ್ರಭವತೀತಿ ॥ Kantilya —4.

ರಾದಕ್ಕೆ ಬಲಿಯಾದವರನ್ನೂ ವಿಚಾರಿಸಲು ಯಾವ ಸಂಸ್ಥೆಯು ಇರಲಿಲ್ಲ. ತಪ್ಪಿಗೆ ಪ್ರತೀಕಾರವೇ ಶಿಕ್ಷೆಯಾಗಿತ್ತು. ತಪ್ಪಿತಸ್ಥರಿಗೆ ಜುಲ್ಮಾನೆಯನ್ನು ವಿಧಿಸುವ ಶಿಕ್ಷೆಯು ಕಾಲಕ್ರಮದಲ್ಲಿ ಜಾರಿಗೆ ಬಂತು. ಆಗ ರಾಷ್ಟ್ರ ಸರ್ಕಾರವು ನ್ಯಾಯವಿಚಾರಣೆಯಲ್ಲಿ ತೊಡಗಲು ಕ್ರಮಕ್ರಮವಾಗಿ ಪ್ರಾರಂಭಿಸಿತು. ರಾಷ್ಟ್ರದಲ್ಲಿ ಎಂತಹ ಸಾಹಸಕೃತ್ಯ ಮತ್ತು ಅಪಚಾರ ಗಳು ನಡೆದರೂ ಅಪರಾಧವು ಅನುಭವಿಸಿದವನಿಗೆ ತಟ್ಟುವುದಲ್ಲದೆ ಇಡೀ ಸಮಾಜಕ್ಕೆ ತಟ್ಟುತ್ತದೆ ಎಂಬ ಭಾವನೆ ಅಂಕುರಿಸಿ ಸಾಹಸಕೃತ್ಯಗಳೆಲ್ಲಾ ರಾಷ್ಟ್ರಾಭ್ಯುಧಯ ವಿರೋಧಕವು ಎಂದು ತಿಳಿವಳಿಕೆಯಾಯಿತು. ವ್ಯಕ್ತಿ ಗಳ ಸ್ವಾತಂತ್ರ್ಯ ಮತ್ತು ಹಕ್ಕುಗಳ ರಕ್ಷಣೆ ಪ್ರಥಮ ಕರ್ತವ್ಯವೆಂದು ಸರ್ಕಾರಕ್ಕೆ ಗೋಚರವಾದಾಗ ನ್ಯಾಯಾಂಗಾಡಳಿತವು ಪ್ರತ್ಯೇಕವಾದ ಮತ್ತು ಪ್ರಧಾನವಾದ ಅಂಗವಾಯಿತು. ಆಧುನಿಕಕಾಲದಲ್ಲಿ ನ್ಯಾಯಾಂಗ ವಿಲ್ಲದ ರಾಷ್ಟ್ರಗಳಿಲ್ಲ ; ಶಾಸನಸಭೆಗಳಿಲ್ಲದಿದ್ದರೂ ನ್ಯಾಯಸ್ಥಾನಗಳಿದ್ದರೆ ಅವು ವೃಧ್ಧಾಚಾರ, ಸಂಪ್ರದಾಯ ಮತ್ತು ಐತಿಹ್ಯಗಳನ್ನು ಕೂಲಂಕಶ ವಾಗಿ ವಿಮರ್ಶಿಸಿ ತೀರ್ಪುಗಳನ್ನು ಕೊಡುವುವೆಂಬ ಭರವಸೆಯಿದೆ. ಪ್ರಜಾ ಹಕ್ಕುಗಳನ್ನು ವಿಮರ್ಶಿಸಲೂ ಅಪರಾದವನ್ನು ಶಿಕ್ಷಿಸಲೂ, ನ್ಯಾಯವನ್ನು ದೃಢೀಕರಿಸಲೂ, ಶೀಲವಂತರನ್ನು ದುರ್ಜನರ ಕೋಟಲೆಯಿಂದ ರಕ್ಷಿಸಲೂ ನ್ಯಾಯಾಂಗವಿರಬೇಕು ; ಎಲ್ಲಿ ನ್ಯಾಯಾಂಗವು ರಾಷ್ಟ್ರವಿಧಿಯನ್ನು ವಿಶದ ಪಡಿಸಿ ಪ್ರಯೋಗಿಸುವುದಿಲ್ಲವೋ, ಭಿನ್ನಾಭಿಪ್ರಾಯಗಳಿದ್ದಲ್ಲಿ ನಿರ್ದಿಷ್ಟವಾದ ತೀರ್ಪುಗಳನ್ನು ಸೂಚಿಸುವುದಿಲ್ಲವೋ, ಮತ್ತು ಪ್ರಜಾ ಹಕ್ಕುಗಳನ್ನು ಪೋಷಿ ಸುವುದಿಲ್ಲವೋ, ಅಲ್ಲಿ ಸರ್ಕಾರವು ದುರ್ಬಲವಾಗಿ, ವ್ಯಕ್ತಿಸ್ವಾತಂತ್ರ್ಯವು ನಾಶವಾಗಿ, ರಾಷ್ಟ್ರವೇ ಕ್ಷೀಣವಾಗುವುದು. ರಾಷ್ಟ್ರದ ಮೇಲ್ಮೆಯು ಅದರ ನ್ಯಾಯಾಂಗದ ಕ್ರಿಯಾಶಕ್ತಿಯಲ್ಲಿ ಅಡಗಿದೆ; ನ್ಯಾಯಾಂಗದ ದೀಪವು ಆರಿಹೋದರೆ ರಾಷ್ಟ್ರದಲ್ಲಿ ಅಂಧಕಾರವು ಎಷ್ಟು ವಿಸ್ತಾರವಾದುದು ಎಂದು ಮನವರಿಕೆಯಾಗುವುದು.

---

1. Bryce, Modern Democracies Vol. II P. 384.

## Declaratory Judgements and Advisory Opinions

ನ್ಯಾಯಸ್ಥಾಪನೆಯನ್ನು ಮಾಡುವ ಅಂಗವು ನ್ಯಾಯಾಂಗವು; ಅದು ನ್ಯಾಯತತ್ವವನ್ನು ಅವಿಚ್ಛಿನ್ನವಾಗಿ ಪ್ರಗತಿ ದುರ್ಗತಿಗಳಲ್ಲಿಯೂ, ಏಕರೀತಿಯಾಗಿ ಅನುಕರಿಸಬೇಕು. ನ್ಯಾಯಸ್ಥಾನಗಳು (Courts) ಸ್ವತ್ತು, ಸಾಲ, ದಾಯಭಾಗ, ವಿವಾಹವಿಚ್ಛೇದ ಮುಂತಾದ ವಿಚಾರಗಳಲ್ಲಿ ಕಕ್ಷಿ ಪ್ರತಿಕಕ್ಷಿಗಳಿದ್ದರೆ, ಅವುಗಳನ್ನು ಪರಿಶೀಲಿಸಿ ರಾಷ್ಟ್ರ ವಿಧಿಗನುಗುಣವಾಗಿ ತೀರ್ಪನ್ನು ಕೊಡುವುವು; ಸಾಹಸಕೃತ್ಯ, ಮಾನಭಂಗ, ಚೋರತನ, ಶಾಂತಿಭಂಗ ಮುಂತಾದುವುಗಳು ನಡೆದರೆ ಅಪರಾಧವನ್ನು ನಿಷ್ಕರ್ಷೆ ಮಾಡಿ, ಅಪರಾಧಿಗಳನ್ನು ಶಿಕ್ಷೆಗೆ ಗುರಿಮಾಡುವುವು. ನಿರ್ಧಿಷ್ಟವಾದ ವಿವಾದಗಳನ್ನು ನಿಷ್ಕರ್ಷೆಮಾಡುವುದಲ್ಲದೆ, ಇಂಗ್ಲೆಂಡ್ ರಾಷ್ಟ್ರದಲ್ಲಿ ಜಾರಿಯಲ್ಲಿರುವಂತೆ ನ್ಯಾಯ ಯಾವದು ಎಂಬುದರ ವಿಷಯವಾಗಿ declaratory ತೀರ್ಪುಗಳನ್ನು ಕೊಡುತ್ತದೆ. (Declaratory Judgments) ಕಾರ್ಯಾಂಗವು ಮತ್ತು ಶಾಸಕಾಂಗವು ಸಂಧಿಗ್ಧ ಶಾಸನಗಳ ವಿಷಯವಾಗಿ ಬಿನ್ನವಿಸಿಕೊಂಡಾಗ, ನ್ಯಾಯಸ್ಥಾನವು ಸಲಹೆಗಳನ್ನು ಕೊಡುವುದು (Advisory opinions). ಕನೆಡಾ ಮತ್ತು ಸಂಯುಕ್ತ ರಾಷ್ಟ್ರಗಳ ವಿಧಾನರಚನೆಯಾದಾಗ ಶಾಸನ ರಚನೆಯಲ್ಲಿ ಅವಶ್ಯವಾದ ಗಹನ ತತ್ವಗಳನ್ನು ಶ್ರೇಷ್ಠ ನ್ಯಾಯಸ್ಥಾನ (Supreme Court) ದೊಡನೆ ಕಾರ್ಯಾಂಗ ಮತ್ತು ಶಾಸಕಾಂಗವು ಸಹಕರಿಸಬೇಕೆಂದು ನಿರ್ಧಾರವಾಯಿತು. ಆದರ ಸಲಹೆ ಪೂರ್ವಕವಾದ ಅಭಿಮತವನ್ನು ಸೂಚಿಸುವುದು ನ್ಯಾಯಾಂಗದ ಸಹಜವಾದ ಜವಾಬ್ದಾರಿಯಲ್ಲವೆಂದು ವ್ಯವಹಾರ ಶಾಸ್ತ್ರಜ್ಞರ ಮತವಾಗಿ, ಪ್ರಶ್ನೆ ಜಟಿಲವಾಗಿದೆ.

## ರೂಲ್ ಆಫ್ ಲಾ—ವಿಧಿಯ ಪ್ರಧಾನ್ಯತೆ

ಸಂಪ್ರದಾಯ ಪ್ರಧಾನವಿರುವ ರಾಷ್ಟ್ರಗಳಲ್ಲಿ ವ್ಯಕ್ತಿಸ್ವಾತಂತ್ರ್ಯ ಮತ್ತು ಸರ್ಕಾರದ ಅಧಿಕಾರಗಳಿಗೂ ಮೇಲಾದುದು ರಾಜಧರ್ಮ. ಕಾನೂನು,

ಸಂಪ್ರದಾಯ, ಮತ್ತು ಐತಿಹ್ಯಗಳ ಉತ್ಕೃಷ್ಟತೆಯನ್ನು ಎತ್ತಿ ಹಿಡಿಯುವ ಪದ್ಧತಿಗೆ ರೂಲ್ ಆಫ್ ಲಾ ಎಂದು ಹೆಸರು. ಯಾವ ವ್ಯಕ್ತಿಯಾಗಲಿ ಉತ್ತಮ ವರ್ಣ, ಅಂತಸ್ತುಗಳಿಗೆ ಸೇರಿದ್ದರೂ ಧರ್ಮನಿಬಂಧನೆಗಳನ್ನು ಮೀರಿದರೆ ಕೋರ್ಟುಗಳು ನ್ಯಾಯರೀತಿಯಲ್ಲಿ ಅವನನ್ನು ಶಿಕ್ಷಿಸಬಹುದೆಂಬುದೇ ಇದರ ಮೂಲತತ್ವ. ಸ್ವಚ್ಛಂದ ನಿಯಮಗಳ ಪ್ರಭಾವಕ್ಕಿಂತ ರಾಷ್ಟ್ರದಲ್ಲಿ ಸಾಂಪ್ರದಾಯಕ ಧರ್ಮದ ಪ್ರಭಾವ ಹೆಚ್ಚು; ಸ್ವಚ್ಛಂದ ವರ್ತನೆಗಾಗಲಿ, ಅನಿಯಂತ್ರಣ ಅಧಿಕಾರಕ್ಕಾಗಲೀ ಸ್ಥಾನವಿಲ್ಲ. ವ್ಯಕ್ತಿಯು ಅಪರಾಧಿಯೆಂದು ಶಂಕೆಯಾದರೆ ಅವನ ಸ್ಥಾನ ಗೌರವಗಳನ್ನು ಎಣಿಸುವುದಿಲ್ಲ. ನ್ಯಾಯಾಂಗದ ದೃಷ್ಟಿಯಲ್ಲಿ ಎಲ್ಲರೂ ಸಮಾನರು; ಸಾಮಾನ್ಯ ನ್ಯಾಯಸ್ಥಾನಗಳಿಗೆ ಅಧೀನರು. ರಾಷ್ಟ್ರವಿಧಾನದ ನಿಯಮಗಳು, ವೈಯಕ್ತಿಕ ಸ್ವಾತಂತ್ರ್ಯದ ಉಗಮವಲ್ಲ; ಸ್ವಾತಂತ್ರ್ಯವು, ಆಗಿಂದಾಗ್ಗೆ ವಿವಾದ ಮತ್ತು ಘರ್ಷಣೆಗಳ ಪರಿಶೀಲನೆಯಲ್ಲಿ ನ್ಯಾಯಾಸ್ಥಾನಗಳು ಕೊಟ್ಟ ತೀರ್ಪುಗಳ ಪರಿಣಾಮ. ಈ ಮೂರು ತತ್ವಗಳು ರೂಲ್ ಆಫ್ ಲಾ ಸಿದ್ಧಾಂತದಲ್ಲಿ ಅಡಗಿವೆ.

ನ್ಯಾಯಸ್ಥಾನಗಳು ಪೌರೇಯ ಹಕ್ಕುಗಳನ್ನು ಗಳಿಸಿರುವುವು ಎಂಬ ತತ್ವವು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ; ರಾಷ್ಟ್ರವಿಧಾನದ ಬಹುಭಾಗವನ್ನು ಶಾಸಕಸಭೆಗಳು ನಿರ್ಮಾಣಮಾಡಿವೆ. ಇಂಗ್ಲೆಂಡಿನಲ್ಲಿ 1689 ಶೋಣಿತರಹಿತ ಕ್ರಾಂತಿಯ ಪೂರ್ವಭಾವಿಯಾಗಿ, ಗಳಿಸಿದ ವೈಯಕ್ತಿಕ ಸ್ವಾತಂತ್ರ್ಯವು ನ್ಯಾಯಸ್ಥಾನಗಳ ಮಧ್ಯಸ್ಥಿಕೆಯಿಂದ ಸಾಧ್ಯವಾದುವೆಂಬುದರಲ್ಲಿ ಸತ್ವವಿದೆ; ಇತ್ತೀಚೆಗೆ ಪೌರೇಯ ಸ್ವಾತಂತ್ರ್ಯವು ಪಾರ್ಲಿಮೆಂಟ್ ಮತ್ತು ಇತರ ಶಾಸಕ ಸಭೆಗಳಿಂದ ಸಾಧ್ಯವಾಗಿದೆ. ಧರ್ಮದರೀತಿ ಏಕಮುಖವಾಗಿರಬೇಕೆಂಬ ತತ್ವವನ್ನು ಎಲ್ಲರೂ ಒಪ್ಪಿದ್ದಾರೆ. ಆಚಾರದಲ್ಲಿ ರಾಷ್ಟ್ರ ರಾಷ್ಟ್ರಕ್ಕೂ ವ್ಯತ್ಯಾಸವಿದೆ. ಫ್ರಾನ್ಸ್ ಪೌರೇಯನು ಸರ್ಕಾರದ ಮೇಲೆ ಫಿರ್ಯಾದು ಮಾಡಬಹುದು; ಇಂಗ್ಲೆಂಡಿನಲ್ಲಿ ಅಧಿಕಾರಿಯ ಮೇಲೆ ಮಾಡಬೇಕು. ಆಡಳಿತ ಶಾಖೆಯೊಡನೆಯಾಗಲಿ, ಆಡಳಿತ

ವರ್ಗದೊಡನೆ ಯಾಗಲೀ ವ್ಯವಹರಿಸಲಾಗದು. ಸಾಧಾರಣವಾಗಿ, ಆಡಳಿತ ವರ್ಗದ ನಿರ್ಣಯಗಳಿಗೂ ನ್ಯಾಯಾಂಗ ಶಾಸನಗಳಿಗೂ ಹೆಚ್ಚು ಅಂತರ ವಿರುವುದಿಲ್ಲ. ನ್ಯಾಯಾಂಗದ ವಿಷಯವನ್ನು ವಿಮರ್ಶಿಸಿದರೆ ವಿವಾದಾಸ್ಪದವಾದ ಅಂಶಗಳನ್ನು ಪ್ರತ್ಯೇಕಿಸಿ ನಿಜಾಂಶವನ್ನು ನ್ಯಾಯಾಂಗವು ನಿಶ್ಚಯಿಸುತ್ತದೆ. ಅಷ್ಟೇ ಅಲ್ಲದೆ, ನ್ಯಾಯಾಧೀಶನು ಆಧುನಿಕ ಪರಿಸ್ಥಿತಿಗಳಲ್ಲಿ ಶಾಸನಗಳನ್ನು ಮಾಡುತ್ತಾನೆ. ಪಾಲಿಸಬೇಕಾದ ವಿಧಿನೀತಿಯನ್ನು ನಿರ್ಧರಿಸುತ್ತಾನೆ. ನಿಶ್ಚಯದಲ್ಲಿಯೂ, ವಿಷಯ ಪ್ರತಿಪಾದನೆಯಲ್ಲಿಯೂ, ನಿಯಮಗಳಲ್ಲಿಯೂ, ಶಾಸನ ರೀತಿಯಲ್ಲಿಯೂ ಅಡಗಿರುವ ಅನೇಕ ಗಮನಾರ್ಹವಾದ ಅಂಶಗಳನ್ನು ಹೊರಗೆಡಹಿ, ಹೊಸ ಹೊಸ ನಿರ್ಧಾರಗಳನ್ನು ಮಾಡುವುದರಲ್ಲಿ ಆಸಕ್ತಿ ಹೆಚ್ಚು. ವಿಷಯ ಪ್ರತಿಪಾದನೆ, ವಿಮರ್ಶೆ, ನಿಯಮಗಳನ್ನ ನ್ಯಾಯಸ್ಥಾನಗಳು ಮಾಡಿದರೆ, ಆಡಳಿತಾಂಗವು, ನಿರ್ಧರಿಸಿದ ಶಾಸನ ನೀತಿಯನ್ನು ಪ್ರಯೋಗಿಸುತ್ತದೆ. ನ್ಯಾಯಾಧೀಶರು ಪರಿಸ್ಥಿತಿಗಳನ್ನು ಅಧಿಕಾರಗಳಷ್ಟು ದಕ್ಷತೆಯಿಂದ ತಿಳಿಯಲಾರರು; ವಿಶೇಷ ಸನ್ನಿವೇಶಗಳಲ್ಲಿ ಯುಕ್ತಾಯುಕ್ತ ಪರಿಜ್ಞಾನವು ಬೇರೆ ಬೇರೆ ರೀತಿಯಾಗಿರುವುದು. ನ್ಯಾಯಸ್ಥಾನಗಳಲ್ಲಿ ರಾಷ್ಟ್ರಧರ್ಮದ ಪ್ರತಿಪಾದನೆಯಲ್ಲಿ ನಿರತರಾದ ನ್ಯಾಯಾಧೀಶರಿಗೆ ಅಧಿಕಾರಗಳಷ್ಟು ಅನುಭವ ಮತ್ತು ತಿಳಿವಳಿಕೆಯಿರುವುದಿಲ್ಲ. ಆಡಳಿತದವರು ಪರಿಸ್ಥಿತಿಗಳ ಪರಿಶೀಲನೆಯಿಂದ ಹೊಸ ಹೊಸ ಅನುಭವಗಳನ್ನು ಪಡೆದು, ಆಗಮಿಕ ಪರಿಸ್ಥಿತಿಗಳಿಗೆ ಸಮಂಜಸವಾಗುವಂತಹ ಶಾಸನ ಕಾಯಿದೆಗಳನ್ನು ಮಾಡುವರು. ಈ ವಿಧವಾದ ಶಾಸನ ನಿರ್ಮಾಣ ಮತ್ತು ಪರಮಾಧಿಕಾರವನ್ನು ಪಡೆದಿರುವ ಶಾಸನ ಸಭೆಯು ಕಾನೂನುಗಳ ಸ್ವಾತಂತ್ರ್ಯದ ಬೆಳವಣಿಗೆಗೆ ಮುಖ್ಯ ಸಾಧನ.

ನ್ಯಾಯಬದ್ಧವಾದ ಸರ್ಕಾರದಲ್ಲಿ, ಸರ್ಕಾರದ ಐಚ್ಛಿಕವರ್ತನೆಯಿಂದ ಉನ್ನತವಾದ ಶಾಸನಗಳೂ, ಮತ್ತು ಕ್ರಮವಾಗಿ ಜಾರಿಗೆಬಂದ ಶಾಸನಗಳೂ ಎರಡು ಬೇರೆ ಎಂಬ ಭಾವನೆಯಿರುವುದಿಲ್ಲ. ನ್ಯಾಯಸಮ್ಮತವಿಲ್ಲದ ಶಾಸನವನ್ನಾಗಲೀ, ಕೃತ್ಯವನ್ನಾಗಲೀ, ಸರ್ಕಾರವು ಮಾಡಲಾಗದು.

ಹಾಗೆಯೇ ರಾಷ್ಟ್ರಧರ್ಮವು ಒಪ್ಪದ, ರಾಷ್ಟ್ರಹಿತಕ್ಕೆ ಪ್ರತಿಬಂಧಕವಾಗಬಹುದೆಂಬ ಶಂಕೆಯಿರುವ ಕೃತ್ಯಗಳನ್ನೂ, ವ್ಯಕ್ತಿಯಾಗಲಿ, ಅಧಿಕಾರಿಯಾಗಲಿ, ಮಾಡಲಾರರು. ಆದುದರಿಂದ ರೂಲ್ ಆಫ್ ಲಾ ಮತ್ತು ಸರ್ಕಾರದ ಶಾಸನಗಳೂ ಬೇರೆ ಬೇರೆ, ಮತ್ತು ರಾಷ್ಟ್ರಧರ್ಮವನ್ನು ಪ್ರತಿಪಾದಿಸುವ ಸಾಮಾನ್ಯ ನ್ಯಾಯಸ್ಥಾನಗಳ ದೃಷ್ಟಿಯಲ್ಲಿ ಅಧಿಕಾರಿಗಳೂ ಸಾಮಾನ್ಯ ವ್ಯಕ್ತಿಯೂ ಬೇರೆ ಬೇರೆ ಎಂದು ತಿಳಿದರೆ ತಪ್ಪಾಗುವುದು.

## Rule of Law in England

ಇಂಗ್ಲೆಂಡಿನಲ್ಲಿ ರೂಲ್ ಆಫ್ ಲಾ ಪ್ರಭಾವವು ಹೆಚ್ಚಾಗಿದೆ. ವ್ಯಕ್ತಿಯು ಅಪರಾಧ ಮಾಡಿದರೆ ದಸ್ತಗಿರಿಗೆ ಅರ್ಹನು. ಇವನ ದಸ್ತಗಿರಿಗೆ ಶಾಸನ ಸಮ್ಮತವಿದ್ದರೆ ನಂತರ ಕೋರ್ಟಿನಲ್ಲಿ ವಿಚಾರಣೆಯಾಗಿ ಶಿಕ್ಷೆಗೆ ಅರ್ಹನಾಗುತ್ತಾನೆ. ಪೌರೇಯನಂತೆ, ಅಧಿಕಾರಿಗಳು, ಸಚಿವರು, ಪೋಲೀಸ್ ಜನರು, ಶಿಪಾಯಿಗಳು ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯ ಮತ್ತು ಶಿಸ್ತಿಗೆ ಅಧೀನರು. ಅಧಿಕಾರಿಗಳ ಮೇಲೆ ತಂದ ದೂರುಗಳನ್ನು ಕೋರ್ಟುಗಳು ಅಂಗೀಕರಿಸುತ್ತವೆ. ಅಧಿಕಾರಿಯು ತನ್ನ ಮೇಲ್ಪಟ್ಟ ಅಧಿಕಾರಿಯ ಅಪ್ಪಣೆಯಂತೆ ಏನಾದರೂ ನ್ಯಾಯ ನಿಯಮ ವಿರುದ್ಧವಾಗಿ ವರ್ತಿಸಿದರೆ ತಾನೇ ವ್ಯತಿರಿಕ್ತ ನಡತೆಗೆ ಜವಾಬ್ದಾರಿ ಹೊಂದಬೇಕು; ಮತ್ತು ತನ್ನ ಪರವಾಗಿಯೇ ನ್ಯಾಯಸ್ಥಾನದಲ್ಲಿ ವ್ಯವಹರಿಸಬೇಕು. ರಾಜನಿಂದ ಮೊದಲುಗೊಂಡು ಸಾಮಾನ್ಯ ವ್ಯಕ್ತಿಯವರೆಗೂ ಧರ್ಮವಿರುದ್ಧ ವರ್ತನೆಗೆ ಶಿಕ್ಷೆಯನ್ನು ಅನುಭವಿಸಬೇಕು.

## ನ್ಯಾಯಾಂಗದ ರೀತಿ, ಪ್ರಜಾಪ್ರಭುತ್ವದ ತಳಹದಿ

## Some Judicial Functions as Security of Democracy

ಪ್ರಗತಿ ಹೊಂದಿದ ರಾಷ್ಟ್ರಗಳಲ್ಲಿ ನ್ಯಾಯಾಂಗವು ಆಡಳಿತವನ್ನೂ ಅಧಿಕಾರಗಳನ್ನೂ ನಿಯಂತ್ರಣದಲ್ಲಿಡಲೂ ಅಧಿಕಾರವರ್ಗದವರ ಸ್ವೇಚ್ಛಾ-

*Dicey* · Law of the Constitution Ch. II. P.P. 179-207.

ಪ್ರವರ್ತನೆಯನ್ನು ತಡೆಗಟ್ಟಲೂ ಮತ್ತು ವ್ಯಕ್ತಿಗಳ ಹಕ್ಕುಗಳನ್ನು ಸ್ಥಾಪಿಸಲೂ ಅನೇಕ ಸೂತ್ರಗಳನ್ನು ನಿರ್ಮಾಣಿಸಿದೆ.

## (*a*) Habeas Corpus—ಹೆಬಿಯುಸ್ ಕಾರ್ಪಸ್

ಹೆಬಿಯುಸ್ ಕಾರ್ಪಸ್ (Habeas Corpus) ಕಾನೂನು ಆಡಳಿತದ ದಬ್ಬಾಳಿಕೆಯಿಂದ ವ್ಯಕ್ತಿಸ್ವಾತಂತ್ರ್ಯಕ್ಕೆ ದಕ್ಕೆಯುಂಟಾಗದಂತೆ ರಕ್ಷಿಸುತ್ತದೆ. ಕೈದಿಗಳಿಗಾಗಿ ಕೆಲವು ನಿರ್ದಿಷ್ಟವಾದ ರಾಯಸಗಳು ( writs ) ರಚಿತವಾಗಿ ಅದರಿಂದ ವ್ಯಕ್ತಿಯು ತನ್ನಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅನುಕೂಲವಾಗಿದೆ. ಅಧಿಕಾರಿಗಳ ನೀಚವರ್ತನೆಯಿಂದ ವ್ಯಕ್ತಿಯನ್ನು ಸೆರೆಗೊಯ್ಯಲ್ಪಟ್ಟರೆ ಅದನ್ನು ಕೋರ್ಟಿನ ಅವಗಾಹನಕ್ಕೆ ತಂದು ವ್ಯವಹರಿಸಬಹುದು. ರಿಟ್‌ಗಳು ಬಂಧನದಲ್ಲಿರುವಾಗ ಮಾತ್ರ ಅನ್ವಯಿಸುತ್ತದೆಯೇ ಹೊರತು, ಬಿಡುಗಡೆಗೆ ಸಹಾಯವಾಗುವುದಿಲ್ಲ. ಸಕಾರಣವಿಲ್ಲದೆ ಪೋಲೀಸ್ ಅಧಿಕಾರಿಗಳು ಯಾರನ್ನೂ ಬಂಧನದಲ್ಲಿಡುವ ಅಧಿಕಾರ ಪಡೆದಿಲ್ಲ. ಕೆಲವು ಸಮಯದಲ್ಲಿ ದಸ್ತಗಿರಿಯಾದವರು ನಿರಪರಾಧಿಗಳೆಂದು ವಿಶದಪಟ್ಟರೆ, ಆಗ ಅವರು ಪೋಲೀಸ್ ಅಧಿಕಾರಿಗಳಿಂದ ನಷ್ಟ ಮತ್ತು ಮಾನಭಂಗಕ್ಕಾಗಿ ಪರಿಹಾರದ್ರವ್ಯವನ್ನು ಕೇಳಬಹುದು. ಕೆಲವು ವೇಳೆ ಸರ್ಕಾರಸಿಯಮಗಳಿಗನುಸಾರ ಆಡಳಿತಾಧಿಕಾರಿಗಳು ತಮ್ಮ ಕಾರ್ಯಕ್ರಮವನ್ನು ಸರಿಪಡಿಸಿಕೊಳ್ಳಬೇಕೆಂದು ಕೊ ವಾರೆಂಟೋ (Quo Warranto) ಅಧಿಕಾರ ಪತ್ರದ ಮೂಲಕ ನಿರ್ದೇಶವಿರುತ್ತದೆ.

## (*b*) Quo warranto And Mandamus
## (ಕೊ ವಾರೆಂಟೋ ಮತ್ತು ಮೆಂಡಾಮುಸ್)

ಅಧಿಕಾರ ಚಲವು ಹೆಚ್ಚಿದಷ್ಟೂ ಸಾರ್ವಜನಿಕ ಹಿತಕ್ಕಾಗಿಯೂ ಮತ್ತು ಪ್ರಜಾಹಕ್ಕುಗಳ ರಕ್ಷಣೆಗಾಗಿಯೂ ಆಡಳಿತಾಂಗವನ್ನು ಅನೇಕಾವರ್ತಿ ನ್ಯಾಯಾಂಗಕ್ಕೆ ಅಧೀನಮಾಡಬೇಕಾಗುವುದು. ಆದುದರಿಂದ ರಾಷ್ಟ್ರದಲ್ಲಿ ಪರಮಾಧಿಕಾರವನ್ನು ಹೊಂದಿರುವ ಸಭೆಯು ಅಧಿಕಾರಿಗಳು ನ್ಯಾಯ

ವನ್ನು ಆಚರಿಸುವ ಬಗೆ ಹೇಗೆ ಎಂಬುದನ್ನು ವಿವರಿಸುವುದು. ಈ ವಿವರಣೆಯಲ್ಲಿ, ಆಡಳಿತಾಧಿಕಾರಿಗಳ ಕಾರ್ಯ ಸ್ವಾತಂತ್ರ್ಯದ ರಕ್ಷಣೆ ಮತ್ತು ಅಧಿಕಾರಿಗಳ ಆಕ್ರಮಣ ಭಯದಿಂದ ಪೌರೇಯರ ಸ್ವಾತಂತ್ರ್ಯ ರಕ್ಷಣೆ ಇವೆರಡು ತತ್ವಗಳೂ ಅಡಗಿರುವುವು. ಅಧಿಕಾರಿಗಳು ಕಾನೂನುಗಳನುಸಾರವಾಗಿ ಕಾರ್ಯಗಳನ್ನು ಆಚರಿಸಬೇಕು. ನ್ಯಾಯಸ್ಥಾನಗಳು ಯಾವ ಅಧಿಕಾರವನ್ನೂ ವಜಾಮಾಡುವ ಹಕ್ಕನ್ನು ಪಡೆದಿಲ್ಲ. ವೈಯುಕ್ತಿಕ ಹಕ್ಕುಗಳು ಆಡಳಿತಾಧಿಕಾರದ ನಿರ್ಬಂಧಕ್ಕೆ ಸಿಕ್ಕುವ ಭೀತಿಯಿದ್ದಲ್ಲಿ ರಾಷ್ಟ್ರ ವಿಧಾನವು ನಿವಾರಣೋಪಾಯುಗಳನ್ನು ವಿಶದಪಡಿಸುತ್ತದೆ. ಹಾಗೆಯೇ ಅನೇಕಾವರ್ತಿ ನ್ಯಾಯಸ್ಥಾನಗಳು ತಮ್ಮ ಶಾಸನಗಳಿಂದ ಆಡಳಿತದ ಅಧಿಕಾರವನ್ನು ಆಕ್ರಮಿಸಿ, ಅಧಿಕಾರಿಗಳನ್ನು ನಿರ್ಬಂಧಿಸಬಹುದು. ನ್ಯಾಯ ವಿರುದ್ಧವಾದುದು ಯಾವದೆಂಬುದರಲ್ಲಿ ನಿರ್ದಿಷ್ಟವಾದ ನಿಯಮಗಳು ಸಾಧ್ಯವಿಲ್ಲದಿರುವುದರಿಂದ ನ್ಯಾಯಾಂಗದ ಆಕ್ರಮಣವನ್ನು ತಡೆಗಟ್ಟಲೂ, ಅಧಿಕಾರಿಗಳನ್ನೂ ಅಧಿಕಾರ ನಿರ್ವಹಣೆಯಲ್ಲಿ ಪ್ರೋಪಿಸಲೂ ರಾಷ್ಟ್ರ ವಿಧಾನದಲ್ಲಿ ಶಾಸನಗಳನ್ನು ಮಾಡಬೇಕಾಗುತ್ತದೆ. ಆದರೆ ಕಾರ್ಯಾಂಗವು ತನ್ನ ಜವಾಬ್ದಾರಿಯನ್ನೂ, ಬಲವನ್ನೂ ಹೆಚ್ಚಿಸಿಕೊಂಡು ಸ್ವಂತ ವಿವೇಚನೆಯಿಂದ ತೀರ್ಮಾನಕೊಡುವ ಅಧಿಕಾರವನ್ನು (discretionary authority) ಪಡೆದಿರುವುದರಿಂದ, ಇದು ವ್ಯಕ್ತಿ ಸ್ವಾತಂತ್ರ್ಯದ ಬೆಳವಣಿಗೆಗೂ ಮತ್ತು ನ್ಯಾಯಾಂಗದ ಸ್ವಾತಂತ್ರ್ಯದ ಕಾರ್ಯಾಚರಣೆಗೂ ಪ್ರತಿಬಂಧಕವಾಗುವುದರಿಂದ, ಮೆಂಡಾಮುಸ್ (Mandamus) ಅಧಿಕಾರ ಪತ್ರದ ಮೂಲಕ ಆಡಳಿತದ ಅಧಿಕಾರಿಗಳ ತೀರ್ಮಾನಗಳನ್ನು ನ್ಯಾಯಾಂಗವು ನಿಯಂತ್ರಿಸುತ್ತದೆ. ನ್ಯಾಯಾಂಗಕ್ಕಿರುವ ಅಧಿಕಾರ ಸ್ವರೂಪವನ್ನು ವಿವರಿಸಲು ಸುಲಭವಲ್ಲ. ನ್ಯಾಯಾಂಗ ದೃಷ್ಟಿಯಿಂದ ನ್ಯಾಯ ವಿರುದ್ಧವೆಂದು ತೋರಿದಲ್ಲಿ, ನ್ಯಾಯಸ್ಥಾನಗಳ ದೂಷಣೆಗೊಳಗಾಗಬೇಕು; ಅಧಿಕಾರಿಗಳ ಶಾಸನಗಳ ನಿಯಂತ್ರಣದಿಂದ ನ್ಯಾಯಾಂಗವು ಪ್ರಜಾ ಹಕ್ಕುಗಳನ್ನು ಕಾಪಾಡಬಹುದು; ಆದರೆ ಕಾರ್ಯಾಂಗಕ್ಕೂ ಮತ್ತು

ನ್ಯಾಯಾಂಗಕ್ಕೂ ಘರ್ಷಣೆಯು ಜಟಿಲವಾದ ರಾಜಕೀಯ ಪ್ರಶ್ನೆಗಳ ಗೊಂದಲವೆದ್ದಾಗ ಉಗ್ರರೂಪವನ್ನು ತಾಳಬಹುದು.

## (c) Writ of Injunction—ಇನ್‌ಜೆಕ್ಷನ್

ನ್ಯಾಯಾಂಗವು ಕೆಲವು ವೇಳೆ ಸಂಸ್ಥಾನಗಳಿಗಾಗಲೀ, ವ್ಯಕ್ತಿಗಳಿಗಾಗಲೀ ತೊಂದರೆ ತರುವಂತಹ, ಸರ್ಕಾರ ಅಧಿಕಾರಿಗಳ ಆತ್ಮಗೌರವಕ್ಕೆ ಕುಂದುತರುವಂತಹ ಕಾರ್ಯಗಳ ಪ್ರತಿಬಂಧಕವಾಗಿ, ಇನ್ ಜೆಕ್ಷನ್ ಮೂಲಕ ಜನರಿಗೆ ತಿಳಿವಳಿಕೆಯನ್ನು ಉಂಟುಮಾಡುತ್ತದೆ. ತಾತ್ಕಾಲಿಕ ರಿಟ್‌ಗಳನ್ನು ರಚಿಸಿ ವ್ಯಕ್ತಿಯು ಮತ್ತು ಅಧಿಕಾರಿಯು ನ್ಯಾಯವಿಚಾರಣೆ ಮಾಡುವಾಗ ತನ್ನ ಅವಜ್ಞತೆಯನ್ನು ಒಪ್ಪುವಂತೆ ನ್ಯಾಯಾಂಗವು ನಿರ್ಬಂಧಿಸುತ್ತದೆ. ವ್ಯಕ್ತಿಯ ಕಾರ್ಯಗಳು ಅಧರ್ಮಯುಕ್ತವಾಗಿದ್ದರೆ ರಿಟ್‌ಗಳು ಖಾಯಂ ಆಗಿ ವ್ಯಕ್ತಿಯನ್ನು ಶಿಕ್ಷೆಗೆ ಗುರಿಪಡಿಸುವುವು.

## (d) Writ of Certiorari—ಸರ್ಟಿಯೋರಾರಿ

ನ್ಯಾಯಾಂಗವು ರಚಿಸುವ ಶಾಸನಗಳಲ್ಲಿ ಸರ್ಟಿಯೋರಾರಿ (Certiorari) ಬಹು ಮುಖ್ಯವಾದುದು. ಸಂಕುಚಿತ ಅಧಿಕಾರವುಳ್ಳ ನ್ಯಾಯಸ್ಥಾನಗಳನ್ನು ತಮ್ಮ ವ್ಯವಹಾರಗಳ ದಾಖಲೆಯನ್ನು ರುಜುವಾತ್‌ಗಾಗಿಯೋ ಅಥವ ಪುನರೀಕ್ಷಣೆಗಾಗಿಯೋ ಮೇಲಿನ ನ್ಯಾಯಾಸ್ಥಾನಗಳಿಗೆ ಒಪ್ಪಿಸಬೇಕೆಂದು ನಿರ್ಬಂಧಿಸುವ ವಿಶೇಷಾಧಿಕಾರವು ಸರ್ಟಿಯೋರಾರಿಯಿಂದ ಸಾಧ್ಯ. ಈ ಪುನರೀಕ್ಷಣೆ ಮತ್ತು ವಿಮರ್ಶೆಗಾಗಿ ಅಧಿಕಾರ ಪತ್ರವನ್ನು ಕಳುಹಿಸುವುದು ಒಂದು ವಿಧ; ನ್ಯಾಯಾಂಗದ ಅಧಿಕಾರವನ್ನು ನಿರ್ವಹಿಸುವ ಕಾರ್ಯಾಂಗ ಮತ್ತು ಆಡಳಿತಾಂಗ ಅಧಿಕಾರಿಗಳ ಮತ್ತು ಅಧೀನ ಕಾರ್ಯನಿರ್ವಾಹಕ ಸಂಸ್ಥೆಗಳ ಕರ್ತವ್ಯನಿಷ್ಠೆಯನ್ನು ವಿಮರ್ಶಿಸುವುದು ಇನ್ನೊಂದು ವಿಧ. ಸಾಧಾರಣವಾಗಿ, ನ್ಯಾಯಾಧಿಕಾರವನ್ನು ನಿರ್ವಹಿಸುವ ಕಾರ್ಯನಿರ್ವಾಹಕ ಸಂಸ್ಥೆಗಳಿಗೆ ಈ ಶಾಸನವು ಅನ್ವಯಿಸ

ಬೇಕು. ಎಲ್ಲಿ ನಿವಾರಣೋಪಾಯುಗಳು (Statutory Remedies) ಸಿದ್ಧವಿದ್ದಲ್ಲಿ ಇದು ಅನಾವಶ್ಯಕ. ಸಂಯುಕ್ತ ರಾಷ್ಟ್ರದಲ್ಲಿ ರಾಷ್ಟ್ರವಿಧಾನ ವನ್ನು ವಿಮರ್ಶಿಸುವ ವಿಶೇಷಾಧಿಕಾರವು ಶ್ರೇಷ್ಠನ್ಯಾಯಸ್ಥಾನಕ್ಕೆ ಸೇರಿರು ವುದರಿಂದ ಕಾರ್ಯಾಂಗದ ನೀತಿಯುತ ಮತ್ತು ಅನೀತಿಯುತ ಕಾರ್ಯ ಗಳನ್ನು ಪರಿಹರಿಸಲು, ಪದೇಪದೇ ಈ ವಿಶೇಷಾಧಿಕಾರವನ್ನು ಉಪಯೋಗಿ ಸುತ್ತದೆ. ನ್ಯಾಯ ದೊರಕದಿದ್ದಕಡೆ ವ್ಯಕ್ತಿಯು ಶಾಸನ ಪತ್ರಕ್ಕಾಗಿ ಕೋರ್ಟಿಗೆ ಸೂಚಿಸಿ ಪುನರ್ವೀಕ್ಷಣೆಗಾಗಿ ಅರ್ಜಿಹಾಕಿಕೊಳ್ಳಬಹುದು. ಇತ್ತೀಚೆಗೆ ವಿಷಯಾನ್ವೇಷಣಕ್ಕೂ, ಕಾನೂನುಗಳ ಅರ್ಥನಿರ್ಧಾರಕ್ಕೂ ಕೂಡ ಈ ವಿಧವಾದ ರಿಟ್‌ಗಳನ್ನು ಬಯಸುವುದು ವಾಡಿಕೆಯಾಗಿದೆ. ಪಟ್ಟಣ ನಾಯಕನು ರಸ್ತೆಯನ್ನು ಹಾಕಿಸುವಾಗಲೂ ಮುನಿಸಿಪಾಲಿಟಿಯ ನಿಯಮ ಗಳನ್ನು ವಿಮರ್ಶಿಸುವಾಗಲೂ ಸ್ಕೂಲು ಟ್ರಸ್ಟಿಗಳು ಉಪಾಧ್ಯಾಯರ ವೇತನವನ್ನು ಹೆಚ್ಚಿಸುವಾಗಲೂ, ಕೋರ್ಟುಗಳಿಂದ ಸರ್ಟಿಯೋರಾರಿ ಶಾಸನಗಳನ್ನು ಕೇಳುವುದು ರೂಢಿಯಾಗಿದೆ. ಸಾಧಾರಣವಾಗಿ, ಆಡಳಿ ತಾಂಗದ ತಪ್ಪು ಅಭಿಪ್ರಾಯಗಳನ್ನೂ ಮತ್ತು ಅತಿಕ್ರಮವನ್ನೂ ತಿದ್ದುವ ಸಲುವಾಗಿ ಸರ್ಟಿಯೋರಾರಿಯನ್ನು ಉಪಯೋಗಿಸುವರು. ಕೆಳಗಿನ ಕೋರ್ಟುಗಳಿಂದ ಮೇಲಿನ ಕೋರ್ಟುಗಳಿಗೆ ತೀರ್ಪುಗಳು ಪುನರ್ವಿಮರ್ಶೆ ಗಾಗಿ ಹೋಗುವುದರಿಂದ ರಾಷ್ಟ್ರದಲ್ಲಿರುವ ಶ್ರೇಷ್ಠ ನ್ಯಾಯಸ್ಥಾನವು ಕೆಳಗಿನ ಕೋರ್ಟುಗಳನ್ನು ಹತೋಟಿಯಲ್ಲಿಟ್ಟು ಕಾರ್ಯಾಂಗದ ಆಡಳಿತ ಅಧಿಕಾರವನ್ನೂ ಸಂಸ್ಥಾನಗಳ ಸರ್ಕಾರದ ಅಧಿಕಾರವನ್ನೂ ನಿಯಂತ್ರಣ ದಲ್ಲಿಡಬಹುದು.

ಸಂಯುಕ್ತ ಸಂಸ್ಥಾನಗಳಲ್ಲಿ, ಅಧಿಕಾರ ಸಮಿತಿಗಳ (Official Boards) ಕಮಿಷನ್‌ಗಳಿಗೆ ವಿಷೇಶಾಧಿಕಾರವನ್ನು ವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಗೋಸ್ಕರ ಕೊಡುವುದು ಸಂಪ್ರದಾಯವಾಗಿದೆ. ಜವಾಬ್ದಾರಿ ಹೆಚ್ಚಾಗುವುದರಿಂದ ಅದನ್ನು ದಕ್ಷತೆಯಿಂದ ನಡೆಸಿಕೊಂಡು ಬರಲು ಆಡಳಿತ ಕೋರ್ಟುಗಳನ್ನು ಸ್ಥಾಪಿಸಿ ನ್ಯಾಯಾಂಗ ಅಧಿಕಾರವನ್ನು ಸಮಿತಿ

ಗಳ ಮೇಲೆ ಹೊರಿಸಲಾಗುವುದು. ಆಡಳಿತ ಕಾರ್ಯಗಳ ಸತ್ಯಾಂಶ ಗಳನ್ನು ಸಾಮಾನ್ಯ ಕೋರ್ಟುಗಳಲ್ಲಿ ಆಚರಣೆಗಿರುವ ನ್ಯಾಯ ತತ್ವಗಳ ದೃಷ್ಟಿಯಿಂದ ನಿರ್ಧರಿಸಲಾಗದು. ವ್ಯಕ್ತಿಗೆ ಅನ್ವಯಿಸುವ ನಿಯಮ ಗಳಲ್ಲಿಯೇ ಮಗ್ನರಾದ ನ್ಯಾಯಾಧೀಶರು ಸಾರ್ವಜನಿಕ ನೀತಿಯು ಯಾವು ದೆಂಬುದನ್ನು ನಿರ್ದಿಷ್ಟವಾಗಿ ತಿಳಿಯಲಾರರು. ನ್ಯಾಯಾಂಗಕ್ಕೆ ಹೆಚ್ಚು ಅಧಿಕಾರ ವಹಿಸುವುದರ ಪರಿಣಾಮವಾಗಿ ಸಾರ್ವಜನಿಕ ಹಿತಸಾಧಕ ಉದ್ದೇಶಗಳು ಮರೆಯಾಗಿ ವೈಯುಕ್ತಿಕ ಉದ್ದೇಶಗಳೇ ಪ್ರಧಾನವಾಗಿದ್ದುದ ರಿಂದ ಕಳೆದ ಮಹಾಯುದ್ಧದಿಂದೀಚೆಗೆ ಅಧಿಕಾರಿಗಳಿಗೂ ಮತ್ತು ಸಾರ್ವ ಜನಿಕ ಅಧಿಕಾರ ಶಾಖೆಗಳಿಗೂ ನ್ಯಾಯವಿಮರ್ಶೆಯ ಅಧಿಕಾರವನ್ನು ಕೊಟ್ಟು, ಪ್ರತ್ಯೇಕವಾಗಿ ಆಡಳಿತಕ್ಕೆ ಸಂಬಂಧವಾಗುವ ಕೋರ್ಟುಗಳನ್ನು ರಚಿಸುವುದು ಜಾರಿಗೆ ಬಂದಿದೆ.

ಖಾಸಗೀ ಹಕ್ಕುಗಳು, ವಾಣಿಜ್ಯ ಒಪ್ಪಂದಗಳು, ಕರಾರುಗಳು ಇವು ಗಳಿಗೆ ಕಾನೂನುಗಳಿಂದ ದಕ್ಕೆಯುಂಟಾದಾಗ ಕಾರ್ಯಾಂಗವು ತನ್ನ ಅಧಿಕಾರವನ್ನು ವೃದ್ಧಿಮಾಡಿಕೊಳ್ಳುವುದು. ಸರ್ಕಾರದ ಮುಖ್ಯ ಕಾರ್ಯ ಗಳನ್ನೆಲ್ಲಾ ಕಾರ್ಯಾಂಗವು ದಕ್ಷತೆಯಿಂದ ನಿರ್ವಹಿಸುತ್ತಾ, ಆಡಳಿತದಲ್ಲಿ ಬರುವ ತೊಡಕುಗಳನ್ನೂ ವಿವಾದಗಳನ್ನೂ ತಾನೇ ನಿರ್ಧರಿಸುತ್ತದೆ. ವಾಹ ನಾದಿಗಳ ಮಂತ್ರಿಯು ಬಸ್ಸುಗಳನ್ನು ಓಡಾಡಿಸಲು ರಹದಾರಿಯನ್ನು ಕೊಡದೆ, ಅಪೀಲುಗಳನ್ನು ತೀರ್ಮಾನಿಸಬಹುದು. ಕಾರ್ಯ ವ್ಯಾಪಾರ ಗಳಲ್ಲಾಗುವ ವಿವಾದಗಳನ್ನು 1919 ಇಂಡಸ್ಟ್ರಿಯಲ್ ಕೋರ್ಟ್ಸ್ ಆಕ್ಟ್ (Industrial Court Act) ಪ್ರಕಾರ ಲೇಬರ್ ಸಚಿವನು ಘರ್ಷಣೆಗಳನ್ನು ನಿವಾರಿಸಲು ವಿಚಾರಣ ಸಮಿತಿಗಳನ್ನು ಸ್ಥಾಪಿಸಬಹುದು. ವಿಮೆ ಸಂಸ್ಥೆ ಗಳಿಗೂ, ವ್ಯಕ್ತಿಗೂ, ಎರಡು ವಿಮಾ ಸಂಸ್ಥೆಗಳಿಗೂ, ಮೂಲಿಕೆಗಳನ್ನು ಮಾರುವ ಗಂದಿಗೆ ಅಂಗಡಿಯವನಿಗೂ ವ್ಯಕ್ತಿಗೂ ಘರ್ಷಣೆಗಳಾದರೆ ಆರೋಗ್ಯ ಸಚಿವನು ಅವುಗಳಲ್ಲಿ ನಿರ್ದಿಷ್ಟ ತೀರ್ಪುಗಳನ್ನು ಕೊಡಬಹುದು. ಡಿಫೆನ್ಸ್ ಆಫ್ ದಿ ರೆಲಮ್ಸ್ ಆಕ್ಟ್ (Defence of the Realms Act)

(Requisition Act) ರೆಕ್ವಿಸಿಷನ್ ಆಕ್ಟ್ ಮತ್ತು ವಾರ್ ಚಾರ್ಜಸ್ ವೆಲಿಡಿಟಿ ಆಕ್ಟ್ (War charges validity Act) ಮುಂತಾದ ಕಾನೂನುಗಳು ಯುದ್ಧ ಪರಿಸ್ಥಿತಿಗಳಲ್ಲಿ ಸರ್ಕಾರದ ವಿಶೇಷ ನಡವಳಿಕೆ ಗಳಿಗೆ ಅನುಮತಿಕೊಟ್ಟು ವ್ಯಕ್ತಿ ಸ್ವಾತಂತ್ರ್ಯವನ್ನೂ ಮತ್ತು ಹಕ್ಕುಗಳನ್ನೂ ನಿಯಂತ್ರಿಸುತ್ತವೆ. ಪ್ರಜಾಸ್ವಾತಂತ್ರ್ಯ ಮತ್ತು ಅದನ್ನು ಪೋಷಿಸುವ ನ್ಯಾಯಾಂಗವು ರಾಷ್ಟ್ರಕ್ಕೆ ಕಿರೀಟಪ್ರಾಯವಾದುವೆಂಬ ತಿಳಿವಳಿಕೆಯುಳ್ಳ ಜನರಿಗೆ ಈ ವಿಧವಾದ ಶಾಸನಗಳು ಆಪತ್ಕಾರಕವಾದುವು. ಈ ವಿವಿಧ ಶಾಸನ ರಚನೆಯಿಂದ ಶಾಸನ ಸಭೆಗಳಲ್ಲಿಯೂ ನ್ಯಾಯಾಧೀಶರಲ್ಲಿಯೂ ಅಪ ನಂಬಿಕೆ ಹುಟ್ಟಿ, ಅನೀತಿಯುತ ಸಾಧನಗಳಿಂದ ರಾಜಕೀಯ ಧ್ಯೇಯಗಳನ್ನು ಕ್ಯಾಬಿನೆಟ್ ಸಾಧಿಸಿಕೊಳ್ಳಲು ಮಾರ್ಗವಾಗಿ, ರಾಷ್ಟ್ರಧರ್ಮಕ್ಕೂ ಮತ್ತು ಅನಾದಿಯಿಂದ ಬಂದ ಸಂಪ್ರದಾಯಗಳಿಗೂ ಇರುವ ಆತ್ಮಗೌರವವು ನಷ್ಟ ಹೊಂದುವುದೆಂದು ಪ್ರಸಿದ್ಧ ರಾಜನೀತಿಜ್ಞನಾದ ಡೈಸಿಯು ಅಭಿಪ್ರಾಯ ಪಟ್ಟಿದ್ದಾನೆ. ಆಡಳಿತ ವರ್ಗಕ್ಕೆ ವಿಶೇಷಾಧಿಕಾರವನ್ನು ಕೊಟ್ಟು ಅದನ್ನು ದಕ್ಷತೆಯಿಂದ ನಿರ್ವಹಿಸಲು ಸ್ವಾತಂತ್ರ್ಯವನ್ನು ಅಧಿಕಾರಿಗಳಿಗೆ ಗಳಿಸುವುದು ಅನಿವಾರ್ಯವಾದರೂ ಸಾಮಾನ್ಯ ಕೋರ್ಟುಗಳ ನ್ಯಾಯಾಧೀಶರಿಗೆ ಪ್ರಜೆ ಗಳ ಹಕ್ಕುಗಳನ್ನು ಅಧಿಕಾರಿಗಳ ಆಕ್ರಮಣದಿಂದ ರಕ್ಷಿಸಲು ಸಾಧ್ಯ ವಾಗದಿದ್ದಲ್ಲಿ ವೈಯಕ್ತಿಕ, ಪೌರೇಯ ಮತ್ತು ರಾಜಕೀಯ ಸ್ವಾತಂತ್ರ್ಯವು ನಷ್ಟವಾಗುವುದೆಂಬುದು ಸರ್ವಸಮ್ಮತವಾದುದು.

## Administrative Law—ಆಡಳಿತಾಂಗ ಶಾಸನಗಳು

ಎಲ್ಲಾ ರಾಷ್ಟ್ರಗಳಲ್ಲಿಯೂ ಅಡ್‌ಮಿನಿಸ್ಟ್ರೇಟಿವ್ ಲಾ (Administrative Law) ಜಾರಿಯಲ್ಲಿದೆ. ವಿಧಿಗೆ ಒಳಪಡದ ಸರ್ಕಾರವು ಅನೀತಿಯೆನಿಸಬೇಕಾಗಿಲ್ಲ. ಕಾನೂನುಗಳಿಗೆ ಒಳಪಟ್ಟ ಸರ್ಕಾರವು ನೀತಿ

---

*Dicey*. Law of the Constitution.

*Hewart*. The New Despotism.

*Lord Sankey* If we had escaped a flying Pan of the Prerogative to fall into the fire of a Minister's Regulation, then it would be strange!

ಯುತ ಸರ್ಕಾರವೆಂದು ಹೇಳಲು ಸಾಧ್ಯ. ಆದರೂ ನೀತಿಯುತ ಸರ್ಕಾರಕ್ಕೆ ಕಾನೂನು ಬದ್ಧವಾದ ಆಡಳಿತ ಅಗತ್ಯವಾಗಿದೆ. ಆಡಳಿತ ಕಾನೂನುಗಳಿಲ್ಲದೆ ರಾಜ್ಯಾಡಳಿತವು ಸುಲಲಿತವಾಗಲಾರದು. ಆಡಳಿತವೆನ್ನುವುದು ಪ್ರಜೆಗಳ ಹಕ್ಕು ಸ್ವಾತಂತ್ರ್ಯಗಳ ರಕ್ಷಣೆಯು ಜವಾಬ್ದಾರಿ; ಮತ್ತು ಸರ್ಕಾರವು ಸಾರ್ವಜನಿಕ ಹಿತಸಾಧಕ ಯಂತ್ರ; ಯಾವುದೊಂದು ವರ್ಣ, ಗೋಷ್ಠಿಗಳ ಉತ್ಥಾನ ಸಾದಕವಲ್ಲ. ಆಡಳಿತ ಕಾನೂನುಗಳು (Administrative Law) ವ್ಯಕ್ತಿಯು ಮತ್ತು ರಾಷ್ಟ್ರದ ಹಿತಕ್ಕೆ ಪ್ರತಿಬಂಧಕವಾಗಲಾರವು. ಸ್ವಾತಂತ್ರ್ಯ ಚರಿತ್ರೆಯ ವಿಕಾಸದಲ್ಲಿ ಸ್ವಚ್ಛಂದಾಧಿಕಾರ (Bureaucratic authority)ವು ಪ್ರತಿಬಂಧಕದಂತೆ ತೋರಬಹುದು. ಆದರೆ ವಿಶಾಲ ದೃಷ್ಟಿಯಿಂದ ವಿಮರ್ಶಿಸಿದರೆ ಅಧಿಕಾರಿಗಳ ಪ್ರಭುತ್ವವು ವ್ಯಕ್ತಿ ಸ್ವಾತಂತ್ರ್ಯದ ಬೆಳವಣಿಗೆಗೆ ಸಹಕಾರಿಯಾಗಿರುವುದು. ಆಡಳಿತ ಕಾನೂನುಗಳು ಸಂಸ್ಥೆಗಳನ್ನು ರಚಿಸಿ ಪ್ರತಿವ್ಯಕ್ತಿಯ ಕಾರ್ಯಕ್ಕೂ ಸಂಸ್ಥೆಗಳಿಗೂ ನಿಕಟ ಸಂಬಂಧವನ್ನು ಏರ್ಪಡಿಸಿ ದೇಶದ ಪ್ರಗತಿಗೆ ಉತ್ತೇಜನವನ್ನು ಕೊಡುತ್ತವೆ. ಆಡಳಿತ ಕಾನೂನುಗಳಲ್ಲಿನ ಮುಂದಾಲೋಚನೆಗೆ ಸಂಬಂಧಪಟ್ಟ ತತ್ವಗಳೆಲ್ಲಾ ಕೇಂದ್ರ ಕಾರ್ಯಸಮಿತಿಗೆ ಸೇರಿದೆಯೇ ಹೊರತು ರಾಷ್ಟ್ರದ ಇತರ ಅಂಗಗಳಿಗೆ ಸೇರಿಲ್ಲ. ಪ್ರಜಾವರ್ಗಕ್ಕೂ ಆಡಳಿತ ವರ್ಗಕ್ಕೂ ನಿಕಟ ಸಂಬಂಧವನ್ನು ಕಲ್ಪಿಸುವುದೇ ಅಡ್ಮಿನಿಸ್ಟ್ರೇಟಿವ್ ಲಾ ವಿನ ಮುಖ್ಯ ಗುರಿ. ಸಾರ್ವಜನಿಕರ ಹಿತಕ್ಕಾಗಿಯೇ ಸಾರ್ವಜನಿಕ ಕಾನೂನುಗಳು ರಚಿತವಾಗಿವೆ. ಪ್ರಜೆಗಳ ಮತ್ತು ಆಡಳಿತಾಂಗಗಳ ಸಂಬಂಧವನ್ನು ನಿಯಮಿಸುವ ತತ್ವವೇ ಇದು. ಅಧಿಕಾರಿಗಳ ಸಂಸ್ಥೆಗಳು, ಕಾರ್ಯವಿಭಾಗ, ಅಧಿಕಾರಿಗಳ ಅವಧಿ, ಅವರ ಹಕ್ಕುಗಳು ಅಧಿಕಾರದ ಎಲ್ಲೆ ಇವುಗಳನ್ನೆಲ್ಲಾ ಸಾರ್ವಜನಿಕ ಹಿತದೃಷ್ಟಿಯಿಂದ ವಿಮರ್ಶಿಸಿ ರಾಷ್ಟ್ರದ ಮೂಲ ಸಂಘಟ್ಟನೆಗೆ ಸಂಬಂಧಪಟ್ಟು (Constitutional Law) ಸಹಕಾರಿಯಾಗುತ್ತವೆ. ಶಾಸಕ ಸಭೆಯ ಕಾನೂನುಗಳು ಸಂಪ್ರದಾಯ ಕೋರ್ಟ್

ಗಳ ತೀರ್ಪುಗಳನ್ನು ಒಳಗೊಂಡು ಒಂದು ರಾಷ್ಟ್ರಧರ್ಮಶಾಸ್ತ್ರವೆನಿಸುವುದು.

ಈ ವಿಧವಾದ ಕಾನೂನುಗಳನ್ನೂ ವಿಶೇಷ ಸಮಸ್ಯೆಗಳನ್ನೂ ಪರಿಹಾರ ಮಾಡುವುದರಲ್ಲಿ ವೈಜ್ಞಾನಿಕವಾಗಿ ಶಿಕ್ಷಣಪಡೆದಿರುವ ನೀತಿಜ್ಞರಿಗೆ ಸಮಾಜದಲ್ಲಿ ಪ್ರಯೋಗಿಸಲು ಅವಕಾಶವಿದೆ. ದೇಶವು ಪ್ರಗತಿ ಹೊಂದಿದ ಹಾಗೆಲ್ಲಾ ಸರ್ಕಾರ ಕಾರ್ಯಗಳು ಹೆಚ್ಚಿ ಅದರ ಪರಿಣಾಮವಾಗಿ ಆಡಳಿತ ಪ್ರಶ್ನೆಗಳು ಜಟಿಲವಾಗಿ ಆಡಳಿತದಲ್ಲಿ ನುರಿತವರಿಂದಲೇ ಪರಿಹಾರವನ್ನು ಹೊಂದಬೇಕಾದ ಪರಿಸ್ಥಿತಿ ಒದಗುವುದು.

## Droit Administratif

ಫ್ರಾನ್ಸ್ ರಾಷ್ಟ್ರದಲ್ಲಿ ಅಡ್ಮಿನಿಸ್ಟ್ರೆಟಿವ್ ಕೋರ್ಟುಗಳು (Administrative Courts) ಸಾಮಾನ್ಯ ಕೋರ್ಟುಗಳಿಂದ ಪ್ರತ್ಯೇಕವಾಗಿವೆ. ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಈ ದ್ವಿವಿಧ ನ್ಯಾಯಾಂಗಗಳನ್ನು ನೋಡಬಹುದು. ಇಂತಹ ರಾಷ್ಟ್ರಗಳಲ್ಲಿ ಅಧಿಕಾರಿಗಳ ಹಕ್ಕುಬಾಧ್ಯತೆಗಳು, ಅಧಿಕಾರಿ ಮತ್ತು ವ್ಯಕ್ತಿಸಂಬಂಧಗಳು, ಹಕ್ಕುಗಳ ನಿರ್ಣಯ, ಇವೆಲ್ಲಾ ವಿಶೇಷ ನ್ಯಾಯಾಸ್ಥಾನಗಳಲ್ಲಿ ನಿರ್ಧರಿಸಲ್ಪಡುವುವು. ಈ ವಿಧವಾದ ಕೊರ್ಟುಗಳಲ್ಲಿ ಸಾಮಾನ್ಯ ವ್ಯಕ್ತಿಗಳ ವಿವಾದಗಳು ಅವಗಾಹನೆಗೆ ಮತ್ತು ವಿಮರ್ಶೆಗೆ ಬರುವುದಿಲ್ಲ. ಸರ್ಕಾರದ ಕಾರ್ಯದಲ್ಲಿ ನಿರತನಾಗಿ ಆಕ್ಟ್ ಆಫ್ ಸ್ಟೇಟ್ ( Act of State ) ಗಾಗಿ ಮಾಡಿದ ವರ್ತನೆ ಅನೀತಿಯುತವಾದರೂ ಸಾಮಾನ್ಯ ಕೋರ್ಟುಗಳು ಅಂತಹ ಸಂದರ್ಭದಲ್ಲಿ ಅಧಿಕಾರಿಯನ್ನು ಪ್ರಶ್ನಿಸಲಾಗದು. 'Liable for fault of service and not for personal fault' ಆಡಳಿತ ಸಂಸ್ಥೆಗಳ ಅಥವ ಮೇಲಿನ ಅಧಿಕಾರಿಗಳ ಆಜ್ಞಾಪರಿಪಾಲನೆಯಲ್ಲಿ ಕೆಳಗಿನ ಅಧಿಕಾರಿಯು ವ್ಯಕ್ತಿಯ ಮತ್ತು ಪೌರೇಯ ಸ್ವಾತಂತ್ರ್ಯವನ್ನು ಉಲ್ಲಂಘಿಸಿದರೆ ಆಗ ಅವನು ಶಿಕ್ಷೆಗೆ ಗುರಿಯಾಗುವುದಿಲ್ಲ.

ದ್ವಿವಿಧ ನ್ಯಾಯಸಂಸ್ಥೆಗಳ ರಚನೆಯಿಂದ ಅಧಿಕಾರಿಗಳು ಸಾರ್ವ

ಜನಿಕ ಸೇವೆಯಲ್ಲಿ ರಾಷ್ಟ್ರಧರ್ಮಕ್ಕೆ ಮೇಲಾದವರು ಎಂಬ ತಿಳುವಳಿಕೆ ತಪ್ಪುಭಾವನೆ. ಆಡಳಿತದವರೇ ಬೇರೆ ವರ್ಗ; ಅವರ ಪರಸ್ಪರ ಸಂಬಂಧ ವಿಶೇಷ ರೀತಿಯಾಗಿರುವುದು. ಆಡಳಿತ ಅಧಿಕಾರಿಗಳ ಪರಸ್ಪರ ಸಂಬಂಧಗಳನ್ನೂ ವ್ಯಕ್ತಿ ಮತ್ತು ಅಧಿಕಾರಿಗಳ ಸಂಬಂಧಗಳನ್ನೂ ಪ್ರತ್ಯೇಕವಾಗಿ ವ್ಯವಹರಿಸಬೇಕಾಗುವುದು. ಅವರುಗಳ ಸಮಸ್ಯೆಗಳು ವಿಶೇಷರೀತಿಯಾದುದರಿಂದ ಪ್ರತ್ಯೇಕ ಕೋರ್ಟುಗಳೂ ನಿಯಮಗಳೂ ಮತ್ತು ಸಂಪ್ರದಾಯಗಳೂ ಅತ್ಯಾವಶ್ಯಕ. ಆಡಳಿತ ಸಂಬಂಧಗಳಿಗೆಲ್ಲಾ ಅನ್ವಯಿಸುವ ನ್ಯಾಯಕ್ಕೆ ಫ್ರೆಂಚ್ ರಾಷ್ಟ್ರದಲ್ಲಿ ಡ್ರಾಇತ್ ಅಡ್ಮಿನಿಸ್ಟ್ರಾಟಿವ್ (Droit Administratif) ಎಂದು ಕರೆಯುವರು. ಸಾಮಾನ್ಯ ಕೋರ್ಟುಗಳ ನ್ಯಾಯಾಧೀಶರು ಪೌರೀಯ ಹಕ್ಕುಗಳ ವಿಚಾರದಲ್ಲಿ ಪಕ್ಷಪಾತಬುದ್ಧಿಯುಳ್ಳವರು, 'ಅಧಿಕಾರಿಗಳ ಕರ್ತವ್ಯಪಾಲನೆಯಲ್ಲಿ ಅನಾದರಣೆಯುಳ್ಳವರು.' ಆದುದರಿಂದಲೇ ವಿಶಿಷ್ಟ ಹಕ್ಕು ಮತ್ತು ಅಧಿಕಾರಗಳನ್ನುಳ್ಳ ಪ್ರತ್ಯೇಕ ನ್ಯಾಯಸ್ಥಾನಗಳು ಅಧಿಕಾರಿಗಳ ರಕ್ಷಣೆಗಾಗಿ ಮತ್ತು ಸ್ವಾತಂತ್ರ್ಯತೆಯಿಂದ ಕಾರ್ಯಗಳನ್ನು ನಿರ್ವಹಿಸಲು ರಚನೆಯಾಗಬೇಕೆಂದು ಮನವರಿಕೆಯಾಗಿದೆ.

ಫ್ರೆಂಚ್ ರಾಷ್ಟ್ರದಲ್ಲಿ ಪ್ರಜೆಗಳು ಬಲಯುತವಾದ ಕಾರ್ಯಾಂಗದ ದಕ್ಷತೆಯಲ್ಲಿ ಅಪಾರ ನಂಬಿಕೆಯುಳ್ಳವರು. ಪ್ರಿಫೆಕ್ಟರ್ ಸಮಿತಿಯು ಕೆಳಗಿನ ಆಡಳಿತ ಭಾವನೆಗೂ ಪ್ರಜೆಗಳಿಗೂ ಆಗುವ ವಾದವಿವಾದಗಳನ್ನು ನಿರ್ಧರಿಸುತ್ತದೆ. ವಿದ್ಯಾಪ್ರಚಾರ ಸಮಿತಿಗಳು, ಆಡಳಿತ ಕೋರ್ಟುಗಳು ತಮ್ಮ ತಮ್ಮ ಆಡಳಿತಕ್ಕೆ ಒಳಪಟ್ಟ ಸಮಸ್ಯೆಗಳಿಗೆ ನಿವಾರಣೋಪಾಯಗಳನ್ನು ನಿರ್ಧರಿಸುವವು. ಅತ್ಯಂತ ಮುಖ್ಯವಾದ ನ್ಯಾಯಸ್ಥಾನವು ಕೌನ್ಸಿಲ್ ಅಫ್ ಸ್ಟೇಟ್ (Council of State). ಈ ಶ್ರೇಷ್ಠ ಸ್ಥಾನವೂ, ಕೋರ್ಟ್ ಆಫ್ ಫಸ್ಟ್ ಇನ್ಸ್‌ಟೆನ್ಸ್ (Court of first Instance) (ಎಂದರೆ ತಾನೇ ಮೊದಲು ತೆಗೆದುಕೊಳ್ಳಬಹುದು,) ಆಗಿ ಆಡಳಿತಕ್ಕೂ ಮತ್ತು ವ್ಯಕ್ತಿಗೂ ಉಂಟಾದ ಘರ್ಷಣೆಗಳನ್ನು ವಿಮರ್ಶಿಸುತ್ತದೆ. ಇದು ಎಲ್ಲಾ ಅಪೀಲುಗಳನ್ನು ತೀರ್ಮಾನಿಸುವ ಪರಮಾಧಿಕಾರ

ವನ್ನೂ ಹೊಂದಿದೆ. ಅಡ್ಮಿನಿಸ್ಟ್ರೇಟಿವ್ ಕೋರ್ಟುಗಳಿಗೂ, ನ್ಯಾಯಸ್ಥಾನಗಳಿಗೂ ವಿವಾದಗಳುಂಟಾದಲ್ಲಿ ಅವುಗಳನ್ನು ನೀಗಿಸಲು 1872ರಲ್ಲಿ ಒಂದು ಕಾನ್‌ಫ್ಲಿಕ್ಟ್ ಕೋರ್ಟ್ (Conflict Court) ಸ್ಥಾಪಿತವಾಯಿತು. ಫ್ರೆಂಚ್‌ರಾಷ್ಟ್ರದಲ್ಲಿ ಕಾರ್ಯಾಂಗ ಶಾಸನಗಳನ್ನು ರಚಿಸುವ ಅಧಿಕಾರವನ್ನೂ, ಮತ್ತು ಅಧಿಕಾರಿಗಳ ನ್ಯಾಯವಿಮರ್ಶೆಮಾಡುವ ಅಧಿಕಾರವನ್ನೂ ವಹಿಸುವ ಪ್ರವೃತ್ತಿಯು ಪ್ರಧಾನವಾಗಿ ಕಾಣುತ್ತಿದೆ.

## ಶಾಸನ ಸಭೆಯ ಶಾಸನಾಧಿಕಾರವನ್ನು ಪರಿಶೀಲಿಸುವ ಅಧಿಕಾರ
## Judicial Review

ವಿಧಾನಗಳು ಪೂರ್ವಭಾವಿಯಾಗಿ ನಿರ್ಧರಿಸಲ್ಪಟ್ಟ ರಾಷ್ಟ್ರಗಳಲ್ಲಿಯೂ ಮತ್ತು ಸಂಯುಕ್ತ ರಾಷ್ಟ್ರಗಳಲ್ಲಿಯೂ ನ್ಯಾಯಾಂಗವು ಶಾಸಕಾಂಗ ಮಾಡುವ ಕಾರ್ಯಗಳನ್ನು ವಹಿಸಿಕೊಂಡು ಕಾರ್ಯಾಂಗದೊಡನೆಯೂ ಸಹಕರಿಸುತ್ತದೆ. ಆಡಳಿತಾಂಗಗಳು ತಮ್ಮ ನಿರ್ದಿಷ್ಟವಾದ ಅಧಿಕಾರವನ್ನು ಅತಿಕ್ರಮಿಸಿದರೂ, ಸಂಸ್ಥಾನದ ಸರ್ಕಾರಕ್ಕೂ ರಾಷ್ಟ್ರ ಸರ್ಕಾರಕ್ಕೂ ಘರ್ಷಣೆಯಾದರೆ ನ್ಯಾಯಾಂಗವು ರಾಷ್ಟ್ರವಿಧಾನಗಳ ರೀತಿಯನ್ನು ವಿವರಿಸಿ ರಾಷ್ಟ್ರದ ಮೂಲಾಧಾರ ಧರ್ಮವನ್ನೂ ಪ್ರಕಾಶಿಸುತ್ತದೆ. ಶಾಸಕ ಸಭೆಗಳು ಕಾನೂನುಗಳನ್ನು ರಚಿಸುವಾಗ ತಮಗೆ ವಿಧಿಸಿರುವ ಅಧಿಕಾರದ ಎಲ್ಲೆಯನ್ನು ಮೀರದ ಹಾಗೆ ಎಚ್ಚರಿಕೆ ಹೊಂದಿರಬೇಕು. ಶಾಸಕ ಸಭೆಗಳು ಮತ್ತು ಆಡಳಿತಾಂಗಗಳು ತಮ್ಮ ತಮ್ಮ ನಿರ್ದಿಷ್ಟ ಅಧಿಕಾರಗಳನ್ನು ಮೀರದಂತೆ ನೋಡಿಕೊಳ್ಳಲು ನ್ಯಾಯಾಂಗವು ಸ್ಥಾಪಿತವಾಗಿದೆ. ರಾಷ್ಟ್ರ ವಿಧಾನಕ್ಕೆ ವಿರುದ್ಧವಾದ ಕಾನೂನುಗಳನ್ನು ಅಸಂಬದ್ಧವಾದುದೆಂದು ತೀರ್ಮಾನಿಸುವ ಪರಮಾಧಿಕಾರ ನ್ಯಾಯಾಂಗಕ್ಕೆ ಸೇರಿದೆ.1 ಶಾಸನಾಂಗದ ಆಕ್ಟುಗಳ ನ್ಯಾಯಾನ್ಯಾಯಗಳನ್ನು ವಿಮರ್ಶಿಸುವ ಈ ಅಧಿಕಾರಕ್ಕೆ ಜುಡಿಷೀಯಲ್ ರಿವ್ಯೂ (Judicial Review) ಎಂದು ಹೆಸರು."

---

*Dicey* Law of the Constitution P 115
*Hamilton* The Federalist No 78

ರಾಷ್ಟ್ರ ವಿಧಾನಕ್ಕೆ ಅಸಂಗತವೂ ಮತ್ತು ವಿರುದ್ಧವೂ ಆದ ಕಾನೂನುಗಳು ಅನೀತಿಯುತವಾದವು. ಈ ತತ್ವವನ್ನು ನಿಷೇಧಿಸಿದರೆ ರಾಷ್ಟ್ರದಲ್ಲಿ ಸೇವಕನು ಯಜಮಾನನಿಗಿಂತ ಉತ್ತಮನಹಾಗೆ ಕಾಣುತ್ತಾನೆ; ಪ್ರತಿನಿಧಿಗಳು ಪ್ರಜಾವರ್ಗಕ್ಕಿಂತ ಶ್ರೇಷ್ಠರಂತೆ ವರ್ತಿಸುವರು; ರಾಷ್ಟ್ರವಿಧಾನವು ಮೂಲಭೂತವಾದ ಧರ್ಮ; ಈ ಧರ್ಮದ ಅರ್ಥ ಮತ್ತು ಪ್ರಯೋಗವನ್ನು ತಿಳಿಯುವ ಅಧಿಕಾರವು ನ್ಯಾಯಾಂಗಕ್ಕೆ ಸೇರಿದೆ. ರಾಷ್ಟ್ರವಿಧಾನಕ್ಕೂ ಮತ್ತು ಕಾಯಿದೆ ನಿಬಂಧನೆಗಳಿಗೂ ಅಂತರವುಂಟಾದರೆ ಆಗ ಪ್ರಜಾವರ್ಗವು ವಿಧಾನವನ್ನು ನಿಬಂಧನೆಗಳಿಂಗಿಂತಲೂ, ಮತ್ತು ಪ್ರಜಾಮನೋಗತವು ಪ್ರತಿನಿಧಿಗಳ ಇಂಗಿತಕ್ಕಿಂತಲೂ ಉತ್ತಮವೆಂದು ತಿಳಿಯಬೇಕು. ಈ ಸಿದ್ಧಾಂತದ ಅನುಕರಣೆಯಿಂದ ನ್ಯಾಯಾಂಗವು ಪರಮಾಧಿಕಾರವನ್ನು ಪಡೆಯುವುದೆಂದು ಊಹಿಸಲಾಗದು; ಪ್ರಜಾವರ್ಗವೇ ಪರಮಾಧಿಕಾರವನ್ನು ಹೊಂದಿದೆ. ಪ್ರಜಾಭಿಮತಕ್ಕೂ ನಿಬಂಧನೆಗಳಲ್ಲಿ ವ್ಯಕ್ತವಾಗಿರುವ ಶಾಸನ ಸಭೆಯ ಇಂಗಿತಕ್ಕೂ ಘರ್ಷಣೆಯಾದರೆ ನ್ಯಾಯಾಧೀಶರು ಪ್ರಜಾಭಿಮತವನ್ನೆಲ್ಲ ಅನುಮೋದಿಸಬೇಕು. ಮೂಲಾಧಾರವಾದ ಧರ್ಮವನ್ನು ತಾತ್ಕಾಲಿಕ ಶಾಸನಗಳಿಂದ ಪ್ರತ್ಯೇಕಿಸಿ, ಅನಾದ್ಯಂತ ಧರ್ಮವನ್ನು ವಿಶದ ಪಡಿಸಬೇಕೆಂದು ಹೆಮಿಲ್ಟನ್ ಹೇಳಿರುವನು. ಸಂಯುಕ್ತರಾಷ್ಟ್ರದಲ್ಲಿ ಕಾನೂನಿನ ವಿಮರ್ಶೆ ಮೂರು ವಿಧವಾಗಿವೆ. ಕೋರ್ಟುಗಳೂ ಕಾಂಗ್ರೆಸ್ ಸರ್ಕಾರವೂ ರಚಿಸುವ ನಿಯಮಗಳನ್ನು ಪರಿಶೀಲಿಸುವ ಹಕ್ಕು, ರಾಷ್ಟ್ರೀಯ ನ್ಯಾಯಾಂಗಕ್ಕೆ ವಿಮರ್ಶೆಗಿದೆ (National Judicial Review). ರಾಷ್ಟ್ರ ವಿಧಾನಕ್ಕೂ ಸಂಸ್ಥಾನಗಳ ಶಾಸಕ ಸಭೆಗಳು ನಿರ್ಣಯಿಸುವ ನಿಬಂಧನೆಗಳಿಗೂ ಅಂತರವುಂಟಾದರೆ, ನ್ಯಾಯಾಂಗವು ರಾಷ್ಟ್ರವಿಧಾನವೇ ಶ್ರೇಷ್ಠವೆಂದು ತಿಳಿದು ಕಾರ್ಯಗಳಲ್ಲಿ ವ್ಯವಹರಿಸುವುದು. ಸಂಯುಕ್ತ ನ್ಯಾಯಾಂಗ ವಿಮರ್ಶೆ (Federal Judicial Review) ಸಂಸ್ಥಾನದ ಕೊರ್ಟುಗಳು ರಾಷ್ಟ್ರವಿಧಾನಕ್ಕೆ

---

*Hamilton*: The Federatist P. 542.

*Willoughby*: Constitutional Law of the United States Vol. II. Ch. 50–55.

ಒಳಪಡುವಂತೆ ಶಾಸಕ ಸಭೆಯ ಕಾರ್ಯಗಳ ಸತ್ಯಾಸತ್ಯೆಯನ್ನು ಪರಿಶೀಲಿಸುವುದು ಸಂಸ್ಥಾನ ನ್ಯಾಯಾಂಗ ವಿಮರ್ಶೆ (State Judicial Review).

## ಅಮೆರಿಕಾರಾಷ್ಟ್ರದಲ್ಲಿ ನ್ಯಾಯವಿಮರ್ಶೆಯ ರೀತಿ
## Judicial Review in U S A

ಸಂಯುಕ್ತರಾಷ್ಟ್ರದಲ್ಲಿ ಆಚರಣೆಯಲ್ಲಿರುವ ನ್ಯಾಯವಿಮರ್ಶೆಯ ಸಿದ್ಧಾಂತವು ಕೆಲವು ಮೂಲತತ್ವಗಳಿಂದ ಕೂಡಿದೆ. ರಾಷ್ಟ್ರವಿಧಾನವು ಪರಮಾಧಿಕಾರವುಳ್ಳದ್ದು. ಅದರ ಪರಿಶೀಲನೆ ಮತ್ತು ಸಮರ್ಥನೆಯನ್ನು ನ್ಯಾಯಾಂಗವು ವಿಶದಪಡಿಸತಕ್ಕದ್ದು. ನ್ಯಾಯಾಂಗ ವಿಮರ್ಶೆಯೇ ವಿವಾದದ ಅಂತ್ಯ. ನ್ಯಾಯಾಧೀಶರು ಪ್ರಜಾಭಿಮತದಿಂದ ಪ್ರೇರಿತನಾದ ರಾಷ್ಟ್ರವಿಧಾನದ ಪಾಲ್ಗೊಳವಿ, ಅವರ ಕೂಗಿನಿಂದಲೇ ವಿಧಿಯು ಪರಿವರ್ತನೆಯನ್ನು ಹೊಂದುವುದಿಲ್ಲ. ನ್ಯಾಯಾಂಗ ವಿಮರ್ಶೆಯಿಂದ ರಾಷ್ಟ್ರವಿಧಾನ ತತ್ವಗಳು ರಕ್ಷಿಸಲ್ಪಡುವುವು. ನ್ಯಾಯಾಂಗವು ಮಾಡಿದ ಭಾಷಾಂತರವೇ ಪ್ರಮಾಣ ಸಿದ್ಧವಾದ ರಾಷ್ಟ್ರವಿಧಾನ. ನ್ಯಾಯಾಂಗ ವಿಮರ್ಶೆಯ ಅಧಿಕಾರದ ವಿಷಯದಲ್ಲಿ ಹಿಂದೆ ಭಿನ್ನಾಭಿಪ್ರಾಯಗಳಿತ್ತು. ಶಾಸಕ ಸಭೆಯು ಹೆಚ್ಚು ಅಧಿಕಾರವನ್ನು ಪಡೆದಿದ್ದದ್ದು ಇತ್ತೀಚೆಗೆ ಪ್ರಜಾಭಿಮತಕ್ಕೆ ತಲೆಬಾಗಬೇಕಾಗಿದೆ. ಪ್ರಜಾಭಿಮತವನ್ನು ನಿರ್ದಿಷ್ಟವಾಗಿ ಸೂಚಿಸುವ ಸಾಧನವು ನ್ಯಾಯಾಂಗದ ವಿಮರ್ಶೆ ಮತ್ತು ಪ್ರಜಾವರ್ಗದವರು ನಿರ್ಮಾಣಿಸಿರುವ ರಫರೆಂಡಂ ಮತ್ತು ಇನಿಷಿಯೇಟಿವ್. ಶಾಸನ ರಚನೆಯ ಕ್ರಮ ಮತ್ತು ಅದರೊಳಗಿನ ವಸ್ತು ನೀತಿಯುತವಾಗಿದೆಯೋ ಇಲ್ಲವೋ ಎಂಬುದನ್ನು ವಿಮರ್ಶಿಸುವುದು ಕೋರ್ಟುಗಳ ಮುಖ್ಯ ಕೆಲಸವಾಗಿದೆ. ನ್ಯಾಯವಿಮರ್ಶೆಯು ಫಾರ್ಮಲ್ ಮತ್ತು ಮೆಟೀರಿಯಲ್ ಎಂಬುದಾಗಿ ಎರಡು ವಿಧವಾಗಿದೆ. ( Formal Review ಮತ್ತು Material Review ). ಶಾಸನ ರಚನೆಯ ಕ್ರಮದ ವಿಮರ್ಶೆಯನ್ನು ಒತ್ತಿಟ್ಟು ಶಾಸನಗಳಲ್ಲಿ ಅಡಗಿರುವ ವಸ್ತು ಮತ್ತು ತತ್ವವು

"Judicial Review Conserves the Constitution, and the Judicial Version of it is the authentic Constitution"

ನ್ಯಾಯಬದ್ಧವಾಗಿವೇ ಎಂದು ವಿಮರ್ಶಿಸುವುದು ಲೋಕಮಾನ್ಯವಾಗಿದೆ. ಶಾಸನ ಸರ್ವಾಧಿಕಾರಕ್ಕೆ ಬದಲಾಗಿ ಸಾರ್ವಜನಿಕ ಸರ್ವಾಧಿಕಾರ ಬೆಳೆದು ಸಾರ್ವಜನಿಕ ಪರಮಾಧಿಕಾರದಿಂದಲೇ ಶಾಸನಗಳು ಉತ್ಪನ್ನವಾಗುವ ಅವಕಾಶ ಒದಗಿದೆ. ರಾಷ್ಟ್ರ ವಿಧಾನದ ಬೆಳವಣಿಗೆಗೂ ಮತ್ತು ಪ್ರಜಾ ಸ್ವಾತಂತ್ರ್ಯದ ಅಭಿವೃದ್ಧಿಗೂ ನ್ಯಾಯಾಂಗ ವಿಮರ್ಶೆಯು ಸಾಧಕ ವಾಗಿದೆ. ಆದರೆ ವಿಧಾನದ ಮತ್ತು ಸ್ವಾತಂತ್ರ್ಯದ ಪ್ರಗತಿಯು ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ನಡತೆ, ಜೀವನದ ತತ್ವ ಮತ್ತು ಅಧಿಕಾರದ ಆಧಾರದ ಮೇಲೆ ನಿಂತಿದೆ. ಜಸ್ಟಿಸ್ ಹೋಮ್ಸ್ ಮತ್ತು ಮಾರ್ಷಲ್‌ರವರು ಸಮಾಜ ಪ್ರಗತಿಗೆ ಸಾಧಕವಾಗುವ ರೀತಿಯಲ್ಲಿ ಕಾನೂನುಗಳನ್ನು ವಿಮರ್ಶಿಸಿದ್ದಾರೆ; ಇತರ ನ್ಯಾಯಾಧೀಶರು ಸಮಾಜ ದಲ್ಲಿ ಉತ್ಪನ್ನವಾಗುವ ನೂತನ ಕಲ್ಪನೆಗಳನ್ನಾಗಲೀ, ಸಂಸ್ಥೆಗಳ ಪ್ರಭಾವ ವನ್ನಾಗಿ ಅರಿಯದೆ ಸಾಂಪ್ರದಾಯಕವಾಗಿ ಕಾನೂನುಗಳನ್ನು ವಿಮರ್ಶಿ ಸಿದ್ದಾರೆ. ಪ್ರೆಸಿಡೆಂಟ್ ರೂಸ್ವೆಲ್ಟ್ 1937 ರಲ್ಲಿ ಶ್ರೇಷ್ಠ ನ್ಯಾಯಾಸ್ಥಾನ ವನ್ನು ಪುನರ್ರಚಿಸಿ ಅದರಲ್ಲಿ ತನ್ನ ಅಭಿಮತಕ್ಕನುಗುಣವಾಗಿ ನಡೆಸಬಲ್ಲ ನ್ಯಾಯಾಧೀಶರನ್ನು ನೇಮಿಸಿ ನ್ಯಾಯಾಂಗದ ಆತ್ಮಗೌರವಕ್ಕೆ ಕುಂದಕ ಬರುವ ರೀತಿಯಲ್ಲಿ ವರ್ತಿಸಿದನು. ಆದರೂ ಪ್ರಜಾಬೆಂಬಲ ವಿಶೇಷವಾಗಿರು ವುದರಿಂದ ಸಂಯುಕ್ತ ರಾಷ್ಟ್ರದ ಶ್ರೇಷ್ಠ ನ್ಯಾಯಸ್ಥಾನವು ತನ್ನ ಹಕ್ಕುಗಳನ್ನು ರಕ್ಷಿಸಿಕೊಂಡು ಕಾಂಗ್ರೆಸ್ ಸಭೆಗಳ ಶಾಸನಗಳನ್ನು ವಿಮರ್ಶಿಸುವುದ ರಲ್ಲಿಯೂ, ರಾಷ್ಟ್ರಾಧ್ಯಕ್ಷನ ಅಧಿಕಾರವನ್ನು ನಿಯಂತ್ರಣದಲ್ಲಿಡಲೂ ನಿರತ ವಾಗಿದೆ. ಸಂಯುಕ್ತ ರಾಷ್ಟ್ರದಲ್ಲಿ ಪ್ರಗತಿಪರವಾದ ಅಭಿಪ್ರಾಯಗಳನ್ನು ಶಾಸಕ ಸಭೆಗಳು ಮತ್ತು ಕಾರ್ಯಾಂಗವು ಆಚರಣೆಗೆ ಸುಲಭವಾಗಿ ತರಲಾ ರವು. ಶಾಸಕ ಸಭೆಯು ಸಂದರ್ಭಕ್ಕನುಸಾರ ಕಾನೂನುಗಳನ್ನು ಜಾರಿಗೆ ತರ ಲಾಗದು; ಆದರೆ ರಾಷ್ಟ್ರವಿಧಾನ ಶೋಧನೆಯ ಸನ್ನಿವೇಶಗಳಲ್ಲಿ (Revision of the Constitution) ಮಾತ್ರ ಪರಿವರ್ತನೆಗಳು ಸಾಧ್ಯ. ಆದುದರಿಂದ ನ್ಯಾಯಾಧೀಶರು ರಾಷ್ಟ್ರವನ್ನು ವಿಶದವಾಗಿ ವಿವರಿಸಲು ಅವಕಾಶವಿದೆ.

ಎರಡು ಶಾಸಕ ಸಭೆಗಿರುವ ಅಧಿಕಾರಗಳನ್ನೂ ಕಾಮರ್ಸ್ ಕ್ಲಾಸ್ ಮತ್ತು 'ಡ್ಯು ಪ್ರೊಸೆಸ್ ಕ್ಲಾಸ್' (Commerce Clause and Due Process Clause) ನ್ನೂ ವಿಸ್ತರಿಸುವ ಅಧಿಕಾರ ನ್ಯಾಯಾಂಗಕ್ಕೆ ಸೇರಿದೆ. ಡ್ಯು ಪ್ರೊಸೆಸ್ ಆಚರಣೆಯಿಂದ ರಾಜಕೀಯಕ್ಕೆ ಸಂಬಂಧವಾದ ಪ್ರಶ್ನೆಗಳನ್ನೂ ಮೂಲಾಧಾರವಾದ ರಾಜಕೀಯ ನಿರ್ಣಯಗಳನ್ನೂ ನ್ಯಾಯಾಧೀಶರೇ ನಿಯಮಿಸುತ್ತಾರೆ. ಸಂಯುಕ್ತ ಸರ್ಕಾರವನ್ನು ನ್ಯಾಯಾಧೀಶರ ಸರ್ಕಾರ (Government by the Judges ಮತ್ತು Aristocracy of the Robe; Judicial Oligarchy) ಸಂಯುಕ್ತ ರಾಷ್ಟ್ರವನ್ನು ನ್ಯಾಯನೀತಜ್ಞರ ಆವಾಸಸ್ಥಾನ (land of the Jurists) ಎಂದು ಕರೆಯುವರು.

## ಇಂಗ್ಲೆಂಡಿನಲ್ಲಿ ನ್ಯಾಯಾಂಗ ಪರಿಶೀಲನೆ

ಐರೋಪ್ಯ ರಾಷ್ಟ್ರಗಳಲ್ಲಿ ಕಾನೂನಿನ ಸತ್ಯಾಸತ್ಯಗಳನ್ನು ವಿಮರ್ಶಿಸುವ ಅಧಿಕಾರವನ್ನು ನ್ಯಾಯಾಂಗವು ಹೊಂದಿಲ್ಲ. ಮೊದಲನೆಯ ಮಹಾಯುದ್ಧದ ಪೂರ್ವಭಾವಿಯಾಗಿ ಜರ್ಮನಿಯ ರಾಷ್ಟ್ರದಲ್ಲಿ ಕೋರ್ಟುಗಳು, ಶಾಸಕ ಸಭೆಯು ರಚಿಸಿದ ಶಾಸನಗಳ ಸತ್ಯಾಸತ್ಯಗಳನ್ನು ಪರಿಶೀಲಿಸುವ ಹಕ್ಕನ್ನು ನ್ಯಾಯಾಂಗವು ಪಡೆದಿತ್ತು. ಆದರ ಇಂಪೀರಿಯಲ್ ವಿಧಿಗಳನ್ನು ಪರಿಶೀಲಿಸುವ ಅಧಿಕಾರವಿರಲಿಲ್ಲ. ಯುದ್ಧಾನಂತರ ಸ್ಥಾಪಿತವಾಗಿರುವ ಶ್ರೇಷ್ಠ ನ್ಯಾಯಾಂಗಸ್ಥಾನಕ್ಕೆ (Reich Gecheist) ರಾಷ್ಟ್ರ ಶಾಸನಗಳ ವಿಮರ್ಶಾಧಿಕಾರ ಸೇರುವುದೇ ಎಂಬ ಪ್ರಶ್ನೆಗಳಿಗೆ ನಿರ್ದಿಷ್ಟವಾದ ಅಭಿಪ್ರಾಯವಿಲ್ಲ. ಸಂಯುಕ್ತ ಕಾನೂನುಗಳನ್ನು ರಾಷ್ಟ್ರ ವಿರುದ್ಧವೆಂದು ಘೋಷಿಸುವಷ್ಟು ಹಕ್ಕು ಮಾತ್ರ ಪಡೆದಿದೆ. ಕಾಂಟನಲ್ ಸಭೆಗಳ ಕಾನೂನುಗಳು ಸಂಯುಕ್ತ ಶಾಸನಗಳಿಗೆ ವಿರುದ್ಧವಾದ ಪಕ್ಷದಲ್ಲಿ ಶ್ರೇಷ್ಠನ್ಯಾಯಸ್ಥಾನವು ಕಾಂಟನಲ್ ಕಾನೂನುಗಳನ್ನು ನಿಷೇಧಿಸಬಹುದು.

*Justice Holmes*. "Judges do and must legislate."

ಆದರೆ ಸಂಯುಕ್ತ ಶಾಸಕ ಸಭೆಯ ಶಾಸನಗಳನ್ನು ವಿಮರ್ಶಿಸುವ ಹಕ್ಕನ್ನು ಪಡೆದಿಲ್ಲ. ರೋಮೇನಿಯ, ನಾರ್ವೆ, ಜೆಕೊಸ್ಲೊವೊಕಿಯಾ ರಾಷ್ಟ್ರಗಳಲ್ಲಿನ ಸುಪ್ರೀಂ ಕೋರ್ಟುಗಳು ಶಾಸನ ಸಭೆಯ ನಿರ್ಣಯಗಳನ್ನು ಪರಿಶೀಲಿಸಬಹುದು.

ಪಾರ್ಲಿಮೆಂಟ್ ಸಭೆಯು ಬ್ರಿಟಿಷ್ ರಾಷ್ಟ್ರದಲ್ಲಿ ಪರಮಾಧಿಕಾರವನ್ನು ಪಡೆದಿರುವುದರಿಂದ ಅದು ಮೂಲಾಧಾರವಾದ ಪ್ರಜಾಹಕ್ಕುಗಳನ್ನು ಉಲ್ಲಂಘಿಸಿದರೂ ನ್ಯಾಯಾಂಗವು ಆ ಕೃತ್ಯವನ್ನು ವಿಮರ್ಶಿಸುವ ಹಕ್ಕನ್ನು ಪಡೆದಿಲ್ಲ. ಪ್ರಿವಿಕೌನ್ಸಿಲ್‌ನ ಜುಡಿಷಿಯಲ್ ಸಮಿತಿ (Judicial Committee of the Privy Council) ಯು ಮಾತ್ರ ಉಪನಿವೇಶ ಶಾಸಕ ಸಭೆಗಳ ನಿಬಂಧನೆಗಳನ್ನು (Dominion Courts) ವಿಧಾನ ವಿರುದ್ಧವೆಂದು ಘೋಷಿಸುವ ಅಧಿಕಾರವನ್ನು ಹೊಂದಿದೆ. ಬ್ರಿಟಿಷ್ ನ್ಯಾಯಸ್ಥಾನಗಳು ಕಾರ್ಯಾಂಗ ಶಾಸನಗಳನ್ನು ವಿಧಾನಕ್ಕೂ ಅಂತರರಾಷ್ಟ್ರೀಯ ತತ್ವಕ್ಕೂ ವಿರುದ್ಧವೆಂದು ಮಾತ್ರ ಸೂಚಿಸಬಹುದು.

ನ್ಯಾಯಾಂಗ ವಿಮರ್ಶೆ ಮತ್ತು ನಿಷೇದಾಧಿಕಾರ ಸಿದ್ಧಾಂತವನ್ನು ಉಪನಿವೇಶಿಕ ಸ್ವರಾಜ್ಯಗಳು ಅನುಮೋದಿಸಿವೆ. ಕೆನೆಡಾ ರಾಷ್ಟ್ರದಲ್ಲಿ ಪ್ರಾಂತೀಯ ಮತ್ತು ರಾಷ್ಟ್ರೀಯ ಶಾಸನಗಳು ಮತ್ತು ಪ್ರಾಂತ ಶಾಸಕ ಸಭೆಯ ಕಾರ್ಯಗಳು ಮತ್ತು ರಾಷ್ಟ್ರ ಶಾಸಕ ಸಭೆಯ ಕರ್ತವ್ಯಗಳು ವಿರುದ್ಧವಾದಲ್ಲಿ ಪ್ರಾಂತೀಯ ಕಾರ್ಯಗಳನ್ನು ವಿರುದ್ಧವೆಂದು ಘೋಷಿಸುವ ಅಧಿಕಾರವು ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಸೇರಿದೆ. ವಿರುದ್ಧವಾದುದನ್ನು ಲಂಡನ್ನಿನಲ್ಲಿರುವ ಜುಡಿಷಿಯಲ್ ಸಮಿತಿಯು ತಿರಸ್ಕರಿಸಿ ಅಧಿಕಾರ ಪ್ರಯೋಗದಿಂದ ಪ್ರತಿಬಂಧಿಸುತ್ತದೆ. ಆಸ್ಟ್ರೇಲಿಯಾ ಕಾಮನ್ವೆಲ್ತ್ ಸರ್ಕಾರದಲ್ಲಿ ಸ್ಥಾಪಿತವಾಗಿರುವ ಶ್ರೇಷ್ಠ ನ್ಯಾಯಸ್ಥಾನವು, ಸಂಯುಕ್ತ ರಾಷ್ಟ್ರದ ನ್ಯಾಯಸ್ಥಾನದಷ್ಟು ಪ್ರಬಲವಾಗಿದ್ದರೂ, ಸಂಸ್ಥಾನ ಶಾಸಕ ಸಭೆಗಳ ಮತ್ತು ರಾಷ್ಟ್ರ ಆಡಳಿತಾಂಗಗಳ ತೀರ್ಪು ಮತ್ತು ಕಾನೂನುಗಳನ್ನು ವಿಮರ್ಶಿಸುವ ಅಧಿಕಾರ ಪಡೆದಿದೆ. ಆದರೆ ಕಾಮನ್ವೆಲ್ತ್ ಆಕ್ಟ್ (Commonwealth Act) ನಲ್ಲಿ

ಡ್ಯುಪ್ರೋಸೆಸ್ ಆಫ್ ಲಾ ವಾಕ್ಯವಿಲ್ಲದಿರುವುದರಿಂದಲೂ, ಸಂಸ್ಥಾನ ಸರ್ಕಾರಗಳ ಕಾರ್ಯ ಸ್ವಾತಂತ್ರ್ಯವು ವಿಶೇಷವಾಗಿರುವುದರಿಂದಲೂ ಮೊಕದ್ದಮ್ಮೆಗಳು ಬಹಳ ಕಡಿಮೆಯಾಗಿವೆ.

## ಫ್ರಾನ್ಸ್ ರಾಷ್ಟ್ರದಲ್ಲಿ ನ್ಯಾಯಾಂಗ ಪರಿಶೀಲನೆ

ಫ್ರೆಂಚ್ ರಾಷ್ಟ್ರದಲ್ಲಿ ಪಾರ್ಲಿಮೆಂಟಿಗೆ ಪರಮಾಧಿಕಾರವಿದೆ. ಅದರಿಂದ ನ್ಯಾಯಾಂಗಕ್ಕೆ ಶಾಸಕ ಸಭೆಗಳ ಶಾಸನಾಧಿಕಾರವನ್ನು ಮತ್ತು ನಿಶ್ಚಯ ಗಳನ್ನು ವಿಮರ್ಶಿಸುವ ಹಕ್ಕಿಲ್ಲ. ಡ್ಯುಪ್ರೋಸಸ್ ವಾಕ್ಯವಾಗಲೀ, ಶಾಸಕ ಸಭೆಗಳ ಅಧಿಕಾರವನ್ನು ನಿಷೇಧಿಸುವ ವಾಕ್ಯಗಳಾಗಲೀ ಫ್ರೆಂಚ್ ರಾಷ್ಟ್ರ ವಿಧಾನದಲ್ಲಿ ಸೂಚಿಸಿಲ್ಲ. ಆದುದರಿಂದ ಯಾವುದು ವಿಧಾನ ವಿರುದ್ಧವೆಂದು ತಿಳಿಯಲು ಅಸಾಧ್ಯವಾದುದರಿಂದ ನ್ಯಾಯಸ್ಥಾನಗಳು ಶಾಸಕ ಸಭೆಯ ಕಾನೂನುಗಳನ್ನು ವಿಮರ್ಶಿಸಲಾಗದು. ವಿಮರ್ಶಾಧಿಕಾರ ಕೋರ್ಟುಗಳು ಸ್ವತಂತ್ರವಾದರೆ ಪ್ರಬಲವಾಗುವುದೆಂದೂ, ಶಾಸಕಸಭೆಗಳ ಮೂಲಕ ರಚಿ ಸುವ ಸಾಮಾಜಿಕ ಸುಧಾರಣೆಗಳಿಗೆ ಪ್ರತಿಬಂಧಕವಾಗುವುದೆಂದೂ, 1789 ಮತ್ತು 1790ರಲ್ಲಿ ನಿರ್ಮಾಣವಾದ ಮಹಾಕ್ರಾಂತಿ ಸರ್ಕಾರವು ಶಾಸಕಾಂಗ ಮತ್ತು ನ್ಯಾಯಾಂಗಗಳ ವಿಚ್ಛೇದನವು ಪ್ರಜಾ ಸ್ವಾತಂತ್ರ್ಯಕ್ಕೆ ಮುಖ್ಯ ಸಾಧನವೆಂದು ಘೋಷಿಸಿದ ತತ್ವವು ಸಮಂಜಸವಾದುದೆಂದೂ ಫ್ರೆಂಚ್ ಪ್ರಜೆಗಳ ದೃಢವಾದ ನಂಬಿಕೆ. ಇತ್ತೀಚೆಗೆ ಸಂಯುಕ್ತ ರಾಷ್ಟ್ರದಲ್ಲಿ ಆಚರಣೆಯಲ್ಲಿರುವ ನ್ಯಾಯಾಂಗ ವಿಮರ್ಶೆ ಸಿದ್ಧಾಂತವನ್ನು ಫ್ರೆಂಚ್ ರಾಷ್ಟ್ರದಲ್ಲಿಯೂ ಅನುಕರಣ ಮಾಡಬೇಕೆಂದು ಪ್ರಸಿದ್ಧ ರಾಜನೀತಜ್ಞರಾದ ಹೇರಿಯೋ, ಥಾಲೆರ್, ಬಾರ್ತಲೆಮಿ, ಮತ್ತು ಡಿಗ್ವಿ ಮುಂತಾದವರು ಪ್ರತಿಪಾದಿಸುತ್ತಿದ್ದಾರೆ. 'ಕೌನ್ಸಿಲ್ ಆಫ್ ಸ್ಟೇಟ್' ಮತ್ತು 'ಕೋರ್ಟು ಆಫ್ ಕಾಸೇಷನ್' ಶ್ರೇಷ್ಠ ನ್ಯಾಯಸ್ಥಾನಗಳು ಶಾಸಕ ಸಭೆಗಳ ತೀರ್ಮಾನ

---

*Dicey:* "Possible parliamentary invasions of the Constitution are a less evil than the participation of the judge in political conflicts." Law of the Constitution.

ಗಳನ್ನು ವಿಮರ್ಶಿಸಿ ವಿರುದ್ಧವಾದುದನ್ನು ವಿಧಾನ ವಿರುದ್ಧವೆಂದು ಘೋಷಿಸುವ ಅಧಿಕಾರ ಪಡೆಯಬೇಕೆಂದು ಬಯಸುತ್ತಿವೆ. ಕೌನ್ಸಿಲ್ ಆಫ್ ಸ್ಟೇಟ್ ಸಂಸ್ಥೆಯು ಕಾರ್ಯಾಂಗದ ಅನೀತಿಯುತ ವಿಶೇಷಾಜ್ಞೆಗಳನ್ನು (Illegal Ordinances) ನಿಷೇಧಿಸುವ ಅಧಿಕಾರವನ್ನು ಪಡೆದಿದೆ; ರಾಷ್ಟ್ರಾಧ್ಯಕ್ಷನ ಆರ್ಡಿನೆನ್ಸ್‌ಗಳನ್ನು ಅವನಿಗೆ ರಾಷ್ಟ್ರ ವಿಧಾನವು ದಯಪಾಲಿಸಿರುವ ನಿರ್ದಿಷ್ಟವಾದ ಅಧಿಕಾರವನ್ನು ಅತಿಕ್ರಮಿಸಿವೆಯೆಂದು ಪ್ರತಿಬಂಧಿಸಬಹುದು; ಸಾಮಾನ್ಯ ನ್ಯಾಯಾಸ್ಥಾನಗಳು ಆಡಳಿತಾಜ್ಞೆಗಳು ಅನೀತಿಯುತವೆಂದು ನಿಶ್ಚಯಿಸಿದರೆ, ಆಗ ಜುಲ್ಮಾನೆ (fines) ಮುಂತಾದುವುಗಳನ್ನು ಅಧಿಕಾರಿಗಳು ನಿರೀಕ್ಷಿಸಿದಂತೆ ವಿಧಿಸದೇ ಇರಬಹುದು. ಫ್ರೆಂಚ್ ರಾಷ್ಟ್ರದ ಬಹುಭಾಗ ಸುಧಾರಣ ಶಾಸನಗಳು ರಾಷ್ಟ್ರಾಧ್ಯಕ್ಷನ ಆರ್ಡಿನೆನ್ಸ್‌ಗಳಿಂದ ಪ್ರಗತಿ ಹೊಂದಿರುವುದರಿಂದ ಆ ಶಾಸನಗಳನ್ನು ಶ್ರೇಷ್ಠ ನ್ಯಾಯಸ್ಥಾನವು ವಿಮರ್ಶಿಸುವುದರಿಂದ ಕ್ರಮವಿಕಾಸದಲ್ಲಿ ರಾಷ್ಟ್ರನ್ಯಾಯಸ್ಥಾನಗಳು ಪ್ರಬಲವಾಗಬಹುದೆಂದು ಭವಿಷ್ಯವಿದೆ.

ಸಂಯುಕ್ತ ರಾಜ್ಯಗಳಲ್ಲಿ ನ್ಯಾಯಾಂಗ ವಿಮರ್ಶೆ ರಾಷ್ಟ್ರದ ಆಧಾರಭೂತವಾದ ಸಿದ್ಧಾಂತ. ರಾಷ್ಟ್ರ ಮತ್ತು ಅಂಗಗಳು ಮತ್ತು ಕಾರ್ಯವಿಭಜನೆಗಳು ಸ್ಥಾಪಿತವಾಗಿರುವ ರಾಷ್ಟ್ರಗಳಲ್ಲಿ ಘರ್ಷಣೆಗಳನ್ನೂ ಮತ್ತು ಪ್ರತ್ಯೇಕವಾದ ಸಂಸ್ಥಾನಗಳ ಪ್ರಶ್ನೆಗಳನ್ನೂ ಪರಿಶೀಲಿಸಲು ಪಂಚಾಯತ ಸಮಿತಿಯು ಅತ್ಯಾವಶ್ಯಕ. ಯಾವ ರಾಷ್ಟ್ರಗಳಲ್ಲಿ ಅಧಿಕಾರ ದಾನ ಮತ್ತು ನಿಷೇದಗಳು ಪತ್ರಲಿಖಿತವಾಗಿರುವುವೋ, ಎಲ್ಲಿ ವ್ಯಕ್ತಿ ಮತ್ತು ಸಮಾಜ ಸ್ವಾತಂತ್ರ್ಯವು ಕಾನೂನುಗಳ ಮೂಲಕ ಬಿಲ್ ಆಫ್ ರೈಟ್ಸ್‌ಗಳಲ್ಲಿ ವಿಸ್ತರಿಸಲ್ಪಟ್ಟಿವೆಯೋ ಅಲ್ಲಿ ನ್ಯಾಯಾಂಗ ವಿವರ್ಶೆಯು ಅತ್ಯಾವಶ್ಯಕ. ವ್ಯಕ್ತಿಯ ಹಕ್ಕುಗಳು ನಿರ್ದಿಷ್ಟವಾಗಿಲ್ಲದಿದ್ದಪಕ್ಷದಲ್ಲಿ, ರಾಷ್ಟ್ರದಲ್ಲಿ ಸರ್ಕಾರ ಮತ್ತು ವ್ಯಕ್ತಿಯ ಪರಸ್ಪರ ಸಂಬಂಧಗಳನ್ನು ವಿವರಿಸುವ ವಿಧಾನವಿಲ್ಲದಿದ್ದಲ್ಲಿ ಶಾಸಕ ಸಭೆಯು ಪರಮಾಧಿಕಾರವನ್ನು ಹೊಂದಿದ್ದರೆ, ನ್ಯಾಯಾಂಗ ವಿಮರ್ಶೆಯಿಂದ ಶಾಸಕಾಂಗದ ಅಧಿಕಾರವನ್ನು ನಿಯಂತ್ರಿಸಬಹುದು.

ವಿಧಾನವಿರುದ್ಧವಾದ ಕಾನೂನುಗಳನ್ನು ನಿಷೇಧಿಸುವ ಅಧಿಕಾರವು ನ್ಯಾಯಾಂಗಕ್ಕೆ ಸೇರದಿದ್ದಲ್ಲಿ ಸರ್ಕಾರವು ಅನೀತಿಯುತವಾಗುವುದು ಸಹಜವೆಂದು ಡಿಗ್ಗಿಯ ಅಭಿಮತ.

ನ್ಯಾಯಾಂಗ ವಿಮರ್ಶೆಯ ಅಧಿಕಾರದಿಂದ ನ್ಯಾಯಾಧೀಶರು ಪ್ರಬಲವಾಗಿ ತ್ರಿವಿಧಾಂಗ ತತ್ವಕ್ಕೆ ಅಡಚನೆ ಮತ್ತು ಕುಂದಕವನ್ನು ತರಬಹುದು. ನ್ಯಾಯಾಧೀಶರನ್ನು ಪ್ರಜೆಗಳು ಚುನಾಯಿಸುವುದಿಲ್ಲ. ಅವರಿಗೆ ಜವಾಬ್ದಾರರೂ ಅಲ್ಲ; ಯಾವ ವಿಧವಾದ ನಿಯಂತ್ರಣಕ್ಕೂ ಒಳಗಾಗದ ನ್ಯಾಯಾಧೀಶರ ತೀರ್ಮಾನಗಳು ರಾಷ್ಟ್ರಘಾತಕವಾಗಬಹುದು, ಮತ್ತು ನ್ಯಾಯಾಧೀಶರು ಒಂದು ವಿಧವಾದ ಜುಡಿಷಿಯಲ್ ಆಲಿಗಾರ್ಕಿ (Judicial Oligarchy) ಯನ್ನು ಸಿದ್ಧಪಡಿಸಬಹುದೆಂಬ ಭೀತಿಯು ಅಂಕುರಿಸುವುದು. ಸಂಯುಕ್ತ ರಾಷ್ಟ್ರದಲ್ಲಿ ಶ್ರೇಷ್ಠನ್ಯಾಯಸ್ಥಾನವು ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳಿಗೆ ವಿರೋಧವಾಗಿ ವರ್ತಿಸುತ್ತದೆಯೆಂದು ಭಾವನೆಯು ಸಂಸ್ಥಾನಗಳಲ್ಲಿ ಬಲವಾಗಿದೆ. ಅನೇಕ ರಾಜನೀತಿಜ್ಞರು ಕೋರ್ಟುಗಳಲ್ಲಿ ನಿರ್ಧರಿಸಲ್ಪಟ್ಟ ಶಾಸನಗಳಿಗೆ ಬಹುಮತ ಬೆಂಬಲವಿಲ್ಲದಿದ್ದ ಪಕ್ಷದಲ್ಲಿ (Divided decision) ಅಂತಹ ನಿಶ್ಚಯಗಳನ್ನು ಪ್ರಜೆಗಳ ನೇರವಾದ ತೀರ್ಮಾನಕ್ಕೆ ತಂದು (Popular Referendum) ಪ್ರಜೆಗಳ ಅಭಿಮತವನ್ನು ತಿಳಿದು ಕೋರ್ಟಿನ ತೀರ್ಪುಗಳನ್ನು ರದ್ದುಮಾಡಬೇಕೆಂದು ಚಳುವಳಿಯನ್ನು ಹೂಡಿದ್ದಾರೆ.

## ಕೋರ್ಟುಗಳ ಶಾಸನಾಧಿಕಾರ

ಕೋರ್ಟುಗಳು ಶಾಸಕಾಂಗದ ಕಾನೂನುಗಳನ್ನು ವ್ಯಾಖ್ಯಾನಿಸುವಾಗ ಹೊಸಹೊಸ ಶಾಸನಗಳನ್ನು ಮತ್ತು ನಿಯಮಗಳನ್ನು ರಚಿಸುತ್ತವೆ (Judge Made Law ಅಥವ Jurisprudence). ಕಾನೂನುಗಳು ಆಚರಣೆಯಲ್ಲಿಲ್ಲದ ಪಕ್ಷದಲ್ಲಿ ಕಾಮನ್ ಲಾ ಎಂದರೇನು ಎಂಬುದನ್ನು ನಿರ್ಧರಿಸುತ್ತವೆ. ಶಾಸಕ ಸಭೆಯ ಅನರ್ಹತೆಯಿಂದ ಕಾನೂನು

ಅಪೂರ್ಣವಾಗಿ ಬಾಷಾಲೋಪಗಳಿಂದ ಕೂಡಿರುವ ಸಂಭವವಿರುವುದರಿಂದ, ನ್ಯಾಯಸ್ಥಾನಗಳು ಶಾಸಕಾಂಗದ ಮನೋಗತವನ್ನು ತಿಳಿದು ಕಾನೂನು ಗಳನ್ನು ವಿಶದಪಡಿಸಬೇಕಾಗುವುದು. ಅನೇಕಾವಾರ್ತಿ ಕಾನೂನುಗಳು ಅರ್ಥಶೂನ್ಯವಾಗಿ ಕಂಡುಬಂದಾಗ ಶಾಸಕ ಸಭೆಯ ಸದಸ್ಯರ ಇಂಗಿತ ವನ್ನು ಊಹಿಸಿ ಕಾನೂನುಗಳನ್ನು ಅರ್ಥಗರ್ಭಿತವಾಗಿ ಮಾಡಬೇಕಾಗು ವುದು. ಈ ಕ್ರಮುವನ್ನು ಮತ್ತು ಶಾಸನರಚನೆಯನ್ನು ( To fill up the Casus Omisus ) ಎಂದು ಕರೆಯುವರು. ಇಂಗ್ಲೆಂಡಿನಲ್ಲಿ ನ್ಯಾಯಾಂಗ ಶಾಸನಗಳು ಬಹುಮಟ್ಟಿಗೆ ಈ ವಿಧಾನದಿಂದ ನಿರ್ಮಿಸಲ್ಪಟ್ಟವು. ಒಪ್ಪಂದ ಮತ್ತು ಕರಾರುಗಳ ಶಾಸನ, ಧರ್ಮನ್ಯಾಯ ಸಿದ್ಧಾಂತಗಳಾಗಿವೆ. ದಂಡ ನಾರ್ಹವಾದ ಅನೀತಿವರ್ತನೆಗೆ ಸಂಬಂಧಪಟ್ಟ ಶಾಸನಗಳು, ಅಂತರ ರಾಷ್ಟ್ರೀಯ ವ್ಯವಹಾರಗಳಿಗೆ ಅನ್ವಯಿಸುವ ಶಾಸನಗಳು— ಇವೆಲ್ಲವೂ ನ್ಯಾಯಾಂಗವು ನಿರ್ಮಿಸಿರುವ ಶಾಸನಗಳು; ಪಾರ್ಲಿಮೆಂಟ್ ರಚಿಸಿದವಲ್ಲ; ಕಾನೂನು ಧಪ್ತರಗಳಲ್ಲಿಲ್ಲ; ನ್ಯಾಯಾಧೀಶರ ಸ್ವಯಂಪ್ರೇರಣೆಯಿಂದ ವಿವಾದ ವಿಷಯುಗಳಾಧಾರದ ಮೇಲೆ ರಚಿಸಲ್ಪಟ್ಟು, ಕೋರ್ಟುಗಳ ರಿಪೋರ್ಟ್‌ಗಳಲ್ಲಿ ವರದಿಯಾಗಿವೆ.

## ನ್ಯಾಯಾಂಗ ನಿರ್ಧಾರಗಳು (Precedents)

ಕೋರ್ಟುಗಳ ನಿರ್ಧಾರಕ್ಕೆ ಪ್ರಿಸಿಡೆಂಟ್ಸ್ ಎಂದು ಹೆಸರು. ಬ್ರಿಟಿಷ್ ರಾಜ್ಯದಲ್ಲಿಯೂ, ಸಂಯುಕ್ತ ರಾಷ್ಟ್ರಗಳಲ್ಲಿಯೂ, ಡೊಮಿನಿಯನ್ ರಾಷ್ಟ್ರ ಗಳಲ್ಲಿಯೂ ಪ್ರಿಸಿಡೆಂಟ್‌ಗಳು ನಿಯಮಗಳನ್ನು ರುಜುವಾತುಮಾಡುವು ದಲ್ಲದೆ, ನಿಯಮಗಳ ನಿರ್ಮಾಣದ ಮೂಲಾಧಾರ ವಸ್ತುವಾಗುತ್ತವೆ. ಐರೋಪ್ಯ ರಾಷ್ಟ್ರಗಳಲ್ಲಿ ಕೋರ್ಟು ಪ್ರಿಸಿಡೆಂಟ್‌ಗಳ ಕೆಳಗಿನ ನ್ಯಾಯಸ್ಥಾನ ಗಳನ್ನು ನಿರ್ಬಂಧಿಸುವುದಿಲ್ಲ. ಕೋರ್ಟುಗಳ ತೀರ್ಪುಗಳಿಗೆ ಮೂಲಾಧಾರ ವಾದ ತತ್ವಕ್ಕೆ ರೆಷಿಯೋಡೆಸಿಡೆಂಡೀ ಎಂದು ಹೆಸರು. (Ratio Decidendi); ನ್ಯಾಯಾಧೀಶರ ತೀರ್ಪುಗಳ ಮತ್ತು ಇತರ ವಿಷಯುಗಳ ಪರ

ಹೇಳಿದ್ದು ಆಬಿಟರ್ ಡಿಕ್ಟಾ[1] (Obiter Dicta); ನ್ಯಾಯಾಧೀಶನ ಆಬಿಟರ್ ಡಿಕ್ಟಾಗಳು ಶಾಸನ ಬೆಳವಣಿಗೆಗೆ ಸಹಾಯಕವಾಗುವುದಿಲ್ಲ. ಕೋರ್ಟು ತೀರ್ಪುಗಳು ಆಗಮಿಕ ವ್ಯವಹಾರಗಳಿಗೆ ಅನ್ವಯಿಸುವಂತಹ ಶಾಸನಗಳನ್ನು ರಚಿಸಬಹುದು; ಅಥವ ಪ್ರಚಲಿತ ವಿಧಿಸ್ವರೂಪವನ್ನು ವಿವರಿಸಬಹುದು.

ಮೊದಲನೆಯದು, ಆಥಾರಿಟೇಟಿವ್, ಪ್ರಿಸಿಡೆಂಟಾಗಿ (Authoritative Precedent) ಪರಿಣಮಿಸಬಹುದು. ಮೇಲಿನ ಕೋರ್ಟುಗಳ ತೀರ್ಪುಗಳನ್ನು ಕೆಳಗಿನ ಕೋರ್ಟಿನ ನ್ಯಾಯಾಧೀಶರು ಒಪ್ಪದಿದ್ದರೂ ಪ್ರಯೋಗಿಸಬೇಕಾದ್ದು ಅವರ ಕರ್ತವ್ಯ. ಆದರೆ ಪರ್‌ಸುಯೆಸೀವ್ ಪ್ರಿಸಿಡೆಂಟ್ (Persuasive Precedents) ಗಳು ಅಥಾರಿಟೇಟಿವ್ ಪ್ರೆಸಿಡೆಂಟ್ಸ್‌ಗಳ ಹಾಗೆ ನಿರ್ಬಂಧಿಸುವುದಿಲ್ಲ. ನ್ಯಾಯರಚನೆಯು, ನ್ಯಾಯವೆನ್ನುವ ತಿಳುವಳಿಕೆ, ಸಮಾಜದ ತಾತ್ಕಾಲಿತ ಮನೋಗತ ಮತ್ತು ಒಪ್ಪುವ ಧರ್ಮ — ಇವುಗಳನ್ನು ಅನುಸರಿಸಬೇಕೇ ಅಥವಾ ಪೂರ್ವಭಾವಿಯಾಗಿ ಸ್ಥಾಪಿಸಲ್ಪಟ್ಟ ಪ್ರಿಸಿಡೆಂಟ್‌ಗಳ ಆಧಾರದ ಮೇಲೆ ರಚನೆಯಾಗಬೇಕೇ ಎಂಬುದು ಒಂದು ಜಟಿಲ ಪ್ರಶ್ನೆ.

ಬ್ರಿಟಿಷ್ ಸಂಯುಕ್ತ ಮತ್ತು ಡೊಮಿನಿಯನ್ ರಾಷ್ಟ್ರಗಳಲ್ಲಿ ಪ್ರಿಸಿಡೆಂಟ್‌ಗಳು ಒಂದುವೇಳೆ ನ್ಯಾಯಾಧೀಶರ ತಪ್ಪು ತಿಳುವಳಿಕೆಗಳ ಆಧಾರದ ಮೇಲೆ ರಚಿಸಲ್ಪಟ್ಟಿದ್ದರೂ ಅದೇ ಮುಂದಿನ ಪ್ರಿಸಿಡೆಂಟ್‌ಗಳಿಗೆ ಆಧಾರವಾಗಿ ನಿಲ್ಲಬೇಕೆಂಬ ತತ್ವವನ್ನು ಒಪ್ಪಿವೆ. ತತ್ವಕ್ಕೆ ಸ್ಟೇರ್ ಡಿಸಿಸ್ಸಿ (Principle of Stare Decisis) ಎಂದು ಹೆಸರು.

ನ್ಯಾಯಾಂಗವು ಪ್ರಜಾಪ್ರಭುತ್ವರಾಷ್ಟ್ರಗಳಲ್ಲಿ ಮೇಲೆ ತಿಳಿಸಿರುವ ಅನೇಕ ವಿಧವಾದ ಜವಾಬ್ದಾರಿಯುತ ಅಧಿಕಾರಗಳನ್ನು ನಿರ್ವಹಿಸುತ್ತದೆ.

---

*Sir Federick Pollock* First Book of Jurisprudence P. II ch. 6.

*Dicey* Law of the Constitution P. 393.

*Bryce*. Studies in History and Jurisprudence Vol. I. P 197.

ರಾಷ್ಟ್ರಶಾಸನದ ಬೆಳವಣಿಗೆಗೆ ನ್ಯಾಯಾಂಗವು ರಚಿಸುವ ಶಾಸನಗಳು ಪ್ರಧಾನವಾದವು. ಸರ್ಕಾರದ ಬಹುಮುಖವಾದ ಕಾರ್ಯಗಳಿಗೆ ಅರ್ಥವನ್ನೂ ರಾಷ್ಟ್ರವಿಧಾನವನ್ನೂ ಸುಲಭವಾಗಿ ಸುಲಲಿತವಾಗಿ ಜರಿಗಿಸಬಲ್ಲವರು ನ್ಯಾಯಧೀಶರು ಎಂದು ವೈಕೊಂಟ್ ಬ್ರೈಸ್ ಹೇಳಿದ್ದಾನೆ.

## ನ್ಯಾಯಾಂಗ ರಚನೆ

### ಏಕ ನ್ಯಾಯಾಧೀಶನೋ ಅಥವ ಬಹು ನ್ಯಾಯಾಧೀಶರೋ

ನ್ಯಾಯಾಂಗದ ಅಧಿಕಾರವನ್ನು ಒಬ್ಬ ಅಧಿಕಾರಿಯಾಗಲಿ ಅಥವಾ ಶಾಸಕ ಸಭೆಯಂತೆ ಅನೇಕ ಸದಸ್ಯರಾಗಲಿ ನಿರ್ವಹಿಸುವುದಿಲ್ಲ. ಏಣಿಯ ಮೆಟ್ಟಲುಗಳ ಹಾಗೆ ಸಂಸ್ಥೆಗಳು ಇದ್ದರೆ ನ್ಯಾಯಾಧೀಶ ಗೋಪುರದ ತುದಿಯ ಹಾಗೆ ಇರುತ್ತಾನೆ— ಇದು ನ್ಯಾಯಾಂಗದರಚನೆ. ಇಂಗ್ಲೆಂಡಿನಲ್ಲಿ ಒಂದು ನ್ಯಾಯಸ್ಥಾನಕ್ಕೆ ಒಬ್ಬ ನ್ಯಾಯಾಧೀಶ; ಫ್ರಾನ್ಸ್ ಮತ್ತು ಇತರ ಐರೋಪ್ಯರಾಷ್ಟ್ರಗಳಲ್ಲಿ ಬಹುಮಂದಿ ನ್ಯಾಯಾಧೀಶರಿರುವರು. ಕೆಳಗಿನ ದರ್ಜೆ ನ್ಯಾಯಾಸ್ಥಾನಗಳಲ್ಲಿ ಮೂರರಿಂದ ಹದಿನೈದು, ಅಸೈಜ್ಸಿ ಕೋರ್ಟುಗಳಲ್ಲಿ ಮೂರು; ಯಾವ ತೀರ್ಪಿಗೂ ಕಡೆಯಪಕ್ಷ ಮೂರು ನ್ಯಾಯಾಧೀಶರ ಸಮ್ಮತಿಯಿಲ್ಲದಿದ್ದರೆ ನೀತಿಯುತವಾಗುವುದಿಲ್ಲ. ಏಕ[1] ನ್ಯಾಯಾಧೀಶನ ತೀರ್ಪುಗಳು ಅನುಮಾನಾಸ್ಪದವಾದುವು. ನ್ಯಾಯಾಧೀಶರ ಬಹುಮತ ಬೆಂಬಲವಿದ್ದ ತೀರ್ಮಾನಗಳು ಗಮನಾರ್ಹವಾದುವು. ಕಾರ್ಯಾಂಗದ ಸ್ವಚ್ಛಂದ ಪ್ರವರ್ತನೆಗೆ ಬಹುಸಂಖ್ಯಾತ ನ್ಯಾಯಾಧೀಶರನ್ನು ನ್ಯಾಯಸ್ಥಾನಗಳಲ್ಲಿ ಸ್ಥಾಪಿಸುವುದು ಪ್ರತಿಬಂಧಕವೆಂದು ಭಾವನೆ. ಫ್ರಾನ್ಸ್ ಮತ್ತು ಜರ್ಮನಿ ರಾಷ್ಟ್ರದಲ್ಲಿ ಐದು ಸಾವಿರಕ್ಕೆ ಮೇಲ್ಪಟ್ಟು ನ್ಯಾಯಾಧೀಶರಿರುವುದರಿಂದ ಸಂಬಳ ಕಡಿಮೆಯಾದರೂ ರಾಷ್ಟ್ರದ ವ್ಯಯದಲ್ಲಿ ಬಹಳ ಅಂಶ ನ್ಯಾಯಾಂಗದ್ದು.

Garner. The German Judiciary P.S Q. XVII P. 420.
Lowell Government of England II Ch. 60.

ಇತ್ತೀಚೆಗೆ ಬಹುಸಂಖ್ಯಾತ ಪದ್ಧತಿಯನ್ನು ರದ್ದುಮಾಡಿ ಏಕ ನ್ಯಾಯಾಧೀಶ ಪದ್ಧತಿಯನ್ನು ಆಚರಣೆ ತರಬೇಕೆಂಬ ಚಳುವಳಿಯು ಮೂಡಿದೆ.

ಸುಮಾರು ಐದು ಕೋಟಿ ಪ್ರಜೆಗಳಿರುವ ಇಂಗ್ಲೆಂಡಿನಲ್ಲಿ ನ್ಯಾಯಾಧಿಕಾರವನ್ನು ನಿರ್ವಹಿಸುವ ನ್ಯಾಯಾಧೀಶರು ನೂರಕ್ಕೆ ಹೆಚ್ಚಿಲ್ಲ. ಅಲ್ಲದೆ, ವಾದಿ ಮತ್ತು ಪ್ರತಿವಾದಿಗಳ ಕಾರ್ಯಕ್ಕಾಗಿ ನ್ಯಾಯಾಧೀಶರು ಡಿಸ್ಟ್ರಿಕ್ಟ್‌ನಿಂದ ಡಿಸ್ಟ್ರಿಕ್ಟ್‌ಗೆ ಸರ್ಕ್ಯೂಟ್ ಹೋಗುತ್ತಾರೆ. ಐರೋಪ್ಯ ರಾಷ್ಟ್ರಗಳಲ್ಲಿ ನ್ಯಾಯಸ್ಥಾನಗಳು ಶಾಸನಬದ್ಧವಾದವು. ಅವುಗಳು ಸ್ಥಾಪಕವಾಗಿರುವ ಊರುಗಳಿಗೆ ಅಭಿಯೊಕ್ತ ಮತ್ತು ಅಭಿಯೋಕ್ತ್ಯಗಳು ತೆರಳಬೇಕು.

ಸಂಯುಕ್ತ ರಾಷ್ಟ್ರಗಳಲ್ಲಿ ರಾಷ್ಟ್ರಸಂಯುಕ್ತ ನ್ಯಾಯಸ್ಥಾನಗಳು, ಸಂಸ್ಥಾನ ನ್ಯಾಯಸ್ಥಾನಗಳು ಎಂದು ಎರಡು ವಿಧ. ಇಡೀ ಸಂಯುಕ್ತ ರಾಷ್ಟ್ರ ಪ್ರಶ್ನೆಗಳನ್ನು ವಿಮರ್ಶಿಸುವುದಕ್ಕೂ ಮತ್ತು ಸಂಸ್ಥಾನದ ವಾದ ವಿವಾದಗಳನ್ನು ಪರಿಶೀಲಿಸುವುದಕ್ಕೂ ನ್ಯಾಯಾಸ್ಥಾನಗಳು ರಚಿತವಾಗಿವೆ.

ಆದರೆ ಜರ್ಮನಿಯಂಥ ಕೆಲವು ಸಂಯುಕ್ತ ರಾಷ್ಟ್ರಗಳಲ್ಲಿ ಎರಡು ವಿಧ ನ್ಯಾಯಸ್ಥಾನಗಳೂ ಒಂದೇ ಮೂಲಾಧಾರದಮೇಲೆ ನಿಂತಿವೆ. ರೈಕ್ ಮತ್ತು ಲಾನ್ಡ್ (Reich ಮತ್ತು land) ನ ನ್ಯಾಯಸ್ಥಾನಗಳ ಅಧಿಕಾರವನ್ನು ರಾಷ್ಟ್ರ ವಿಧಾನವೇ ವಿವರಿಸಿದೆ. ಅಂದರೆ ಜರ್ಮನಿಯಲ್ಲಿ ನ್ಯಾಯಾಂಗ ರಚನೆಯು ಸಂಯುಕ್ತಾಂಗ ತತ್ವದ ಆಧಾರದ ಮೇಲೆ ನಿಂತಿಲ್ಲ. ಅಮೆರಿಕಾ ಸಂಯುಕ್ತ ರಾಷ್ಟ್ರದಲ್ಲಿ ಎಷ್ಟು ಸಂಸ್ಥಾನಗಳಿವೆಯೋ ಅಷ್ಟು ವಿಧವಾದ ನ್ಯಾಯಾಂಗ ರಚನೆ, ಮತ್ತು ವಿಧಿಕ್ರಮಗಳಿವೆ. ಆದರೂ, ಈ ನ್ಯಾಯಸ್ಥಾನಗಳಿಗೆ ಒಂದು ವಿಧವಾದ ಏಕ ರೂಪತೆ, ಸಾದೃಶ್ಯವಿದೆ. ಒಂದು ಸಂಸ್ಥಾನದ ನ್ಯಾಯಾಸ್ಥಾನಗಳು ನಿರ್ಧರಿಸುವ ನಿಯಮಗಳನ್ನು ತೀರ್ಪುಗಳನ್ನು ಪ್ರಿಸಿಡೆಂಟ್‌ಗಳನ್ನು, ಇತರ ಸಂಸ್ಥಾನಗಳ ನ್ಯಾಯಸ್ಥಾನಗಳು ಮನ್ನಿಸುತ್ತವೆ.

ಪ್ರಜಾಸ್ವಾತಂತ್ರ್ಯವನ್ನು ರಕ್ಷಿಸಲೂ ಸ್ವಚ್ಛಂದ ವೃತ್ತಿ ಮತ್ತು

ಆಕ್ರಮಣಗಳನ್ನು ಪ್ರತಿಬಂಧಿಸಲೂ, ನ್ಯಾಯಾಧೀಶರು ವಿಶೇಷಾಧಿಕಾರವನ್ನು ಗಳಿಸಿ ತಮ್ಮ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಬೇಕಾದರೆ ಪಕ್ಷಪಾತ ರಹಿತರು, ಉಚಿತಜ್ಞರು, ಮೇಧಾವಿಗಳು, ಭಾವಶುದ್ಧಿಯುಳ್ಳವರು, ನಿರ್ಣಯಗಳನ್ನು ನಿಶ್ಚಯಿಸುವುದಕ್ಕಾಗಿ ನಿರಾಲಂಬರು ತೇಜಸ್ವಿಗಳೂ ಆಗಿರಬೇಕು. ಚಾತುರ್ಯ, ಯಥಾರ್ಥತೆ, ನಿಷ್ಪಾಕ್ಷಪಟ್ಯ, ನಿರ್ಧಾರದಲ್ಲಿ ಸ್ವತಂತ್ರತೆಯಿಲ್ಲದಿದ್ದರೆ ನ್ಯಾಯಾಂಗದ ಉದಾತ್ತ ಧ್ಯೇಯಗಳನ್ನು ಸಾಧಿಸಲಾರರು. ಈ ಗುಣಗಳಿಂದ ಕೂಡಿದ ನ್ಯಾಯಾಧೀಶರು ದೊರೆಕಬೇಕಾದರೆ, ನೇಮಕ, ಅವಧಿಯ ವಿಧಾನಗಳು ಸಮರ್ಪಕವಾಗಿರಬೇಕು.

## ನ್ಯಾಯಾಧೀಶರನ್ನು ಚುನಾಯಿಸುವ ಪದ್ಧತಿಗಳು

### ಶಾಸಕಾಂಗದ ರೀತಿ

ಕೆಲವು ರಾಷ್ಟ್ರಗಳಲ್ಲಿ ನ್ಯಾಯಾಧೀಶರನ್ನು ಶಾಸಕ ಸಭೆಗಳು ಚುನಾಯಿಸುವುವು; ಇನ್ನು ಕೆಲವಲ್ಲಿ ಕಾರ್ಯಾಂಗ ಸಮಿತಿಯು ನೇಮಿಸುವುವು. ಕೆಲವು ರಾಷ್ಟ್ರಗಳಲ್ಲಿ ವರಣದಾತರೇ ನ್ಯಾಯಾಧಿಪತಿಗಳನ್ನು ಚುನಾಯಿಸುವರು. ಸಂಯುಕ್ತ ರಾಷ್ಟ್ರಗಳಲ್ಲಿ ಶಾಸಕ ಸಭೆಗಳು ನ್ಯಾಯಾಧಿಪತಿಗಳನ್ನು ಚುನಾಯಿಸಿದರೆ ಅವರು ಶಾಸಕಾಂಗಕ್ಕೆ ಅಧೀನರಾಗುವುದರಿಂದಲೂ, ತ್ರಿವಿಧಾಂಗ ತತ್ವಕ್ಕೆ ಭಂಗ ಬರುವುದರಿಂದಲೂ, ಈ ವಿಧವಾದ ಚುನಾವಣೆಯ ವಿಧಾನವನ್ನು ಒಪ್ಪಿಲ್ಲ. ಶಾಸಕಾಂಗದ ಚುನಾವಣೆಯೆಂದರೆ ಬಣಗಳ ಕಾಕಸ್‌ನ ನೇಮಕ; ಮತ್ತು ಬಣಗಳು ತಮಗೆ ಪ್ರಭಾವವಿರುವ ರಾಜಕೀಯ ಕ್ಷೇತ್ರಗಳ ಆವಶ್ಯಕತೆಗಳಿಗನುಗುಣವಾಗಿ ನ್ಯಾಯಾಂಗದ ಉದ್ಯೋಗಗಳನ್ನು ಹಂಚುವರು; ಇದರ ಪರಿಣಾಮವಾಗಿ ಪಿತೂರಿ ಮತ್ತು ಒಳಸಂಚುಗಳಾಗಿ ರಾಷ್ಟ್ರದ ನೈತಿಕಬಲವು ನಿತ್ರಾಣವಾಗಬಹುದು. ಈ ವಿಧವಾದ ಚುನಾವಣೆ ಅಮೆರಿಕಾದಲ್ಲಿ ನಾಲ್ಕು ಸಂಸ್ಥೆಗಳಲ್ಲಿ ಮತ್ತು ಸ್ವಿಟ್ಜರ್‌ಲೆಂಡ್ ರಾಷ್ಟ್ರದಲ್ಲಿ ಆಚರಣೆಯಲ್ಲಿದೆ.

### ಕಾರ್ಯಾಂಗದ ರೀತಿ

ಅಮೆರಿಕಾ ರಾಷ್ಟ್ರ ಬಿಟ್ಟು ಮಿಕ್ಕ ಎಲ್ಲಾ ರಾಷ್ಟ್ರಗಳಲ್ಲಿಯೂ ಕಾರ್ಯ

ನಿರ್ವಾಹಕಾಂಗವು ನ್ಯಾಯಾಧಿಪತಿಗಳನ್ನು ನೇಮಿಸುವುದು. ಅಮೆರಿಕಾದಲ್ಲಿ ಸಂಯುಕ್ತ ನ್ಯಾಯಾಧಿಪತಿಗಳು ಮಾತ್ರ ಕಾಂಗ್ರೆಸ್‌ನಿಂದ ನೇಮಿಸಲ್ಪಡುವರು. ಸಚಿವತಂತ್ರವಿರುವ ರಾಷ್ಟ್ರಗಳಲ್ಲಿ ನ್ಯಾಯಸಚಿವನೇ ನ್ಯಾಯಾಧೀಶರನ್ನು ನೇಮಿಸುವನು. ಬೆಲ್ಜಿಯಂನಲ್ಲಿಯೂ, ಚಿಲ್ಲಿಯಲ್ಲಿಯೂ ಸೆನಟ್ ಸಭೆ ಮತ್ತು ನ್ಯಾಯಾಂಗ ತಯಾರಿಸಿದ ಸ್ಥಾನಾರ್ಥಿಗಳು ಕಾರ್ಯಾಂಗವನ್ನು ಚುನಾಯಿಸಬೇಕಾಗುವುದು. ಕೆಲವು ಐರೋಪ್ಯ ರಾಷ್ಟ್ರಗಳು ಚುನಾವಣೆ, ನೇಮಕ ಮತ್ತು ಕೋ-ಆಪ್ಟ ಪದ್ಧತಿಗಳನ್ನು ಏಕೀಕರಿಸಿವೆ ನ್ಯಾಯಾಧಿಕಾರಿ ಪದವಿಗಳಿಗೆ, ನ್ಯಾಯಾಂಗಗಳಿರುವ ನ್ಯಾಯಪತಿಗಳಿಂದಲೇ ಆರಿಸಬೇಕು; ಮತ್ತು ಕೆಳಗಿನ ಕೋರ್ಟುಗಳ ಸ್ಥಾನಗಳಿಗೆ ಪರೀಕ್ಷೆ ಮೂಲಕ ಸ್ಪರ್ಧಿಸಬೇಕು. ನ್ಯಾಯಾಧಿಪತಿಗಳನ್ನು ಕಾರ್ಯಾಂಗದ ಅಧ್ಯಕ್ಷನು ನೇಮಿಸುವುದರಿಂದ ಅವರು ನಿರ್ಭಯರಾಗಿಯೂ ಸ್ವತಂತ್ರತೆಯಿಂದಲೂ ವರ್ತಿಸಬೇಕು; ಕಾರ್ಯದಕ್ಷತೆಯುಳ್ಳಂತಹವರನ್ನೆ ಸಚಿವನು ಆರಿಸುವನು. ಆದರೆ ಸಚಿವರು ನೇಮಿಸುವುದರಿಂದ ಬಣಗಳ ಅಧೀನನಾಗಬಹುದೆಂಬ ಶಂಕೆಯು ಫ್ರೆಂಚ್ ರಾಷ್ಟ್ರದಲ್ಲಿ ಬಲವಾಗಿವೆ.

## ಪ್ರಜಾಭಿಮತದ ರೀತಿ

ಫ್ರೆಂಚ್ ರಾಷ್ಟ್ರದಲ್ಲಿ ಮಹಾಕ್ರಾಂತಿಯ ಪರಿಣಾಮವಾಗಿ ನ್ಯಾಯಾಧೀಶರನ್ನು ಸಾರ್ವಜನಿಕ ಚುನಾವಣೆಯಿಂದ ಆರಿಸುವ ಪದ್ಧತಿ ಜಾರಿಗೆ ಬಂದು, ನೆಪೋಲಿಯನ್ ಸಾಮ್ರಾಟನ ಆಳ್ವಿಕೆಯಲ್ಲಿ ರದ್ದಾಯಿತು. ಅಮೇರಿಕಾ ಸಂಯುಕ್ತ ರಾಷ್ಟ್ರದ ಅನೇಕ ಸಂಸ್ಥಾನಗಳಲ್ಲಿ ಸಾರ್ವಜನಿಕ ಚುನಾವಣೆ ಜಾರಿಗೆಬಂದಿದೆ. ಆದರೆ ಈ ಪದ್ಧತಿಯ ಅನುಸರಣೆಯಲ್ಲಿ ಅನೇಕ ನ್ಯೂನತೆಗಳುಂಟು. ನ್ಯಾಯಾಂಗವು ಪರತಂತ್ರವಾಗಿಯೂ, ನಿತ್ರಾಣವಾಗಿಯೂ ಆಗುವುದು. ಬಣಗಳು ತಮ್ಮ ನೀತಿಯನ್ನು ಅನುಸರಿಸುವ ಉಮೇದುವಾರರನ್ನು ನೇಮಿಸುವುದರಿಂದಲೂ, ದಕ್ಷತೆ,

ವಿವೇಚನೆ, ಪ್ರಜ್ಞತೆ, ಧೈರ್ಯಸ್ಥೈರ್ಯಗಳು ಮುಂತಾದ ನ್ಯಾಯಾಧೀಶನ ಗುಣಗಳನ್ನು ಪಾರ್ಟಿ ನಾಯಕರು ಅರಿಸಲು ಅಸಕ್ತರಾದುದರಿಂದಲೂ, ಚುನಾಯಿತರಾಗುವ ನ್ಯಾಯಾಧಿಪತಿಗಳು ದುರ್ಬಲರೂ ವಿವೇಕಶೂನ್ಯರೂ ಅಸ್ವತಂತ್ರರಾಗಿಯೂ ಆಗುವರು. ವರಣದಾತರಿಗೆ ನ್ಯಾಯ ನೀತಿಪಟುಗಳನ್ನು ಚುನಾಯಿಸುವ ಅರ್ಹತೆಯಿಲ್ಲ: ನ್ಯಾಯಾಧೀಶನ ತೀರ್ಪುಗಳು ವರಣದಾತರ ಅಭಿಮತಕ್ಕೆ ಒಪ್ಪಿಗೆಯಿಲ್ಲದಿದ್ದರೆ, ಅಂತಹ ವ್ಯಕ್ತಿಯನ್ನು ಪುನಾರಾವರ್ತಿ ನ್ಯಾಯಾಧೀಶನನ್ನಾಗಿ ಚುನಾಯಿಸುವುದಿಲ್ಲ. ಜನಪ್ರಿಯವಲ್ಲದ ತೀರ್ಮಾನಗಳಿಗಾಗಿ ಧರ್ಮಜ್ಞರು, ನೀತಿಶಾಸ್ತ್ರತತ್ವಜ್ಞರು, ಪ್ರತಿಭಾವಂತರು, ಸತ್ಯಸಂಧರು, ನಿಯತಾತ್ಮರು, ಧೈರ್ಯವಂತರು, ಯಶಸ್ವಿಗಳು ಆದಂಥ ವ್ಯಕ್ತಿಗಳ ಉಮೇದುವಾರಿಕೆಯನ್ನು ವರಣದಾತರು ತಿರಸ್ಕರಿಸಿರುವ ನಿದರ್ಶನಗಳು ಹೇರಳವಾಗಿವೆ. ಶೀಲವಂತರೂ, ಪ್ರಾಜ್ಞರೂ ಖಂಡಿತವಾದಿಗಳೂ ಪ್ರಜಾಭಿಮತವನ್ನು ಉದ್ಯೋಗಗಳಿಗಾಗಿ ಕೋರುವುದಿಲ್ಲ. ಈ ವಿಧವಾದ ನ್ಯೂನತೆಗಳನ್ನು ನಿವಾರಿಸಲು ಕೆಲವು ಸಂಸ್ಥಾನಗಳಲ್ಲಿ ಬಣಸಿದ್ಧಾಂತರಹಿತವಾದ ಪ್ರೈಮರಿಗಳಿಂದ ನ್ಯಾಯಾಧೀಶರನ್ನು ಚುನಾಯಿಸುವುದು, ಮತ್ತು ನ್ಯಾಯಾಧಿಪತಿಗಳ ಚುನಾವಣೆಯನ್ನು ಇತರ ಚುನಾವಣೆಗಳ ದಿವಸ ನಡೆಸುವುದು, ನ್ಯಾಯಾಧಿಪತಿಗಳ ಅವಧಿಯನ್ನು ಹೆಚ್ಚಿಸುವುದು,—ಇವು ಕೆಲವು ಸುಧಾರಣೆಗಳು. ಕೆಲವು ರಾಷ್ಟ್ರಗಳಲ್ಲಿ ನ್ಯಾಯಾಧೀಶರ ಅವಧಿಯು ಎರಡು ವರ್ಷದಿಂದ ಆರು ವರ್ಷ. ಏಕನಾಯಕ ರಾಷ್ಟ್ರಗಳಲ್ಲಿ ನಡತೆ ಮತ್ತು ವರ್ತನೆ ನೆಟ್ಟಗಿರುವವರಿಗೂ ಸ್ಥಾನಚ್ಯುತರಾಗುವುದಿಲ್ಲ. ಕೆಲವು ಪ್ರಗತಿಪರ ರಾಷ್ಟ್ರಗಳಲ್ಲಿ ನ್ಯಾಯಾಧೀಶರನ್ನು ದುರ್ವರ್ತನೆಗಾಗಿಯೂ ಅಸಮರ್ಪಕವಾದ ತೀರ್ಮಾನಗಳಿಗಾಗಿಯೂ ಅನೇಕ ವೇಳೆ ಅವಧಿಗೆ ಮುಂಚೆಯೇ ಸ್ಥಾನಚ್ಯುತರನ್ನಾಗಿ ಮಾಡುವರು. (Recall of judges)

# ಪ್ರಕರಣ ೧೬

## ಪ್ರಜಾ ಪ್ರಭುತ್ವಕ್ಕೆ ಇರುವ ಪ್ರತಿಬಂಧಕಗಳು

## Limitation of Democracy

ಇಡೀ ಪ್ರಜಾವರ್ಗದ ಸಾಮೂಹಿಕ ಸಹವರ್ತನೆ ಮತ್ತು ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದು, ಪ್ರಜಾ ಪ್ರಭುತ್ವದ ಸಿದ್ಧಾಂತವಾದುದರಿಂದ ಸರ್ಕಾರರೂಪಗಳಲ್ಲೆಲ್ಲಾ ಪ್ರಜಾ ಪ್ರಭುತ್ವ ಸರ್ಕಾರವು ಆಚರಣೆಯಲ್ಲಿ ಬಹಳ ಕಷ್ಟಕರವಾದುದು ಮತ್ತು ಕೋಟಲೆಗಳಿಂದ ಕೂಡಿದುದು ಆಗಿದೆ. 19 ನೆ ಶತಮಾನದಲ್ಲಿ ಪ್ರಜಾ ಪ್ರಭುತ್ವ ಸರ್ಕಾರವು ರಾಜಕೀಯ ಪ್ರಶ್ನೆಗಳಿಗೆ ಪರಿಹಾರವನ್ನು ಕೊಡವುದರಲ್ಲಿ ನಿರತವಾಗಿತ್ತು. ಇತ್ತೀಚಿಗೆ ಆರ್ಥಿಕ ಜೀವನದ ಜಟಿಲ ಪ್ರಶ್ನೆಗಳ ಪರಿಹಾರವನ್ನು ಸೂಚಿಸುವ ಪರಿಸ್ಥಿತಿಗೆ ಸಿಕ್ಕಿದೆ. ಆಧುನಿಕ ರಾಷ್ಟ್ರ ಸರ್ಕಾರವು ವಿಧಿಬದ್ಧವಾಗಿ ವೈಯುಕ್ತಿಕ ಸ್ವಾತಂತ್ರ್ಯ ಮತ್ತು ಪೌರೇಯ ಸ್ವಾತಂತ್ರ್ಯವನ್ನು ಕಾಪಾಡಲು ಬೇಕಾಗುವ ವ್ಯವಸ್ಥೆಗಳನ್ನು ಮಾಡಿದರೆ ಸಾಲದು. ವ್ಯಕ್ತಿವಿಕಾಸಕ್ಕೂ, ದೈಹಿಕ ಮತ್ತು ಮನೋ ದೌರ್ಬಲ್ಯಗಳನ್ನು ನಿವಾರಿಸಿ, ಹೆಂಗಸರೂ, ಮಕ್ಕಳೂ, ಅತಿ ಬಡವರೂ ಮುಂತಾದವರ ಆರ್ಥಿಕ, ಸಾಮಾಜಿಕ ಜೀವನದ ಮಟ್ಟವನ್ನು ಏರಿಸುವ ವಿಶೇಷ ಜವಾಬ್ದಾರಿಯು ಆಧುನಿಕ ಸರ್ಕಾರಕ್ಕೆ ಸೇರಿದೆ. ಇದರ ಪರಿಣಾಮವಾಗಿ ಪರಮಾಧಿಕಾರವನ್ನು ಪಡೆದಿರುವ ಶಾಸನ ಸಭೆಗಳು, ಶಕ್ತಿ ಮೀರಿ ಶಾಸನಗಳನ್ನು ರಚಿಸುವ ಭಾರವನ್ನು ಹೊರಬೇಕಾಗಿದೆ. ಹೊಸಹೊಸ ವರ್ಗಗಳು, ಕೂಲಿಕಾರರು, ಕಾರ್ಮಿಕರು ಅಭಿಮತ ಕೊಡುವ ಅಧಿಕಾರವನ್ನು ಪಡೆದಿರುವುದರಿಂದ, ಪ್ರಜಾ ಪ್ರಭುತ್ವ ತತ್ವದಲ್ಲಿ ನೂತನ ಕಲ್ಪನೆಗಳು ಮೂಡಿ, ವಿಶೇಷ ಹಕ್ಕುಗಳೂ, ಅಸ್ತಿವರ್ಗರಹಿತ ಸಮಾಜ ಸೃಷ್ಟಿಯಭಾವನೆಗಳೂ ರಾಷ್ಟ್ರವನ್ನವಲಂಬಿಸಿವೆ. ಅಲ್ಲದೆ, ಆರ್ಥಿಕ ಪ್ರಶ್ನೆಗಳು ಸ್ಥಳೀಯ

ಮತ್ತು ರಾಷ್ಟ್ರ ಪ್ರಶ್ನೆಗಳಲ್ಲ; ಅಂತರ ರಾಷ್ಟ್ರೀಯ ಪರಿಸ್ಥಿತಿಗಳಿಗೆ ಅನುಗುಣವಾದ ಭಾವನೆಗಳಿಂದ ಸ್ಫೂರ್ತಿ ಹೊಂದಿವೆ. ಆದುದರಿಂದ ಯಾವುದೊಂದು ರಾಷ್ಟ್ರ ಸರ್ಕಾರವೂ ತನ್ನ ಆರ್ಥಿಕ ಪ್ರಶ್ನೆಗಳಿಗೆ ಪ್ರತ್ಯೇಕವಾದ ಮತ್ತು ನಿರ್ದಿಷ್ಟವಾದ ಪರಿಹಾರವನ್ನು ಸೂಚಿಸಲು ಸಾಧ್ಯವಿಲ್ಲ. ರಾಜಕೀಯ ಪ್ರಶ್ನೆಗಳನ್ನು, ಸುಲಭ ರೀತಿಯಲ್ಲಿ ಪರಿಶೀಲಿಸಿ, ಪರಿಹಾರವನ್ನು ಸೂಚಿಸಬಹುದು. ಆದರೆ ಸುಲಭವಾಗಿ ಪರಿಹರಿಸಲು ಸಾಧ್ಯವಿಲ್ಲ. ಆದುದರಿಂದಲೆ ಪ್ರಜಾ ಪ್ರಭುತ್ವ ತತ್ವದ ಮಹತ್ವವು ಕ್ಷಯಹೊಂದಿ, ತನ್ನ ಪ್ರಭಾವವನ್ನು ಕಳೆದುಕೊಳ್ಳುವ ಸನ್ನಿವೇಶ ಒದಗಿದೆ.

## ಶಾಸನ ಸಭೆಯ ರೋಗರುಜನಗಳು

ಚಿಕ್ಕ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಆಚರಣೆಯು ಸುಲಭ. ಕೋಟಿಗಟ್ಟಲೆ ಜನಸಂಖ್ಯೆ ಇರುವ ದೊಡ್ಡ ದೇಶಗಳಲ್ಲಿ ವರ್ಣಕರ್ತ ಸಮಾಜದ ರಚನೆ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಈ ತ್ರಿವಿಧಾಂಗಗಳ ಕಾರ್ಯಕಲಾಪಗಳ ನಿರ್ಧಾರ, ಕಷ್ಟತರವಾದುದು. ಪ್ರಜಾಪ್ರಭುತ್ವಕ್ಕೆ ಆರ್ಥಿಕ ಜೀವನವನ್ನು ಮಾರ್ಪಾಟು ಮಾಡುವುದರಲ್ಲಿ ಅಡಚಣೆಗಳು ಬಹಳವಾಗಿವೆ. ಆರ್ಥಿಕ ಸಮಸ್ಯೆಗಳು ಎಲ್ಲರನ್ನೂ ತಾಕುವುದರಿಂದಲೂ, ಎಲ್ಲರ ಮನೋಭಾವ ಮತ್ತು ಸ್ವಾರ್ಥ, ಬೇರೆ ಬೇರೆ ಯಾಗಿರುವುದರಿಂದಲೂ, ಒಂದು ನಿರ್ದಿಷ್ಟ ಪರಿಹಾರವನ್ನು ಕೊಡುವುದಸಾಧ್ಯ. ಸಮಸ್ಯೆಗಳನ್ನು ವಾದವಿವಾದಗಳ ಮೂಲಕ ಪರಿಹರಿಸುವುದು ತುಂಬಾ ನಿಧಾನ. ಪ್ರಜಾಪ್ರಭುತ್ವವೆಂಬುದು ಬಂಡವಾಳ ಪದ್ಧತಿಯಿಂದಲೇ ಹುಟ್ಟಿರುವುದರಿಂದ, ಈ ಪದ್ಧತಿಯ ಅನುಸರಣೆಯಿಂದುಂಟಾಗುವ ಪರಿಣಾಮಗಳಿಗೆ ಬಂಡವಾಳ ಪದ್ಧತಿಯೇ ಸರಿಯಾದ ಪರಿಹಾರವನ್ನು ಸೂಚಿಸುವುದು ಸುಲಭ ಸಾಧ್ಯವಿಲ್ಲ. ವಿಜ್ಞಾನದ ಪ್ರಗತಿಯಲ್ಲಿ ಪ್ರಜಾಪ್ರಭುತ್ವ ತತ್ವದ ಪ್ರಗತಿಯು ಅಡಗಿದೆ. ಬಾಳಿನ ಬೇರು ಪ್ರಜಾಪ್ರಭುತ್ವ ತತ್ವದಲ್ಲಿ ಅಡಗಿದ್ದರೆ, ಅದಕ್ಕೆ ವಿಜ್ಞಾನವು ತಲೆಬಾಗುತ್ತದೆ. ವೈಜ್ಞಾನಿಕ ದೃಷ್ಟಿಯವಲಂಬನೆ ಆರ್ಥಿಕ

ಜಟಿಲ ಪ್ರಶ್ನೆಗಳಿಗೆ ಬೇರೆ ಬೇರೆ ರೀತಿಯಿಂದ ಪರಿಹಾರವನ್ನು ಸೂಚಿಸ ಬಹುದು. ಫಾಸಿಸ್ಟ್, ನಾಟ್ಜಿ, ಮತ್ತು ಸಮತಾವಾದಿಗಳು ಆರ್ಥಿಕ ಪ್ರಶ್ನೆಗಳಿಗೆ ಬೇರೆ ಬೇರೆ ಪರಿಹಾರವನ್ನು ಸೂಚಿಸಿದ್ದಾರೆ. ಈ ಪರಿಹಾರಗಳು ಸಮರ್ಪಕವಾದುವೆಂದು ಭಾವನೆಯುತ್ಪನ್ನವಾದುದಲ್ಲಿ, ಬಂಡವಾಳ ಪದ್ಧತಿಯ ಆಧಾರದ ಮೇಲೆ ರಚಿತವಾದ ಪ್ರಜಾಪ್ರತಿನಿಧಿ ಪ್ರಭುತ್ವಗಳು ಸೂಚಿಸುವ ಪರಿಹಾರಗಳು ಸಾರ್ವಜನಿಕ ಹಿತದೃಷ್ಟಿಯಿಂದ ಸ್ಫೂರ್ತಿ ಗೊಂಡಿಲ್ಲವೆಂಬ ಭಾವನೆ ಅಲ್ಲಲ್ಲಿ ಮನವರಿಕೆಯಾಗುತ್ತಿದೆ.

ಶಾಸಕ ಸಭೆಯಲ್ಲಿಯೂ ಸಹ ಅನೇಕ ವಿವಾದಾಸ್ಪದವಾದ ಸಮಸ್ಯೆ ಗಳುತ್ಪನ್ನವಾಗಿವೆ. ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರಗಳನ್ನು ಶಾಸನ ಸಭೆಯು ಸೂಚಿಸುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಅದರ ಅಧಿಕಾರವನ್ನು ಕಾರ್ಯಾಂಗವು ಆಕ್ರಮಿಸಲು ತೊಡಗಿದೆ. ಸಾಮಾನ್ಯವಾಗಿ ಶಾಸಕ ರಚನೆಯನ್ನು ಕಾರ್ಯಾಂಗವೇ ಮಾಡಿದ್ದನ್ನು ಶಾಸನ ಸಭೆಯು ಅಂಗೀ ಕರಿಸುತ್ತದೆ. ವಿಶೇಷ ಪರಿಸ್ಥಿತಿ ಅಥವಾ ಉಲ್ಬಣಕಾಲದಲ್ಲಿ ಕಾರ್ಯಾಂಗದ ನಿರ್ಧಾರಗಳನ್ನು ವಿಮರ್ಶೆಮಾಡದೆಯೂ, ಭಕ್ತಿಯಿಂದಲೂ ಅನುಸರಿಸು ತ್ತದೆ. ಇದರಿಂದ ಶಾಸನ ಸಭೆಯ ಖಾಸಗಿ ಸದಸ್ಯರ ಆತ್ಮಗೌರವಕ್ಕೂ ಚ್ಯುತಿಯುಂಟಾಗಿದೆ. ಬೇಗ ಬೇಗ ಶಾಸನಗಳನ್ನು ರಚಿಸಬೇಕಾದುದ ರಿಂದ ಪಕ್ಷನಾಯಕರ ನಿಯಂತ್ರಣಕ್ಕೆ ಸಿಕ್ಕಿ ಸಭೆಯು ಸ್ವಾತಂತ್ರ್ಯವನ್ನೂ ಆತ್ಮ ಗೌರವವನ್ನೂ ಕಳೆದುಕೊಂಡಿದೆ.

ಆಧುನಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಪ್ರಶ್ನೆಗಳು ಗಹನ ತತ್ವಗಳಿಂದ ಕೂಡಿ, ಬಹಳ ಜಟಿಲವಾಗಿರುವುದರಿಂದ, ಅವುಗಳನ್ನು ಪರಿಪಾಲಿಸುವ ಮೇಧಾಶಕ್ತಿ, ಅನೇಕ ಸಭಾಸದಸ್ಯರಿಗೆ ಇಲ್ಲ. ಅನೇಕ ಮಸೂದೆಗಳನ್ನು ಕೂಲಂಕಷವಾಗಿ ವಿಮರ್ಶಿಸಲು ಕಾಲವಿಲ್ಲ; ಸಾಧ್ಯವೂ ಇಲ್ಲ. ಪ್ರಶ್ನೆಗಳ ಒತ್ತಡ ವಿಶೇಷವಾಗಿರುವುದರಿಂದಲೂ, ಅವುಗಳ ಚರ್ಚೆ ಯಲ್ಲಿ ದಕ್ಷತೆಯಿಂದ ಭಾಗವಹಿಸಲು ಅನೇಕ ಸದಸ್ಯರು ಅಸಮರ್ಥ ರಾದುದರಿಂದಲೂ, ಪೂರ್ಣ ಚರ್ಚೆಗೆ ಅವಕಾಶವಿಲ್ಲದಂತೆ, ಕ್ಲೋಸರ್

(Closure) Closure by Compartment, ಮತ್ತು Guillotine ಮುಂತಾದ ಸಾಧನೆಗಳಿಂದ ಚರ್ಚೆಗಳನ್ನು ಪ್ರತಿಬಂಧಿಸಬೇಕಾಗಿದೆ. ಇದರ ಪರಿಣಾಮವಾಗಿ, ದಕ್ಷರೂ, ಚತುರರೂ, ಆದ ಸಚಿವರು ಸೂಚಿಸಿದ ಅನೇಕ ಮಸೂದೆಗಳ ಅಂಗೀಕಾರ, ಸಾಮಾನ್ಯ ಸದಸ್ಯರು ಸೂಚಿಸಿದ ಮಸೂದೆಗಳ ಸೋಲು; ಶಾಸನ ಸಭೆಯ ದುರ್ಬಲತೆಯಿಂದ, ಕಾರ್ಯಾಂಗವು ಪ್ರಭಾವಯುತವಾಗುವುದು.

ಪಾರ್ಲಿಮೆಂಟ್ ಶಾಸನ ಸಭೆ ಮತ್ತು ಇತರ ಶಾಸನ ಸಭೆಗಳ ಮೇಲಿರುವ ಈ ಒತ್ತಡದಿಂದ, ಶಾಸನಾಧಿಕಾರ, ಶಾಸನಗಳ ಆಡಳಿತಾಂಗದ ಅಧಿಕಾರಿಗಳ ವಿಮರ್ಶೆ, ಮತ್ತು ಪುನರ್ ರಚಿಸಿದ ಶಾಸನಗಳ ಪ್ರಯೋಗ, ಈ ಅಧಿಕಾರಗಳನ್ನು ಶಾಸನ ಸಭೆಗಳು ಸ್ವಯಂ ಪ್ರೇರಣೆಯಿಂದಲೇ ಕಾರ್ಯಾಂಗಕ್ಕೆ ವಹಿಸಿವೆ. ಇಂಗ್ಲೆಂಡ್, ಅಮೆರಿಕಾ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ, ಹೊಸ ಹೊಸ ಕಾನೂನು, ನಿಯಮಗಳನ್ನು ರಚಿಸುವ (Ordinance Power) ವಿಶೇಷ ಅಧಿಕಾರವು ಕಾರ್ಯಾಂಗಕ್ಕೆ ಸೇರಿದೆ. ಈ ವಿಧವಾದ ಕಾರ್ಯಾಂಗದ ಆರ್ಡಿನೆನ್ಸ್ ಅಧಿಕಾರವು ಅನಿವಾರ್ಯ; ಇದರಿಂದ ಆಡಳಿತಾಂಗದ ಅನೇಕ ಶಾಖೆಗಳು ಪುಟ್ಟಪುಟ್ಟ ಶಾಸನ ಸಭೆಗಳಾಗಿ ವರ್ತಿಸಿ, ಅನೇಕ ಶಾಸನಗಳನ್ನು ತಮ್ಮ ಪ್ರಗತಿಗಾಗಿ ರಚಿಸಿಕೊಳ್ಳುತ್ತಿವೆ. ಇದರಿಂದ ಕೇಂದ್ರ ಶಾಸನ ಸಭೆಯು ಆಡಳಿತ ವಿಭಾಗಗಳ ಕಾರ್ಯಗಳಲ್ಲಿ ಯಾವ ನಿಯಂತ್ರಣವನ್ನಾಗಲೀ, ರಕ್ಷಣೆಯನ್ನಾಗಲೀ ಮಾಡಲು ಸಾಧ್ಯವಾಗಿಲ್ಲ. ಈ ಆಡಳಿತಾಂಗದ ಸ್ವಚ್ಛಂದ ವರ್ತನೆಗೆ ಸಮರ್ಪಕವಾದ ತಡೆಗಳನ್ನು ಶಾಸನ ಸಭೆಯು ನಿರ್ಮಿಸಲು ಸಾಧ್ಯವಾಗಿಲ್ಲ. ಏತಕ್ಕೆಂದರೆ, ಖಾಸಗಿ ಸದಸ್ಯನು ಸಚಿವನಂತೆ ರಾಜಕಾರಣ ಪಟುವಲ್ಲ; ದಕ್ಷತೆ, ವಿಮರ್ಶಾತ್ಮಕ ಶಕ್ತಿ, ನಿಷ್ಪಕ್ಷಪಾತಬುದ್ಧಿ ಇವುಗಳನ್ನು ಹೊಂದಿಲ್ಲ. ಸಮಸ್ಯೆಗಳ ಪರಿಹಾರಕ್ಕೆ ಬೇಕಾಗುವ ಅಗತ್ಯವಾದ ವಿಷಯ ಸಂಗ್ರಹಣವನ್ನು ಮಾಡಲು ಶಕ್ತಿಯೂ ಇಲ್ಲ, ಕಾಲವೂ ಇಲ್ಲ. ಸಂಧಿ ವಿಗ್ರಹ, ಕೌಲು ಒಪ್ಪಂದಗಳು, ಔದ್ಯೋಗಿಕ, ವ್ಯಾವಹಾರಿಕ ಕೇಂದ್ರಗಳಲ್ಲಿ ಆವಿರ್ಭವಿಸುವ ವಿವಾದಗಳು ಮುಂತಾದ

ರಾಷ್ಟ್ರೀಯ ಪ್ರಶ್ನೆಗಳನ್ನೇ ಅಸಮರ್ಪಕವಾಗಿ ವಿಮರ್ಶಿಸಿ, ಕಾರ್ಯಾಂಗದ ನಿರ್ಧಾರಗಳನ್ನೇ ಅನುಮೋದಿಸುವುದು ರೂಢಿಯಲ್ಲಿದೆ. ಕೇಂದ್ರ ಮತ್ತು ಸ್ಥಳೀಯ ಪ್ರಶ್ನೆಗಳನ್ನು ಪ್ರತ್ಯೇಕಿಸಿ, ವಿಮರ್ಶಿಸಲು ಅಸಮರ್ಥರಾದು ದರಿಂದ ಅನೇಕವೇಳೆ, ಶಾಸನ ಸಭೆಯು ಅಲ್ಪ ವಿಷಯಗಳ ಚರ್ಚೆಯಲ್ಲಿ ಕಾಲಹರಣ ಮಾಡುವುದು. ದ್ವಯಾತ್ಮಕ ಸಭೆಗಳ ತತ್ವವನ್ನು ಒಪ್ಪಿರುವ ರಾಷ್ಟ್ರಗಳಲ್ಲಿ ಸಮಸ್ಯೆಗಳ ವಿಮರ್ಶೆ ಮತ್ತಷ್ಟು ವಿಳಂಬವಾಗುವುದು.

ಬಣಗಳ ಪದ್ಧತಿಯೂ ಸಹ ಸರ್ಕಾರದ ಕಾರ್ಯದಲ್ಲಿ ಅನೇಕ ತೊಡಕುಗಳನ್ನುಂಟುಮಾಡಿದೆ. ಬಣಗಳ ಸಹಾಯದಿಂದ ಪಾರ್ಲಿಮೆಂಟ್ ಸರ್ಕಾರ ನೀತಿಯುತವಾಗಿ ರಚಿತವಾಗಬೇಕಾದರೆ, ವರಣಕರ್ತ ಸಮಾಜದ ಅಭಿಮತವೇ ಸರ್ಕಾರದ ಸದಸ್ಯರನ್ನು ಚುನಾಯಿಸಬೇಕು. ಚುನಾಯಿಸಲ್ಪಟ್ಟ ಸರ್ಕಾರವು ತನ್ನ ರಾಜಕೀಯ ಧ್ಯೇಯಗಳನ್ನು ಪ್ರತಿಪಾದಿಸಿ, ಕಾರ್ಯಕಾರಿಯಾಗಿ ಮಾಡುವಷ್ಟು ಒಂದು ನಿರ್ದಿಷ್ಟ ಅವಧಿ ನಿರ್ಧರಿಸಲ್ಪಟ್ಟಿರಬೇಕು. ವರಣಕರ್ತಸಮಾಜಕ್ಕೂ, ಸರ್ಕಾರಕ್ಕೂ ಮೂಲಭೂತವಾದ ಅಂಗ, ಪಕ್ಷ. ಜನ ಸಂಖ್ಯೆ ಬೆಳೆದಷ್ಟೂ ಹೊಸ ಆರ್ಥಿಕ ಸಮಸ್ಯೆಗಳು ಅವತರಿಸಿದಷ್ಟೂ ಪಕ್ಷಗಳ ಕೈವಾಡ ಹೆಚ್ಚು. ಸಮಾಜದ ಅಂಗವಾಗಿಯೂ ಸರ್ಕಾರದ ಭಾಗವಾಗಿಯೂ ಸಮಾಜ ಮತ್ತು ಸರ್ಕಾರದ ನಡುವೆ ಇದ್ದು ಸಂಧಾನ ನಡೆಸುವುದೇ ಅದರ ಮೂಲೋದ್ದೇಶ. ಅಂದರೆ, ಸಮಾಜ ಮತ್ತು ಸರ್ಕಾರಗಳ ಚಿಂತನೆಗಳನ್ನು ಪ್ರತಿಬಿಂಬಿಸುವ ನೆಪದಲ್ಲಿ ವಿಶೇಷಾಧಿಕಾರವನ್ನು ಪಡೆದಿದೆ. ಪಕ್ಷಗಳು ತಾವೇ ಸರ್ಕಾರ, ರಾಜ್ಯ ಮತ್ತು ವರಣಕರ್ತಸಮಾಜ ಎಂದು ಭುಜ ತಟ್ಟಿಕೊಳ್ಳುವ ಸನ್ನಿವೇಶಗಳು ಅನೇಕ ರಾಷ್ಟ್ರಗಳಲ್ಲಿ ಒದಗಿದೆ. ಪ್ರಾತಿನಿಧ್ಯವು ಪಕ್ಷಗಳಿಗೆ ಸರಿಯಾದ ಪ್ರಮಾಣದಲ್ಲಿರಬೇಕೆನ್ನುವುದರಿಂದ ಪಕ್ಷಗಳ ಸ್ಪರ್ಧೆಗಳು ಭಯಂಕರ ರೂಪವನ್ನು ತಾಳಿ, ಸರ್ಕಾರದ ಘನೋದ್ದೇಶಗಳನ್ನು ಮರೆ ಮಾಡಿ, ಪಕ್ಷೋದ್ದೇಶಗಳನ್ನು ಎತ್ತಿಹಿಡಿದು ಸರ್ಕಾರವನ್ನು ಮತ್ತು ಶಾಸನ ಸಭೆಗಳನ್ನು ನಿಯಂತ್ರಿಸುವುದರಲ್ಲಿ ತೊಡಗಿವೆ.

ಅಭಿಮತ ಕೊಡುವ ಸಮಾಜಕ್ಕೂ, ಅದರ ಅಭಿಮತವನ್ನು ಪ್ರತಿಬಿಂಬಿಸುವ ಶಾಸನ ಸಭೆಗೂ ನಿಕಟಸಂಬಂಧವನ್ನು ಏರ್ಪಡಿಸುವುದು ಪ್ರಜಾಪ್ರಭುತ್ವದ ತತ್ತ್ವ; ಮತ್ತು ಪಕ್ಷಗಳ ಧ್ಯೇಯವಾದರೂ ವಾಸ್ತವವಾಗಿ, ಇವೆರಡನ್ನು ಪ್ರತ್ಯೇಕಿಸಿ, ಮತದಾತರು ಬಯಸದಿದ್ದ ಸರ್ಕಾರವನ್ನು ರಚಿಸುವುದು. ಇದು ಮತದಾತರ ಅಭಿಮತಗಳನ್ನು ಶಾಸನದ ರಚನೆಯಲ್ಲಿ ನಿರೋಧಿಸುವಂತಹ ಪರಿಸ್ಥಿತಿಯನ್ನುಂಟುಮಾಡುತ್ತದೆ. ಮಸೂದೆಗಳು ಪಕ್ಷಗಳ ಮತ್ತು ಸಚಿವರುಗಳ ಅಭಿಮತವನ್ನೇ ಪ್ರತಿಬಿಂಬಿಸುವಂತೆ ರೂಪ ಹೊಂದುತ್ತವೆ. ಪಕ್ಷಗಳ ನಿಯಂತ್ರಣಕ್ಕೆ ಸಿಕ್ಕಿದ ಅನೇಕ ಸದಸ್ಯರು ರೈಲ್ವೆ, ಬ್ಯಾಂಕು, ವಿಮೆ ಕಂಪೆನಿ, ಔದ್ಯೋಗಿಕ, ಕಾರ್ಮಿಕ, ವಾಣಿಜ್ಯ ಸಂಸ್ಥೆಗಳ ಸದಸ್ಯರಾಗಿ, ಸ್ವಾರ್ಥಕ್ಕಾಗಿ ಸಂಸ್ಥೆಗಳ ಪ್ರಗತಿಗೆ ಸಾಧಕವಾದ ಮಸೂದೆಗಳನ್ನು ಮನ್ನಿಸುವರು; ಇದರ ಪರಿಣಾಮವಾಗಿ ಶಾಸನ ಸಭೆಯು ಆತ್ಮಗೌರವವನ್ನು ಕಳೆದುಕೊಳ್ಳುವುದಲ್ಲದೆ, ವರಣಕರ್ತಸಮಾಜದ ಆಗ್ರಹಕ್ಕೆ ಪಾತ್ರವಾಗುತ್ತದೆ.

ರಾಷ್ಟ್ರದಲ್ಲಿ ಪಕ್ಷ ಮತ್ತು ಕಾರ್ಯಾಂಗದ ಪ್ರಬಲತೆಯಿಂದ ಪ್ರಜಾಪ್ರಭುತ್ವವು ನಿರಂಕುಶಪ್ರಭುತ್ವ ಅಥವಾ ಸ್ವಚ್ಛಂದ ಪ್ರಭುತ್ವಕ್ಕೆ ಹೆದ್ದಾರಿಯಾಗುತ್ತಿದೆ. ಈ ವಿಧವಾದ ಅವನತಿಗೆ ಬರುತ್ತಿರುವ ಪ್ರಜಾ ಪ್ರಭುತ್ವವನ್ನು ನೋಡಿ, ಟಾಲಿರಾಂಡ್ ( Tallyrand ) ಎಂಬ ರಾಜನೀತಿಜ್ಞನು, ಪ್ರಜಾಪ್ರಭುತ್ವವನ್ನು ನೀಚರ ಪ್ರಭುತ್ವವೆಂದು ಕರೆದಿರುವನು. ಪ್ರಜಾಪ್ರಭುತ್ವದಲ್ಲಿ ಅಧಿಕಾರವು ಸಾಮಾನ್ಯವಾಗಿ, ಸುಶೀಲರಲ್ಲದ ಅಥವ ಧನಾಢ್ಯರ ಕೈ ಸೇರುವುದರಿಂದ, ಉತ್ತಮ ವರ್ಗದ ಮತ್ತು ರಾಷ್ಟ್ರನಾಯಕರಾಗುವ ದಕ್ಷತೆಯುಳ್ಳ ಜನರನ್ನು ಅಧಿಕಾರ ಪ್ರಯೋಗಕ್ಕಾಗಿ ಚುನಾಯಿಸುವುದಿಲ್ಲ; ಧನ, ಜನ ಮುಂತಾದ ಸಲಕರಣೆಗಳನ್ನು ಸಾಧನೆಗಳನ್ನಾಗಿ ಉಪಯೋಗಿಸಿಕೊಂಡು ಅನೀತಿಯುತ ರೀತಿಯಲ್ಲಿ ಪ್ರಜಾಬೆಂಬಲವನ್ನು ಪಡೆಯುವ ಅಲ್ಪ ಜನರು ಜಗದ್ವಿಖ್ಯಾತ ಪುರುಷರ

ಗಿಂತ ಹೆಚ್ಚು ಮನ್ನಣೆಯನ್ನು ಪ್ರಜಾಪ್ರಭುತ್ವದಲ್ಲಿ ಅಧಿಕಾರಪಡೆಯುವ ರೆಂಬ ಆರೋಪಣೆಯನ್ನು ಕೆಲವರು ಮಾಡಿದ್ದಾರೆ.

ಈ ಅಲ್ಪಜ್ಞರೂ, ಪಕ್ಷ ಪಕ್ಷಗಳ ನಾಯಕರೂ, ಪ್ರಜಾ ಮನೋಭಾವನೆಗಳನ್ನು ತಿಳಿದು ಪರಿವರ್ತಿಸುವ ಮನಶಾಸ್ತ್ರಜ್ಞರೂ, ಉದಾತ್ತ ಧ್ಯೇಯಗಳನ್ನು ಅಲ್ಪವಿಚಾರಗಳಲ್ಲಿ ಪರಿಣಿತಮಾಡಿ ಸ್ವಾರ್ಥವನ್ನು ಸಾಧಿಸತಕ್ಕವರೂ, ಪ್ರಜಾಪ್ರಭುತ್ವ ತತ್ವಗಳನ್ನು ಸಮಯುಕ್ತನುಗುಣವಾಗಿ ಸ್ವಾರ್ಥಕ್ಕೆ ಅಧೀನ ಮಾಡತಕ್ಕವರೂ ರಾಜಕೀಯ ರಂಗದಲ್ಲಿ ಪ್ರವೇಶಿಸಿ ಪ್ರಜಾಪ್ರಭುತ್ವದ ಘನೋದ್ದೇಶಗಳಿಗೆ ಕಳಂಕ ಪ್ರಾಯರಾಗಿದ್ದಾರೆ. 19ನೆ ಶತಮಾನದಲ್ಲಿ ರಾಜನೀತಿಜ್ಞರು, ರಾಜನೀತಿಯಲ್ಲಿ ವಿಶೇಷ ಶ್ರದೆಯುಳ್ಳ ಸಣ್ಣ ವರಣಕರ್ತ ಸಮಾಜವನ್ನು ಉದಾತ್ತತತ್ವಗಳಿಂದ ಹುರಿದುಂಬಿಸುತ್ತಿದ್ದರು. ವರಣಕರ್ತ ಸಮಾಜದಲ್ಲಿ ವಿದ್ಯಾವಂತರೂ, ರಾಜಕಾರಣ ಪಟುಗಳೂ, ರಾಜನೀತಿಯಲ್ಲಿ ನಿಷ್ಣಾತರೂ, ಧಾರ್ಮಿಕ ಶ್ರದ್ಧೆಯುಳ್ಳವರೂ ನೀತಿಯುತ ಸರ್ಕಾರ ಪೋಷಕರೂ, ವಿಶೇಷವಾಗಿ ಕಂಡುಬರುತ್ತಿದ್ದರು. ಅದರಿಂದಲೇ ರಾಜಕೀಯ ರಂಗದಲ್ಲಿ ಸ್ಪರ್ಧೆಗಳು ಉತ್ತಮ ವರ್ಗದವರನ್ನು ಆಕರ್ಷಿಸಿ ರಾಷ್ಟ್ರ ಹಿತಸಾಧಕವಾದ ತತ್ವಗಳ ಪ್ರತಿಪಾದನೆಗೆ ಮಾರ್ಗದರ್ಶಕವಾಗಿದ್ದುವು. ಆದರೆ, ಆಧುನಿಕ ವರಣಕರ್ತ ಸಮಾಜದಲ್ಲಿ, ಹೆಚ್ಚುಮಂದಿ ಅನಕ್ಷರಸ್ತರಾದುದರಿಂದ ಅನೇಕ ಸದಸ್ಯರ ಗೂಢಾರ್ಥಗಳು ವಿಶದವಾಗುವುದಿಲ್ಲ; ಆದುದರಿಂದ ರಾಷ್ಟ್ರ ಪ್ರಶ್ನೆಗಳ ವಿಮರ್ಶೆಯಲ್ಲಿ ಅನಾದರ; ಉತ್ಸಾಹವಿದ್ದರೂ ಅವರ ಮಾನಸಿಕ ವ್ಯಾಪಾರಕ್ಕೆ ರಾಷ್ಟ್ರ ಪ್ರಶ್ನೆಗಳ ವ್ಯವಧಾನ ಸಾಧ್ಯವಿಲ್ಲ. ವ್ಯಾಪಾರಸ್ತನಿಗೆ ಗಣಿಗಳ ಹತೋಟಿಯನ್ನು ಕೇಂದ್ರಿಕರಿಸುವುದರಲ್ಲಿ ಉತ್ಸಾಹವಿಲ್ಲ; ಗಣಿಯಲ್ಲಿ ಕೆಲಸ ಮಾಡುವವನು ವ್ಯವಸಾಯದ ಗೋಜಿಗೆ ಹೋಗನು; ಉತ್ತಮ ವೃತ್ತಿಗಳಲ್ಲಿರುವವರಿಗೆ ಕಾರ್ಮಿಕ ವರ್ಗದ ಕಷ್ಟನಿಷ್ಠುರಗಳು ಗೋಚರವಾಗುವುದಿಲ್ಲ. ರಾಜಕೀಯ ಪ್ರಶ್ನೆಗಳು ವರಣಕರ್ತ ಸಮಾಜವನ್ನು ಮಧುರಗಾನವು ಆಕರ್ಷಿಸು

ವಂತೆ ಆಕರ್ಷಿಸುವುವು; ಆರ್ಥಿಕ ಪ್ರಶ್ನೆಗಳು ಸಾಮೂಹಿಕ ಅಭಿಮತ ವಿಲ್ಲದೆ ಕೇವಲ ವೈಯುಕ್ತಿಕವಾಗುವುವು.

ಈ ವಿಧವಾದ ಪರಿಸ್ಥಿತಿಯನ್ನು ವೃತ್ತ ಪತ್ರಿಕೆಗಳು ಬಹಳವಾಗಿ ಉತ್ಪ್ರೇಕ್ಷಿಸುತ್ತವೆ. ಅಲ್ಪ ವಿದ್ಯಾವಂತರು, ವಿಮರ್ಶ ಜ್ಞಾನರಹಿತವಾದ ಕೆಲವು ವೃತ್ತಪತ್ರಿಕೆಗಳ ಬೆಂಬಲವನ್ನು ಪಡೆದಿದ್ದಾರೆ. ರಾಜಕೀಯ ಉಪನ್ಯಾಸಗಳು, ಶಾಸನ ಸಭೆಯ ಚರ್ಚೆಗಳು ಇವುಗಳಲ್ಲಿ ವಿಮರ್ಶಿಸುವ ವಿಷಯಗಳ ಸರಾಂಶವನ್ನು ವೃತ್ತಾಂತ ಪತ್ರಿಕೆಗಳು ನಿಷ್ಪಕ್ಷಪಾತ ಬುದ್ಧಿಯಿಂದ ಅಚ್ಚು ಹಾಕುವುದಿಲ್ಲ. ಖೂನಿ, ವಿಮಾನಯಾನ, ಮದುವೆ, ಕ್ರಿಕೆಟ್ ಪಂದ್ಯಗಳಿಗೆ ವಿಶೇಷ ಪ್ರಾಶಸ್ತ್ಯ ದೊರಕಿದೆ. ರಾಷ್ಟ್ರದ ಸಾಮಾನ್ಯ ಪ್ರಜೆಯು ಚಲನ ಯಂತ್ರವು ತಯಾರಿಸುವ ಚಿತ್ರಗಳ, ನಟನಟಿಯರ ಸಂಸಾರಗಳ ವಿಚಾರದಲ್ಲಿ ವಿಶೇಷ ಶ್ರದ್ಧೆಯನ್ನು ವಿಶದಪಡಿಸುವನು. ಇವುಗಳ ವಿಚಾರವಾಗಿ ಹೆಚ್ಚು ವಿಷಯಸಂಗ್ರಹಣ ವಿರುವುದರಿಂದ, ಇವು, ರಾಷ್ಟ್ರ ಜೀವನದ ಪ್ರಧಾನ ಪಾತ್ರ ಪಡೆದಿವೆಯೆಂದು ಮತದಾತನ ನಂಬಿಕೆ.

ಮತದಾತನಿಗೂ, ಶಾಸನ ಸಭಾಸದಸ್ಯನಿಗೂ ಅಂತರವು ಹೆಚ್ಚುತ್ತಿರುವುದರಪರಿಣಾಮವಾಗಿ, ತಾನು ಅಲ್ಪನೆಂಬ ಭಾವನೆ ಮತದಾತನಲ್ಲಿ ಮೂಡಿ ರಾಜಕೀಯ ಪ್ರಶ್ನೆಗಳಲ್ಲಿ ಅಸಡ್ಡೆಯನ್ನುಂಟುಮಾಡುತ್ತಿರುವುದು. ಹರತಾಲ ಸ್ಟ್ರೈಕ್ಸ್ ಮತ್ತು ಯುದ್ಧ ಪರಿಸ್ಥಿತಿಗಳಲ್ಲಿ ಅವತರಿಸುವ ಪ್ರಜಾಭಿಮತವು, ಶಾಂತಿಕಾಲದಲ್ಲಿ ಶೂನ್ಯವಾಗಿರುವುದು ; ಪ್ರಜಾಭಿಮತದಲ್ಲಿರುವ ನ್ಯೂನತೆಗಳು ಪ್ರಜಾಪ್ರಭುತ್ವ ಸರ್ಕಾರಕ್ಕೆ ಪ್ರತಿಬಂಧಕವಾಗಿವೆಯೆಂದು ಒಂದು ವಾದ. ಉಪಚುನಾವಣೆ, ವೃತ್ತಾಂತ ಪತ್ರಿಕೆ, ಮತ್ತು ಮಾತುಕತೆಗಳಿಂದ ಹೊರಬೀಳುವ ಪ್ರಜಾಭಿಮತವನ್ನು ಮಾತ್ರ, ಸಚಿವರು ಮತ್ತು ಶಾಸನ ಸಭೆಯ ಸದಸ್ಯರು ಅರಿಯುವರು ; ಆದರೆ ಪ್ರಜಾಭಿಮತವನ್ನು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ, ಪ್ರಶ್ನೆಗಳ ವಿಮರ್ಶೆಯಲ್ಲಿ ಅನೇಕಾವರ್ತಿ ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಿಲ್ಲ. ಯುದ್ಧ ಬೇಕೇ ಬೇಡವೇ, ಪ್ರಜಾ

*H. J. Laski* Democracy in Crisis.

ಪ್ರಭುತ್ವಬೇಕೇ, ರಾಜತ್ವಬೇಕೇ, ವಿದೇಶಾಂಗ ನೀತಿಯ ಮೂಲಭೂತ ತತ್ವಗಳಾವುವು ; ಇವೇ ಮುಂತಾದ ಪ್ರಶ್ನೆಗಳಿಗೆ ಪ್ರಜಾಭಿಮತವು ಹೀಗೆಂದು ನಿಷ್ಕರ್ಷೆಯಾಗುವುದೇ ಕಷ್ಟ.

ಚುನಾವಣೆಗಳಲ್ಲಿ ಮತದಾತರ ವೋಟ್‌ಗಳ ಎಣಿಕೆಯಿಂದ ಉಮೇದುವಾರರ ಯೋಗ್ಯತೆಯು ನಿರ್ಧಾರವಾಗುವುದು ; ಶಿಕ್ಷಣ, ತಿಳುವಳಿಕೆ, ದಕ್ಷತೆ, ಮುಂತಾದ ಗುಣಗಳಿರುವ ವ್ಯಕ್ತಿಗಳಿಗೆ ಪ್ರಾಶಸ್ತ್ಯವಿಲ್ಲ; ಗುಣಕ್ಕೆ ಸಂಖ್ಯೆಗಿಂತ ಹೆಚ್ಚು ಪ್ರಾಧಾನ್ಯ. ಸಾರ್ವಜನಿಕ ಚುನಾವಣೆ, ಶಾಸನ ಸಭೆಗಳ ಅಲ್ಪಾವಧಿ, ಅಧಿಕಾರಿಗಳ ಬದಲಾವಣೆ, ಮುಂತಾದ ಸಾಧನೆಗಳನ್ನು ಪ್ರಜಾಪ್ರಭುತ್ವವು ಪ್ರಯೋಗಿಸಿದರೂ, ಶಾಸಕಾಂಗ ಮತ್ತು ಕಾರ್ಯಾಂಗಗಳ ಸದಸ್ಯರನ್ನು ಮತದಾತರಿಗೆ ಜವಾಬ್ದಾರಿಯುತರನ್ನಾಗಿ ಮಾಡಿದಂತಾಗುವುದಿಲ್ಲ. ಅಜ್ಞತೆ, ಆಲಸ್ಯ, ಸಂಕುಚಿತ ದೃಷ್ಟಿ, ಕೃತಜ್ಞತೆ, ಆಶೆ, ಚಪಲಚಿತ್ತತೆಗಳಿಂದ ಕೂಡಿರುವ, ವರಣಕರ್ತ ಸಮಾಜವು ಸ್ಥಾಪಿಸುವ ಪ್ರಜಾ ಸರ್ಕಾರವು ದುರ್ನೀತಿಯಿಂದ ಕೂಡಿ ದುರ್ಬಲವಾಗಿರುವುದು; ಕೆಲವು ಪರಿಸ್ಥಿತಿಗಳಲ್ಲಿ ಮತದಾತರ ವರ್ತನೆ ದೂಷ್ಯವೂ ಅಗ್ರಾಹ್ಯವೂ ಆಗಿರುವುದು ; ಬೇರೆ ಕಾಲದಲ್ಲಿ ಅದೇ ಪರಿಸ್ಥಿತಿಯಲ್ಲಿ ಧ್ಯೇಯವಾದಿಗಳೂ, ನಿಸ್ಪೃಹರೆಂದು ತೋರ್ಪಡಿಸಿಕೊಳ್ಳುವರು. ಸ್ವಾರ್ಥಕ್ಕಾಗಿ ಸ್ಫೂರ್ತಿಗೊಂಡು ಮಾತಾಡುವ ವಾಂಗ್ಮಿಗಳ ಬಲೆಗೆ ಬಿದ್ದು ಸ್ವೇಚ್ಛಾಪ್ರವರ್ತನಾವಲಂಬಿಗಳಾಗುವರು ; ಪ್ರಗತಿಶೀಲ ಭಾವನೆಗಳನ್ನೂ, ಚಳುವಳಿಗಳನ್ನೂ ತಡೆಗಟ್ಟುವರು. ಆಗ್ರಹಗೊಂಡು, ಅರ್ಜಿಗಳ, ಸಮ್ಮೇಳನ, ವೃತ್ತ ಪತ್ರಿಕೆ, ರೇಡಿಯೋ, ಚಲನ ಚಿತ್ರ ಇವುಗಳ ಮೂಲಕ, ಪ್ರಗತಿಪರ ಸರ್ಕಾರದ ಅಧಿಕಾರವನ್ನು ಅತಿಕ್ರಮಿಸಲು ಯತ್ನಿಸುವರು.

ಪ್ರಜಾ ಸರ್ಕಾರವೆನ್ನುವುದು ಪ್ರಭುತ್ವವಾಗಲಾರದು; ಜ್ಞಾನ, ನ್ಯಾಯದೃಷ್ಟಿ, ಅಧಿಕಾರ ಪೋಷಣೆಗಳ ಸ್ಫೂರ್ತಿ ಪ್ರಜೆಗಳಲ್ಲಿಲ್ಲ. ಬಹುಸಂಖ್ಯಾತರ ವೋಟುಗಳು ಬಹುಸಂಖ್ಯಾಕ ಮತವಾಗುವುದಿಲ್ಲ ; ರಾಷ್ಟ್ರ

*H. J. Laski*:—The Present Position of Representative Democracy.

ದಲ್ಲಿ ಅಧಿಕಾರವನ್ನು ಗಳಿಸುವವರು ಅಲ್ಪಸಂಖ್ಯಾತರೇ; ಮತದಾತನ ಅನಾದರಣೆಯಿಂದ, ಪ್ರಾಜ್ಞರ ತಾಟಸ್ಥ್ಯದಿಂದ, ಪಕ್ಷಗಳ ಅಭಿಮತವು ಪ್ರಬಲ ವಾಗಿ ರಾಷ್ಟ್ರೀಯ ಭಾವನೆಗಳು ಛಿದ್ರಛಿದ್ರವಾಗಿ, ದಿಕ್ಕು ತೋಚದೆ ಮಂಕ ಮಡ್ಡಿಗಳನ್ನೋ ದುರ್ಭಾವನೆವುಳ್ಳವರನ್ನೋ ಅಧಿಕಾರ ಸ್ಥಾನಗಳಿಗೆ ಚುನಾಯಿಸಬೇಕಾಗುವುದು. ಈ ಪ್ರತಿನಿಧಿಗಳು, ಪಕ್ಷನಾಯಕರ, ವೃತ್ತ ಪತ್ರಿಕೆಗಳ ಭೀತಿಯಿಂದ ಅವರ ಕೈಗೊಂಬೆಗಳಾಗಿ ಅಸತ್ಯವನ್ನು ಶಾಸನ ಸಭೆಗಳಲ್ಲಿ ಪ್ರತಿಪಾದಿಸುವರು. ಲಂಚ, ಮೋಸ ಮುಂತಾದ ಆಪಾದನೆಗಳಿ ಗೊಳಗಾಗುವರು. ಇವು ಪ್ರಜಾಪ್ರಭುತ್ವದ ತೀವ್ರವಿರೋಧಿಗಳ ಆರೋಪಣೆ.

ಕ್ರಮವಿಕಾಸದಲ್ಲಿ ಮೆಟ್ಟಲಿಂದ ಮೆಟ್ಟಲಿಗೆ ಮೇಲಕ್ಕೆ ಹೋಗುತ್ತಾ ಮನುಷ್ಯನಲ್ಲಿ ಅಂಗಾಂಗಗಳೆಲ್ಲಾ ಮೆದಳಿನ ಯಂತ್ರದ ನಿಯಂತ್ರಣಕ್ಕೆ ಒಳಗಾಗಿ ಹೇಗೆ ಮೆದಳಿನ ಅಧಿಕಾರ ಸಂಕೃಷ್ಟವಾಗುವುದೋ ಹಾಗೆಯೇ ಪ್ರಗತಿಪರ ಸಾಮಾಜದಲ್ಲಿ ಸಮಸ್ತಾಂಗಗಳು ಅವುಗಳ ಅಧಿಕಾರಗಳು ವಿಕೃಷ್ಟವಾಗಿದ್ದರೂ ಒಂದು ನಿರ್ದಿಷ್ಟ ಸರ್ಕಾರದಲ್ಲಿ ಕೇಂದ್ರಿಭೂತವಾಗಿರು ವುದು ಪ್ರಕೃತಿಯ ನಿಯಮ. ಅದರಿಂದ ಪ್ರಜಾಪ್ರಭುತ್ವ ದ್ವೇಷಿಗಳು, ಪ್ರಜಾ ಸರ್ಕಾರವು ಪ್ರಕೃತಿ ನಿಯಮಗಳನ್ನುಲ್ಲಂಘಿಸಿ ಸೃಷ್ಟಿಯಾದ ಪೆಡಂಭೂತವೆಂದು ಆಪಾದಿಸುವರು.

## ಏಕನಾಯಕ ಪ್ರಭುತ್ವ ಸ್ಥಾಪನೆ

ಕಳೆದ ಶತಮಾನದಲ್ಲಿ ಪ್ರಜಾಪ್ರಭುತ್ವದ ಚಳುವಳಿ ಬಲವಾಗಿತ್ತು. 1914ರವರಿಗೆ ಲಂಡನ್ನಿಂದ ಸೆಂಟ್ ಪಿಟರ್ಸ್‌ಬರ್ಗ್‌ವರೆಗೆ, ಸ್ಟಾಕೊಹೋಂನಿಂದ ರೋಂ ಆಥೆನ್ಸ್‌ಗಳವರೆಗೆ ಪ್ರತಿನಿಧಿ ಸಭೆಗಳನ್ನೊಳಗೊಂಡ ಸರ್ಕಾರಗಳು ನಡೆಯುತ್ತಿದ್ದವು. ಪ್ರಜಾಪ್ರಭುತ್ವದ ಹೆಸರಿನಲ್ಲಿ 1914–18ರಲ್ಲಿ ಯುದ್ಧ ವಾಯಿತು. ಅದಾದ ಮೇಲೆ ಜರ್ಮನಿಯಲ್ಲಿ ಮೊದಲಾಗಿ ಪೂರ್ವ ಮತ್ತು ಮಧ್ಯಯೂರೋಪ್‌ನ ದೇಶಗಳಲ್ಲಿ ಪ್ರಜಾಪ್ರಭುತ್ವವು ತಲೆ ಹಾಕಿತು. 1918ರಲ್ಲಿ ರಷ್ಯವು ಕಮ್ಯುನಿಸಮ್ಮನ್ನೂ 1922ರಲ್ಲಿ ಇಟಲಿ

ಫ್ಯಾಸಿಸಮ್ ತತ್ವವನ್ನೂ ಅಂಗೀಕರಿಸಿದವು. ಪ್ರಜಾಪ್ರತಿನಿಧಿ ಪ್ರಭುತ್ವ ಅಥವ ಸಮ್ಮೇಳನ ಸರ್ಕಾರವು ಅವಹೇಳನಕ್ಕೊಳಗಾಯಿತು. ರಾಜಕೀಯ ದಲ್ಲಿ ಚರ್ಚೆಗಿಂತ ಚಳುವಳಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯಿತು. ಪ್ರಜಾ ಪ್ರಭುತ್ವದ ತತ್ವಗಳನ್ನು ಕಾರ್ಯಕಾರಿಯಾಗಿ ಮಾಡಲು ಬೇಕಾದ ಸಾಧನ ಗಳು ಅಸಮರ್ಪಕವಾದುದರಿಂದ ಪ್ರಬಲವಾದ ಕಾರ್ಯಾಂಗವು ರಚಿತವಾ ದರೆ ರಾಷ್ಟ್ರವು ಬಲಗೊಳ್ಳುವುದೆಂಬ ಭಾವನೆ ಮೂಡಿತು. ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಪೌರೇಯ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಂದಲೂ ವಾಕ್, ಮುದ್ರಣ ಸ್ವಾತಂತ್ರ್ಯಗಳಿಂದಲೂ ಈ ವಿಧವಾದ ಪರಸ್ಪರ ವಿರುದ್ಧ ಭಾವನೆಗಳಿಂದ ಒಂದು ನೂತನ ಸಮನ್ವಯಕ್ಕೆ 1914–1918 ರಲ್ಲಿ ನಡೆದ ಘೋರ ಯುದ್ಧವು ಹೆದ್ದಾರಿಯಾಯಿತು. ಪ್ರಜಾಪ್ರಭುತ್ವ ತತ್ವ ವನ್ನು ನಿರಾಕರಿಸಿ ರಾಷ್ಟ್ರ ಶಕ್ತಿಯನ್ನೆಲ್ಲಾ ರಾಷ್ಟ್ರ ನಾಯಕನಲ್ಲಿ ಮತ್ತು ಪಕ್ಷ ದಲ್ಲಿ ಕೇಂದ್ರೀಕರಿಸಿ ನವೀನ ರಾಜಕೀಯ ರೂಪಗಳನ್ನು ತಾಳಿದ ಫೆಸ್ಸಿಸ್ಟ್, ನಾಟ್ಸಿ ಮತ್ತು ಕಮ್ಯೂನಿಸ್ಟ್ ಸಿದ್ಧಾಂತಗಳು ಮೂಡಿದವು.

## ಯು. ಎಸ್. ಎಸ್. ಆರ್. — ರಷ್ಯ.

ರಷ್ಯದ ಕಾರ್ಮಿಕರು 1917 ರಲ್ಲಿ ಸ್ವರಾಜ್ಯವನ್ನು ಸ್ಥಾಪಿಸಿದರು; ತರುವಾಯ ಕಾರ್ಮಿಕರ ಸರ್ವಾಧಿಕಾರ (Dictatorship of the Proletariat) ಆರಂಭವಾಯಿತು; ಹಣವಂತರ ಸ್ವತ್ತು ಸರ್ಕಾರದ ಪಾಲಾಯಿತು; ಹಳ್ಳಿಯ ರೈತರ ಏಕೀಕರಣವಾಯಿತು; ನೂತನವಾಗಿ ರಚಿತವಾದ ಸರ್ಕಾರವನ್ನು ಕಮ್ಯೂನಿಸ್ಟ್ ಭಾವನೆಗಳಿಂದ ಸ್ಫೂರ್ತಿಗೊಂಡ ಪಕ್ಷವೇ ಸಮಸ್ತ ಸಂಘಗಳನ್ನೆಲ್ಲಾ ನಿಯಂತ್ರಿಸಿ ನಡೆಸಲಾರಂಭಿಸಿತು. 1936 ರಲ್ಲಿ ಅಂತರ್ರಾಷ್ಟ್ರೀಯ ಭ್ರಾಂತಿ ತೊಲಗಿ ರಾಷ್ಟ್ರೀಯ ಆಸೆಗಳು ಮೊಳೆಯಲಾರಂಭಿಸಿದವು. ರಷ್ಯ ರಾಜ್ಯವೂ ಎಲ್ಲಾ ರಾಷ್ಟ್ರಗಳಿಗೂ ಮಾದರಿಯಾಗಬೇಕೆಂಬ ಅಭಿಲಾಷೆ ಹುಟ್ಟಿತು. ಈ ಹಿನ್ನೆಲೆಯಲ್ಲಿ ಸಮಸ್ತ

*M. S. Bonn:* The Cilsis of European democracy P. 6.

ರಷ್ಯ ಪ್ರಜಾವರ್ಗವನ್ನು ಸಮತಾವಾದ ಪರವನ್ನಾಗಿ ಮಾಡುವ ನೂತನ ರಾಷ್ಟ್ರ ವಿಧಾನವು ಸೃಷ್ಟಿಯಾಯಿತು. ಪ್ರತಿನಿಧಿ ಸಭೆಯ ವರಣ ಕ್ಷೇತ್ರಗಳ ರಚನೆ, ಉಮೇದುವಾರರ ನಾಮಕರಣ, ಗುಟ್ಟಾಗಿ ಮತಕೊಡುವುದು ಮುಂತಾದ ಪ್ರಜಾ ಪ್ರಭುತ್ವದ ಸಾಧನಗಳನ್ನು ಅನುಸರಿಸಲಾಯಿತು. ಹೊಸ ಶಾಸನದ ಘೋಷಣೆಯ ತರುವಾಯ ಹುಟ್ಟಿಕೊಂಡು ಸುಪ್ರೀಂ ಕೌನ್ಸಿಲಿನ ಸಭೆಗಳಲ್ಲಿ ಮೂರನೇ ಎರಡು ಬಹುಮತ ಬಂದಾಗ ಶಾಸನ ಬದಲಾಗಬಹುದೆಂದೂ ಗೊತ್ತಾಯಿತು. ಪ್ರಜೆಗಳ ಮೂಲ ಭೂತ ಹಕ್ಕುಗಳನ್ನು, ಹಕ್ಕುಗಳಿಗೆ ಸರ್ಕಾರದ ಹೊಣೆಯನ್ನು ಅವುಗಳನ್ನು ಕಾಪಾಡುವ ಭರವಸೆಯನ್ನು ರಾಷ್ಟ್ರವಿಧಾನದಲ್ಲಿ ಸೂಚಿಸಲಾಯಿತು.

ಶಾಸನ ನಿಯಮಗಳಿಗೊಳಪಡುವ ಸುಪ್ರೀಂ ಕೌನ್ಸಿಲ್ ಅಥವ ಪ್ರಜಾ ಪ್ರತಿನಿಧಿ ಸಭೆಯೇ ರಾಷ್ಟ್ರದ ಶ್ರೇಷ್ಠ ಸರ್ಕಾರೀ ಸಂಸ್ಥೆ; ಇದು ಹೆಚ್ಚುಕಡಿಮೆ ಸಂಯುಕ್ತ ಸಂಸ್ಥಾನದ ಕಾಂಗ್ರೆಸ್‌ನಂತೆಯೇ ಅಧಿಕಾರವನ್ನು ನಡೆಸುತ್ತದೆ. ನೇರವಾಗಿ ಆರಿಸಿಬಂದ ಪ್ರತಿನಿಧಿಗಳನ್ನು ಜನರು ಹಿಂದಕ್ಕೆ ಕರೆಯಬಹುದು (Recall). ಅಲ್ಲಿ ಜನರಿಗೆ ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ ಕೊಡುವ ಹಕ್ಕು (Referendum) ಉಂಟು. ಮಂತ್ರಿವರ್ಗವು ಸುಪ್ರೀಂ ಕೌನ್ಸಿಲ್‌ಗೆ ಜವಾಬ್ದಾರಿ ಹೊತ್ತಿರುವುದು. ಇತ್ತೀಚೆಗೆ ರಷ್ಯದಲ್ಲಿ ಪ್ರಜಾ ಪ್ರಭುತ್ವ ಸರ್ಕಾರವು ಏರ್ಪಟ್ಟಿದೆಯೆಂದು ನಿರ್ದಿಷ್ಟವಾಗಿ ಹೇಳಬಹುದು. ಏಕನಾಯಕ ಪ್ರಭುತ್ವ, ಏಕಪಕ್ಷ ಪ್ರಭುತ್ವ, ಒಂದೇ ರೀತಿಯ ರಾಜಕೀಯ, ಒಂದೇ ರೀತಿಯಾದ ಸಮಾಜಿಕ ಅಭಿಪ್ರಾಯ, ಇವುಗಳಿಂದ ಕೂಡಿರುವ ಯು. ಎಸ್. ಎಸ್. ಆರ್. (U.S.S.R.) ರಾಷ್ಟ್ರದಲ್ಲಿ ಪ್ರಜಾ ಪ್ರಭುತ್ವದ ಅನೇಕ ಲಕ್ಷಣಗಳು ವಿಶದವಾಗಿವೆ.

## ಇಟಲಿ

ಇಟಲಿಯ ಇತರ ಪಕ್ಷಗಳಿಗೆ ವಿರೋಧಿಯಾಗಿ ಕಮ್ಯುನಿಸ್ಟ್ ತತ್ವಕ್ಕೆ ವಿರೋಧಿ ಎಂದು ಘೋಷಿಸಿ, ಫ್ಯಾಸಿಸ್ಟ್ ಪಕ್ಷವು ತತ್ವದ ತಳಹದಿಯಿಲ್ಲದೆಯೇ

ಎಂಬುದು ಆರಂಭವಾಯಿತು. ಮೊದಲು ಸಾಮ್ಯವಾದದ ಕಡೆಗೆ ಒಲಿದು ಕೊನೆಗೆ ಬಂಡವಾಳದ ತತ್ವ ಪ್ರತಿಪಾದನೆಯಲ್ಲಿ ತೊಡಗಿತು. ಪ್ಯಾಷಿಸಂನ ಬೆಳವಣಿಗೆ ಕಮ್ಯುನಿಸಂನಂತಲ್ಲ; ಅದರಲ್ಲಿ ನಿರ್ದೇಶನಿರಂತರತೆ ಕಡಿಮೆ, ಕಾಲಾನುಸರಣೆ ಹೆಚ್ಚು, ಕಮ್ಯುನಿಸಂ ತತ್ವನಿರಾಕರಣೆ ಅದರ ಮೂಲ ಭೂತ ಸಿದ್ಧಾಂತ ಅಂತರರಾಷ್ಟ್ರೀಯತೆಗೆ ಬದಲು ರಾಷ್ಟ್ರದ ಉಪಾಸನೆ; ಲೌಕಿಕತೆಗೆ ಬದಲು ಮತಭ್ರಾಂತಿ; ಆರ್ಥಿಕ ಜೀವನದಲ್ಲಿ ಜನ ಸ್ವಾಮ್ಯಕ್ಕೆ ವ್ಯಕ್ತಿಸ್ವಾಮ್ಯ— ಹೀಗೆ ಬಂಡವಾಳದ ಪದ್ಧತಿ ಸಹಾಯ ಪ್ಯಾಸಿಸಂಗೆ ಒದಗಿತು. ಆದರೆ ಪ್ರಜಾಪ್ರಭುತ್ವದ ನಿಷೇದಕ್ಕೂ ಪ್ಯಾಸಿಸಂನಲ್ಲಿ ಸ್ಥಾನ ವಿದೆ. ಆಸ್ತಿಪಾಸ್ತಿಗಳ ಹತೋಟಿ ವರಣಕರ್ತರ ಸಮಾಜಕ್ಕೆ ಬದಲು ಸಂಸ್ಥಾವಾದ (Corporations) 1924ರಿಂದ ಈಚೆಗೆ ನೂತನ ಶಾಸನದ ಪರಿಣಾಮವಾಗಿ ಪದಾರ್ಥಗಳ ಉತ್ಪನ್ನದ ಒಂದೊಂದು ಭಾಗಕ್ಕೂ ಕಾರ್ಮಿಕರು ಮತ್ತು ಮಾಲಿಕರು ಇರುವ, ಆ ವಿಭಾಗದ ಸ್ವತ್ತನ್ನು ನಿಯಂತ್ರಿಸುವ ಒಂದೊಂದು ಸಂಸ್ಥೆ ರಚಿತವಾಗಿ ಸರ್ಕಾರವು ಶಾಸಕಾಂಗ ದಲ್ಲಿ ಜನತೆಯ ಪ್ರತಿನಿಧಿಯಾಯಿತು.

ಕಾರ್ಮಿಕರಸಂಸ್ಥೆ, ರಾಷ್ಟ್ರವಾದ, ಕ್ರೈಸ್ತಮತ ಪ್ರಚಾರ, ಇವು ಮೂರು ಸಿದ್ಧಾಂತಗಳು ಹೊಸ ಸಂಗತಿಗಳಲ್ಲ; ಇಡೀ ರಾಷ್ಟ್ರವನ್ನು ಪ್ರಜಾ ವರ್ಗವನ್ನು ಆಮೂಲಾಗ್ರವಾಗಿ ಆಳುವ ಏಕ ಪಕ್ಷ ನಿರ್ಮಾಣವೇ ಚರಿತ್ರೆಯಲ್ಲಿ ಹೊಸ ಸಂಗತಿಯೆಂದು ಮುಸೋಲಿನಿಯ ಭಾವನೆ. ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ಕಮ್ಯುನಿಸಂ ತತ್ವಕ್ಕೂ ಫ್ಯಾಸಿಸಂ ತತ್ವಕ್ಕೂ ವ್ಯತ್ಯಾಸಗಳಿದ್ದರೂ, ಇವೆರಡೂ ಒಂದೇ ಬುಡ ಕಟ್ಟಿಗೆ ಸೇರಿದವು. ರಾಷ್ಟ್ರ ನಾಯಕನೇ ರಾಜಕೀಯಕ್ಕೆ ಪ್ರಸ್ತಾವನೆ; ರಾಷ್ಟ್ರವು ವ್ಯಕ್ತಿಗಿಂತ ಶ್ರೇಷ್ಠ; ಸಮಾಜದ ಒಂದು ಭಾಗ ರಾಜಕೀಯ ಪಕ್ಷದ ತಳಹದಿ, ಈ ಭಾಗ ಮಧ್ಯಮ ವರ್ಗದವರು. ಒಗ್ಗಟ್ಟಾಗಿ ಇಟಲಿಯನ್ನು ವಿಸ್ತರಿಸಬೇಕೆಂಬ ರಾಜಕೀಯ ಆಕಾಂಕ್ಷೆ, ಭಯಪಟ್ಟ ಸಾಮಾಜಿಕ ವರ್ಗಗಳಿಗೆ ತಾವು ಶಾಂತಿ ಈಯಬೇಕೆಂಬ ಹಂಬಲ—

ಇವೆರಡು ಬಯಕೆಗಳ ಪರಿಣಾಮವಾಗಿ ಪಕ್ಷ ಮೊದಲಾಯಿತು. ರಾಜ್ಯದ ಭದ್ರತೆ, ದೇಶದ ಉದ್ಧಾರ, ಸಾಮಾಜಿಕ ರಕ್ಷಣೆ, ರಾಜಕೀಯ ದಲ್ಲಿ ಐಕ್ಯ ಮತ್ತು ಒಗ್ಗಟ್ಟನ್ನು ರಕ್ತ ಪಾತದಿಂದ ಸಾಧಿಸತಕ್ಕದ್ದು 1922 ರಿಂದ 1929 ರ ವರಗೆ ರಾಜಕೀಯ ಐಕ್ಯ ಸಾಧನೆ, ಏಕ ಪಕ್ಷ, ಏಕ ನಾಯಕ ಇವರ ಸರ್ವಾಧಿಕಾರದ ಮೂಲಕ ಸಾಧ್ಯವಾಯಿತು. 1928ರ ಕಾನೂನಿನ ಪ್ರಕಾರ ಫ್ಯಾಸಿಸ್ಟ್ ಪಕ್ಷಕ್ಕೆ ಉಮೇದುವಾರರನ್ನು ಮತದಾತರು ಸೂಚಿಸುವ ಹಕ್ಕು ದೊರೆಯಿತು; ಮತ್ತೊಂದು ಶಾಸನದ ಪ್ರಕಾರ ಕಾರ್ಯ ಕಾಲಾಪಗಳ ಸಂಘಟನೆ, ಪಕ್ಷವು ಶಾಸನಕ್ಕೆ ಸಂಬಂಧಿಸುವ ಸಲಹೆಗಳನ್ನು ಕೊಡುವ, ಮುಖ್ಯ ಮಂತ್ರಿಗರ್ಹರನ್ನು ಸೂಚಿಸುವ ಹಕ್ಕು ದೊರೆಯಿತು. ರಾಷ್ಟ್ರನಾಯಕನು ಪಕ್ಷಕ್ಕೂ ಮತ್ತು ರಾಷ್ಟ್ರಕ್ಕೂ ನಾಯಕ, ಮುಖ್ಯ ಮಂತ್ರಿ, ಅವನ ಜವಾಬ್ದಾರಿ ರಾಜನಿಗೆ, ಪ್ರತಿನಿಧಿ ಸಭೆಗೆಲ್ಲ; ಅವನು ತನ್ನ ಸ್ಥಾನದಲ್ಲಿ ಚಿರಂಜೀವಿ; ಅವನಿಗೆ ಎದುರಾಳಿಗಳ ಭಯವಿಲ್ಲ. ಅವರಿಂದ ರಕ್ಷಣೆ ಬೇರೆ ಉಂಟು. ಅವನು ಪ್ರತಿನಿಧಿ ಸಭೆಗಿಂತ ಶ್ರೇಷ್ಠ. 1925ರಲ್ಲಿ ರಚಿತವಾದ ಶಾಸನ ಪ್ರಕಾರ ಅವನ ಅಪ್ಪಣೆಯಿಲ್ಲದೆ ಯಾವ ಸಲೆಹೆಯೂ ಪ್ರತಿನಿಧಿ ಸಭೆಯ ಮುಂದೆ ಬರುವ ಹಾಗಿಲ್ಲ; ಸಭೆಯು ತಿರಸ್ಕರಿಸದ ಸಲಹೆಯನ್ನು ಮೂರು ತಿಂಗಳಾದ ಮೇಲೆ ಅದರ ಮುಂದಿಡುವ ಹಕ್ಕು ಅವ ನಿಗೆ; ಶಾಸನಸಭೆಯಿಲ್ಲದೆಯೇ ರಾಜ್ಯವಾಳುವ ಅವಕಾಶವೂ ಉಂಟು. 1926ನೆ ಕಾನೂನಿನ ಪ್ರಕಾರ ದೊರೆಯೇ ಮಂತ್ರಿವರ್ಗದ ಇಷ್ಟದಂತೆ ಕಾನೂನುಗಳನ್ನು ಮಾಡಬಹುದು. ಸ್ಥಳೀಯ ಸಂಸ್ಥೆಗಳ ಮತ್ತು ಅವುಗಳ ಅಧಿಕಾರಗಳ ನಾಮಕರಣವೂ, ಸಂಘಗಳ ಶಾಸನಗಳೂ, ಅವುಗಳ ಕಾರ್ಯಕರ್ತರ ಪಟ್ಟಿಯೂ, ನಿರ್ಣಯವೂ 1925 ನೆ ಡಿಸೆಂಬರ್ ಕಾನೂನಿನ ಪ್ರಕಾರ ಸರ್ಕಾರದ ಕೈ ಸೇರಿತು.

ಇಟಲಿಯ ಪ್ರಜೆಗಳ ಉದ್ಧಾರವೇ ಜನರ ಆರ್ಥಿಕ ಜೀವನವನ್ನು ಪ್ರತಿ ಬಿಂಬಿಸುವ ಸಂಸ್ಥೆ (Corporats) ಯ ಧ್ಯೇಯವಾಯಿತು. ಸಂಸ್ಥಾವಾದಕ್ಕೆ ಏಕಪಕ್ಷ, ಸಮಿಷ್ಟಿ ರಾಜ್ಯ, ಜನರಲ್ಲಿ ಅಶಾಂತಿ ಇವು ಅತ್ಯಗತ್ಯವೆಂದು

ಮುಸೋಲಿನಿಯ ಭಾವನೆಯಾಗಿತ್ತು. ಜಗತ್ತಿನ ಆರ್ಥಿಕ ಬೆಳೆವಣಿಗೆಯಲ್ಲಿ ಅರ್ಥ ಒಂದು ಹಂತವಾಗಬಹುದು, ಇಲ್ಲವೇ ಸಮಾಜದಲ್ಲಿ ನ್ಯಾಯವನ್ನು ದೊರಕಿಸುವ ಸಾಧನವಾಗಬಹುದು. ಸಂಸ್ಥಾವಾದವೆಂದರೆ ಏನಾದರೂ ಆಗಬಹುದು. ಅದು ಇಟಲೀ ದೇಶದ್ದು, ಜಗತ್ತಿಗೂ ಸೇರಿದ್ದು; ರಾಷ್ಟ್ರದ ಅಧಿಕಾರ, ಸಮಾಜದಲ್ಲಿ ನ್ಯಾಯ; ರಾಜ್ಯ ರಚನೆ, ವ್ಯವಸ್ಥೆ, ಆತ್ಮಯೋಗ; ಯುದ್ಧ, ಶಾಂತಿ; ಸಮಾನತೆ, ಶ್ರೇಣೀ ಭಾವನೆ. 1936 ರಿಂದೀಚಿನ ಸರ್ಕಾರದ ಮುನ್ನಡೆಯಲ್ಲಿ ಸಂಸ್ಥೆಗಳು ಒಂದಾದವು. ಫ್ಯಾಸಿಸಂ ತತ್ವವು ವ್ಯಕ್ತಿಗೂ ರಾಷ್ಟ್ರ ಸರ್ಕಾರಕ್ಕೂ ಸಂಸ್ಥೆಗಳ ಮೂಲಕ ಸಂಬಂಧವನ್ನು ಕಲ್ಪಿಸಿತು; ರಾಜ್ಯದ ರೂಪರಚನೆಗಳ ಹೊಸ ಕಲ್ಪನೆಯನ್ನು ಮಾಡಿ ಕೊಟ್ಟಿತು. ಅದನ್ನು ಹೊಸ ಪಕ್ಷ ಪ್ರಜಾ ಪ್ರಭುತ್ವ ಎನ್ನುವವರೂ ಇದ್ದಾರೆ. ಸಮಷ್ಠಿವಾದವನ್ನು ಬಿಟ್ಟರೂ ಸಂಸ್ಥಾವಾದವು ಪ್ರಜಾ ಪ್ರಭುತ್ವವಲ್ಲ, ಅದರ ತಳಹದಿ ಜನರಲ್ಲ. ಅದು ಆರ್ಥಿಕ ಜಾತಿ ಬೇಧಗಳಾಧಾರದ ಮೇಲೆ ನಿಂತಿದೆ. ಇದು ರಾಜಕೀಯ ವ್ಯವಸ್ಥೆಯ ಭದ್ರತೆಯನ್ನು ಸೂಚಿಸುವುದಿಲ್ಲ. ರಾಜಕೀಯದ ಉಪಕರಣ ಆರ್ಥಿಕ ಜೀವನ; ಅದಕ್ಕೆ ವಿಕಲ್ಪವಲ್ಲ. ಸಂಸ್ಥಾವಾದವು ಆರ್ಥಿಕ ಜೀವನದ ವಿಕಾಸವನ್ನು ರಾಜಕೀಯ ವ್ಯವಸ್ಥೆಗಳು ಸಾಧಿಸಬೇಕೆಂದು ಬಯಸುತ್ತದೆ. ಅವೆರೆಡು ಒಂದಕ್ಕೊಂದು ಹೆಣೆದು ಕೊಂಡಿದ್ದರೂ, ರಾಜಕಾರಣ ಮತ್ತು ಆರ್ಥಿಕ ಜೀವನಗಳು ಬೇರೆಬೇರೆ.

ಮುಸೋಲಿನಿಯು ಸಂಸ್ಥಾವಾದದ ಆಧಾರದ ಮೇಲೆ ರಚಿಸಿದ ಸರ್ಕಾರವು ಸಂಯುಕ್ತ ರಾಷ್ಟ್ರಗಳ ಆಕ್ರಮಣದಿಂದ ನಾಶವಾಯಿತು. ಇಟಲಿಯ ರಾಷ್ಟ್ರವು ಯುದ್ಧಾನಂತರ ತನ್ನ ರಾಜಕೀಯ ಮತ್ತು ಆರ್ಥಿಕ ಜೀವನಕ್ಕನುಗುಣವಾದ ಕಲ್ಪನೆಗಳೊಳಗೊಂಡ ಮತ್ತು ಪ್ರಜಾ ಪ್ರಭುತ್ವ ತತ್ವದಿಂದ ಸ್ಫೂರ್ತಿಗೊಂಡ ಸರ್ಕಾರವನ್ನು ರಚಿಸಬೇಕಾಯಿತು.

## ಜರ್ಮನಿ

ಹತ್ತೊಂಬತ್ತನೆಯ ಶತಮಾನದಿಂದಲೂ ಎರಡು ಭಾವನೆಗಳು

ಜರ್ಮನಿಯಲ್ಲಿ ಬೇರೂರಿವೆ. ರಾಜ್ಯದ ಉತ್ಕೃಷ್ಟತೆ ಮತ್ತು ಪ್ರಭಾವ ಮುಖ್ಯ ವಾದವು. ರಾಜ್ಯವು ಜನರಿಂದ ಬಂದುದಲ್ಲ; ಅದೊಂದು ಮಹಾವ್ಯಕ್ತಿ; ಅದು ರಾಜನಲ್ಲಿ ಐಕ್ಯವಾಗಿದೆ. ರಾಜ್ಯದ ಇಚ್ಛೆ ರಾಜನದು ; ರಾಜನಿಗೆ ಸಹಾಯ ಅವನ ಸೇನೆ ಮತ್ತು ಅಧಿಕಾರವರ್ಗ. ಅವನೇ ರಾಜ್ಯದ ನಿರ್ದೇಶಕ, ಮೊಟ್ಟ ಮೊದಲು ಸೇವಕ. ಮತ್ತೊಂದು ಭಾವನೆ, ಜನರೇ ರಾಜ್ಯವನ್ನು ನಿರ್ಮಿಸುವವರು ; ಅವರೇ ರಾಜ್ಯದ ವಸ್ತು. ಜನರ ಮನಸ್ಸೇ ರಾಜಕೀಯ ದಲ್ಲಿ ಕೊನೆಯ ಮಾತು. ರಾಜ್ಯವು ಜನರ ಮನಸ್ಸನ್ನು ಹೊಕ್ಕು ಭದ್ರ ವಾದ ಸ್ಥಾನವನ್ನು ಗಳಿಸಿಕೊಂಡಿದೆ. ಜನರ ಇಚ್ಛೆಯನ್ನು ರಾಜಕೀಯದಲ್ಲಿ ಶಾಸನವನ್ನಾಗಿ ಮಾಡುವುದು ಮತ್ತು ಜನರ ಮನಸ್ಸನ್ನು ಎತ್ತಿ ಆಡುವ ಸಂಸ್ಥೆ ರಾಜ್ಯ. ಹೆಗೆಲ್ ತತ್ವಜ್ಞಾನಿಯು ಹೇಳಿದಂತೆ ಜನರ ಒಗ್ಗಟ್ಟು ಒಬ್ಬ ವ್ಯಕ್ತಿಯಲ್ಲಿ ಅದೂ ಅಧಿಕಾರ ನಡೆಸುವ ವ್ಯಕ್ತಿಯಲ್ಲಿ ಸೇರಿಕೊಂಡಿದೆ. 1914ರ ವರೆಗೆ ಜರ್ಮನಿಯಲ್ಲಿ ನಿರಂಕುಶಾಧಿಕಾರ ನಡೆಯುತ್ತಿತ್ತು. 1919 ರಿಂದ 1930ರ ವರೆಗೆ ಸಾಮ್ಯವಾದವು ಮತ್ತು ಮತಾಚಾರಗಳೊಡನೆ ಬೆರೆತ ಶಾಸನಾಧಿಕಾರ: ಅಧ್ಯಕ್ಷನ ನಿರಂಕುಶತೆ ಒಂದು ಕಡೆ, ನೇರವಾದ ಪ್ರಜಾಧಿ ಕಾರ ಇನ್ನೊಂದು ಕಡೆ. 1919 ರಿಂದ 1930ರ ವರೆಗೂ ನಡೆದುಕೊಂಡು ಬಂದ ವೈಮಾರ ರಾಷ್ಟ್ರವಿಧಾನಕ್ಕೂ ಜರ್ಮನಿಯ ಇತಿಹಾಸ ಮತ್ತು ಅಭಿಪ್ರಾಯಗಳಿಗೂ ಯಾವ ಸಂಭಂಧವೂ ಇರಲಿಲ್ಲ. ವೈಮಾರ್ ಶಾಸನವು, ಸೋಲಿನ ನೆನಪಿನಿಂದಲೂ ಪ್ರಜಾಪ್ರಭುತ್ವಗಳ ಸಾಮ್ರಾಜ್ಯ ಭಾವನೆ ಮತ್ತು ಶೋಷಿಸುವ ವಿಧಾನಗಳಿಂದಲೂ, ಕೂಡಿದ ತೇಪೆಯ ರಚನೆಯಾಗಿತ್ತು. 1933ರಲ್ಲಿ ಹಳೆಯ ಜರ್ಮನ್ ರಾಜಕೀಯದ ಪುನರ್‌ನಿರ್ಮಾಣ ಆರಂಭ ವಾಯಿತು. ರಾಜಕಾರಣದಲ್ಲಿ ಮಾರ್ಗದರ್ಶಿಯಾದ ನಾಯಕ, ಅವನ ಬೆನ್ನಿನ ಹಿಂದೆ ಅವನ ಬೆಂಬಲವಾಗಿ ಒಗ್ಗಟ್ಟಾದ ಪ್ರಜೆ ಇದಿಷ್ಟೂ ಹಿಂದಿನ ಭಾವನೆಗಳು ; ಹಿಂದಿನದಾದರೂ ನಾಯಕನ ರೀತಿ, ಹೊಸಸ್ಫೂರ್ತಿ ಮತ್ತು ರೂಪವನ್ನು ತಾಳಿತು ; ಅವನ ಬೆಂಬಲಕ್ಕೆ ಪಕ್ಷ ; ಜನರು ಆರ್ಯಕುಲದ ಶುದ್ಧತೆಯ ಭಾವನೆಯ ಆಧಾರದ ಮೇಲೆ ನಿರ್ಮಾಣವಾದ ಒಗ್ಗಟ್ಟು.

ಪಕ್ಷಗಳ ಹೋರಾಟಗಳ ಪರಿಣಾಮವಾಗಿ 1919 ನಾಟ್ಸಿ ಪಕ್ಷದ ಅಂಕುರಾರ್ಪಣ, ಈ ಹೋರಾಟಗಳ ಮುದ್ರೆ ಅದರ ಮೇಲೆ ಅಚ್ಚಾಗಿದೆ. ಅದೊಂದು ಪ್ರತ್ಯೇಕ ಜೀವನದ ದರ್ಶನ, ಮೇಲ್ಮೆಯ ಸಲಕರಣೆ. ಪ್ರಜಾ ಪ್ರಭುತ್ವದ ಚೌಕಟ್ಟಿನಲ್ಲಿ ಬೆಳೆದು, ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಪ್ರಜಾ ಪ್ರಭುತ್ವದ ಪ್ರವೃತ್ತಿಯನ್ನೇ ತೊರೆಯಿತು. ಈ ವಿಧವಾದ ಜರ್ಮನ್ ರಾಷ್ಟ್ರದ ಪ್ರಗತಿಯಲ್ಲಿ ಅಮಾನುಷವಾಗಿ ಸರ್ವಾಂತರ್ಯಾಮಿಯಾಗಿ ರಾಜಕೀಯ ಸಾಮಾಜಿಕ ಚಟುವಟಿಕೆಗಳಿಗೆ ರಷ್ಯರಾಷ್ಟ್ರವು ಬೆಂಬಲವಾಯಿತು.

ನಾಟ್ಸಿ ಪಕ್ಷವು ರಾಷ್ಟ್ರೀಯತೆ ಮತ್ತು ಸಾಮ್ಯವಾದಗಳು ಬೆಸೆದು ಬಂದಿದ್ದು; ರೈತರು, ವರ್ತಕರು, ಮಧ್ಯಮ ವರ್ಗಗಳು, ಯುದ್ಧದಿಂದ ಹಿಂತಿರಿಗಿದ ಯುವಕರು, ಇವೇ ಮುಂತಾದವರು ನಾಟ್ಸಿ ಪಕ್ಷದ ಸದಸ್ಯರು. ಶುದ್ಧರಾಗಿ, ಆತ್ಮ ಗೌರವವನ್ನು ಮತ್ತು ಶ್ರೇಷ್ಠತೆಯನ್ನು ಕಾಪಾಡಿಕೊಳ್ಳ ಬೇಕಾದ ಜವಾಬ್ದಾರಿ ನಾಟ್ಸಿ ಪಕ್ಷಪಾತಿಗಳದು. ಫಾಸ್ಸಿಸ್ಟ್ ಪಕ್ಷದಂತೆ ನಾಟ್ಸಿ ಪಕ್ಷವು ಕಮುನಿಸ್ಟ್ ಪಕ್ಷದ ಮತ್ತು ಕಮ್ಯುನಿಸ್ಟ್ ಸಿದ್ಧಾಂತದ ವಿರೋಧಿ. ಫ್ಯಾಸ್ಸಿಸ್ಟ್ ಸಂಸ್ಥೆಯಂತೆ ಅದೂ ವಿವಿಧ ಸಾಮಾಜಿಕ ವರ್ಗಗಳ ಉಂಡೆ ಫ್ಯಾಸಿಸ್ಟ್ ತತ್ವವು ಪಕ್ಷ ಸ್ಥಾಪನೆಯಾದ ತರುವಾಯ ಪ್ರತಿಪಾದನೆ ಯಾಯಿತು; ನಾಟ್ಸಿ ತತ್ವವು ಪಕ್ಷವು ಅಧಿಕಾರಕ್ಕೆ ಬರುವ ಮುಂಚೆಯೇ ಜನರಲ್ಲಿ ಪ್ರಚಾರವಾಗಿತ್ತು. ವಂಶಪಾರಂಪರ್ಯವಾಗಿಬಂದ ರಾಜನಿಗೆ ಬದಲು, ಜನರಿಂದ ಬಂದ ನಾಯಕನೂ ಜರ್ಮನ್ ಸಂಪ್ರದಾಯದ ಮೇಲೆ ನಿಂತಿರುವನು. ಸರಿಯಾದ ಪ್ರಾತಿನಿಧ್ಯವೆಂದರೆ ಜನರ ಇಚ್ಛೆ, ಅವರೊಡನೆ ಒಂದಾಗಿರುವ ಪ್ರತಿನಿಧಿಯಲ್ಲಿ ಮೂರ್ತಿವತ್ತಾಗಿರುವುದು. ಈ ಪ್ರತಿನಿಧಿಯೇ ಪಕ್ಷದ ನಾಯಕ. ನಾಯಕನು ಯಾರ ಪ್ರತಿನಿಧಿಯಾಗಿ ಅಲ್ಲ; ಅದಕ್ಕಿರುವ ಒಂದೇ ಮಿತಿ ಅನುಯಾಯಿಗಳಿರಬೇಕೆಂಬುದೇ. ನಾಯಕನು ತನ್ನ ಕಡೆಗೆ ಹತ್ತಾರು ಮಂದಿಯನ್ನು ಆಕರ್ಷಿಸಿದರೆ ಈ ಎಲ್ಲೆಯನ್ನು ಅವನು ದಾಟುತ್ತಾನೆ: ತನ್ನ ಕಾರ್ಯಕಲಾಪಗಳಿಗೆ ಜನರ

ಪ್ರತಿನಿಧಿಗಳ ಒಪ್ಪಿಗೆ ಕೇಳುವುದು ಅವನ ಭಾವಲೀಲಾ ವಿಲಾಸ, ಶಾಸನ ಬದ್ಧ ಕರ್ತವ್ಯವಲ್ಲ.

ನಾಟ್ಸಿ ಪಕ್ಷಕ್ಕೆ ಯಾರಿಗೂ ಪ್ರವೇಶವಿಲ್ಲ. ಅದಕ್ಕೆ ಬೇರೆ ದೀಕ್ಷೆಯಿದೆ; ಅದರ ಸದಸ್ಯರಿಗೆ ಗಣ್ಯತೆಯಿದೆ, ಅದರ ಸದಸ್ಯರಿಗೆ ಮೀಸಲಾದ ಮಹಾ ಕಾರ್ಯವಿದೆ, ನಿಷ್ಠೆಯಿದೆ; ಈ ಭಾವನಾಲಹರಿಯು ಬಹುಮುಖವಾಗಿ ಅನೇಕ ಸಂಸ್ಥೆಗಳ ರೂಪದಲ್ಲಿ ಹರಡುವುದು. ಪಕ್ಷಪಾತಿಗಳಿಗಾಗಲೀ ಪ್ರಜೆಗಳಿಗಾಗಲೀ ವೈಯಕ್ತಿಕ ಅಭಿಮತವಿಲ್ಲ. ಅವರ ಬಾಳಿನ ಹೊಸರೀತಿ, ಮತ್ತು ಸ್ಫೂರ್ತಿ ನಾಯಕನ ಅನುಕುರುಣೆಯಿಂದ ಸಾಧ್ಯ; ಅಭಿಮತದ ಪ್ರವಾಹ, ನಾಯಕನಿಂದ ಹೊರಟು ಪಕ್ಷದ ಮೂಲಕ ಜನರಿಗೆ ಸೇರುವುದು. ಈ ನ್ಯಾಷನಲ್ ಸೋಷಿಯಲಿಸ್ಟ್ ತತ್ವವು 1934ನೇ ಜನವರಿ 30ರ ಶಾಸನದ ಪ್ರಕಾರ ನ್ಯಾಯಸ್ಥಾನಗಳಿಗೂ ಕೈಗಾರಿಕೆಗಳಿಗೂ ಅನ್ವಯಿಸಿತು; ಕೆಲಸಗಾರರ ಸಂಸ್ಥೆಗಳು ಸಾಮಾಜಿಕ ಸಂಸ್ಥೆಗಳು ಪಕ್ಷದಲ್ಲಿ ಐಕ್ಯವಾದುವು; ಯಹೂದ್ಯರನ್ನು ರಾಷ್ಟ್ರದಿಂದ ದೂಡಿ ಆರ್ಯಕುಲವನ್ನುಳಿಸಲು ವಿವಿಧ ಸಂಸ್ಥೆಗಳ ಮತ್ತು ಪ್ರಜೆಗಳ ಸಂಘಟ್ಟನೆಯಾಯಿತು; ಸ್ಥಳೀಯ ಸರ್ಕಾರ, ಪಕ್ಷಗಳು. ಸ್ವತಂತ್ರಸಾಮಾಜಿಕ ಸಂಸ್ಥೆಗಳು, ಇವೇ ಮುಂತಾದ ಪ್ರಜಾಪ್ರಭುತ್ವದ ಅಡಿಗಲ್ಲುಗಳು ಹಾರಿಹೋಗಿ, ಜರ್ಮನ್ ಕುಲಗೋತ್ರ ಒಡಹುಟ್ಟುವಿನ ಸಮಷ್ಟಿಯಾಗಿ, ಒಗ್ಗಟ್ಟು, ವೀರೋಪಾಸನೆ ಎಲ್ಲಾ ಆಸೆಗಳನ್ನು ಒಳಗೊಂಡ ಅಪವಿತ್ರವಾದ ತತ್ವವಾಯಿತು—ನಾಟ್ಸಿ ತತ್ವ. ಈ ತತ್ವದ ಅವತಾರ ಜರ್ಮನ್ ರೈಕ್ (Reich). ಅದರ ಗುರಿ ಸಮಸ್ತರಾಷ್ಟ್ರಗಳ ಮತ್ತು ಅವರ ಪ್ರಜೆಗಳ ನಾಯಕತ್ವ; ಅದರ ವಿಧಿ ಆರ್ಯಕುಲಪರಿಪಾಲನೆ; ಆಕ್ರಮಿತರಾಷ್ಟ್ರಗಳಲ್ಲಿ ಬೇರೇಬಾಳಿಲ್ಲ. ಅವು ರೈಕ್‌ನ ಅಧಿಕಾರವನ್ನು ಅನುಸರಿಸಬೇಕು. ಜರ್ಮನ್‌ರಾಷ್ಟ್ರದಲ್ಲಿರುವುದು ಒಂದೇ ರಾಜ್ಯ, ಒಂದೇ ಜನಾಂಗ, ಒಬ್ಬನೇ ನಾಯಕ. ಉಳಿದ ಸಮಸ್ತರಾಷ್ಟ್ರಗಳಂತೆ ಜರ್ಮನ್ ರಾಷ್ಟ್ರದಲ್ಲಿಯೂ ಆರ್ಥಿಕ ಸ್ವಾವಲಂಬನೆಯಿರಬೇಕು. ಜರ್ಮನಿಯಲ್ಲಿ ರಷ್ಯ ಮತ್ತು ಇಟಲಿಗಳಂತೆ ಒಂದೇ ಪಕ್ಷವಿರಬೇಕು; ಇಟಲಿಯಲ್ಲಿರುವಂತೆ

ಸಾಮಾಜಿಕ ಆರ್ಥಿಕ ಕಲಾಪಗಳಿವೆ; ಅಧಿಕಾರಿಗಳ ಲಾಲನೆ ಪಾಲನೆಗಳಿವೆ. ಅದರ ಆವರಣ ಆರ್ಯ ಜನಾಂಗ; ಜರ್ಮನ್‌ರಾಷ್ಟ್ರ, ರೈಕ್, ಅದರ ನಾಯಕ ಫೂರರ್, ಅಂತರ್ರಾಷ್ಟ್ರೀಯ ಅಭಿಲಾಷೆ ಅಷ್ಟಿಲ್ಲದಿದ್ದರೂ, ಜಗತ್ತೆಲ್ಲವನ್ನೂ ಜರ್ಮನಿಯಾಗಿಸಬೇಕೆಂಬ ಉತ್ಕಟ ಆಕಾಂಕ್ಷೆ, ಎಲ್ಲೆಲ್ಲಿಯೂ ಜರ್ಮನ್ ಜೀವನ ಮತ್ತು ಸಂಸ್ಕೃತಿಯನ್ನು ಹರಡಬೇಕೆಂಬ ಹಟ ನಾಯಕನದು. ಜರ್ಮನಿಯಲ್ಲಿ ಕೊನೆಯ ಮಾತು ಒಂದು ಹೊಸದರ್ಶನದ ಮೇಲೆ ನಿಂತ್ತಿತ್ತು. ಸಂಯುಕ್ತ ರಾಷ್ಟ್ರದ ಸೈನ್ಯಗಳು, ಬ್ರಿಟಿಷ್‌ಚಕ್ರಾಧಿಪತ್ಯದ ಸೈನ್ಯಗಳು, ಜರ್ಮನಿಯು ಇತ್ತೀಚೆಗೆ ಆಕ್ರಮಿಸಿದ ರಾಷ್ಟ್ರಗಳನ್ನು ಸಂಕೋಲೆಗಳಿಂದ ಬಿಡಿಸಿ ಆತ್ಮನಿರ್ಣಯದ ಹಕ್ಕನ್ನು ಗಳಿಸಿಕೊಟ್ಟು, ಜರ್ಮನಿಯ ಗಡಿಯನ್ನು ದಾಟಿ, ಜರ್ಮನಿಸೈನ್ಯ, ಶಿಸ್ತು ಮತ್ತು ಇತರ ಸನ್ನಾಹಗಳನ್ನು ನಿರ್ಮೂಲಮಾಡಿ ರಾಷ್ಟ್ರವನ್ನು ಛಿದ್ರಛಿದ್ರವಾಗಿ ಒಡೆದವು. ನಾಟ್ಸಿತತ್ವವು ನಿರ್ಮೂಲವಾಯಿತು. ಈಗ ಐಕ್ಯ ಜರ್ಮನಿಯಾಗಬೇಕೇ ಅಥವ ಎರಡು ಜರ್ಮನಿಗಳಿರಬೇಕೇ ಎಂಬ ವಿಷಯದಲ್ಲಿ ರಷ್ಯಕ್ಕೂ ಮತ್ತು ಅಮೇರಿಕಾ ಮತ್ತು ಇಂಗ್ಲೆಂಡಿಗೂ ಭಿನ್ನಾಭಿಪ್ರಾಯಗಳಿವೆ.

## ರಷ್ಯ ಜರ್ಮನಿ ಮತ್ತು ಇಟಲಿ ರಾಷ್ಟ್ರಗಳ ಏಕಪಕ್ಷ ಪ್ರಭುತ್ವ

ನೈಸರ್ಗಿಕವಾದ, ಮತ್ತು ಸಮರ್ಪಕವಾದ ಪರಿಹಾರ ಸಿಕ್ಕದ ಸಮಸ್ಯೆಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ, ಬಲಪ್ರಯೋಗದಿಂದಲೆ ಪ್ರಗತಿ ಪ್ರತಿಬಂಧಕವಾದ ವರ್ಗನಾಶದಿಂದ ಬಹುಸಂಖ್ಯಾತರ ಅಭ್ಯುದಯವನ್ನು ಸಾಧಿಸಬೇಕೆಂಬುದು ಮೂಲಭೂತವಾದ ತತ್ವ. ಹಿಂಸಾತ್ಮಕ ಕಾರ್ಯಗಳಿಂದಲೇ ಜೀವನದಲ್ಲಿ ನೂತನವಾದ ಮತ್ತು ಪ್ರಗತಿಪರ ಕಲ್ಪನೆಗಳ ಸಮನ್ವಯವನ್ನು ಪಡೆಯಬಹುದು. ಆಧುನಿಕ ರಾಜಕೀಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹಿತಸಾಧನೆಯೇ ರಾಷ್ಟ್ರದ ಮುಖ್ಯ ಧ್ಯೇಯವಾದುದರಿಂದ ಶಕ್ತಿಯುತವಾದ ಒಂದು ಪಕ್ಷದ ನಿಯಂತ್ರಣಕ್ಕೆ ರಾಷ್ಟ್ರದ ವ್ಯವಹಾರಗಳು ಒಳಗಾಗಬೇಕು. ಇಂತಹ ಪ್ರಭಾವಯುತವಾದ ಪಕ್ಷವು ರಚನೆಯಾಗ

ದಿದ್ದರೆ ರಾಷ್ಟ್ರವು ಪ್ರಗತಿಪರವಾಗಲಾರದು. ಏಕ ಪಕ್ಷ ಪ್ರಭುತ್ವಗಳ ಸಿದ್ಧಾಂತಗಳ ಪ್ರಕಾರ ರಾಷ್ಟ್ರ ಪ್ರಬಲತೆಯೇ ಉದಾತ್ತವಾದ ಧ್ಯೇಯವಾದುದರಿಂದ ಈ ಧ್ಯೇಯವನ್ನು ಕಾರ್ಯಕಾರಿಯಾಗಿ ಮಾಡಲು ಅನೀತಿಯುತವಾದ ಸಾಧನೆಗಳನ್ನಾದರೂ, ಉಪಯೋಗಿಸಬಹುದು. ಎಲ್ಲಿ ಹಿಂಸಾವೃತ್ತಿ ಮತ್ತು ಪ್ರತಿಸ್ಪರ್ಧಿಸುವವರ ನಾಶ, ರಾಜಕೀಯ ಜೀವನದಲ್ಲಿ ಪ್ರಾಚೀನ ಸಾಧನೆಗಳು ಆಚರಣೆಯಲ್ಲಿ ಇವೆಯೋ ಅಂತಹ ರಾಷ್ಟ್ರವನ್ನು ಏಕನಾಯಕ ಪ್ರಭುತ್ವ ( Dictatorship ) ವೆಂದು ಕರೆಯಬಹುದು.

ಏಕನಾಯಕ ಪ್ರಭುತ್ವವು ಹಿಂಸಾತ್ಮಕ ಕಾರ್ಯಗಳಿಂದ ಸಾಧಿಸಲ್ಪಟ್ಟ ಕ್ರಾಂತಿಯ ಆಧಾರದ ಮೇಲೆ ರಚಿತವಾಗುವುದು. ಸಮತಾವಾದ ಸಿದ್ಧಾಂತ, ಫ್ಯಾಸಿಸ್ಟ್ ಮತ್ತು ನ್ಯಾಷನಲ್ ಸೋಷಿಯಲಿಸ್ಟ್ ಸಿದ್ಧಾಂತಗಳು, ರಾಷ್ಟ್ರದ ರಚನಾತ್ಮಕ ಕಾರ್ಯಗಳಿಗೂ ಮತ್ತು ಅಂತರ ರಾಷ್ಟ್ರೀಯ ಸ್ಪರ್ಧೆಯಲ್ಲಿ ಪ್ರಶಸ್ತಿಗೂ, ಕ್ರಾಂತಿಯೇ ಮೂಲ ಸಾಧನೆಗಳೆಂದು ತಿಳಿದಿವೆ. ಎಲ್ಲೆಲ್ಲಿಯೂ ಜೀವನದ ವಿಚಾರದಲ್ಲಿಯೂ, ಕ್ರಾಂತಿಯ ಚಿಹ್ನೆಗಳು ಕಾಣಬರುತ್ತವೆ. ಅವ್ಯಕ್ತವಾಗಿ ಯಾರಿಗೂ ತಿಳಿಯದಂತೆ ರಾಜಕೀಯದಲ್ಲಿ ಮತ್ತು ಸಾಮಾಜಿಕದಲ್ಲಿ ಆಗುವ ಪರಿವರ್ತನೆಯೇ ಕ್ರಾಂತಿಯೆನ್ನಬಹುದು. ಕ್ರಾಂತಿಯು ಸಮಾಜದ ಕಟ್ಟು ನಿಯಮಗಳ ಆಧಾರದ ಮೇಲೆ ನಿಂತಿದೆ. ಸಮುದಾಯದ ಸಂಪತ್ತು ಶೋಷಕ ವರ್ಗದವರಿಗೆ ಮಾತ್ರ ಸೇರಿ ಶೋಷಿತ ವರ್ಗದವರಿಗೆ ಕೊಂಚವೂ ಸೇರದೇ ಇರುವುದು, ಮತ್ತು ಶೋಷಕ ಮತ್ತು ಶೋಷಿತ ವರ್ಗಗಳ ಪರಸ್ಪರ ಸಂಬಂಧವು ಕಡಿದು ಹೋಗುವುದು ಇವು ಕ್ರಾಂತಿಯ ಆವಿಷ್ಕರಣಕ್ಕೆ ಒಂದು ಪ್ರಬಲವಾದ ಕಾರಣ. ಕ್ರಾಂತಿಯಿಂದ ಸಮಾಜದ ವಿಪ್ಲವ, ವರ್ಗಗಳ ಘರ್ಷಣೆ, ತತ್ಪರಿಣಾಮವಾಗಿ, ಶೋಷಕ ವರ್ಗದ ದುರ್ಬಲತೆ ಅಥವಾ ನಾಶ, ಮತ್ತು ಆರ್ಥಿಕ ಮತ್ತು ರಾಜಕೀಯ ಬಂಧನಗಳಿಂದ ಶೋಷಿತ ವರ್ಗದ ವಿಮೋಚನೆ, ನವೀನ ಸಮಾಜದ ಕಲ್ಪನೆ ಮತ್ತು ಸೃಷ್ಟಿ — ಈ ಪರಿಣಾಮಗಳು ಮತ್ತು ನಿಯಮಗಳು, ವೈಜ್ಞಾನಿಕವಾಗಿಯೇ ಇವೆ. ಕ್ರಾಂತಿಯ ಮುನ್ನ ಶೋಷಕ

ವರ್ಗವು ಸಮಾಜದಲ್ಲಿ ಇತರ ವರ್ಗಗಳ ವಿಶ್ವಾಸರಹಿತವಾಗಿ ಬೇರೆಯಾಗುತ್ತದೆ. ಆದರ ಪರಿಣಾಮವಾಗಿ ಆದರ ಬಲ, ಗೌರವ ಮತ್ತು ರಾಜ ಶಕ್ತಿ ಕುಂದುತ್ತದೆ. ಇತರ ವರ್ಗಗಳ ಮತ್ತು ಸಮೂಹಿಕ ಸೌಹಾರ್ದವು ಅಳಿದು ಹೋಗಿದೆಯೆಂಬ ಚೈತನ್ಯ ತಲೆದೋರುತ್ತದೆ. ಶೋಷಕ ವರ್ಗದ ·ಯಂತ್ರ ಶಕ್ತಿ ಸಡಿಲವಾಗಿ ಛಿದ್ರ ಛಿದ್ರ ವಾಗಿ ಒಡೆಯಲು ಪ್ರಾರಂಭವಾಗುತ್ತದೆ. ಮತ್ತೊಂದು ಕಡೆ ಈ ವಿಧವಾದ ಸನ್ನಿವೇಶದಲ್ಲಿ, ಜನತೆಯಲ್ಲಿ ಅಸಮಾಧಾನ ಅತೃಪ್ತಿಗಳು ತಲೆದೋರುವುವು. ಶ್ರೇಣಿ ಚೇತನವಾಗುವುದು. ಕ್ರಮ ವಿಕಾಸದಲ್ಲಿ ಬಂಧನಗಳಿಂದ ವಿಮೋಚನೆಯು ನಿಧಾನವಾಗುವುದು; ಅಲ್ಲದೆ ಪ್ರಾಚೀನ ವಸ್ತುಗಳ ಸಂಬಂಧವಿದ್ದಲ್ಲಿ, ಅಥವಾ ಪ್ರಾಚೀನ ಧ್ಯೇಯಗಳ ಅವಲಂಬನೆ ಇದ್ದಲ್ಲಿ ಇನ್ನೂ ನಿಧಾನ. ಸಮಾನತ್ವ, ಮತ್ತು ಆ ಭಾವನೆಯಿಂದ ವ್ಯಕ್ತಿ ವಿಕಾಸತ್ವ ಮತ್ತು ರಾಷ್ಟ್ರ ವಿಕಾಸವನ್ನು ಸಾಧಿಸಬೇಕಾದರೆ ಕ್ರಾಂತಿ ಸ್ಫೂರ್ತಿಯಿಲ್ಲದೆ ಸಾಧ್ಯವಾಗಲಾರದೆಂದು ಮನವರಿಕೆಯಾಗುವುದು. ಪ್ರಪಂಚದ ಸ್ಥಿತಿಗತಿಗಳನ್ನು ಶೋಧಿಸಿ, ತತ್ಪರಿಣಾಮವಾಗಿ ನವೀನ ಕಲ್ಪನೆಗಳ ರಚನಾತ್ಮಕ ಧ್ಯೇಯ ಮತ್ತು ಮಾರ್ಗಗಳನ್ನು ವಿಶದಪಡಿಸಿಕೊಂಡು ಸಮಾಜ ಸ್ವರೂಪದ ಪರಿವರ್ತನೆಗೆ ಆಧಾರಭೂತನಾಗತಕ್ಕವನು ಕ್ರಾಂತಿಕಾರಿ. ಕಠಿಣವಾದ ಕ್ರಾಂತಿ ಮಾರ್ಗವನ್ನು ಹಿಡಿಯಲಿಚ್ಛಿಸುವವನಿಗೆ ಸುಖ ಸಂತೋಷಗಳಿಲ್ಲ. ತಂದೆತಾಯಿ, ಹೆಂಡತಿ ಮಕ್ಕಳು, ದುಡ್ಡು ಆಸೆ ನಿಂದೆ ಸ್ತೋತ್ರಗಳಿಲ್ಲ. ದೃಢಚಿತ್ತ ಮತ್ತು ಸ್ಥಿರ ಪ್ರತಿಜ್ಞೆಯಿಂದ ಈ ಕಡಿದಾದ ದಾರಿಯನ್ನು ಸ್ವಪ್ನ, ಜಾಗ್ರತ, ಸುಶುಪ್ತಾವಸ್ಥೆಗಳಲ್ಲಿಯೂ ಧ್ಯಾನಿಸುತ್ತಾ, ನಡೆಯಬೇಕು. ಕ್ಷಾಮ, ಭಯಭೀತಿಗಳು, ದ್ವೇಷ, ಅಪನಂಬಿಕೆ ಇವು ಕ್ರಾಂತಿಗೆ ಕಾರಣ; ಮತ್ತು ದೊಡ್ಡ ವಿಸ್ಫೋಟ ವಸ್ತುಗಳು. ಅಸಮಾಧಾನ, ಉದ್ರೇಕ, ದೌರ್ಜನ್ಯ, ಖೂನಿ, ಕಾಗದ ಪತ್ರಗಳ ನಾಶ, ಆಹಾರ ಸಾಮಗ್ರಿಗಳ ಧ್ವಂಸ, ಸಾಮೂಹಿಕ ಚಳುವಳಿ, ಇವು ಕ್ರಾಂತಿಯ ಆವಿಷ್ಕರಣ. ಕ್ರಾಂತಿಯು ದಾರಿತಪ್ಪಿದರೆ ಯಾರೂ ಆದಕ್ಕೆ ಜವಾಬ್ದಾರಿಯನ್ನು ಹೊಂದುವುದಿಲ್ಲ; ಆದು ಜಯಪ್ರದವಾದರೆ ಪ್ರತಿ

ಯೊಬ್ಬನೂ ಅದರ ಜಯಕ್ಕೆ ಕಾರಣ ಭೂತನಾದವನೆಂದು ಭುಜತಟ್ಟಿ ಕೊಳ್ಳುವನು. ಸ್ವಾಭಾವಿಕವಾಗಿ ದೀನವರ್ಗದವರು ಉಚ್ಚವರ್ಗದವರಿಗಿಂತ ಹೆಚ್ಚು ಬಲಶಾಲಿಗಳೂ ಅಲ್ಲ; ಮತ್ತು ಧೈರ್ಯಸ್ಥೈರ್ಯಸ್ಥರೂ ಅಲ್ಲ. ಆದರೆ ಉತ್ತಮ ವರ್ಗದವರ ವಾತಾವರಣ ಅಥವಾ ಅವರ ಮಾರ್ದವ, ಕೋಮಲತೆ, ನಾಜೂಕು, ಶಿಷ್ಟತೆ, ಸೌಜನ್ಯ, ಸೂಕ್ಷ್ಮ ಗ್ರಾಹಕಬುದ್ಧಿ, ಅವೇ ಅವರ ಬಲಹೀನತೆಗೆ ಕಾರಣವಾಗುವುವು. ಕಾರ್ಮಿಕ ವರ್ಗದವರಾದರೋ ಕಷ್ಟಪಟ್ಟು ಜೀವಿಸುವರು. ಅವರಿಗೆ ಚಿತ್ತ ಸ್ಥೈರ್ಯ, ಕಷ್ಟ ಸಹಿಷ್ಣುತೆ ಇರಬೇಕು. ಉತ್ತಮ ವರ್ಗದವರಿಗೆ ಆತ್ಮಾವಲಂಬನೆ ಇಲ್ಲದಿರುವುದರಿಂದ, ತಮ್ಮನ್ನು ತಾವು ಕಾಪಾಡಿಕೊಳ್ಳಲಾರದೆ, ರಾಷ್ಟ್ರ ಸರ್ಕಾರದ ರಕ್ಷಣೆಯನ್ನು ಕೋರುವರು. ಆರ್ಥಿಕ ಶೋಚನೀಯ ಪರಿಸ್ಥಿತಿಯಲ್ಲದೆ ಬೇರೆ ಕಾರಣಗಳಿಂದುಂಟಾದ ಸಾಮಾಜಿಕ ಕ್ರಾಂತಿಗಳೆಲ್ಲವೂ ಅಲ್ಪಕಾಲದಲ್ಲಿಯೇ ಆರಿ ಹೋಗುವುವು. ಏತಕ್ಕೆಂದರೆ, ಕ್ರಾಂತಿಕಾರರು ಸಜಾತೀಯವಾಗಿ ವರ್ತಿಸದೇ ಇರುವುದು, ಮತ್ತು ಅವರಲ್ಲಿ ಧ್ಯೇಯ ಮತ್ತು ಸಾಧನೆಗಳಲ್ಲಿ ಭಿನ್ನಾಭಿಪ್ರಾಯವಿರುವುದು. ಆದರೆ, ಆರ್ಥಿಕ ಸ್ಥಿತಿಯು ಉತ್ತಮಗೊಳ್ಳದಿದ್ದ ಪಕ್ಷದಲ್ಲಿ, ಕ್ರಾಂತಿಯು ಸುಗಮವಾಗಿ ನಡೆದು ಅಂದೋಲನಗಳನ್ನುಂಟುಮಾಡಿ, ಸಮಾಜದ ಕಟ್ಟುಗಳನ್ನು ಸಡಿಲಿಸಿ, ಆಧಾರ ಭೂತವಾದ ಪರಿವರ್ತನೆಗಳನ್ನುಂಟುಮಾಡುವುದು.

ಕ್ರಾಂತಿಭಾವನೆ ಮತ್ತು ಹಿಂಸಾತ್ಮಕ ವೃತ್ತಿ, ಇವು ನೂತನ ಕಲ್ಪನೆಗಳಲ್ಲ. ಅಂತರ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಹಿಂಸಾವಲಂಬನೆಯಿಂದಲೇ ಆಕ್ರಮಣಗಳು, ರಾಷ್ಟ್ರಸಿದ್ಧಿ, ಮತ್ತು ಸಾಮ್ರಾಜ್ಯ ಬೆಳವಣಿಗೆ ನಡೆದಿರುವುದು. ಚರಿತ್ರೆಯ ಹಿನ್ನಲೆಯನ್ನು ನೋಡಿದರೆ ಆಸ್ತಿಪಾಸ್ತಿಗಳ ವಿಶೇಷ ಹಕ್ಕುಗಳನ್ನೂ ನಿಯಂತ್ರಣ ಮತ್ತು ಶಕ್ತಿಗಳನ್ನೂ ಸಮಾಜದಲ್ಲಿ ಹೊಂದಿರುವ ವರ್ಗವು, ದಳಿತವರ್ಗದವರನ್ನು ಹಿಂಸಾತ್ಮಕ ರಚನೆಗಳಿಂದ ತಡೆಗಟ್ಟಿರುವರು. ಅಲ್ಲದೆ ಪ್ರಗತಿಪರವಾದ ಆಧುನಿಕ ರಷ್ಯ, ಜರ್ಮನಿ ಮತ್ತು ಇಟಲಿ ರಾಷ್ಟ್ರಗಳಲ್ಲಿ ಈ ವಿಧವಾದ ಹಿಂಸಾತ್ಮಕ ರಚನೆಗಳು,

ಏಕನಾಯಕ ಪ್ರಭುತ್ವವೂ ಜಾರಿಯಲ್ಲಿದೆ. ಕ್ರಾಂತಿ ಮತ್ತು ಹಿಂಸಾಮಾರ್ಗದಿಂದ ಸಮಾಜದ ಆರ್ಥಿಕ ಜೀವನವನ್ನು ವಿಕಾಸಗೊಳಿಸಬಹುದೆಂಬ ಭಾವನೆ, ಫ್ಯಾಸಿಸ್ಟ್, ಕಮ್ಯುನಿಸ್ಟ್ ಮತ್ತು ನಾಟ್ಜಿ ತತ್ವಗಳಲ್ಲಡಗಿರುವುದರಿಂದ ಬಹುಸಂಖ್ಯಾತ ಪ್ರಜಾವರ್ಗವನ್ನು ಆಕರ್ಷಿಸಿರುವುದು; ಈ ವಿಧವಾದ ಜೀವನ ಏರ್ಪಡಬೇಕಾದರೆ, ದೈಹಿಕ, ಮಾನಸಿಕ ಮತ್ತು ಸಮಸ್ತ ತ್ಯಾಗಗಳಿಗೂ ವ್ಯಕ್ತಿಯು ಮತ್ತು ಪ್ರಜಾವರ್ಗವು ಸಿದ್ಧವಾಗಿರಬೇಕೆಂದು ಈ ತತ್ವಗಳು ಪ್ರತಿಪಾದಿಸುತ್ತವೆ. [1]

ಹಿಂಸಾತ್ಮಕ ವಿಧಾನವು ರಾಷ್ಟ್ರದ ಮೂಲಭೂತವಾದ ಅಂಗ. ಹಿಂಸಾತ್ಮಕ ತತ್ವದಿಂದ ಸ್ಫೂರ್ತಿಗೊಂಡ ಏಕಪಕ್ಷ; ಪಕ್ಷವೇ ರಾಷ್ಟ್ರ ರಾಷ್ಟ್ರವೇ ಪಕ್ಷ. ಪ್ರಜಾಪ್ರಭುತ್ವಗಳ ಹಾಗೆ ವಿವಿಧ ಪಕ್ಷಗಳ ರಚನೆಗೆ ಅವಕಾಶವಿಲ್ಲ. ಸ್ಪರ್ಧಿಸುವ ಪಕ್ಷಗಳ ನಾಶವು ರಾಷ್ಟ್ರ ಪಕ್ಷದ ಮುಖ್ಯಗುರಿಯಾಗುವುದು, ಚೈನಾದ ರಾಷ್ಟ್ರೀಯ ಭಾವನೆ, ರಷ್ಯಾದ ಸಮತಾತತ್ವ, ಇಟಲಿ ಮತ್ತು ಜರ್ಮನಿಯ ಫ್ಯಾಸಿಸ್ಟ್ ಮತ್ತು ನಾಟ್ಜಿ ತತ್ವಗಳ ಪ್ರತಿಪಾದನೆಯಲ್ಲಿ ಇದು ವಿಷದವಾಗಿರುವುದು. ಸ್ಪರ್ಧೆಗಳಲ್ಲಿ ವಿಜಯಶಾಲಿಯಾದ ಪಕ್ಷವು ರಾಷ್ಟ್ರಾಂಗಗಳ ಕಾರ್ಯಕ್ರಮಗಳಲ್ಲಿ ಪ್ರಧಾನ ಪಾತ್ರವನ್ನು ವಹಿಸಿ ರಾಷ್ಟ್ರ ಧ್ಯೇಯಗಳನ್ನೂ, ಅವುಗಳನ್ನು ಕಾರ್ಯಕಾರಿಗಳನ್ನಾಗಿ ಮಾಡುವ ವಿಧಾನವನ್ನೂ ನಿರೂಪಿಸಿ ಅದರ ಧ್ಯೇಯಗಳಿಗೂ ಕಾರ್ಯಕಾರಿಗಳೂ ವಿರುದ್ಧವಾಗಿ ನಡೆಯುವ ಪಕ್ಷಗಳನ್ನು ಮತ್ತು ಪಕ್ಷ ಸದಸ್ಯರನ್ನು ರಾಷ್ಟ್ರದ್ರೋಹಿಗಳೆಂದು ಶಿಕ್ಷಿಸುತ್ತವೆ. ಏಕಪಕ್ಷದ ಸದಸ್ಯರು ಸರ್ಕಾರದ ಸ್ತಂಭಗಳೋಪಾದಿಯಲ್ಲಿದ್ದು ಪ್ರತಿಸ್ಪರ್ಧಿಸುವವರನ್ನು ಸದೆಬಡಿಯುವರು.

ಏಕಪಕ್ಷಪ್ರಭುತ್ವಗಳಲ್ಲಿ ಬಹುಸಂಖ್ಯಾತರ ಅಭಿಮತದ ಬೆಂಬಲ ಅತ್ಯಾವಶ್ಯಕ; ಪ್ರಜಾಪ್ರಭುತ್ವದಂತೆ ಇಲ್ಲಿಯೂ ಅನೇಕ ಅಂಗಗಳ ರಚನೆಯಾಗಿರುತ್ತದೆ; ವರಣಕರ್ತಸಮಾಜ, ಸಾರ್ವತ್ರಿಕಮತಾಧಿಕಾರ, ನಿರ್ದಿಷ್ಟ

1 "Propaganda is ineffective as a political force until it acquires a national home and becomes linked with military and economic power' E H Carr 'Propaganda'.

ಕಾಲದಲ್ಲಿ ಸಾರ್ವತ್ರಿಕ ಚುನಾವಣೆ, ಇವೇ ಮುಂತಾದುವುಗಳು; ಆದರೆ ರಾಷ್ಟ್ರೀಯತೆಯ ಮತ್ತು ಪಕ್ಷದ ರಾಜಕೀಯ ಭಾವನೆಗಳನ್ನು ಪ್ರತಿಪಾದಿಸುವ, ರೇಡಿಯೋ, ಮುದ್ರಣಾಲಯ, ಪಕ್ಷಸಮ್ಮೇಳನಗಳು ಮುಂತಾದುವುಗಳ ಸಾಧನೆಗಳಿಂದ ಪ್ರತಿಸ್ಪರ್ಧಿಸುವವರ ಅಭಿಮತವನ್ನು ನಾಶಮಾಡಿ ಇಡೀ ಪ್ರಜಾ ವರ್ಗದ ಏಕಮುಖವೂ, ಪಕ್ಷಹಿತಸಾಧಕವೂ ಆದಂತಹ ಅಭಿಮತವನ್ನು ಸರ್ಕಾರವು ರೂಪಗೊಳಿಸುತ್ತದೆ. ಪಕ್ಷವೇ, ಏಕನಾಯಕ ಪ್ರಭುತ್ವದ ಕುರುಹು. ವಿವಿಧ ಕ್ಷೇತ್ರಗಳಲ್ಲಿಯೂ, ಅಭಿಮತದ ನ್ಯೂನಾತಿರೇಕಗಳನ್ನು ಸರಿಪಡಿಸಿ, ಒಂದು ನಿರ್ದಿಷ್ಟವಾದ ಪ್ರಜಾಭಿಮತವನ್ನು ನಿರ್ಮಿಸುವ ಮುಖ್ಯಸಾಧನ. ಮತದಾತನು ಪಕ್ಷಕ್ಕೆ ಮತ್ತು ರಾಷ್ಟ್ರಕ್ಕಾಗಿ ಅಭಿಮತವನ್ನು ಕೊಡುವುದು ದೇಶಾಭಿಮಾನಿಯ ಪವಿತ್ರವಾದ ಕರ್ತವ್ಯ. ಮತದಾತನು ರಾಜಕಾರಣದಲ್ಲಿ ಸ್ಫೂರ್ತಿದಾಯಕವಾಗಿದ್ದು ವ್ಯತಿರಿಕ್ತಭಾವನೆಗಳನ್ನು ತಡೆಗಟ್ಟಿ ನಿರಂತರವೂ ಪಕ್ಷ ಮತ್ತು ರಾಷ್ಟ್ರಹಿತಧ್ಯಾನದಲ್ಲಿ ನಿರತನಾಗಿರಬೇಕೆಂಬುದು ಪಕ್ಷದಗುರಿ. ಪ್ರಜಾಭಿಮತವನ್ನು ಪಕ್ಷಪರವಾಗಿ ಕ್ರೋಡೀಕರಿಸುವುದು, ಏಕನಾಯಕಪ್ರಭುತ್ವದ ಲಕ್ಷಣ. ಪಕ್ಷಪರವಾದ ಅಭಿಮತವು ಇರುವವರೆಗೂ, ಏಕನಾಯಕ ಪ್ರಭುತ್ವವು ಪ್ರಭಾವಯುತವಾಗಿರುತ್ತದೆ. ಆದುದರಿಂದ ಪ್ರಭುತ್ವಗಳು ಪಕ್ಷಧ್ಯೇಯಗಳ ಪ್ರಸಾರಕ್ಕನುಗುಣವಾದ ಯಂತ್ರವನ್ನು ನಿರ್ಮಿಸಿ ತಮ್ಮ ಕಾರ್ಯವನ್ನು ಸಾಧಿಸಿ ಕೊಳ್ಳುವವು. ಕಾರ್ಖಾನೆ ಪದ್ಧತಿಯಿಂದಲೂ ಪೌರೇಯರ ಚಮೂ ಶಿಕ್ಷಣ ನಿರ್ಬಂಧದಿಂದಲೂ ಆರ್ಥಿಕ ಮತ್ತು ಚಮೂ ಪ್ರಭಾವದಿಂದಲೂ ರಾಷ್ಟ್ರ ಮತ್ತು ಪಕ್ಷಗಳ ಮತ ಪ್ರಚಾರವು ಸಾಧ್ಯವಾಗಿದೆ. ಪ್ರಜಾಪ್ರಭುತ್ವಗಳು ಪ್ರಜಾಭಿಮತವನ್ನು ಅನುಸರಿಸುತ್ತವೆ; ಏಕನಾಯಕ ಪ್ರಭುತ್ವಗಳು ಪ್ರಮಾಣವನ್ನು ನಿರ್ಧರಿಸಿ ಆ ಪ್ರಮಾಣಕ್ಕನುಸಾರವಾಗಿ ವರ್ತಿಸುವಂತೆ ನಿರ್ಬಂಧಿಸುತ್ತವೆ. ವೈಯಕ್ತಿಕ, ಪೌರೇಯ, ಮುಂತಾದ ಸ್ವಾತಂತ್ರ್ಯಗಳನ್ನು ಬಯಸುವಂತೆ, ಪ್ರಜಾಪ್ರಭುತ್ವಗಳು ವ್ಯಕ್ತಿಯನ್ನು ಹುರಿದುಂಬಿಸುತ್ತವೆ. ಟೋಟಲಿಟೇರಿಯನ್ ರಾಷ್ಟ್ರಗಳಲ್ಲಿ ಶಿಸ್ತು ಮತ್ತು ವ್ಯವಸ್ಥೆಗಳ

ಅಧೀನವಾಗಿ ವರ್ತಿಸುವಂತೆ, ಶಿಕ್ಷಣ ಕೊಡುವುವು. ಆರ್ಥಿಕ ಪ್ರಪಂಚದಲ್ಲಿ ಸಮುದಾಯ ಉತ್ಪಾದನೆ, ಕಾರ್ಖಾನೆ ಮಾಲೀಕರ ಏಕಾಧಿಕಾರ, ಉತ್ಪಾದಕ ವಸ್ತುಗಳ ಪ್ರಮಾಣ ನಿರ್ಧಾರ; ಸಂಪತ್ಸ್ನೇಖರಣೆ, ಮತ್ತು ಅಲ್ಪಸಂಖ್ಯಾತರಿಂದ ಪ್ರಾಬಲ್ಯವು ಹೇಗೆ ಪ್ರಧಾನಲಕ್ಷಣಗಳೋ, ಹಾಗೆಯೇ, ರೇಡಿಯೋ, ಚಲನಚಿತ್ರ, ಮುದ್ರಣಾಲಯಗಳು ರಾಜಕೀಯ ಪ್ರಪಂಚದಲ್ಲಿ ಪ್ರಜಾಭಿಮತವನ್ನು ರೂಪಗೊಳಿಸಿ, ಪಕ್ಷ ಮತ್ತು ರಾಷ್ಟ್ರಹಿತಸಾಧಕವಾಗುವಂತೆ ಕ್ರೋಢಿಕರಿಸುವುವು. ಈ ಸಾಧನಗಳು ಪ್ರಜಾಪ್ರಭುತ್ವದಲ್ಲಿ ಪ್ರಬಲವಾಗಿ ಶ್ರೀಮಂತರ ಅಧೀನಕ್ಕೆ ಸಿಕ್ಕಿ, ಅಲ್ಪಸಂಖ್ಯಾತರ ಅಭಿಮತಕ್ಕೆ ಬೆಂಬಲಕೊಡುತ್ತಿರುವುದರಿಂದ ಅವುಗಳ ನಿಯಂತ್ರಣವು ವ್ಯಕ್ತಿಸ್ವಾತಂತ್ರ್ಯದ ಹಿತದೃಷ್ಟಿಯಿಂದ ಅತ್ಯಾವಶ್ಯಕವೆಂದು ಮನವರಿಕೆಯಾಗಿದೆ. ಸ್ಪರ್ಧಿಸುವ ಪಕ್ಷಗಳನ್ನು ದುರ್ಬಲವನ್ನಾಗಿ ಮಾಡಬೇಕು, ಚಮು ಮತ್ತು ಇತರ ಪ್ರಬಲಪಕ್ಷಗಳನ್ನು ಸರ್ಕಾರಕ್ಕೆ ಬೆಂಬಲವೀಯುವಂತೆ ಪರಿವರ್ತಿಸಬೇಕು; ಕ್ರಾಂತಿಕಾರಿಭಾವನೆಗಳನ್ನು ಪಾಲಿಸುವವರನ್ನೂ, ಕಾರ್ಮಿಕರನ್ನೂ ರಾಷ್ಟ್ರ ಮತ್ತು ಪಕ್ಷಧ್ಯೇಯಗಳಸಾಧನೆಗಾಗಿ ಉಪಯೋಗಿಸಿಕೊಳ್ಳಬೇಕು; ವೃತ್ತಪತ್ರಿಕೆಗಳು, ವಿಶ್ವವಿದ್ಯಾನಿಲಯಗಳು, ಮಠಗಳು ಮತ್ತು ಇತರ ಸಂಸ್ಥೆಗಳು, ಸರ್ಕಾರದ ಕಾರ್ಯಸಾಧನೆಯಲ್ಲಿ ಪೂರ್ಣಸಹಕಾರವನ್ನು ಕೊಡಬೇಕು; ಈ ಗುರಿಯನ್ನು ಸಾಧಿಸುವುದಕ್ಕಾಗಿ ಏಕನಾಯಕಪ್ರಭುತ್ವಗಳಲ್ಲಿ ರೇಡಿಯೋ, ಚಲನಚಿತ್ರಗಳು ಮತ್ತು ಮುದ್ರಣಾಲಯಗಳು ಸರ್ಕಾರದ ಪ್ರಧಾನ ಸಾಧನಗಳಾಗಿವೆ. ಈ ಸಾಧನೆಗಳು ವಿದೇಶಾಂಗನೀತಿಯನ್ನೂ ರಾಷ್ಟ್ರಗಳ ಸ್ಪರ್ಧೆಯನ್ನೂ ಉದ್ರೇಕಿಸಿ ಅಂತ್ರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಭಯಂಕರವಾದ ಘಟನೆಗಳುಂಟಾಗುವಂತೆ ಮಾಡಿವೆ. * ರಾಷ್ಟ್ರದೊಳಾಡ

*"By clever persistent propaganda, even heaven can be represented to a people as hell, and the most wretched life as paradise" Herr Hitler, *Mein Kamf*

"Only cost limits the delivery of public opinions in any direction on any topic."

"In the same way as I send shells into the enemy trenches, or as I discharge poison gas on the enemy, I as an enemy have the right to use propaganda against him"—Hoffmans *War Diaries*.

ಳಿತದಲ್ಲಿಯೂ ಮತ್ತು ಅಂತರಾಷ್ಟ್ರೀಯ ಸಂಬಂಧಗಳಲ್ಲಿಯೂ ಏಕನಾಯಕ ಪ್ರಭುತ್ವಗಳು ಅಪಪ್ರಚಾರದಿಂದ ರಾಷ್ಟ್ರದ ಪ್ರಜೆಗಳಿಗೆ ರಾಜಕೀಯ ಮತ್ತು ವಿದೇಶಾಂಗನೀತಿಗಳಲ್ಲಿ ಇದುವರಿಗೂ ಇಲ್ಲದಂತಹ ಉತ್ಸಾಹವನ್ನು ತೋರಿಸುವಂತೆ ಹುರಿದುಂಬಿಸಿ, ರಾಷ್ಟ್ರೀಯಭಾವನೆಯ ವೈಪರಿತ್ಯ ವನ್ನುಂಟುಮಾಡಿ ಇತರ ಜನಾಂಗಗಳ ಮೇಲೆ ದ್ವೇಷವನ್ನು ಹುಟ್ಟಿಸಿ ಅಂತ ರಾಷ್ಟ್ರೀಯ ಶಾಂತಿಯನ್ನು ನಾಶಮಾಡಿವೆ.

ಆಧುನಿಕ ಪ್ರಪಂಚದಲ್ಲಿ ವ್ಯಕ್ತಿಯು ಜೀವನವನ್ನು ರಾಷ್ಟ್ರ ಸರ್ಕಾರದ ಮತ್ತು ಇತರ ಸಂಸ್ಥೆ ಮತ್ತು ಪ್ರಜೆಗಳ ಸಹಕಾರವಿಲ್ಲದೆ, ವಿಕಾಸಗೊಳಿಸ ಲಾರನು ; ಕಾರಲ್‌ಮಾರ್ಕ್ಸ್ ಹೇಳಿದಂತೆ ಆಧುನಿಕ ಔದ್ಯೋಗಿಕ ಪ್ರಪಂಚ ದಲ್ಲಿ, ವ್ಯಕ್ತಿಯು ಸ್ವಾತಂತ್ರ್ಯ ಸ್ಥಾನ, ಮಾನಗಳನ್ನು ಕಳೆದುಕೊಂಡು, ರಾಷ್ಟ್ರದಲ್ಲಾಗುವ ವಿದ್ಯಮಾನಗಳ ಮೇಲೆ ಹತೋಟಿಯಿಲ್ಲದೆ, ಗುಲಾಮ ನಾಗಿ, ಪರಿಸ್ಥಿತಿಗಳ ಕೈಗೊಂಬೆಯಾಗಿದ್ದಾನೆ.

ವ್ಯಕ್ತಿಯ ಜೀವನವನ್ನು ಪ್ರಗತಿಪರವಾಗಿ ಸಾಗಿಸುತ್ತಿದ್ದ ಧ್ಯೇಯಗಳು ಮತ್ತು ಸಾಧನಗಳು ಮಾಯವಾಗಿವೆ. ವೈಜ್ಞಾನಿಕ ಪ್ರಪಂಚದಲ್ಲಿ ಸೃಷ್ಟಿ ಯಾಗಿರುವ ವಸ್ತುಗಳ ಉತ್ಪಾದನೆಗಳು ಪುರುಷನ ಜೀವನವನ್ನು ವಿಶೇಷ ವಾಗಿ ಮುಂದುವರಿಸಿದ್ದರೂ, ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿಯೂಆರ್ಥಿಕ ಮತ್ತು ಸಾಮಾಜಿಕ ಜೀವನಗಳಲ್ಲಿಯೂ, ಅಂತರಗಳನ್ನು ಮತ್ತು ಅವ್ಯವಸ್ಥೆ ಗಳನ್ನುಂಟುಮಾಡಿ, ಭೀತಿ ಮತ್ತು ದುಃಖವನ್ನು ಹೆಚ್ಚಿಸಿ ನೈತಿಕ ಜೀವ ನದ ಮಟ್ಟವನ್ನು ಇಳಿಸಿವೆ. ವಿವೇಕಯುತ ಬುದ್ಧಿ. ಮತ್ತು ಪರಿಜ್ಞಾನದ ಬದಲು ಅಂತರಿಜ್ಞಾನಿ, ಮತ್ತು ಅಜ್ಞತೆಯಿಂದ ಕೂಡಿರುವ ಪುರುಷರೇ

---

"Man actually has a greater degree of freedom in his essential structure and less freedom in history than modern culture realises."

*Niebhuhr:*—The nature and destiny of Man Vol. 1.

No revolt of the mob, no triumph of unscrupulous propaganda but stark despair caused by the breakdown of the old order and the absence of a new one. Drecker—The End of Economic Man.

ಪ್ರಬಲರಾಗಿರುವರು. ಸಾರಾಸಾರ ವಿಚಾರವಿಲ್ಲದ, ವಸ್ತುಸ್ಥಿತಿಯ ಅನುಭವವಿಲ್ಲದ, ಆಡಂಬರ, ಆತ್ಮವಿಶ್ವಾಸ ಮತ್ತು ಯೌವನ ಮದಾವಸ್ಥೆಯಲ್ಲಿರುವ ವ್ಯಕ್ತಿಗಳಿಂದ ಕೂಡಿರುವ ನೂತನಸಮಾಜ ಮತ್ತು ಜೀವನ,—ಇದು ಎದ್ದು ಕಾಣುವುದು. ಧರ್ಮದ ತಳಹದಿಯ ಮೇಲೆ ರಾಷ್ಟ್ರರಚನೆಯನ್ನು ಮಾಡುವುದು ಮೂರ್ಖತನವೆಂದು ತೋರುವುದು. ಈ ವಿಧವಾದ ಮನೋಭಾವವುಳ್ಳ ವ್ಯಕ್ತಿಯನ್ನು, ರೇಡಿಯೋ, ವೃತ್ತಪತ್ರಿಕೆಗಳು, ಪಕ್ಷಭಾವನೆಗಳುಳ್ಳ ವಿದ್ಯಾಭ್ಯಾಸ ಕ್ರಮ, ಇವೇ ಮುಂತಾದ ಅಸ್ತ್ರಗಳಿಂದ ಅವನ ನಡೆನುಡಿಗಳನ್ನು ಪರಿವರ್ತಿಸಿ ಸಂಪೂರ್ಣವಾಗಿ ಪಕ್ಷಕ್ಕೂ ಮತ್ತು 'ರಾಷ್ಟ್ರಕ್ಕೂ ಅಧೀನನನ್ನಾಗಿ ಮಾಡಬಹುದು. ಸ್ಥಿತಿಪಾಲಕರೂ, ಸಂಪ್ರದಾಯಕಾರರು ಸುವ್ಯವಸ್ಥಿತ ಜೀವನವನ್ನು ಅರಿತವರೂ, ಈ ವಿಧವಾದ ನಿಯಂತ್ರಣಗಳಿಗೆ ಮತ್ತು ಅಪಪ್ರಚಾರಗಳ ಪ್ರಭಾವದಲ್ಲಿ ಸಿಕ್ಕದೇ ಇರಬಹುದು. ವಿಮಾನ ವಿಶೇಷ ಶಕ್ತಿಯುತವಾದ ಇತರ ಯಾಂತ್ರಿಕ ಸಾಧನೆಗಳು ಬ್ಯಾಂಕ್ ರೇಡಿಯೋ ವೃತ್ತಪತ್ರಿಕೆಗಳು ಇವೇ ಮುಂತಾದ ಸಾಮಾಜಿಕ ಸಾಧನೆಗಳ ಬೆಂಬಲದಿಂದ ಅಲ್ಪಸಂಖ್ಯಾತರು, ಬಹುಸಂಖ್ಯಾತರನ್ನು ಬಹುಕಾಲ ನಿರ್ಬಂಧದಲ್ಲಿಟ್ಟು ಅವರ ಅಭಿಮತ ಮತ್ತು ಮನೋ ವೃತ್ತಿಗಳನ್ನೇ ಮಾರ್ಪಾಡುಮಾಡಬಹುದು. ಆಗ ಅಧಿಕಾರವರ್ಗದ ಅಭಿಮತವೇ ಪ್ರಜಾವರ್ಗದಭಿಮತವಾಗುವುದು. ಅಧಿಕಾರ ವರ್ಗವು ಈ ಸಾಧನೆಗಳನ್ನು ವ್ಯಕ್ತಿಯ ಆತ್ಮನಾಶಕ್ಕಾಗಿ ಮತ್ತು ಪ್ರಜಾವರ್ಗದ ಸ್ವಾತಂತ್ರ್ಯದ ಆಕ್ರಮಣಕ್ಕಾಗಿ ಪ್ರಯೋಗಿಸಬಹುದು; ವ್ಯಕ್ತಿವಿಕಾಸ ಮತ್ತು ರಾಷ್ಟ್ರಹಿತಕ್ಕಾಗಿಯೂ, ವಿಶ್ವಕಲ್ಯಾಣಕ್ಕಾಗಿಯಾದರೂ ಉಪಯೋಗಿಸಬಹುದು. ನಾಟ್ಜಿ ಮತ್ತು ಫ್ಯಾಸಿಸ್ಟ್ ಸಿದ್ಧಾಂತಗಳು ಬಲಪ್ರಯೋಗದಿಂದಲೂ, ರೇಡಿಯೋ ಪತ್ರಿಕೆ ಮತ್ತು ಸಾಮಾಜಿಕ ಸಾಧನೆಗಳಿಂದಲೂ ರಾಷ್ಟ್ರಪ್ರಜೆಗಳ ಮನೋಭಾವನೆಗಳನ್ನು, ದ್ವೇಷ ಅಸೂಯೇ ಜಾತಿಬೇಧಗಳ ದುರಭಿಮಾನಗಳಿಂದ ವಿಷಮಿಸಿ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಶೋಚನೀಯವನ್ನಾಗಿ ಮಾಡಿವೆ.

ಈ ಸಿದ್ಧಾಂತಗಳ ಪ್ರಸಾರದ ಮತ್ತು ಯುದ್ಧದ ಪರಿಣಾಮವಾಗಿ ಉತ್ಪನ್ನವಾಗಿರುವ ಈ ಶೋಚನೀಯ ಪರಿಸ್ಥಿತಿಯನ್ನು ಪರಿಹರಿಸಿ, ವ್ಯಕ್ತಿ ವಿಕಾಸರಾಷ್ಟ್ರದ ಸಾರ್ವಜನಿಕ ಹಿತ ಮತ್ತು ಅಂತರರಾಷ್ಟ್ರೀಯ ಶಾಂತಿ ಸೌಹಾರ್ದತೆಗಳನ್ನು ಹೇಗೆ ಸ್ಥಾಪಿಸಬೇಕೆಂಬ ಚಿಂತನೆಗಳು ಎಲ್ಲರ ಮನಸ್ಸಿನಲ್ಲೂ ಮೂಡಿವೆ. ಸ್ವಾತಂತ್ರ್ಯ, ಸಮತೆ,[1] ಭ್ರಾತೃಭಾವನೆ, ಸಾಮೂಹಿಕ ಜೀವನ, ಅಂತರ್‌ರಾಷ್ಟ್ರೀಯ ಜನಾಂಗಗಳಲ್ಲಿ ಸೌಹಾರ್ದತೆ, ಪ್ರೀತಿ ಮತ್ತು ನಿಕಟಸಂಬಂಧ, ಇವೇ ಮುಂತಾದ ನೂತನ ಕಲ್ಪನೆಗಳಿಂದ ಸ್ಫೂರಿತವಾದ ನೂತನ ಸಮಾಜವನ್ನು ಸೃಷ್ಟಿಸುವುದು ಕಷ್ಟಸಾಧ್ಯ.

ಪ್ರಾಚೀನ ಧರ್ಮವು ಅಳಿಯುತ್ತಿದೆ. ಧರ್ಮಾಚರಣೆಯಲ್ಲಿ ವಿಕಾಸವನ್ನು ಕಾಣದೆ, ವ್ಯಕ್ತಿಯು ಹೊಸಹೊಸ ಕನಸುಗಳನ್ನು ಕಾಣುತ್ತಿರುವನು. ಸ್ವಾತಂತ್ರ್ಯವು ವ್ಯಕ್ತಿಯ ಆತ್ಮದ ಅಂತರ್ಗತ ಹಸಿವು ನಿರಂತರಚಿಂತನೆಯಾದುದರಿಂದ ಅದಕ್ಕೆ ಅಳಿವಿಲ್ಲ. ಆದರೆ ಯುಗಯುಗಕ್ಕೆ ಅದರ ಸ್ವರೂಪ ಮತ್ತು ಆವಿಷ್ಕರಣ ಬದಲಾಯಿಸುತ್ತಿರುವುದು. ಪ್ರಜಾಪ್ರಭುತ್ವದ ಮೂಲಭೂತವಾದ ತತ್ವಗಳೂ ಹಾಗೆಯೇ ಶಾಶ್ವತವೂ ನಿರಂತರವೂ ಆದದ್ದು, ಆದರೆ ಅದರ ನಡೆವಳಿಕೆಗಳು ಮತ್ತು ಪ್ರಯೋಗಗಳು ಅಳಿದು ನೂತನ ಪ್ರಯೋಗಗಳಿಗೆ ಮಾರ್ಗವಾಗಬೇಕು1. ಸ್ವಚ್ಛಂದ ಪ್ರಭುತ್ವ ಮತ್ತು ಈಗಿನ ಅಂತರರಾಷ್ಟ್ರೀಯದ ಅರಾಜಕತ್ವಕ್ಕೆ ಬದಲಾಗಿ ಯೋಜನಾಪೂರ್ವಕವಾದ ಸಮಾಜವು ರಚನೆಯಾಗಬೇಕು. ಸ್ವಚ್ಛಂದರಹಿತವಾದ ಪ್ರಜಾಸತ್ತಾತ್ಮಕ ಧ್ಯೇಯಗಳಿಂದಲೂ, ಮತ್ತು ವ್ಯಕ್ತಿಯ ಮತ್ತು ಸಮಾಜದ ಪ್ರಗತಿಗೆ ಅತ್ಯಾಗತ್ಯವಾದ, ತತ್ವ ಮತ್ತು ಪ್ರಯೋಗಗಳಿಂದ ಕೂಡಿದ, ಯೋಜನೆ ರಚನೆಯಾಗಬೇಕು.

1. "Why search the past with a romantic longing for freedom that has been lost when that freedom is ready to come into its own, if we have only courage to see what must be seen, to say what must be said to do what must be done." Karl–Mannhiem.

*Man and Society in an Age of Reconstruction.*

ಅಸಾರಭೂತವೂ ಆತ್ಮರಹಿತವೂ ಆದ ನಿರಂಕುಶ ಪ್ರಭುತ್ವವನ್ನಾಗಲಿ, ಅಥವಾ ವ್ಯಕ್ತಿಯ ಸ್ವಾತಂತ್ರ್ಯವನ್ನು ಮಾತ್ರ ಕಾಪಾಡುವ ಪ್ರಜಾ ಪ್ರಭುತ್ವವಾಗಲಿ, ಅಸಮರ್ಪಕವಾದುದರಿಂದ ಈ ಯೋಜನೆ ಬೇರೆಬೇರೆ ಭಾವನೆಗಳನ್ನು ಕಲ್ಪಿಸಬೇಕು: ಹಸಿವು ಬಾಯಾರಿಕೆ, ಮತ್ತು ಭೀತಿಗಳ ನಾಶವಾಗಬೇಕೆಂಬುದಾಗಿ, ಅಟ್ಲಾಂಟಿಕ್ ಚಾರ್ಟರ್ ಮತ್ತು ಘೋಷಿಸಿರುವುದು ರಾಷ್ಟ್ರೀಯ ಭಾವನೆಗಳು ಸಂಕುಚಿತವಾಗಿರುವವರೆಗೂ, ಮತ್ತು ರಾಷ್ಟ್ರ ಸರ್ಕಾರಗಳು, — ಒಳಾಡಳಿತ ಮತ್ತು ವಿದೇಶಾಂಗ ನೀತಿ ನಿರ್ಧಾರ, ಯು.ಎನ್.ಓ. (U.N.O.) ಇವುಗಳಲ್ಲಿ ಪರಮಾಧಿಕಾರವನ್ನು ಪಡೆದಿರುವವರೆವಿಗೂ, ಭೀತಿ ಹಸಿವು ರಹಿತವಾದ ಸೃಷ್ಟಿಯಾಗಲಾರದು. ರಾಷ್ಟ್ರಸರ್ಕಾರಗಳು ಪ್ರತ್ಯೇಕ ಪ್ರತ್ಯೇಕವಾಗಿ ವೈಮಾನಿಕ ಬಲದ ಶಕ್ತಿಯನ್ನೇ ನಿರ್ಧರಿಸಿರುವ ಅಧಿಕಾರ ವಿರುವವರೆಗೂ ಭಯ ತಪ್ಪದು. ಆರ್ಥಿಕ ಪ್ರಪಂಚದಲ್ಲಿ, ರಚನಾತ್ಮಕ ಕಾರ್ಯಗಳಲ್ಲಿ ರಾಷ್ಟ್ರ ಸರ್ಕಾರಗಳಿಗೆ ವಿಶೇಷಾಧಿಕಾರವಿರುವರೆಗೂ ಹಸಿವು ತಪ್ಪದು: ಆದುದರಿಂದ ನೀತಿಯುತ್ತವೂ ವಿವೇಕಯುತವೂ ಆದ ಯೋಜನೆ ಈಗ ನಮ್ಮ ಅಧುನಿಕ ಸಂಕೀರ್ಣಸಮಾಜದಲ್ಲಿರಚಿತವಾಗಬೇಕು. ಪ್ರಜಾಪ್ರತಿನಿಧಿ [1] ಪ್ರಭುತ್ವವು, ಔದ್ಯೋಗಿಕ ಪ್ರಪಂಚದಲ್ಲಿ ಉತ್ಪನ್ನವಾದ ಪ್ರಶ್ನೆಗಳಿಗೆ ತಕ್ಕ ಪರಿಹಾರವನ್ನು ಕೊಟ್ಟಿಲ್ಲ. ಪ್ರಜಾಪ್ರಭುತ್ವ, ರಾಜತ್ವ, ಕುಲೀನ ಪ್ರಭುತ್ವ ಇವೂ ಯಾವುದಾದರೂ ಸ್ವಚ್ಛಂದ ಪ್ರಭುತ್ವವಾಗುವ ಭಯ ಇದ್ದೇ ಇರುವುದು. ಏಕೆಂದರೆ ಲಾರ್ಡ್ ಆಕ್ಟನ್ ಹೇಳಿದಂತೆ ಅಧಿಕಾರ ಯಾವಾಗಲೂ ಅನೀತಿಯುತವಾದುದು; ಪೂರ್ಣಾಧಿಕಾರ ಪೂರ್ಣವಾಗಿ [2] ಅಧಿಕಾರಿಗಳನ್ನು ಅನೀತಿಯುತವನ್ನಾಗಿ ಮಾಡುವುದು.

ಅಧಿಕಾರವು ಸ್ವಚ್ಛಂದವಾಗದಂತೆ ನಿಯಂತ್ರಿಸುವ ರಚನಾ ಕ್ರಮದ ನಿರ್ಮಾಣ ಜಟಿಲವಾದ ಪ್ರಶ್ನೆ. ಈ ಯಾಂತ್ರಿಕ ಯುಗದಲ್ಲಿ ಪ್ರಜಾ

1. Crossman. Government and the Governed.
2. Lord Acton: 'Power always corrupts, absolute power corrupts absolutely'.

ಪ್ರಭುತ್ವವು ಪ್ರಭಾವಯುತ ವಾಗಬೇಕಾದರೆ ಹೊಸ ಹೊಸ ಸಾಧನೆಗಳನ್ನು ರಚಿಸಿಕೊಳ್ಳಬೇಕು. ವ್ಯಕ್ತಿಯ ಹಕ್ಕುಭಾಧ್ಯತೆಗಳು, ಸಮತೆ, ವಾಕ್, ಮುದ್ರಣ ಮತ್ತು ಧಾರ್ಮಿಕ ಸ್ವಾತಂತ್ರ್ಯ ಮುಂತಾದುವುಗಳು ಇವುಗಳಿಂದ ಕೂಡಿದ ಪ್ರಭುತ್ವವು ವ್ಯಕ್ತಿಯ ಪ್ರಭುತ್ವ ಅಥವಾ (Passive Democracy) ಆಗುತ್ತದೆ. ವ್ಯಕ್ತಿಯ ಮತ್ತು ಪೌರೇಯ ಸ್ವಾತಂತ್ರ್ಯ ಮುಂತಾದುವುಗಳಿಂದ ಸರ್ಕಾರದ ವಿವಿಧಾಂಗಗಳ ಕಾರ್ಯಕ್ರಮದಲ್ಲಿ ಭಾಗ ವಹಿಸಿದರೆ ಆಗ ಪ್ರಜಾಪ್ರಭುತ್ವ ಅಥವಾ (Active Democracy) ಆಗುವುದು. ವ್ಯಕ್ತಿಯ ಸ್ವಾತಂತ್ರ್ಯಗಳನ್ನು ಗಳಿಸಲು, ವರಣಾಧಿಕಾರದ ವಿಸ್ತೃತೆ ಮತ್ತು ಸರ್ಕಾರದ ಪ್ರಜಾನಿಯಂತ್ರಣಗಳು ಕಾರಣವಾಗಿವೆ. ಆದರೆ ಪ್ರಜಾಸರ್ಕಾರದ ರಚನಾತ್ಮಕದಲ್ಲಿ ಬದಲಾವಣೆಯಾದಷ್ಟೂ ಪೌರೇಯ ಸ್ವಾತಂತ್ರ್ಯಗಳು ಪರಿವರ್ತನೆಯನ್ನು ಹೊಂದಿಲ್ಲ.

ಸಾರ್ವತ್ರಿಕ ವರಣಾಧಿಕಾರದ ಮೇಲೆ ರಚಿಸಲ್ಪಟ್ಟ ಸಾಮೂಹಿಕ ಪ್ರಜಾಪ್ರಭುತ್ವವು ಇತ್ತೀಚಿನದು. ಆದರೆ ಇದರ ಹೆಸರಿನಲ್ಲಿ ವಿವಿಧ ಪಂಗಡಗಳು ಪಕ್ಷಗಳು, ರಾಜಕೀಯ ಕ್ಷೇತ್ರಗಳಲ್ಲಿ ಅಧಿಕಾರಗಳಿಸಿ ಬಹುಸಂಖ್ಯಾತರನ್ನು ಅಧಿಕಾರರಹಿತರನ್ನಾಗಿ ಮಾಡಿವೆ. ಆರ್ಥಿಕ ಜೀವನದಲ್ಲಿ ಸಮತೆ, ಮತ್ತು ಪ್ರಭಾವವಿಲ್ಲದಿದ್ದರೆ ರಾಜಕೀಯದಲ್ಲಿ ಸಮತೆ ಮತ್ತು ಪ್ರಭಾವ ಗಳಿಸುವುದು ಅಸಾಧ್ಯವೆಂಬ ಭಾವನೆ—ಇವು ಅಲ್ಪಸಂಖ್ಯಾತರ ಅಧಿಕಾರಾಕ್ರಮಣಕ್ಕೆ ಹೆದ್ದಾರಿಯಾಗಿದೆ.

ಸ್ವಾತಂತ್ರ್ಯ ಮತ್ತು ಸುವ್ಯವಸ್ತಿತವಾದ ಜೀವನ ಅವಳಿಜವಳಿ ಮಕ್ಕಳಂತೆ ಒಂದನ್ನು ಬಿಟ್ಟು ಇನ್ನೊಂದು ಸಿದ್ಧಿಯಾಗಲಾರದು ಸ್ವಾತಂತ್ರ್ಯ ಸ್ವಚ್ಛಂಧವಾದರೆ ಅರಾಜಕತ್ವವು ಪರಿಣಾಮವಾಗುತ್ತದೆ, ಮತ್ತು ವ್ಯವಸ್ಥಿತ ಜೀವನಕ್ಕಾಗಿ ಹಾಹಾಕಾರ. ವ್ಯವಸ್ಥಿತ ಜೀವನವೇ ಪ್ರಧಾನವಾದರೆ, ನಿರಂಕುಶ ಪ್ರಭುತ್ವ ಮತ್ತು ಅದರ ಪರಿಣಾಮ, ವ್ಯಕ್ತಿಯ ಸ್ವಾತಂತ್ರ್ಯದ ನಿರಂತರ ಚಿಂತನೆ ಮತ್ತು ಅದರ ಪರಿಣಾಮವಾಗಿ ಚಳುವಳಿ ಮತ್ತು ಕ್ರಾಂತಿ. ಸುವ್ಯವಸ್ಥಿತ ಸಮಾಜದ ಜೀವನಗಳಲ್ಲಿ ಈ ಎರಡು ತತ್ವಗಳು ಸಮ

ತೂಕವಾಗಿರಬೇಕು, ಮತ್ತು ಆರ್ಥಿಕ ಮತ್ತು ಸಾಮಾಜಿಕ ಸಮತೆ, ರಚನೆ ಯಾಗಬೇಕು; ಜಾತಿ, ಅಂತಸ್ತುಗಳ ಬೇಧವಿಲ್ಲದೆ ಪ್ರಭುತ್ವದಲ್ಲಿ ಭಾಗ ವಹಿಸುವ ಸಮಾನಾಧಿಕಾರ, ಸಮಾಜವು ಪ್ರಜಾವರ್ಗದ ಅಭ್ಯುದಯಕ್ಕೂ, ಮತ್ತು ಉತ್ತಮ ಜೀವನಕ್ಕೂ ಅಳವಡಿಸುವ ಸಲಕರಣೆ ಮತ್ತು ಸಾಧನೆಗಳ ಸಮಾನ ಹಂಚಿಕೆ, ಸಮಾಜವನ್ನು ಪ್ರಗತಿಪರವನ್ನಾಗಿ ಮಾಡುವುದಕ್ಕೆ ಅತ್ಯಾವಶ್ಯಕವಾದ ನೀತಿಯುತ ಜೀವನ,–ಇವು ವ್ಯಕ್ತಿಯ ಭಾಗ್ಯ. ನೂತನ ಪ್ರಜಾಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ, ಕರ್ತವ್ಯಗಳು ಹಕ್ಕು ಗಳಿಗಿಂತ ಹೆಚ್ಚು ಪ್ರಭಾವಯುತವಾದುವು, ಎಂಬ ಭಾವನಾಸ್ಫೂರಿತವಾದ ಉತ್ಸಾಹವನ್ನು ಹುಟ್ಟಿಸಿ, ತನ್ನ ವಿಕಾಸದ ಮೂಲಕ ಸಾರ್ವಜನಿಕ ಹಿತ ಮತ್ತು ವಿಶ್ವಕಲ್ಯಾಣವನ್ನು ಸಾಧಿಸುವಂತೆ, ಸಾಧನೆಗಳನ್ನು ಕಲ್ಪಿಸಬೇಕು.

ಸ್ವಾರ್ಥಕ್ಕಾಗಿಯೂ ಮತ್ತು ಆತ್ಮವಿಕಾಸಕ್ಕಾಗಿಯೂ ವ್ಯಕ್ತಿಯು ಶ್ರಮಿಸುತ್ತಿರುವುದರಿಂದಲೂ, ಹಿತಾಹಿತಗಳೂ, ಮತ್ತು ಸಾರಾಸಾರ ಜೀವನ ಗಳನ್ನು ವಿವೇಚಿಸಿದೆ, ಸಮಾಜದಲ್ಲಿ ಸಾರ್ವಜನಿಕ ಸಲಕರಣೆಗಳನ್ನು ತನ್ನ ಪ್ರಗತಿಗಾಗಿಯೇ ಉಪಯೋಗಿಸುತ್ತಿರುವುದರಿಂದಲೂ, ಧಾರ್ಮಿಕ ಶ್ರದ್ಧೆ ಯಿಂದ ಕೂಡಿದ ಜೀವನವನ್ನು ತ್ಯಜಿಸಿರುವುದರಿಂದಲೂ ಅಶಾಂತಿ, ಅರಾಜಿ ಕತ್ವ, ಅತ್ಮಾವಲಂಬನೆಗಳು ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಉಂಟಾ ಗಿದೆ; ವ್ಯಕ್ತಿವಿಕಾಸಕ್ಕಾಗಿ ನಿರ್ಮಿತವಾದ ಪ್ರಜಾಪ್ರಭುತ್ವವು ನಿಂದನೀಯ ವಾಗಿದೆ. ನೂತನವಾಗಿ ರಚನೆಯಾಗುವ ಸಮಾಜದಲ್ಲಿ ಪಾರಮಾರ್ಥಿಕ ಮತ್ತು ಸಾರ್ವಜನಿಕ ಹಿತಸ್ಫೂರಿತ ತತ್ವಕ್ಕೂ ಮತ್ತು ಧಾರ್ಮಿಕ ಜೀವ ನಕ್ಕೂ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಸಾರ್ವಜನಿಕ ಹಿತಕ್ಕಾಗಿ ಸ್ವಾರ್ತ ತ್ಯಾಗ ಮಾಡತಕ್ಕ ಭಾವನೆಯಿಂದ ಕೂಡಿದ ಪವಿತ್ರವಾದ ಧರ್ಮ, *1

*1. 'Our civilization is in danger of perishing for lack of something with which we have dispensed for hundreds of years, but with which we can dispense no longer, a deliberate and an avowed moral purpose involving the call for common sacrifice for a recognised common good—E.H. Carr—Conditions of Peace.'

Our difficulties are difficulties of aims rather than means, and no change in social mechanisms will set us right, unless Society also acquires a new purpose--C H. Waddington—The Scientific Attitude.

ಸೃಷ್ಟಿಯಾಗಿ ಮೂಲಭೂತವಾದ ಕರ್ತುವಾಗಬೇಕು. ಸಮಾಜದಲ್ಲಿ ಈ ತತ್ವದಿಂದ ಹುರಿದುಂಬಿಸಲ್ಪಟ್ಟ ಒಂದು ನಿರ್ದಿಷ್ಟ ಪ್ರಜಾವರ್ಗವು, ನಿರಂತರವೂ ರಾಷ್ಟ್ರಹಿತಧ್ಯಾನದಲ್ಲಿ ನಿರತವಾಗಿ [1] ರಾಷ್ಟ್ರ ಮತ್ತು ಬಹುಸಂಖ್ಯಾತರ ಹಿತಕ್ಕಾಗಿ ದುಡಿಯಬೇಕು. ಪ್ರಜಾಪ್ರಭುತ್ವವೂ, ಒಂದು ಭಾಗದಲ್ಲಿ ಕುಲೀನಪ್ರಭುತ್ವವೆಂದು ಹೇಳಬಹುದು; ಕುಲೀನ ಪ್ರಭುತ್ವವೆಂದರೆ, ಒಂದು ದೃಷ್ಟಿಯಲ್ಲಿ ಪ್ರಜಾಪ್ರಭುತ್ವ. ಪ್ರತಿಯೊಂದು ರಾಷ್ಟ್ರದಲ್ಲಿಯೂ, ಎರಡು ಭಾಗವಿದೆ. ನಿರಂತರವೂ ಶ್ರಮಿಸುವ ಅಧಿಕಾರವರ್ಗ, ಮತ್ತು ರಾಜಕೀಯದಲ್ಲಿ ಅನಾದರವುಳ್ಳ ಬಹುಸಂಖ್ಯಾಕರ ಪ್ರಜಾವರ್ಗ, ದಕ್ಷತೆ, ರಾಜಕೀಯ ಅನುಭವ, ಪ್ರಾಜ್ಞತೆ, ಉತ್ಸಾಹ ಶಕ್ತಿವುಳ್ಳವರು ಮೊದಲನೆಯ ವರ್ಗದವರು. ಅಜ್ಞತೆ, ಮತ್ತು ರಾಜಕೀಯದಲ್ಲಿ ಅನಾದಾರಣೆಯಿಂದ ನಿರುತ್ಸಾಹಿಗಳಾಗಿ ಅಧಿಕಾರ ವರ್ಗದ ನಿಯಂತ್ರಣವನ್ನು ಒಪ್ಪುವವರು ಎರಡನೆಯ ವರ್ಗದವರು. ರಾಷ್ಟ್ರದಲ್ಲಿ ಈ ಎರಡನೇ ವರ್ಗದಿಂದ ಮೊದಲನೆಯದಕ್ಕೆ [2] ದಕ್ಷತೆ ನೈಪುಣ್ಯಗಳಿಂದ ಕೂಡಿರುವ ವ್ಯಕ್ತಿಗಳು ನಿರಂತರವೂ ಬಂದು ಸೇರುವ ಅವಕಾಶವಿರಬೇಕು. ಸಮಾಜದಲ್ಲಿ ಸಮಸ್ತ ಪಂಗಡಗಳಿಂದಲೂ, ದಕ್ಷತೆ, ಮೇಧಾಶಕ್ತಿ, ಅನುಭವ, ರಾಜಕಾರಣ ಪಟುತ್ವ, ಇವುಗಳಿಗಾಗಿ ಆರಿಸಲ್ಪಡುವ ವ್ಯಕ್ತಿಗಳ ಸಮು

1. Their must be a Core of special intelligence, of enlightened fanatics whose minds are liberated enough to imagine a new Social Order—H G Wells· Homo Sapiens

2. "Every democracy is in part an aristocracy and every aristocracy in part a democracy, every body-politic consists of two parts, a politically active or ruling class and a politically passive or a ruled class, the first consisting essentially of persons who are mentally adult and so able to rule themselves and others, the second consists essentially of persons who are not mentally adult and so have to be ruled by the rest, of these positive and negative classes members must always be passing from the second to the first. What is important is that the right ones should pass" Collingwood: The New Leeviathan.

ದಾಯುವೇ ಅಧಿಕಾರವನ್ನು ಗಳಿಸುವುದಕ್ಕೂ ಅರ್ಹರು. ಇವರೇ ಒಳಾಡಿತ ಮತ್ತು ವಿದೇಶಾಂಗ ನೀತಿಗಳ ವ್ಯವಸ್ಥಾಪಕರು ಮತ್ತು ರಾಷ್ಟ್ರ ನಾಯಕರು.

ಈ ಅಧಿಕಾರವರ್ಗ ದ್ವಿವಿಧವಾಗಿದೆ. ಕೆಲವರು ಉತ್ತಮ ಅಧಿಕಾರ ಸ್ಥಾನಗಳನ್ನು ಪಡೆದು ರಾಷ್ಟ್ರದ ಮೂಲಭೂತವಾದ ಕಾರ್ಯಗಳನ್ನು ಸಾಧಿಸತಕ್ಕವರು (Directive Elites); ಅಧಿಕಾರವರ್ಗದ ಇತರರು ಸಮಾಜದ ಸಿದ್ಧಾಂತಗಳ ವಿವರಣೆ, ನಿಯಮಗಳಾಚರಣೆ, ಪ್ರಜಾವರ್ಗದ ಅಭ್ಯುದಯ ಕಾರ್ಯಗಳಲ್ಲಿ ನಿರತರೂ, ಆದವರು (Permeating Elites). ದ್ವಿತೀಯವರ್ಗದಿಂದ ರಾಷ್ಟ್ರನಾಯಕರನ್ನು ಸುಲಭವಾಗಿ ಆರಿಸಿಕೊಳ್ಳಬಹುದು. ಆದರೆ ದ್ವಿತೀಯ ವರ್ಗಕ್ಕೆ ದಕ್ಷರಾದ, ಸ್ವಾರ್ಥ ತ್ಯಾಗಬುದ್ಧಿಯುಳ್ಳ, ಪಾರಮಾರ್ಥಿಕವೇ ಜೀವನದ ಪರಮ ಧ್ಯೇಯವೆಂದು ಅರಿತ ವ್ಯಕ್ತಿಗಳನ್ನು ಸಮಾಜದ ವಿವಿಧವರ್ಗಗಳಿಂದ ಆರಿಸುವುದು ಕಷ್ಟ ಸಾಧ್ಯ. ಈ ದ್ವಿವಿಧವರ್ಗದ ಆಧಾರದಮೇಲೆಯೇ ರಚಿತವಾದ ಮಾನವನ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವು ಶಾಶ್ವತವಾಗಿ ನಿಲ್ಲುವುವು ಮತ್ತು ಪ್ರಗತಿ ಪರವಾಗುವುದು. ಆದರೆ ಈ ವಿಧವಾದ ಈ ವರ್ಗದ ಅಧಿಕಾರಕ್ಕೆ ಸಾರ್ವತ್ರಿಕ ಪ್ರಜಾಬೆಂಬಲ ಬೇಕು. ಪ್ರತಿಯೊಬ್ಬ ಪೌರೇಯನು ತನ್ನ ನಿರ್ದಿಷ್ಟ ಹಕ್ಕು ಬಾಧ್ಯತೆಗಳನ್ನು ನಿರ್ವಹಿಸಿಕೊಂಡು ಸಹಕಾರ ಸಹಯೋಗ ಗಳಿಂದ ಸಾಮೂಹಿಕ ಜೀವನವನ್ನೆ ಉತ್ತಮಗೊಳಿಸುವ ಸಮಾಜಧರ್ಮಕ್ಕೆ ನೆರೆಯಾಗಬೇಕು. ಹಕ್ಕು ಬಾಧ್ಯತೆಗಳು, ಅಧಿಕಾರ ಮತ್ತು ಜವಾಬ್ದಾರಿ ಇವುಗಳು ಪ್ರತ್ಯೇಕವೆಂದು ಮನವರಿಕೆಯಾಗಬೇಕು. ಹಕ್ಕು ಬಾಧ್ಯತೆಗಳು ಪೌರೇಯನದು. ರಾಷ್ಟ್ರದಲ್ಲಿ ಅಧಿಕಾರ ಮತ್ತು ಪೌರೇಯನ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಾಪಾಡುವ ಜವಾಬ್ದಾರಿ ಕುಲೀನರದು.

ಅಧಿಕಾರವರ್ಗವು ಶಾಸನಗಳನ್ನು ಮಾಡಿ ಪ್ರಜಾವರ್ಗವು ಅವು ಗಳನ್ನು ಅನುಸರಿಸುವಂತೆ ನಿರ್ಬಂಧಿಸುವ ಪರಮಾಧಿಕಾರ ಪಡೆದಿರ ಬೇಕೆಂದಲ್ಲ. ರಾಷ್ಟ್ರವು ಪೂರ್ಣಾಧಿಕಾರ ಪಡೆದಿರುವ ಸರ್ಕಾರದಿಂದಲೂ, ನಿಶ್ಚಲಭಕ್ತಿಯಿಂದ ಸೇವಿಸುವ ಪ್ರಜೆಯಿಂದಲೂ ಕೂಡಿರಬೇಕೆಂಬತತ್ವವು.

ಫಾಸಿಸ್ಟ್ ಇಟಲಿ ಮತ್ತು ನಾಟ್ಜಿ ಜರ್ಮನಿಯಲ್ಲಿ ಆಚರಣೆಯಲ್ಲಿ ಕಂಡು ಬಂದರೂ ಇತರ ರಾಷ್ಟ್ರಗಳಲ್ಲಿ ಅಳಿದುಹೋಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಆಸ್ಟಿನ್‌ನು ಪ್ರತಿಪಾದಿಸಿದ ಪರಮಾಧಿಕಾರ ತತ್ವಕ್ಕೆ ಈಗ ಮನ್ನಣೆಯಿಲ್ಲ. 'ಯಾವ ವ್ಯಕ್ತಿಯೂ ಮತ್ತೊಬ್ಬನಮೇಲೆ ಅಧಿಕಾರವನ್ನು ನಡೆಸಲು ಹಕ್ಕು ಇಲ್ಲ' ಅತಿ ದರಿದ್ರನಾದವನು ಆಗರ್ಭಶ್ರೀಮಂತನ ಜೀವನದಂತೆ ವರ್ತಿಸುವ ಪೂರ್ಣಸ್ವಾತಂತ್ರ್ಯವುಂಟು, ಎಂಬ ತತ್ವವು ಮನರಂಜಕವಾಗಿದೆ. ಸರ್ಕಾರವು ಬಲಾಧಿಕಾರಗಳ ಮೂಲಕವಲ್ಲ ಪ್ರಜಾ ಬೆಂಬಲದಾಧಾರದಮೇಲೆ ನಿಲ್ಲಬೇಕು ಎಂಬುದು ಮತ್ತೊಂದು ಗಹನವಾದ ತತ್ವ. ಪ್ರಜಾಪ್ರಭುತ್ವಗಳಲ್ಲಿ ಪೂರ್ಣಾಧಿಕಾರ ಪಡೆದ ಸರ್ಕಾರವನ್ನು ಒಪ್ಪದಿದ್ದರೂ, ಪರಮಾಧಿಕಾರವುಳ್ಳ ತತ್ವದ ಸಾಧನವಾಗಿ ಸರ್ಕಾರವು ವರ್ತಿಸಬೇಕೆಂಬುದು ಸ್ವತಃಸಿದ್ಧವಾದುದು. ಪ್ರಾಟೆಸ್ಟಂಟ್ ಮತ್ತು ಪುರಿಟನ್ ಮತಗಳು ವ್ಯಕ್ತಿಯ ಅಂತರಾತ್ಮನಿಗೆ ಪರಮಾಧಿಕಾರ ವುಂಟೆಂದು ಸಿದ್ಧಾಂತ ಮಾಡಿದೆ. ಪ್ರಜಾಪ್ರಭುತ್ವಗಳಲ್ಲಿ ತತ್ವಜ್ಞಾನಿ ರೂಸೊ ಹೇಳಿದಂತೆ, ಪ್ರಜೆಗಳ ಧ್ವನಿಯೇ ದೇವನ ಧ್ವನಿಯಾಗಿರುವುದು.

ಸರ್ಕಾರದ ಅಧಿಕಾರದ ಪ್ರಯೋಗಕ್ಕೆ ಪ್ರಜಾ ಬೆಂಬಲವು ಅತ್ಯಾವಶ್ಯಕವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಸಮ್ಮತಿ ಸರ್ಕಾರದ ಕಾರ್ಯ ನಿರ್ವಹಣೆಗೆ ಬೇಕೆಂದಲ್ಲ. ಬಹು ಸಂಖ್ಯಾಕರು ಅಲ್ಪ ಸಂಖ್ಯಾಕರಾಭಿಮತದ ನಿರ್ಬಂಧಕ್ಕೆ ಸಿಕ್ಕಲು ಬಯಸುವುದಿಲ್ಲ. ವೈಯುಕ್ತಿಕಾಭಿಮತದಾಧಾರದ ಮೇಲೆ ರಚಿತವಾದ ಸರ್ಕಾರವು, ಅರಾಜಕೀಯ; ಅರಾಜಕ ತತ್ವವನ್ನು ಪ್ರಜೆಗಳು ಒಪ್ಪುವುದಿಲ್ಲ. ಆದುದರಿಂದಲೇ ಪ್ರಜಾಪ್ರಭುತ್ವಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಅಭಿಮತವನ್ನು ಸೂಚಿಸುವಂತೆ, ಸಾರ್ವತ್ರಿಕ ಮತಾಧಿಕಾರ ಬಹು ಸಂಖ್ಯಾಕರಭಿಮತ ಇಡೀ ಪ್ರಜಾವರ್ಗದಭಿಮತವೆಂಬ ಭಾವನೆ, ಪ್ರತಿನಿಧಿತ್ವ, ಪ್ರತಿನಿಧಿ ಪ್ರಭುತ್ವ, ವರ್ಷವರ್ಷ ಸಾರ್ವತ್ರಿಕ

---

Bosanquet Aspects of the Social Problem. 'The reality of the General Will'

ಚುನಾವಣೆ, ಪ್ರಜೆಗಳು ಶಾಸನವನ್ನು ರಚಿಸುವುದು, ಅಂಗಿಕಾರ ಮಾಡುವುದು ಅಧಿಕಾರಿಗಳನ್ನು ಪುನಾರಾವರ್ತಿಸುವುದು, ಇವೇ ಮುಂತಾದ ಯುಕ್ತಿಗಳು ಹುಟ್ಟಿಕೊಂಡಿವೆ. ಸರ್ಕಾರವು ಸ್ವಚ್ಛಂಧವಾಗದಂತೆ ತಡೆಗಟ್ಟಲು ನಿರ್ಮಾಣವಾದ ಸಾಧನಗಳಂತೆ ತೋರುವುವು; ಪ್ರಭಾವಯುತವಾದ ಸರ್ಕಾರ ವಿದ್ದಲ್ಲಿ ಏಕನಾಯಕ ಪ್ರಭುತ್ವವು ಆವಿರ್ಭವಿಸುವುದಿಲ್ಲ, ದುರ್ಭಲವಾದ ಮತ್ತು ದಿಕ್ಕಿಲ್ಲದ ಸರ್ಕಾರ ವಿದ್ದರೆ, ಏಕನಾಯಕ ಪ್ರಭುತ್ವದ ಚಿನ್ಹೆಗಳು ಕಾಣುವುವು.

ಪರಮಾಧಿಕಾರವು ಸಮಗ್ರಪ್ರಜಾಭಿಮತದಲ್ಲಿ ಅಡಗಿಲ್ಲ; ಸಾಮೂಹಿಕ ಜೀವನದಲ್ಲಿ ಅದರ ಅವಿಷ್ಕರಣ, ತತ್ವಜ್ಞಾನಿ ಕಾಂಟನು ಹೇಳಿದಂತೆ ನೀತಿಯುತ ಸಮಾಜದಲ್ಲಿ ವ್ಯಕ್ತಿಯ ಜೀವನವು ನಿಯಮಾತ್ಮಕ ವಸ್ತು ಸಾಧನವೂ ಆದುದು. ರಾಷ್ಟ್ರದಲ್ಲಿ ಪರಮಾಧಿಕಾರವು, ವ್ಯಕ್ತಿಯಲ್ಲಿಯೂ, ವಿವಿಧ ಸಂಸ್ಥೆಗಳಲ್ಲಿಯೂ, ಅವುಗಳ ಪರಸ್ಪರ ನಿಕಟ ಸಂಬಂಧದಲ್ಲಿಯೂ ಗೋಚರವಾಗುವುದೆಂದು ತತ್ವಜ್ಞರು ಹೇಳಿದ್ದಾರೆ, ಸಂಕೀರ್ಣವೂ, ಪರಿಷ್ಕೃತವೂ ಆದ ವ್ಯಕ್ತಿಯ ಮತ್ತು ಸಂಸ್ಥೆಗಳ ಜೀವನದಾಂತರ್ಯವನ್ನು ಒಳಹೊಕ್ಕು, ಅದರ ಮೂಲಭೂತವಾದ ತತ್ವ ಮತ್ತು ನಿಯಮಗಳನ್ನು ಅರಿತು, ರೋಗರುಜಿನಗಳನ್ನು ಪರಿಕ್ಷಿಸಿ ತಕ್ಕ ಪರಿಹಾರಗಳನ್ನು ಸೂಚಿಸುವುದು ರಾಷ್ಟ್ರ ಸರ್ಕಾರದ ಕೆಲಸ. ಸಮಾಜಸೇವೆಯಿಂದ ಸಮಾಜದ ಸಾಮೂಹಿಕ ಜೀವನದ ಮಟ್ಟವನ್ನು ಏರಿಸುವುದು ರಾಷ್ಟ್ರ ಸರ್ಕಾರದ ಪವಿತ್ರಧ್ಯೇಯ. ಪ್ರಜಾಪ್ರಭುತ್ವ ತತ್ವದಿಂದ ಪೂರ್ಣಗೊಂಡ ಸಮಾಜವು, ವಿದ್ಯಾವಂತ ಪ್ರಜೆಯಿಂದ ಕೂಡಿದ್ದರೆ, ಪ್ರಗತಿಪರವಾಗುವುದು. ಆದುದರಿಂದ ಮಕ್ಕಳ ಮತ್ತು ವಯಸ್ಕರ ವಿದ್ಯಾಭ್ಯಾಸವೆರಡನ್ನೂ ಸರ್ಕಾರವು ನೋಡಿಕೊಳ್ಳತಕ್ಕದ್ದು. ಪ್ರಜೆಗಳ ಪರಸ್ಪರ ಸೌಹಾರ್ದ ಬೆಳೆಯಬೇಕಾದರೆ ಪ್ರಜೆಗಳಲ್ಲಿ ಸ್ವತಂತ್ರ ಚರ್ಚೆಗೆ ಅವಕಾಶವಾಗಬೇಕು. ಚರ್ಚೆಯೆ ಪ್ರಜಾಪ್ರಭುತ್ವದ

---

Bosanquet Calls the State 'The Operative Criticism' of Institutions.
Ernest Banker. Reflections on Government.

ರಚನೆಯಲ್ಲಿ ಬಹುಮುಖ್ಯ ಸಾಧನ; ವರಣಕರ್ತ ಸಮಾಜದ ಪಕ್ಷಗಳ, ಶಾಸ ಕಾಂಗ ಸಭೆ ಮತ್ತು ಸಚಿವಮಂಡಲಿ ಇವುಗಳನ್ನು ತರ್ಕಿಸಿ, ಪರಸ್ಪರ ಚರ್ಚೆ ಗಳಿಂದ ನಿಶ್ಚಯಕ್ಕೆ ಬಂದು ತಮ್ಮ ನಿರ್ದಿಷ್ಟಾಧಿಕಾರಗಳನ್ನು ಪ್ರಯೋಗಿ ಸಿದರೆ ಪ್ರಜಾಪ್ರಭುತ್ವವು ಯಶಸ್ವಿಯಾಗುವುದೆಂದು ಬಾರ್ಕರ್ ರಾಜ ನೀತಿಜ್ಞನು ಹೇಳಿದ್ದಾನೆ. ರಾಷ್ಟ್ರದ ಪ್ರಶ್ನೆಗಳ ವ್ಯವಹಾರಿಕ ವಿಚಾರದಲ್ಲಿ ಉಂಟಾಗುವ ಗೊಂದಲಗಳು, ವಾದವಿವಾದಗಳ ಮೂಲಕ ಪರಿಹಾರವಾಗು ವುದು. ವಾದವಿವಾದಗಳಿಂದುಂಟಾದ ನಿಶ್ಚಿತಗಳ ನಿಯಂತ್ರಣಕ್ಕೆ ಒಳ ಗಾಗುವ ವ್ಯಕ್ತಿಯು ವಿದ್ಯಾವಂತನು. ಅವನು ಇತರರ ಅಭಿಮತದ ಸತ್ಯಾ ಸತ್ಯಾಂಶಗಳನ್ನು ವಿಮರ್ಶಿಸಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ದೇವರ ದೃಷ್ಟಿಯಲ್ಲಿ ಪವಿತ್ರನೂ, ಸ್ವಾತಂತ್ರ್ಯಜೀವನದ ಆಚರಣೆಯಲ್ಲಿ ಅನತಿಕ್ರಮಣನೂ ಎಂಬ ಭಾವನೆ ಪ್ರಜಾಪ್ರಭುತ್ವದ ಒಂದು ಮೂಲಭೂತ ವಾದ ತತ್ವ. ಈ ವಿಧವಾದ ಆಧ್ಯಾತ್ಮಿಕ ಪ್ರಜಾಪ್ರಭುತ್ವ (Mystical Democracy) ಕಾರ್ಯಕಾರಿಯಾಗುವುದೇ (liberal democracy) ಯೆಂಬುದು ಸಂದಿಗ್ಧವಾಗಿದೆ. ಅಧ್ಯಾತ್ಮಿಕ ತತ್ವಗಳನ್ನು ಪ್ರಜೆಗಳು ಪುರ ಸ್ಕರಿಸುವರು. ಆದರೆ ಸಮಾಜಿಕ ಮತ್ತು ವೈಯಕ್ತಿಕ ವಿಚಾರಗಳಲ್ಲಿರುವ ಅಂತರವನ್ನು ದೂಡಲು ಸಹಕರಿಸುವ ಸಾಧನೆಗಳ ನಿರ್ಮಾಣದಲ್ಲಿ ಸಹನೆ ಸಹಿಷ್ಣುತೆಗಳು ಇವೇಯೇ ಎಂಬದೊಂದು ಕಷ್ಟಸಾಧ್ಯವಾದ ಸಮಸ್ಯೆ. ಇತರರ ಸ್ವಾತಂತ್ರ್ಯ ಜೀವನದ ಆಚರಣೆಯಲ್ಲಿ ಸಹಿಷ್ಣುತೆ, ಭ್ರಾತೃ ಭಾವನೆ, ಸಮಾನತೆ, ಮಾನವಜನ್ಮ ಪರಿಶುದ್ಧವೆಂಬ ಭಾವನೆ, ಇವೇ ಮೊದಲಾದ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳನ್ನು ಪ್ರತಿಪಾದಿಸಿ ದರೆ ಸಾಲದು. ಪ್ರತಿಯೊಬ್ಬ ವ್ಯಕ್ತಿಯು ಕಾರ್ಮಿಕನಾಗಲಿ, ಅಡಿಗೆಯುವ ನಾಗಲಿ ಹೀನವೃತ್ತಿಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸುವ ವರಾಗಲಿ, ಇವರುಗಳು ಉತ್ತಮ ಜೀವಿಯಂತೆ ದೇವರ ಸೃಷ್ಟಿಯಲ್ಲಿ, ಸಮಾನಸ್ಕಂದರಾದುದರಿಂದ ತಿರಸ್ಕಾರಕ್ಕೆ ಅನರ್ಹರು; ಮತ್ತು ಸಮಾಜದ ಕಾರ್ಯಕಲಾಪಗಳಲ್ಲಿ ಉತ್ತಮ ವರ್ಗದವರಂತೆ ಭಾಗವಹಿಸಲು ಅಧಿಕಾರ

ವುಳ್ಳ ಒಂದು ನಿರ್ದಿಷ್ಟವಾದ ಮತ್ತು ಒಂದು ಪವಿತ್ರವಾದ ಅಂಗವೆಂಬ ಭಾವನೆ ಮನವರಿಕೆಯಾಗಬೇಕು. ನಿತ್ಯ ಜೀವನದಲ್ಲಿ ಈ ಗಹನವಾದ ತತ್ವವು ಪ್ರತಿಯೊಬ್ಬ ವ್ಯಕ್ತಿಗೂ, ಉತ್ತಮ ಅಧಮವೆಂಬ ಭಾವನಾರಹಿತ ವಾದ ಜೀವನದ ಅನುಭವವು ಉಂಟಾದ ಹೊರತು ಪ್ರಜಾಪ್ರಭುತ್ವವು ಕಷ್ಟಸಾಧ್ಯ. ಈ ತರಹ ಅನುಭವವು ಉಂಟಾದರೆ ಸಮಾಜದಲ್ಲಿನ ರೋಗ ರುಜನಗಳು, ಪ್ರತಿಯೊಬ್ಬ ವ್ಯಕ್ತಿಯ ಕಷ್ಟನಿಷ್ಠೂರಗಳು, ಗೋಚರವಾಗಿ ಅವುಗಳ ಪರಿಹಾರಕ್ಕೆ ತಕ್ಕ ಉಪಾಯಗಳನ್ನು ನಿರ್ಮಿಸಲು ಸಾಧ್ಯವಾಗು ವುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಸಹಜ ಗುಣಗಳು—ಸರ್ಕಾರವು ಅವುಗಳ ಆವಿಷ್ಕರಣಕ್ಕೆ ಅವಕಾಶ ಕಲ್ಪಿಸುವು ದರಿಂದ, ಅವು ಪ್ರಭಾವಯುತವಾಗುವುವು. ನಿಷ್ಣಾತರೂ, ದಕ್ಷರೂ, ಪ್ರಾಜ್ಞರೂ ಆದ ಅಧಿಕಾರ ವರ್ಗದವರು ಕೆಲವು ರಾಷ್ಟ್ರ ಪ್ರಶ್ನೆಗಳಿಗೆ ಕಾಣದ ತಕ್ಕ ಪರಿಹಾರಗಳನ್ನು, ಸಾಮಾನ್ಯ ಪ್ರಜೆಗಳು ತಮ್ಮ ನೈಸರ್ಗಿಕ ವಾದ ಬುದ್ಧಿಯಿಂದ ತಿಳಿಯುವರು. ಪ್ರಜಾಪ್ರಭುತ್ವದ ಆಚರಣೆಯಲ್ಲಿ ಮುಖ್ಯವಾಗಿ ಬೇಕಾದುದು, ಜೀವನ ಮತ್ತು ವಸ್ತುಗಳ ಸಾರ್ವತ್ರಿಕ ಅನುಭವ; ರಾಜಕಾರಣದಲ್ಲಿ ಕೇವಲ ಪ್ರವೀಣತೆ ಅಥವಾ ಪಾಂಡಿತ್ಯವಲ್ಲ. ಒಂದು ನಿರ್ದಿಷ್ಟವಾದ ಶಿಕ್ಷಣದಿಂದ, ಪಾಂಡಿತ್ಯವನ್ನು (academic) ಪಡೆದರೆ ಸಾಲದು. ವಿವೇಕತನ, ಮತ್ತು ಬುದ್ಧಿ (sound judgement and common sense) ಒಂದು ವಿಧವಾದ ಸಾರ್ವತ್ರಿಕ, ಸಾಮೂಹಿಕ ಅನುಭವದಿಂದಲೂ, ಜವಾಬ್ದಾರಿಯಿಂದಲೂ, ಪುರುಷರ, ವಸ್ತುಗಳ ಪರಿಚಯದಿಂದಲೂ — ಆವಿರ್ಭವಿಸುವುದು. ಸತ್ಯಾಂಶ ಗಳನ್ನು ಅರಿಯುವ ಯೋಗ್ಯರನ್ನು ಅಯೋಗ್ಯರಿಂದ ಪ್ರತ್ಯೇಕಿಸುವ, ಯೋಗ್ಯತೆಗೆ ಅನುಗುಣವಾದ ಸಂಭಾವನೆಗಳನ್ನು ಕೊಡುವ, ಈ ವಿಧದ ವಿವೇಚನಾಶಕ್ತಿ (Common sense) ಗಳಿಸಲು ಸುಲಭಸಾಧ್ಯವಲ್ಲ. ಆದರೆ ಜೀವನದ ಅಂತರ್ಯವನ್ನು ಹೊಕ್ಕು ಪ್ರಜಾಪ್ರಭುತ್ವದಲ್ಲಿ ಅಡಗಿರುವ

ತತ್ವಗಳನ್ನು ಈ ವಿಧವಾದ ಮನೋಭಾವನೆಯಿಂದ ತಿಳಿಯಲು *ಸಾಧ್ಯ. ಈ ವಿಧದ ವಿವೇಚನಾಶಕ್ತಿಯುತವಾದ ಪ್ರಜಾವರ್ಗದ ಅಭಿಮತವೇ ಪ್ರಜಾಪ್ರಭುತ್ವದ ರಚನೆಗೆ ತಳಹದಿ. ಈ ಅಭಿಮತದವರಿಂದ ಚುನಾಯಿಸಲ್ಪಟ್ಟ ಕುಲೀನರೇ ರಾಷ್ಟ್ರದ ಅಧಿಕಾರವರ್ಗ. ಪ್ರಜೆಗಳನ್ನು ಎಲೆಕ್ಟ್ (Elect) ಎಂದು, ಕುಲೀನರೆಂದು (Elite) ಕರೆಯಬಹುದು.

## ವ್ಯಕ್ತಿ ವಿಕಾಸ, ಸಂಯಮ, ಸಂಧಾನ, ಸಮನ್ವಯ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃಭಾವನೆ — ಇವು ಪ್ರಜಾ ಪ್ರಭುತ್ವಕ್ಕೆ ಬುನಾದಿ.

ಪ್ರಜಾಪ್ರಭುತ್ವಕ್ಕೆ ಆಧಾರಭೂತವಾದಂತಹ ಕೆಲವು ಗಹನತತ್ವಗಳು ಮನವರಿಕೆಯಾದರೆ ಈ ರಚನೆಯಿಂದ ಉಂಟಾಗಿರುವ ನ್ಯೂನಾತಿರೇಕಗಳು ಅಳಿದುಹೋಗುವುದರಲ್ಲಿ ಸಂಶಯವಿಲ್ಲ. ಮೊದಲನೆಯದಾಗಿ ವ್ಯಕ್ತಿಯು ತನ್ನ ಆತ್ಮವಿಕಾಸವನ್ನು ಸಮಾಜಬೆಂಬಲದಿಂದ ಪಡೆದರೂ ಅಂತ್ಯದಲ್ಲಿ ತನ್ನ ಮೋಕ್ಷಕ್ಕೆ ತಾನೇ ಕಾರಣನಾಗಬೇಕು. ವ್ಯಕ್ತಿಯು ಇತರ ವ್ಯಕ್ತಿಗಳ ವರ್ಗದ ಅಥವಾ ರಾಷ್ಟ್ರೀಯ ಭಾವನೆಗಳನ್ನು ಪರಿಷ್ಕರಿಸಿ, ಅವುಗಳಿಗೆ ಅಧೀನವಾಗಿ ಆತ್ಮತ್ಯಾಗಮಾಡಿಕೊಳ್ಳಬೇಕೆನ್ನುವುದು ತಪ್ಪು ತಿಳುವಳಿಕೆ. ಪ್ರತಿಯೊಬ್ಬ ವ್ಯಕ್ತಿಯು ನೈಸರ್ಗಿಕವಾಗಿ ವಿವೇಚನಾಶಕ್ತಿಯನ್ನು ಪಡೆದಿರುವುದರಿಂದ ಸತ್ಯಾಸತ್ಯಾಂಶಗಳನ್ನು ಪರಿಶೀಲಿಸಿ ತನ್ನ ಆತ್ಮ ವಿವೇಚನೆಗಳಿಗನುಗುಣವಾದ ಅಂಶಗಳನ್ನು ಆರಿಸಿಕೊಂಡು ಜೀವನವನ್ನು ಸಾಧಿಸುವನೆಂಬ ಕಲ್ಪನೆ ಅತ್ಯಾವಶ್ಯಕ. ಹಾಗೆಯೇ ಸ್ವಾತಂತ್ರ್ಯ ಮತ್ತು ಸಮತೆ

---

* "Common sense is one of the rarest qualities, plain or 'Common' means no pretentions and no pomposity; to take people as we find them and entirely disregard their external attributes, their rank, class or anything else."

"The elite are people you chose, the elect are those whom God chooses." A. D. Lindsay — The Modern Democratic State – Chap. 11.

ಮಾನವನ ಆಜನ್ಮ ಹಕ್ಕು. ತನ್ನಲ್ಲಡಗಿರುವ ನೈಸರ್ಗಿಕ ಗುಣವನ್ನು ಬೆಳೆಸುವುದಕ್ಕೂ, ಸಮಾಜದ ಸಂಸ್ಕೃತಿ ಮತ್ತು ಅನುಭವವನ್ನು ಪಡೆಯುವುದಕ್ಕೂ ಮತ್ತು ಅವುಗಳ ವಿಕಾಸದಲ್ಲಿ ಭಾಗ ವಹಿಸುವುದಕ್ಕೂ ವಿದ್ಯಾಭ್ಯಾಸವನ್ನು ಪಡೆಯುವುದಕ್ಕೂ, ಧಾರ್ಮಿಕ, ಸಾಮಾಜಿಕ ವಿಚಾರಗಳಲ್ಲಿ ಸ್ವತಂತ್ರತೆಯಿಂದ ನವೀನಕಲ್ಪನೆಗಳನ್ನು ಪೋಷಿಸುವುದಕ್ಕೂ ಅವುಗಳನ್ನು ಹೇಳುವುದಕ್ಕೂ ಕೇಳುವುದಕ್ಕೂ, ಅವುಗಳನುಗುಣವಾಗಿ ಜೀವನದಕ್ರಮವನ್ನು ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಮಾರ್ಪಾಟು ಮಾಡಿಕೊಳ್ಳುವುದಕ್ಕೂ, ಪ್ರತಿಯೊಬ್ಬವ್ಯಕ್ತಿಗೂ ಪೂರ್ಣ ಹಕ್ಕು ಮತ್ತು ಸ್ವಾತಂತ್ರ್ಯವಿದೆ. ಸುಶೀಲತೆ (Goodness) ಸೌಂದರ್ಯೋಪಾಸನೆ (Beauty), ಸತ್ಯಪರಿಪಾಲನೆ (Truth), ನೀತಿಯುತವಾದ ಸುಖ ಜೀವನ (Happiness), ಈ ಉದಾತ್ತ ಧ್ಯೇಯಗಳಿಂದ ಕೂಡಿದ ಸ್ವಾತಂತ್ರ್ಯವೂ ಮಾನವನ ಅಂತಿಮ ಧ್ಯೇಯ. ರಾಜಕೀಯ, ಪೌರೇಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಂದ, ಮಾನವನ ಜನ್ಮ ಸಾರ್ಥಕವಾಗುವುದು. ಆರೋಗ್ಯ ಮತ್ತು ಗಾಳಿಯಂತೆ ಮನುಷ್ಯನು ಜೀವಿಸುವುದಕ್ಕೆ ಅತ್ಯಂತ ಮುಖ್ಯವಾದದ್ದು ಸ್ವಾತಂತ್ರ್ಯ.

ವ್ಯಕ್ತಿಯಲ್ಲಿ ಪ್ರಕೃತಿಯು ನಿಯಮದಂತೆ, ಉತ್ತಮ ಅಧಮವೆಂಬ ಭಾವನೆಗಳಿಂದಲೂ, ಸತ್ಯಾಸತ್ಯಾಂಶಗಳಿಂದಲೂ ಮತ್ತು ಅರಿಷಡ್ವರ್ಗಗಳಿಂದಲೂ ಕೂಡಿರುವುದರಿಂದ, ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ, ದುರಭಿಮಾನದಿಂದ ಕೂಡಿ, ಸ್ವೇಚ್ಛಾಪರನಾಗಿ, ಗಳಿಸಿದ ಒಂದು ಅಧಿಕಾರವನ್ನು ದುರುಪಯೋಗಪಡಿಸಿ, ಹಿಂಸಾತ್ಮಕವಾಗಿ ವರ್ತಿಸುವುದು ಮಾನವನ ಸಹಜಗುಣ. ಈ ಸ್ವೇಚ್ಛಾಪ್ರವರ್ತನೆಗೆ ತಡೆಗಳು ಏರ್ಪಾಡಾಗಬೇಕಾದರೆ ಯಾರು ಶಾಸನ ಬದ್ಧವಾದ ಜೀವನವನ್ನು ನಡೆಸಬೇಕೊ, ಅವರೇ ಶಾಸನವನ್ನು ರಚಿಸಬೇಕು; ಏಕೆಂದರೆ "ಕಾಲಿಗೆ ಮೆಟ್ಟುವವನಿಗೇ ಎಲ್ಲಿ ಕಚ್ಚುವುದೆಂಬುದು ಅನುಭವವಾಗುವುದು [1] (It is only the wearer who knows where the shoe pinches"). ಎರಡನೆಯದಾಗಿ

ಶಾಸನಕ್ಕೆ ಅಧೀನರಾದವರೇ, ಸಮಾಜದ ಆಕ್ಷೇಪಣೆ ಮತ್ತು ಪರಿಶೀಲನೆಗಳಿಂದ, ತಾವೇ ರಚಿಸಿದ ಶಾಸನಗಳನ್ನು ಕಾಲಾನುಗುಣವಾಗಿ ಮಾರ್ಪಾಡು ಮಾಡಿಕೊಳ್ಳುವರು. ಅಧಿಕಾರವನ್ನು ವಹಿಸಿದವರು ಒಂದು ನಿರ್ದಿಷ್ಟ ಕಾಲಕ್ಕೆ ಮಾತ್ರ ಚುನಾಯಿಸಲ್ಪಡಬೇಕು; ಮತ್ತು ತಾವು ಪಾರುಪತ್ಯೇಗಾರರಾಗಿ ನಡೆಸಿದ ಕಾರ್ಯಕ್ರಮಗಳನ್ನು ಪ್ರಜಾವಗಾಹನಕ್ಕೆ ತಂದು ಅವರ ವಿಶ್ವಾಸ ಬೆಂಬಲಕ್ಕೆ ಪಾತ್ರರಾಗಬೇಕು.

ಪ್ರಜಾವರ್ಗಕ್ಕೆ ಶಾಸನರಚನೆ ಮತ್ತು ಪರಿಶೀಲನೆಯಲ್ಲಿ ದಕ್ಷತೆ ಮತ್ತು ಅನುಭವವಿಲ್ಲದಿದ್ದರೂ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ತಪ್ಪುಗಳನ್ನು ತಿದ್ದುಕೊಂಡು, ರಾಜಕೀಯದಲ್ಲಿ ನಿಷ್ಣಾತರಾಗಬಹುದು ; ಆದುದರಿಂದ ನೈಸರ್ಗಿಕವಾದ ಬುದ್ಧಿಶಕ್ತಿ ಕುಶಲತೆಗಳು ಸಾಮಾನ್ಯ ಪ್ರಜೆಯಲ್ಲಿ ಕಾಣದಿದ್ದ ಮಾತ್ರಕ್ಕೆ ಅವನು ಸ್ವತಂತ್ರ ಜೀವನ, ಮತ್ತು ರಾಜಕಾರಣದಲ್ಲಿ ನಿಶ್ಚಯಗಳನ್ನು ಮಾಡುವುದಕ್ಕೆ ಯೋಗ್ಯತೆಯಿಲ್ಲವೆಂದರ್ಥವಲ್ಲ. ಪ್ಲೇಟೋವಿನ ಆದರ್ಶಭಾವನೆಗಳಿಂದ ಎಷ್ಟೋ ಮುಂದುವರಿದು ಬಂದಿರುವ ಆಧುನಿಕ ಪ್ರಭುತ್ವಗಳು ದಕ್ಷತೆ ಮತ್ತು ಅನುಭವರಹಿತವಾದ ವ್ಯಕ್ತಿಗೂ ರಾಜಕೀಯ ನಿರ್ಧಾರಗಳಲ್ಲಿ ಭಾಗವಹಿಸುವ ಹಕ್ಕುಂಟೆಂಬ ತತ್ವವನ್ನು ಪ್ರತಿಪಾದಿಸಿವೆ. ವರಣಕರ್ತಸಮಾಜವು ಅಜ್ಞತೆ, ಮತ್ತು ನಿರುತ್ಸಾಹದಿಂದ ಕೂಡಿದೆಯಾದುದರಿಂದ ಅದು ಪರಮಾಧಿಕಾರವನ್ನು ಅನುಭವಿಸುವ ಯೋಗ್ಯತೆಯನ್ನು ಪಡೆದಿಲ್ಲವೆಂದು ಹೇಳಲಾಗದು ; ಉತ್ಸಾಹ, ದಕ್ಷತೆ, ಬುದ್ಧಿಶಕ್ತಿ ಮುಂತಾದುವುಗಳು ಇರಲಿ, ಇಲ್ಲದೆಹೋಗಲಿ, ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರದ ವಿದೇಶಾಂಗ ನೀತಿ, ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳನ್ನು ಪರಿಹರಿಸುವುದರಲ್ಲಿ, ತನ್ನ ಅಭಿಮತವನ್ನು ವೋಟಿನ ಮೂಲಕ ಸೂಚಿಸಬೇಕು. ವ್ಯಕ್ತಿಯ ಉತ್ತಮ ಮತ್ತು ನೈತಿಕ ಜೀವನಕ್ಕೆ ಅಡ್ಡಿಬರುವ ಪ್ರತಿಬಂಧಕಗಳನ್ನು ನಿವಾರಿಸಿ, ಅವನ ದೈಹಿಕ, ಮತ್ತು ಮಾನಸಿಕ ವಿಕಾಸಕ್ಕೆ ಅತ್ಯಾವಶ್ಯಕವಾದ ಸನ್ನಿವೇಶವನ್ನು ಏರ್ಪಡಿಸಿ, ಉತ್ತೇಜನ ಕೊಡಬೇಕಾದುದು ರಾಷ್ಟ್ರಸರ್ಕಾರದ ಮುಖ್ಯ ಕರ್ತವ್ಯ.

ಪ್ರಜಾಪ್ರಭುತ್ವದಲ್ಲಿ ಕಂಡುಬರುವ ಕುಂದುಕೊರತೆಗಳು ನಿವಾರಣೆಯಾಗಬೇಕಾದರೆ ಪ್ರಜಾಪ್ರಭುತ್ವದ ಧ್ಯೇಯಗಳನ್ನು ಮತ್ತು ಅಂತಿಮ ಗುರಿಯನ್ನು ಸ್ಪಷ್ಟೀಕರಿಸದರೆ ಮಾತ್ರ ಸಾಲದು. ಸರ್ಕಾರವು ಪ್ರಜಾಭಿಮತಕ್ಕನುಸಾರವಾದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಬಲ ಪ್ರಯೋಗವಿಲ್ಲದೆ, ಕಾಲಾನುಗುಣವಾಗಿ ಬದಲಾವಣೆಗಳನ್ನು ಮಾಡಬೇಕು. ಶಾಸನಸಭೆಗಳು ಪರಿವರ್ತನೆಯಾಗುತ್ತಿರುವ ಆರ್ಥಿಕ ಜೀವನಕ್ಕನುಸಾರವಾಗಿ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕು. ವರ್ಣಕರ್ತಸಮಾಜದ ಮತ್ತು ಬಹು ಸಂಖ್ಯಾತರ ಬೆಂಬಲವನ್ನು ಪಡೆಯಬೇಕಾದರೆ ಬಂಡವಾಳಗಾರರಿಗೂ ಮತ್ತು ಕಾರ್ಮಿಕರಿಗೂ ಇರುವ ಅಂತರಗಳನ್ನು ಹೋಗಲಾಡಿಸಬೇಕು. ಫ್ರೆಂಚ್ ರಾಷ್ಟ್ರೀಯ ಮಹಾಕ್ರಾಂತಿಯ ಧ್ಯೇಯಗಳನ್ನು ಮುಂದಿಟ್ಟುಕೊಂಡು ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಜೆಗಳು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು: ರಷ್ಯದ ಮಹಾಕ್ರಾಂತಿಯ ಉದಾತ್ತ ಸಂಕಲ್ಪ ಮತ್ತು ಧ್ಯೇಯಗಳು ಆರ್ಥಿಕ ಜೀವನದಲ್ಲಿ ಸಮತೆಯನ್ನು ಸಾಧಿಸುವುದಕ್ಕೆ ಹೋರಾಡುವಂತೆ ರಾಷ್ಟ್ರಗಳನ್ನು ಹುರುದುಂಬಿಸಿವೆ. ಭ್ರಾತೃಭಾವನೆಯಿಂದ ಲೋಕ ಕಲ್ಯಾಣವೆಂದು ಮಹಾತ್ಮ ಗಾಂಧಿಯವರು ಸಾರಿದ್ದಾರೆ.

ರಚನಾತ್ಮಕ ಕಾರ್ಯಗಳಲ್ಲಿಯೂ ಮಾರ್ಪಾಟುಗಳಾಗಬೇಕು; ಶಾಸನಸಭಾ ಸದಸ್ಯರಿಗೂ, ಕಾರ್ಯಾಂಗ ಸಮಿತಿಯ ಸಚಿವರಿಗೂ, ಅಧಿಕಾರಿಗಳಿಗೂ ನಿಕಟಸಂಬಂಧಗಳ ಏರ್ಪಾಟಾಗಬೇಕು. ರಾಷ್ಟ್ರದ ವಿವಿಧ ಮತ್ತು ಜಟಿಲ ಪ್ರಶ್ನೆಗಳ ಪರಿಹಾರದಲ್ಲಿ ಅತ್ಯಾಗತ್ಯವಾದ ಸಲಹೆಗಳನ್ನು ಕೊಡಲು ಹೆಚ್ಚುಹೆಚ್ಚು ಸಹಕಾರಸಮಿತಿಗಳು ರಚಿತವಾಗುವುದು ಆವಶ್ಯಕ. ರಾಜಕೀಯ ನೀತಿಯನ್ನು ನಿರ್ಧರಿಸುವುದು, ಸಲಹೆಗಳನ್ನು ಕೊಡುವುದು, ಶಾಸನ ಸದಸ್ಯರಿಗೂ ಮತ್ತು ಆಡಳಿತಾಂಗದ ಅಧಿಕಾರಿಗಳಿಗೂ ಬೇಕಾಗುವ ವಿಷಯವನ್ನು ಸಂಗ್ರಹಿಸುವುದು, ಪ್ರೇರೇಪಿಸುವುದು, ಮತ್ತು ಎಚ್ಚರಿಕೆ ಕೊಡುವುದು, ಸಮಿತಿಗಳಕೆಲಸ. ಶಾಸನಸಭೆಗೂ, ಮತ್ತು ಕಾರ್ಯಾಂಗಕ್ಕೂ

ಮಧ್ಯೆ ಸಮಿತಿಗಳು ಪ್ರಭಾವಯುತವಾಗಿ ವರ್ತಿಸಿದಲ್ಲಿ, ಸಚಿವರು ನಿರಂಕುಶಾಧಿಕಾರವನ್ನು ಬಯಸಲು ಸಾಧ್ಯವಾಗುವುದಿಲ್ಲ. ಆಗ ಸಮಿತಿಗಳು ಹೆಚ್ಚುಹೆಚ್ಚಾಗಿ ಅಧಿಕಾರಿಗಳಿಗೂ, ಸಾಮಾನ್ಯ ಪ್ರಜೆಗೂ ನಿಕಟ ಸಂಬಂಧವನ್ನು ಏರ್ಪಡಿಸಿ, ಒಂದು ಅಂಗವು ಮತ್ತೊಂದನ್ನು ದ್ವೇಷಿಸದಂತೆ ಪ್ರತಿಬಂಧಿಸುವುದು. ಶಾಸನರಚನೆಗೆ ಸಂಬಂಧಪಟ್ಟ ಕಾಗದಪತ್ರಗಳ ಪರಿಶೀಲನೆ, ಅಧಿಕಾರಿಗಳ ತನಿಕೆ, ಮತ್ತು ಕಾರ್ಯವಿಮರ್ಶೆ, ಸಚಿವರನ್ನು ಆಗಿಂದಾಗ್ಗೆ ಸಂಧಿಸುವುದು ; ಪ್ರಚಲಿತ ಪ್ರಶ್ನೆಗಳ ವಿಚಾರವಾಗಿ ಸ್ಪಷ್ಟವಾದ ವರ್ತಮಾನಗಳ ಸಂಗ್ರಹಣ, ಶಾಸನಸಭೆಯು ಸಮಗ್ರವಾಗಿ ಪರಿಶೀಲಿಸುವುದರ ಮುಂಚಿತವಾಗಿ ಕಾರ್ಯಾಂಗ ಸಮಿತಿಗಳು ಆಡಳಿತದ ದಕ್ಷತೆಗಾಗಿ ನಿರ್ಮಾಣಮಾಡುವ ನಿಯಮ ಮತ್ತು ಶಾಸನಗಳನ್ನು ಕೂಲಂಕಶವಾಗಿ ವಿಮರ್ಶಿಸುವುದು-ಇವೇ ಮುಂತಾದ ಕೆಲಸಗಳನ್ನು ಶಾಸನ ಸಭಾಸದಸ್ಯನು ನಿರ್ವಹಿಸತಕ್ಕದ್ದು. ಶಾಸಕಾಂಗ ಸಭೆಯು ಪ್ರಜಾಭಿಮತವನ್ನು ಶಾಸನ ರಚನೆಯಲ್ಲಿ ಪ್ರತಿಬಿಂಬಿಸಬೇಕು. ಪ್ರಜಾಪ್ರಮುಖರನ್ನೂ ವಿವಿಧ ಸಂಸ್ಥೆಗಳ ಪ್ರತಿನಿಧಿಗಳನ್ನೂ, ಸಾರ್ವತ್ರಿಕ ಭಾವನೆಗಳನ್ನೂ ಎತ್ತಿಹಿಡಿದು ಪ್ರಜಾವರ್ಗದಲ್ಲಿ ವಿಶ್ವಾಸಗಳಿಸಿದವರನ್ನೂ ಶಾಸನಸಭೆಯು ಆಹ್ವಾನಿಸಿ ಸಭೆಯ ಮುಂದೆ ಮಂಡಿಸಿರುವ ಪ್ರಶ್ನೆಗಳಿಗೆ ಅವರ ಅಭಿಮತವನ್ನು ತಿಳಿಯಬೇಕು. ರೈತಾಪಿ ಸಮಸ್ಯೆಗಳಲ್ಲಿ ರೈತಪ್ರಮುಖರ ಅಭಿಮತವನ್ನೂ, ಕಾರ್ಖಾನೆ ಮತ್ತು ಔದ್ಯೋಗಿಕ ಸಮಸ್ಯೆಗಳಲ್ಲಿ ಮಾಲೀಕರ ಮತ್ತು ಕಾರ್ಮಿಕರ ಪ್ರತಿನಿಧಿಗಳ ಅಭಿಮತವನ್ನೂ ಸಾರ್ವತ್ರಿಕ ವಿಚಾರಣೆಗಳಲ್ಲಿ ಲಾಲಿಸಬೇಕು. ಶಾಸನಸಭೆಯ ಕಾರ್ಯಗಳು ಹೆಚ್ಚಿದಲ್ಲಿ ಸ್ಥಳೀಯ ಸರ್ಕಾರಗಳಿಗೂ, ಸ್ಥಳೀಯ ಸಂಸ್ಥೆಗಳಿಗೂ, ವ್ಯಾಪಾರ, ವಾಣಿಜ್ಯ, ಉದ್ಯೋಗ ಮತ್ತು ಕಾರ್ಮಿಕ ಸಮಿತಿಗಳಿಗೂ ಹೆಚ್ಚುಹೆಚ್ಚಾಗಿ ಜವಾಬ್ದಾರಿಯನ್ನು ಶಾಸನ ಸಭೆಯು ಹೊರಿಸಬೇಕು. ಈ ವಿಧವಾದ ಮಾರ್ಪಾಟುಗಳಿಂದ ರಾಜಕೀಯದಲ್ಲಿ ಉತ್ಸಾಹ ಮತ್ತು ದಕ್ಷತೆಯನ್ನು ಪ್ರಜಾವರ್ಗವು ತೋರಿಸಿ ಪ್ರಜಾಪ್ರಭುತ್ವವನ್ನು ಯಶಸ್ವಿಯನ್ನಾಗಿ ಮಾಡಬಹುದು.

# ಪ್ರಕರಣ ೧೭

## ಪ್ರಜಾಪ್ರಭುತ್ವ ಮತ್ತು ಅಂತರರಾಷ್ಟ್ರೀಯ ಭಾವನೆಗಳು

ಆಧುನಿಕ ರಾಷ್ಟ್ರಗಳು ಎರಡು ಭಾವನೆಗಳ ಆಧಾರದ ಮೇಲೆ ನಿಂತಿವೆ. ಜನಾಂಗ, ರಾಷ್ಟ್ರೀಯ ಭಾವನೆ ಮತ್ತು ರಾಷ್ಟ್ರ ಒಳ ಆಡಳಿತ ಮತ್ತು ವಿದೇಶಾಂಗ ನೀತಿಗಳಲ್ಲಿ ಪರಮಾಧಿಕಾರವನ್ನು ಪಡೆದಿರ ತಕ್ಕದ್ದು. ಭಾಷೆ, ಮತ, ಚರಿತ್ರೆ, ರಾಷ್ಟ್ರ ಪ್ರೇಮಪೂರಿತವಾದ ಘಟನೆಗಳು, ಸಮಾಜದ ಸೌಶೀಲ್ಯ, ಜಾತಿ, ಇವೇ ಮುಂತಾದ ಉಪಕರಣಗಳು ರಾಷ್ಟ್ರೀಯ ಭಾವನೆಗಳನ್ನು ಉದ್ರೇಕಿಸಿ ರಾಷ್ಟ್ರದ ಐಕ್ಯ ತೆಯ ಸಾಧನೆಯಲ್ಲಿ ಕೊನೆಗೊಂಡಿವೆ. ಸಮಾಜದಲ್ಲಿ ಮಾತನಾಡುವುದು ಒಂದು ಭಾಷೆ. ಒಪ್ಪಿರುವುದು ಒಂದೇ ಮತ. ಒಂದೇ ಜಾತಿಯ ಜೀವನದಲ್ಲಿ, ಕುಲದಂತೆ ಸಮಾಜವು ಒಗ್ಗಟ್ಟಾಗಿ ಅದರ ಧ್ಯೇಯಗಳ ಸಾಧನೆಗೆ ಹೋರಾಡುತ್ತದೆ. ಭಾವನೆಗಳು ರಾಷ್ಟ್ರದಲ್ಲಿ ವಾಸಮಾಡುವವ ರೊಡನೆ ಭ್ರಾತೃತ್ವ ಮತ್ತು ರಾಷ್ಟ್ರಪ್ರೀತಿಯನ್ನುಂಟುಮಾಡಿ ಪ್ರತ್ಯೇಕ ರಾಷ್ಟ್ರ ಸೃಷ್ಟಿಯಾಗಬೇಕೆಂಬ ಆಕಾಂಕ್ಷೆಯನ್ನು ಹುಟ್ಟಿಸುತ್ತವೆ. ಹತ್ತೊಂಬತ್ತ ನೆಯ ಶತಮಾನದಿಂದೀಚೆಗೆ ರಾಷ್ಟ್ರೀಯ ಭಾವನೆಗಳಿಂದ ಕೂಡಿದ ಅನೇಕ ರಾಷ್ಟ್ರಗಳು ಹುಟ್ಟಿವೆ. ಯೂರೋಪು ಖಂಡದ ಜರ್ಮನಿಯಲ್ಲಿ ಒಂದೇ ಜಾತಿಗೆ ಸೇರಿದವರನ್ನೆಲ್ಲ ಒಟ್ಟುಗೂಡಿಸಬೇಕೆಂಬ ಭಾವನೆಯು ಭಯಂಕರ ಸ್ಪರ್ಧೆಗಳಿಗೂ ಪರಸ್ಪರ ವೈಷಮ್ಯ ಕಲಹಗಳಿಗೂ, ದೌರ್ಜನ್ಯಕ್ಕೂ, ಹಿಂಸಾತ್ಮಕ ವೃತ್ತಿಗೂ ಮತ್ತು ಘೋರ ಯುದ್ಧಕ್ಕೂ ಆಸ್ಪದ ಕೊಟ್ಟಿತು. ರಾಷ್ಟ್ರವು ಸಾಮ್ರಾಜ್ಯ ಭಾವನೆಗಳನ್ನು ಬೆಳೆಸಿ ಹಿಂದುಳಿದ ಜನಾಂಗಗಳ ಆಸ್ತಿ, ಭೂಮಿಗಳ ಆಕ್ರಮಣದಲ್ಲಿ ನಿರತವಾಯಿತು. ದೊಡ್ಡ ದೊಡ್ಡ ಸಾಮ್ರಾಜ್ಯಗಳು ಸ್ಥಾಪಿತವಾಗಿ ಪ್ರಗತಿಪರ ಜನಾಂಗಗಳ ಉತ್ಸಾಹ, ಹೆಮ್ಮೆ, ಸಾಹಸ, ಮಾತ್ಸರ್ಯಗಳನ್ನು ಎಬ್ಬಿಸಿ ಅನೇಕ ತೆರನಾದ

ಸಾಮ್ರಾಜ್ಯಭಾವನೆಗಳನ್ನು ಪೋಷಿಸುವಂತೆ ಉತ್ತೇಜನ ಕೊಟ್ಟವು. ಇದರ ಪರಿಣಾಮವಾಗಿ ಅಧೀನ ಜನಾಂಗಗಳೂ ಕೂಡ ಪ್ರತ್ಯೇಕ ರಾಷ್ಟ್ರ ನಿರ್ಮಾಣದಲ್ಲಿ ನಿರತವಾಗಿವೆ. ಆದರೆ ಹಿರಿಯ ರಾಷ್ಟ್ರಗಳ ಮಹತ್ವಾಕಾಂಕ್ಷೆ ಇತರ ರಾಷ್ಟ್ರಗಳ ಜನಾಂಗಗಳ ಆಕ್ರಮಣವಲ್ಲ. ಪರಭೂಮಿಯ ಹತೋಟಿಗಾಗಿ ಹಸಿವು ಬಾಯಾರಿಕೆಗಳು, ಇತರ ರಾಷ್ಟ್ರಗಳಲ್ಲಿ ಆರ್ಥಿಕ ಜೀವನವನ್ನು ನಿಯಂತ್ರಿಸಿ ವಿಶೇಷ ಲಾಭವನ್ನು ಪಡೆಯುವುದು, ಇದರಿಂದ ಆರ್ಥಿಕ ಪ್ರಪಂಚದಲ್ಲಿ ಉತ್ಪನ್ನವಾಗಿರುವ ಶೋಚನೀಯ ಪರಿಸ್ಥಿತಿಯೇ ಅಂತರರಾಷ್ಟ್ರೀಯ ಅನಾಯಕತ್ವಕ್ಕೆ ಹೆದ್ದಾರಿಯಾಗಿದೆಯೆಂದು ಹೇಳಬಹುದು. ವೈಷಮ್ಯ ಸ್ಪರ್ಧೆಗಳಿಂದ ಕೂಡಿದ ಸಾಮ್ರಾಜ್ಯದ ರಚನೆಯಲ್ಲಿ ಯುದ್ಧವು ಅತ್ಯಗತ್ಯವಾದ ಉಪಕರಣವೆಂದು ಅಲ್ಲಲ್ಲಿ ಮನವರಿಕೆಯಾಯಿತು. ಸ್ಪರ್ಧೆಯು ರಾಜಕೀಯ ಜೀವನದಲ್ಲಿ ಅಡಗಿದೆಯೆಂದೂ, ಪರಮಾಧಿಕಾರವುಳ್ಳ ರಾಷ್ಟ್ರಗಳು ಸಾಮ್ರಾಜ್ಯಭಾವನೆಗಳನ್ನು ಪೋಷಿಸುವವರೆಗೂ ಯುದ್ಧವು ಅನಿವಾರ್ಯವೆಂದೂ, ಯುದ್ಧಗಳು ರಾಷ್ಟ್ರಗಳ ಆಧ್ಯಾತ್ಮಿಕವಾದ ಅನುಭವವೆಂದೂ, ಅಲೆಗಳಿಂದ ಸಾಗರವು ಕಲ್ಮಷಗಳನ್ನು ದೂಡಿ ತನ್ನ ಧರ್ಮ ಮತ್ತು ಚೇತನವನ್ನು ಹೇಗೆ ಕಾಪಾಡಿಕೊಳ್ಳುವುದೋ ಹಾಗೆಯೇ ರಾಷ್ಟ್ರವು ಯುದ್ಧಗಳಿಂದ ವಿಕಾಸಹೊಂದುವುದೆಂದೂ ಜರ್ಮನಿಯ ತತ್ವಜ್ಞಾನಿಗಳಾದ ಪಿಸ್ಟೆ ಮತ್ತು ಟ್ರೈಸ್ಕ ಪ್ರತಿಪಾದಿಸಿದ್ದಾರೆ. ಯುದ್ಧವು ರಾಷ್ಟ್ರಪ್ರಗತಿಸಾಧಕವಾದುದೆಂದು ಹೇಳುವುದು ಶೋಚನೀಯ; ಆರ್ಥಿಕ ಜೀವನದಲ್ಲಿ ಅವ್ಯವಸ್ಥೆ, ರಾಷ್ಟ್ರಗಳ ಪರಾಧೀನತೆ, ಅರಾಜಕತ್ವ, ಆಸ್ತಿ ವಸತಿಗಳ ನಾಶ, ಬಹು ಸಂಖ್ಯೆಯ ಪ್ರಜಾನಷ್ಟ, ದಾರಿದ್ರ್ಯ, ಸಾಂಕ್ರಾಮಿಕ ಜಾಡ್ಯ ಮತ್ತು ಆತ್ಮನಾಶ— ಇವು ಯುದ್ಧದ ಪರಿಣಾಮಗಳು. ಯುದ್ಧವೆಂದರೆ ಬಹಳ ವೆಚ್ಚ; ಗೆದ್ದವರು ಸೋತವರೆಂದಿಲ್ಲ, ಯುದ್ಧವು ನೀತಿಯುತವಾದ ಸಾಧನವಲ್ಲವಾದುದರಿಂದ

*Laski* Nationality and the Future of Civilisation.

*P. T. Moon:* Imperialism and world Politics.

*R. L. Buell* International Relations.

ಅದರಿಂದ ಧರ್ಮಸಂಸ್ಥಾಪನೆಯಾಗುವುದಿಲ್ಲ. ಲಾಭವಿಲ್ಲ; ರಾಷ್ಟ್ರದ ಮತ್ತು ಸಂಸ್ಕೃತಿಯ ಬೆಳವಣಿಗೆಯಿಲ್ಲ. ಕ್ರಮ ವಿಕಾಸದಲ್ಲಿ ಯುದ್ಧೋಪಕರಣದಿಂದ ಮೇಲಿನ ಮತ್ತು ಉತ್ತಮ ಮಟ್ಟವನ್ನು ವ್ಯಕ್ತಿಯು ಏರುವುದಿಲ್ಲ.

ರಾಷ್ಟ್ರವು ಪರಸ್ಪರ ಸಹಕಾರ ಸೌಹಾರ್ದ ಮತ್ತು ಸುವ್ಯವಸ್ಥಿತ ಜೀವನದಿಂದ ಪ್ರಗತಿಪರವಾಗುವುದು ಯುದ್ಧದಿಂದಲ್ಲ. ಅಂತರರಾಷ್ಟ್ರೀಯ ಪರಿಸ್ಥಿತಿಯು ಯುದ್ಧಮಯವಾಗದಂತೆ ತಡೆಗಟ್ಟಿದರೆ ಸಾಲದು. ರಾಷ್ಟ್ರ ಜೀವನದಲ್ಲಿ ವ್ಯಕ್ತಿ, ಸಂಸ್ಥೆಗಳ ಮತ್ತು ರಾಜ್ಯಾಂಗಗಳ ಸಂಬಂಧವಿರುವಂತೆ ಅಂತರ ರಾಷ್ಟ್ರೀಯ ಜೀವನದಲ್ಲಿ ವೈಷಮ್ಯರಹಿತವಾದ ನಿಕಟ ಸಂಬಂಧವಿರಬೇಕು. ಅಂತರ ರಾಷ್ಟ್ರೀಯ ಭಾವನೆಯ ಬೆಳೆವಣಿಗೆಯಲ್ಲಿ ರಾಷ್ಟ್ರಗಳ ಸಹಕಾರವೇ ಪ್ರಥಮ ಮತ್ತು ಪ್ರಧಾನ ಸಾಧನ. ಈ ಬೆಳೆವಣಿಗೆಯಲ್ಲಿ ರಾಷ್ಟ್ರೀಯ ಭಾವನೆಗಳಿಗೂ ರಾಷ್ಟ್ರಗಳ ಆತ್ಮಾವಲಂಬನೆಗೂ ಮಾನ್ಯ ಸ್ಥಾನವಿದೆ. ಸ್ಪರ್ಧೆಯು ರಾಷ್ಟ್ರದ ಅಂತರ್ಗತವಾದ ತತ್ವವಲ್ಲ, ರಾಷ್ಟ್ರವು ಪೂರ್ಣಕಲ್ಪನೆ ಅಥವಾ ಚಿತ್ರವಲ್ಲ. ಅಂತರ ರಾಷ್ಟ್ರೀಯ ಸಂಸಾರದಲ್ಲಿ ರಾಷ್ಟ್ರವು ಒಂದು ಭಾಗವಾದುದರಿಂದ ಆತ್ಮ ನಿರ್ಣಯಕ್ಕೂ ಆತ್ಮನಾಶಕ್ಕೂ ಅವಕಾಶವಿಲ್ಲ ಎಂಬ ಭಾವನೆಗಳು ಸಹಕಾರ ತತ್ತ್ವದಲ್ಲಿ ಅಡಗಿವೆ. ಅಂತರ ರಾಷ್ಟ್ರೀಯ ಭಾವನೆಯೆಂದರೆ ಪರಮಾಧಿಕಾರವನ್ನು ಗಳಿಸಿರುವ ನಿಯಂತ್ರಣಕ್ಕೆ ಒಳಗಾಗದ ಪೆಡಂಭೂತ ರಾಷ್ಟ್ರ ರಚನೆಯೆಂದಲ್ಲ. ಏತಕ್ಕೆಂದರೆ ಅಂತಹ ರಾಷ್ಟ್ರವು, ಜನಾಂಗದ ಆತ್ಮ ನಿರ್ಣಯದ ಅಧಿಕಾರಕ್ಕೆ ಮುಟ್ಟುಗೋಲು ಹಾಕಬಹುದು.

ರಾಷ್ಟ್ರಗಳು ರಾಷ್ಟ್ರೀಯತೆಯನ್ನು ಕಳೆದುಕೊಳ್ಳದೆ ಅಂತರ ರಾಷ್ಟ್ರೀಯ ಭಾವನೆಯನ್ನು ಬೆಳೆಸುವುದು ಹೇಗೆಂಬುದು ಪ್ರಧಾನ ಪ್ರಶ್ನೆ. ಅಂತರರಾಷ್ಟ್ರೀಯ ಭಾವನೆ ಮತ್ತು ಪರಮಾಧಿಕಾರದ ಆಧಾರದ ಮೇಲೆ ರಚಿತವಾದ ರಾಷ್ಟ್ರಗಳಲ್ಲಿ ವ್ಯಾಜ್ಯ ವ್ಯವಹಾರಗಳಿಲ್ಲವೆಂದಲ್ಲ, ವ್ಯವಹಾರ

*L T. Hobhouse :* The Metaphysical theory of the State.

*T. H. Green :* Works

*St. Augustine :* Th e City-of God.

ಗಳ ವ್ಯವಸ್ಥೆಗಳು ರಾಷ್ಟ್ರದ ಒಳ ಆಡಳಿತದಲ್ಲಿ ವ್ಯಕ್ತಿ ವ್ಯಕ್ತಿಗೂ, ವ್ಯಕ್ತಿಗೂ ಮತ್ತು ಸಂಸ್ಥೆ ಮತ್ತು ಸರ್ಕಾರಕ್ಕೂ ನಡೆಯುವಂತೆ ಅಂತರ ರಾಷ್ಟ್ರೀಯ ಸಮಾಜದಲ್ಲಿಯೂ ನಿಯಮಬದ್ಧವಾಗಿ ನಡೆಯಬೇಕು. ಸಂಸ್ಥೆ ಗಳು ಶಕ್ತಿರಹಿತವಾಗಿ ಸ್ವಾವಲಂಬನೆಯನ್ನು ಗಳಿಸಿರುವಂತೆ ರಾಷ್ಟ್ರಗಳು ಬಲಪ್ರಯೋಗವಿಲ್ಲದೆ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸಹಕಾರ ಮತ್ತು ಸೌಹಾರ್ದದಿಂದ ತೀರ್ಮಾನ ಪಡೆಯಬೇಕು. ಅಂದರೆ ರಾಷ್ಟ್ರಗಳು ಅಂತರರಾಷ್ಟ್ರೀಯ ಸ್ಥಿತಿಯಲ್ಲಿ ಅಧಿಕಾರವನ್ನು ಒಂದು ನಿರ್ದಿಷ್ಟ ಪ್ರಧಾನ ರಾಜ್ಯದಲ್ಲಿ ಕ್ರೋಢೀಕರಿಸಬೇಕೆಂದಲ್ಲ.

ಸಾಮ್ರಾಜ್ಯ ಭಾವನೆಯು ಸುವ್ಯವಸ್ಥಿತ ರೀತಿಯಲ್ಲಿ ಹರಿದರೆ ಹಿಂದುಳಿದ ಜನಾಂಗಗಳು ಪ್ರಗತಿಪರವಾಗುವುವೆಂಬ ಕಲ್ಪನೆ ಮೂಡಿದೆ. ಅಜ್ಞತೆ ಮತ್ತು ಅರಾಜಕತ್ವದಿಂದ ಕೂಡಿರುವ ರಾಷ್ಟ್ರಗಳನ್ನು ಆಕ್ರಮಿಸ ಬೇಕಾದುದಿಲ್ಲ. ಆ ರಾಷ್ಟ್ರಗಳ ಆರ್ಥಿಕ ಜೀವನದ ಹತೋಟಿಯಿಂದ ಅವು ಗಳ ಸಹಕಾರವನ್ನು ಪಡೆದು ಅವುಗಳ ಅಭ್ಯುದಯಕ್ಕಾಗಿ ಹಿರಿಯ ರಾಷ್ಟ್ರ ಗಳು ಬೆಂಬಲವಾಗಬಹುದೆಂಬ ಭಾವನೆ ಇರುವುದರಿಂದ ವೈಷಮ್ಯ ಮತ್ತು ಬಲಪ್ರಯೋಗಕ್ಕೆ ಮಾರ್ಗವಿಲ್ಲ. ಹಿಂದುಳಿದ ಜನಾಂಗಗಳು ಸಾಮ್ರಾಜ್ಯಗಳ ಸಂಪರ್ಕದಿಂದ ಅಂತರರಾಷ್ಟ್ರೀಯ ಪ್ರತಿಪಾದನೆಯಲ್ಲಿ ಹೆಚ್ಚು ಉತ್ಸುಕ ರಾಗಿರುವವರೆಂದು ಮಹಾಕವಿ ಟಾಗೂರು ಹೇಳಿದ್ದಾನೆ. ಆದರೆ ಅಂತರ ರಾಷ್ಟ್ರೀಯ ವ್ಯವಹಾರಗಳ ತೀರ್ಮಾನಗಳು ಬಲರಹಿತವಾಗಿ ನಡೆಯುವು ದಕ್ಕೆ ವ್ಯವಸ್ಥೆಯಾದರೆ ಸಾಮ್ರಾಜ್ಯಭಾವನೆಯು ತಾನಾಗಿಯೇ ಅಳಿದು ಹೋಗುವುದು. ರಾಷ್ಟ್ರೀಯ ಭಾವನೆಯು ಅಳಿದುಹೋಗಲು ಸಾಧ್ಯವಿಲ್ಲ, ಅಳಿದುಹೋಗಬೇಕಾದುದಿಲ್ಲ. ರಾಷ್ಟ್ರದ ಸಂಸ್ಕೃತಿ, ಮತ, ಭಾಷೆ ಮತ್ತು ಸಂಪ್ರದಾಯಗಳ ಬೆಳವಣಿಗೆಗೆ ಅಂತರರಾಷ್ಟ್ರೀಯ ಭಾವನೆ ಪ್ರತಿಬಂಧಕ

*Sachin Sen* Political Philosophy of Rabindranath Tagore.

*T H Green* · Vol. II "War comes from the imperfect organisation of the State as an ideal organiser of rights."

*B. Bosanquet* The Philosophical Theory of the State.

*A. R Lord* The Principles of Politics.

ವಲ್ಲ. ಆದರೆ ಅಂತರರಾಷ್ಟ್ರೀಯ ಜೀವನದಲ್ಲಿ ರಾಷ್ಟ್ರಗಳ ಬಲಪ್ರದರ್ಶನಕ್ಕೆ ಅವಕಾಶವಿಲ್ಲ.

ಅಂತರ ರಾಷ್ಟ್ರೀಯ ಸಮಾಜ ಜೀವನವು ಸ್ಥಾಪಿತವಾಗುವುದು ಎಲ್ಲ ರಾಷ್ಟ್ರಗಳೂ ಏಕಮುಖವಾಗಿ ಶಾಂತಿ, ಸಮತೆ, ಅಹಿಂಸೆ ಮತ್ತು ಸತ್ಯ ಜೀವನವನ್ನು ಸಾಧಿಸುವುದರಿಂದ. ಸ್ವಾತಂತ್ರ್ಯ ಸಾಧನೆ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ರಾಷ್ಟ್ರಗಳು ತೊಡಗಿದ್ದುವು. ಇಪ್ಪತ್ತನೆಯ ಶತಮಾನದಲ್ಲಿ ಅಂತರರಾಷ್ಟ್ರೀಯ ಭಾವನೆ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ರಾಷ್ಟ್ರಗಳು ತೊಡಗಿವೆ ಎಂದು ಭಾವಿಸಬಹುದು. ರಾಷ್ಟ್ರಗಳ ಒಳ ಆಡಳಿತದಲ್ಲಿಯೂ ಮತ್ತು ವಿದೇಶಾಂಗ ನೀತಿಯಲ್ಲಿಯೂ ರಚನಾತ್ಮಕದ ಪೂರ್ಣ ಕಲ್ಪನೆ ಇಲ್ಲದಿರುವುದರಿಂದಲೆ ವ್ಯಾಜ್ಯಗಳು ಮತ್ತು ಯುದ್ಧಗಳು ಸನ್ನಿಹಿತವಾಗುವುದೆಂದು ಧ್ಯೇಯವಾದಿಯಾದ ಗ್ರೀನಿನ ಅಭಿಮತ. ಪ್ರೀತಿ ಮತ್ತು ವಿಶ್ವಾಸಗಳ ಆಧಾರದ ಮೇಲೆ ಸಂಸಾರವೂ, ಸಂಸಾರಗಳ ಸಹಕಾರದಿಂದ ಗ್ರಾಮ ಜೀವನವೂ, ಗ್ರಾಮಗಳ ಸಹಕಾರದಿಂದ ರಾಷ್ಟ್ರ ನಿರ್ಮಾಣವಾಗಿ ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಜೀವನವು ವಿಕಾಸಿಸುತ್ತದೆಯೆಂದು ಪ್ರಾಚೀನ ಯುಗದಲ್ಲಿ ಗ್ರೀಕ್ ತತ್ತ್ವಜ್ಞಾನಿಯಾದ ಅರಿಸ್ಟಾಟಲನು ಪ್ರತಿಪಾದಿಸಿರುವನು. ಆಧುನಿಕ ರಾಷ್ಟ್ರವು ವ್ಯಕ್ತಿ ಮತ್ತು ಕುಲ, ಸಂಘಗಳ ನಿರ್ದಿಷ್ಟ ಆರ್ಥಿಕ ಮತ್ತು ಸಾಮಾಜಿಕ ಜೀವನ ಸಮಸ್ಯೆಗಳನ್ನು ಪರಿಹರಿಸುವ ಸಂಸ್ಥೆಗಳ ಸಂಸ್ಥೆ. ಅಂತರರಾಷ್ಟ್ರೀಯ ಜೀವನದಲ್ಲಿ ಇದೇ ವಿಧವಾದ ರಾಷ್ಟ್ರಗಳ, ಪ್ರಜಾವರ್ಗಗಳ ಸಹಕಾರ ಸಹಯೋಗದ ಆಧಾರದ ಮೇಲೆ ವಿಕಸಿತವಾಗುವ ಒಂದು ನೂತನ ಕಲ್ಪನೆಯಾದರೆ ಜಗತ್ಕಲ್ಯಾಣವಾಗುವುದೆಂದು ಲಾಸ್ಕಿ, ಫಿಗಿಸ್ ಮುಂತಾದ ರಾಜಕೀಯ ದ್ವೈತಿಗಳ ಅಭಿಮತ.

ಅಂತರರಾಷ್ಟ್ರೀಯ ಪರಿಸ್ಥಿತಿಯು ನೆಟ್ಟಗಾಗಬೇಕಾದರೆ ರಾಷ್ಟ್ರಗಳಿಗೆ ವಿದೇಶಾಂಗ ನೀತಿಯಲ್ಲಿ ಸ್ವಯಂಪ್ರೇರಣೆಯಿಂದ ಪರಮಾಧಿಕಾರವನ್ನು

---

*Lippman:* Good Society.

ಪ್ರಯೋಗಿಸುವ ಸ್ವಾತಂತ್ರ್ಯವಿರಕೂಡದು. ಒಳ ಆಡಳಿತ ಮತ್ತು ವಿದೇಶಾಂಗ ನೀತಿಯಲ್ಲಿ ಪರಮಾಧಿಕಾರವನ್ನು ಗಳಿಸಿ ಬಲವನ್ನು ಪ್ರಯೋಗಿಸದೆಯೇ ರಾಷ್ಟ್ರಗಳು ಪ್ರಭಾವಯುತವಾಗಿರಬಹುದು. ರಾಷ್ಟ್ರಗಳಲ್ಲಿ ವರ್ಗಗಳ ತಿಕ್ಕಾಟವು ಎಷ್ಟು ಪ್ರಬಲವಾಗಿದೆಯೋ ಹಾಗೆಯೇ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ರಾಷ್ಟ್ರಗಳ ಸ್ಪರ್ಧೆಯು ಉಗ್ರರೂಪವನ್ನು ತಾಳಬಹುದು. ಸರ್ಕಾರವು ತನ್ನ ಬಹುಸಂಖ್ಯಾತ ಪ್ರಜೆಯನ್ನು ಯಾವ ರೀತಿಯಲ್ಲಿ ಮನ್ನಿಸುವುದೋ ಅಥವಾ ತಿರಸ್ಕರಿಸುವುದೋ ಅದೇ ರೀತಿಯಲ್ಲಿ ಇತರ ರಾಷ್ಟ್ರಗಳೊಡನೆ ವರ್ತಿಸುವುದು. ಆರ್ಥಿಕ ಬಲವಿರುವವರೇ ರಾಷ್ಟ್ರ ನಾಯಕರು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮತೆಯ ಸ್ಥಾಪನೆಯಿಂದ ಬಂಡವಾಳಗಾರರ ಆಕ್ರಮಣಕ್ಕೆ ಮುಟ್ಟುಗೋಲು ಹಾಕಬಹುದು. ಸಮತೆಯ ತಳಹದಿಯ ಮೇಲೆ ಸಮಾಜ ರಚನೆಯಾದ ಮಾತ್ರಕ್ಕೆ ರಾಷ್ಟ್ರೀಯ ಪರಮಾಧಿಕಾರವು ಅಳಿದಂತಲ್ಲ. ಪ್ರಜಾಪ್ರಭುತ್ವ ಭಾವನೆಗಳಿರುವ ರಾಷ್ಟ್ರವೂ ಕೂಡ ಸಾಮ್ರಾಜ್ಯ ಭಾವನೆಯನ್ನು ಬೆಳಸಿ ಅಂತರ ರಾಷ್ಟ್ರೀಯ ಸ್ಪರ್ಧೆಯ ಗೊಂದಲದಲ್ಲಿ ಸೇರಿ ದಬ್ಬಾಳಿಕೆಯಿಂದ ವರ್ತಿಸಬಹುದು. ಆದುದರಿಂದ ರಾಷ್ಟ್ರದ ಪರಮಾಧಿಕಾರವನ್ನು ರದ್ದು ಮಾಡುವುದರಿಂದಲೇ ವಿಶ್ವದ ಶಾಂತಿಯನ್ನು ಏರ್ಪಡಿಸಬಹುದು.

## ರಾಷ್ಟ್ರದ ಒಳಾಡಳಿತ ನೀತಿ

ರಾಷ್ಟ್ರಗಳ ಸಮಾಜನೀತಿಯು ನಿಯಮಿತವಾದುದು. ರಾಷ್ಟ್ರಗಳ ಪರಸ್ಪರ ಸೌಹಾರ್ದ ಸಹಕಾರಗಳನ್ನು ಬೆಳೆಸುವ ಆಕಾಂಕ್ಷೆ ಅಂತರ ರಾಷ್ಟ್ರೀಯ ತತ್ತ್ವಕ್ಕೆ ಧಾರ್ಮಿಕ ತಳಹದಿ. ರಾಷ್ಟ್ರಗಳ ಸಂಬಂಧಗಳು ವ್ಯಕ್ತಿ ಮತ್ತು ಸರ್ಕಾರಕ್ಕೆ ಇರುವ ಸಂಬಂಧದಂತೆ ನಿಯಮ ಬದ್ಧವಾಗಬೇಕು. ಆದರೆ ರಾಷ್ಟ್ರವು ತನ್ನ ನಿಯಮಗಳನ್ನು ತನ್ನ ಶಕ್ತಿ ಪ್ರಭಾವದಿಂದ ಕಾರ್ಯಕಾರಿಯಾಗಿ ಮಾಡುತ್ತದೆ. ಅಂತರ ರಾಷ್ಟ್ರೀಯ ಅಭಿಮತವೇ ಅಂತರ ರಾಷ್ಟ್ರೀಯ ಸಂಬಂಧಗಳ ತಳಹದಿ. ಕೌಲುಗಳೂ,

*Robbins :* Economic Planning and International Order

ಸಂಪ್ರದಾಯಗಳೂ ಪುರುಷರು ಅಗತ್ಯವಾಗಿ ಅಂಗೀಕರಿಸಬೇಕಾದ ನಿಯಮಗಳು. ಇವುಗಳ ಆಚರಣೆಯಿಂದ ರಾಷ್ಟ್ರಗಳ ನಿಕಟಸಂಬಂಧವನ್ನು ಏರ್ಪಡಿಸಬಹುದು.

ಇಂದಿನ ಪರಿಸ್ಥಿತಿಯಲ್ಲಿ ರಾಷ್ಟ್ರದ ಒಳ ಆಡಳಿತದಲ್ಲಿ ಆರ್ಥಿಕ ಯೋಜನೆಗಳನ್ನೂ ಅಂತರರಾಷ್ಟ್ರೀಯ ಭಾವನೆಗಳನ್ನೂ ಅನುಷ್ಠಾನಕ್ಕೆ ತರ ಬೇಕೆಂಬ ಆಕಾಂಕ್ಷೆ ಪ್ರಬಲವಾಗಿದೆ. ರಚನಾತ್ಮಕ ಕಾರ್ಯಗಳೂ ನಡ ದಿವೆ. ಒಳ ಆಡಳಿತದಲ್ಲಿ ಸ್ಪರ್ಧೆಗೆ ಹೆಚ್ಚಾಗಿ ಅವಕಾಶ ಕೊಡುವ ರಚ ನಾತ್ಮಕ ಕೆಲಸಗಳು ನೆಡದರೆ ವ್ಯಕ್ತಿಯ ಮತ್ತು ಸಮಾಜದ ಸ್ವಾತಂತ್ರ್ಯ ಸಾಧನೆಯಾಗುವುದೆಂದು ಕೆಲವರ ಅಭಿಮತ. ಆರ್ಥಿಕ ಜೀವನವು ವಿಕಾಸ ವಾಗಬೇಕಾದರೆ ವ್ಯಕ್ತಿಗೆ ಬಡತನ, ಹಿರಿತನ ಮುಂತಾದ ಯಾವ ವಿಧವಾದ ಕೃತಕ ವ್ಯತ್ಯಾಸಗಳಿಂದಾಗುವ ಅಂತರವು ಇಲ್ಲದೆ ಸಮಾಜದಲ್ಲಿ ನ್ಯಾಯ ದೊರಕಬೇಕು; ಅಂದರೆ ವಿಶೇಷ ಹಕ್ಕುಗಳು ರದ್ದಾಗುವುದು, ಆರ್ಥಿಕ ಸಮತೆ, ಯೋಗ್ಯತೆಗನುಗುಣವಾದ ಉದ್ಯೋಗ ಮತ್ತು ಉತ್ತಮ ಜೀವನ ವನ್ನು ನಡಸುವುದಕ್ಕೆ ಸಾಕಾಗುವಷ್ಟು ವೇತನವು ದೊರೆಯಬೇಕು. ಬಂಡ ವಾಳತನ ಪದ್ಧತಿಯ ಪ್ರಭಾವವು ಹೆಚ್ಚಾಗಿ ಲಾಭಪಡೆಯುವುದು ಮುಖ್ಯ ಉದ್ದೇಶವಾದರೆ ವ್ಯಕ್ತಿಯ ವಿಕಾಸ ಕಷ್ಟಸಾಧ್ಯ. ಪ್ರಜಾವರ್ಗಕ್ಕೆ ಆವಶ್ಯಕ ವಾದ ವಸ್ತುಗಳನ್ನು ಮಾತ್ರ ಉತ್ಪತ್ತಿಮಾಡುವುದು; ಉಪಯುಕ್ತವಸ್ತುಗಳು ಯಾವುವೆಂದು ನಿರ್ಧರಿಸಿ ರಾಷ್ಟ್ರದ ಉತ್ಪಾದಕ ಶಕ್ತಿಯನ್ನೂ, ರಾಷ್ಟ್ರದ ಆಯವ್ಯಯಗಳನ್ನೂ ನಿಯಂತ್ರಿಸುವುದು; ಹೀಗೆ ಸಮತಾವಾದಿಗಳು ಪ್ರತಿ ಪಾದಿಸಿರುವಂತೆ, ವ್ಯಕ್ತಿಗೆ, ಸಾಮಾಜಿಕ, ರಾಜಕೀಯ, ಆರ್ಥಿಕ, ಪ್ರಾಪಂಚಿಕ ಜೀವನದಲ್ಲಿ ನ್ಯಾಯವನ್ನು ದೊರಕಿಸುವ ಆರ್ಥಿಕ ಯೋಜನೆಗಳಾದರೆ

---

*H. C Hoover:* The Challenge to Liberty
*F. W. Coker:* Recent Political Thought
*H. Soule:* A Planned Society
*Stuart Chase.* Men and Machines
*H J. Laski* · Reflections on the Revolution of our Times 'Freedom in a Planned Democracy'

ಇವು ಸಾಧ್ಯವಾಗುವುವು. ಮೊದಲು ರಾಷ್ಟ್ರದ ಆರ್ಥಿಕ ಜೀವನವನ್ನು ಸಾಮೂಹಿಕವಾಗಿ ಕ್ರಮಪಡಿಸಿ ಸುವ್ಯವಸ್ಥಿತವಾಗಿ ಮಾಡಬೇಕಾಗುವುದು. ರಾಷ್ಟ್ರಗಳು ರಾಷ್ಟ್ರೀಯ ಭಾವನೆಗಳನ್ನು ಪೋಷಿಸಿ ಒಳಗೂ ವಿದೇಶಾಂಗ ನೀತಿಯಲ್ಲಿಯೂ ಪರಮಾಧಿಕಾರವನ್ನು ಪಡೆದಿದ್ದರೆ ಸರ್ವಸತ್ತಾತ್ಮಕ ಅಧಿಕಾರಕ್ಕೆ ಮಾರ್ಗವಾಗುವುದೇ ಹೊರತು ಸಹಕಾರ ಸಹಯೋಗಕ್ಕೆ ಸಾಧ್ಯವಾಗುವುದಿಲ್ಲ. ಆರ್ಥಿಕ ಮತ್ತು ಸಾಮಾಜಿಕನ್ಯಾಯವು ಬಂಡವಾಳಗಾರತನ ಪದ್ಧತಿಯನ್ನು ಒಪ್ಪಿರುವ ರಾಷ್ಟ್ರದಲ್ಲಿ ದೊರಕುವುದಿಲ್ಲವೆಂಬುದು ಸ್ವತಸಿದ್ಧವಾಗಿದೆ. ವ್ಯಕ್ತಿಯ ಸ್ವಾತಂತ್ರ್ಯ, ಆಸ್ತಿಪಾಸ್ತಿಗಳ ರಕ್ಷಣೆ, ಆರೋಗ್ಯ, ಸಾಮಾಜಿಕ ಜೀವನದಲ್ಲಿ ಸಮತೆ ಮತ್ತು ಸುಖಜೀವನ— ಇವುಗಳು ಅನೇಕ ಆಧುನಿಕ ರಾಷ್ಟ್ರಗಳಲ್ಲಿ ಅಸಮರ್ಪಕವಾಗಿರುವುದರಿಂದ ಈ ರಾಷ್ಟ್ರಸರ್ಕಾರಗಳನ್ನು ಪ್ರಗತಿಪರ ವ್ಯಕ್ತಿಯ ಶತ್ರುವೆಂದು ಪರಿಗಣಿಸಿದ್ದಾರೆ. ಮಾಲಿಕರು, ಕಾರ್ಮಿಕರು, ಆಗರ್ಭ ಶ್ರೀಮಂತರು, ಅತಿ ದರಿದ್ರರು ಇವರ ಅಂತರಗಳೂ, ಉತ್ಪಾದಕಶಕ್ತಿಯನ್ನು ಉಪಯುಕ್ತ ವಸ್ತುಗಳ ತಯಾರಿಕೆಗಲ್ಲದೆ ವಿಶೇಷಲಾಭವನ್ನು ಗಳಿಸುವುದಕ್ಕಾಗಿಯೇ ಪ್ರಯೋಗಿಸುವುದು—ಇದರ ಪರಿಣಾಮವಾಗಿ ವರ್ಗಗಳಲ್ಲಿ ದ್ವೇಶ, ಉದ್ವೇಗಕರ ಘಟನೆಗಳು, ಆಂದೋಲನಗಳು, ಇವೇ ಮುಂತಾದ ಅಂಶಗಳು, ರಾಷ್ಟ್ರವು ವ್ಯಕ್ತಿಯ ಶತ್ರುವೆಂಬ ಭಾವನೆಯನ್ನು ದೃಢೀಕರಿಸಿವೆ. ಪರಮಾಧಿಕಾರವನ್ನು ಪಡೆದಿರುವ ರಾಷ್ಟ್ರಗಳು ಅಲ್ಲಲ್ಲಿ ವ್ಯಕ್ತಿಯ ಸುಖಜೀವನಕ್ಕೂ ಪ್ರತಿಬಂಧಕವಾಗಿವೆ. ಸ್ವೇಚ್ಛಾಪ್ರವರ್ತನೆಯಿಂದ ಜರ್ಮನಿ ಇಟಲಿ ಮುಂತಾದ ರಾಷ್ಟ್ರಗಳಲ್ಲಿ ಪ್ರಾಜ್ಞರು, ಮೇಧಾವಿಗಳು, ರಾಜಕಾರಣ ಪಟುಗಳು, ವಿಜ್ಞಾನಿಗಳು—ಇಂಥ ಜನರನ್ನು ಸರ್ಕಾರದ ಸ್ವಾರ್ಥಸಾಧನೆಗಾಗಿ ಉಪಯೋಗಿಸಿಕೊಳ್ಳಲು ನಿರ್ಬಂಧನೆಗಳಿದ್ದವು. ಆದುದರಿಂದ ಸಮತಾವಾದ ಸಿದ್ಧಾಂತದ ಆಧಾರದ ಮೇಲೆ ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಸರ್ಕಾರದ ರಚನೆಯು ಅತ್ಯಾವಶ್ಯಕ ಎಂಬ ಭಾವನೆ ತಲೆದೋರಿದೆ.

ವ್ಯಕ್ತಿಯ ಆರ್ಥಿಕ ಜೀವನವನ್ನು ಸರಿಪಡಿಸಲು ಅಮೆರಿಕ ಮತ್ತು ರಷ್ಯದಲ್ಲಿ ಆರ್ಥಿಕಯೋಜನೆಗಳ ಪ್ರಯೋಗಗಳು ಪ್ರಭಾವಯುತವಾಗಿ ನಡೆದಿವೆ. ರಾಜಕೀಯದಲ್ಲಿ (ಜರ್ಮನಿ ಮತ್ತು ಇಟಲಿಯಲ್ಲಿ ಸರ್ವ ಸತ್ತಾತ್ಮಕ ಪ್ರಭುತ್ವವು ಏರ್ಪಾಡಾದಂತೆ) ಅಮೆರಿಕದ ಆರ್ಥಿಕ ಜೀವನ ದಲ್ಲಿ ಸರ್ವಸತ್ತಾತ್ಮಕವಾದ ಪ್ರಭುತ್ವವು ಏರ್ಪಾಡಾಗುವ ಚಿಹ್ನೆಗಳು ತಲೆ ದೋರಿವೆ. ರಷ್ಯ ರಾಷ್ಟ್ರದಲ್ಲಿ ಆರ್ಥಿಕ ಜೀವನವನ್ನು ಕ್ರಮಪಡಿಸುವ ಸಲುವಾಗಿಯೇ ನೂತನ ಸರ್ಕಾರವೇರ್ಪಟ್ಟಿದೆ. ವೈಜ್ಞಾನಿಕ ಪ್ರಪಂಚದಲ್ಲಿ ಸೃಷ್ಟಿಯಾಗಿರುವ ಸಾಧನೆಗಳ ಪ್ರಯೋಗದಿಂದ ಔದ್ಯೋಗಿಕ ಮತ್ತು ಆರ್ಥಿಕ ರಚನಾತ್ಮಕ ಕ್ರಮಗಳು ಪರಿವರ್ತನೆ ಹೊಂದಿ ನವೀನ ಆರ್ಥಿಕ ಯೋಜನೆಗಳಿಗೂ ಆದರ್ಶ ಸಮಾಜಕ್ಕೂ ತಳಹದಿಯಾಗಿವೆ. ಎಲ್ಲೆಲ್ಲಿಯೂ ಸ್ಥಳೀಯ ಮತ್ತು ರಾಷ್ಟ್ರೀಯ ಆರ್ಥಿಕಯೋಜನೆಗಳು ಸಿದ್ಧವಾಗಿ ಅರ್ಥ ಶಾಸ್ತ್ರ ನಿಪುಣರು, ರಾಜಕಾರಣಪಟುಗಳು, ಔದ್ಯೋಗಿಕ ಮತ್ತು ಕಾರ್ಮಿಕ ವರ್ಗದ ಪ್ರತಿನಿಧಿಗಳು, ಇವರುಗಳಿಂದ ಕೂಡಿದ ಸಮಿತಿಗಳು ತಾತ್ಕಾಲಿಕ ಮತ್ತು ಭವಿಷ್ಯತ್ ಆರ್ಥಿಕ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನಿರ್ದಿಷ್ಟವಾದ ಪರಿಹಾರವನ್ನು ಸೂಚಿಸುತ್ತಿವೆ. ಸಮಾಜವು ನೀತಿಯುತವಾಗಿಯೂ ನ್ಯಾಯಬದ್ಧವಾಗಿಯೂ ಪರಿವರ್ತನೆಯಾಗಬೇಕಾ ದರೆ ಬಂಡವಾಳತನದಲ್ಲಿ ಸುಧಾರಣೆಗಳಾಗಬೇಕೆಂಬ ಭಾವನೆಗಳು ಬಂಡ ವಾಳತನ ಪದ್ಧತಿಯನ್ನು ಅಂಗೀಕರಿಸಿರುವ ರಾಷ್ಟ್ರಗಳಲ್ಲಿಯೂ ತಲೆದೋರಿವೆ. ಜನಜಾಗೃತಿಯಿಂದ ಉತ್ಪನ್ನವಾಗುವ ಕ್ರಾಂತಿಭಾವನೆಗಳು ವೈಪರೀತ್ಯ ವನ್ನು ಹೊಂದದಂತೆ ತಡೆಗಟ್ಟಲು ಪ್ರಜಾಪ್ರಭುತ್ವವಿರುವ ಸರ್ಕಾರಗಳು ಅನೇಕ ಆರ್ಥಿಕ ಸುಧಾರಣೆಗಳನ್ನು ಕೈಕೊಂಡಿವೆ. ಉಪಯುಕ್ತವಸ್ತುಗಳ ಬೆಲೆಯನ್ನು ಮಾಲೀಕರ ಸಂಘಗಳು ಅನೀತಿಯುತವಾಗಿ ಏರಿಸದಂತೆ

---

*L. Rogers and W R. Dittmar:* Political Science Quarterly.

*Lorwin*. Labour and Internationalism.

*Stuart chase* · A New Deal

*P. Parmala:* Farewell to Poverty

ಮತ್ತು ನೀತಿಯುತವಾದ ಸ್ಪರ್ಧೆಗಳನ್ನು ಔದ್ಯೋಗಿಕ ಮತ್ತು ವಾಣಿಜ್ಯ ಜೀವನದಲ್ಲಿ ಬೆಳೆಸುವಂತೆಯೂ ಶಾಸನಗಳಾಗಿವೆ. ಔದ್ಯೋಗಿಕ ಸಂಸ್ಥೆಗಳ ವರ್ತನೆಯಿಂದ ಉಂಟಾಗುವ ನ್ಯೂನಾತಿರೇಕಗಳನ್ನು ಸರ್ಕಾರವು ತಡೆಗಟ್ಟಲು ಅನೇಕ ಸಮಿತಿಗಳನ್ನು ರಚಿಸಿದೆ. ವಸ್ತುಗಳ ಉತ್ಪಾದನೆ ಮತ್ತು ವಿನಿಮಯಗಳ ನಿಯಂತ್ರಣದಿಂದ ಸಾರ್ವಜನಿಕ ಜೀವನವನ್ನು ಕ್ರಮಪಡಿಸುವ ವಿಧಾನಗಳನ್ನು ಸೂಚಿಸುವುದು ಈ ಸಮಿತಿಗಳ ಕೆಲಸ. ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಘರ್ಷಣೆಯಾದರೆ ಇವು ದಕ್ಷತೆಯಿಂದ ವರ್ತಿಸಿದಷ್ಟೂ ಸರ್ಕಾರದ ಜವಾಬ್ದಾರಿ ಸುಲಭವಾಗುವುದು. ಅಲ್ಲದೆ ಸರ್ಕಾರವು ವಿವಾದಗಳ ಪರಿಹಾರದ ಜವಾಬ್ದಾರಿ ವಹಿಸುವುದೆಂದರೆ ಬಂಡವಾಳಗಾರರ ಮತ್ತು ಕಾರ್ಮಿಕರ ಸ್ವಾತಂತ್ರ್ಯಕ್ಕೆ ತಡೆಗಟ್ಟಿದಂತೆ. ಆದುದರಿಂದ ಸರ್ಕಾರದ ಮಧ್ಯಸ್ಥಿಕೆಯನ್ನು ಬಂಡವಾಳಗಾರರಾಗಲಿ ಕಾರ್ಮಿಕರಾಗಲಿ ಒಪ್ಪುವುದಿಲ್ಲ.

ಆದುದರಿಂಲೇ ಸರ್ಕಾರವು ಬಂಡವಾಳಗಾರರಿಗೂ ಮತ್ತು ಕಾರ್ಮಿಕರಿಗೂ ಘರ್ಷಣೆಯಾಗದಂತೆ ಉಪಕರಣಗಳನ್ನು ನಿರ್ಮಿಸಿಕೊಂಡು ಸುವ್ಯವಸ್ಥಿತವಾದ ರೀತಿಯಲ್ಲಿ ವರ್ತಿಸುವುದು. ಸೈನ್ಯ ಮತ್ತು ಶಸ್ತ್ರ ಸನ್ಯಾಸವನ್ನು ಚರ್ಚೆ ಮತ್ತು ಸಂಧಾನಗಳಿಂದ ಯಶಸ್ವಿಯಾಗಿ ಕ್ರಮಪಡಿಸಬಹುದು ಎಂಬುದು ಜರ್ಮನಿ ಮತ್ತು ಇಟಲಿಯ ರಾಷ್ಟ್ರಗಳ ಸರ್ವಸತ್ತಾತ್ಮಕ ಪ್ರಭುತ್ವಗಳ ವರ್ತನೆಯಿಂದ ವಿಶದವಾಗುವುದು. ಸಂಧಾನ ಮತ್ತು ನ್ಯಾಯಸಮಿತಿಗಳು ಸಂಯುಕ್ತ ಕಾರ್ಮಿಕ ಶಾಸಕಾಂಗ. ಕಾರ್ಮಿಕ ಸಂಘಗಳು ಪ್ರಜಾಪ್ರಭುತ್ವಗಳಲ್ಲಿ ಮಾಲಿಕರ ಮತ್ತು ಕಾರ್ಮಿಕರ ವಿವಾದಗಳನ್ನು ಸಂಧಾನದಿಂದ ಪರಿಹರಿಸುವುವು. ವಿವಾದಗಳನ್ನು

---

*J. M. Keynes:*—The End of Laissez Faire.
*G. D. H. Cole:*—Economic Planning.
*F. W. Coker.*—Recent Political Thought.
*H. C. Hoover:*—Recent Social Trends.
*F. Frankfurter:*—The Public and its Government.
*Herbert Rees:*—Labour and Internationalism.

ನ್ಯಾಯಾಂಗಗಳ ಮೂಲಕ ನಿರ್ಧರಿಸುವುವು; ಕಷ್ಟಗಳಿಗೂ ವಿಪತ್ತುಗಳಿಗೂ ಸಿಕ್ಕುವ ಕಾರ್ಮಿಕ ಮತ್ತು ಕೂಲಿಕಾರರನ್ನು ರಕ್ಷಿಸುವುದು ಮತ್ತು ಅನಾಥರನ್ನೂ ನಿರ್ಗತಿಕರನ್ನೂ ಅಶಕ್ತರನ್ನೂ ಮಾಲಿಕರ ಆಕ್ರಮಣದಿಂದ ತಪ್ಪಿಸಲು ಸಾಮಾಜಿಕ ಶಾಸನಗಳನ್ನು ರಚಿಸಿ ಅವುಗಳಿಗನುಸಾರವಾಗಿ ವರ್ತಿಸುವಂತೆ ಮಾಲಿಕರನ್ನು ನಿರ್ಬಂಧಿಸುವುದು; ಪ್ರಾಣಭಯವಿರುವ ಉದ್ಯೋಗಗಳ ಮೇಲೆ ಸರ್ಕಾರದ ಹತೋಟಿ, ಸಾಧನೆಗಳ ಪ್ರಯೋಗದ ಪರಿಣಾಮವಾಗಿ ಉಂಟಾಗುವ ಕಾಯಿಲೆಗಳ ಅಥವಾ ಪ್ರಾಣಹಾನಿಯಿಂದ ಪಾರಾಗಲು ತಕ್ಕ ಶಿಸ್ತುಗಳ ಏರ್ಪಾಡು ಮತ್ತು ಪ್ರಾಣನಾಶವಾದಲ್ಲಿ ಸಂಸಾರ ವನ್ನು ಸಾಗಿಸಲು ತಕ್ಕ ವ್ಯವಸ್ಥೆಗಳು – ಇವುಗಳು ಅತ್ಯಾವಶ್ಯಕ. ಸ್ತ್ರೀಯರು ಮತ್ತು ಮಕ್ಕಳು ರಾತ್ರಿ ಕೆಲಸಮಾಡಬೇಕಾದುದಿಲ್ಲ. ಪುರುಷನಷ್ಟೇ ಸ್ತ್ರೀಗೂ ಮಜೂರಿ ಮತ್ತು ಅವಳ ಶರೀರಕ್ಕನುಗುಣವಾದ ಕರ್ತವ್ಯನಿಷ್ಠೆಯಲ್ಲಿ ತಕ್ಕ ಸಹಕಾರ ಮತ್ತು ಅನುಕೂಲಗಳ ರಚನೆ, ಮಕ್ಕಳಿಗೆ ನಿರ್ಬಂಧ ವಿದ್ಯಾ ಭ್ಯಾಸ, ವಾರಕ್ಕೆ ಮೂವತ್ತರಿಂದ ನಲವತ್ತು ಘಂಟೆಗಳ ಕಾಲ ಮಾತ್ರ ಕೆಲಸ, ನಿರುದ್ಯೋಗಒದಗಿದಾಗ, ಆಕಸ್ಮಿಕ ಘಟನೆಗಳಾದಾಗ, ಮುಪ್ಪಿ ನಲ್ಲಿ, ಅಂಗಹೀನವಾದಲ್ಲಿ, ಜೀವವಿಮೆ ಮುಂತಾದುವುಗಳ ಮೂಲಕ ಆರ್ಥಿಕ ರಕ್ಷಣೆ—ಇವೇ ಮುಂತಾದುವುಗಳು ಸಾಮಾಜಿಕ ನಿಯಮಗಳು.

ಆಧುನಿಕ ಸರ್ಕಾರವು ಸಮಾಜದ ಆರ್ಥಿಕ ಜೀವನವನ್ನು ಉತ್ಪಾದಕ ವಸ್ತುಗಳ ನಿಯಂತ್ರಣದಿಂದ ಕ್ರಮಪಡಿಸಬಹುದು. ಬಹುಸಂಖ್ಯಾತರ ಅಭ್ಯುದಯಕ್ಕೆ ಉಪಯೋಗವಾಗುವ ವಸ್ತುಗಳನ್ನು ತಯಾರಿಸುವ ಉದ್ಯೋಗಗಳ ಹತೋಟಿ ಮತ್ತು ಸರ್ಕಾರದ ಮಾಲೀಕತನ ಅತ್ಯಾವಶ್ಯಕ.

---

*G. D. H. Cole:*—"Nationality can no longer in the 20th century provide a basis for the State."

"No nation, large or small, can be self-sufficient morally, politically. economically and militarily; we must be prepared to help each other. Peace and progress are to be secured and in so far as that ideal necessitates some sacrifice of independent action, it must be faced and accepted.

ನೀರು, ದೀಪ, ವಾಹನಾದಿಗಳ ಸೌಕರ್ಯಗಳನ್ನು ಒದಗಿಸುವ ಕಂಪೆನಿಗಳ ಯಜಮಾನಿಕೆಯನ್ನು ಸರ್ಕಾರವೇ ಹೊಂದಬೇಕು. ರಾಷ್ಟ್ರದ ಸಂಪತ್ತಿನ ವಿನಿಮಯದ ನಿಯಂತ್ರಣ, ಸಂಪತ್ತಿನ ಬೆಳೆವಣಿಗೆಗನುಗುಣವಾದ ತೆರಿಗೆ, ಬಂಡವಾಳ ಶೇಖರಣೆಯಾಗದಂತೆ ಪ್ರತಿಬಂಧಕಗಳು, ವ್ಯವಸಾಯವು ಶಾಸ್ತ್ರೀಯವಾಗಿ ನಡೆಯುವಂತೆ ಉತ್ತೇಜನ, ರೈತಜನಾಂಗಕ್ಕೆ ಸಾಧನವಾದ ಎತ್ತು ಮತ್ತು ಉಪಕರಣಗಳ ಸಹಾಯ—ಇವೂ ರಾಷ್ಟ್ರ ಸರ್ಕಾರದ ಅನಿವಾರ್ಯದ ಕೆಲಸಗಳು. ವೈಜ್ಞಾನಿಕ ಪ್ರಪಂಚದಲ್ಲಿ ಅವಿಚ್ಛಿನ್ನವಾಗಿ ಉತ್ಪತ್ತಿಯಾಗುತ್ತಿರುವ ಉಪಕರಣ ಮತ್ತು ಸಾಧನಗಳ ಪ್ರಯೋಗದಿಂದ ಆರ್ಥಿಕ ಜೀವನದಲ್ಲಿ ಅಧಿಕವಾಗಿ ನಿರುದ್ಯೋಗವುಂಟಾಗುವ ಸಂಭವವಿದೆ. ನಿರುದ್ಯೋಗದಿಂದ ಕ್ರಾಂತಿ ಭಾವನೆಗಳು ಮೂಡಿ ಸಮಾಜದಲ್ಲಿ ಆಧಾರಭೂತವಾದ ಪರಿವರ್ತನೆಗಳಾಗಬಹುದು. ಸಮಾಜದಲ್ಲಿ ಕ್ರಾಂತಿ ಮತ್ತು ವಿಪ್ಲವಗಳಾಗದಂತೆ ಕಾರ್ಮಿಕ ಮತ್ತು ಮಾಲಿಕ ವರ್ಗಗಳನ್ನು ವಿಜ್ಞಾನಿಗಳ ಮತ್ತು ಅವರ ಉತ್ಪಾದನೆಗಳ ನಿಯಂತ್ರಣದಿಂದ ಸಮಾಧಾನಗೊಳಿಸಿ ರಾಷ್ಟ್ರಹಿತಸಾಧನೆಯಲ್ಲಿ ಸರ್ಕಾರವು ನಿರತವಾಗಬೇಕು.

## ರಾಷ್ಟ್ರದ ವಿದೇಶಾಂಗ ನೀತಿ

ಪ್ರಜಾಪ್ರಭುತ್ವದಲ್ಲಿ ಜನಗಳಲ್ಲಿ ನಂಬಿಕೆ ಅಳಿದು ಹೋಗಿರುವುದೇ ರಾಷ್ಟ್ರೀಯ ಭಾವನೆಯನ್ನು ಪೋಷಿಸುವುದಕ್ಕೂ ಮತ್ತು ಸ್ಪರ್ಧಿಸುವುದಕ್ಕೂ ಈ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಮತ್ತು ನಡೆಯುತ್ತಲಿರುವ ಯುದ್ಧಗಳಿಗೂ ಕಾರಣವಾಗಿದೆ. ರಾಷ್ಟ್ರೀಯ ಭಾವನೆಯಿಂದ ಅಂತರ ರಾಷ್ಟ್ರೀಯ ಶಾಂತಿಯನ್ನು ಮತ್ತು ವ್ಯವಸ್ಥೆಯನ್ನು ರಚಿಸಲು ಮತ್ತು ಮಾನವ ಸಂಸ್ಕೃತಿಯನ್ನು ಬೆಳೆಸಲು ಸಾಧ್ಯವಾಗುವುದಿಲ್ಲವೆಂಬುದು ವಿಷಾದವಾಗಿದೆ. ರಾಷ್ಟ್ರೀಯ ಭಾವನೆಯು ಅಂತರರಾಷ್ಟ್ರೀಯ ಸೌಹಾರ್ದ

---

*Nicholas Murray Butler* —The Faith of a Liberal.

*W. R. Inge.*—Quarterly Review. 1941 Nationalism and National Character.

*Gilbert Murray* —Liberality and Civilisation.

ಮತ್ತು ಸಹಕಾರವನ್ನು ಬೆಳೆಸಲು ಒಂದು ನೀತಿಯುತವಾದ ಸಾಧನವಾಗಬೇಕು. ಭಯಂಕರ ಸ್ಪರ್ಧಾ ಭಾವನೆಗಳಿಂದ ಮತ್ತು ಪರ ರಾಷ್ಟ್ರಗಳನ್ನು ಮೂಲೋತ್ಪಾಟನ ಮಾಡುವ ಭಾವನೆಗಳಿಂದ ಕೂಡಿದ್ದಲ್ಲಿ ವಿಶ್ವಶಾಂತಿಯಾಗಲಾರದು. ವ್ಯಕ್ತಿ ಸ್ವಾತಂತ್ರ್ಯವು ಸಮಾಜದ ಗುರಿಯಾಗಬೇಕಾದರೆ ಮಾನವ ಸಂಸ್ಕೃತಿ ಪ್ರಗತಿಪರವಾಗಬೇಕಾದರೆ ವ್ಯಕ್ತಿಯ ಮನೋಭಾವನೆಯನ್ನು ನೀತಿಯುತವನ್ನಾಗಿ ಮಾಡುವುದರಿಂದಲೇ ಸಾಧ್ಯ. ವಿಜ್ಞಾನದ ಬೆಳೆವಣಿಗೆ ಮತ್ತು ಸಾಧನೆಗಳ ಸೃಷ್ಟಿಯೂ ಪ್ರತ್ಯೇಕ ಭಾವನೆಗಳುಳ್ಳ ರಾಷ್ಟ್ರಗಳನ್ನೂ ಕೂಡ ಒಂದಕ್ಕೊಂದು ಅಧೀನವಾಗಿ ಮಾಡಿದೆ. ವೈಜ್ಞಾನಿಕ ರೀತಿಕ್ರಮಗಳೂ ಅಂತರ ರಾಷ್ಟ್ರೀಯ ಆರ್ಥಿಕ ಪರಾಧೀನತೆ, ರಾಷ್ಟ್ರಗಳ ಪರಸ್ಪರ ಸಂಬಂಧಗಳ ದೃಷ್ಟಿ ಮತ್ತು ಕ್ರಮ—ಇವು ಅಂತರ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವ ಪರಿಸ್ಥಿತಿಯನ್ನುಂಟುಮಾಡಿವೆ. ರಾಷ್ಟ್ರೀಯಭಾವನೆಗಳನ್ನು ತ್ಯಜಿಸಿ ಜನಾಂಗಗಳಲ್ಲಿ ಪರಸ್ಪರ ಸೌಹಾರ್ದವನ್ನು ಏರ್ಪಡಿಸಬಹುದು, ಯುದ್ಧ ಮತ್ತು ಅದರ ಘೋರ ಪರಿಣಾಮಗಳೇ ಒದಗದಂತೆ ಮಾಡಬಹುದು. ವಿಜ್ಞಾನಶಾಸ್ತ್ರಗಳಿಗೆ ಒಂದು ಭಾಷೆಯಿಲ್ಲ. ವಿಜ್ಞಾನ, ಸಾಹಿತ್ಯ, ಲಲಿತ ಮತ್ತು ಕುಶಲ ಕಲೆಗಳು ಮಾನವನ ನೈಸರ್ಗಿಕ ಗುಣವನ್ನು ಎತ್ತಿಹಿಡಿಯುವುದರಿಂದ ಇವುಗಳಿಗೆ ರಾಷ್ಟ್ರದ ಎಲ್ಲೆಗಳ ನಿರ್ಬಂಧವಿಲ್ಲ. ಆರ್ಥಿಕ ಪ್ರಪಂಚದಲ್ಲಿ ಉತ್ಪನ್ನವಾಗಿರುವ ಸಿದ್ಧಾಂತ ಮತ್ತು ರಚನೆಗಳು ರಾಷ್ಟ್ರಗಳ ಸಂಘಟ್ಟನೆಗೆ ಸಾಧನವಾಗಿವೆ. ಅಲ್ಲದೆ ವ್ಯಕ್ತಿಯು ತನ್ನ ಸ್ವಾತಂತ್ರ್ಯ ವಿಕಾಸಕ್ಕಾಗಿ ನೂತನ ಕಲ್ಪನೆ ಮತ್ತು ವಿಧಾನಗಳಿಂದ ಸ್ಫೂರ್ತಿಹೊಂದಿ ಸಹಕಾರ ಸಹಯೋಗಗಳ ಆಧಾರದ ಮೇಲೆ ಆದರ್ಶಸಮಾಜವನ್ನು ಕಟ್ಟಲು ಅವಿಚ್ಛಿನ್ನವಾಗಿ ದುಡಿಯುತ್ತಿರುವುದು, ಅಂತರರಾಷ್ಟ್ರೀಯ ಸಂಸ್ಥೆಗಳ ಸ್ಥಾಪನೆಗೆ ಅನುಕೂಲ ಪರಿಸ್ಥಿತಿಯನ್ನು ಒದಗಿಸಿಕೊಟ್ಟಿದೆ.

ವಿಶ್ವಶಾಂತಿಯು ನೈತಿಕ ಧರ್ಮದ ಆಧಾರದ ಮೇಲೆ ನಿಂತಿದೆ.

---

Parliamentary Report of the League of Nations Association
*Earl Baldwin and others* —Responsibilities of Empire.
*Rt. Hon Lloyd George* —Peace rests with the Empire.

ಸಣ್ಣ ದೊಡ್ಡ ರಾಷ್ಟ್ರಗಳು ಎಂಬ, ಬಲಿಷ್ಟ ಬಲಹೀನ ಎಂಬ ತಾರತಮ್ಯ ಭಾವನೆಗಳು ಅಳಿದುಹೋಗಬೇಕು; ದೈವ ಸೃಷ್ಟಿಯಲ್ಲಿ ಎಲ್ಲರೂ ಸಮಾನರು, ಸಮಾನ ಹಕ್ಕುಳ್ಳವರು ಎಂಬ ಭಾವನೆ ತಲೆದೋರಬೇಕು. ಸಾರ್ವತ್ರಿಕ ಹಿತಕ್ಕಾಗಿ ಸಮಸ್ತವನ್ನೂ ತ್ಯಾಗಮಾಡಲು ಸಿದ್ಧವಾಗಿರಬೇಕು. ವಿಶ್ವದಲ್ಲಿ ನೀತಿ ಮತ್ತು ನ್ಯಾಯ ಸ್ಥಾಪನೆಗಾಗಿಯೇ ಅಗೋಚರವೂ ನಿರಾಮಯವೂ ಆದ, ಪ್ರಕೃತಿ ಮತ್ತು ಧರ್ಮವನ್ನು ಅವಲಂಬಿಸಿರುವ ಒಂದು ಪರಮ ಧರ್ಮದಲ್ಲಿ ನಿಶ್ಚಲವಾದ ಭಕ್ತಿ ಇರಬೇಕು. ಆದರೆ ಈ ವಿಧವಾದ ಕಲ್ಪನೆಯು ಆಧುನಿಕ ಪ್ರಪಂಚದಲ್ಲಿದೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಕಷ್ಟ ಮತ್ತು ದುಃಖಗಳ ಅನುಭವದಿಂದ ವ್ಯಕ್ತಿಯು ಹೇಗೆ ತನ್ನ ನಡತೆಯನ್ನು ಮಾರ್ಪಡಿಸಿಕೊಳ್ಳುವನೋ ಹಾಗೆಯೇ ರಾಷ್ಟ್ರಗಳು ಶತಮಾನಗಳಿಂದ ಅನುಭವಿಸಿರುವ ಕಷ್ಟದುಃಖಗಳ ಪರಿಣಾಮವಾಗಿ ದುಃಖವು ಪುನಃ ಒದಗದಂತೆ ತಡೆಗಟ್ಟಲು ವಿಶ್ವಪ್ರಯತ್ನ ಮಾಡಬೇಕೆಂದು ಮನಸ್ಸು ಮಾಡುತ್ತಿದ್ದಾರೆ. ವಿವಾದಗಳುಂಟಾದಲ್ಲಿ ಕೇವಲ ಸಂಧಾನಗಳ ಮೂಲಕವೇ ವಿವಾದಗಳನ್ನು ಸರಿಪಡಿಸಿ, ಶಾಂತಿಗೆ ಭಂಗ ತರುವ ಯುದ್ಧಕ್ಕೆ ಆಸ್ಪದಕೊಡದೆ ಅಂತರ ರಾಷ್ಟ್ರೀಯ ಸಂಸ್ಥೆಗಳನ್ನು ರಚಿಸಿಕೊಂಡಿದ್ದಾರೆ. ಸ್ವಾತಂತ್ರ್ಯ, ಸಮಾಜದಲ್ಲಿ ನಿಷ್ಪಕ್ಷಪಾತನ್ಯಾಯ, ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಸಮತಾಭಾವನೆ ಪೂರಿತವಾದ ರಕ್ಷಣೆಗಳು,—ಇವುಗಳ ವಿಕಾಸಕ್ಕೆ ಅವಕಾಶ ಕೊಡದಿದ್ದಲ್ಲಿ, ವಿವಾದ, ಕ್ರಾಂತಿ ಮತ್ತು ಯುದ್ಧಗಳು ಸಹಜ. ವ್ಯಕ್ತಿಯ ಪುರೋಭಿವೃದ್ಧಿಗೆ ಅತ್ಯಗತ್ಯವಾದ ಹಕ್ಕುಗಳಿಗೆ ಧಕ್ಕೆ ಅಥವಾ ಪ್ರತಿಬಂಧಕಗಳಿರುವುದರಿಂದಲೂ ಮತ್ತು ರಾಷ್ಟ್ರೀಯ ಭಾವನೆಗಳನ್ನು ಒತ್ತಿ ಪ್ರತಿಪಾದಿಸುವುದರಿಂದಲೂ, ಹಿಂದೆ ಶಾಂತಿ ಸಂಧಾನಗಳು ಮತ್ತು ಸಂಸ್ಥೆಗಳು ಸಮರ್ಪಕವಾಗಿ ಕಾರ್ಯ ನೆರವೇರಿಸಲು ಸಾಧ್ಯವಾಗಲಿಲ್ಲ. ಯುದ್ಧ ವಿವಾದಗಳುಂಟಾಗದಂತೆ ತಡೆಗಳನ್ನು ಕಟ್ಟಿದ ಮಾತ್ರಕ್ಕೆ ಶಾಂತಿರಚನೆಯಾಗುವುದಿಲ್ಲ. ಶಾಂತಿಸ್ಥಿತಿಯು ಪ್ರಚಲಿತ ಸ್ಥಿತಿಪಾಲನೆಯಲ್ಲಿ ಅಡಗಿಲ್ಲ. ಸ್ವಾತಂತ್ರ್ಯ, ನ್ಯಾಯ, ಪ್ರಗತಿ ಮತ್ತು

ರಕ್ಷಣೆಗಾಗಿ ರಾಷ್ಟ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಒಂದು ಪ್ರವೃತ್ತಿ ಅಥವಾ ಒಂದು ಗತಿ. ಶಾಂತಿಸ್ಥಾಪನೆಯಾಗಬೇಕಾದರೆ ಮಾನವನ ಪ್ರಗತಿ ಸಾಧಕವಾದ ರಚನೆಗಳಾಗಲೇಬೇಕು. ಶಾಂತಿ ಎಂದರೆ ಬಲಪ್ರಯೋಗದಿಂದ ಆಕ್ರಮಣಮಾಡಿ ಸ್ವಾತಂತ್ರ್ಯವನ್ನು ನಷ್ಟಗೊಳಿಸುವ ದುರ್ಜನರ ದೌರ್ಜನ ಕೃತ್ಯಗಳನ್ನು ತಡೆಗಟ್ಟುವ ಮತ್ತು ನೀತಿಮಾರ್ಗವನ್ನು ಮುಂದುವರಿಸುವ ಒಂದು ನೂತನ ಕಲ್ಪನೆ ಮತ್ತು ಸರ್ಕಾರ.

ದುರಾಕ್ರಮಣದಿಂದ ಸಾಮ್ರಾಜ್ಯ ಸ್ಥಾಪನೆಯೇ ಅಥವಾ ಒಟ್ಟು ಜನಾಂಗದ ಅಭಿಮತದಿಂದ ಕೂಡಿದ ಅಂತರ ರಾಷ್ಟ್ರೀಯ ಸಂಯುಕ್ತ ಸರ್ಕಾರ ಸ್ಥಾಪನೆಯೇ ಎಂಬ ಪ್ರಶ್ನೆಗಳು ಹುಟ್ಟಿವೆ. ಚಾರಿತ್ರಕವಾಗಿ ಸಾಮ್ರಾಜ್ಯ ಸ್ಥಾಪನೆಗೆ ಪ್ರಜಾ ಬೆಂಬಲವಿಲ್ಲ. ಬಲಪ್ರಯೋಗದಿಂದ ಗಳಿಸಿದ ರಾಜ್ಯವನ್ನಾಳಿಸಬೇಕಾದರೆ ಬಲಪ್ರಯೋಗದಿಂದಲೇ ಹೊರತು ಬೇರೆ ಸಾಧನಗಳಿಂದಲ್ಲ ಆದರಿಂದಲೇ ರಾಷ್ಟ್ರವು ವಿವಾದಗಳ ಪರಿಹಾರದಲ್ಲಿ ತಾನೇ ಪರಮಾಧಿಕಾರವನ್ನು ಪಡೆದಿದೆ ಎಂಬ ದುರಭಿಮಾನವನ್ನು ತ್ಯಜಿಸಬೇಕು. ಏಕೆಂದರೆ ಪಕ್ಷ ಅಥವಾ ಸಂಸ್ಥೆಗಳ ಗೋಜಿಲ್ಲ, ಸಾರ್ವತ್ರಿಕವಾದ ನ್ಯಾಯುವೇ ಶಾಂತಿಯನೆಲೆ. ರಾಷ್ಟ್ರವು ಆತ್ಮರಕ್ಷಣೆಯಲ್ಲಿ ಮಾತ್ರ ಬಲಪ್ರಯೋಗ ಮಾಡಲು ಅವಕಾಶವನ್ನು ಪಡೆದಿದೆ. ಆದರೆ ಆತ್ಮರಕ್ಷಣೆಯೆನ್ನುವುದು ನ್ಯಾಯುಬದ್ಧವೇ ಎಂಬುದನ್ನು ಅಂತರ ರಾಷ್ಟ್ರೀಯ ನ್ಯಾಯಾಂಗ ಅಥವಾ ಯಾವುದಾದರೂ ಒಂದು ನಿರ್ದಿಷ್ಟ ಸಂಸ್ಥೆಯು ಪರಿಶೀಲಿಸಬೇಕು. ಇತರ ರಾಷ್ಟ್ರಗಳ ದುರಾಕ್ರಮಣಕ್ಕೆ ಸಾಧಕವಾದ ಯಾವ ವಿಧವಾದ ಆಯುಧ ಸಾಮಗ್ರಿಗಳು, ಯುದ್ಧಕ್ಕೆ ಸಿದ್ಧಮಾಡಿದ ಸೇನೆ, ಇವುಗಳನ್ನು ಯಾವ ರಾಷ್ಟ್ರವೂ ವಿಶೇಷವಾಗಿ ಸಿದ್ಧಪಡಿಸಕೂಡದು. ಪೌರನ ಸ್ವಾತಂತ್ರ್ಯಕ್ಕೆ ಧಕ್ಕೆತಂದರೆ ಯುದ್ಧ ಸನ್ನಿಹಿತವಾಗುವುದರಿಂದ ರಾಷ್ಟ್ರವು ತನ್ನ ವಿಧಾನದಲ್ಲಿಯೂ ಮತ್ತು ತಾನು ಮಾಡುವ ಅಂತರ ರಾಷ್ಟ್ರೀಯ ಒಪ್ಪಂದಗಳಲ್ಲಿಯೂ ಮಾನವನ ನೈಸರ್ಗಿಕವಾದ ಮತ್ತು ಸಾಂಸ್ಕೃತಿಕವಾದ ಹಕ್ಕುಬಾಧ್ಯತೆ

ಗಳನ್ನು ಪಾಲಿಸಬೇಕು. ಆರ್ಥಿಕ ಸಮಸ್ಯೆಗಳಲ್ಲಿ ವಿಶ್ವವೇ ಒಂದು ಸಂಸ್ಥೆಯಾಗುತ್ತಿರುವುದರಿಂದ ಯಾವ ರಾಷ್ಟ್ರವೂ ತನ್ನ ನಿರ್ದಿಷ್ಟವಾದ ಆರ್ಥಿಕ ಜೀವನವನ್ನು ನಿಯಂತ್ರಿಸಲು ಪ್ರಯತ್ನಿಸಕೂಡದು.

ಈ ವಿಧವಾದ ಹಕ್ಕುಬಾಧ್ಯತೆಗಳನ್ನು ರಕ್ಷಿಸಿ ಕಾರ್ಯಕಾರಿಯಾಗಿ ಮಾಡಲು ಅಂತರ ರಾಷ್ಟ್ರೀಯ ಶಿಸ್ತನ್ನು ಏರ್ಪಡಿಸುವ ಸಂಸ್ಥೆಗಳು ಅವಶ್ಯವಾಗುವುವು. ನ್ಯಾಯಬದ್ಧರೀತಿಯಲ್ಲಿ ವಿವಾದಗಳನ್ನು ಪರಿಹರಿಸಲು ಅಂತರರಾಷ್ಟ್ರೀಯ ನ್ಯಾಯಾಂಗರಚನೆ; ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ವಿಜ್ಞಾನದಿಂದ ಪ್ರಗತಿಪರವಾದ ಬದಲಾವಣೆಗಳಾದ ಹಾಗೆಲ್ಲ ಅವುಗಳನ್ನು ಪ್ರತಿಬಿಂಬಿಸುವ ಶಾಸನಗಳನ್ನು ಮಾಡಲು ಅಂತರ ರಾಷ್ಟ್ರೀಯ ಶಾಸನಾಂಗ ಸಭೆಗಳ ರಚನೆ; ಅಂತರ ರಾಷ್ಟ್ರೀಯ ಒಪ್ಪಂದಗಳನ್ನು ಪಾಲಿಸುವುದಕ್ಕೂ ಮತ್ತು ಅಕ್ರಮಣಗಳನ್ನು ಪ್ರತಿಬಂಧಿಸುವುದಕ್ಕೂ ಅಂತರ ರಾಷ್ಟ್ರೀಯ ಪೋಲೀಸ್ ಪಡೆಯ ರಚನೆ; ವಾಣಿಜ್ಯ, ಆರೋಗ್ಯ ಆಯ ವ್ಯಯ, ಅಂತರ ರಾಷ್ಟ್ರೀಯ ಯಾನ ಮತ್ತು ವ್ಯಾಪಾರ ಮಾರ್ಗಗಳು, ಕಾರ್ಮಿಕ ಜೀವನದ ಆಹಾರ ಪೋಷಣೆಯ ಮಟ್ಟ—ಇವುಗಳನ್ನು ಕ್ರಮಪಡಿಸಲು ಅಂತರರಾಷ್ಟ್ರೀಯ ಸಾಧನೆಗಳೂ ಸಂಸ್ಥೆಗಳೂ ರಚನೆಯಾಗಬೇಕು. ಹಾಗೆಯೇ ಹಿಂದುಳಿದ ಜನಾಂಗದವರನ್ನು ವಿದ್ಯಾಭ್ಯಾಸ, ಆರ್ಥಿಕ ಜೀವನದ ಮಟ್ಟದ ಮೇಲ್ಮೆ ಮುಂತಾದ ಉಪಕರಣಗಳಿಂದ ಪ್ರಗತಿಪರರನ್ನಾಗಿ ಮಾಡಲು ನಿರ್ದಿಷ್ಟವಾದ ಅಂತರ ರಾಷ್ಟ್ರೀಯ ಸಂಘಗಳು ಏರ್ಪಾಟಾಗಬೇಕು. ಕ್ರಿ. ಶ. ೧೯೧೯ ರಲ್ಲಿ ಸ್ಥಾಪನೆಯಾದ ರಾಷ್ಟ್ರಗಳ ಗೋಷ್ಠಿಯು ( League of Nations ) ಒಳಾಡಳಿತ ಮತ್ತು ವಿದೇಶಾಂಗ ನೀತಿಯಲ್ಲಿ ರಾಷ್ಟ್ರೀಯ ಭಾವನೆಯನ್ನೂ ಪರಮಾಧಿಕಾರವನ್ನೂ ಪೋಷಿಸಿಕೊಂಡು ಬಂದುದ್ದರಿಂದಲೇ ಪ್ರಚಲಿತ ಸಮಸ್ಯೆಗಳನ್ನು ಪರಿಹರಿಸಲಾಗಲಿಲ್ಲ. ಆದುದರಿಂದಲೇ ಮಂಚೂರಿಯಾ ಮತ್ತು ಅಬಿಸೀನಿಯಾಗಳ ಆಕ್ರಮಣಕ್ಕೆ ಅವಕಾಶ ಕೊಟ್ಟು ತನ್ನ ಉದಾತ್ತಧ್ಯೇಯಗಳನ್ನು ಕಾರ್ಯಕಾರಿಯಾಗಿ ಮಾಡುವುದರಲ್ಲಿ ನಿರುತ್ಸಾಹವಾಗಿ ನಿಷ್ಫಲವಾಯಿತು.

ಅಂತರ ರಾಷ್ಟ್ರೀಯ ಭಾವನೆಗಳನ್ನು ಕಾರ್ಯಕಾರಿಯಾಗಿ ಮಾಡಲು ಮತ್ತು ಸಾರ್ವಜನಿಕ ಹಿತಸಾಧಕ ಸಂಸ್ಥೆಗಳನ್ನು ಒದಗಿಸಲು ರಾಷ್ಟ್ರಗಳ ಗೋಷ್ಠಿಯು ದುರ್ಬಲವಾಯಿತು. ನಿಷ್ಪ್ರಯೋಜಕವಾದುದರಿಂದಲೇ ವಿಶ್ವಶಾಂತಿಗೆ ಭಂಗ ಬಂದು ಮತ್ತೊಂದು ಘೋರ ಯುದ್ಧವು ೧೯೩೯ ರಲ್ಲಿ ಪ್ರಾರಂಭವಾಗಿ ಒಟ್ಟು ಪ್ರಜಾವರ್ಗವನ್ನೇ ದುಃಖದಲ್ಲಿ ಮುಳುಗಿಸಿತು. ಯುದ್ಧ ಅನುಭವದಿಂದ ಉತ್ಪನ್ನವಾಗಿರುವ ಸಮಸ್ಯೆಗಳ ಪರಿಹಾರಕ್ಕಾಗಿಯೂ ಆಕ್ರಮಣದಿಂದ ನಾಶಹೊಂದಿದ ಪ್ರಜೆಗಳ ಸ್ವಾತಂತ್ರ್ಯ ಹಕ್ಕು ಬಾಧ್ಯತೆಗಳನ್ನು ಪುನಃ ಸ್ಥಾಪಿಸಲು ಶಾಂತಿ ಉದ್ಯಮಗಳು ನಡೆಯಿತು. ಇವುಗಳಲ್ಲಿ ಅಷ್ಟಾಂಶಗಳಿಂದ ಕೂಡಿರುವ ಅಟ್ಲಾಂಟಿಕ್ ಚಾರ್ಟರ್ ಪ್ರಭಾವಯುತವಾಗಿ ಕಂಡು ಬಂದಿತು.

ಅಟ್ಲಾಂಟಿಕ್‌ಚಾರ್ಟರ್ ಸನ್ನದ್ದಿಗೆ ಸಹಿ ಹಾಕಿರುವ ರಾಷ್ಟ್ರಗಳಿಗೆ ಭೂಮಿಯ ದಾಹವಿಲ್ಲ, ಆಯಾ ರಾಷ್ಟ್ರಗಳ ಪ್ರಜಾವರ್ಗಗಳ ಅಭಿಮತವನ್ನು ಅತಿಕ್ರಮಿಸಿ ರಾಷ್ಟ್ರಗಳ ಎಲ್ಲೆಗಳನ್ನು ಪುನರ್ರಚಿಸುವುದಿಲ್ಲ. ರಾಷ್ಟ್ರಗಳ ಪ್ರಜಾವರ್ಗವೂ ತಮ್ಮ ನೈಸರ್ಗಿಕ ಹಕ್ಕುಬಾಧ್ಯತೆಗಳನ್ನೂ ಪರಮಾಧಿಕಾರವನ್ನೂ ಗಳಿಸಿಕೊಳ್ಳಲು ನಿರ್ಬಂಧವಿಲ್ಲದೆ ಯಾವ ವಿಧವಾದ ಸರ್ಕಾರವನ್ನು ಬೇಕಾದರೂ ರಚಿಸಿಕೊಳ್ಳಬಹುದು. ಹಿರಿಯದಾಗಲೀ ಕಿರಿಯದಾಗಲೀ ಸೋಲಲೀ ಗೆಲ್ಲಲೀ ಪ್ರತಿಯೊಂದು ರಾಷ್ಟ್ರವೂ ತಮ್ಮ ಆರ್ಥಿಕ ಜೀವನದ ಪ್ರಗತಿಗಾಗಿ ಹಿಂದಿನಿಂದ ಬಂದಿರುವ ಆರ್ಥಿಕ ಒಪ್ಪಂದಗಳನ್ನು ಅತಿಕ್ರಮಿಸದಂತೆ ಭೂಗರ್ಭದಿಂದ ತೆಗೆಯುವ ಸಮಸ್ತ ಸಲಕರಣಗಳನ್ನೂ ಹೊಂದಲೂ ಅದರ ವ್ಯಾಪಾರವನ್ನು ನಡಸಲೂ ಇತರ ರಾಷ್ಟ್ರಗಳೊಡನೆ ಸಮನಾದ ಅಧಿಕಾರ ಪಡೆದಿದೆ. ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಬದಲಾಯಿಸಿ ಜೀವನದ ಮಟ್ಟವನ್ನು ಏರಿಸಿ ಪ್ರಗತಿ ಪರವನ್ನಾಗಿ ಮಾಡಲು ಸಮಾಜದಲ್ಲಿ ಶಾಂತಿಯನ್ನುಂಟುಮಾಡಿ ನೂತನವಾಗಿ ಗಳಿಸಿದ ಹಕ್ಕುಗಳನ್ನು ಪ್ರಯೋಗದಲ್ಲಿ ರಕ್ಷಿಸಲು ರಾಷ್ಟ್ರಗಳು ಸಮ್ಮಿಳಿತವಾಗಿ ಸೌಹಾರ್ದವನ್ನು ಬೆಳಸಬೇಕು; ಯುದ್ಧ ಭಯ, ಹಸಿವು ಬಾಯಾರಿಕೆ, ಸ್ವಾತಂತ್ರ್ಯ

ಬಲಹೀನತೆ—ಇವುಗಳು ನಾಶವಾಗಿ ಸಮಸ್ತ ಜನಾಂಗಗಳೂ ತಮ್ಮ ನಿರ್ದಿಷ್ಟ ಪ್ರದೇಶಗಳಲ್ಲಿ ಸುರಕ್ಷಿತವಾಗಿ ಜೀವಿಸಲು ಸದವಕಾಶವೇರ್ಪಾಡಾಗಬೇಕು. ಈ ವಿಧವಾದ ಶಾಂತಿಯಿಂದ ಸಪ್ತಸಮುದ್ರಗಳಲ್ಲಿಯೂ ಯಾವ ವಿಧವಾದ ಪ್ರತಿಬಂಧಕವಿಲ್ಲದೆ ನಿರಾಂತಕವಾಗಿ ಸಂಚರಿಸಬಹುದು; ಭೂ, ವಾಯು ಮತ್ತು ನೌಕಾಯುದ್ಧ ಸಾಮಗ್ರಿಗಳ ಪ್ರಯೋಗವೂ ಮಾನವನ ನೈತಿಕ ಜೀವನಕ್ಕೆ ಪ್ರತಿಬಂಧಕವಾಗಿ ಆತ್ಮನಾಶಕ್ಕೆ ಕಾರಣವಾಗುವುದರಿಂದ ಬಹು ಮುಖವಾಗಿ ಸುಧಾರಣೆಗಳ ಮೂಲಕ ಯಾವ ವಿವಾದಗಳಲ್ಲಿಯೂ, ಬಲ ಪ್ರಯೋಗವನ್ನು ರದ್ದುಮಾಡಬೇಕು. ಮತ್ತು ಆಕ್ರಮಣ ಭಾವನೆಗಳುಳ್ಳ ರಾಷ್ಟ್ರಗಳಲ್ಲಿ ಸಮರಸಿದ್ಧತೆಯಾಗದಂತೆ ತಡೆಗಟ್ಟಬೇಕು. ಈ ಶಾಸನದ ಮೂರನೆಯ ಮತ್ತು ನಾಲ್ಕನೆಯ ನಿಯಮಗಳಲ್ಲಿ ಕಂಡುಬರುವ 'ರಾಷ್ಟ್ರಗಳ ಪರಮಾಧಿಕಾರದ ಹಕ್ಕುಗಳು' ಮತ್ತು 'ರೂಢಿಯಲ್ಲಿರುವ ಒಪ್ಪಂದಗಳನ್ನು ಪಾಲಿಸುವುದು' ಎಂಬ ಎರಡು ವಾಕ್ಯಗಳನ್ನೂ ಪರಿಶೀಲಿಸಿದರೆ ಅಟ್ಲಾಂಟಿಕ್ ಚಾರ್ಟರ್ ಒಪ್ಪಂದದ ಮೇಲೆ ವಿಶ್ವದ ಶಾಂತಿಯನ್ನು ಸ್ಥಾಪಿಸಲು ಸಾಧ್ಯವೇ ಎಂಬ ಸಂದೇಹವು ತಲೆದೋರುತ್ತದೆ.

ಜರ್ಮನಿಯ ನಾಜ್ಹಿ ತತ್ತ್ವವನ್ನೂ ಮತ್ತು ಜರ್ಮನ್ ರಾಷ್ಟ್ರವನ್ನು ಮೂಲೋತ್ಪಾಟನ ಮಾಡುವುದನ್ನೂ, ರಾಷ್ಟ್ರಗಳು ತಮ್ಮ ನಿಯಮಗಳನ್ನು ಅನುಸರಿಸುವಂತೆ ನಿರ್ಬಂಧ ಪಡಿಸುವುದಕ್ಕೆ ಇಂಗ್ಲಿಷ್ ಮತ್ತು ಅಮೆರಿಕ ಸಂಯುಕ್ತ ರಾಷ್ಟ್ರಸರ್ಕಾರಗಳು ಬಯಸುತ್ತವೆ. ಆದರೆ ಹಿಂದಿನ (೧೯೧೪-೧೯೧೯) ಘೋರ ಯುದ್ಧದ ಅಂತ್ಯದಲ್ಲಿ ಪ್ರೆಸಿಡೆಂಟ್ ವಿಲ್ಸನ್ ರಚಿಸಿದ ಉದಾತ್ತ ಧ್ಯೇಯ ಸ್ಫೂರಿತವಾದ ೧೪ ಅಂಶಗಳಿಂದ ಕೂಡಿರುವ ಶಾಸನದಲ್ಲಿ, ದ್ವೇಷ ನಿರ್ಬಂಧದಿಂದ ಕೂಡಿದ ಶಾಂತಿ ಅಸ್ಥಿಮಿತವಾಗಿ ಪ್ರಳಯಕ್ಕೆ ಕಾರಣವಾಗುವುದರಿಂದ ಸೋತ ರಾಷ್ಟ್ರಗಳೊಡನೆ ಚರ್ಚಿಸಿ ಒಪ್ಪಂದಕ್ಕೆ ಬಂದು ಶಾಂತಿ ನೆಲಸಬೇಕೆಂದು ಘೋಷಿಸಿದನು. ಇದರ ಪರಿಶೀಲನೆಯಿಂದ ಅಟ್ಲಾಂಟಿಕ್ ಚಾರ್ಟರು ವಿಲ್ಸನ್ನಿನ ೧೪ ಅಂಶಗಳಿಂದ ಮುಂದುವರಿದು ಅಂತರ ರಾಷ್ಟ್ರೀಯ ಸಂಯುಕ್ತ ಸರ್ಕಾರ ಸ್ಥಾಪನೆಗೆ

ಸಹಕಾರಿಯಾಯಿತೆಂದು ನಿರ್ದಿಷ್ಟವಾಗಿ ಹೇಳಲಾಗಲಿಲ್ಲ. ನೈತಿಕ ಮತ್ತು ಧಾರ್ಮಿಕ ಜೀವನದ ಮೂಲಾಧಾರ ತತ್ತ್ವಗಳನ್ನು ಅತಿಕ್ರಮಿಸಿರುವುದರಿಂದಲೇ ಭಯಂಕರ ಸ್ಪರ್ಧೆ ಮತ್ತು ಯುದ್ಧವೂ ಸನ್ನಿಹಿತವಾಯಿತೆಂದು ಅಟ್ಲಾಂಟಿಕ್ ಚಾರ್ಟರಿನ ಸೃಷ್ಟಿಕರ್ತರಿಗೆ ಮನವರಿಕೆ ಯಾಗಲಿಲ್ಲ. ಆದುದರಿಂದಲೇ ಚಾರ್ಟರಿನ ಆರನೆಯ ನಿಯಮದಲ್ಲಿ ಬಲಪ್ರಯೋಗದ ಮತ್ತು ಸ್ವಚ್ಛಂದ ಪ್ರಭುತ್ವದ ನಾಶದ ವಿಷಯವಾಗಿ ಚರ್ಚೆಯಾಯಿತು. ಮಾನವನು ಮೃಗ ಜೀವನವನ್ನು ತ್ಯಜಿಸಿ ಉತ್ತಮ ಜೀವನವನ್ನು ಪಡೆಯಬೇಕಾದರೆ ವಿಶ್ವದಲ್ಲಿ ಧರ್ಮಸ್ಥಾಪನೆ ಯಾಗಿ ನೀತಿ ಧರ್ಮಗಳು ಹೊರಹೊಮ್ಮುವ ಸಂಸ್ಥೆಗಳು ಏರ್ಪಾಟಾಗಬೇಕೆಂಬ ತತ್ತ್ವವನ್ನು ಮತ್ತೊಂದು ಸಲ ಡಂಬರ್ಟನ್ ಓಕ್ಸ್ ಸಮ್ಮೇಳನದಲ್ಲಿ ಪ್ರತಿಪಾದಿಸ ಬೇಕಾಯಿತು.

ವಿಶ್ವಶಾಂತಿಯ ಸ್ಥಾಪನೆಗಾಗಿ ನಡೆಯುತ್ತಿರುವ ಪ್ರಯತ್ನಗಳಲ್ಲಿ ಯುದ್ಧದಲ್ಲಿ ಆಸಕ್ತರಾಗಿರುವ ಐರೋಪ್ಯ ರಾಷ್ಟ್ರಗಳನ್ನು ಒಟ್ಟು ಗೂಡಿಸಿ ಒಂದು ಸಂಯುಕ್ತ ರಾಷ್ಟ್ರಸ್ಥಾಪನೆ ಮಾಡುವುದೂ, ಐರೋಪ್ಯ ಸಂಯುಕ್ತ ರಾಷ್ಟ್ರಗಳ ಮೂಲಕ ಅಂತರ ರಾಷ್ಟ್ರೀಯ ಸಂಯುಕ್ತ ಪ್ರಭುತ್ವವನ್ನು ಏರ್ಪಡಿಸತಕ್ಕದ್ದೂ ಬಹಳ ಮುಖ್ಯವಾದದು. ಆರ್ಬಿಟ್ರೇಷನ್ ರಾಷ್ಟ್ರಗಳ ವಿವಾದಗಳನ್ನು ಪರಿಹರಿಸುವ ಸಂಸ್ಥಾ ಸ್ಥಾಪನೆ, ಸಮಗ್ರ ಜೀವನದ ರಕ್ಷಣೆ ಮತ್ತು ಪರಸ್ಪರ ಸೌಹಾರ್ದವನ್ನು ಏರ್ಪಡಿಸುವ ಪ್ರಯತ್ನ, ಆರ್ಥಿಕ ಮತ್ತು ಚಮೂರಚನೆಯಿಂದ ಆಕ್ರಮಣಕಾರರ ನಿಯಂತ್ರಣ, ಅಂತರ ರಾಷ್ಟ್ರೀಯ ಪೋಲಿಸ್ ಸಂಸ್ಥೆ, ರಾಷ್ಟ್ರ ಪ್ರತಿನಿಧಿಗಳ ಗೋಷ್ಠಿ— ಇವುಗಳನ್ನು ಅಂತರ ರಾಷ್ಟ್ರೀಯದಲ್ಲಿ ವಿಷಮ ಪರಿಸ್ಥಿತಿಗಳಾಗದಂತೆ, ಸ್ಥಾಪಿಸಿದ್ದರೂ ಆಧುನಿಕ ಪರಿಸ್ಥಿತಿಯಲ್ಲಿ ಇವು ಅಪ್ರಯೋಜಕವಾಗಿವೆ. ಪ್ರಜಾ ಪ್ರಭುತ್ವಕ್ಕೆ ಅನುಗುಣವಾದುದು ಸಂಯುಕ್ತ ರಾಜ್ಯಾಂಗ ಸರ್ಕಾರ. ಪ್ರಜಾ ಪ್ರಭುತ್ವ ಸರ್ಕಾರಗಳುಳ್ಳ ರಾಷ್ಟ್ರಗಳ ವಿವಾದಗಳನ್ನು ಪರಿಹರಿಸುವುದರಲ್ಲಿ ಯೋಗ್ಯವಾದುದು ಸಂಯುಕ್ತ ಸರ್ಕಾರ. ಈ ವಿಧವಾದ ಸಂಯುಕ್ತ ಸರ್ಕಾರವೇರ್ಪಟರೆ ರಾಷ್ಟ್ರಗಳು ತಮ್ಮ ಒಳ ಆಡಳಿತದಲ್ಲಿ ಸ್ವಕಾರ್ಯ

ನಿರ್ವಾಹಕವಾಗಿ, ವಿದೇಶಾಂಗ ನೀತಿಯಲ್ಲಿ, ಪರಮಾಧಿಕಾರವನ್ನು ಸಂಯುಕ್ತ ರಾಜ್ಯಾಂಗಕ್ಕೆ ಸೇರಿಸಬೇಕಾಗುತ್ತದೆ. ಇದಕ್ಕೆ ನಿದರ್ಶನವಾಗಿ ರಷ್ಯಾ ದೇಶದಲ್ಲಿ ನಿರ್ಮಿತವಾಗಿರುವ ಸರ್ಕಾರ. ಜಾತಿ, ಮತಭೇದಗಳಿದ್ದರೂ ದ್ವೇಷರಹಿತವಾದ ಅನೇಕ ರಾಷ್ಟ್ರಗಳು ಆರ್ಥಿಕ ಮತ್ತು ಸಹಕಾರ ಜೀವನ ದಿಂದ ಸಮ್ಮಿಳಿತವಾಗಿ ರಷ್ಯಾ ಸಂಯುಕ್ತ ಸರ್ಕಾರವಾಗಿವೆ. ಈ ವಿಧವಾದ ಅನೇಕ ರಾಷ್ಟ್ರಗಳಿಂದ ಕೂಡಿದ ಸಂಯುಕ್ತ ರಾಷ್ಟ್ರವು ಅಂತರ ರಾಷ್ಟ್ರೀಯ ಸಂಯುಕ್ತ ಸರ್ಕಾರದ ಸ್ಥಾಪನೆಗೆ ಮಾರ್ಗದರ್ಶಕವಾಗಿದೆ. ಹೀಗೆಯೇ ಸ್ವಾರ್ಥರಹಿತವಾದ ಪಾರಮಾರ್ಥಿಕ ಭಾವನೆಗಳುಳ್ಳ ಮತ್ತು ಸಾರ್ವತ್ರಿಕ ಹಿತಸಾಧಕ ಭಾವನೆಗಳುಳ್ಳ ಯುವಕ ಯುವತಿಯರ ಸಂಖ್ಯೆಯನ್ನು ಹೆಚ್ಚಿಸಲು ಅತ್ಯಾವಶ್ಯಕವಾದ ಸಾಮಾಜಿಕ ಮತ್ತು ರಾಜಕೀಯ ಸಾಧನೆಗಳನ್ನೂ ಸಂಸ್ಥೆಗಳನ್ನೂ ಕಲ್ಪಿಸಬೇಕು. ಒಂದು ಸಂಕುಚಿತ ಧ್ಯೇಯವುಳ್ಳ ರಾಷ್ಟ್ರ ಮತ್ತು ಆತ್ಮ ನಾಶಕ ದೃಷ್ಟಿಯುಳ್ಳ ಸಿದ್ಧಾಂತಗಳಿಗೆ ಎಡೆಗೊಡದೆ, ವಿಶ್ವಶಾಂತಿ ಮತ್ತು ಕಲ್ಯಾಣಕ್ಕಾಗಿ ಸರ್ವತ್ಯಾಗ ಮಾಡಬೇಕೆಂಬ ಸಿದ್ಧಾಂತಕ್ಕೆ ಅಧೀನವಾಗುವಂತೆ ಯುವಕ ಜನಾಂಗವನ್ನು ಹುರಿದುಂಬಿಸುವ ವಿಧಾನಗಳನ್ನು ಸ್ಥಾಪನೆ ಮಾಡಬೇಕು. ಹೀಗೆ ಕೆಲವು ಕಾಲ ಸಂತತವಾಗಿ ಉದಾತ್ತ ಧ್ಯೇಯಗಳಿಗೆ ಅನುಗುಣವಾದ ಸಂಸ್ಥೆಗಳು ಸೃಷ್ಟಿಯಾದಲ್ಲಿ ಮತ್ತು ಆ ಸಂಸ್ಥೆಗಳು ವ್ಯಕ್ತಿಯ ಮತ್ತು ಸಮಾಜದ ಪುರೋಭಿವೃದ್ಧಿಗೂ ಮತ್ತು ಶಾಂತಿಗೂ ದುಡಿದಲ್ಲಿ ಚಿಂತಾಜನಕವಾದ ಯುದ್ಧ ಮುಂತಾದ ಘೋರ ಪರಿಸ್ಥಿತಿಗಳು ಮಾಯವಾಗುವುವು. ತ್ಯಾಗಯುಕ್ತವಾದ ಧರ್ಮಪರಿವರ್ತನೆಯು ರವೀಂದ್ರನಾಥಠಾಕೂರರ ಶಾಂತಿನಿಕೇತನ ದಲ್ಲಿಯೂ ಮಹಾತ್ಮಗಾಂಧಿಯವರ ಆಶ್ರಮದಲ್ಲಿಯೂ ಬಹಳ ಮಟ್ಟಿಗೆ ಯಶಸ್ವಿಯಾಗಿ ನಡೆದಿದೆಯೆಂದು ಹೇಳಬಹುದು. ಈ ಆಶ್ರಮಗಳು ಸಂಸ್ಕೃತಿ, ಮತ, ಜ್ಞಾನ ಇವುಗಳ ನೆಲೆಬೀಡಾಗಿ, ಸತ್ಯ, ಧರ್ಮ, ಆದರ್ಶಜೀವನ, ಅಹಿಂಸೆ ಮುಂತಾದ ಪಾರಮಾರ್ಥಿಕ ಧ್ಯೇಯಗಳ ಆಧಾರದ ಮೇಲೆ ವ್ಯಕ್ತಿಗಳ ಮತ್ತು ರಾಷ್ಟ್ರಗಳ ಏಕೀಕರಣ ಮತ್ತು ಸಂಸ್ಕೃತಿಗಳ

ಸಂಯೋಗವನ್ನು ಏರ್ಪಡಿಸಲು ಪ್ರಯತ್ನಗಳನ್ನು ಮಾಡಿವೆ. ಆಶ್ರಮದಲ್ಲಿ ನಡೆದಿರುವ ಪ್ರಯತ್ನಗಳೂ ಸೃಷ್ಟಿಸಿರುವ ಸಾಧನೆಗಳೂ ತನ್ಮೂಲಕ ಸಂತತವಾಗಿ ಬೆಳೆಯುತ್ತಿರುವ ಸತ್ಯ ಅಹಿಂಸೆ ಧರ್ಮಭಾವನೆಗಳಿಂದ ಪುನೀತರಾದ ಯುವಕಜನಾಂಗ—ಇವುಗಳು ಪ್ರತಿಯೊಂದು ರಾಷ್ಟ್ರದಲ್ಲಿಯೂ ತಲೆದೋರಿದರೆ, ಆಶ್ರಮದಂಥ ಸಂಸ್ಥೆಗಳು ಪ್ರತಿಯೊಂದು ರಾಷ್ಟ್ರದಲ್ಲಿಯೂ ಏರ್ಪಟ್ಟರೆ ವಿಶ್ವಶಾಂತಿಯನ್ನು ಸ್ಥಾಪಿಸಲು ಮಾರ್ಗವಾಗುತ್ತದೆ.

## ಪ್ರಕರಣ ೧೮

## ವಿಶ್ವಶಾಂತಿ ಸಂಸ್ಥೆ ಯು.ಎನ್.ಓ. — U.N.O.

ಲೀಗ್ ಅಫ್ ನೇಷನ್ಸ್ (League of Nations) ಸಂಸ್ಥೆಯು, ಎರಡನೆಯ ಮಹಾ ಯುದ್ಧವಾಗುತ್ತಿರುವಾಗಲೇ ಶಾಂತಿಸ್ಥಾಪನೆಯ ಪ್ರಯತ್ನದಲ್ಲಿ ವಿಫಲವಾಗಿ ಬಲಹೀನವಾಯಿತು. ಯುದ್ಧ ಸಿದ್ಧತೆಗೆ ಮೂಲಕಾರಣವು ಹಿರಿಯ ರಾಷ್ಟ್ರಗಳ ಆಕ್ರಮಣದ ದಾಹ, ಸೈನ್ಯ ಮತ್ತು ಮದ್ದು ಗುಂಡುಗಳ ಅಗಾಧ ಶೇಖರಣೆ ಮತ್ತು ರಾಷ್ಟ್ರಗಳ ಪರಸ್ಪರ ಗುಪ್ತ ಸನ್ನಾಹಗಳು. ಈ ಮೂಲ ಕಾರಣಗಳನ್ನು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯು ತಡೆಗಟ್ಟಲು ಸಾಧ್ಯವಾಗಲಿಲ್ಲ. ಸಂಸ್ಥೆಯ ಸದಸ್ಯರು, ಅದರ ನಿರ್ಧಾರಗಳನ್ನು ಮನ್ನಿಸಲಿಲ್ಲ. ಆಕ್ರಮಣಕಾರರು ಅಂತರಾಷ್ಟ್ರೀಯ ನ್ಯಾಯಾಸ್ಥಾನಗಳಿಗೆ ತಮ್ಮ ದೂರುಗಳನ್ನು ಸಲ್ಲಿಸಲಿಲ್ಲ. ಆಕ್ರಮಣಕಾರರನ್ನು ಸದಸ್ಯ ರಾಷ್ಟ್ರಗಳು ನಿಯಂತ್ರಿಸಲಿಲ್ಲ. ಆದುದರಿಂದ ಜನವರಿ 6–1941ರಲ್ಲಿ ಅಧ್ಯಕ್ಷ ರೂಸ್ವೆಲ್ಟನು ತನ್ನ ಸಂದೇಶದಲ್ಲಿ ವಾಕ್ ಸ್ವಾತಂತ್ರ್ಯ, ಮತ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಮತ್ತು ಯುದ್ಧ ಭಯರಹಿತವಾದ ಸಹಕಾರ ಸೌಹಾರ್ದದಿಂದ ಕೂಡಿದ ಸ್ವಾತಂತ್ರ್ಯದ ಅಡಿಗಲ್ಲಿನ ಮೇಲೆ ನೂತನ ಸೃಷ್ಟಿಯ ಕನಸನ್ನು ಕಂಡನು. ಇದರ ಸಲುವಾಗಿ ಅಂಟ್ಲಾಂಟಿಕ್ ಚಾರ್ಟರ್, ಮತ್ತು ಬ್ರೆಟನ್ ವುಡ್ಸ್‌ಪರಿಷತ್‌ಗಳ ನಿರ್ಧಾರಗಳು, ಪ್ರಪಂಚದಲ್ಲಿ ಅವಿನಾಶವಾದ ಮತ್ತು ಚಿರಂತನವಾದ ಶಾಂತಿಗಾಗಿ ಸ್ಫೂರ್ತಿ ಕೊಟ್ಟವು. ಏಪ್ರಿಲ್ 1945ರಲ್ಲಿ ಸಮಾವೇಶಗೊಂಡ ಸಭೆಯು ಯು.ಎನ್.ಓ. (U.N.O.) ಸಂಸ್ಥೆಯನ್ನು ರಚಿಸಿತು. ಈ ಸಂಸ್ಥೆಯ ಉದಾತ್ತವಾದ ಧ್ಯೇಯಗಳು ನಾಲ್ಕು: ವಿಶ್ವಭದ್ರತೆ ಮತ್ತು ಶಾಂತಿ ಪರಿಪಾಲನೆ, ರಾಷ್ಟ್ರ ಸ್ವಾತಂತ್ರ್ಯ ಮತ್ತು ರಾಷ್ಟ್ರಗಳ ಸರ್ವಸಮತೆಯಾಧಾರದ ಮೇಲೆ ರಾಷ್ಟ್ರಗಳ ಸ್ನೇಹವನ್ನು ಬೆಳೆಸುವುದು, ವ್ಯಕ್ತಿ ವಿಕಾಸಕ್ಕೂ ರಾಷ್ಟ್ರ ಪ್ರಗತಿಗೂ

ಅತ್ಯಗತ್ಯವಾದ ಆರ್ಥಿಕ ಸಾಮಾಜಿಕ ಸಂಸ್ಕೃತಿಕ ಮತ್ತು ಮಾನವೀಯ ಸಂಪತ್ತನ್ನು ಬೆಳೆಸಿ ಪೋಷಿಸುವುದು,— ಈ ಧ್ಯೇಯಗಳ ಸಾಧನೆಗಾಗಿ ಒಂದು ಪ್ರತ್ಯೇಕ ಸಂಸ್ಥೆಯನ್ನು ಒಂದು ನಿರ್ಧಿಷ್ಟ ರಾಷ್ಟ್ರದಲ್ಲಿ ಸ್ಥಾಪಿಸುವುದು. Article 2 ಸದಸ್ಯರ ಮತ್ತು ರಾಷ್ಟ್ರಗಳ ನಡವಳಿಕೆಗಳನ್ನು ರೂಪಿಸುವ ತತ್ವಗಳನ್ನು ಪ್ರತಿಪಾದಿಸಿದೆ. Article 55 ಅಂತರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಸಹಕಾರದ ಭಾವನೆಗಳನ್ನು ನಿರೂಪಿಸಿದೆ.

ಶಾಂತಿ ಧೂತ ರಾಷ್ಟ್ರಗಳಿಗೆಲ್ಲಾ ಈ ವಿಶ್ವಸಂಸ್ಥೆಯಲ್ಲಿ ಸದಸ್ಯರಾಗುವುದಕ್ಕೆ ಅವಕಾಶವುಂಟು. ಅವು ವಿಶ್ವಸಂಸ್ಥೆಯ ನಿರ್ಧಾರಗಳನ್ನು ಪಾಲಿಸಬೇಕು. 1945 ರಲ್ಲಿಯೇ, ಪ್ರಪಂಚದ ಐವತ್ತೊಂದು ರಾಷ್ಟ್ರಗಳು ಸದಸ್ಯರಾದರು. ಎರಡನೆಯದಾಗಿ, ವಿಶ್ವಸಂಸ್ಥೆಯ ರಾಷ್ಟ್ರಗಳ ಸಭೆಯಲ್ಲಿ, ಪ್ರತಿಯೊಂದು ರಾಷ್ಟ್ರಕ್ಕೂ 5 ಸದಸ್ಯರನ್ನು ಚುನಾಯಿಸಿ, ಸೇರಿಸಬಹುದು, ಆದರೆ ಮತಾಧಿಕಾರ ಒಂದು ರಾಷ್ಟ್ರಕ್ಕೆ ಒಂದರಂತೆ. ವಿಶ್ವಸಂಸ್ಥೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಚರ್ಚಿಸಬಹುದು. ಸೆಕ್ಯೂರಿಟಿ ಮಂಡಲಿಗೂ, ಟ್ರಸ್ಟೀಸಿಪ್ಸ್ ಮಂಡಲಿಗೂ ಸದಸ್ಯರನ್ನು ಚುನಾಯಿಸಬಹುದು. ಸೆಕ್ಯೂರಿಟೀ ಮಂಡಲಿಗೆ ಸಲಹೆಗಳನ್ನು ಕೊಡಬಹುದು. ಆದರೆ ತಾನೇ ಪ್ರತ್ಯೇಕವಾಗಿ ಪ್ರಪಂಚದ ಜಟಿಲ ಪ್ರಶ್ನೆಗಳ ಅಥವ ಶಾಂತಿ ಪ್ರಯತ್ನಗಳ ಗೋಜಿಗೆ, ಮಂಡಲಿಯ ಅನುಮತಿಯಿಲ್ಲದೆ ತಲೆ ಹಾಗಬಾರದು. ಸಭೆಯು ವರ್ಷಕ್ಕೆ ಒಂದಾವರ್ತಿ ಸೇರುವುದು. ಅದರ ರೀತಿ ನೀತಿಗಳನ್ನು ಸದಸ್ಯರು ನಿರ್ಧರಿಸಬಹುದು. ಮೂರರಲ್ಲಿ ಎರಡನೆ ಭಾಗ ಸದಸ್ಯರು ಒಪ್ಪಿದಲ್ಲಿ ನಿರ್ಧಾರಗಳು, ಶಾಸನಗಳಾಗುವುವು. ಏಳು ಪ್ರತ್ಯೇಕವಾದ ಉಪ ಸಮಿತಿಗಳ ಸಲಹೆಗಳಂತೆ ಹಿರಿಯ ಶಾಸನ ಸಭೆಯು ವರ್ತಿಸುವುದು.

ಭದ್ರತಾ ಸಮಿತಿಯು ವಿಶ್ವಸಂಸ್ಥೆಯ ಬಹು ಮುಖ್ಯವಾದ ಅಂಗ. ಹನ್ನೊಂದು ಸದಸ್ಯರಿರುವರು. ಇದು ಪ್ರಪಂಚದ ಶಾಂತಿಗಾಗಿ, ರಾಷ್ಟ್ರಗಳ

ವೈಷಮ್ಯಗಳ ಪರಿಹಾರಕ್ಕಾಗಿ ಏರ್ಪಟ್ಟಿರುವ ಮಂಡಲಿ. ಫ್ರಾನ್ಸ್, ಇಂಗ್ಲೆಂಡ್, ಅಮೆರಿಕಾ, ಮತ್ತು ರಷ್ಯ ರಾಷ್ಟ್ರಗಳು ಪ್ರಧಾನಪಾತ್ರ ಹೊಂದಿವೆ. ಮಿಕ್ಕ ರಾಷ್ಟ್ರಗಳು ಎರಡು ವರ್ಷಕ್ಕೊಂದಾವರ್ತಿ ವಿಶ್ವ ಸಂಸ್ಥೆಯ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವುವು. ಅಂತರ ರಾಷ್ಟ್ರೀಯ ಸಂಗ್ರಾಮಕ್ಕೆ ಮೂಲ ಭೂತವಾಗುವ ಜಟಿಲ ಪ್ರಶ್ನೆಗಳನ್ನು ನಾಲ್ಕು ಅಂತಸ್ಥಿನಲ್ಲಿ ಭದ್ರತಾ ಸಮಿತಿಯು ಕುಲಂಕಶವಾಗಿ ವಿಮರ್ಶೆ ನಡೆಸುವುದು. ಕಲಹ ಮಾಡಿರುವ ಪಕ್ಷ ರಾಷ್ಟ್ರಗಳು. ತಾವೇ ಒಂದು ಸಮರ್ಪಕವಾದ, ಉಭಯ ಹಿತಸಾಧಕವಾದ ತೀರ್ಮಾನಕ್ಕೆ ಬರಬೇಕೆಂದು ತಿಳಿಸುವುದು; ಅದು ಸಾಧ್ಯವಿಲ್ಲದಿದ್ದಲ್ಲಿ, ಸಮಿತಿಯು ಸಲಹೆಗಳನ್ನು ಕೊಡುವುದು. ಈ ಸಾಧನವೂ ವಿಫಲವಾದಲ್ಲಿ ಆರ್ಥಿಕ ಬಂಧನಗಳಿಂದ ಉಭಯರಾಷ್ಟ್ರಗಳನ್ನು ನಿಯಂತ್ರಿಸುವುದು; ಅಂತ್ಯದಲ್ಲಿ. ಅಂತರ ರಾಷ್ಟ್ರೀಯ ನಿರ್ಧಾರಗಳ ಆಜ್ಞಾಧಾರಕವಾಗದೆ ತಾಟಸ್ಥರಾದಲ್ಲಿ, ಆ ರಾಷ್ಟ್ರಗಳ ಮೇಲೆ ಯುದ್ಧ ಮಾಡುವುದು. ಈಗ ದಕ್ಷತೆಯಿಂದ ಸಮಿತಿಯು ಕೆಲಸ ಮಾಡದೆ ನಿತ್ರಾಣವಾಗಿದೆ. ಇದಕ್ಕೆ ಕಾರಣ, ಪ್ರತಿಯೊಂದು ರಾಷ್ಟ್ರವು ನಿರ್ಧಾರಕ್ಕೆ ಬರುವ ಮುನ್ನ ಕೊಡುವ ತಮ್ಮ ಪ್ರತ್ಯೇಕವಾದ ಮತಾಧಿಕಾರ. ಸಮಿತಿಯ ಚರಸದಸ್ಯರ ಅಭಿಮತವು ಬಹು ಮುಖ್ಯ. ಅದರಲ್ಲಿ ಭಿನ್ನಾಭಿಪ್ರಾಯಗಳಿದ್ದ ಪಕ್ಷದಲ್ಲಿ ಶಾಂತಿಸಾಧನೆ ಸುಲಭ ಸಾಧ್ಯವಲ್ಲ. ಆದರೂ ಆರ್ಟಿಕಲ್‌ಗಳು 43, 44, 45 ಮತ್ತು 47 ಇವು ಭಿನ್ನಾಭಿಪ್ರಾಯಗಳ ಪರಿಹಾರಕ್ಕಾಗಿ ಸೂಚನೆ ಕೊಟ್ಟಿವೆ. ವಿಶ್ವಸಂಸ್ಥೆಯ ನಿರ್ಧಾರಗಳನ್ನು ಕಾರ್ಯಗತ ಮಾಡುವಂತೆ ಸೈನ್ಯಗಳ ಏರ್ಪಾಡುಗಳು ಹೇಗೆ ನಡೆಯಬೇಕೆಂದು ನಿರ್ಣಯಗಳನ್ನು ವಿಶ್ವಸಂಸ್ಥೆಯ ಕರಡುಪ್ರತಿಯ ಆರ್ಟಿಕಲ್‌ಗಳು ವಿಷದ ಪಡಿಸಿವೆ. ಇದುವರಿಗೆ ಇವು ಜಾರಿಗೆ ಬಂದಿಲ್ಲ.

ವಿಶ್ವಸಂಸ್ಥೆಗೆ ಸೇರಿದ ಹಾಗೆ U. N. O. ಸೆಕ್ರೆಟೇರಿಯಟ್, ಅಂತರಾಷ್ಟ್ರೀಯ ನ್ಯಾಯಾಂಗಗಳು, ಟ್ರಸ್ಟಿಷಿಪ್ ಸಮಿತಿ ಮತ್ತು ಸಾಮಾಜಿಕ ಸಮಿತಿಗಳು. ಇವು ವಿಶೇಷ ಪ್ರಭಾವಯುತವಾಗಿ ಕೆಲಸ ಮಾಡುತ್ತಾ

ಇವೆ. ಆರ್ಥಿಕ ಮತ್ತು ಸಾಮಾಜಿಕವು ಮಂಡಲ ವಿಶ್ವದಲ್ಲಿ ಹಿಂದುಳಿದ ಜನಾಂಗಗಳ ಪ್ರಗತಿಗಾಗಿಯೂ ದಳಿತ ವರ್ಗಗಳ ವಿಕಾಸಕ್ಕಾಗಿಯೂ ಮಾಡಿರುವ ಸಾಹಸ ಒಂದು ಉಜ್ವಲವಾದ ಪ್ರಕರಣ. ಈ ಹಿರಿಯದಾದ ಮಂಡಲಿಯ ನಿಯಂತ್ರಣದಲ್ಲಿ, ಇನ್ಟರ್ ನ್ಯಾಷನಲ್ ಬ್ಯಾಂಕ್ ಇನ್ಟರ್ ನ್ಯಾಷನಲ್ ಯೂನಿಟಿ ಫಂಡ್, ಆಹಾರ ಮತ್ತು ವ್ಯವಸಾಯ ಸಂಸ್ಥೆ, ವೈಮಾನಿಕ ಉಪಸಮಿತಿ, ಮತ್ತು ವಿದ್ಯಾಭ್ಯಾಸ, ವಿಜ್ಞಾನ ಮತ್ತು ಸಂಸ್ಕೃತಿಕ ಸಮಿತಿಗಳು ಬಹಳ ಪ್ರತಿಭೆಯಿಂದಲೂ ಸರ್ವ ಹಿತಸಾಧಕವಾದ ಮನೋರಥದಿಂದಲೂ ಪ್ರಪಂಚದ ಅನೇಕ ಕ್ಷೇತ್ರ ಗಳಲ್ಲಿ ದುಡಿಯುತ್ತಿವೆ. ವಿದ್ಯಾ, ವಿಜ್ಞಾನ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಸಂಸ್ಥೆಗಳನ್ನು 'ಯುನೆಸ್ಕೋ' ಎಂದು ಕರೆಯುವರು. ಈ ರಚನೆಗೆ ಸಂಬಂಧಪಟ್ಟ, ಉಪೋದ್ಘಾತದಲ್ಲಿ ಈ ರೀತಿ ಹೇಳಿದೆ; ಕಲಹ ವೈಷಮ್ಯ ಮತ್ತು ಯುದ್ಧ ಭೀತಿ ಮಾನವನ ಮನಸ್ಸಿನಲ್ಲಿ ಅಂತರ್ಗತ ವಾಗಿವೆ; ಹಾಗೆಯೇ ಸಾರ್ವಲೌಕಿಕವಾದ ಮತ್ತು ಶಾಂತಿ ಪ್ರದಾನವಾದ ಭಾವನೆಗಳು ಮಾನವನ ಮನಸ್ಸಿನಲ್ಲಿಯೇ ಅಡಗಿವೆ; ಯುದ್ಧ ಪ್ರೇರಕ ವಾಗುವ ಭಯ, ಭೀತಿ, ಪ್ರಮಾದ, ಆಲಸ್ಯಗಳ ಮೂಲಭೂತವಾದ ಸಂಕೇತ–ಜನಾಂಗಗಳ ಪರಸ್ಪರ ಜೀವನದ ವಿಚಾರದಲ್ಲಿ ವ್ಯಕ್ತಿಯಲ್ಲಿರುವ ಅಜ್ಞತೆ ಮತ್ತು ಆಂತರಿಕ ಜ್ಞಾನಿ; ಅಸಮಾನತೆ, ದುಷ್ಕೃತ್ಯ ದೌರ್ಜನ್ಯ ಭಾವನೆಗಳಿಂದ, ಸ್ವಾತಂತ್ರ್ಯ ಸಮಾನತೆ, ಮತ್ತು ಭ್ರಾತೃಭಾವನೆಗಳು ಅಳಿದುಹೋಗಿ ಯುದ್ಧ ಪರಿಸ್ಥಿತಿಗೆ ಎದೆ ಕೊಟ್ಟವೆ. ಕೇವಲ ರಾಜಕೀಯ ಮತ್ತು ಆರ್ಥಿಕ ಜೀವನದ ಮಾರ್ಪಾಟನಿಂದ, ರಚನಾತ್ಮಕ ಕಾರ್ಯಗಳ ನಿಬಂಧನೆಗಳಿಂದ, ಪ್ರಪಂಚದಲ್ಲಿ ಶಾಂತಿಯನ್ನು ಚಿರಕಾಲ ಸಾಧಿಸಲು ಸಾಧ್ಯವಲ್ಲ. ಯುದ್ಧಭಯ ತೊಲಗಬೇಕಾದರೆ, ವಿಶ್ವಶಾಂತಿ, ಶಾಶ್ವತವಾಗ ಬೇಕಾದರೆ ಮಾನವನ ಮಾನಸಿಕ ವಿಕಾಸ, ಮತ್ತು ನೀತಿಯುತವಾದ ಜೀವನದ ಬುನಾದಿಯ ಮೇಲೆ ನಿಲ್ಲಬೇಕು."

ಉದಾತ್ತಧ್ಯೇಯ ಪೂರಿತವಾದ ವಿಶ್ವಸಂಸ್ಥೆಯು ಜನರು ಅಪೇಕ್ಷಿಸಿ

ದಷ್ಟು ಫಲಕಾರಿಯಾಗಿ ದಕ್ಷತೆಯಿಂದ ಮುಂದುವರಿದಿಲ್ಲವೆಂದು ವಾದವಿದೆ. ಇದಕ್ಕೆ ಕಾರಣಗಳು ಎರಡು: ಭದ್ರತಾಸಮಿತಿಯಲ್ಲಿ ಮತಕೊಡುವ ವಿಧಾನ; ಅಂತರಾಷ್ಟ್ರೀಯ ಸೈನ್ಯಸಿಬ್ಬಂದಿಗಳಿಲ್ಲದಿರುವಿಕೆ; ಅಂತಹ ಸೈನ್ಯದ ನಾಯಕತತ್ವವನ್ನು ಯಾವುದಾದರೊಂದು ನಿರ್ದಿಷ್ಟವಾದ ರಾಷ್ಟ್ರಕ್ಕೆ ಕೊಡ ದಿರುವುದು. ವಿಶ್ವಸಂಸ್ಥೆಯ ಆಸೆ ಆಕಾಂಕ್ಷೆಗಳು ಕೈಗೂಡಬೇಕಾದರೆ ರಾಷ್ಟ್ರಗಳು ಒಳನಾಡಿನಲ್ಲಿಯೂ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿ ಯಲ್ಲಿಯೂ ತಮ್ಮ ಆಜನ್ಮಸಿದ್ಧವಾದ ಪರಮಾಧಿಕಾರವನ್ನು ತ್ಯಜಿಸ ಬೇಕು, ಮತ್ತು ವಿಶ್ವಸಂಸ್ಥೆಯ ಸಭೆಗೆ ಪ್ರಜಾಭಿಮತವನ್ನು ಹೊಂದಿರುವ ಸದಸ್ಯರಿರಬೇಕು, ರಾಷ್ಟ್ರಸರ್ಕಾರಗಳ ಪ್ರತಿನಿಧಿಗಳಲ್ಲ; ಕ್ರಿಯಾಸಮಿತಿಗಳು ಪ್ರತ್ಯಕ್ಷ ಪ್ರಜಾಪ್ರಭುತ್ವದ ತತ್ವದಂತೆ ನೇರವಾಗಿ ಪ್ರಜೆಗಳಿಂದ ಚುನಾ ಯಿತರಾಗಬೇಕು. ಅತ್ಯಂತ ಬಲಯುತವಾದ ರಾಷ್ಟ್ರಗಳ ಸೈನ್ಯ ಸೇಖರಣೆ ಕಡಿಮೆಯಾಗಬೇಕು, ಅಂತರಾಷ್ಟ್ರೀಯ ಸೈನ್ಯದಳ ಸೃಷ್ಟಿಯಾಗಬೇಕು; ಅಂತರಾಷ್ಟ್ರೀಯ ನ್ಯಾಯಾಂಗದ ನಿರ್ಧಾರಗಳನ್ನು ಅಂತರಾಷ್ಟ್ರೀಯ ದಳದ ಸಹಾಯದಿಂದ, ಅತಿಕ್ರಮಿಸುವ ರಾಷ್ಟ್ರಗಳ ಮೇಲೆ ಹೊರಿಸಬೇಕು. ಭರತಖಂಡವು ಪಂಡಿತ್ ನೆಹರುರವರ ನಾಯಕತ್ವದಲ್ಲಿ ಅಂತರಾಷ್ಟ್ರೀಯ ಶಾಂತಿಗಾಗಿ ಅಸದೃಶ್ಯವಾದ ಶ್ರಮವನ್ನು ವಹಿಸಿದೆ. ಕೊರಿಯಾ, ಮತ್ತು ದಳಿತಜನಾಂಗಗಳ ಪ್ರಗತಿಗಾಗಿ ಹೋರಾಟ ನಡೆಸಿದೆ, ಚೈನಾ, ಇನ್ಡೊ ಚೈನಾ ಇನ್ಡೊನೇಷಿಯಗಳ ಭವಿಷ್ಯಕ್ಕಾಗಿ ತ್ಯಾಗಮಾಡಿದೆ. ನಿರಂಕುಶ ಪ್ರಭುತ್ವದ ಮೂಲೋತ್ಪಾಟನಕ್ಕಾಗಿ ಶಾಂತರೀತಿಯಲ್ಲಿ ವರ್ತಿಸಿದೆ. ಬರ್ಮ, ಇನ್ಡೋ ಚೈನಾ ಮುಂತಾದ ರಾಷ್ಟ್ರಗಳ ಸ್ವಾತಾಂತ್ರ್ಯ ಹೋರಾಟದಲ್ಲಿ ವಿಶೇಷ ಶ್ರದ್ಧೆವಹಿಸಿದೆ. ಬಾನ್ಡ್ಂಗ್ ಮತ್ತು ಜಿನೀವ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿ, ಮಹಾತ್ಮ ಗಾಂಧಿಯವರು, ದ್ವೇಷ ದೌರ್ಜನ್ಯಗಳನ್ನು ತೊಡಯಬೇಕೆಂದು ಇತ್ತ ಆದೇಶದಂತೆ ಭಾರತ ನಡೆಯುತ್ತಿದೆಯೆಂದೂ, ಯಾವ ರಾಷ್ಟ್ರದೊಡನೆಯೂ ಭಾರತಕ್ಕೆ ವೈಷಮ್ಯವಿಲ್ಲವೆಂದೂ 'ಪಂಚಶೀಲ' ತತ್ವದಾಧಾರದ ಮೇಲೆ

**D. Lasswell** — Politics, who gets what, When How.

**Charles. A. Beard** — Economic basis of Politics.

**Walter Lippmann** — Preface to Politics.

**James Bryce** — Modern Democracies. Two Vols.

**Herman Finer** — Theory and Practice of Modern Government, Two vols.

**Carl. J. Friedrich** — Constitutional Government and Democracy.

**D Tocqueville** — Democracy in America.

**Bagehot** — The English Constitution.

**McBain** — The Living Constitution.

**John Dewey** — The Public and its Problem.

**A. D. Lindsay** — Modern Democratic State.

**Schumpeter** — Capitalism, Socialism and Democracy.

**Jacob Burckhardt** — Force and Freedom

**Arnold Toynbee** — The Study of History Abridged, by D. C. Somervelle.

**Mahatma Gandhi** — Autobiography.

**Jawaharlal Nehru** — (*a*) Autobiography, (*b*) Glimpses of India.

---

ಬೆಂಗಳೂರು ಪ್ರೆಸ್ ಮೈಸೂರು ಬ್ರಾಂಚಿನಲ್ಲಿ ಮುದ್ರಿಸಲ್ಪಟ್ಟಿತು.

# ಪ್ರಕರಣ ೧೯

## ಭಾರತ ಸಂವಿಧಾನ

ಭಾರತದ ಇತಿಹಾಸ ದೊಡ್ಡದು. ದೇಶ ಎಷ್ಟು ಪುರಾತನವೋ ಅಷ್ಟೇ ಅದರ ಸಂಸ್ಕೃತಿಯು ಪ್ರಾಚೀನ ಮತ್ತು ಪ್ರಖ್ಯಾತವಾದುದು. ಮಹಮದೀ ಮತ್ತು ಮೊಗಲರ ಸಾಮ್ರಾಟರ ಆಳ್ವಿಕೆಯ ತರುವಾಯ, ಬ್ರಿಟಿಷರು ಬಂದರು. ಬ್ರಿಟಿಷರ ಆಳ್ವಿಕೆಯು ಪ್ರಜಾಮತಕ್ಕನುಸಾರವಾಗಿರದಿದ್ದರೂ, ದಕ್ಷತೆಯಿಂದಲೂ ದರ್ಪದಿಂದಲೂ ಸಾಮಾಜಿಕ ಸ್ಥಿತಿಗತಿಗಳನ್ನು ಭದ್ರಪಡಿಸಿ ದೇಶದಾದ್ಯಂತವೆಲ್ಲಾ, ಶಾಂತಿಯನ್ನು ಮತ್ತು ಶಿಸ್ತನ್ನು ಸ್ಥಾಪಿಸಿ, ರಾಜಕೀಯ ರಂಗದಲ್ಲಿ ಸಮಗ್ರ ಭಾರತದ ಚಿಂತನೆಯನ್ನು ಕೆರಳಿಸಿತು. ಅವರ ಆಳ್ವಿಕೆಯನ್ನು ಪ್ರತಿಭಟಿಸಿ ಪ್ರತಿನಿಧಿ ಸರ್ಕಾರ ಮತ್ತು ಜವಾಬ್ದಾರಿ ಸರ್ಕಾರದ ಮೊದಲನೆಯ ಸೋಪಾನ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಜನ್ಮವೆತ್ತಿದಾಗ, ಮೊದಲಾಯಿತು. ಬಂಗಾಳದ ದ್ವಿಭಜನೆ, ಅಧಿಕಾರದರ್ಪ, ಮತ್ತು ಸಾಮ್ರಾಜ್ಯವಾದಿತ್ವ ಮುಂತಾದ ಅನುಕರಣದಿಂದ ಅಸಮಾಧಾನ ಮತ್ತು ಆಕ್ರೋಶಗಳು ಹೆಚ್ಚಾಗಿ ಜನರನ್ನು ಸಮಾಧಾನಗೊಳಿಸಲು, ಬ್ರಿಟಿಷರು, 1909 ಮತ್ತು 1919 ಶಾಸನಗಳನ್ನು ಆಚರಣೆಗೆ ತಂದರು. ಜನತೆಯ ಜವಾಬ್ದಾರಿ ಸರ್ಕಾರವನ್ನು ನಿಧಾನವಾಗಿ ಮೆಟ್ಟಲಿಂದ ಮೆಟ್ಟಲಿಗೆ ಸಾಧಿಸಬೇಕೆಂಬ ಬ್ರಿಟಿಷರ ಘೋಷಣೆ, ೧೯೧೪ರಲ್ಲಿ ಪ್ರಾರಂಭವಾದ ಯುದ್ಧದ ಪರಿಣಾಮವಾಗಿ, ಜನರನ್ನು ಉದ್ರೇಕಗೊಳಿಸಿತು. ಇಂಡಿಯಾಕ್ಕೆ ಡೊಮಿನಿಯನ್ ಸ್ಥಾನ ಕೊಡಬೇಕೆಂಬ ಆಕಾಂಕ್ಷೆ, ಸೈಮನಿನ ನಿಯೋಗದಿಂದಾಯಿತು.

ಆ ನಿಯೋಗದಲ್ಲಿ ಭಾರತೀಯರಿಗೆ ಸ್ಥಾನವಿರಲಿಲ್ಲ. ಲಂಡನ್ನಿನಲ್ಲಿ ಸೇರಿದ ಚಕ್ರಗೋಷ್ಠಿಯಲ್ಲಿ ಸಂಯುಕ್ತ ರಾಜ್ಯ ಸ್ಥಾಪನೆ ಮತ್ತು ಪ್ರಾಂತಗಳ ಪೂರ್ಣ ಸ್ವಾತಂತ್ರ್ಯ ಮತ್ತು ಕೇಂದ್ರದಲ್ಲಿ ಜವಾಬ್ದಾರಿ ಸರ್ಕಾರದ

ಏರ್ಪಾಡು — ಇವುಗಳಾಗಬೇಕೆಂದು ಗಾಂಧಿಜಿಯವರು ವಾದಿಸಿದರು. ಶ್ವೇತಪತ್ರದ ಪರಿಣಾಮವಾಗಿ ೧೯೩೫ ರಲ್ಲಿ ಇಂಡಿಯಾ ಸರ್ಕಾರದ ಶಾಸನ ಹೊರಬಿದ್ದಿತು. ಎರಡನೆಯ ಮಹಾ ಯುದ್ಧದಲ್ಲಿ ನೀಡಿದ ಸಹಾಯಕ್ಕಾಗಿ ಭಾರತೀಯರು ತಮ್ಮ ಸಂಸ್ಕೃತಿಗನುಗುಣವಾದ ರಾಜ್ಯ ನಿಬಂಧನೆಯನ್ನು ಅಪೇಕ್ಷಿಸಿದರು. ೧೯೪೬ ರಲ್ಲಿ ಇಂಗ್ಲೆಂಡಿನ ಕಾರ್ಮಿಕ ಪಕ್ಷದ ಸಚಿವ ಮಂಡಲವು ಭಾರತ ಸಮಸ್ಯೆಯನ್ನು ಪರಿಹರಿಸಲು ಒಂದು ನಿಯೋಗವನ್ನು ಕಳುಹಿಸಿತು. ೧೯೪೬ ನೆಯ ಆಗಸ್ಟ್ ೧೬ ರಿಂದ ೧೯೪೭ ನೆಯ ಜೂನ್ ತಿಂಗಳವರಿಗೂ ಸಂಧಾನಗಳು ನಡೆದವು; ಘೋರಹಿಂಸಾಕೃತ್ಯಗಳು ಜರಗಿದವು; ದೇಶ ಇಬ್ಭಾಗವಾಗಿ ಭಾರತ ಮತ್ತು ಪಾಕಿಸ್ಥಾನಗಳೆಂಬ ಎರಡು ಸ್ವಾತಂತ್ರ ರಾಷ್ಟ್ರಗಳಾದವು. ಸಂವಿಧಾನದ ಸಭೆಯು ನಾಲ್ಕು ಅಧಿವೇಶನಗಳಲ್ಲಿ ರಾಜ್ಯನಿಬಂಧನೆಗೆ ಸಂಬಂಧಪಟ್ಟ ರಚನಾತ್ಮಕಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿತು. ಇದರ ಪರಿಣಾಮವಾಗಿ ರಚಿತವಾದ ಸರ್ಕಾರವು ಅಮೆರಿಕಾ, ಕೆನೆಡಾ, ಆಸ್ಟ್ರೇಲಿಯಾ, ಐರಿಷ್ ಮುಂತಾದ ರಾಜ್ಯನಿಬಂಧನೆಗಳ ಪ್ರಧಾನಾಂಶಗಳನ್ನು ಅಳವಡಿಸಿಕೊಂಡು ನೂತನವಾದ ಮತ್ತು ಉದಾತ್ತವಾದ ತತ್ವಗಳನ್ನೂ, ಆದರ್ಶಗಳನ್ನೂ ಪ್ರತಿಬಿಂಬಿಸಿದೆ.

ಭಾರತದಲ್ಲಿ ಈಗ ಸಂಪೂರ್ಣ ಪ್ರಭುತ್ವಸಂಪನ್ನ ಪ್ರಜಾಸತ್ತಾತ್ಮಕ ಗಣರಾಜ್ಯ ಏರ್ಪಾಡಾಗಿದೆ. ಇದು ಅನೇಕ ರಾಷ್ಟ್ರಗಳಿಂದ ಅಂಗರಾಜ್ಯಗಳಿಂದ ಕೂಡಿದ ಸಂಯುಕ್ತ ರಾಜ್ಯ. ಸಂವಿಧಾನದಲ್ಲಿ ಮೊದಲು ನಿರುಪಿಸಿದ್ದ ಎ. ಬಿ. ಸಿ. ಡಿ. ರಾಷ್ಟ್ರಗಳು ಈಗ ರದ್ದಾಗುವುವು. ಎಸ್. ಆರ್. ಸಿ. ನಿಯೋಗದ ನಿರ್ಧಾರದ ಪ್ರಕಾರ ಎಲ್ಲಾ ಎ. ರಾಷ್ಟ್ರಗಳಾಗುವುವು. ಮತಜಾತ್ಯಾತೀತವಾದ ಮತ್ತು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡನೆ ಆಗುವ ಸಂಭವವಿದೆ. ಸಂಯುಕ್ತ ರಾಜ್ಯದಲ್ಲಿ ಕೇಂದ್ರ ಸರ್ಕಾರ, ರಾಜ್ಯಗಳ ಸರ್ಕಾರಗಳು ಎಂದು ಎರಡು ವಿಧ ಸರ್ಕಾರಗಳಿವೆ. ರಾಜ್ಯಗಳ 'ಯೂನಿಯನ್' ಅಥವ ಸಂಘವೆಂದು ಸಂವಿಧಾನ ಘೋಷಿಸಿದ್ದರೂ,

ಎರಡು ವಿಧ ಪೌರತ್ವವಿಲ್ಲದಿರುವುದರಿಂದಲೂ, ಎರಡು ವಿಧ ನ್ಯಾಯಸ್ಥಾನ ಗಳಿಲ್ಲದಿರುವುದರಿಂದಲೂ, ಸಿವಿಲ್ ಮತ್ತು ಕ್ರಿಮಿನಾಲ್ ಕಾನೂನುಗಳಲ್ಲಿ ಪ್ರತ್ಯೇಕತ್ವ ವೈವಿಧ್ಯತೆಗಳಿಲ್ಲದಿರುವುದರಿಂದಲೂ, ಮತ್ತು ಕೇಂದ್ರವನ್ನು ತ್ಯಜಿಸಲು ರಾಜ್ಯಗಳಿಗೆ ಅವಕಾಶವಿಲ್ಲದಿರುವುದರಿಂದಲೂ, ಭಾರತದ ಸರ್ಕಾರ ಸಂಕೃಷ್ಟವಾದುದು, ಏಕರೂಪತೆಯನ್ನು ತಾಳಿದೆ ಎಂದು ನಿರ್ದಿಷ್ಟವಾಗಿ ಹೇಳಬಹುದು.

ಭಾರತದ ಸಂವಿಧಾನದಲ್ಲಿ ರಾಜ್ಯನಿಂಬಂಧನೆಗಳನ್ನು ಇಷ್ಟ ಬಂದಾಗ ಸಂಶೋದನೆ ಮಾಡುವುದು ಸುಲಭ ಸಾಧ್ಯ. ಸಂಸದಿಗೆ ಮಾರ್ಪಾಟು ಮಾಡುವ ಅಧಿಕಾರವಿದೆ. ಸಂವಿಧಾನದ ಮೂಲ ಸ್ವರೂಪವನ್ನೂ ವಿವಿಧ ಅಂಗರಾಜ್ಯಗಳ ಅಧಿಕಾರ ವ್ಯಾಪ್ತಿಯನ್ನೂ ಬದಲಾಯಿಸಬಹುದು. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರುವ ವಿಷಯಗಳನ್ನು ಅಂಗರಾಜ್ಯಗಳು ಸಂಶೋಧಿಸಲಾಗದು. ಹಾಗೆಯೇ ಅಂಗರಾಜ್ಯಗಳಿಗೆ ಪ್ರತ್ಯೇಕವಾಗಿ ಮೀಸ ಲಾಗಿಟ್ಟ ವಿಷಯಗಳ ವಿಚಾರವಾಗಿ ಪ್ರತಿಪಾದನೆಯನ್ನು ಕೇಂದ್ರಸರ್ಕಾರವು ಮಾಡಲಾಗದು. ಅಂಗತ್ರಯಗಳ ಅಧಿಕಾರ ವ್ಯಾಪ್ತಿಯ ವಿಚಾರದಲ್ಲಿಯೂ ಮಹತ್ವವಿದೆ. ಆದರೆ ಭಾರತದಲ್ಲಿ ಜವಾಬ್ದಾರಿ ಸರ್ಕಾರವು ಏರ್ಪಟ್ಟಿರು ವುದರಿಂದ ಅಂಗತ್ರಯಗಳ ಪ್ರತ್ಯೇಕ ಅಧಿಕಾರದ ಚಲಾವಣೆಗೆ ಅವಕಾಶವಿಲ್ಲ. ಅಲ್ಲದೆ ಅಂಗಗಳ ತಿಕ್ಕಾಟ ಅಥವ ಸ್ಪರ್ಧೆ ಉಂಟಾದಲ್ಲಿ ಅಮೆರಿಕಾ ಮತ್ತು ಇತರ ಸಂಯುಕ್ತ ರಾಜ್ಯಗಳ ಸಂವಿಧಾನದಲ್ಲಿ ನ್ಯಾಯಾಂಗಕ್ಕೆ ಪ್ರಾಶಸ್ತ್ಯ ವನ್ನು ಕೊಟ್ಟಂತೆ, ಭಾರತ ಸಂವಿಧಾನದಲ್ಲಿ ಸ್ಪರ್ಧೆಗಳನ್ನು ಪರಿಹರಿಸುವ ಪರಮಾಧಿಕಾರವನ್ನು ನ್ಯಾಯಾಂಗಕ್ಕೆ ಕೊಟ್ಟಿಲ್ಲ. ೪೭ ಆಡಳಿತ ವಿಷಯ ಗಳಲ್ಲಿ ಕೇಂದ್ರ ಮತ್ತು ಅಂಗರಾಜ್ಯಗಳು ವಿಧಿಗಳನ್ನು ರಚಿಸಬಹುದು. ಭಾರತ ಸಂವಿಧಾನದ ಅಂಗರಾಜ್ಯಗಳಿಗೆ ಪರಮಾಧಿಕಾರವನ್ನು ಗಳಿಸಿ ಕೊಟ್ಟಿಲ್ಲ. ಆಪತ್ಕಾಲದಲ್ಲಿ ಸಂಕ್ಕಷ್ಟರಾಜ್ಯದಂತೆ ಪ್ರತ್ಯೇಕ ಅಂಗರಾಜ್ಯ ಗಳನ್ನು ಒಟ್ಟು ಗೂಡಿಸಿ ಇಂಗ್ಲೆಂಡಿನ ರಾಜ್ಯದಂತೆ, ಕೇಂದ್ರ ಸರ್ಕಾರವು ರಾಜ್ಯವಾಳಬಹುದು. ಅಮೆರಿಕಾ ರಾಷ್ಟ್ರಾಧ್ಯಕ್ಷ ಸರ್ಕಾರದ ಹೋಲಿಕೆ

ಯಿದ್ದರೂ ಇಂಗ್ಲೆಂಡಿನ ಪಾರ್ಲಿಮೆಂಟರಿ ಅಥವಾ ಜವಾಬ್ದಾರಿಸರ್ಕಾರ ಪದ್ಧತಿಯನ್ನೇ ಭಾರತ ಸಂವಿಧಾನವು ಅನುಸರಿಸುವುದು. ಸಂವಿಧಾನದಲ್ಲಿ ಹೆಂಗಸರಿಗೆ ಗಳಿಸಿಕೊಟ್ಟಿರುವ ಪೌರಶಿಷ್ಟಿಯಲ್ಲಿ ಒಂದು ವೈಶಿಷ್ಟ್ಯವಿದೆ. ಭಾರತದ ಹೆಂಗಸರು ಪರಕೀಯರನ್ನು ವಿವಾಹಮಾಡಿಕೊಂಡರೆ, ತನ್ನ ಪೌರಾಧಿಕಾರವನ್ನು ಕಳೆದುಕೊಳ್ಳುವುದಿಲ್ಲ. ಇಂಗ್ಲೆಂಡಿನಲ್ಲಿ ಗಂಡಸಿನ ಪೌರಾಧಿಕಾರದಲ್ಲಿ ಹೆಂಗಸು ಭಾಗಿಯಾಗುವಳು; ಆದರೆ ಭಾರತೀಯನು ಆಂಗ್ಲೇಯ ಕನ್ಯೆಯನ್ನು ಮದುವೆಯಾದರೆ ಆ ಕನ್ಯೆಯು ಆಂಗ್ಲೇಯ ಪೌರಾಧಿಕಾರವನ್ನು ಕಳೆದು ಕೊಳ್ಳುವಳು, ಭಾರತದ ಪೌರ ಶಿಷ್ಟಿಗೆ ಒಳಗಾಗುವುದಿಲ್ಲ. ಅಂದರೆ ರಾಷ್ಟ್ರೀಯತೆಯಲ್ಲದೆ ಗತ್ಯಂತರವಿಲ್ಲದಂತೆ ವರ್ತಿಸಬೇಕಾಗುವುದು. ಈ ವಿಧವಾದ ನ್ಯೂನತೆಯನ್ನು ಕ್ರಮವಿಕಾಸ ಭಾರತದ ಸಂವಿಧಾನವು ಪರಿಹರಿಸಬಹುದೆಂಬ ನಂಬಿಕೆಯಿದೆ.

ವಿಶೇಷವಾಗಿ ಅಂಗೋಪಾಂಗಗಳ ಸ್ವಭಾವ ಲಕ್ಷಣಗಳು, ಕ್ಷೇತ್ರಾಧಿಕಾರಗಳು, ಸಂಸ್ಕೃತಿ, ವ್ಯಕ್ತಿ, ವ್ಯವಹಾರ, ನ್ಯಾಯ, ಮತ ಶ್ರದ್ಧೆ, ದೇವೋಪಾಸನೆ, ಸ್ವಾತಂತ್ರ್ಯ ಜೀವನ, ಇತ್ಯಾದಿ ವಿಷಯಗಳ ದೀರ್ಘ ಪ್ರತಿಪಾದನೆಯನ್ನು ಸಂವಿಧಾನವು ವಿಸ್ತಾರವಾಗಿ ನಿರೂಪಿಸಿರುವುದರಿಂದ, ಇದು ಎಲ್ಲಾ ರಾಷ್ಟ್ರ ಸಂವಿಧಾನಗಳಿಗಿಂತ ದೊಡ್ಡದು. ೩೯೫ ಅನುಚ್ಛೇದಗಳು ೮ ಅನುಸೂಚಿಗಳ ನಿರೂಪಣೆಯಿದೆ. ಅಗತ್ಯವಲ್ಲದ ಆಧುನಿಕ ನ್ಯಾಯರೀತಿಗೆ ವ್ಯತಿರಿಕ್ತವಾದ ಅನೇಕ ನಿಬಂಧನೆಗಳಿಂದ ಸಂವಿಧಾನ ಕೂಡಿದೆ ಅಂದು ಪ್ರಸಿದ್ಧ ನೀತಿಜ್ಞರ ಮತ. ಇಂತಹ ನಿಬಂಧನೆಗಳಿಂದ ಭಾವಿ ಭಾರತ ಜನಾಂಗವನ್ನು ನಿಯಂತ್ರಿಸುವುದು ವಿಧಿ ವಿರುದ್ಧವಾದುದು. ಒಂದು ದೃಷ್ಟಿಯಲ್ಲಿ ಸಮಾಜ ಸಮತಾತತ್ವ ಮತ್ತು ರಾಷ್ಟ್ರದ ಆರ್ಥಿಕ ಜೀವನದ ಹತೋಟಿಯು ಸಂವಿಧಾನದಲ್ಲಿ ಗೋಚರವಾಗುತ್ತದೆ. ಆದರೆ ಸಂವಿಧಾನದಲ್ಲಿ ವ್ಯಕ್ತಿವಿಕಾಸಕ್ಕೆ ಮತ್ತು ವ್ಯಕ್ತಿ ಸ್ವಾತಂತ್ರ್ಯ ಜೀವನಕ್ಕೂ ಅತ್ಯಗತ್ಯವಾದ ಮೂಲಭೂತವಾದ ಪರಿಕರಗಳಿಗಾಗಿ, ವಿಶೇಷ ನಿಬಂಧನೆಗಳ

ಸೂಚನೆಯಿದೆ. ಇಂಗ್ಲೆಂಡಿನ ಮಿಲ್ ಮತ್ತು ಡೈಸಿ ಎಂಬ ಪ್ರಸಿದ್ಧ ವ್ಯಕ್ತಿ ವಾದಿಗಳ ತತ್ವವನ್ನು ಭಾರತ ಸಂವಿಧಾನ ಪ್ರತಿಪಾದಿಸುತ್ತದೆ.

ಉದಾತ್ತ ಧ್ಯೇಯದಿಂದ ಕೂಡಿದ ಸಾರ್ವಜನಿಕ ಹಿತಸಾಧಕವಾದ, ರಾಷ್ಟ್ರದ ಮತ್ತು ವಿಶ್ವಶಾಂತಿಗೆ ಮತ್ತು ಭದ್ರತೆಗೆ ನೆರವಾಗುವ ಮೂಲ ಭೂತ ಹಕ್ಕುಗಳನ್ನು ಭಾರತದ ಸಂವಿಧಾನವು ಪ್ರಜೆಗಳಿಗೆ ಗಳಿಸಿಕೊಟ್ಟಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ಕೆಲವು ಸನ್ನಿವೇಶಗಳಲ್ಲಿ ನ್ಯಾಯಾಂಗದ ನೀತಿಯನ್ನು ನಿರೋಧಿಸುವ ಹಕ್ಕುಗಳೇ ವಿಶೇಷವಾದುದು. ಪ್ರತಿಯೊಂದು ಅಂಗರಾಜ್ಯದ ಸರ್ಕಾರವು ಮಾಡಬೇಕಾದ ಕೆಲಸಗಳು ಯಾವುವು, ಎಂಬುದನ್ನೂ, ತ್ಯಜಿಸಬೇಕಾದ ಕೆಲಸಗಳು ಯಾವುವು ಎಂಬುದನ್ನೂ ಸಂವಿಧಾನವು ವಿವರಿಸಿದೆ. ಇವು ನೀತಿಯುತವಾದುದರಿಂದಲೂ ಮತ್ತು ವ್ಯಕ್ತಿ ವಿಕಾಸಕ್ಕೂ ಪ್ರಜಾಭ್ಯುದಯಕ್ಕೂ ರಾಷ್ಟ್ರ ಪ್ರಗತಿಗೂ ನೆರವಾದುದ ರಿಂದಲೂ ಅನುಷ್ಠಾನಕ್ಕೆ ತಂದರೆ ವಿಶ್ವಕಲ್ಯಾಣವಾಗುವುದೆಂದು ನಿಬಂಧನ ಕಾರರ ದೃಢವಾದ ನಂಬಿಕೆ.

ಮೂಲ ಭೂತ ಹಕ್ಕುಗಳ ನಿರೂಪಣೆ ಈ ರೀತಿ ಇದೆ. ಮೊದಲು ಆಚರಣೆಯಲ್ಲಿರತಕ್ಕ ಸಂಪ್ರದಾಯಗಳು ಮತ್ತು ನ್ಯಾಯ ಸಂವಿಧಾನಕ್ಕೆ ವಿರುದ್ಧವಲ್ಲದಪಕ್ಷದಲ್ಲಿ ಮುಂದೆಯೂ ಆಚರಣೆಯಲ್ಲಿರತಕ್ಕದ್ದು ; ಎರಡ ನೆಯದಾಗಿ ಪ್ರತಿಯೊಬ್ಬ ವ್ಯಕ್ತಿಗೂ ಸರ್ವಸಮತೆಯ ಹಕ್ಕನ್ನು ಗಳಿಸ ಲಾಗಿದೆ. (Art 14) ಮತ, ಜಾತಿ, ಕುಲ ಸ್ಥಾನ ಮುಂತಾದ ನೆಪ ದಿಂದ ಸಂಕುಚಿತ ಮನೋಭಾವನೆಯನ್ನು ಪೋಷಿಸಲಾಗದು (Art 15) ಹೆಂಗಸು, ಮಕ್ಕಳು ಮತ್ತು ಹಿಂದುಳಿದ ಜನಾಂಗಗಳಿಗಾಗಲೀ, ಉದ್ಯೋಗ ವ್ಯಾಪಾರ ಕೇಂದ್ರಗಳಲ್ಲಿ ಅವರಿಗೆ ಅವಕಾಶ ಕೊಡು ವಾಗಾಗಲೀ, ಯಾವ ವಿಧವಾದ ಪಕ್ಷಪಾತ ಬುದ್ಧಿಯನ್ನು ಮತ ಮತ್ತು ಜಾತಿ ದೃಷ್ಟಿಯಿಂದ ಪ್ರದರ್ಶಿಸಕೂಡದೆಂಬ ಕಟ್ಟಾಜ್ಞೆ ಇದೆ. ಯಾರಿಗೂ ಅಡ್ಡಿ ಆತಂಕಗಳನ್ನು ಒಡ್ಡಕೂಡದು. ಹೋಟಲು, ಅಂಗಡಿ, ಕ್ರೀಡಾ ರಂಗ, ಕೆರೆ, ರಸ್ತೆ ವಿಹಾರಸ್ಥಾನ ಇವುಗಳನ್ನು ಉಪಯೋಗಿಸುವ ವಿಚಾರ

ದಲ್ಲಿ ನಿರ್ಬಂಧಗಳಿರಕೂಡದು. ಹುದ್ದೆಗಳ ವಿನಿಮಯದ ವಿಚಾರದಲ್ಲಿ ಅನೀತಿ ವರ್ತನೆಯೂ ನಿಷೇಧ; ಯಾವರೀತಿಯಲ್ಲಿಯಾದರೂ ಅಸ್ಪೃಶ್ಯತೆ ಯನ್ನು ನಿರ್ಮೂಲ ಗೊಳಿಸಬೇಕು. ಸೈನ್ಯ ಪ್ರಶಸ್ತಿ ಮತ್ತು ವಿದ್ವತ್ಪ್ರಶಸ್ತಿ ಗಳವಿನ, ಪರರಾಷ್ಟ್ರ ಪ್ರಶಸ್ತಿಗಳಾಗಲಿ ಯಾವ ವಿಧವಾದ ಪ್ರಶಸ್ತಿಗಳನ್ನು ಕೊಡುವುದಕ್ಕೂ ಅನುಮತಿ ಇರಕೂಡದು.

ಭಾರತದ ಸಮಸ್ತ ಪ್ರಜೆಗಳಿಗೂ ಭಾಷಣ, ಪ್ರಕಟಣ, ಸಂಘ ಸ್ಥಾಪನೆ, ನಿರಾತಂಕವಾದ ಸಂಚಾರ, ತಂಗುವುದು ನೆಲಸುವುದು, ಆಸ್ತಿ ಪಾಸ್ತಿಗಳನ್ನು ಸಂಪಾದಿಸಿ ಅನುಭವಿಸಿ ಪರಭಾರೆಮಾಡುವುದು, ಬೇಕಾದ ವೃತ್ತಿಗಳನ್ನು ಅವಲಂಬಿಸುವುದು— ಈ ತೆರನಾದ ಎಲ್ಲಾ ವಿಚಾರಗಳಲ್ಲಿಯೂ ಪೂರ್ಣ ಸ್ವಾತಂತ್ರ್ಯವಿದೆ. ಸಮಾಜ ಶಾಂತಿಗೆ, ಸಾರ್ವಜನಿಕ ಹಿತಕ್ಕೆ ಪ್ರತಿಬಂಧಕವಾಗುವ ದುರ್ನಡತೆಗಳನ್ನು ಸೂಕ್ತ ವಿಧಿಗಳಿಂದ ತಡೆಗಟ್ಟ ಲಾಗಿದೆ. ಮನಸಾಕ್ಷಿಯಾಗಿ ವರ್ತಿಸುವುದು, ಮತವನ್ನು ಅವಲಂಬಿಸು ವುದು, ಆಚರಣೆಗೆ ತರುವುದು, ಪ್ರಚಾರಮಾಡುವುದು, ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿ, ತನ್ಮೂಲಕ ರಾಷ್ಟ್ರದ ಹಿತವನ್ನು ಸಾಧಿಸುವುದು, ಇಂತಹ ವಿಚಾರಗಳಲ್ಲಿ ಮತಧರ್ಮ ಸ್ವಾತಂತ್ರ್ಯವನ್ನ ಪ್ರಜೆಯು ಪಡೆದಿದ್ದಾನೆ. ಆದರೆ ಮತ ಚಳುವಳಿಗಳು ಅಕ್ರಮವಾಗಿ ಕಂಡಬಂದಲ್ಲಿ, ಅವುಗಳನ್ನು ನಿರ್ಬಂಧಿಸುವ ಅಧಿಕಾರವು ಸರ್ಕಾರಕ್ಕೆ ಸೇರಿದ್ದು. ಸಾರ್ವಜನಿಕ ವಿದ್ಯಾ ಸಂಸ್ಥೆಗಳು ಮತೀಯ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಕೂಡದು. ಪ್ರತ್ಯೇಕ ಲಿಪಿ, ಭಾಷೆ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಪಂಗಡಗಳನ್ನು ಸರ್ಕಾರವು ರಕ್ಷಿಸುವುದು. ಎಲ್ಲರೂ ಜಾತಿ ಮತಭಾಷೆಗಳ ನಿರ್ಬಂಧವಿಲ್ಲದೆ ಸಾರ್ವಜನಿಕ ವಿದ್ಯಾ ಸಂಸ್ಥೆಗಳನ್ನು ಸೇರಬಹುದು. ಮತ ಮತ್ತು ಜಾತ್ಯಾತೀತವಾದ ಸಂಸ್ಥೆಗಳನ್ನು ಸರ್ಕಾರವು ಪೋಷಿಸಿ, ಧನ ಸಹಾಯ ಮಾಡಬಹುದು ಅಲ್ಪ ಸಂಖ್ಯಾತರ ಸಂಸ್ಥೆಗಳ ಪ್ರಗತಿಗಾಗಿ ಉತ್ತೇಜನವನ್ನು ಕೊಡ ಬಹುದು.

ಮೂಲ ಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ಮತ್ತು ವ್ಯಕ್ತಿಗೆ ಕಷ್ಟ ಪರಿಹಾರ ಮಾರ್ಗವನ್ನು ಸೂಚಿಸಲೂ, ಶ್ರೇಷ್ಠನ್ಯಾಯಾಸ್ಥಾನವು ಸೂಕ್ತ ಕಾರ್ಯಕ್ರಮಗಳನ್ನು ಕೈ ಕೊಳ್ಳತಕ್ಕದ್ದು. 'ಬಂದೀ ಪ್ರತ್ಯಕ್ಷೀಕರಣ,' (Habeas Corpus) 'ಪರಮಾದೇಶ' (Mandamus) ಮತ್ತು 'ಉತ್ಪ್ರೇಷಣ.' (Certiorari) ಇವೇ ಮುಂತಾದ ಸಾಧನಗಳಿಂದ ಸುಪ್ರೀಂ ಕೋರ್ಟು ತನ್ನ ಪರಮಾಧಿಕಾರಕ್ಕೆ ಚ್ಯುತಿ ಬರದ ರೀತಿಯಲ್ಲಿ ತನ್ನ ಅಧಿಕಾರವನ್ನು ಕೆಳಗಿನ ಕೋರ್ಟುಗಳಿಗೆ ವಹಿಸಬಹುದು. ದೇಶದ ಶಾಂತಿ ಪಾಲನೆ, ರಕ್ಷಣೆ ಮತ್ತು ಶಿಸ್ತು ಇವುಗಳನ್ನು ತೃಪ್ತಿಕರವಾಗಿ ನೆರವೇರಿಸಲು ಪಾರ್ಲಿಮೆಂಟ್ ಸಭೆಯು ಮತ್ತು ನ್ಯಾಯಾಸ್ಥಾನವೂ ತಕ್ಕ ವಿಧಿಗಳನ್ನು ನಿರ್ಮಿಸಬಹುದು. ಬಂದಿಯನ್ನು ಬಂಧನದಲ್ಲಿಟ್ಟಿರುವುದು ನ್ಯಾಯವಿಹಿತವೋ ಅಲ್ಲವೋ ಎಂಬ ವಿಚಾರಣೆ ವ್ಯಕ್ತಿಯ ಸಾಕ್ಷಾತ್ತಾಗಿ ಹಾಜರುಮಾಡುವಿಕೆಯಿಂದಲೂ, ಮೇಲಿನ ನ್ಯಾಯಾಸ್ಥಾನದಿಂದ ಕೆಳಗಿನ ನ್ಯಾಯಾಸ್ಥಾನಕ್ಕೆ ಸಾರ್ವಜನಿಕ ಕರ್ತವ್ಯ ಪಾಲನೆಗಾಗಿ ಆಜ್ಞಾ ಪತ್ರವನ್ನು ಕಳುಹಿಸುವುದರಿಂದಲೂ, ಕೆಳಕೋರ್ಟಿನಲ್ಲಿ ವಿಚಾರಣೆಯಾದ ಮೊಕದ್ದಮೆಯ ಕಟ್ಟನ್ನು ಕಳುಹಿಸಬೇಕೆಂದು ಮೇಲಿನ ಕೋರ್ಟಿನವರು ಆಜ್ಞಾ ಪತ್ರವನ್ನು ಕಳುಹಿಸುವುದರಿಂದಲೂ, ನ್ಯಾಯಾಸ್ಥಾನವು ಸಂವಿದಾನುಸಾರ ನ್ಯಾಯ ಅತಿಕ್ರಮಿಸಿದವರಿಗೆ ಶಿಕ್ಷೆ ಕೊಡುತ್ತದೆ.

ಭಾರತದ ಸಂವಿಧಾನದಲ್ಲಿ ನ್ಯಾಯಾಸ್ಥಾನಕ್ಕಿಂತ ಸಂಸದಿಗೆ ಹೆಚ್ಚು ಅಧಿಕಾರವಿದೆ. ಅಮೆರಿಕಾ ಸಂಯುಕ್ತ ರಾಜ್ಯದಲ್ಲಿ ಸುಪ್ರೀಂ ಕೋರ್ಟು ಡ್ಯು ಪ್ರೋಸೆಸ್ ಆಫ್ ಲಾ (Due Process of Law) ಪ್ರಕಾರ ತೀರ್ಮಾನವನ್ನು ಕೊಡಬಹುದು ಮತ್ತು ಶಾಸಕಾಂಗವು ನಿರ್ಧರಿಸಿದ ಶಾಸನಗಳು ವಿಧಿವಿರುದ್ಧವಾದುದೆಂದು ಘೋಷಿಸಬಹುದು ಅಂದರೆ (Procedural due Process)—ಪ್ರೊಸಿಜರಲ್ ಡ್ಯು ಪ್ರೊಸೆಸ್ ಮತ್ತು ಸಬ್ಸ್ಟಾಂಟಿಟಿವ್, ಡ್ಯು ಪ್ರೊಸೆಸ್ (Substantive due Process) ಎರಡು ಅಧಿಕಾರಗಳೂ ಶ್ರೇಷ್ಠ ನ್ಯಾಯಸ್ಥಾನಕ್ಕೆ ಸೇರಿದೆ.

ಭಾರತದ ನ್ಯಾಯಸ್ಥಾನವು ಶಾಸನಗಳನ್ನು ಸಂವಿಧಾನವಿರುದ್ಧವಾದವೆಂದು ತಿಳಿಸಬಹುದು. ಆದರೆ, ವ್ಯಕ್ತಿಯ ಮತ್ತು ನಾಗರಿಕನ ಮೂಲಭೂತ ಹಕ್ಕುಗಳಿಗೆ ಸಂಬಂಧಪಟ್ಟ ಶಾಸನಗಳನ್ನು ವಿರೋಧಿಸಲಾಗದು. ಅಂದರೆ, ಭಾರತದಲ್ಲಿ ಸಂವಿಧಾನದ ಪ್ರಕಾರ ಪ್ರೊಸಿಜರ್ ಆಪ್ ಲಾ (Procedure established by law) ಆಚರಣೆಯಲ್ಲಿದೆ, ಡ್ಯು ಪ್ರೋಸೆಸ್ ಆಪ್ ಲಾ ಅಲ್ಲ.

ಪ್ರಜೆಗಳಿಗೆ ನ್ಯಾಯ, ಸ್ವಾತಂತ್ರ್ಯ ಸಮಾನತ್ವಗಳನ್ನು ದೊರಕಿಸುವುದಕ್ಕೂ ವ್ಯಕ್ತಿವಿಕಾಸ ಮತ್ತು ಸಮಾಜ ಸೌಹಾರ್ದವನ್ನು ದೇಶದ ಐಕ್ಯತೆಯನ್ನು ಸಾಧಿಸುವುದಕ್ಕೂ, ಕೇಂದ್ರ ಸರ್ಕಾರವೂ ಮತ್ತು ಅಂಗರಾಜ್ಯಗಳು ನೀತಿಯುತ ಜೀವನ ಪ್ರೇರಕವಾದ ಆದರ್ಶ ಮತ್ತು ತತ್ವಗಳ ಅನುಕರಣೆಗೂ ಸಂವಿಧಾನದಲ್ಲಿ ನಿರೂಪಿಸಲಾಗಿದೆ. ಇದು ಭಾರತ ಸರ್ಕಾರದ ಒಂದು ವೈಶಿಷ್ಟ್ಯ. ಸಮಾಜೋನ್ನತಿಗೆ ಬೇಕಾಗುವ ಸಂಪತ್ಸಾಮಗ್ರಿಗಳನ್ನು ಸರ್ಕಾರವು ಹತೋಟಿಯಲ್ಲಿಟ್ಟುಕೊಳ್ಳುವುದು, ಹದಗೆಟ್ಟ ಆರ್ಥಿಕ ಸ್ಥಿತಿಗತಿಗಳನ್ನು ಸರಿಮಾಡುವುದು, ನಾಡಿನ ವಿವಿಧ ಸಂಪತ್ತನ್ನು ರಾಷ್ಟ್ರ ಸರ್ಕಾರವು ಪ್ರಜಾಭ್ಯುಧಯಕ್ಕಾಗಿ ವಿನಿಮಯಮಾಡುವುದು, ಶ್ರಮಜೀವಿಗಳ ದುಡಿಮೆಗೆ ತಕ್ಕ ವೇತನ ಕೊಡುವುದು, ಸ್ವಾರ್ಥವನ್ನು ಸಾಧಿಸುವ ಬಂಡವಾಳಗಾರರನ್ನು ಗಿರಣಿ ಮಾಲೀಕರನ್ನೂ ನಿರ್ಬಂಧಿಸುವುದು, ಶಾರೀರಕ, ಮಾನಸಿಕ, ಬೌದ್ಧಿಕ ಬೆಳವಣಿಗೆಗಾಗಿ ಹವಣಿಸುವುದು, ಹೆಂಗಸು ಮತ್ತು ಮಕ್ಕಳ ಪ್ರಗತಿಗಾಗಿ ಸೌಕರ್ಯಗಳನ್ನು ಕಲ್ಪಿಸುವುದು, ಗ್ರಾಮ ಪಂಚಾಯಿತಿ ಪದ್ಧತಿಯನ್ನು ಜೀರ್ಣೋದ್ಧಾರ ಮಾಡಿ ಪಂಚಾಯಿತದಾರರಿಗೆ ತಕ್ಕ ಅಧಿಕಾರ, ಮತ್ತು ಜವಾಬ್ದಾರಿಯನ್ನು ವಹಿಸುವುದು ಗ್ರಾಮಗಳು ಸ್ವಯಂಪೂರ್ಣತೆಯಿಂದ ರಾಜಕೀಯ ಕ್ಷೇತ್ರವಾಗಿ ಪ್ರಕಾಶಿಸುವಂತೆ, ಪುನರ್ರಚಿಸುವುದು, ನಿರುದ್ಯೋಗ, ಮುಪ್ಪು, ಕಾಯಿಲೆ, ದರ್ಬಲತೆಗಳಿಂದ ಅನುಭವಿಸುವವರಿಗೆ ಸೂಕ್ತ ಸಹಾಯ ನೀಡುವುದು, ದಣಿದ ಶರೀರಕ್ಕೆ ವಿಶ್ರಾಂತಿ, ವಿಶ್ರಾಂತಿಯನ್ನು ಸದುಪಯೋಗಗೊಳಿಸಲು

ಅನುಕೂಲ, ಗೃಹಕೈಗಾರಿಕೆಗಳಿಗೆ ತಕ್ಕ ಪ್ರೋತ್ಸಾಹ, ನಿರ್ಬಂಧದ ಉಚಿತ ಪ್ರಾಥಮಿಕ ಶಿಕ್ಷಣ, ಹಿಂದುಳಿದ ಪಂಗಡಗಳಿಗೆ ಪಿದ್ಯಾ ಸೌಕರ್ಯ, ಮಾದಕ ದ್ರವ್ಯ ಸೇವನೆಯ ನಿರೋಧ, ಪೂರ್ವಜ್ಞಾಪಕ, ಚಾರಿತ್ರಾರ್ಹ ವಾದ ಸ್ಥಳಗಳ ಕಲಾವಸ್ತುಗಳ ರಕ್ಷಣೆ, ಪರ ರಾಷ್ಟ್ರಗಳೊಡನೆ ವಿಶ್ವ ಶಾಂತಿ ಸ್ಫೂರ್ತಿಯಿಂದ ಸತ್ಯಾ ಅಹಿಂಸೆ, ಧರ್ಮ ಮತ್ತು ಶೀಲಯುಕ್ತ ವಾದ ವರ್ತನೆ, ಅಂತರರಾಷ್ಟ್ರೀಯ ಪೂರಣದಲ್ಲಿ ಏಳುವ ಜಟಿಲ ಪ್ರಶ್ನೆ ಗಳನ್ನು ಆತ್ಮವಿಕಾಸ ಪ್ರಯತ್ನದಿಂದ ಪರಿಹರಿಸುವುದು—ಇವು ಕೆಲವು ಸಂವಿಧಾನವು ನಿರೂಪಿಸಿರುವ ಉದಾತ್ತ ಸಂಕಲ್ಪಮಯವಾದ ಮತ್ತು ಪ್ರೇರಕವಾದ ತತ್ವಗಳು. ( Directive principles of State policy ).

ರಾಷ್ಟ್ರಾಧ್ಯಕ್ಷನು ದೇಶದ ಅಧಿಪತಿ. ಕೇಂದ್ರ ವಿಧಾನಮಂಡಲದ ಎರಡು ಸಭೆಗಳ ಮತ್ತು ರಾಜ್ಯಗಳ ವಿಧಾನ ಮಂಡಲಗಳ ನಿರ್ವಾಚಿತ (elected) ಸದಸ್ಯರು 'ಎಲೆಕ್ಟೋರಲ್ ಕಾಲೇಜ್ ಸಂಸ್ಥೆಯಾಗಿ ರಾಷ್ಟ್ರಾದ್ಯಕ್ಷನನ್ನು ನಿರ್ವಾಚ'ನ ಮಾಡುವುದು. 3323 ಅಂಗರಾಜ್ಯಗಳ ಸದಸ್ಯರು, 434 ಕೇಂದ್ರ ಸಂಸದನ ಸದಸ್ಯರು ಈ ಸಂಸ್ಥೆಗೆ ಸೇರಿ ಅನು ಪಾತಿಕ ಪ್ರತಿನಿಧಿತ್ವ ಪದ್ಧತಿ ಪ್ರಕಾರ ಅಧ್ಯಕ್ಷನನ್ನು ಚುನಾಯಿಸುವರು. 1952 ರಲ್ಲಿ ನಡೆದ ಚುನಾವಣೆಯಲ್ಲಿ 4057 ಸದಸ್ಯರ ಪೈಕಿ 3486 ಸದ ಸ್ಯರು ಅಭಿಮತವನ್ನು ಸೂಚಿಸಿದರು. ಅದರಲ್ಲಿ 2896 ಸದಸ್ಯರು ಬಾಬು ರಾಜೇಂದ್ರ ಪ್ರಸಾದರಿಗೆ ಮತ ಕೊಟ್ಟರು ಅಧ್ಯಕ್ಷನ ಪದಾವಧಿ ಐದು ವರ್ಷ. ಒಂದಾವರ್ತಿ ಅಧ್ಯಕ್ಷನಾದವನು, ಮತ್ತೊಮ್ಮೆ ಇದೇ ಸ್ಥಾನಕ್ಕೆ ಉಮೇದುವಾರನಾಗಿ ನಿಲ್ಲಬಹುದು. ಅಧ್ಯಕ್ಷನಿಗೆ 35 ವರ್ಷವಾಗಿರ ಬೇಕು, ಲೋಕಸಭಾಸದಸ್ಯತ್ವದ ಅರ್ಹತೆ ಪಡೆದಿರಬೇಕು. ಅಧ್ಯಕ್ಷನಿಗೆ ತಿಂಗಳಿಗೆ ೧೦,೦೦೦ ರೂ ಸಂಬಳ; ತಕ್ಕ ಭತ್ಯ ವಾಸಕ್ಕೆ ಯೋಗ್ಯವಾದ ಭವನ. ಭಾರತದ ಸಂವಿದಾನಕ್ಕೆ ವಿರೋಧವಾಗಿ ವರ್ತಿಸಿದ ಅಧ್ಯಕ್ಷನನ್ನು ವಿಚಾರಣೆಗೆ ಗುರಿಮಾಡಿ ಪದಚ್ಯುತನನ್ನಾಗಿ ಮಾಡುವ ಅಧಿಕಾರವು ಸಭೆ

ಗಳಿಗೆ ಸೇರಿದೆ. ರಾಷ್ಟ್ರಪತಿಯ ಕ್ಷೇತ್ರಾಧಿಕಾರ ವಿಶೇಷವಾಗಿರುವುದು. ಅಧ್ಯಕ್ಷನಂತೆ ಉಪರಾಷ್ಟ್ರಪತಿಯೂ ನಿರ್ವಾಚನಾಧಿಕಾರಿ. ಅನುಪಾತಿಕಾ ಪ್ರತಿನಿಧಿತತ್ವದನುಸಾರವಾಗಿ ಚುನಾಯಿತನಾಗುವನು. ಯಾವ ವಿಧಾನ ಮಂಡಲದ ಸದಸ್ಯನಾಗಿರಕೂಡದು. ಇವನು ರಾಜ್ಯ ಪರಿಷತ್ತಿನ ಅಧಿಪತಿ. ಇವನ ಮಹಾಭಿಯೋಗದಕ್ರಮ, ರಾಷ್ಟ್ರಾಧ್ಯಕ್ಷನಂತೆಯೆ. ಆದರೆ ಮೊದಲು ದೋಷಾರೋಪಗಳನ್ನು ರಾಜ್ಯಪರಿಷತ್ ಬಹು ಮತದಿಂದ ಒಪ್ಪಬೇಕು ಅದಕ್ಕೆ ಲೋಕಸಭೆಯ ಅನುಮತಿ ಕೊಡಬೇಕು.

ಮಂತ್ರಿಮಂಡಲದ ಏರ್ಪಾಡು, ಜವಾಬ್ದಾರಿ ಸರ್ಕಾರಗಳಿರುವ ರಾಜ್ಯ ಗಳಂತೆ, ಸಂವಿಧಾನದಲ್ಲಿ ನಿರೂಪಿಸಲಾಗಿದೆ. ಮುಖ್ಯ ಮಂತ್ರಿಯು ರಾಷ್ಟ್ರ ನಾಯಕ. ಇವನ ಹಾಗೆ ಮಹಾ ನ್ಯಾಯವಾದಿ Attorney General ಯನ್ನು ರಾಜ ನಿಬಂಧನೆಗಳ ವಿವರಣೆಗಾಗಿ ಅಧ್ಯಕ್ಷನು ನೇಮಿಸುವನು. ಸಂಸದಿಗೂ ಇವನು ಅಧೀನನು.

ಶಾಸನಾಂಗ ಅಥವ ವಿಧಾನ ಮಂಡಲದಲ್ಲಿ, ರಾಜ್ಯ ಪರಿಷತ್ ಮತ್ತು ಲೋಕ ಸಭೆ ಎಂದು ಎರಡು ಸಭೆಗಳಿವೆ. ಪರಿಷತ್ತಿನ ಸದಸ್ಯರ ಸಂಖ್ಯೆ 250. ಇವರಲ್ಲಿ ನಾಮಕರಣ ಸದಸ್ಯರು 12. ಸಾಹಿತ್ಯ, ಕಲೆ, ವಿಜ್ಞಾನ, ವ್ಯವಸಾಯಶಾಸ್ತ್ರಗಳಲ್ಲಿ ಉನ್ನತ ಪ್ರತಿಭೆಯನ್ನು ಪಡೆದವರನ್ನು ಅಧ್ಯಕ್ಷನು ನೇಮಿಸುವನು. ಲೋಕಸಭೆಯ ಸದಸ್ಯರ ಸಂಖ್ಯೆ 500. ಪ್ರತಿಯೊಂದು 750,000 ಮತದಾರರಿಗೆ ಒಬ್ಬನಾದರೂ ಪ್ರತಿನಿಧಿ ಇರುವಂತೆ ಸಂವಿಧಾನ ಸದಸ್ಯರ ಸಂಖ್ಯೆಯನ್ನು ನಿರ್ಧರಿಸಿದೆ. ಲೋಕಸಭೆಯ ಉಮೇದುವಾರರಿಗೆ 25 ವರ್ಷವೂ, ರಾಜ್ಯ ಪರಿಷತ್ತಿನ ಉಮೇದುವಾರರಿಗೆ 30 ವರ್ಷವೂ ಆಗಿರಬೇಕು. ಸಂಸದು ವರ್ಷಕ್ಕೆ ಎರಡು ಸಲ ಸೇರುವುದು. ಸಭೆಗಳಲ್ಲಿ ಅಧ್ಯಕ್ಷ ಉಪಾಧ್ಯಕ್ಷರು ಇರುವರು. ಸಂಸದಿನ ಅಧಿಕಾರಿಗಳ ವೇತನವನ್ನು ಸಂಸದ್ ನಿರ್ಧರಿಸುವುದು. ಸಂಯುಕ್ತ ಸಭೆಗಳು, ಪ್ರತ್ಯೇಕ ವಾಗಿ ಪರಿಹರಿಸಲಾಗದ ಪ್ರಶ್ನೆಗಳನ್ನು ದೀರ್ಘವಾಗಿ ಚರ್ಚಿಸಿ ನಿರ್ಧಾರ ಗಳನ್ನು ಸೂಚಿಸುವುವು.

ಕೇಂದ್ರ ಸರ್ಕಾರದ ಸಹಾಯಕವಾಗಿ ಕಂಟ್ರೋಲರ್, ಮತ್ತು ಆಡಿಟರ್ ಜನರಲ್, ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಗಳಿವೆ.

ಭಾರತದ ಸುಪ್ರೀಂ ಕೋರ್ಟು ಸರ್ಕಾರದ ಮೂರನೆಯ ಅಂಗ. ಇದರಲ್ಲಿ ಮುಖ್ಯ ನ್ಯಾಯಾಧಿಪತಿಯೂ, ಏಳುಮಂದಿ ಸಾಮಾನ್ಯ ನ್ಯಾಯಾಧೀಶರು ಇರುವರು. ಇವರನ್ನು ಅಧ್ಯಕ್ಷ ತಾನು ಸಹಿ ಹಾಕಿದ ಅಧಿಪತ್ರದ ಮೂಲಕ ನೇಮಿಸುವನು. ಈ ನೇಮಕದಲ್ಲಿ ರಾಜ್ಯಗಳ ನ್ಯಾಯಾಧೀಶರ ಅನುಮತಿಯೂ ಅವಶ್ಯಕ. ಅವಿಶ್ವಾಸ ನಿರ್ಣಯದಿಂದ ನ್ಯಾಯಾಧೀಶರನ್ನು ಪದಚ್ಯುತರನ್ನಾಗಿ ಮಾಡಲು ಸಂಸದ್‌ಗೆ ಅಧಿಕಾರವಿದೆ. ಎರಡು ಸಭೆಗಳು ಒಂದೇ ಅಧಿವೇಶನದಲ್ಲಿ ಬಹು ಮತದಿಂದ ಒಪ್ಪಿದರೆ ನ್ಯಾಯಾಧೀಶರನ್ನು ಕೆಲಸದಿಂದ ತೆಗೆಯಬಹುದು. ಮುಖ್ಯ ನ್ಯಾಯಾಧಿಪತಿಗೆ 5000 ರೂ, ನ್ಯಾಯಾಧೀಶರಿಗೆ 4000 ರೂ, ವೇತನ. ಆದುದರಿಂದ ಇತರ ನ್ಯಾಯಾ ಸ್ಥಾನಗಳಲ್ಲಿ ವಾದಿಸಕೂಡದು. ಮತ್ತು ಅಧಿಕಾರ ಸ್ವೀಕಾರ ಮಾಡಕೂಡದು. ವ್ಯವಹಾರಗಳ ಪ್ರಾಥಮಿಕ ವಿಚಾರಣೆ ಮತ್ತು ಪುನರ್ವಿಚಾರಣೆ ಎರಡು ಬಗೆಯ ಕೆಲಸಗಳು ಕೋರ್ಟಿಗೆ ಸೇರಿದೆ. ಕೇಂದ್ರ ಸರ್ಕಾರ ಮತ್ತು ಅಂಗರಾಜ್ಯಗಳಿಗೂ ಆಗುವ ವ್ಯವಹಾರ, ಅಂಗರಾಜ್ಯಗಳ ಪರಸ್ಪರ ವ್ಯವಹಾರಿಕ ವಿಷಯಗಳು ಮುಂತಾದ ಪ್ರಾಥಮಿಕ ವಿಚಾರಗಳ ಅಧಿಕಾರವನ್ನು ಶ್ರೇಷ್ಠನ್ಯಾಯಾಸ್ಥಾನವು ಪಡೆದಿದೆ. ಮೊಕದ್ದಮೆಗಳು, ಮತ್ತು ಅಂತಿಮದಲ್ಲಿ ಅಪೀಲಗಳ ಪುನರ್ವಿಮರ್ಶಾಧಿಕಾರ, ಇವು ನ್ಯಾಯಾಸ್ಥಾನದ ಮುಖ್ಯವಾದ ಕಾರ್ಯ. ಸದಸ್ಯರ ತನಿಖೆ, ವಿಚಾರಣೆ, ಸಂವಿಧಾನದ ವಿಧಿಗಳ ಸ್ಪಷ್ಟ ತಿಳುವಳಿಕೆ, ವಿಧಿಗಳಿಗೆ ಅನ್ವಯಿಸುವ ಮೊಕದ್ದಮೆಗಳ ವಿಚಾರಣೆ, ಅಧ್ಯಕ್ಷನಿಗೆ ಬೇಕಾಗುವ ನ್ಯಾಯರೀತಿಯ ಸಲಹೆಗಳು ಇವೇ ಮೊದಲಾಗಿ, ಅನೇಕ ಅಧಿಕಾರಗಳನ್ನು ನ್ಯಾಯಾ ಸ್ಥಾನವು ಪ್ರದರ್ಶಿಸ ಬಹುದು.

ಈ ವಿಧವಾದ ನಿರೂಪಣೆಗಳ ಜೊತೆಗೆ ಸಂವಿಧಾನದಲ್ಲಿ ಭಾರತ ಯೂನಿಯನ್‌ನ ಮತ್ತು ಅಂಗರಾಜ್ಯಗಳ ಕ್ಷೇತ್ರಾಧಿಕಾರಕ್ಕೆ ಒಳಪಟ್ಟ

ಲೋಕಸೇವಾಯೋಗ (Publi cService Commission)ಕ್ಕೆ ಸಂಬಂಧಪಟ್ಟ ಅಧಿಕಾರಗಳ ವಿಷಯವಾಗಿ ವಿವರಣೆಯಿದೆ. ಇದು ಅಧಿಕಾರಿಗಳ ವೇತನ, ಸೇವೆಯ ಷರತ್ತು, ರಜಾ, ನಿವೃತ್ತಿವೇತನ ಮುಂತಾದ ಪ್ರಶ್ನೆಗಳಿಗೆ ಪರಿಹಾರವನ್ನು ಸೂಚಿಸುವುದು. ಲೋಕಸೇವಾಯೋಗದಂತೆ ನಿರ್ವಾಚನ ಆಯೋಗ (Electoral Commission) ವು. ವಿಧಾನ ಮಂಡಲ ಮತ್ತು ಪರಿಷತ್ತುಗಳ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣ ರೀತಿನೀತಿಗಳು, ನಿರ್ವಾಚನದಲ್ಲಿ ತೋರುವ ಸಂದೇಹಗಳ ಮತ್ತು ವ್ಯವಹಾರಗಳ ನಿಶ್ಚಯ—ಇವುಗಳನ್ನು ನಿರ್ಧರಿಸುವುದು. ಅನುಸೂಚಿತ ಜಾತಿ ಮತ್ತು ಜನಜಾತಿಗಳಿಗೆ ನಿರ್ವಾಚನ ಆಯೋಗವು ಸ್ಥಾನಗಳನ್ನು ಕಾದಿಡಬೇಕು.

ಸಂವಿಧಾನದಲ್ಲಿ ಸರ್ಕಾರಿ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳ ವಿಚಾರವಾಗಿ ವಿವರಣೆಯಿದೆ. ಆಪತ್ಕಾಲದಲ್ಲಿ ಬೇಕಾಗುವ ಉಪಬಂಧಗಳ ವಿಸ್ತಾರ ಮತ್ತು ಉದ್ಘೋಷಣೆ ಇವೆ. ಇವು ಅಂಗ ರಾಜ್ಯಗಳನ್ನು ಪರರಾಜ್ಯಗಳ ಆಕ್ರಮಣದಿಂದಲೂ ಅಂತಃಕ್ರಾಂತಿಯಿಂದಲೂ ಸಂರಕ್ಷಿಸುವುದಕ್ಕಾಗಿ ಭರವಸೆ ಕೊಡುವ ನಿಯಮಗಳು. ಹಾಗೆಯೆ ರಾಷ್ಟ್ರಾಧ್ಯಕ್ಷನ, ರಾಜ್ಯಪಾಲರ, ಮತ್ತು ರಾಜಪ್ರಮುಖರ ರಕ್ಷಣೆಯ ವಿಚಾರವಾಗಿ ಸಂವಿಧಾನದಲ್ಲಿ ನಿರೂಪಣೆಯಿದೆ. ಭಾರತ ಸಂವಿಧಾನದ ಸಂಶೋಧನೆಯ ವಿಚಾರವಾಗಿಯೂ, ಪರಿಸ್ಥಿತಿಗಳನುಗುಣವಾಗಿ ಪರಿವರ್ತನೆ ಹೊಂದುತ್ತಿರುವ ರಚನಾತ್ಮಕ ಭಾವನೆ ಮತ್ತು ಕಲ್ಪನೆಗಳನ್ನು ಕಾರ್ಯಕಾರಿಯಾಗಿ ಮಾಡುವ ರೀತಿನೀತಿಗಳನ್ನು ಸಂವಿಧಾನವು ಸೂಚಿಸಿದೆ.

# ಕೆಲವು ಪಾರಿಭಾಷಿಕ ಗ್ರಂಥಗಳು

## Bibliography

ರಾಜ್ಯಶಾಸ್ತ್ರವನ್ನು ಶಾಸ್ತ್ರೀಯವಾಗಿ ಓದಬೇಕಾದರೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗಿದೆ. ಅತಿಯಾಗಿ ಸಿಹಿಯಾದ ಪದಾರ್ಥಗಳು ಹೇಗೆ ಹಲ್ಲುಗಳ ಆರೋಗ್ಯಕ್ಕೆ ಪ್ರತಿಬಂಧಕವೋ ಹಾಗೆಯೇ ಮನರಂಜಕವಾಗಿ ಆದರೆ ನಿರ್ಜೀವವಾಗಿರತಕ್ಕ ಗ್ರಂಥಗಳು ಮಾನಸಿಕ ಬೆಳವಣಿಗೆಗೆ ವಿರುದ್ಧ. ಮೊದಲನೆಯದಾಗಿ, ಪಾಶ್ಚಿಮಾತ್ಯ ದೇಶಗಳ ರಾಜ್ಯ ಶಾಸ್ತ್ರ ಮತ್ತು ರಾಜನೀತಿಗಳ ವಿಷಯವಾಗಿ ಅಧ್ಯಯನ ಮಾಡುವಾಗ, ಕೆಳಗೆ ನಮೂದಿಸಿರುವ ಪಟ್ಟಿಯ ಅನುಕರಣ ಮಾಡಿದರೆ ರಾಜ್ಯಶಾಸ್ತ್ರದ ಯುಕ್ತಾಯುಕ್ತ ಪರಿಜ್ಞಾನ ಉಂಟಾಗಬಹುದು.

### Classics— ಮೂಲಭೂತವಾದ ಗ್ರಂಥಗಳು

Every Man's Library Publications Modern Library

ಗ್ರೀಕ್ ರಾಷ್ಟ್ರದ ತತ್ವಜ್ಞಾನಿ ಪ್ಲೇಟೋ ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿದ್ದು ಅನೇಕ ಗ್ರಂಥಗಳನ್ನು ರಚಿಸಿದನು.

### Platonic Dialogues

(*a*) Crito,

(*b*) Statesman,

(*c*) Republic - Translated by A. D. Lindsay

(*d*) Laws.

ಅರಿಸ್ಟಾಟಲ್; ವೇದಾಂತಿಯಾದ ಪ್ಲೇಟೋವಿನ ಶಿಷ್ಯ — **Aristotle's Politics,** Translated by Ernest Barker.

ರೋಂತತ್ವಜ್ಞಾನಿ ಮತ್ತು ಇತಿಹಾಸಕಾರನಾದ Tacitus ನ— Annals, ರಾಜಕೀಯ ಭಾವನೆಗಳ ಮೇಲೆ ಪ್ರಭಾವವನ್ನು ಬೀರಿದ ಕ್ರೈಸ್ತ ಮತ ಸಿದ್ಧಾಂತಿಗಳಾದ Augustine ಮತ್ತು **Aquinas** ನ ಗ್ರಂಥಗಳು.

**Augustine**—City of God.

**Aquinas**—Summa Theologica.

ಈ ಉದ್ಗ್ರಂಥಗಳು, ರಾಜನೀತಿಯು ರಾಷ್ಟ್ರದಲ್ಲಿ ಅಂತರ್ಗತವಾಗಿರುವ ಪೌರಲೌಕಿಕ ಧರ್ಮಕ್ಕೆ ಅಧೀನವೆಂದು ಪ್ರತಿಪಾದಿಸಿವೆ.

ಐರೋಪ್ಯ ರಾಷ್ಟ್ರಗಳಲ್ಲಿ, ಹದಿನಾರು, ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ, ಮಾನವನ ಏಳಿಗೆಗಾಗಿ ಮೂಲಭೂತ ಚಳುವಳಿ ಮತ್ತು ರಾಜಕೀಯದಲ್ಲಿ ಕ್ರಾಂತಿಕಾರಿ ಭಾವನೆಗಳು ಮೂಡಿದವು. ಈ ವಿಚಾರಗಳ ಪ್ರತಿಪಾದನೆ. Machiavelli ಗ್ರಂಥಗಳಲ್ಲಿ ವೇದ್ಯವಾಗುವುದು.

**Machiavelli** (*a*) Prince, (*b*) Discourses.

**Thomas Hobbes**—Leviathan—1649. **Locke**—Treatise of Civil Government, ಹಾಬ್ಸ ರಾಜನೀತಜ್ಞನು ಲೆವಿಯಾಥನ್ ಗ್ರಂಥದಲ್ಲಿ ಪರಮಾಧಿಕಾರದ ಸ್ವರೂಪವನ್ನೂ, ಲಾಕ್ ತನ್ನ ಸಿವಿಲ್ ಗೌರ್ನ್ಮೆಂಟ್ ಗ್ರಂಥದಲ್ಲಿ ವ್ಯಕ್ತಿಯ ಮೂಲಭೂತ ಹಕ್ಕುಗಳ ಮತ್ತು ವಿಕಾಸಕ್ಕೆ ಅತ್ಯಗತ್ಯವಾದ ರಚನಾತ್ಮಕ ಕಾರ್ಯಗಳ ವಿವರಣೆಯನ್ನೂ ಸೂಚಿಸಿದ್ದಾರೆ.

**Montesquieu**—Spirit of the Laws.

**Rousseau**—Social Contract.

ಇವರಿಬ್ಬರೂ ಫ್ರೆಂಚ್ ರಾಷ್ಟ್ರದ ಉಜ್ವಲ ಪ್ರತಿಭೆಯಿಂದ ಕೂಡಿದ ರಾಜನೀತಜ್ಞರು. ಹದಿನೆಂಟನೆಯ ಶತಮಾನದವರು. ಇವರು ಫ್ರೆಂಚ್ ಮಹಾಕ್ರಾಂತಿಯ ಆಧಾರ ಸ್ವರ.

**Burke**—Reflections on the French Revolution.

**Hegel**—Philosophy of Right. (German)

**Hamilton, Madison** and **Jay**, The Federalist (American)

**J. S. Mill**—(*a*) Essay on Liberty, (*b*) Considerations on Representative Government, (*c*) Utilitarianism.

**Karl Marx**—The Communist Manifesto.

**Lenin**—State and Revolution.

**Trotsky**—History of the Russian Revolution.

**Mussolini**—Social and Political Doctrine of Fascism.

**Hitler**—Mein KampF.

**Sabine**—History of Political Theory

**J. A. R. Seeley**—The introduction to Political Science.

**F. Pollock**—History of the Science of Politics.

**M. Mac Iver**—(*a*) The Modern State, (*b*) The Web of Government.

**H. J. Laski**—(*a*) The Grammar of Politics, (*b*) Communism, (*c*) Reflections on the Revolutions of our Times.

**D. Lasswell**—Politics, who gets what, When How.

**Charles. A. Beard**—Economic basis of Politics.

**Walter Lippmann**—Preface to Politics.

**James Bryce**—Modern Democracies. Two Vols.

**Herman Finer**—Theory and Practice of Modern Government, Two vols.

**Carl. J. Friedrich**—Constitutional Government and Democracy.

**D. Tocqueville**—Democracy in America.

**Bagehot**—The English Constitution.

**McBain**—The Living Constitution.

**John Dewey**—The Public and its Problem.

**A. D. Lindsay**—Modern Democratic State.

**Schumpeter** — Capitalism, Socialism and Democracy.

**Jacob Burckhardt**—Force and Freedom.

**Arnold Toynbee** — The Study of History Abridged, by D. C. Somervelle.

**Mahatma Gandhi**—Autobiography.

**Jawaharlal Nehru** — (*a*) Autobiography, (*b*) Glimpses of India.

---

ಬೆಂಗಳೂರು ಪ್ರೆಸ್ ಮೈಸೂರು ಬ್ರಾಂಚಿನಲ್ಲಿ ಮುದ್ರಿಸಲ್ಪಟ್ಟಿತು.